**Re.No. D. 221**

# भारत का राजपत्र
# The Gazette of India
# ಭಾರತ ರಾಜಪತ್ರ

**(Extraordinary)**

(ವಿಶೇಷ ಸಂಚಿಕೆ)

**भाग IX अनुभाग 1**

**PART IX SECTION 1**

**ಭಾಗ IX ವಿಭಾಗ 1**

**प्राधिकार से प्रकाशित**

**Published by Authority**

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ**


| | | |
|---|---|---|
| सं 1, नई दिल्ली, बुधवार, 07 जून, 2023 | ज्येष्ठ 19, 1945 (शक) | खंड.54 |
| No.1, New Delhi, Wednesday, June 07, 2023 | Jyeshtha 19, 1945 (saka) | Vol. 54 |
| ನಂ.1, ನವದೆಹಲಿ, ಬುಧವಾರ, ಜೂನ್ 07, 2023 | ಜ್ಯೇಷ್ಠ 19, 1945 (ಶಕ) | ಸಂಪುಟ.54 |


**Ministry of Law and Justice**

(Legislative Department)

New Delhi, 07th June, 2023

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 07ನೇ ಜೂನ್, 2023**

The Translation in Kannada of the following Acts, namely:- (1) THE CENTRAL GOODS AND SERVICES TAX ACT, 2017 (No. 12 of 2017) (2) THE GOODS AND SERVICES TAX (COMPENSATION TO STATES) ACT, 2017 (No. 15 of 2017) (3) THE ESSENTIAL DEFENCE SERVICES ACT, 2021 (No. 25 of 2021) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಸಂಖ್ಯೆ 12) (2) ಸರಕುಗಳ ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ನಷ್ಟಪರಿಹಾರ) ಅಧಿನಿಯಮ, 2017 (2017 ರ ಸಂಖ್ಯೆ 15) (3) ಅತ್ಯಾವಶ್ಯಕ ರಕ್ಷಣಾ ಸೇವೆಗಳ ಅಧಿನಿಯಮ, 2021 (2021ರ ಸಂಖ್ಯೆ 25) – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017

## (2017ರ ಸಂಖ್ಯೆ 12)

[12ನೇ ಏಪ್ರಿಲ್, 2017.]

ಕೇಂದ್ರ ಸರ್ಕಾರದಿಂದ ರಾಜ್ಯದೊಳಗೆ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೇಲೆ ತೆರಿಗೆಯನ್ನು ವಿಧಿಸಲು ಮತ್ತು ಸಂಗ್ರಹಿಸಲು ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಿಂದ ಜಾರಿಗೆ ಬರತಕ್ಕದ್ದು:

ಪರಂತು, ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ನಿಗದಿಪಡಿಸಬಹುದು ಮತ್ತು ಯಾವುದೇ ಉಪಬಂಧದಲ್ಲಿ ಈ ಅಧಿನಿಯಮವು ಪ್ರಾರಂಭವಾದುದಕ್ಕೆ ಮಾಡಿದ ಯಾವುದೇ ಉಲ್ಲೇಖವನ್ನು ಆ ಉಪಬಂಧವು ಜಾರಿಗೆ ಬಂದುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ಕ್ರಮಾರ್ಹ ಕ್ಲೇಮು" ಎಂದರೆ, ಸ್ವತ್ತು ವರ್ಗಾವಣೆ ಅಧಿನಿಯಮ, 1882 (1882ರ 4)ರ ಪ್ರಕರಣ 3ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

---

* 22ನೇ ಜೂನ್, 2017– ಪ್ರಕರಣಗಳು 1, 2, 3, 4, 5, 10, 22, 23, 24, 25, 26, 27, 28, 29, 30, 139, 146 ಮತ್ತು 164, ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್ 605(ಇ), ದಿನಾಂಕ: 19ನೇ ಜೂನ್, 2017 ರ ಭಾರತ ವಿಶೇಷ ರಾಜಪತ್ರ, ಭಾಗ–II, ವಿಭಾಗ 3(i) ನ್ನು ನೋಡಿ.
01ನೇ ಜುಲೈ, 2017– ಪ್ರಕರಣಗಳು 6 ರಿಂದ 9, 11ರಿಂದ 21, 31 ರಿಂದ 41, 42 ಪ್ರಕರಣ 42ರ ಉಪಪ್ರಕರಣ (9)ರ ಪರಂತುಕವನ್ನು ಹೊರತುಪಡಿಸಿ, 43 ಪ್ರಕರಣ, 42ರ ಉಪಪ್ರಕರಣ (9)ರ ಪರಂತುಕವನ್ನು ಹೊರತುಪಡಿಸಿ, 44 ರಿಂದ 50, 53 ರಿಂದ 138, 140 ರಿಂದ 145, 147 ರಿಂದ 163, 165 ರಿಂದ 174 ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್ 658(ಇ), ದಿನಾಂಕ: 28ನೇ ಜೂನ್, 2017 ರ ಭಾರತ ವಿಶೇಷ ರಾಜಪತ್ರ, ಭಾಗ–II, ವಿಭಾಗ 3 (i) ನ್ನು ನೋಡಿ.

(2) "ತಲುಪಿಸಬೇಕಾದ ವಿಳಾಸ" ಎಂದರೆ, ಸರಕುಗಳನ್ನು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ತಲುಪಿಸುವುದಕ್ಕಾಗಿ ನೋಂದಾಯಿತ ವ್ಯಕ್ತಿಯು ನೀಡಿದ ತೆರಿಗೆ ದರಪಟ್ಟಿಯಲ್ಲಿ ನಮೂದಾಗಿರುವ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಸ್ವೀಕರ್ತನ ವಿಳಾಸ;

(3) "ದಾಖಲೆಯಲ್ಲಿರುವ ವಿಳಾಸ" ಎಂದರೆ, ಪೂರೈಕೆದಾರನ ದಾಖಲೆಗಳಲ್ಲಿ ಲಭ್ಯವಿರುವಂಥ ಸ್ವೀಕರ್ತನ ವಿಳಾಸ;

(4) "ನ್ಯಾಯನಿರ್ಣಯ ಪ್ರಾಧಿಕಾರ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಆದೇಶವನ್ನು ಅಥವಾ ನಿರ್ಣಯವನ್ನು ಹೊರಡಿಸಲು ನೇಮಕವಾದ ಅಥವಾ ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರ, ಆದರೆ ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಸೀಮಾಸುಂಕಗಳ ಮಂಡಳಿ, ಪುನರೀಕ್ಷಣಾ ಪ್ರಾಧಿಕಾರ, ಪೂರ್ವ ನಿರ್ಣಯ ಪ್ರಾಧಿಕಾರ, ಪೂರ್ವ ನಿರ್ಣಯ ಅಪೀಲು ಪ್ರಾಧಿಕಾರ, ರಾಷ್ಟ್ರೀಯ ಪೂರ್ವ ನಿರ್ಣಯ ಅಪೀಲು ಪ್ರಾಧಿಕಾರ, ಪ್ರಕರಣ 171ರ ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ಅಪೀಲು ಪ್ರಾಧಿಕಾರ, ಅಪೀಲು ನ್ಯಾಯಾಧಿಕರಣ ಮತ್ತು ಪ್ರಾಧಿಕಾರಗಳನ್ನು ಒಳಗೊಳ್ಳುವುದಿಲ್ಲ;

(5) "ಏಜೆಂಟ್" ಎಂದರೆ, ಮತ್ತೊಬ್ಬನ ಪರವಾಗಿ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆ ಅಥವಾ ಸ್ವೀಕೃತಿಯ ವ್ಯವಹಾರವನ್ನು ನಡೆಸುತ್ತಿರುವ, ಫ್ಯಾಕ್ಟರ್, ದಲ್ಲಾಳಿ, ಕಮೀಷನ್ ಏಜೆಂಟ್, ಅರ್ಹತಿಯ, ಡೆಲ್ ಕ್ರೆಡೆರೆ ಏಜೆಂಟ್, ಹರಾಜುದಾರ ಅಥವಾ ಯಾವುದೇ ಇತರೆ ಮರ್ಕಂಟೈಲ್ ಏಜೆಂಟನ್ನು ಒಳಗೊಂಡಂತೆ, ಯಾವುದೇ ಹೆಸರಿನಿಂದ ಕರೆಯಲಾಗುವ ವ್ಯಕ್ತಿ;

(6) "ಸಮಗ್ರ ವಹಿವಾಟು" ಎಂದರೆ, ಅಖಿಲ ಭಾರತ ವ್ಯಾಪ್ತಿಯ ಆಧಾರದಲ್ಲಿ ಲೆಕ್ಕಹಾಕಬೇಕಾದ, ಒಂದೇ ಪರ್ಮನೆಂಟ್ ಅಕೌಂಟ್ ನಂಬರನ್ನು ಹೊಂದಿರುವ ವ್ಯಕ್ತಿಗಳು ಮಾಡಿರುವ ಎಲ್ಲಾ ತೆರಿಗೆದಾಯಕ ಪೂರೈಕೆಗಳ (ಯಾವ ಒಳ ಪೂರೈಕೆಗಳ ಮೌಲ್ಯಕ್ಕೆ ರಿವರ್ಸ್ ಚಾರ್ಜ್ ಆಧಾರದ ಮೇಲೆ ವ್ಯಕ್ತಿಯು ತೆರಿಗೆ ಸಂದಾಯ ಮಾಡಬೇಕಾಗುವುದೋ ಆ ಪೂರೈಕೆಗಳ ಮೌಲ್ಯವನ್ನು ಹೊರತುಪಡಿಸಿ), ವಿನಾಯಿತಿ ಪೂರೈಕೆಗಳ, ಸರಕುಗಳ ಅಥವಾ ಸೇವೆಗಳ ಅಥವಾ ಅವೆರಡರ ರಫ್ತುಗಳ ಮತ್ತು ಅಂತರರಾಜ್ಯ ಪೂರೈಕೆಗಳ ಒಟ್ಟು ಮೌಲ್ಯ ಮತ್ತು ಇದರಲ್ಲಿ ಕೇಂದ್ರ ತೆರಿಗೆಯನ್ನು, ರಾಜ್ಯ ತೆರಿಗೆಯನ್ನು, ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆಯನ್ನು, ಏಕೀಕೃತ ತೆರಿಗೆಯನ್ನು ಮತ್ತು ಉಪಕರವನ್ನು ಹೊರತುಪಡಿಸಲಾಗಿದೆ;

(7) "ಕೃಷಿಕ" ಎಂದರೆ:–

(ಎ) ಸ್ವಂತ ಪರಿಶ್ರಮದಿಂದ; ಅಥವಾ

(ಬಿ) ಕುಟುಂಬದ ದುಡಿಮೆಯಿಂದ; ಅಥವಾ

(ಸಿ) ನಗದು ಅಥವಾ ಇತರೆ ರೂಪದಲ್ಲಿ ಸಂದಾಯ ಮಾಡಬೇಕಾದ ಮಜೂರಿಗಾಗಿ ಕಾರ್ಯನಿರ್ವಹಿಸುವ ನೌಕರರಿಂದ ಅಥವಾ ತನ್ನ ಮೇಲ್ವಿಚಾರಣೆಯಲ್ಲಿ ಅಥವಾ ಕುಟುಂಬದ ಯಾರೇ ಸದಸ್ಯನ ಮೇಲ್ವಿಚಾರಣೆಯಲ್ಲಿ ಕೂಲಿಗೆ ನೇಮಿಸಿಕೊಳ್ಳಲಾದ ಕಾರ್ಮಿಕರಿಂದ

– ಭೂಮಿಯ ಸಾಗುವಳಿಯನ್ನು ಕೈಗೊಳ್ಳುವ ವ್ಯಕ್ತಿ ಅಥವಾ ಒಂದು ಹಿಂದೂ ಅವಿಭಕ್ತ ಕುಟುಂಬ;

(8) "ಅಪೀಲು ಪ್ರಾಧಿಕಾರ" ಎಂದರೆ, ಪ್ರಕರಣ 107ರಲ್ಲಿ ಹೇಳಿರುವ, ಅಪೀಲುಗಳ ವಿಚಾರಣೆ ಮಾಡುವುದಕ್ಕಾಗಿ ನೇಮಕವಾದ ಅಥವಾ ಅಧಿಕೃತವಾದ ಪ್ರಾಧಿಕಾರ;

(9) "ಅಪೀಲು ನ್ಯಾಯಾಧಿಕರಣ" ಎಂದರೆ, ಪ್ರಕರಣ 109ರ ಅಡಿಯಲ್ಲಿ ರಚಿಸಿದ ಸರಕುಗಳ ಮತ್ತು ಸೇವೆಗಳ ತೆರಿಗೆ ಅಪೀಲು ನ್ಯಾಯಾಧಿಕರಣ;

(10) "ಗೊತ್ತುಪಡಿಸಿದ ದಿನ" ಎಂದರೆ, ಈ ಅಧಿನಿಯಮದ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕ;

(11) "ತೆರಿಗೆ ನಿರ್ಧರಣೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಬಾಧ್ಯತೆಯ ನಿರ್ಧರಣೆ ಮತ್ತು ಇದು ಸ್ವಯಂ ತೆರಿಗೆ ನಿರ್ಧರಣೆಯನ್ನು, ಮರು–ತೆರಿಗೆ ನಿರ್ಧರಣೆಯನ್ನು, ತಾತ್ಕಾಲಿಕ ತೆರಿಗೆ ನಿರ್ಧರಣೆಯನ್ನು, ಕ್ಷಿಪ್ರ ತೆರಿಗೆ ನಿರ್ಧರಣೆಯನ್ನು ಮತ್ತು ಅತ್ಯುತ್ತಮ ವಿವೇಚನಾ ತೆರಿಗೆ ನಿರ್ಧರಣೆಯನ್ನು ಒಳಗೊಳ್ಳುತ್ತದೆ;

(12) "ಸಹವರ್ತಿ ಉದ್ಯಮ"ಕ್ಕೆ ಆದಾಯ ತೆರಿಗೆ ಅಧಿನಿಯಮ, 1961 (1961 ರ 43)ರ ಪ್ರಕರಣ 92ಎ ನಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(13) "ಲೆಕ್ಕಪರಿಶೋಧನೆ" ಎಂದರೆ, ನೋಂದಾಯಿತ ವ್ಯಕ್ತಿಯು ಘೋಷಿಸಿದ ವಹಿವಾಟು, ಸಂದಾಯ ಮಾಡಿದ ತೆರಿಗೆಗಳು, ಕ್ಲೇಮು ಮಾಡಿದ ಮರುಪಾವತಿಯು ಮತ್ತು ಬಳಸಿಕೊಂಡ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಸರಿಯಾಗಿದೆಯೇ ಎಂಬುದನ್ನು ಅಧಿಪರೀಕ್ಷಿಸಿ ನೋಡುವುದು ಮತ್ತು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳ ಅಡಿಯಲ್ಲಿ ಆತನು ಪಾಲನೆ ಮಾಡಿರುವುದನ್ನು ನಿರ್ಧರಿಸಲು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನ ಅಡಿಯಲ್ಲಿ ಆ ನೋಂದಾಯಿತ ವ್ಯಕ್ತಿಯು ನಿರ್ವಹಿಸಿದ ಅಥವಾ ಸಲ್ಲಿಸಿದ ದಾಖಲೆಗಳ, ರಿಟರ್ನ್‌ಗಳ ಮತ್ತು ಇತರೆ ದಸ್ತಾವೇಜುಗಳ ಪರಿಶೀಲನೆ;

(14) "ಅಧಿಕೃತ ಬ್ಯಾಂಕ್" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯನ್ನು ಅಥವಾ ಇತರೆ ಯಾವುದೇ ಮೊತ್ತವನ್ನು ಸಂಗ್ರಹಿಸಲು ಕೇಂದ್ರ ಸರ್ಕಾರದಿಂದ ಅಧಿಕೃತಗೊಂಡ ಬ್ಯಾಂಕ್ ಅಥವಾ ಬ್ಯಾಂಕ್‌ನ ಶಾಖೆ;

(15) "ಅಧಿಕೃತ ಪ್ರತಿನಿಧಿ" ಎಂದರೆ, ಪ್ರಕರಣ 116ರಲ್ಲಿ ಹೇಳಿರುವಂಥ ಪ್ರತಿನಿಧಿ;

(16) "ಮಂಡಳಿ" ಎಂದರೆ, ಕೇಂದ್ರ ರಾಜಸ್ವ ಮಂಡಳಿಗಳ ಅಧಿನಿಯಮ, 1963 (1963 ರ 54) ರ ಅಡಿಯಲ್ಲಿ ಸ್ಥಾಪಿತವಾದ ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಸೀಮಾಸುಂಕಗಳ ಮಂಡಳಿ;

(17) "ವ್ಯವಹಾರ" ಎಂಬುದು ಈ ಕೆಳಗಿನವುಗಳನ್ನೂ ಒಳಗೊಂಡಿರುತ್ತದೆ,–

(ಎ) ಯಾವುದೇ ವ್ಯಾಪಾರ, ವಾಣಿಜ್ಯ, ತಯಾರಿಕೆ, ವೃತ್ತಿ, ಕಸುಬು, ವಾಣಿಜ್ಯ ಸಾಹಸ ಕಾರ್ಯ, ಬಾಜಿಕಟ್ಟುವಿಕೆ ಅಥವಾ ಹಣಕಾಸಿನ ಪ್ರಯೋಜನಕ್ಕಾಗಿ ಮಾಡುವ ಅಥವಾ ಹಣಕಾಸಿನ ಪ್ರಯೋಜನ ಇಲ್ಲದ ಅದೇ ರೀತಿಯ ಇತರೇ ಯಾವುದೇ ಕಾರ್ಯಚಟುವಟಿಕೆ;

(ಬಿ) ಉಪ–ಖಂಡ (ಎ)ಗೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ಅಥವಾ ಸಹಾಯಕವಾದ ಯಾವುದೇ ಕಾರ್ಯಚಟುವಟಿಕೆ ಅಥವಾ ವ್ಯವಹಾರ;

(ಸಿ) ಉಪ–ಖಂಡ (ಎ)ನಲ್ಲಿ ಹೇಳಿರುವ ಸ್ವರೂಪದ ಯಾವುದೇ ಕಾರ್ಯಚಟುವಟಿಕೆ ಅಥವಾ ಯಾವ ವ್ಯವಹಾರದಲ್ಲಿ ಪ್ರಮಾಣ, ಆವರ್ತನ, ನಿರಂತರತೆ ಅಥವಾ ನಿಯತತೆ ಇರುವುದೋ ಅಥವಾ ಇರುವುದಿಲ್ಲವೋ ಅಥವಾ ಅಂಥ ಸ್ವರೂಪದ ವ್ಯವಹಾರ;

(ಡಿ) ವ್ಯವಹಾರದ ಪ್ರಾರಂಭ ಅಥವಾ ಮುಕ್ತಾಯಗಳಿಗೆ ಸಂಬಂಧಿಸಿದ ಮೂಲ ಸರಕುಗಳು ಮತ್ತು ಸೇವೆಗಳೂ ಒಳಗೊಂಡು ಸರಕುಗಳ ಪೂರೈಕೆ ಅಥವಾ ಆರ್ಜನೆ;

(ಇ) ಒಂದು ಕ್ಲಬ್, ಸಂಘ ಸಂಸ್ಥೆ, ಸಂಘ ಅಥವಾ ಅಂಥ ಸಂಸ್ಥೆಯು ತನ್ನ ಸದಸ್ಯರಿಗೆ (ವಂತಿಗೆ ಅಥವಾ ಇತರ ಯಾವುದೇ ಪ್ರತಿಫಲಕ್ಕಾಗಿ) ಸೌಲಭ್ಯಗಳನ್ನು ಅಥವಾ ಸೌಕರ್ಯಗಳನ್ನು ಒದಗಿಸಿರುವುದು;

(ಎಫ್) ಯಾವುವೇ ಆವರಣಗಳಿಗೆ ಪ್ರತಿಫಲಕ್ಕಾಗಿ ವ್ಯಕ್ತಿಗಳಿಗೆ ಪ್ರವೇಶ ನೀಡಿಕೆ;

(ಜಿ) ವ್ಯಕ್ತಿಯು ತನ್ನ ವ್ಯಾಪಾರದ, ವೃತ್ತಿಯ ಅಥವಾ ಕಸುಬನ್ನು ನಡೆಸುತ್ತಿರುವಾಗ ಅಥವಾ ಮುನ್ನಡೆಗಾಗಿ ಯಾವ ಹುದ್ದೆಯನ್ನು ಒಪ್ಪಿಕೊಂಡಿರುವನೋ ಆ ಹುದ್ದೆಯ ಧಾರಕನಾಗಿ ಪೂರೈಕೆ ಮಾಡಿದ ಸೇವೆಗಳು;

(ಹೆಚ್) ಟೋಟಲೈಸೇಟರ್ ಅಥವಾ ಬುಕ್ ಮೇಕರ್‌ನಿಗೆ ನೀಡಿದ ಲೈಸೆನ್ಸ್ ನ ಅಥವಾ ಅಂಥ ಕ್ಲಬ್‌ನಲ್ಲಿ ಲೈಸೆನ್ಸ್ ಪಡೆದಿರುವ ಬುಕ್‌ಮೇಕರ್‌ನ ಕಾರ್ಯಚಟುವಟಿಕೆಗಳ ರೂಪದಲ್ಲಿ ಒಂದು ರೇಸ್ ಕ್ಲಬ್‌ನ ಕಾರ್ಯಚಟುವಟಿಕೆಗಳು; ಮತ್ತು

(ಐ) ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರವು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಯಾವ ಕಾರ್ಯಚಟುವಟಿಕೆಯಲ್ಲಿ ಅಥವಾ ವ್ಯವಹಾರದಲ್ಲಿ ಸಾರ್ವಜನಿಕ ಪ್ರಾಧಿಕಾರವಾಗಿ ತೊಡಗಿರುವುದೋ ಆಗ ಕೈಗೊಂಡ ಯಾವುದೇ ಕಾರ್ಯಚಟುವಟಿಕೆ ಅಥವಾ ವ್ಯವಹಾರ;

(18) ಬಿಟ್ಟುಬಿಡಲಾಗಿದೆ।

(19) "ಮೂಲ ಸರಕುಗಳು" ಎಂದರೆ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ಕ್ಲೇಮು ಮಾಡುವ ವ್ಯಕ್ತಿಯು ತನ್ನ ಲೆಕ್ಕಪುಸ್ತಕಗಳಲ್ಲಿ ಯಾವ ಸರಕುಗಳ ಮೌಲ್ಯವನ್ನು ಬಂಡವಾಳವಾಗಿ ಪರಿವರ್ತಿಸಿರುತ್ತಾನೆಯೋ ಮತ್ತು ಆ ಯಾವ ಸರಕುಗಳನ್ನು ವ್ಯವಹಾರವನ್ನು ನಡೆಸುತ್ತಿರುವಾಗ ಅಥವಾ ವ್ಯವಹಾರದ ಮುನ್ನಡೆಗಾಗಿ ಬಳಸಲಾಗುತ್ತದೋ ಅಥವಾ ಬಳಸಲು ಉದ್ದೇಶಿಸಲಾಗಿದೆಯೋ ಆ ಸರಕುಗಳು;

(20) "ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ" ಎಂದರೆ, ಯಾವ ವ್ಯಕ್ತಿಯು ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ತನ್ನ ವ್ಯವಹಾರಕ್ಕಾಗಿ ತನಗೆ ನಿಗದಿತ ಸ್ಥಳ ಇಲ್ಲವೋ ಅಲ್ಲಿ ಮುಖ್ಯಸ್ಥನಾಗಿ ಅಥವಾ ಏಜೆಂಟ್‌ನಾಗಿ ಅಥವಾ ಯಾವುದೇ ಇನ್ನಿತರ ಸಾಮರ್ಥ್ಯದಲ್ಲಿ ವ್ಯವಹಾರವನ್ನು ನಡೆಸುತ್ತಿರುವಾಗ ಅಥವಾ ಅದರ ಮುನ್ನಡೆಗಾಗಿ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯನ್ನು ಒಳಗೊಳ್ಳುವ ವ್ಯವಹಾರಗಳನ್ನು ಸಾಂದರ್ಭಿಕವಾಗಿ ಕೈಗೊಳ್ಳುವ ವ್ಯಕ್ತಿ;

(21) "ಕೇಂದ್ರ ತೆರಿಗೆ" ಎಂದರೆ, ಪ್ರಕರಣ 9ರ ಮೇರೆಗೆ ಕೇಂದ್ರ ಸರಕುಗಳ ಮತ್ತು ಸೇವೆಗಳ ಮೇರೆಗೆ ವಿಧಿಸಿದ ತೆರಿಗೆ;

(22) "ಉಪಕರ" ಪದವು ಸರಕುಗಳ ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ನಷ್ಟಪರಿಹಾರ) ಅಧಿನಿಯಮದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರುತ್ತದೆ;

(23) "ಚಾರ್ಟರ್ಡ್ ಅಕೌಂಟೆಂಟ್" ಎಂದರೆ, ಚಾರ್ಟರ್ಡ್ ಅಕೌಂಟೆಂಟ್ ಅಧಿನಿಯಮ, 1949 (1949 ರ 38) ರ ಪ್ರಕರಣ 2ರ ಉಪಪ್ರಕರಣ (1)ರ ಖಂಡ (ಬಿ)ನಲ್ಲಿ ಪರಿಭಾಷಿಸಿರುವ ಚಾರ್ಟರ್ಡ್ ಅಕೌಂಟೆಂಟ್;

(24) "ಆಯುಕ್ತ" ಎಂದರೆ, ಕೇಂದ್ರ ತೆರಿಗೆ ಆಯುಕ್ತರು ಮತ್ತು ಪ್ರಕರಣ 3ರ ಅಡಿಯಲ್ಲಿ ನೇಮಕಗೊಂಡ ಕೇಂದ್ರ ಪ್ರಧಾನ ತೆರಿಗೆ ಆಯುಕ್ತ ಮತ್ತು ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಏಕೀಕೃತ ತೆರಿಗೆ ಆಯುಕ್ತ;

(25) "ಮಂಡಳಿಯಲ್ಲಿನ ಆಯುಕ್ತ" ಎಂದರೆ, ಪ್ರಕರಣ 168ರಲ್ಲಿ ಹೇಳಿರುವ ಆಯುಕ್ತ;

(26) "ಸಾಮಾನ್ಯ ಪೋರ್ಟಲ್" ಎಂದರೆ, ಪ್ರಕರಣ 146ರಲ್ಲಿ ಹೇಳಿರುವ ಕಾಮನ್ ಗೂಡ್ಸ್ ಆ್ಯಂಡ್ ಸರ್ವೀಸಸ್ ಎಲೆಕ್ಟ್ರಾನಿಕ್ ಪೋರ್ಟಲ್;

(27) ರಾಜ್ಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ "ಸಾಮಾನ್ಯ ಕೆಲಸದ ದಿನಗಳು" ಎಂದರೆ, ಕೇಂದ್ರ ಸರ್ಕಾರದ ಅಥವಾ ಸಂಬಂಧಪಟ್ಟ ರಾಜ್ಯ ಸರ್ಕಾರದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಸರ್ಕಾರವು ಅನುಕ್ರಮವಾಗಿ ಬರುವ ಯಾವ ದಿನಗಳನ್ನು ಅಧಿಕೃತ ರಜಾದಿನವಾಗಿ ಘೋಷಿಸುವುದಿಲ್ಲವೋ ಅಂಥ ಕೆಲಸದ ದಿನಗಳು;

(28) "ಕಂಪನಿ ಕಾರ್ಯದರ್ಶಿ" ಎಂದರೆ, ಕಂಪನಿ ಕಾರ್ಯದರ್ಶಿಗಳ ಅಧಿನಿಯಮ, 1980 (1980 ರ 56)ರ ಪ್ರಕರಣ 2ರ ಉಪಪ್ರಕರಣ (1)ರ ಖಂಡ (ಸಿ)ಯಲ್ಲಿ ಪರಿಭಾಷಿಸಿರುವ ಕಂಪನಿ ಕಾರ್ಯದರ್ಶಿ;

(29) "ಸಕ್ಷಮ ಪ್ರಾಧಿಕಾರ" ಎಂದರೆ, ಸರ್ಕಾರದಿಂದ ಅಧಿಸೂಚಿಸಬಹುದಾದಂಥ ಪ್ರಾಧಿಕಾರ;

(30) "ಸಂಯೋಜಿತ ಪೂರೈಕೆ" ಎಂದರೆ, ಎರಡು ಅಥವಾ ಅದಕ್ಕಿಂತ ಹೆಚ್ಚಿನ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಅಥವಾ ಅವುಗಳ ಯಾವುದೇ ಸಂಯೋಜನೆಗಳನ್ನು ಒಳಗೊಂಡಿರುವ ಯಾವ ತೆರಿಗೆದಾಯಕ ಪೂರೈಕೆಗಳನ್ನು ವಾಡಿಕೆಯಂತೆ ವ್ಯವಹಾರ ನಡೆಯುತ್ತಿರುವಾಗ ಸಹಜವಾಗಿ ಗುಚ್ಛ ಮಾಡಿ ಅವುಗಳಲ್ಲಿ ಒಂದು ಪ್ರಧಾನವಾದುದಾಗಿರುತ್ತದೋ ಅಂಥವುಗಳನ್ನು ಒಟ್ಟಿಗೆ ತೆರಿಗೆದಾಯಕ ವ್ಯಕ್ತಿಯು ಸ್ವೀಕರ್ತನಿಗೆ ಪೂರೈಕೆ ಮಾಡಬೇಕಾಗುತ್ತದೋ ಆ ಪೂರೈಕೆ;

**ದೃಷ್ಟಾಂತ.–** ಸರಕುಗಳನ್ನು ಮೂಟೆ ಕಟ್ಟಿ ವಿಮೆಯೊಂದಿಗೆ ಸಾಗಾಣಿಕೆ ಮಾಡಿದ್ದರೆ, ಸರಕುಗಳ ಪೂರೈಕೆ, ಪ್ಯಾಕಿಂಗ್ ಸಾಮಗ್ರಿಗಳು, ಸಾಗಾಣಿಕೆ ಮತ್ತು ವಿಮೆ ಇವೆಲ್ಲವೂ ಸಂಯುಕ್ತ ಪೂರೈಕೆಯೆಂದಾಗುತ್ತವೆ ಮತ್ತು ಅದರಲ್ಲಿ ಸರಕುಗಳ ಪೂರೈಕೆಯೇ ಪ್ರಧಾನವಾದುದಾಗಿರುತ್ತದೆ;

(31) "ಪ್ರತಿಫಲ" ಎಂಬುದು, ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ,–

(ಎ) ಸ್ವೀಕರ್ತನಾಗಲಿ ಅಥವಾ ಇತರೆ ಯಾರೇ ವ್ಯಕ್ತಿಯಾಗಲಿ, ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಅಥವಾ ಪೂರೈಕೆಗೆ ಪ್ರತಿಕ್ರಿಯೆಯಾಗಿ ಅಥವಾ ಪೂರೈಕೆಗೆ ಪ್ರೇರೇಪಣೆ ಮಾಡಿದ್ದಕ್ಕಾಗಿ, ಹಣದ ರೂಪದಲ್ಲಿ ಅಥವಾ ಬೇರೆ ರೂಪದಲ್ಲಿ, ಮಾಡಿದ ಅಥವಾ ಮಾಡಬಹುದಾದ ಯಾವುದೇ ಸಂದಾಯವನ್ನು ಒಳಗೊಳ್ಳುತ್ತದೆ. ಆದರೆ, ಇದು ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ನೀಡಿದ ಯಾವುದೇ ಸಹಾಯಧನವನ್ನು ಒಳಗೊಂಡಿರತಕ್ಕದ್ದಲ್ಲ;

(ಬಿ) ಸ್ವೀಕರ್ತನಾಗಲಿ ಅಥವಾ ಇತರೆ ಯಾರೇ ವ್ಯಕ್ತಿಯಾಗಲಿ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಅಥವಾ ಪೂರೈಕೆಗೆ ಪ್ರತಿಕ್ರಿಯೆಯಾಗಿ ಅಥವಾ ಪೂರೈಕೆಗೆ ಪ್ರೇರೇಪಣೆ ಮಾಡಿದ್ದಕ್ಕಾಗಿ, ಯಾವುದೇ ಕಾರ್ಯವನ್ನು ಮಾಡುವುದರ ಅಥವಾ ಮಾಡದಿರುವುದರ ಹಣಕಾಸಿನ ರೂಪದ ಮೌಲ್ಯವನ್ನು ಒಳಗೊಳ್ಳುತ್ತದೆ. ಆದರೆ ಇದು ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ನೀಡಿದ ಯಾವುದೇ ಸಹಾಯಧನವನ್ನು ಒಳಗೊಂಡಿರತಕ್ಕದ್ದಲ್ಲ:

ಪರಂತು, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ನೀಡಿರುವ ಠೇವಣಿಯನ್ನು, ಪೂರೈಕೆದಾರನು ಆ ಠೇವಣಿಯನ್ನು ಆ ಪೂರೈಕೆಯ ಪ್ರತಿಫಲ ಎಂದು ಪರಿಗಣಿಸದ ಹೊರತು ಅದನ್ನು ಪೂರೈಕೆಗಾಗಿ ಮಾಡಿದ ಸಂದಾಯ ಎಂದು ತಿಳಿಯತಕ್ಕದ್ದಲ್ಲ;

(32) "ಸರಕುಗಳ ನಿರಂತರ ಪೂರೈಕೆ" ಎಂದರೆ, ಕರಾರಿನ ಪ್ರಕಾರ ಸರಕುಗಳ ಯಾವ ಪೂರೈಕೆಯನ್ನು ವೈರ್, ಕೇಬಲ್, ಪೈಪ್‌ಲೈನ್ ಅಥವಾ ಇತರ ಕೊಳವೆಗಳ ಮೂಲಕ ಅಥವಾ ಅವುಗಳ ಮೂಲಕ ಅಲ್ಲದೆಯೂ ಸಹ, ನಿರಂತರವಾಗಿ ಅಥವಾ ಆವರ್ತಕ ಆಧಾರದ ಮೇಲೆ, ಒದಗಿಸಲಾಗುತ್ತದೋ ಅಥವಾ ಒದಗಿಸಲು ಒಪ್ಪಲಾಗಿದೆಯೋ ಮತ್ತು ಅದಕ್ಕಾಗಿ ಪೂರೈಕೆದಾರನು ಸ್ವೀಕರ್ತನಿಗೆ ನಿಯತ ಅಥವಾ ನಿಯತ ಆಧಾರದ ಮೇಲೆ ದರಪಟ್ಟಿಯನ್ನು ನೀಡುವನೋ ಅಂಥ ಸರಕುಗಳ ಪೂರೈಕೆ ಮತ್ತು ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಷರತ್ತುಗಳಿಗೆ ಒಳಪಟ್ಟು, ಸ್ಪಷ್ಟೀಕರಿಸಿದ ಅಂಥ ಸರಕುಗಳ ಪೂರೈಕೆಯನ್ನು ಒಳಗೊಳ್ಳುತ್ತದೆ;

(33) "ಸೇವೆಗಳ ನಿರಂತರ ಪೂರೈಕೆ" ಎಂದರೆ, ಕರಾರಿನ ಪ್ರಕಾರ ಸೇವೆಗಳ ಯಾವ ಪೂರೈಕೆಯನ್ನು ನಿಯತವಾಗಿ ಸಂದಾಯ ಮಾಡುವ ಬಾಧ್ಯತೆಗಳ ಸಹಿತ, ಮೂರು ತಿಂಗಳುಗಳಿಗಿಂತ ಹೆಚ್ಚಿನ ಅವಧಿಗೆ ನಿರಂತರವಾಗಿ ಅಥವಾ ಆವರ್ತಕ ಆಧಾರದ ಮೇಲೆ ಒದಗಿಸಲಾಗುತ್ತದೋ ಅಥವಾ ಒದಗಿಸಲು ಒಪ್ಪಲಾಗಿದೆಯೋ ಆ ಸೇವೆಗಳ ಪೂರೈಕೆ ಮತ್ತು ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಷರತ್ತುಗಳಿಗೊಳಪಟ್ಟು ಅಂಥ ಸೇವೆಗಳ ಪೂರೈಕೆಯನ್ನು ಒಳಗೊಳ್ಳುತ್ತದೆ;

(34) "ಸಾಗಣೆ ವಾಹನ"ವು ನೌಕೆಯನ್ನು, ವಿಮಾನವನ್ನು ಮತ್ತು ವಾಹನವನ್ನೂ ಒಳಗೊಳ್ಳುತ್ತದೆ;

(35) "ಕಾಸ್ಟ್ ಅಕೌಂಟೆಂಟ್" ಎಂದರೆ, ಕಾಸ್ಟ್ ಮತ್ತು ವರ್ಕ್ಸ್ ಅಕೌಂಟೆಂಟ್ಸ್ ಅಧಿನಿಯಮ, 1959 (1959 ರ 23)ರ ಪ್ರಕರಣ 2ರ ಉಪಪ್ರಕರಣ (1)ರ ಖಂಡ (ಬಿ)ಯಲ್ಲಿ ಪರಿಭಾಷಿಸಿರುವ "ಕಾಸ್ಟ್ ಅಕೌಂಟೆಂಟ್";

(36) "ಪರಿಷತ್" ಎಂದರೆ, ಸಂವಿಧಾನದ ಅನುಚ್ಛೇದ 279ಎ ಅಡಿಯಲ್ಲಿ ಸ್ಥಾಪಿಸಲಾದ ಸರಕು ಮತ್ತು ಸೇವೆಗಳ ಪರಿಷತ್;

(37) "ಜಮಾ ಚೀಟಿ" ಎಂದರೆ, ನೋಂದಾಯಿತ ವ್ಯಕ್ತಿಯು ಪ್ರಕರಣ 34ರ ಉಪಪ್ರಕರಣ (1)ರ ಅಡಿಯಲ್ಲಿ ನೀಡಿದ ದಾಖಲೆ;

(38) "ಖರ್ಚಿನ ಚೀಟಿ" ಎಂದರೆ, ನೋಂದಾಯಿತ ವ್ಯಕ್ತಿಯು ಪ್ರಕರಣ 34ರ ಉಪಪ್ರಕರಣ (3)ರ ಅಡಿಯಲ್ಲಿ ನೀಡಿದ ದಾಖಲೆ;

(39) "ಪರಿಭಾವಿತ ರಫ್ತುಗಳು" ಎಂದರೆ, ಪ್ರಕರಣ 147ರ ಅಡಿಯಲ್ಲಿ ಅಧಿಸೂಚಿಸಬಹುದಾದಂಥ ಸರಕುಗಳ ಪೂರೈಕೆಗಳು;

(40) "ಹೆಸರಿಸಿದ ಪ್ರಾಧಿಕಾರ" ಎಂದರೆ, ಮಂಡಳಿಯಿಂದ ಅಧಿಸೂಚಿಸಬಹುದಾದಂಥ ಪ್ರಾಧಿಕಾರ;

(41) "ದಸ್ತಾವೇಜು" ಎಂಬುದು, ಲಿಖಿತದಲ್ಲಿರುವ ಅಥವಾ ಮುದ್ರಿತವಾದ ಯಾವುದೇ ತರಹದ ದಾಖಲೆ ಮತ್ತು ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000 ದ 21)ದ ಪ್ರಕರಣ 2ರ ಖಂಡ (ಟಿ)ಯಲ್ಲಿ ಪರಿಭಾಷಿಸಿರುವ ವಿದ್ಯುನ್ಮಾನ ದಾಖಲೆಗಳನ್ನು ಒಳಗೊಳ್ಳುತ್ತದೆ;

(42) ಭಾರತದಲ್ಲಿ ಉತ್ಪಾದಿಸಿ ರಫ್ತು ಮಾಡಿದ ಯಾವುದೇ ಸರಕುಗಳಿಗೆ ಸಂಬಂಧಿಸಿದಂತೆ "ಸುಂಕ ರಿಯಾಯಿತಿ" ಎಂದರೆ, ಅಂಥ ಸರಕುಗಳ ಉತ್ಪಾದನೆಯಲ್ಲಿ ಬಳಸಿದ ಯಾವುದೇ ಆಮದಾದ ಇನ್‌ಪುಟ್ಸ್‌ಗಳ ಮೇಲೆ ಅಥವಾ ಯಾವುದೇ ದೇಶೀಯ ಇನ್‌ಪುಟ್ಸ್‌ಗಳ ಅಥವಾ ಇನ್‌ಪುಟ್ ಸೇವೆಗಳ ಮೇಲೆ ವಿಧಿಸಬಹುದಾದ ತೆರಿಗೆಯ, ಸುಂಕದ ಅಥವಾ ಉಪಕರಗಳ ಮೇಲಿನ ರಿಯಾಯಿತಿ;

(43) "ವಿದ್ಯುನ್ಮಾನ ನಗದು ರಿಜಿಸ್ಟರ್" ಎಂದರೆ, ಪ್ರಕರಣ 49ರ ಉಪಪ್ರಕರಣ (1)ರಲ್ಲಿ ಹೇಳಿರುವ ವಿದ್ಯುನ್ಮಾನ ನಗದು ರಿಜಿಸ್ಟರ್;

(44) "ವಿದ್ಯುನ್ಮಾನ ವಾಣಿಜ್ಯ" ಎಂದರೆ, ಡಿಜಿಟಲ್ ಅಥವಾ ವಿದ್ಯುನ್ಮಾನ ಜಾಲದ ಮುಖಾಂತರ ಡಿಜಿಟಲ್ ಉತ್ಪನ್ನಗಳನ್ನೊಳಗೊಂಡಂತೆ ಸರಕು ಅಥವಾ ಸೇವೆಗಳ ಅಥವಾ ಅವೆರಡರ ಪೂರೈಕೆ;

(45) "ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕ" ಎಂದರೆ, ವಿದ್ಯುನ್ಮಾನ ವಾಣಿಜ್ಯಕ್ಕಾಗಿ ಡಿಜಿಟಲ್ ಅಥವಾ ವಿದ್ಯುನ್ಮಾನ ಸೌಲಭ್ಯ ಅಥವಾ ಪ್ಲಾಟ್ ಫಾರಂನ್ನು ಮಾಲೀಕತ್ವ ಹೊಂದಿರುವ, ನಡೆಸುವ ಅಥವಾ ನಿರ್ವಹಿಸುವ ಯಾರೇ ವ್ಯಕ್ತಿ;

(46) "ವಿದ್ಯುನ್ಮಾನ ಕ್ರೆಡಿಟ್ ಲೆಡ್ಜರ್" ಎಂದರೆ, ಪ್ರಕರಣ 49ರ ಉಪಪ್ರಕರಣ (2)ರಲ್ಲಿ ಹೇಳಿರುವ ವಿದ್ಯುನ್ಮಾನ ಕ್ರೆಡಿಟ್ ಲೆಡ್ಜರ್;

(47) "ವಿನಾಯಿತಿ ಪೂರೈಕೆ" ಎಂದರೆ, ಶೂನ್ಯ ತೆರಿಗೆ ದರವು ಅನ್ವಯವಾಗುವ ಅಥವಾ ಪ್ರಕರಣ 11ರ ಅಡಿಯಲ್ಲಿ ಅಥವಾ ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 6ರ ಅಡಿಯಲ್ಲಿ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ಹೊಂದಿರುವ ಯಾವುದೇ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆ ಮತ್ತು ಇದು ತೆರಿಗೆ ರಹಿತ ಪೂರೈಕೆಗಳನ್ನೂ ಸಹ ಒಳಗೊಂಡಿರುತ್ತದೆ;

(48) "ಅಸ್ತಿತ್ವದಲ್ಲಿರುವ ಕಾನೂನು" ಎಂದರೆ, ಈ ಅಧಿನಿಯಮವು ಜಾರಿಗೆ ಬರುವುದಕ್ಕೂ ಮೊದಲು, ಸರಕು ಅಥವಾ ಸೇವೆಗಳ ಮೇಲೆ ಅಥವಾ ಅವುಗಳೆರಡರ ಮೇಲೆ ತೆರಿಗೆಯನ್ನು ವಿಧಿಸಿ ಸಂಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಸಂಸತ್ತು ಅಂಗೀಕರಿಸಿದ ಅಥವಾ ರಚಿಸಿದ ಕಾನೂನು, ಅಧಿಸೂಚನೆ, ಆದೇಶ, ನಿಯಮ ಅಥವಾ ನಿಬಂಧನೆ ಅಥವಾ ಅಂಥ ಕಾನೂನನ್ನು, ಅಧಿಸೂಚನೆಯನ್ನು, ಆದೇಶವನ್ನು ಅಥವಾ ನಿಬಂಧನೆಯನ್ನು ರಚಿಸಲು ಅಧಿಕಾರವನ್ನು ಹೊಂದಿರುವ ವ್ಯಕ್ತಿಯು ಅಂಗೀಕರಿಸಿದ ಅಥವಾ ರಚಿಸಿದ ಯಾವುದೇ ಕಾನೂನು, ಅಧಿಸೂಚನೆ, ಆದೇಶ, ನಿಯಮ ಅಥವಾ ನಿಬಂಧನೆ;

(49) "ಕುಟುಂಬ" ಎಂದರೆ:–

(i) ವ್ಯಕ್ತಿಯ ಪತಿ ಅಥವಾ ಪತ್ನಿ ಮತ್ತು ಮಕ್ಕಳು; ಹಾಗೂ

(ii) ಆ ವ್ಯಕ್ತಿಯ ಮೇಲೆ ಸಂಪೂರ್ಣವಾಗಿ ಅಥವಾ ಹೆಚ್ಚಿನದಾಗಿ ಅವಲಂಬಿತರಾದ ತಂದೆ–ತಾಯಿ, ಅಜ್ಜ–ಅಜ್ಜಿ, ಸಹೋದರರು ಮತ್ತು ಸಹೋದರಿಯರು;

(50) "ಸ್ಥಿರವಾದ ಕಾರ್ಯಸ್ಥಳ" ಎಂದರೆ, ಯಾವ ಸ್ಥಳವನ್ನು ಸೇವೆಗಳ ಪೂರೈಕೆಗಾಗಿ ಅಥವಾ ಸ್ವಂತ ಅಗತ್ಯತೆಗಳಿಗೆ ಸೇವೆಗಳನ್ನು ಸ್ವೀಕರಿಸುವುದಕ್ಕಾಗಿ ಅಥವಾ ಬಳಸುವುದಕ್ಕಾಗಿ, ಸಾಕಷ್ಟು ಮಟ್ಟಿಗೆ ಖಾಯಂ ಸ್ಥಳದ ಹಾಗೂ ಮಾನವ ಮತ್ತು ತಾಂತ್ರಿಕ ಸಂಪನ್ಮೂಲಗಳ ದೃಷ್ಟಿಯಿಂದ ಸೂಕ್ತ ನಿರ್ಮಿತಿ ಇರುವ ಸ್ಥಳದ ಸಂರಚನೆಯಿಂದ ಲಕ್ಷಣಗಳುಳ್ಳ (ನೋಂದಾಯಿತ ವ್ಯವಹಾರ ಸ್ಥಳ ಅಲ್ಲದ) ಸ್ಥಳ;

(51) "ನಿಧಿ" ಎಂದರೆ, ಪ್ರಕರಣ 57ರ ಅಡಿಯಲ್ಲಿ ಸ್ಥಾಪಿತವಾದ ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿ;

(52) "ಸರಕು" ಎಂದರೆ, ಹಣ ಮತ್ತು ಭದ್ರತಾಪತ್ರಗಳನ್ನು ಹೊರತುಪಡಿಸಿ ಎಲ್ಲಾ ಬಗೆಯ ಚರ ಸ್ವತ್ತುಗಳು, ಆದರೆ, ಈ ಪದವು ಕ್ರಮಾರ್ಹ ಕ್ಲೇಮುಗಳು, ಬೆಳೆಯುತ್ತಿರುವ ಫಸಲುಗಳು, ಹುಲ್ಲು ಮತ್ತು ಪೂರೈಕೆಗಿಂತ ಮೊದಲು ಅಥವಾ ಪೂರೈಕೆ ಕರಾರಿನ ಅಡಿಯಲ್ಲಿ ಬೇರ್ಪಡಿಸಲೊಪ್ಪಿರುವ, ಭೂಮಿಗೆ ಲಗತ್ತಾಗಿರುವ ಅಥವಾ ಅದರ ಭಾಗವಾಗಿರುವ ವಸ್ತುಗಳನ್ನು ಒಳಗೊಳ್ಳುತ್ತದೆ;

(53) "ಸರ್ಕಾರ" ಎಂದರೆ, ಕೇಂದ್ರ ಸರ್ಕಾರ;

(54) "ಸರಕುಗಳ ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ನಷ್ಟಪರಿಹಾರ) ಅಧಿನಿಯಮ" ಎಂದರೆ, ಸರಕುಗಳ ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ನಷ್ಟಪರಿಹಾರ) ಅಧಿನಿಯಮ, 2017 (2017 ರ 15);

(55) "ಸರಕು ಮತ್ತು ಸೇವೆಗಳ ತೆರಿಗೆ ಪ್ರಾಕ್ಟೀಷನರ್" ಎಂದರೆ, ಪ್ರಕರಣ 48ರ ಅಡಿಯಲ್ಲಿ, ಅಂಥ ವೃತ್ತಿನಿರತನಾಗಿ ಕಾರ್ಯನಿರ್ವಹಿಸಲು ಅನುಮೋದಿತನಾದ ವ್ಯಕ್ತಿ;

(56) "ಭಾರತ" ಎಂದರೆ, ಸಂವಿಧಾನದ ಅನುಚ್ಛೇದ 1ರಲ್ಲಿ ಉಲ್ಲೇಖಿಸಿರುವ ಭಾರತದ ಭೂ ಪ್ರದೇಶ, ಭಾರತದ ಪ್ರಾದೇಶಿಕ ಜಲಕ್ಷೇತ್ರ, ಸಮುದ್ರ ತಳ ಮತ್ತು ಅಂಥ ಜಲಕ್ಷೇತ್ರಗಳ ತಳಮಣ್ಣು, ಕಾಂಟಿನೆಂಟಲ್ ಶೆಲ್ಫ್‌ನ ಪ್ರತ್ಯೇಕ ವಿಶೇಷ ಆರ್ಥಿಕ ವಲಯ ಅಥವಾ ಟೆರಿಟೋರಿಯಲ್ ವಾಟರ್ಸ್, ಕಾಂಟಿನೆಂಟಲ್ ಶೆಲ್ಫ್, ಎಕ್ಸ್‌ಕ್ಲೂಸಿವ್ ಎಕನಾಮಿಕ್ ಝೋನ್ ಆ್ಯಂಡ್ ಅದರ್

ಮಾರಿಟೈಮ್‌ಝೋನ್ಸ್ ಅಧಿನಿಯಮ, 1976 (1976 ರ 80) ರಲ್ಲಿ ಉಲ್ಲೇಖಿಸಿರುವ ಯಾವುದೇ ಇತರ ಸಾಗರ ವಲಯ ಹಾಗೂ ಅದರ ಭೂಪ್ರದೇಶದ ಮತ್ತು ಜಲಕ್ಷೇತ್ರದ ಮೇಲಿನ ವಾಯುಪ್ರದೇಶ;

(57) "ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ" ಎಂದರೆ, ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017 ರ 13);

(58) "ಏಕೀಕೃತ ತೆರಿಗೆ" ಎಂದರೆ, ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಸರಕುಗಳ ಮತ್ತು ಸೇವೆಗಳ ಮೇಲೆ ವಿಧಿಸಿದ ಏಕೀಕೃತ ತೆರಿಗೆ;

(59) "ಇನ್‌ಪುಟ್" ಎಂದರೆ, ವ್ಯವಹಾರ ನಡೆಯುತ್ತಿರುವಾಗ ಅಥವಾ ವ್ಯವಹಾರದ ಮುನ್ನಡೆಗಾಗಿ ಪೂರೈಕೆದಾರನು ಬಳಸಿದ ಅಥವಾ ಬಳಸಲು ಉದ್ದೇಶಿಸಿರುವ ಮೂಲ ಸರಕುಗಳಲ್ಲದ ಯಾವುವೇ ಸರಕುಗಳು;

(60) "ಇನ್‌ಪುಟ್ ಸರ್ವೀಸ್" ಎಂದರೆ, ವ್ಯವಹಾರ ನಡೆಯುತ್ತಿರುವಾಗ ಅಥವಾ ವ್ಯವಹಾರದ ಮುನ್ನಡೆಗಾಗಿ ಪೂರೈಕೆದಾರನು ಬಳಸಿದ ಅಥವಾ ಬಳಸಲು ಉದ್ದೇಶಿಸಿರುವ ಯಾವುದೇ ಸೇವೆಗಳು;

(61) "ಇನ್‌ಪುಟ್ ಸರ್ವೀಸ್ ಡಿಸ್ಟ್ರಿಬ್ಯೂಟರ್" ಎಂದರೆ, ಇನ್‌ಪುಟ್ ಸರ್ವೀಸಸ್ ಅನ್ನು ಸ್ವೀಕರಿಸಿದ್ದಕ್ಕಾಗಿ ಪ್ರಕರಣ 31ರ ಅಡಿಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರನು ನೀಡಿದ ತೆರಿಗೆ ದರಪಟ್ಟಿಯನ್ನು ಸ್ವೀಕರಿಸಿ ಸದರಿ ಸೇವೆಗಳ ಮೇಲೆ ಸಂದಾಯ ಮಾಡಿದ ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆಯ ಜಮೆಯನ್ನು ಪೂರೈಕೆದಾರನ ಯಾವ ಕಾರ್ಯಾಲಯವು ಅದೇ ಕಾರ್ಯಾಲಯದ ಪ್ಯಾನ್ ಅನ್ನೇ ಹೊಂದಿರುವ ತೆರಿಗೆದಾಯಕ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆದಾರನಿಗೆ ವಿತರಣೆ ಮಾಡುವ ಉದ್ದೇಶಕ್ಕಾಗಿ ನಿಗದಿತ ದಸ್ತಾವೇಜನ್ನು ನೀಡುತ್ತದೋ ಆ ಕಾರ್ಯಾಲಯ;

(62) ನೋಂದಾಯಿತ ವ್ಯಕ್ತಿಗೆ ಸಂಬಂಧಿಸಿದಂತೆ "ಇನ್‌ಪುಟ್ ಟ್ಯಾಕ್ಸ್" ಎಂದರೆ, ಆ ವ್ಯಕ್ತಿಯು ಸ್ವೀಕರಿಸಿದ ಯಾವುದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೇಲೆ ವಿಧಿಸಿದ ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆ ಮತ್ತು ಅದು,–

(ಎ) ಸರಕುಗಳ ಆಮದಿನ ಮೇಲೆ ವಿಧಿಸಿದ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆಯನ್ನು;

(ಬಿ) ಪ್ರಕರಣ 9ರ ಉಪಪ್ರಕರಣ (3) ಮತ್ತು (4)ರ ಉಪಬಂಧಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯನ್ನು;

(ಸಿ) ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 5ರ ಉಪಪ್ರಕರಣ (3) ಮತ್ತು (4)ರ ಉಪಬಂಧಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯನ್ನು;

(ಡಿ) ಸಂಬಂಧಪಟ್ಟ ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 9ರ ಉಪಪ್ರಕರಣ (3) ಮತ್ತು (4)ರ ಉಪಬಂಧಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯನ್ನು; ಅಥವಾ

(ಇ) ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 7ರ ಉಪಪ್ರಕರಣ (3) ಮತ್ತು (4)ರ ಉಪಬಂಧಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯನ್ನು

– ಒಳಗೊಳ್ಳುತ್ತದೆ, ಆದರೆ ಇದು ರಾಜಿ ತೆರಿಗೆ ಪದ್ಧತಿಯಡಿಯಲ್ಲಿ ಸಂದಾಯ ಮಾಡಿದ ತೆರಿಗೆಯನ್ನು ಒಳಗೊಳ್ಳುವುದಿಲ್ಲ;

(63) "ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್" ಎಂದರೆ, ಇನ್‌ಪುಟ್ ಟ್ಯಾಕ್ಸ್ ಗೆ ಸಂಬಂಧಿಸಿದಂತೆ ನೀಡುವ ರಿಯಾಯಿತಿ;

(64) "ರಾಜ್ಯದ ಒಳಗಡೆಗೆ ಸರಕುಗಳ ಪೂರೈಕೆ" ಪದಾವಳಿಯು ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 8ರಲ್ಲಿ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(65) "ರಾಜ್ಯದ ಒಳಗಡೆಗೆ ಸೇವೆಗಳ ಪೂರೈಕೆ" ಪದಾವಳಿಯು ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 8ರಲ್ಲಿ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(66) "ದರಪಟ್ಟಿ" ಅಥವಾ "ತೆರಿಗೆ ದರಪಟ್ಟಿ" ಎಂದರೆ, ಪ್ರಕರಣ 31ರಲ್ಲಿ ಉಲ್ಲೇಖಿಸಲಾಗಿರುವ ತೆರಿಗೆ ದರಪಟ್ಟಿ;

(67) ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ "ಒಳ ಪೂರೈಕೆ" ಎಂದರೆ, ಪ್ರತಿಫಲಕ್ಕಾಗಿ ಅಥವಾ ಪ್ರತಿಫಲವಿಲ್ಲದೆ, ಖರೀದಿಯ ಸ್ವಾಧೀನಪಡಿಸಿಕೊಳ್ಳುವ ಮೂಲಕ ಅಥವಾ ಯಾವುದೇ ಇತರೆ ರೀತಿಯಲ್ಲಿ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಸ್ವೀಕರಿಸುವುದು;

(68) "ಜಾಬ್ ವರ್ಕ್" ಎಂದರೆ, ವ್ಯಕ್ತಿಯು ಇನ್ನೊಬ್ಬ ನೋಂದಾಯಿತ ವ್ಯಕ್ತಿಗೆ ಸೇರಿದ ಸರಕುಗಳಿಗೆ ಸಂಬಂಧಿಸಿದಂತೆ ಕೈಗೊಳ್ಳುವ ಯಾವುದೇ ನಿರ್ವಹಣೆ ಅಥವಾ ಪ್ರಕ್ರಿಯೆ ಕಾರ್ಯ ಮತ್ತು "ಜಾಬ್ ವರ್ಕರ್" ಪದಾವಳಿಯನ್ನು ತದನುಸಾರವಾಗಿಯೇ ಅರ್ಥೈಸತಕ್ಕದ್ದು;

(69) "ಸ್ಥಳೀಯ ಪ್ರಾಧಿಕಾರ" ಎಂದರೆ:–

(ಎ) ಸಂವಿಧಾನದ ಅನುಚ್ಛೇದ 243ರ ಖಂಡ (ಡಿ)ಯಲ್ಲಿ ಪರಿಭಾಷಿಸಿರುವ "ಪಂಚಾಯತ್";

(ಬಿ) ಸಂವಿಧಾನದ ಅನುಚ್ಛೇದ 243ಪಿ ಯ ಖಂಡ (ಇ)ಯಲ್ಲಿ ಪರಿಭಾಷಿಸಿರುವ "ಪುರಸಭೆ";

(ಸಿ) ಪುರಸಭಾ ಸಮಿತಿ, ಜಿಲ್ಲಾ ಪರಿಷತ್, ಜಿಲ್ಲಾ ಮಂಡಳಿ ಮತ್ತು ಮುನಿಸಿಪಲ್ ಅಥವಾ ಸ್ಥಳೀಯ ನಿಧಿಯ ನಿಯಂತ್ರಣ ಅಥವಾ ನಿರ್ವಹಣೆ ಮಾಡಲು ಕಾನೂನುಬದ್ಧವಾದ ಹಕ್ಕುಳ್ಳಂಥ ಯಾವುದೇ ಪ್ರಾಧಿಕಾರ ಅಥವಾ ಹಾಗೆ ಮಾಡುವುದನ್ನು ಕೇಂದ್ರ ಸರ್ಕಾರವು ಅಥವಾ ಯಾವುದೇ ರಾಜ್ಯ ಸರ್ಕಾರವು ಯಾವ ಪ್ರಾಧಿಕಾರಕ್ಕೆ ವಹಿಸಿದೆಯೋ ಆ ಯಾವುದೇ ಇತರ ಪ್ರಾಧಿಕಾರ;

(ಡಿ) ದಂಡು ಪ್ರದೇಶಗಳ ಅಧಿನಿಯಮ, 2006 (2006ರ 41)ರ ಪ್ರಕರಣ 3ರಲ್ಲಿ ಪರಿಭಾಷಿಸಿರುವ ದಂಡು ಪ್ರದೇಶ ಮಂಡಳಿ;

(ಇ) ಸಂವಿಧಾನದ ಆರನೇ ಅನುಸೂಚಿಯ ಅಡಿಯಲ್ಲಿ ರಚಿಸಲಾದ ಪ್ರಾದೇಶಿಕ ಪರಿಷತ್ ಅಥವಾ ಜಿಲ್ಲಾ ಪರಿಷತ್;

(ಎಫ್) ಸಂವಿಧಾನದ ಅನುಚ್ಛೇದ 371 ಮತ್ತು ಅನುಚ್ಛೇದ 371ಜೆ ನ ಅಡಿಯಲ್ಲಿ ರಚಿಸಲಾದ ಅಭಿವೃದ್ಧಿ ಮಂಡಳಿ ಅಥವಾ;

(ಜಿ) ಸಂವಿಧಾನದ ಅನುಚ್ಛೇದ 371ಎ ಯ ಅಡಿಯಲ್ಲಿ ರಚಿಸಲಾದ ಪ್ರಾದೇಶಿಕ ಪರಿಷತ್;

(70) "ಸೇವೆಗಳ ಸ್ವೀಕರ್ತನ ಸ್ಥಳ" ಎಂದರೆ:–

(ಎ) ಯಾವ ವ್ಯವಹಾರ ಸ್ಥಳಕ್ಕೆ ನೋಂದಣಿಯನ್ನು ಪಡೆಯಲಾಗಿದೆಯೋ ಆ ಸ್ಥಳದಲ್ಲಿ ಪೂರೈಕೆಯನ್ನು ಸ್ವೀಕರಿಸಿದ್ದಲ್ಲಿ, ಅಂಥ ನಿಖರ ಸ್ಥಳ;

(ಬಿ) ಯಾವ ವ್ಯವಹಾರ ಸ್ಥಳಕ್ಕೆ ನೋಂದಣಿಯನ್ನು ಪಡೆಯಲಾಗಿದೆಯೋ ಆ ಸ್ಥಳವಲ್ಲದ ಸ್ಥಳದಲ್ಲಿ (ಬೇರೆಲ್ಲೊ ಇರುವ ನಿಗದಿತ ಕಾರ್ಯಸಂಸ್ಥೆಯಲ್ಲಿ) ಪೂರೈಕೆಯನ್ನು ಸ್ವೀಕರಿಸಿದ್ದಲ್ಲಿ, ಅಂಥ ನಿಗದಿತ ಕಾರ್ಯಸಂಸ್ಥೆ ಇರುವ ಸ್ಥಿರವಾದ ಕಾರ್ಯ ಸ್ಥಳ;

(ಸಿ) ಒಂದಕ್ಕಿಂತ ಹೆಚ್ಚಿನ ಕಾರ್ಯಸಂಸ್ಥೆಗಳಲ್ಲಿ ಪೂರೈಕೆಯನ್ನು ಸ್ವೀಕರಿಸಿದ್ದಲ್ಲಿ, ಅದು ವ್ಯವಹಾರದ ಸ್ಥಳವಾಗಿರಬಹುದು ಅಥವಾ ನಿಗದಿತ ಕಾರ್ಯಸಂಸ್ಥೆಯಾಗಿರಬಹುದು, ಪೂರೈಕೆಯನ್ನು ಸ್ವೀಕರಿಸುವುದಕ್ಕೆ ಅತಿ ಹೆಚ್ಚು ನೇರವಾಗಿ ಸಂಬಂಧಪಡುವ ಕಾರ್ಯಸಂಸ್ಥೆ ಇರುವ ನಿಖರ ಸ್ಥಳ;

(ಡಿ) ಅಂಥ ಸ್ಥಳಗಳು ಇಲ್ಲದಿದ್ದಾಗ, ಸ್ವೀಕರ್ತನ ವಾಡಿಕೆಯ ನಿವಾಸ ಇರುವ ನಿಖರ ಸ್ಥಳ;

(71) "ಸೇವೆಗಳ ಪೂರೈಕೆದಾರನ ಸ್ಥಿರವಾದ ಕಾರ್ಯ ಸ್ಥಳ" ಎಂದರೆ:–

(ಎ) ಯಾವ ವ್ಯವಹಾರ ಸ್ಥಳಕ್ಕೆ ನೋಂದಣಿಯನ್ನು ಪಡೆಯಲಾಗಿದೆಯೋ ಆ ಸ್ಥಳದಲ್ಲಿ ಪೂರೈಕೆಯನ್ನು ಮಾಡಿದ್ದಲ್ಲಿ, ಅಂಥ ನಿಖರ ಸ್ಥಳ;

(ಬಿ) ಯಾವ ವ್ಯವಹಾರ ಸ್ಥಳಕ್ಕೆ ನೋಂದಣಿಯನ್ನು ಪಡೆಯಲಾಗಿದೆಯೋ ಆ ಸ್ಥಳವಲ್ಲದ ಸ್ಥಳದಲ್ಲಿ (ಬೇರೆಲ್ಲೊ ಇರುವ ಒಂದು ನಿಗದಿತ ಕಾರ್ಯಸಂಸ್ಥೆಯಲ್ಲಿ) ಪೂರೈಕೆಯನ್ನು ಮಾಡಿದ್ದಲ್ಲಿ, ಅಂಥ ನಿಗದಿತ ಕಾರ್ಯಸಂಸ್ಥೆ ಇರುವ ನಿಖರ ಸ್ಥಳ;

(ಸಿ) ಒಂದಕ್ಕಿಂತ ಹೆಚ್ಚಿನ ಕಾರ್ಯಸಂಸ್ಥೆಗಳಲ್ಲಿ ಪೂರೈಕೆಯನ್ನು ಮಾಡಿದ್ದಲ್ಲಿ, ಅದು ವ್ಯವಹಾರದ ಸ್ಥಳವಾಗಿರಬಹುದು ಅಥವಾ ನಿಗದಿತ ಕಾರ್ಯಸಂಸ್ಥೆಯಾಗಿರಬಹುದು, ಪೂರೈಕೆಯ ನಿಬಂಧನೆಗಳಿಗೆ ಅತಿ ಹೆಚ್ಚು ನೇರವಾಗಿ ಸಂಬಂಧಿಸಿರುವ ಕಾರ್ಯಸಂಸ್ಥೆಯು ಇರುವ ನಿಖರ ಸ್ಥಳ;

(ಡಿ) ಅಂಥ ಸ್ಥಳಗಳು ಇಲ್ಲದಿದ್ದಾಗ, ಪೂರೈಕೆದಾರನ ವಾಡಿಕೆ ನಿವಾಸ ಇರುವ ನಿಖರ ಸ್ಥಳ;

(72) "ತಯಾರಿಕೆ" ಎಂದರೆ, ಕಚ್ಚಾ ಪದಾರ್ಥವನ್ನು ಅಥವಾ ಪರಿಕರಗಳನ್ನು ಯಾವ ರೀತಿಯಲ್ಲಿ ಸಂಸ್ಕರಿಸಿದರೆ ಆ ಪರಿಣಾಮವಾಗಿ ವಿಭಿನ್ನ ಹೆಸರಿನ, ಲಕ್ಷಣದ ಮತ್ತು ಬಳಕೆಯ ಒಂದು ಹೊಸ ಉತ್ಪನ್ನ ಹೊರಬರುವುದು ಆ ಸಂಸ್ಕರಣೆ ಮತ್ತು "ತಯಾರಕ" ಎಂಬ ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(73) "ಮಾರುಕಟ್ಟೆ ಮೌಲ್ಯ" ಎಂದರೆ, ಪೂರೈಕೆಯ ಸ್ವೀಕರ್ತನನ್ನು, ಅದೇ ಬಗೆಯ ಗುಣಮಟ್ಟದ ಮತ್ತು ಅದೇ ಸಮಯದಲ್ಲಿ ಅಥವಾ ಸರಿಸುಮಾರು ಅದೇ ಸಮಯದಲ್ಲಿ ಆದರೆ ಸ್ವೀಕರ್ತನಿಗೂ, ಆದರೆ ಪೂರೈಕೆದಾರನಿಗೂ ಸಂಬಂಧ ಇರದ, ಅದೇ ವಾಣಿಜ್ಯ ಸ್ತರದಲ್ಲಿ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಪಡೆಯುವ ಸಲುವಾಗಿ ಯಾವ ಪೂರ್ಣ ಮೊಬಲಗನ್ನು ಸಂದಾಯ ಮಾಡಬೇಕೆಂದು ಅಗತ್ಯಪಡಿಸಲಾಗಿದೆಯೋ ಆ ಸಂಪೂರ್ಣ ಮೊಬಲಗು;

(74) "ಒಟ್ಟಿಗೆ ಪೂರೈಕೆ" ಎಂದರೆ, ತೆರಿಗೆದಾಯಕ ವ್ಯಕ್ತಿಯು ಸರಕುಗಳನ್ನು ಅಥವಾ ಸೇವೆಗಳನ್ನು ಅಥವಾ ಅವುಗಳನ್ನು ಒಟ್ಟಿಗೆ ಸೇರಿಸಿ ಒಂದು ನಿಗದಿತ ಬೆಲೆಗೆ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಪೂರೈಕೆಗಳನ್ನು ಒಟ್ಟಿಗೆ, ಆದರೆ ಅಂಥ ಪೂರೈಕೆಯು ಸಂಯುಕ್ತ ಪೂರೈಕೆಯೆಂದೆನಿಸದಿದ್ದಾಗ, ಮಾಡಿದ ಪೂರೈಕೆ;

ದೃಷ್ಟಾಂತ.– ಡಬ್ಬಿಯಲ್ಲಿ ಹಾಕಿಟ್ಟ ಆಹಾರಗಳು, ಸಿಹಿ ತಿನಿಸುಗಳು, ಚಾಕೊಲೇಟ್‌ಗಳು, ಕೇಕುಗಳು, ಒಣಹಣ್ಣುಗಳು, ಅನಿಲಯುಕ್ತ ಪಾನೀಯ ಮತ್ತು ಹಣ್ಣಿನ ರಸಗಳನ್ನು ಒಳಗೊಂಡ ಪ್ಯಾಕೇಜಿನ ಪೂರೈಕೆಯನ್ನು ಒಂದೇ ಬೆಲೆಯಲ್ಲಿ ಪೂರೈಕೆ ಮಾಡುವುದು ಒಟ್ಟಿಗೆ ಪೂರೈಕೆ. ಇಂಥ ಪ್ರತಿಯೊಂದು ಪದಾರ್ಥಗಳನ್ನು ಪ್ರತ್ಯೇಕವಾಗಿ ಪೂರೈಕೆ ಮಾಡಬಹುದು ಮತ್ತು ಇವುಗಳು ಮತ್ತೊಂದರ ಮೇಲೆ ಅವಲಂಬಿತವಾಗಿರುವುದಿಲ್ಲ. ಒಂದು ವೇಳೆ ಈ ಪದಾರ್ಥಗಳು ಪ್ರತ್ಯೇಕ ಪ್ರತ್ಯೇಕವಾಗಿ ಪೂರೈಕೆಯಾದಲ್ಲಿ ಇದು ಒಟ್ಟಿಗೆ ಮಾಡಿದ ಪೂರೈಕೆ ಎನಿಸುವುದಿಲ್ಲ;

(75) "ಹಣ" ಎಂದರೆ, ಭಾರತದಲ್ಲಿ ಕಾನೂನುಸಮ್ಮತವಾಗಿ ಚಲಾವಣೆಯಲ್ಲಿರುವ ಹಣ ಅಥವಾ ಯಾವುದೇ ವಿದೇಶಿ ಕರೆನ್ಸಿ, ಚೆಕ್, ಪ್ರಾಮಿಸರಿ ನೋಟ್, ಬಿಲ್ ಆಫ್ ಎಕ್ಸ್‌ಚೇಂಜ್, ಲೆಟರ್ ಆಫ್ ಕ್ರೆಡಿಟ್, ಡ್ರಾಫ್ಟ್, ಪೇ ಆರ್ಡರ್, ಟ್ರಾವೆಲರ್ ಚೆಕ್, ಮನಿ ಆರ್ಡರ್, ಅಂಚೆ ಅಥವಾ ವಿದ್ಯುನ್ಮಾನ ಹಣಪಾವತಿ ಅಥವಾ ಬಾಧ್ಯತೆಯನ್ನು ಇತ್ಯರ್ಥಗೊಳಿಸುವುದಕ್ಕಾಗಿ ಅಥವಾ ಭಾರತದಲ್ಲಿ ಕಾನೂನುಸಮ್ಮತವಾಗಿ ಚಲಾವಣೆಯಲ್ಲಿರುವ ಮತ್ತೊಂದು ಡಿನಾಮಿನೇಷನ್‌ನ ಹಣದೊಂದಿಗೆ ವಿನಿಮಯ ಮಾಡುವ ಸಲುವಾಗಿ ಬಳಕೆಯಾದಂಥ, ಭಾರತೀಯ ರಿಸರ್ವ್ ಬ್ಯಾಂಕಿನಿಂದ ಮನ್ನಣೆ ಪಡೆದ ಯಾವುದೇ ಇತರ ಲಿಖಿತ, ಆದರೆ ನಾಣ್ಯಸಂಬಂಧಿ ಮೌಲ್ಯಕ್ಕಾಗಿ ಇಟ್ಟುಕೊಂಡಿರುವ ಯಾವುದೇ ಕರೆನ್ಸಿಯನ್ನು ಇದು ಒಳಗೊಳ್ಳತಕ್ಕದ್ದಲ್ಲ.

(76) "ಮೋಟಾರು ವಾಹನ" ಪದಾವಳಿಗೆ ಮೋಟಾರು ವಾಹನಗಳ ಅಧಿನಿಯಮ, 1988 (1988 ರ 59)ರ ಪ್ರಕರಣ 2ರ ಖಂಡ (28)ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(77) "ಅನಿವಾಸಿ ತೆರಿಗೆದಾಯಕ ವ್ಯಕ್ತಿ" ಎಂದರೆ, ಪ್ರಧಾನಕರ್ತನಾಗಿ ಅಥವಾ ಏಜೆಂಟನಾಗಿ ಅಥವಾ ಯಾವುದೇ ಇನ್ನಿತರ ಸಾಮರ್ಥ್ಯದಲ್ಲಿ, ಭಾರತದಲ್ಲಿ ನಿಗದಿತ ವ್ಯವಹಾರದ ಸ್ಥಳ ಅಥವಾ ವಾಸಸ್ಥಳ ಇರದ, ವ್ಯವಹಾರ ನಡೆಯುತ್ತಿರುವಾಗ ಅಥವಾ ಅದರ ಮುನ್ನಡೆಗಾಗಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯನ್ನು ಒಳಗೊಂಡ ವ್ಯವಹಾರಗಳನ್ನು ಸಾಂದರ್ಭಿಕವಾಗಿ ಕೈಗೊಳ್ಳುವ ವ್ಯಕ್ತಿ;

(78) "ತೆರಿಗೆಗೆ ಒಳಪಡದ ಪೂರೈಕೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಅಥವಾ ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ವಿಧಿಸಲು ಬಾರದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ;

(79) "ತೆರಿಗೆ ವಿಧಿಸಲಾಗದ ಭೂ ಪ್ರದೇಶ" ಎಂದರೆ, ತೆರಿಗೆದಾಯಕ ಭೂಪ್ರದೇಶದಿಂದ ಹೊರಗಿರುವ ಭೂಪ್ರದೇಶ;

(80) "ಅಧಿಸೂಚನೆ" ಎಂದರೆ, ಅಧಿಕೃತ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಹಾಗೂ 'ಅಧಿಸೂಚಿಸು' ಮತ್ತು 'ಅಧಿಸೂಚಿಸಲಾಗಿದೆ' ಪದಾವಳಿಗಳನ್ನು ತದಾನುಸಾರವಾಗಿ ಅರ್ಥೈಸತಕ್ಕದ್ದು;

(81) "ಇತರ ಭೂ ಭಾಗ"ವು ರಾಜ್ಯದಲ್ಲಿ ಅಡಕವಾಗಿರುವವುಗಳಲ್ಲದ ಹಾಗೂ ಖಂಡ (114)ರ ಉಪಖಂಡ (ಎ) ಯಿಂದ (ಇ)ವರೆಗೆ ಉಲ್ಲೇಖಿಸಿರುವ ಭೂ ಭಾಗಗಳಲ್ಲದ ಇತರ ಭೂಪ್ರದೇಶಗಳನ್ನು ಒಳಗೊಳ್ಳುತ್ತದೆ;

(82) ತೆರಿಗೆದಾಯಕ ವ್ಯಕ್ತಿಗೆ ಸಂಬಂಧಿಸಿದಂತೆ "ಔಟ್‌ಪುಟ್ ಟ್ಯಾಕ್ಸ್" ಎಂದರೆ, ಆತನು ಅಥವಾ ಆತನ ಏಜೆಂಟ್‌ನು ಮಾಡಿದ ಸರಕುಗಳ ಅಥವಾ ಸೇವೆಗಳು ಅಥವಾ ಅವುಗಳೆರಡರ ತೆರಿಗೆದಾಯಕ ಪೂರೈಕೆಯ ಮೇಲೆ ಈ ಅಧಿನಿಯಮದಡಿ ವಿಧಿಸಬಹುದಾದ ತೆರಿಗೆ ಆದರೆ ಆತನು ರಿವರ್ಸ್ ಚಾರ್ಜ್ ಆಧಾರದ ಮೇಲೆ ಸಂದಾಯ ಮಾಡಬೇಕಾದ ತೆರಿಗೆ ಒಳಗೊಳ್ಳುವುದಿಲ್ಲ;

(83) ತೆರಿಗೆದಾಯಕ ವ್ಯಕ್ತಿಗೆ ಸಂಬಂಧಿಸಿದಂತೆ "ಹೊರಗಡೆಗೆ ಪೂರೈಕೆ" ಎಂದರೆ, ಮಾರಾಟದ, ವರ್ಗಾವಣೆಯ, ವಸ್ತುವಿನಿಮಯದ, ವಿನಿಮಯದ, ಲೈಸೆನ್ಸಿನ, ಬಾಡಿಗೆಯ, ಭೋಗ್ಯದ ಅಥವಾ ವಿಲೇವಾರಿಯ ಅಥವಾ ಯಾವುದೇ ಇತರ ಪ್ರಕಾರದಲ್ಲಿ, ಅಂಥ ವ್ಯಕ್ತಿಯು ವ್ಯವಹಾರ ನಡೆಯುತ್ತಿರುವಾಗ ಅಥವಾ ವ್ಯವಹಾರ ಮುನ್ನಡೆಗಾಗಿ ಮಾಡಿದ ಅಥವಾ ಮಾಡಲು ಒಪ್ಪಿರುವ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆ;

(84) "ವ್ಯಕ್ತಿ" ಪದಾವಳಿಯು,–

(ಎ) ವ್ಯಕ್ತಿಯನ್ನು;

(ಬಿ) ಹಿಂದೂ ಅವಿಭಕ್ತ ಕುಟುಂಬವನ್ನು;

(ಸಿ) ಕಂಪನಿಯನ್ನು;

(ಡಿ) ಫರ್ಮನ್ನು;

(ಇ) ನಿಯಮಿತ ಹೊಣೆಗಾರಿಕೆ ಪಾಲುದಾರಿಕೆಯನ್ನು;

(ಎಫ್) ಭಾರತದಲ್ಲಾಗಲಿ ಅಥವಾ ಭಾರತದ ಹೊರಗಡೆಯಾಗಲಿ, ನಿಗಮಿತವಾದ ಅಥವಾ ನಿಗಮಿತವಾಗಿರದ ವ್ಯಕ್ತಿಗಳ ಸಂಘ ಅಥವಾ ನಿಕಾಯವನ್ನು;

(ಜಿ) ಯಾವುದೇ ಕೇಂದ್ರ ಅಧಿನಿಯಮದ, ರಾಜ್ಯ ಅಧಿನಿಯಮದ ಅಥವಾ ಪ್ರಾದೇಶಿಕ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಾಪಿಸಿದ ನಿಗಮ ಅಥವಾ ಕಂಪನಿ ಅಧಿನಿಯಮ, 2013 (2013 ರ 18)ರ ಪ್ರಕರಣ 2ರ ಉಪಪ್ರಕರಣ (45)ರಲ್ಲಿ ಪರಿಭಾಷಿಸಿರುವಂಥ ಯಾವುದೇ ಸರ್ಕಾರಿ ಕಂಪನಿಯನ್ನು;

(ಹೆಚ್) ಭಾರತದ ಹೊರಗಿನ ದೇಶದ ಕಾನೂನಿನ ಪ್ರಕಾರ ಅಥವಾ ಅದರಡಿಯಲ್ಲಿ ನಿಗಮಿತವಾದ ಯಾವುದೇ ನಿಗಮಿತ ನಿಕಾಯವನ್ನು;

(ಐ) ಸಹಕಾರ ಸಂಘಗಳಿಗೆ ಸಂಬಂಧಿಸಿದ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿತವಾದ ಸಹಕಾರ ಸಂಘವನ್ನು;

(ಜೆ) ಸ್ಥಳೀಯ ಪ್ರಾಧಿಕಾರವನ್ನು;

(ಕೆ) ಕೇಂದ್ರ ಸರ್ಕಾರವನ್ನು ಅಥವಾ ರಾಜ್ಯ ಸರ್ಕಾರವನ್ನು;

(ಎಲ್) ಸಂಘಗಳ ನೋಂದಣಿ ಅಧಿನಿಯಮ, 1860 (1860 ರ 21) ರ ಅಡಿಯಲ್ಲಿ ಪರಿಭಾಷಿಸಿದಂಥ ಸಂಘವನ್ನು;

(ಎಮ್) ಟ್ರಸ್ಟನ್ನು; ಮತ್ತು

(ಎನ್) ಈ ಮೇಲೆ ಹೇಳಿರುವವುಗಳ ಪೈಕಿ ಯಾವುದರ ವ್ಯಾಪ್ತಿಗೂ ಒಳಪಡದ ಕೃತಕ ನ್ಯಾಯಿಕ ವ್ಯಕ್ತಿಯನ್ನು

– ಒಳಗೊಳ್ಳುತ್ತದೆ.

(85) "ವ್ಯವಹಾರದ ಸ್ಥಳ" ಪದಾವಳಿಯು,–

(ಎ) ಯಾವ ಸ್ಥಳದಿಂದ ಸಾಮಾನ್ಯವಾಗಿ ವ್ಯವಹಾರವನ್ನು ನಡೆಸಲಾಗುವುದೋ ಆ ಸ್ಥಳವನ್ನು ಮತ್ತು ಇದು ಉಗ್ರಾಣ, ಗೋದಾಮು ಅಥವಾ ತೆರಿಗೆದಾಯಕ ವ್ಯಕ್ತಿಯು ತನ್ನ ಸರಕನ್ನು ಸಂಗ್ರಹಿಸುವ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಪೂರೈಕೆ ಮಾಡುವ ಅಥವಾ ಸ್ವೀಕರಿಸುವ ಯಾವುದೇ ಇತರ ಸ್ಥಳವನ್ನು ಒಳಗೊಳ್ಳುತ್ತದೆ; ಅಥವಾ

(ಬಿ) ತೆರಿಗೆದಾಯಕ ವ್ಯಕ್ತಿಯು, ತನ್ನ ಲೆಕ್ಕಪುಸ್ತಕಗಳನ್ನು ನಿರ್ವಹಿಸುವ ಸ್ಥಳವನ್ನು; ಅಥವಾ

(ಸಿ) ಯಾವುದೇ ಹೆಸರಿನಿಂದ ಕರೆಯಲಾಗುವ ಏಜೆಂಟ್‌ನ ಮೂಲಕ ತೆರಿಗೆದಾಯಕ ವ್ಯಕ್ತಿಯು ವ್ಯವಹಾರದಲ್ಲಿ ತೊಡಗಿರುವ ಸ್ಥಳವನ್ನು

– ಒಳಗೊಳ್ಳುತ್ತದೆ.

(86) "ಪೂರೈಕೆಯ ಸ್ಥಳ" ಎಂದರೆ, ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಧ್ಯಾಯ Vರಲ್ಲಿ ಉಲ್ಲೇಖಿಸಿರುವಂಥ ಪೂರೈಕೆಯ ಸ್ಥಳ;

(87) "ನಿಯಮಿಸಿದ" ಎಂದರೆ, ಪರಿಷತ್ತಿನ ಶಿಫಾರಸ್ಸಿನ ಅನ್ವಯ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(88) "ಪ್ರಧಾನಕರ್ತ" ಎಂದರೆ, ಏಜೆಂಟನು ಯಾವ ವ್ಯಕ್ತಿಯ ಪರವಾಗಿ, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯನ್ನು ಅಥವಾ ಸರಕು ಅಥವಾ ಸೇವೆಗಳನ್ನು ಅಥವಾ ಅವೆರಡನ್ನು ಸ್ವೀಕರಿಸುವ ವ್ಯವಹಾರವನ್ನು ನಡೆಸುವನೋ, ಆ ವ್ಯಕ್ತಿ;

(89) "ಪ್ರಧಾನ ವ್ಯವಹಾರ ಸ್ಥಳ" ಎಂದರೆ, ನೋಂದಣಿ ಪ್ರಮಾಣಪತ್ರದಲ್ಲಿ ಪ್ರಧಾನ ವ್ಯವಹಾರ ಸ್ಥಳ ಎಂದು ನಿರ್ದಿಷ್ಟಪಡಿಸಿರುವ ಸ್ಥಳ;

(90) "ಪ್ರಧಾನ ಪೂರೈಕೆ" ಎಂದರೆ, ಸರಕು ಅಥವಾ ಸೇವೆಗಳ ಯಾವ ಸಮ್ಮಿಳಿತ ಪೂರೈಕೆಯಲ್ಲಿ ಇನ್ನಿತರವುಗಳಿಗಿಂತಲೂ ಪ್ರಧಾನವಾದುದೋ ಅಥವಾ ಸಮ್ಮಿಳಿತ ಪೂರೈಕೆಯ ಭಾಗವಾಗಿರುವ ಇತರ ಯಾವುದೇ ಪೂರೈಕೆಯು ಅಂಥ ಪೂರೈಕೆಗೆ ಪೂರಕವಾಗಿರುವುದೋ ಅಂಥ ಸಮ್ಮಿಳಿತ ಪೂರೈಕೆ;

(91) ಈ ಅಧಿನಿಯಮದ ಅಡಿಯಲ್ಲಿ ನಿರ್ವಹಿಸಬೇಕಾದ ಯಾವುದೇ ಕಾರ್ಯಭಾರಕ್ಕೆ ಸಂಬಂಧಿಸಿದಂತೆ 'ಸೂಕ್ತ ಅಧಿಕಾರಿ' ಎಂದರೆ, ಮಂಡಳಿಯಲ್ಲಿನ ಆಯುಕ್ತರು ಅಥವಾ ಅಂಥ ಆಯುಕ್ತರಿಂದ ಆ ಕಾರ್ಯಭಾರಕ್ಕೆ ನಿಯುಕ್ತಿಗೊಂಡ ಕೇಂದ್ರ ತೆರಿಗೆ ಅಧಿಕಾರಿ;

(92) "ತ್ರೈಮಾಸಿಕ" ಎಂದರೆ, ಕ್ಯಾಲೆಂಡರ್ ವರ್ಷದ ಮಾರ್ಚ್, ಜೂನ್, ಸೆಪ್ಟೆಂಬರ್ ಮತ್ತು ಡಿಸೆಂಬರಿನ ಕೊನೆಯ ದಿನದಂದು ಕೊನೆಗೊಳ್ಳುವ ಅನುಕ್ರಮವಾದ ಮೂರು ಕ್ಯಾಲೆಂಡರ್ ತಿಂಗಳುಗಳನ್ನು ಒಳಗೊಂಡ ಅವಧಿ;

(93) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ "ಸ್ವೀಕರ್ತ" ಎಂದರೆ:–

(ಎ) ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಾಗಿ ಹಣವನ್ನು ಸಂದಾಯ ಮಾಡಬೇಕಾಗುವುದೋ, ಆ ಹಣವನ್ನು ಸಂದಾಯ ಮಾಡಲು ಬಾಧ್ಯಸ್ಥನಾದ ವ್ಯಕ್ತಿ;

(ಬಿ) ಸರಕುಗಳ ಪೂರೈಕೆಗಾಗಿ ಪ್ರತಿಫಲವನ್ನು ಸಂದಾಯ ಮಾಡಬೇಕಿಲ್ಲವೋ, ಅಂಥ ಸಂದರ್ಭದಲ್ಲಿ ಸರಕುಗಳನ್ನು ಯಾರಿಗೆ ತಲುಪಿಸಲಾಗುವುದೋ ಅಥವಾ ಅವು ಲಭ್ಯವಾಗುವಂತೆ ಮಾಡಲಾಗುವುದೋ ಅಥವಾ ಸರಕುಗಳ ಸ್ವಾಧೀನತೆಯನ್ನು ಅಥವಾ ಬಳಕೆ ಮಾಡಲು ಯಾರಿಗೆ ನೀಡಲಾಗುವುದೋ ಅಥವಾ ಬಳಕೆ ಲಭ್ಯವಾಗುವಂತೆ ಮಾಡಲಾಗುವುದೋ, ಆ ವ್ಯಕ್ತಿ; ಮತ್ತು

(ಸಿ) ಸೇವೆಯ ಪೂರೈಕೆಗೆ ಪ್ರತಿಫಲವನ್ನು ಸಂದಾಯ ಮಾಡಬೇಕಿಲ್ಲವೋ ಅಂಥ ಸಂದರ್ಭದಲ್ಲಿ ಯಾರಿಗೆ ಸೇವೆಯನ್ನು ನೀಡಲಾಗುತ್ತದೆಯೋ, ಆ ವ್ಯಕ್ತಿ

– ಮತ್ತು ಪೂರೈಕೆಯನ್ನು ಯಾರಿಗೆ ಮಾಡಲಾಗುವುದೋ ಆ ವ್ಯಕ್ತಿಯ ಸಂಬಂಧದಲ್ಲಿ ಮಾಡುವ ಯಾವುದೇ ಉಲ್ಲೇಖವನ್ನು ಪೂರೈಕೆಯನ್ನು ಸ್ವೀಕರಿಸುವವನಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು ಮತ್ತು ಸ್ವೀಕರ್ತ ಪದಾವಳಿಯು

ಪೂರೈಕೆ ಮಾಡಿದ ಸರಕು ಅಥವಾ ಸೇವೆಗಳಿಗೆ ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ಸ್ವೀಕರ್ತನ ಪರವಾಗಿ ಕಾರ್ಯನಿರ್ವಹಿಸುವ ಏಜೆಂಟ್‌ನನ್ನೂ ಸಹ ಒಳಗೊಳ್ಳತಕ್ಕದ್ದು;

(94) "ನೋಂದಾಯಿತ ವ್ಯಕ್ತಿ" ಎಂದರೆ, ಪ್ರಕರಣ 25ರ ಅಡಿಯಲ್ಲಿ ನೋಂದಾಯಿತನಾಗಿರುವ ವ್ಯಕ್ತಿ, ಆದರೆ, ವಿಶಿಷ್ಟ ಗುರುತಿನ ಸಂಖ್ಯೆಯನ್ನು (ಯೂನಿಕ್ ಐಡೆಂಟಿಟಿ ನಂಬರ್) ಹೊಂದಿರುವ ವ್ಯಕ್ತಿಯನ್ನು ಇದು ಒಳಗೊಳ್ಳುವುದಿಲ್ಲ;

(95) "ವಿನಿಯಮಗಳು" ಎಂದರೆ, ಪರಿಷತ್ತಿನ ಶಿಫಾರಸ್ಸಿನ ಅನ್ವಯ ಈ ಅಧಿನಿಯಮದ ಅಡಿಯಲ್ಲಿ ಮಂಡಳಿಯು ರಚಿಸಿದ ವಿನಿಯಮಗಳು;

(96) ಸರಕುಗಳಿಗೆ ಸಂಬಂಧಿಸಿದಂತೆ, "ಸಾಗಿಸುವುದು" ಎಂದರೆ:–

(ಎ) ಸರಕುಗಳ ಪೂರೈಕೆದಾರನು ಅಥವಾ ಅಂಥ ಪೂರೈಕೆದಾರನ ಪರವಾಗಿ ಕಾರ್ಯನಿರ್ವಹಿಸುತ್ತಿರುವ ಯಾರೇ ಇತರ ವ್ಯಕ್ತಿಯು ಸರಕುಗಳನ್ನು ತಲುಪಿಸುವುದಕ್ಕಾಗಿ ರವಾನಿಸುವುದು ಅಥವಾ;

(ಬಿ) ಸರಕುಗಳ ಸ್ವೀಕರ್ತನು ಅಥವಾ ಅಂಥ ಸ್ವೀಕರ್ತನ ಪರವಾಗಿ ಕಾರ್ಯನಿರ್ವಹಿಸುತ್ತಿರುವ ಯಾರೇ ಇತರ ವ್ಯಕ್ತಿಯು ಸರಕುಗಳನ್ನು ಪಡೆಯುವುದು.

(97) "ರಿಟರ್ನ್" ಎಂದರೆ, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ಅಥವಾ ಅದರ ಅಡಿಯಲ್ಲಿ ನಿಯಮಿಸಿದ ಅಥವಾ ಅನ್ಯಥಾ ಸಲ್ಲಿಸಬೇಕೆಂದು ಅಗತ್ಯಪಡಿಸಿದ ಯಾವುದೇ ರಿಟರ್ನ್;

(98) "ರಿವರ್ಸ್ ಚಾರ್ಜ್" ಎಂದರೆ, ಈ ಅಧಿನಿಯಮದ ಪ್ರಕರಣ 9ರ ಉಪಪ್ರಕರಣ (3)ರ ಅಥವಾ ಉಪಪ್ರಕರಣ (4)ರ ಅಡಿಯಲ್ಲಿ ಅಥವಾ ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 5ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ ಅಡಿಯಲ್ಲಿ, ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆದಾರನ ಬದಲು, ಅಂಥ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಮೇಲೆ ಸ್ವೀಕರ್ತನಿಗೆ ಇರುವ ತೆರಿಗೆ ಸಂದಾಯ ಬಾಧ್ಯತೆ;

(99) "ಪುನರೀಕ್ಷಣಾ ಪ್ರಾಧಿಕಾರ" ಎಂದರೆ, ನಿರ್ಣಯಗಳ ಅಥವಾ ಆದೇಶಗಳ ಪುನರೀಕ್ಷಣೆಗಾಗಿ ಪ್ರಕರಣ 108ರಲ್ಲಿ ಹೇಳಿರುವಂಥ ನೇಮಕಗೊಂಡ ಅಥವಾ ಅಧಿಕೃತವಾದ ಪ್ರಾಧಿಕಾರ;

(100) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಲಾದ ಅನುಸೂಚಿ;

(101) "ಭದ್ರತಾಪತ್ರಗಳು" ಪದಾವಳಿಯು, ಭದ್ರತಾಪತ್ರಗಳ ಕರಾರುಗಳ (ನಿಯಂತ್ರಣ) ಅಧಿನಿಯಮ, 1956 (1956ರ 42)ರ ಪ್ರಕರಣ 2ರ ಖಂಡ (ಹೆಚ್)ನಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(102) "ಸೇವೆಗಳು" ಎಂದರೆ, ಸರಕು, ಹಣ ಮತ್ತು ಭದ್ರತಾಪತ್ರಗಳಲ್ಲದವುಗಳು, ಆದರೆ ಹಣದ ಬಳಕೆಗೆ ಸಂಬಂಧಿಸಿದ ಅಥವಾ ಒಂದು ರೂಪದ ಕರೆನ್ಸಿಯಿಂದ ಮತ್ತೊಂದು ರೂಪದ ಕರೆನ್ಸಿಗೆ ನಗದಿನ ಮೂಲಕವಾಗಿಯಾಗಲೀ ಅಥವಾ ಇತರ ಯಾವುದೇ ವಿಧಾನಗಳ ಮೂಲಕವಾಗಲೀ ಅದರ ಪರಿವರ್ತನೆಯ ಮತ್ತು ಆ ಕಾರ್ಯಕ್ಕಾಗಿ ಪ್ರತ್ಯೇಕ ಪ್ರತಿಫಲವನ್ನು ವಿಧಿಸುವ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ;

**ವಿವರಣೆ.–** ಸಂದೇಹಗಳ ನಿವಾರಣೆಗಾಗಿ "ಸೇವೆಗಳು" ಎಂಬ ಪದಾವಳಿಯು ಭದ್ರತೆಗಳಿಗೆ ಸಂಬಂಧಿಸಿದ ವ್ಯವಹಾರಗಳಲ್ಲಿ ಅನುಕೂಲ ಮಾಡಿಕೊಡುವುದು ಅಥವಾ ಏರ್ಪಾಡು ಮಾಡುವುದನ್ನು ಒಳಗೊಂಡಿರುತ್ತದೆ ಎಂಬುದನ್ನು ಈ ಮೂಲಕ ಸ್ಪಷ್ಟೀಕರಿಸಲಾಗಿದೆ;

(103) "ರಾಜ್ಯ" ಪದಾವಳಿಯಲ್ಲಿ, ವಿಧಾನಮಂಡಲವನ್ನು ಹೊಂದಿರುವ ಒಕ್ಕೂಟ ರಾಜ್ಯಕ್ಷೇತ್ರವನ್ನು ಒಳಗೊಳ್ಳುತ್ತದೆ;

(104) "ರಾಜ್ಯ ತೆರಿಗೆ" ಎಂದರೆ, ಯಾವುದೇ ರಾಜ್ಯದ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ವಿಧಿಸಿದ ತೆರಿಗೆ;

(105) "ಪೂರೈಕೆದಾರ" ಎಂದರೆ, ಯಾವುದೇ ಸರಕು ಅಥವಾ ಸೇವೆಗಳಿಗೆ ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ, ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಪೂರೈಕೆ ಮಾಡುವ ವ್ಯಕ್ತಿ ಮತ್ತು ಇದು, ಪೂರೈಕೆ ಮಾಡುವ ಸರಕುಗಳು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ಅಂಥ ಪೂರೈಕೆದಾರನ ಪರವಾಗಿ ಆ ಕಾರ್ಯ ಮಾಡುವ ಏಜೆಂಟ್‌ನನ್ನು ಒಳಗೊಳ್ಳತಕ್ಕದ್ದು;

(106) "ತೆರಿಗೆ ಅವಧಿ" ಎಂದರೆ, ಯಾವ ಅವಧಿಗೆ ರಿಟರ್ನನ್ನು ಸಲ್ಲಿಸುವುದು ಅವಶ್ಯವಿರುವುದೋ ಆ ಅವಧಿ;

(107) "ತೆರಿಗೆದಾಯಕ ವ್ಯಕ್ತಿ" ಎಂದರೆ, ಪ್ರಕರಣ 22ರ ಅಥವಾ ಪ್ರಕರಣ 24ರ ಅಡಿಯಲ್ಲಿ ನೋಂದಣಿಯಾಗಿರುವ ಅಥವಾ ನೋಂದಣಿಯಾಗಬೇಕಾದ ಒಬ್ಬ ವ್ಯಕ್ತಿ;

(108) "ತೆರಿಗೆದಾಯಕ ಪೂರೈಕೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ವಿಧಿಸಬಹುದಾದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆ;

(109) "ತೆರಿಗೆದಾಯಕ ಪ್ರದೇಶ" ಎಂದರೆ, ಈ ಅಧಿನಿಯಮದ ಉಪಬಂಧಗಳು ಅನ್ವಯವಾಗುವ ಪ್ರದೇಶ;

(110) "ದೂರಸಂಪರ್ಕ ಸೇವೆ" ಎಂದರೆ, ತಂತಿ, ರೇಡಿಯೋ, ದೃಶ್ಯ ಅಥವಾ ಇತರ ವಿದ್ಯುತ್‌ಕಾಂತೀಯ ಮಾಧ್ಯಮಗಳ ಮೂಲಕ, ಚಿಹ್ನೆಗಳನ್ನು, ಸಂಕೇತಗಳನ್ನು, ಲಿಖಿತವನ್ನು, ಆಕೃತಿಗಳನ್ನು ಮತ್ತು ಶಬ್ದಗಳನ್ನು ಅಥವಾ ಯಾವುದೇ ಸ್ವರೂಪದ ಸಮಾಚಾರವನ್ನು ಯಾವುದೇ ಪ್ರಸರಣ ಅಥವಾ ಸ್ವೀಕಾರ ಮಾಧ್ಯಮಗಳ ಮೂಲಕ ಬಳಕೆದಾರರಿಗೆ ದೊರಕಿಸಿಕೊಡುವ (ಇಲೆಕ್ಟ್ರಾನಿಕ್ ಮೈಲ್, ವಾಯ್ಸ್ ಮೈಲ್, ದತ್ತಾಂಶ ಸೇವೆಗಳು, ಆಡಿಯೋ ಟೆಕ್ಸ್ಟ್ ಸರ್ವಿಸಸ್, ವಿಡಿಯೋ ಟೆಕ್ಸ್ಟ್ ಸೇವೆಗಳು, ರೇಡಿಯೋ ಪೇಜಿಂಗ್ ಮತ್ತು ಸೆಲ್ಯುಲರ್ ಮೊಬೈಲ್ ಟೆಲಿಫೋನ್ ಸರ್ವಿಸಸ್ ಒಳಗೊಂಡಂತೆ) ಯಾವುದೇ ಸ್ವರೂಪದ ಸೇವೆ;

(111) "ರಾಜ್ಯ ಸರಕುಗಳ ಮತ್ತು ಸೇವೆಗಳ ಅಧಿನಿಯಮ" ಎಂದರೆ, ಸಂಬಂಧಪಟ್ಟ ರಾಜ್ಯ ಸರಕುಗಳ ಮತ್ತು ಸೇವೆಗಳ ಅಧಿನಿಯಮ, 2017;

(112) "ರಾಜ್ಯದಲ್ಲಿನ ವಹಿವಾಟು ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿನ ವಹಿವಾಟು" ಎಂದರೆ, ರಾಜ್ಯದೊಳಗಡೆಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರದೊಳಗಡೆಗೆ ತೆರಿಗೆದಾಯಕ ವ್ಯಕ್ತಿಯು ಮಾಡಿದ ಎಲ್ಲ ತೆರಿಗೆದಾಯಕ ಪೂರೈಕೆಗಳ (ಯಾವ ಒಳ ಪೂರೈಕೆಗಳ ಮೇಲೆ ಸ್ವೀಕರ್ತನ ತೆರಿಗೆ ಬಾಧ್ಯತೆ (ರಿವರ್ಸ್ ಚಾರ್ಜ್) ಆಧಾರದ ಮೇಲೆ ತೆರಿಗೆಯನ್ನು ಸಂದಾಯ

ಮಾಡಬೇಕಾಗುತ್ತದೋ ಆ ಪೂರೈಕೆಗಳ ಮೌಲ್ಯವನ್ನು ಹೊರತುಪಡಿಸಿ) ಮತ್ತು ವಿನಾಯಿತಿ ಪೂರೈಕೆಗಳ ಹಾಗೂ ರಾಜ್ಯದಿಂದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಿಂದ ಆ ತೆರಿಗೆದಾಯಕ ವ್ಯಕ್ತಿಯು ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ರಫ್ತುಗಳ ಮತ್ತು ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಅಂತರ-ರಾಜ್ಯ ಪೂರೈಕೆಗಳ ಒಟ್ಟು ಮೌಲ್ಯ ಆದರೆ ಇದರಲ್ಲಿ ಕೇಂದ್ರ ತೆರಿಗೆಯನ್ನು, ರಾಜ್ಯ ತೆರಿಗೆಯನ್ನು, ಏಕೀಕೃತ ತೆರಿಗೆಯನ್ನು ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆಯನ್ನು ಮತ್ತು ಉಪಕರಗಳನ್ನು ಹೊರತುಪಡಿಸಿ;

(113) "ವಾಡಿಕೆ ವಾಸಸ್ಥಳ" ಎಂದರೆ:–

(ಎ) ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಆ ವ್ಯಕ್ತಿಯು ಸಾಮಾನ್ಯವಾಗಿ ಎಲ್ಲಿ ವಾಸಿಸುತ್ತಾನೋ ಆ ಸ್ಥಳ;

(ಬಿ) ಇತರೆ ಪ್ರಕರಣಗಳಲ್ಲಿ, ವ್ಯಕ್ತಿಯು ನಿಗಮಿತಗೊಂಡಿರುವ ಅಥವಾ ಅನ್ಯಥಾ ಕಾನೂನುಸಮ್ಮತವಾಗಿ ಸ್ಥಾಪಿತವಾಗಿರುವ ಸ್ಥಳ;

(114) "ಒಕ್ಕೂಟ ರಾಜ್ಯಕ್ಷೇತ್ರ" ಎಂದರೆ:–

(ಎ) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು;

(ಬಿ) ಲಕ್ಷದ್ವೀಪ;

(ಸಿ) ದಾದ್ರ ಮತ್ತು ನಗರ್ ಹವೇಲಿ ಮತ್ತು ದಮನ್ ಮತ್ತು ದಿಯು;

(ಡಿ) ಲಡಾಖ್;

(ಇ) ಚಂಡೀಘಡ;

(ಇಎ) ಲಡಾಖ್; ಮತ್ತು

(ಎಫ್) ಇತರ ಭೂಪ್ರದೇಶ

– ಇವುಗಳ ಕ್ಷೇತ್ರ.

**ವಿವರಣೆ.–** ಈ ಅಧಿನಿಯಮದ ಉದ್ದೇಶಗಳಿಗಾಗಿ, ಉಪಖಂಡ (ಎ) ಯಿಂದ (ಎಫ್)ಗಳಲ್ಲಿ ಉಲ್ಲೇಖಿಸಿರುವ ಪ್ರತಿಯೊಂದು ಭೂಪ್ರದೇಶವನ್ನು ಪ್ರತ್ಯೇಕ ಒಕ್ಕೂಟ ರಾಜ್ಯಕ್ಷೇತ್ರ ಎಂದು ಪರಿಗಣಿಸತಕ್ಕದ್ದು;

(115) "ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆ" ಎಂದರೆ, ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ವಿಧಿಸಿದ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ;

(116) "ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ" ಎಂದರೆ, ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ 14);

(117) "ಸಿಂಧುವಾದ ರಿಟರ್ನ್" ಎಂದರೆ, ಪ್ರಕರಣ 39ರ ಉಪಪ್ರಕರಣ (1)ರ ಅಡಿಯಲ್ಲಿ ಸಲ್ಲಿಸಿದ ಯಾವ ರಿಟರ್ನಿನ ಆಧಾರದ ಮೇಲೆ ಸ್ವಯಂ-ನಿರ್ಧಾರಿತ ತೆರಿಗೆಯನ್ನು ಸಂಪೂರ್ಣವಾಗಿ ಸಂದಾಯ ಮಾಡಲಾಗಿದೆಯೋ ಆ ರಿಟರ್ನ್;

(118) "ವೋಚರ್" ಎಂದರೆ, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಾಗಿ ಯಾವ ಲಿಖಿತವನ್ನು ಪ್ರತಿಫಲದಂತೆ ಅಥವಾ ಭಾಗಶಃ ಪ್ರತಿಫಲದಂತೆ ಒಪ್ಪಿಕೊಳ್ಳಬೇಕಾದ ಬಾಧ್ಯತೆಯಿದೆಯೋ ಮತ್ತು ಅಂಥ ಲಿಖಿತದಲ್ಲೇ ಅಥವಾ ಸಂಬಂಧಪಟ್ಟ ದಾಖಲೆಗಳಲ್ಲಿ, ಆ ಯಾವ ಲಿಖಿತದ ಬಳಕೆಯ ನಿಬಂಧನೆಗಳು ಮತ್ತು ಷರತ್ತುಗಳನ್ನೂ ಒಳಗೊಂಡಂತೆ ಪೂರೈಕೆ ಮಾಡಬೇಕಾದ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಅಥವಾ ಅವುಗಳ ಸಂಭಾವ್ಯ ಪೂರೈಕೆದಾರರ ಗುರುತುಗಳನ್ನು ನಮೂದಿಸಲಾಗಿದೆಯೋ ಆ ಲಿಖಿತ;

(119) "ಕಾಮಗಾರಿ ಕರಾರು" ಎಂದರೆ, ಕಟ್ಟುವ, ನಿರ್ಮಿಸುವ, ಸೃಷ್ಟಿಸುವ, ಪೂರ್ಣಗೊಳಿಸುವ, ಸ್ಥಾಪಿಸುವ, ಪ್ರತಿಸ್ಥಾಪಿಸುವ, ಜೋಡಿಸುವ, ಉತ್ತಮಗೊಳಿಸುವ, ಮಾರ್ಪಡಿಸುವ, ದುರಸ್ತಿಯ, ನಿರ್ವಹಣೆಯ, ನವೀಕರಣದ, ಬದಲಾವಣೆ ಮಾಡುವ ಸಲುವಾಗಿ ಅಥವಾ ಕರಾರನ್ನು ಕಾರ್ಯಗತಗೊಳಿಸುವಾಗ ಅದರಲ್ಲಿ ಸರಕುಗಳ ಸ್ವತ್ತಿನ (ಸ್ವತ್ತಿನ ರೂಪದಲ್ಲಿಯಾಗಲೀ ಅಥವಾ ಯಾವುದೇ ಇತರ ರೂಪದಲ್ಲಿಯಾಗಲೀ), ವರ್ಗಾವಣೆಯನ್ನು ಒಳಗೊಂಡಿರುವ ಯಾವುದೇ ಸ್ಥಿರಸ್ವತ್ತನ್ನು ಬಳಕೆಗೆ ತರುವುದರ ಸಲುವಾಗಿ ಇರುವ ಕರಾರು;

(120) ಈ ಅಧಿನಿಯಮದಲ್ಲಿ ಬಳಸಿದ ಮತ್ತು ಪರಿಭಾಷಿಸಿಲ್ಲದ ಪದಗಳು ಅಥವಾ ಪದಾವಳಿಗಳು ಇವುಗಳನ್ನು, ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದಲ್ಲಿ, ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದಲ್ಲಿ, ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದಲ್ಲಿ ಮತ್ತು ಸರಕುಗಳ ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ನಷ್ಟಪರಿಹಾರ) ಅಧಿನಿಯಮಗಳಲ್ಲಿ ಪರಿಭಾಷಿಸಿದ್ದರೆ ಆ ಅಧಿನಿಯಮಗಳಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು.

## ಅಧ್ಯಾಯ II

### ಆಡಳಿತ

**3. ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಿಗಳು.–** ಈ ಅಧಿನಿಯಮದ ಉದ್ದೇಶಗಳಿಗಾಗಿ, ಸರ್ಕಾರವು, ಅಧಿಸೂಚನೆಯ ಮೂಲಕ, ಈ ಕೆಳಕಂಡ ಅಧಿಕಾರಿಗಳ ವರ್ಗಗಳನ್ನು ನೇಮಕ ಮಾಡತಕ್ಕದ್ದು, ಎಂದರೆ:–

(ಎ) ಕೇಂದ್ರ ತೆರಿಗೆ ಪ್ರಧಾನ ಮುಖ್ಯ ಆಯುಕ್ತರು ಅಥವಾ ಕೇಂದ್ರ ತೆರಿಗೆ ಪ್ರಧಾನ ಮಹಾ ನಿರ್ದೇಶಕರು;

(ಬಿ) ಕೇಂದ್ರ ತೆರಿಗೆ ಮುಖ್ಯ ಆಯುಕ್ತರು ಅಥವಾ ಕೇಂದ್ರ ತೆರಿಗೆ ಮಹಾ ನಿರ್ದೇಶಕರು;

(ಸಿ) ಕೇಂದ್ರ ತೆರಿಗೆ ಪ್ರಧಾನ ಆಯುಕ್ತರು ಅಥವಾ ಕೇಂದ್ರ ತೆರಿಗೆ ಪ್ರಧಾನ ಹೆಚ್ಚುವರಿ ಮಹಾ ನಿರ್ದೇಶಕರು;

(ಡಿ) ಕೇಂದ್ರ ತೆರಿಗೆ ಆಯುಕ್ತರು ಅಥವಾ ಕೇಂದ್ರ ತೆರಿಗೆ ಹೆಚ್ಚುವರಿ ಮಹಾ ನಿರ್ದೇಶಕರು;

(ಇ) ಕೇಂದ್ರ ತೆರಿಗೆ ಹೆಚ್ಚುವರಿ ಆಯುಕ್ತರು ಅಥವಾ ಕೇಂದ್ರ ತೆರಿಗೆ ಹೆಚ್ಚುವರಿ ನಿರ್ದೇಶಕರು;

(ಎಫ್) ಕೇಂದ್ರ ತೆರಿಗೆ ಜಂಟಿ ಆಯುಕ್ತರು ಅಥವಾ ಕೇಂದ್ರ ತೆರಿಗೆ ಜಂಟಿ ನಿರ್ದೇಶಕರು;

(ಜಿ) ಕೇಂದ್ರ ತೆರಿಗೆ ಉಪ–ಆಯುಕ್ತರು ಅಥವಾ ಕೇಂದ್ರ ತೆರಿಗೆ ಉಪನಿರ್ದೇಶಕರು;

(ಹೆಚ್) ಕೇಂದ್ರ ತೆರಿಗೆ ಸಹಾಯಕ ಆಯುಕ್ತರು ಅಥವಾ ಕೇಂದ್ರ ತೆರಿಗೆ ಸಹಾಯಕ ನಿರ್ದೇಶಕರು; ಮತ್ತು

(ಐ) ಸರ್ಕಾರವು ಯುಕ್ತ ಎಂದು ಭಾವಿಸಬಹುದಾದ ಯಾವುದೇ ಇತರ ಅಧಿಕಾರಿಗಳ ವರ್ಗ:

ಪರಂತು, ಕೇಂದ್ರ ಅಬಕಾರಿ ಅಧಿನಿಯಮ, 1944 (1944 ರ 1) ರ ಅಡಿಯಲ್ಲಿ ನೇಮಕವಾದ ಅಧಿಕಾರಿಗಳನ್ನು, ಈ ಅಧಿನಿಯಮದ ಅಡಿಯಲ್ಲಿ ನೇಮಕ ಮಾಡಲಾದ ಅಧಿಕಾರಿಗಳು ಎಂದು ಭಾವಿಸತಕ್ಕದ್ದು.

**4. ಅಧಿಕಾರಿಗಳ ನೇಮಕಾತಿ.–** (1) ಸರ್ಕಾರವು, ಪ್ರಕರಣ 3ರ ಅಡಿಯಲ್ಲಿ ಅಧಿಸೂಚಿಸಿದ ಅಧಿಕಾರಿಗಳ ಜೊತೆಗೆ, ಮಂಡಳಿಯು, ಸೂಕ್ತವೆಂದು ತಾನು ಪರಿಗಣಿಸಬಹುದಾದಂಥ ವ್ಯಕ್ತಿಗಳನ್ನು ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಿಗಳಾಗಿ ನೇಮಕ ಮಾಡಬಹುದು.

(2) ಉಪಪ್ರಕರಣ (1)ರ ಉಪಬಂಧಗಳಿಗೆ ಬಾಧಕವಾಗದಂತೆ, ಮಂಡಳಿಯು, ಆದೇಶದ ಮೂಲಕ, ಈ ಅಧಿನಿಯಮದಲ್ಲಿ ತಿಳಿಸಿರುವ ಕೆಲಸಗಳ ನಿರ್ವಹಣೆಗಾಗಿ ಕೇಂದ್ರ ತೆರಿಗೆ ಸಹಾಯಕ ಆಯುಕ್ತರ ದರ್ಜೆಗಿಂತ ಕಡಿಮೆ ದರ್ಜೆಯ ಕೇಂದ್ರ ತೆರಿಗೆ ಅಧಿಕಾರಿಗಳನ್ನು ನೇಮಕ ಮಾಡಲು ಪ್ರಕರಣ 3ರ (ಎ) ಯಿಂದ (ಹೆಚ್) ವರೆಗಿನ ಖಂಡಗಳಲ್ಲಿ ಉಲ್ಲೇಖಿಸಿದ ಯಾರೇ ಅಧಿಕಾರಿಯನ್ನು ಅಧಿಕೃತಗೊಳಿಸಿ ಆದೇಶ ಹೊರಡಿಸಬಹುದು.

**5. ಅಧಿಕಾರಿಗಳ ಅಧಿಕಾರಗಳು.–** (1) ಮಂಡಳಿಯು ವಿಧಿಸಬಹುದಾದಂಥ ಷರತ್ತುಗಳಿಗೆ ಮತ್ತು ಮಿತಿಗಳಿಗೆ ಒಳಪಟ್ಟು, ಕೇಂದ್ರ ತೆರಿಗೆ ಅಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿ ಆತನಿಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಆತನಿಗೆ ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸಬಹುದು.

(2) ಕೇಂದ್ರ ತೆರಿಗೆ ಅಧಿಕಾರಿಯು, ತನಗೆ ಅಧೀನನಾದ ಯಾರೇ ಇತರ ಕೇಂದ್ರ ತೆರಿಗೆ ಅಧಿಕಾರಿ ಮೇಲೆ ಈ ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸಬಹುದು.

(3) ಆಯುಕ್ತರು, ತಾನು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ಮಿತಿಗಳಿಗೆ ಒಳಪಟ್ಟು, ತಮಗೆ ಅಧೀನನಾದ ಯಾರೇ ಇತರ ಅಧಿಕಾರಿಗೆ ತಮ್ಮ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದು.

(4) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅಪೀಲು ಪ್ರಾಧಿಕಾರವು, ಯಾರೇ ಇತರೆ ಕೇಂದ್ರ ತೆರಿಗೆ ಅಧಿಕಾರಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದಲ್ಲ ಅಥವಾ ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದಲ್ಲ.

**6. ಕೆಲವು ಸನ್ನಿವೇಶಗಳಲ್ಲಿ ರಾಜ್ಯ ತೆರಿಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆ ಅಧಿಕಾರಿಗಳನ್ನು ಯುಕ್ತ ಅಧಿಕಾರಿಯಾಗಿ ಅಧಿಕೃತಗೊಳಿಸುವುದು.–** (1) ಈ ಅಧಿನಿಯಮದ ಉಪಬಂಧಗಳಿಗೆ ಬಾಧಕವಾಗದಂತೆ, ಸರ್ಕಾರವು ಅಧಿಸೂಚನೆಯ ಮೂಲಕ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು, ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ನೇಮಕವಾದ ಅಧಿಕಾರಿಗಳನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಯುಕ್ತ ಅಧಿಕಾರಿಗಳಾಗಿ ಅಧಿಕೃತಗೊಳಿಸತಕ್ಕದ್ದು.

(2) ಉಪಪ್ರಕರಣ (1)ರ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಷರತ್ತುಗಳಿಗೆ ಒಳಪಟ್ಟು,–

(ಎ) ಯಾರೇ ಯುಕ್ತ ಅಧಿಕಾರಿಯು, ಈ ಅಧಿನಿಯಮದ ಅಡಿಯಲ್ಲಿ ಆದೇಶವನ್ನು ಹೊರಡಿಸಿದ್ದರೆ, ಆತನು ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ರಾಜ್ಯ ತೆರಿಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ತೆರಿಗೆ ಅಧಿಕಾರವ್ಯಾಪ್ತಿ ಹೊಂದಿರುವ ಅಧಿಕಾರಿಗೆ ತಿಳಿಸಿ ಸಂದರ್ಭಾನುಸಾರ, ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಮೂಲಕ ಅಧಿಕೃತಗೊಳಿಸಿರುವಂತೆ ಸಹ ಆದೇಶವನ್ನು ಹೊರಡಿಸತಕ್ಕದ್ದು.

(ಬಿ) ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಯುಕ್ತ ಅಧಿಕಾರಿಯು, ಒಂದು ವಿಷಯದ ಮೇಲೆ ಯಾವುದೇ ವ್ಯವಹರಣೆಯನ್ನು ಪ್ರಾರಂಭಿಸಿದ್ದರೆ, ಈ ಅಧಿನಿಯಮದ ಅಡಿಯಲ್ಲಿನ ಯುಕ್ತ ಅಧಿಕಾರಿಯು ಅದೇ ವಿಷಯದ ಮೇಲೆ ಯಾವುದೇ ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದಲ್ಲ.

(3) ಈ ಅಧಿನಿಯಮದ ಅಡಿಯಲ್ಲಿ ನೇಮಕವಾದ ಅಧಿಕಾರಿಯು ಹೊರಡಿಸಿದ ಯಾವುದೇ ಆದೇಶವನ್ನು ಸರಿಪಡಿಸುವುದಕ್ಕಾಗಿ, ಅಪೀಲಿನ ಮತ್ತು ಪುನರ್‌ಪರಿಶೀಲನೆಯ ಯಾವುದೇ ವ್ಯವಹರಣೆಗಳನ್ನು, ಎಲ್ಲೆಲ್ಲಿ ಅನ್ವಯವಾಗುವುದೋ ಅಲ್ಲಿ, ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ನೇಮಕವಾದ ಅಧಿಕಾರಿಯ ಮುಂದೆ ಹೂಡತಕ್ಕದ್ದಲ್ಲ.

## ಅಧ್ಯಾಯ III
## ತೆರಿಗೆ ವಿಧಿಸುವಿಕೆ ಮತ್ತು ಸಂಗ್ರಹಣೆ

**7. ಪೂರೈಕೆಯ ವ್ಯಾಪ್ತಿ.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ "ಪೂರೈಕೆ" ಪದವು ಈ ಕೆಳಕಂಡವುಗಳನ್ನು ಒಳಗೊಂಡಿರುತ್ತದೆ, ಎಂದರೆ:–

(ಎ) ವ್ಯವಹಾರವು ನಡೆಯುತ್ತಿರುವಾಗ ಅಥವಾ ಅದರ ಮುಂದುವರಿಕೆಯಲ್ಲಿ, ಪ್ರತಿಫಲಕ್ಕಾಗಿ, ಯಾರೇ ವ್ಯಕ್ತಿಯು ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಮಾರಾಟ, ವರ್ಗಾವಣೆ, ವಸ್ತುವಿನಿಮಯ, ವಿನಿಮಯ, ಪರವಾನಗಿ, ಬಾಡಿಗೆ, ಭೋಗ್ಯ ಅಥವಾ ಮಾಡಿದ ಅಥವಾ ಮಾಡಲು ಒಪ್ಪಿರುವ ವಿಲೇವಾರಿಗಳಂಥ ಎಲ್ಲಾ ಪ್ರಕಾರಗಳ ಪೂರೈಕೆಗಳು;

(ಬಿ) ವ್ಯವಹಾರ ನಡೆಯುತ್ತಿರುವಾಗಲಿ ಅಥವಾ ಅದರ ಮುಂದುವರಿಕೆಯಾಗುತ್ತಿರುವಾಗಲಿ ಅಥವಾ ಅದಾಗದೆಯೇ, ಪ್ರತಿಫಲಕ್ಕಾಗಿ ಮಾಡಿಕೊಂಡ ಸೇವೆಗಳ ಆಮದು; ಮತ್ತು

(ಸಿ) ಪ್ರತಿಫಲಕ್ಕಾಗದೆ ಮಾಡಿದ ಅಥವಾ ಮಾಡಲು ಒಪ್ಪಿರುವ ಅನುಸೂಚಿ Iರಲ್ಲಿ ನಿರ್ದಿಷ್ಟಪಡಿಸಿದ ಚಟುವಟಿಕೆಗಳು.

(1ಎ) ಉಪಪ್ರಕರಣ (1)ರ ಉಪಬಂಧಗಳ ಅನುಸಾರವಾಗಿ ಪೂರೈಸಲು ಕೆಲವು ಚಟುವಟಿಕೆಗಳು ಅಥವಾ ವ್ಯವಹಾರಗಳು ಒಳಗೊಂಡಿರುವಲ್ಲಿ, ಅನುಸೂಚಿ IIರಲ್ಲಿ ಉಲ್ಲೇಖಿಸಲಾದಂತೆ ಇಲ್ಲವೇ ಸರಕುಗಳ ಪೂರೈಕೆ ಎಂದಾಗಲೀ ಅಥವಾ ಸೇವೆಗಳ ಪೂರೈಕೆ ಎಂದಾಗಲೀ ಅವುಗಳನ್ನು ಪರಿಗಣಿಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಅನುಸೂಚಿ III ರಲ್ಲಿ ನಿರ್ದಿಷ್ಟಪಡಿಸಿದ ಚಟುವಟಿಕೆಗಳನ್ನು ಅಥವಾ ವ್ಯವಹಾರಗಳನ್ನು; ಅಥವಾ

(ಬಿ) ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರವು ಕೈಗೊಂಡಿರುವ ಚಟುವಟಿಕೆಗಳು ಅಥವಾ ವ್ಯವಹಾರಗಳು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಯಾವ ಚಟುವಟಿಕೆಗಳಲ್ಲಿ ಅಥವಾ ವ್ಯವಹಾರಗಳಲ್ಲಿ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದ, ಸಾರ್ವಜನಿಕ ಪ್ರಾಧಿಕಾರಗಳಾಗಿ ತೊಡಗಿದೆಯೋ ಆ ಚಟುವಟಿಕೆಗಳನ್ನು ಅಥವಾ ಆ ವ್ಯವಹಾರಗಳನ್ನು

– ಸರಕುಗಳ ಪೂರೈಕೆಯೂ ಅಲ್ಲ ಅಥವಾ ಇಲ್ಲವೇ ಸೇವೆಗಳ ಪೂರೈಕೆಯೂ ಅಲ್ಲ ಎಂದು ಪರಿಗಣಿಸತಕ್ಕದ್ದು.

(3) ಉಪಪ್ರಕರಣ (1), (1ಎ) ಮತ್ತು (2)ರ ಉಪಬಂಧಗಳಿಗೆ ಒಳಪಟ್ಟು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸರ್ಕಾರವು ಅಧಿಸೂಚನೆಯ ಮೂಲಕ ವ್ಯವಹಾರಗಳನ್ನು,–

(ಎ) ಸರಕುಗಳ ಪೂರೈಕೆ ಎಂದೂ ಆದರೆ ಸೇವೆಗಳ ಪೂರೈಕೆಯಲ್ಲವೆಂದೂ; ಅಥವಾ

(ಬಿ) ಸೇವೆಗಳ ಪೂರೈಕೆ ಎಂದೂ ಆದರೆ ಸರಕುಗಳ ಪೂರೈಕೆಯಲ್ಲವೆಂದೂ

– ಪರಿಗಣಿಸಲು ನಿರ್ದಿಷ್ಟಪಡಿಸಬಹುದು.

**8. ಸಂಯೋಜಿತ ಮತ್ತು ಮಿಶ್ರ ಪೂರೈಕೆಗಳ ಮೇಲೆ ತೆರಿಗೆ ಬಾಧ್ಯತೆ.–** ಸಂಯೋಜಿತ ಪೂರೈಕೆಯ ಮೇಲೆ ಅಥವಾ ಮಿಶ್ರ ಪೂರೈಕೆಯ ಮೇಲಿನ ತೆರಿಗೆ ಬಾಧ್ಯತೆಯನ್ನು ಈ ಕೆಳಕಂಡ ವಿಧಾನದಲ್ಲಿ ನಿರ್ಧರಿಸತಕ್ಕದ್ದು, ಎಂದರೆ:–

(ಎ) ಎರಡು ಅಥವಾ ಅದಕ್ಕೂ ಹೆಚ್ಚಿನ ಪೂರೈಕೆಗಳನ್ನು ಒಳಗೊಂಡಿರುವ, ಸಂಯೋಜಿತ ಪೂರೈಕೆಯನ್ನು ಅವುಗಳಲ್ಲಿ ಒಂದು ಪ್ರಧಾನ ಪೂರೈಕೆಯಾಗಿದ್ದರೆ ಅಂಥ ಪ್ರಧಾನ ಪೂರೈಕೆಯ ಪೂರೈಕೆ ಎಂದು ಪರಿಗಣಿಸತಕ್ಕದ್ದು; ಮತ್ತು

(ಬಿ) ಎರಡು ಅಥವಾ ಹೆಚ್ಚಿನ ಪೂರೈಕೆಗಳನ್ನು ಒಳಗೊಂಡಿರುವ ಮಿಶ್ರ ಪೂರೈಕೆಯನ್ನು, ಆ ಪೂರೈಕೆಯಲ್ಲಿ ಅತಿ ಹೆಚ್ಚಿನ ತೆರಿಗೆ ದರ ಅನ್ವಯವಾಗುವ ನಿರ್ದಿಷ್ಟ ಪೂರೈಕೆಯ ಪೂರೈಕೆ ಎಂದು ಪರಿಗಣಿಸತಕ್ಕದ್ದು.

**9. ತೆರಿಗೆ ವಿಧಿಸುವಿಕೆ ಮತ್ತು ಸಂಗ್ರಹಣೆ.–** (1) ಉಪಪ್ರಕರಣ (2)ರ ಉಪಬಂಧಗಳಿಗೆ ಒಳಪಟ್ಟು, ಮಾನವ ಬಳಕೆಗಾಗಿ ಮಾಡಿದ ಮದ್ಯಪಾನೀಯಗಳ ಪೂರೈಕೆಯ ಹೊರತು, ರಾಜ್ಯದೊಳಗಡೆಗೆ ಮಾಡಿದ ಎಲ್ಲಾ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಳ ಮೇಲೆ ಹಾಗೂ ಪ್ರಕರಣ 15ರ ಅಡಿಯಲ್ಲಿ ನಿರ್ಧರಿಸಿದ ಮೌಲ್ಯದ ಮೇಲೆ ಹಾಗೂ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ, ಆದರೆ ಶೇಕಡ ಇಪ್ಪತ್ತರಷ್ಟನ್ನು ಮೀರದಂಥ

ದರಗಳಲ್ಲಿ, ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಎಂದು ಕರೆಯುವ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಅದನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಸಂಗ್ರಹಿಸತಕ್ಕದ್ದು ಹಾಗೂ ಅದನ್ನು ತೆರಿಗೆದಾಯಕ ವ್ಯಕ್ತಿಯು ಪಾವತಿ ಮಾಡತಕ್ಕದ್ದು.

(2) ಪೆಟ್ರೋಲಿಯಂ ಕಚ್ಚಾ ತೈಲ, ಹೈಸ್ಪೀಡ್ ಡೀಸೆಲ್ (ಸಾಮಾನ್ಯವಾಗಿ ಪೆಟ್ರೋಲ್ ಎಂದು ಕರೆಯಲಾಗುವ), ಮೋಟಾರ್ ಸ್ಪಿರಿಟ್, ನೈಸರ್ಗಿಕ ಅನಿಲ ಮತ್ತು ಏವಿಯೇಷನ್ ಟರ್ಬೈನ್ ಇಂಧನ ಇವುಗಳ ಪೂರೈಕೆಗಳ ಮೇಲೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸರ್ಕಾರವು ಅಧಿಸೂಚಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಕೇಂದ್ರ ತೆರಿಗೆಯನ್ನು ವಿಧಿಸತಕ್ಕದ್ದು.

(3) ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಅಧಿಸೂಚನೆಯ ಮೂಲಕ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಸ್ವೀಕರ್ತನು ಆ ಸರಕುಗಳ ಅಥವಾ ಸೇವೆಗಳ ಪೂರೈಕೆಯ ಯಾವ ವರ್ಗಗಳಿಗೆ ಸ್ವೀಕರ್ತನ ತೆರಿಗೆ ಬಾಧ್ಯತೆ ಮೇಲೆ ತೆರಿಗೆಯನ್ನು ಸಂದಾಯ ಮಾಡಬೇಕೋ ಆ ವರ್ಗಗಳನ್ನು ನಿರ್ದಿಷ್ಟಪಡಿಸಬಹುದು, ತೆರಿಗೆ ಮತ್ತು ಆ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ತೆರಿಗೆಯನ್ನು ಪಾವತಿಸಲು ಆ ಸ್ವೀಕರ್ತನು ಬಾಧ್ಯತೆಯುಳ್ಳ ವ್ಯಕ್ತಿಯಾಗಿದ್ದಿದ್ದರೆ ಹೇಗೆ ಈ ಅಧಿನಿಯಮದ ಎಲ್ಲಾ ಉಪಬಂಧಗಳು ಅಂಥ ಸರಕು ಅಥವಾ ಸೇವೆಗಳಿಗೆ ಅಥವಾ ಅವುಗಳೆರಡಕ್ಕೆ ಅನ್ವಯವಾಗುತ್ತಿದ್ದವೋ ಹಾಗೆಯೇ ಆತನಿಗೂ ಅನ್ವಯವಾಗತಕ್ಕದ್ದು.

(4) ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ ಅಧಿಸೂಚನೆಯ ಮೂಲಕ ನೋಂದಾಯಿತ ವ್ಯಕ್ತಿಗಳ ವರ್ಗವನ್ನು ನಿರ್ದಿಷ್ಟಪಡಿಸತಕ್ಕದ್ದು, ನೋಂದಾಯಿತನಲ್ಲದ ಪೂರೈಕೆದಾರನಿಂದ ಸ್ವೀಕರಿಸಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ನಿರ್ದಿಷ್ಟಪಡಿಸಿದ ಪ್ರವರ್ಗಗಳ ಪೂರೈಕೆಯ ಸಂಬಂಧದಲ್ಲಿ, ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಅಂಥ ಪೂರೈಕೆಯ ಸ್ವೀಕರ್ತನಾಗಿ ರಿವರ್ಸ್ ಚಾರ್ಜ್ ಆಧಾರದ ಮೇಲೆ ತೆರಿಗೆಯನ್ನು ಪಾವತಿಸತಕ್ಕದಾದ ನೋಂದಾಯಿತ ವ್ಯಕ್ತಿಗಳ ಒಂದು ವರ್ಗವನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಈ ಅಧಿನಿಯಮದ ಎಲ್ಲಾ ಉಪಬಂಧಗಳು, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಅಂಥ ಪೂರೈಕೆಗೆ ಸಂಬಂಧಿಸಿದಂತೆ ತೆರಿಗೆಯನ್ನು ಪಾವತಿಸಲು ವ್ಯಕ್ತಿಯು ಹೊಣೆಗಾರನಾಗಿದ್ದರೆ ಹೇಗೋ ಹಾಗೆ ಅಂಥ ಸ್ವೀಕರ್ತನಿಗೆ ಅನ್ವಯವಾಗತಕ್ಕದ್ದು.

(5) ಸರ್ಕಾರವು, ಸೇವೆಗಳ ಯಾವ ವರ್ಗಗಳಿಗೆ, ಒಂದು ವೇಳೆ ಅಂಥ ಸೇವೆಗಳನ್ನು ರಾಜ್ಯದ ಒಳಗಡೆಗೆ ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕನ ಮೂಲಕ ಪೂರೈಕೆ ಮಾಡಿದ್ದರೆ, ಅಂಥ ವಾಣಿಜ್ಯ ಪ್ರವರ್ತಕನು ತೆರಿಗೆಯನ್ನು ಸಂದಾಯ ಮಾಡಬೇಕೋ ಆ ಸೇವೆಗಳ ವರ್ಗಗಳನ್ನು ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದು ಮತ್ತು ಈ ಅಧಿನಿಯಮದ ಎಲ್ಲಾ ಉಪಬಂಧಗಳು ಅಂಥ ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕನಿಗೆ ಅಂಥ ಸೇವೆಗಳ ಪೂರೈಕೆಗೆ ಸಂಬಂಧಿಸಿದಂತೆ ತೆರಿಗೆಯನ್ನು ಪಾವತಿಸಲು ಬದ್ಧನಾಗುವಂಥ ಪೂರೈಕೆದಾರನಾಗಿದ್ದಿದ್ದರೆ ಹೇಗೆ ಅನ್ವಯವಾಗುತ್ತಿದ್ದವೋ ಹಾಗೆಯೇ ಅನ್ವಯವಾಗತಕ್ಕದ್ದು:

ಪರಂತು, ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕನು ತೆರಿಗೆದಾಯಕ ಕ್ಷೇತ್ರದಲ್ಲಿ ಸ್ವತಃ ಉಪಸ್ಥಿತನಿಲ್ಲದಿದ್ದರೆ, ಯಾವುದೇ ಉದ್ದೇಶಕ್ಕಾಗಿ ತೆರಿಗೆದಾಯಕ ಕ್ಷೇತ್ರದಲ್ಲಿ ಸದರಿ ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕನನ್ನು ಪ್ರತಿನಿಧಿಸುವ ಯಾರೇ ವ್ಯಕ್ತಿಯು, ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬದ್ಧನಾಗಿರತಕ್ಕದ್ದು:

ಮತ್ತು ಪರಂತು, ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕನು ತೆರಿಗೆದಾಯಕ ಕ್ಷೇತ್ರದಲ್ಲಿ ಸ್ವತಃ ಉಪಸ್ಥಿತನಿಲ್ಲದಿದ್ದರೆ ಹಾಗೂ ಸದರಿ ಕ್ಷೇತ್ರದಲ್ಲಿ ತನ್ನ ಪ್ರತಿನಿಧಿಯನ್ನು ಸಹ ಅವನು ಹೊಂದಿರದಿದ್ದರೆ, ಅಂಥ ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕನು ತೆರಿಗೆಯನ್ನು ಸಂದಾಯ ಮಾಡುವ ಉದ್ದೇಶಕ್ಕಾಗಿ ತೆರಿಗೆದಾಯಕ ಕ್ಷೇತ್ರದಲ್ಲಿ ವ್ಯಕ್ತಿಯನ್ನು ನೇಮಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬದ್ಧನಾಗಿರತಕ್ಕದ್ದು.

**10. ಪರ್ಯಾಯ ತೆರಿಗೆ.–** (1) ಈ ಅಧಿನಿಯಮದಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ, ಆದರೆ ಪ್ರಕರಣ 9ರ ಉಪಪ್ರಕರಣ (3) ಮತ್ತು (4)ರ ಉಪಬಂಧಗಳಿಗೆ ಒಳಪಟ್ಟು, ಯಾವ ನೋಂದಾಯಿತ ವ್ಯಕ್ತಿಯ ಒಟ್ಟು ವಹಿವಾಟು ಹಿಂದಿನ ಹಣಕಾಸು ವರ್ಷದಲ್ಲಿ ಐವತ್ತು ಲಕ್ಷ ರೂಪಾಯಿಗಳನ್ನು ಮೀರಿಲ್ಲವೋ ಆ ನೋಂದಾಯಿತ ವ್ಯಕ್ತಿಯು, ಪ್ರಕರಣ 9ರ ಉಪಪ್ರಕರಣ (1)ರ ಅಡಿಯಲ್ಲಿ ಅವನು ಸಂದಾಯ ಮಾಡಬೇಕಾದ ತೆರಿಗೆಯ ಬದಲಾಗಿ, ಅಂಥ ದರದಲ್ಲಿ ಲೆಕ್ಕ ಹಾಕಿದ ತೆರಿಗೆಯ ಮೊತ್ತವನ್ನು ಆದರೆ,–

(ಎ) ತಯಾರಕನು ರಾಜ್ಯದಲ್ಲಾದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಾದ ವಹಿವಾಟಿನ ಶೇಕಡಾ ಒಂದರಷ್ಟನ್ನು ಮೀರದ ಮೊತ್ತವನ್ನು;

(ಬಿ) ಅನುಸೂಚಿ II ರ ಕಂಡಿಕೆ 6ರ ಖಂಡ (ಬಿ)ಯಲ್ಲಿ ಹೇಳಿರುವ ಪೂರೈಕೆಗಳನ್ನು ಮಾಡುವುದರಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿನ ವಹಿವಾಟಿನ ಶೇಕಡಾ ಎರಡುವರೆಯಷ್ಟನ್ನು ಮೀರದ ಮೊತ್ತವನ್ನು; ಮತ್ತು

(ಸಿ) ಯಾವುದೇ ಇತರ ಪೂರೈಕೆದಾರ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿನ ವಹಿವಾಟಿನ ಶೇಕಡಾ ಅರ್ಧದಷ್ಟನ್ನು ಮೀರದ ಮೊತ್ತವನ್ನು

– ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಸಂದಾಯ ಮಾಡಲು ಆಯ್ಕೆ ಮಾಡಿಕೊಳ್ಳಬಹುದು:

ಪರಂತು, ಸದರಿ ಮಿತಿಯನ್ನು, ಸರ್ಕಾರವು ಅಧಿಸೂಚನೆಯ ಮೂಲಕ ಐವತ್ತು ಲಕ್ಷ ರೂಪಾಯಿಗಳಿಂದ ಒಂದು ಕೋಟಿ ಮತ್ತು ಐವತ್ತು ಲಕ್ಷ ರೂಪಾಯಿಗಳನ್ನು ಮೀರದಂತೆ, ಪರಿಷತ್ತು ಶಿಫಾರಸ್ಸು ಮಾಡಬಹುದಾದಂಥ ಹೆಚ್ಚಿನ ಮೊತ್ತಕ್ಕೆ ಹೆಚ್ಚಳ ಮಾಡಬಹುದು:

ಮತ್ತು ಪರಂತು, ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಯ ಮೇರೆಗೆ ತೆರಿಗೆ ಸಂದಾಯ ಮಾಡಲು (ಅನುಸೂಚಿ II ರ ಕಂಡಿಕೆ (6) ರ ಖಂಡ (ಬಿ) ಯಲ್ಲಿ ಉಲ್ಲೇಖಿಸಿದವುಗಳನ್ನು ಹೊರತುಪಡಿಸಿ) ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಹಿಂದಿನ ಹಣಕಾಸು ವರ್ಷದಲ್ಲಾದ ವಹಿವಾಟಿನ ಶೇಕಡಾ ಹತ್ತರಷ್ಟು ಮೌಲ್ಯವನ್ನು ಅಥವಾ ಐದು ಲಕ್ಷ ರೂಪಾಯಿಗಳು, ಇವುಗಳಲ್ಲಿ ಯಾವುದು ಅಧಿಕವೋ ಆ ಮೊತ್ತವನ್ನು ಮೀರದ ಸೇವೆಗಳನ್ನು ಪೂರೈಕೆ ಮಾಡಬಹುದು.

**ವಿವರಣೆ.–** ಎರಡನೇ ಪರಂತುಕದ ಉದ್ದೇಶಗಳಿಗಾಗಿ, ಬಡ್ಡಿ ಅಥವಾ ರಿಯಾಯಿತಿಯ ರೂಪದಲ್ಲಿ ಪ್ರತಿಫಲವನ್ನು ಪ್ರತಿನಿಧಿಸುವಷ್ಟರಮಟ್ಟಿಗೆ ಠೇವಣಿಗಳು, ಸಾಲಗಳು ಅಥವಾ ಮುಂಗಡಗಳನ್ನು ವಿಸ್ತರಿಸುವ ರೂಪದಲ್ಲಿ ಒದಗಿಸಿದ ಸೇವೆಗಳ

ವಿನಾಯಿತಿ ಪೂರೈಕೆಯ ಮೌಲ್ಯವನ್ನು ರಾಜ್ಯದಲ್ಲಾದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಾದ ವಹಿವಾಟಿನ ಮೌಲ್ಯವನ್ನು ನಿರ್ಧರಿಸುವುದಕ್ಕೆ ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

(2) ನೋಂದಾಯಿತ ವ್ಯಕ್ತಿಯು, ಉಪಪ್ರಕರಣ (1)ರ ಅಡಿಯಲ್ಲಿ ಆಯ್ಕೆ ಮಾಡಿಕೊಳ್ಳಲು ಅರ್ಹನಾಗಿರತಕ್ಕದ್ದು, ಆದರೆ,–

(ಎ) ಉಪಪ್ರಕರಣ (1)ರಲ್ಲಿ ಉಪಬಂಧಿಸಿದುದನ್ನುಳಿದು, ಅವನು ಈ ಸೇವೆಗಳ ಪೂರೈಕೆಯಲ್ಲಿ ತೊಡಗಿಸಿಕೊಳ್ಳಬಾರದು;

(ಬಿ) ಅವನು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ವಿಧಿಸಲಾಗದಿರುವಂಥ ಯಾವುದೇ ಸರಕುಗಳನ್ನು ಅಥವಾ ಸೇವೆಗಳನ್ನು ಪೂರೈಕೆ ಮಾಡುವುದರಲ್ಲಿ ತೊಡಗಿರಬಾರದು;

(ಸಿ) ಅವನು ರಾಜ್ಯದಿಂದ ಹೊರಗಡೆ ಸರಕುಗಳ ಅಥವಾ ಸೇವೆಗಳ ಯಾವುದೇ ಪೂರೈಕೆಗಳನ್ನು ಮಾಡುವುದರಲ್ಲಿ ತೊಡಗಿರಬಾರದು;

(ಡಿ) ಅವನು ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು ಅಗತ್ಯವಿರುವಂಥ ವಿದ್ಯುನ್ಮಾನ ವಾಣಿಜ್ಯದ ಪ್ರವರ್ತಕನ ಮೂಲಕ ಸರಕುಗಳ ಅಥವಾ ಸೇವೆಗಳ ಯಾವುದೇ ಪೂರೈಕೆ ಮಾಡುವುದರಲ್ಲಿ ತೊಡಗಿರಬಾರದು;

(ಇ) ಅವನು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದಂಥ ಸರಕುಗಳ ಉತ್ಪಾದಕನಾಗಿರಬಾರದು; ಮತ್ತು

(ಎಫ್) ಅವನು, ಸಾಂದರ್ಭಿಕ ತೆರಿಗೆ ವಿಧಿಸಬಹುದಾದ ವ್ಯಕ್ತಿ ಆಗಿರದಿದ್ದರೆ ಅಥವಾ ಅನಿವಾಸಿ ತೆರಿಗೆ ವಿಧಿಸಬಹುದಾದ ವ್ಯಕ್ತಿಯೂ ಆಗಿರದಿದ್ದರೆ:

ಪರಂತು, ಒಂದಕ್ಕಿಂತ ಹೆಚ್ಚಿನ ನೋಂದಾಯಿತ ವ್ಯಕ್ತಿಗಳು (ಆದಾಯ ತೆರಿಗೆ ಅಧಿನಿಯಮ, 1961 (1961ರ 43) ರ ಅಡಿಯಲ್ಲಿ ನೀಡಿದ) ಅದೇ ಪರ್ಮನೆಂಟ್ ಅಕೌಂಟ್ ನಂಬರನ್ನು ಹೊಂದಿದ್ದಲ್ಲಿ, ಅಂಥ ಎಲ್ಲಾ ನೋಂದಾಯಿತ ವ್ಯಕ್ತಿಗಳು ಆ ಉಪಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡ ಹೊರತು, ಆ ಉಪಪ್ರಕರಣ (1)ರ ಅಡಿಯಲ್ಲಿ ಹೇಳಿರುವ ಸೂಚಿಯನ್ನು ಆಯ್ಕೆ ಮಾಡಿಕೊಳ್ಳಲು ಆ ನೋಂದಾಯಿತ ವ್ಯಕ್ತಿಯು ಅರ್ಹನಿರತಕ್ಕದ್ದಲ್ಲ.

(2ಎ) ಈ ಅಧಿನಿಯಮದಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ, ಆದರೆ ಪ್ರಕರಣ 9ರ ಉಪಪ್ರಕರಣ (3) ಮತ್ತು (4)ರ ಉಪಬಂಧಗಳಿಗೆ ಒಳಪಟ್ಟು, ಯಾವ ನೋಂದಾಯಿತ ವ್ಯಕ್ತಿಯ, ಒಟ್ಟು ವಹಿವಾಟು ಹಿಂದಿನ ಹಣಕಾಸು ವರ್ಷದಲ್ಲಿ ಐವತ್ತು ಲಕ್ಷ ರೂಪಾಯಿಗಳನ್ನು ಮೀರಿಲ್ಲದಿರುವ ಉಪಪ್ರಕರಣ (1) ಮತ್ತು ಉಪಪ್ರಕರಣ (2)ರ ಮೇರೆಗೆ ಪಾವತಿ ತೆರಿಗೆಯನ್ನು ಆಯ್ಕೆ ಮಾಡಲು ಅರ್ಹನಾಗಿಲ್ಲದಿರುವ ಆ ನೋಂದಾಯಿತ ವ್ಯಕ್ತಿಯು,–

(ಎ) ಈ ಅಧಿನಿಯಮದ ಮೇರೆಗೆ ತೆರಿಗೆ ವಿಧಿಸಲಾಗದಿರುವ ಯಾವುದೇ ಸರಕುಗಳು ಅಥವಾ ಸೇವೆಗಳ ಪೂರೈಕೆ ಮಾಡುವಲ್ಲಿ ಅವನು ತೊಡಗಿರದಿದ್ದರೆ;

(ಬಿ) ಸರಕುಗಳನ್ನು ಅಥವಾ ಸೇವೆಗಳನ್ನು ಯಾವುದೇ ಅಂತರ–ರಾಜ್ಯ ಹೊರ ಪೂರೈಕೆಗಳನ್ನು ಮಾಡುವಲ್ಲಿ ತೊಡಗಿರದಿದ್ದರೆ;

(ಸಿ) ಪ್ರಕರಣ 52ರ ಮೇರೆಗೆ ಯಾವ ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕನು ಮೂಲ ತೆರಿಗೆಯನ್ನು ಸಂಗ್ರಹಿಸಲು ಅಗತ್ಯಪಡಿಸಲಾಗಿದೆಯೋ ಆ ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕನ ಮುಖಾಂತರ ಯಾವುದೇ ಸರಕು ಅಥವಾ ಸೇವೆಗಳ ಪೂರೈಕೆಯನ್ನು ಮಾಡುವಲ್ಲಿ ತೊಡಗಿರದಿದ್ದರೆ;

(ಡಿ) ಪರಿಷತ್ತಿನ ಶಿಫಾರಸ್ಸುಗಳ ಮೇಲೆ ಸರ್ಕಾರವು, ಅಧಿಸೂಚಿಸಬಹುದಾದಂಥ ಸರಕುಗಳ ತಯಾರಕನಾಗಿರದಿದ್ದರೆ ಅಥವಾ ಅಂಥ ಸೇವೆಗಳ ಪೂರೈಕೆದಾರನಾಗಿರದಿದ್ದರೆ; ಮತ್ತು

(ಇ) ಸಾಂದರ್ಭಿಕ ತೆರಿಗೆ ವಿಧಿಸಬಹುದಾದ ವ್ಯಕ್ತಿಯಾಗಿರದಿದ್ದರೆ ಅಥವಾ ತೆರಿಗೆ ವಿಧಿಸಬಹುದಾದ ಅನಿವಾಸಿ ವ್ಯಕ್ತಿಯಾಗಿರದಿದ್ದರೆ

– ಪ್ರಕರಣ 9ರ ಉಪಪ್ರಕರಣ (1)ರ ಮೇರೆಗೆ ಅವನು ಸಂದಾಯ ಮಾಡಬೇಕಾದ ತೆರಿಗೆಯ ಬದಲು, ನಿಯಮಿಸಬಹುದಾದಂಥ ದರದಲ್ಲಿ ಲೆಕ್ಕಹಾಕಿದ ರಾಜ್ಯದಲ್ಲಿನ ವಹಿವಾಟಿನ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ವಹಿವಾಟಿನ ಶೇಕಡಾ ಮೂರರಷ್ಟನ್ನು ತೆರಿಗೆಯ ಮೊಬಲಗನ್ನು ಪಾವತಿಸುವುದನ್ನು ಆಯ್ಕೆ ಮಾಡಿಕೊಳ್ಳಬಹುದು:

ಪರಂತು, ಒಬ್ಬರಿಗಿಂತ ಹೆಚ್ಚಿನ ನೋಂದಾಯಿತ ವ್ಯಕ್ತಿಗಳು ಆದಾಯ ತೆರಿಗೆ ಅಧಿನಿಯಮ, 1961 (1961 ರ 43)ರ ಮೇರೆಗೆ ನೀಡಿದ ಅದೇ ಖಾಯಂ ಖಾತೆ ಸಂಖ್ಯೆಯನ್ನು ಹೊಂದಿರುವಲ್ಲಿ ಆ ನೋಂದಾಯಿತ ವ್ಯಕ್ತಿಯು, ಅಂಥ ಎಲ್ಲ ನೋಂದಾಯಿತ ವ್ಯಕ್ತಿಗಳ ಈ ಉಪಪ್ರಕರಣದ ಮೇರೆಗೆ ತೆರಿಗೆ ಸಂದಾಯ ಮಾಡಲು ಆಯ್ಕೆ ಮಾಡಿಕೊಂಡ ಹೊರತು ಈ ಉಪಪ್ರಕರಣದ ಮೇರೆಗೆ ಕಾರ್ಯಯೋಜನೆಯನ್ನು ಆಯ್ಕೆ ಮಾಡಿಕೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

(3) ನೋಂದಾಯಿತ ವ್ಯಕ್ತಿಯಿಂದ ಉಪಪ್ರಕರಣ (1)ರ ಅಥವಾ ಉಪಪ್ರಕರಣ (2ಎ)ಯ ಅಡಿಯಲ್ಲಿ ಮಾಡಿಕೊಂಡ ಆಯ್ಕೆಯು, ಹಣಕಾಸಿನ ವರ್ಷದ ಅವಧಿಯಲ್ಲಿ ಆತನು ನಡೆಸಿದ ಸಮಗ್ರ ವಹಿವಾಟು ಉಪಪ್ರಕರಣ (1)ರ ಅಥವಾ ಉಪಪ್ರಕರಣ (2ಎ)ಯ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮಿತಿಯನ್ನು ಮೀರಿದ ದಿನದಿಂದ ಜಾರಿಗೆ ಬರುವಂತೆ ರದ್ದುಗೊಳ್ಳತಕ್ಕದ್ದು.

(4) ಉಪಪ್ರಕರಣ (1)ರ ಅಥವಾ ಸಂದರ್ಭಾನುಸಾರ ಉಪಪ್ರಕರಣ (2ಎ)ನ ಉಪಬಂಧಗಳು ಅನ್ವಯವಾಗುವ ತೆರಿಗೆದಾಯಕ ವ್ಯಕ್ತಿಯು, ಆತನು ಮಾಡಿದ ಪೂರೈಕೆಗಳ ಮೇಲೆ ಅವುಗಳ ಸ್ವೀಕರ್ತನಿಂದ ಯಾವುದೇ ತೆರಿಗೆಯನ್ನು ಸಂಗ್ರಹಿಸತಕ್ಕದ್ದಲ್ಲ. ಹಾಗೆಯೇ ಆತನು, ಇನ್‌ಪುಟ್ ಟ್ಯಾಕ್ಸ್ ಮೇಲಣ ಯಾವುದೇ ರಿಯಾಯಿತಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

(5) ತೆರಿಗೆದಾಯಕ ವ್ಯಕ್ತಿಯು, ಉಪಪ್ರಕರಣ (1)ರ ಅಥವಾ ಸಂದರ್ಭಾನುಸಾರ ಉಪಪ್ರಕರಣ (2ಎ) ಯ ಅಡಿಯಲ್ಲಿ ತಾನು ತೆರಿಗೆ ಪಾವತಿಸಲು ಅರ್ಹನಲ್ಲದಿದ್ದರೂ ಸಹ ಅದರಡಿ ತೆರಿಗೆ ಸಂದಾಯ ಮಾಡಿದ್ದಾನೆ ಎಂದು ನಂಬಲು ಯುಕ್ತ ಅಧಿಕಾರಿಗೆ ಕಾರಣಗಳಿದ್ದರೆ, ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳ ಅಡಿಯಲ್ಲಿ ಆತನು ಸಂದಾಯ ಮಾಡಬೇಕಾಗಬಹುದಾದ ಯಾವುದೇ ತೆರಿಗೆಯ ಜೊತೆಗೆ ಅಂಥ ವ್ಯಕ್ತಿಯು ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ತೆರಿಗೆಗೆ

ಮತ್ತು ದಂಡದ ನಿರ್ಧರಣೆಗೆ ಪ್ರಕರಣ 73ರ ಅಥವಾ 74ರ ಉಪಬಂಧಗಳು, ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು.

**ವಿವರಣೆ 1.–** ಈ ಪ್ರಕರಣದ ಮೇರೆಗೆ ತೆರಿಗೆ ಪಾವತಿಸಲು ಒಬ್ಬ ವ್ಯಕ್ತಿಯ ಅರ್ಹತೆಯನ್ನು ನಿರ್ಧರಿಸುವುದಕ್ಕೆ ಆತನ ಒಟ್ಟು ವಹಿವಾಟನ್ನು ಲೆಕ್ಕಹಾಕುವ ಉದ್ದೇಶಗಳಿಗಾಗಿ, "ಒಟ್ಟು ವಹಿವಾಟು" ಎಂಬ ಪದಾವಳಿಯು ಈ ಅಧಿನಿಯಮದ ಮೇರೆಗೆ ಆರ್ಥಿಕ ವರ್ಷದ ಏಪ್ರಿಲ್ ಒಂದನೇ ದಿನದಿಂದ ನೋಂದಣಿ ಮಾಡಿಕೊಳ್ಳಲು ಅವನು ಹೊಣೆಗಾರನಾಗುವ ದಿನಾಂಕದವರೆಗೆ ಅಂಥ ವ್ಯಕ್ತಿಯು ಮಾಡಿದ ಪೂರೈಕೆಗಳ ಮೌಲ್ಯವನ್ನು ಒಳಗೊಂಡಿರತಕ್ಕದ್ದು, ಆದರೆ ಬಡ್ಡಿ ಅಥವಾ ರಿಯಾಯಿತಿ ರೂಪದಲ್ಲಿ ಪ್ರತಿಫಲವನ್ನು ಪ್ರತಿನಿಧಿಸುವಷ್ಟರಮಟ್ಟಿಗೆ, ಠೇವಣಿಗಳು, ಸಾಲಗಳು ಅಥವಾ ಮುಂಗಡಗಳನ್ನು ವಿಸ್ತರಿಸುವ ರೂಪದಲ್ಲಿ ಒದಗಿಸಿದ ಸೇವೆಗಳ ವಿನಾಯಿತಿ ಪೂರೈಕೆಯ ಮೌಲ್ಯವು ಒಳಗೊಂಡಿರತಕ್ಕದ್ದಲ್ಲ.

**ವಿವರಣೆ 2.–** ಈ ಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು ನಿರ್ಧರಿಸುವ ಉದ್ದೇಶಗಳಿಗಾಗಿ, "ರಾಜ್ಯದಲ್ಲಾದ ವಹಿವಾಟು ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಾದ ವಹಿವಾಟು" ಎಂಬ ಪದಾವಳಿಯು ಈ ಮುಂದಿನ ಪೂರೈಕೆಗಳ ಮೌಲ್ಯವನ್ನು ಒಳಗೊಂಡಿರತಕ್ಕದ್ದಲ್ಲ, ಎಂದರೆ:–

(i) ಈ ಅಧಿನಿಯಮದ ಮೇರೆಗೆ ಅಂಥ ವ್ಯಕ್ತಿಯು ನೋಂದಣಿಗೆ ಹೊಣೆಗಾರನಾಗಿರುವಾಗಿನ ದಿನಾಂಕದವರೆಗೆ ಆರ್ಥಿಕ ವರ್ಷದ ಏಪ್ರಿಲ್ ಮೊದಲನೇ ದಿನದಿಂದ ಮಾಡಿದ ಪೂರೈಕೆಗಳು; ಮತ್ತು

(ii) ಬಡ್ಡಿ ಅಥವಾ ರಿಯಾಯಿತಿಯ ರೂಪದಲ್ಲಿ ಪ್ರತಿಫಲವನ್ನು ಪ್ರತಿನಿಧಿಸುವಷ್ಟರಮಟ್ಟಿಗೆ ಠೇವಣಿಗಳು, ಸಾಲಗಳು ಅಥವಾ ಮುಂಗಡಗಳನ್ನು ವಿಸ್ತರಿಸುವ ರೂಪದಲ್ಲಿ ಒದಗಿಸಿದ ಸೇವಾ ವಿನಾಯಿತಿ ಪೂರೈಕೆ.

**11. ತೆರಿಗೆಗೆ ವಿನಾಯಿತಿ ನೀಡಲು ಅಧಿಕಾರ.–** (1) ಸರ್ಕಾರವು, ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಅಧಿಸೂಚನೆಯ ಮೂಲಕ, ಯಾವುದೇ ನಿರ್ದಿಷ್ಟಪಡಿಸಿದ ವಿವರಣೆಯ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು, ಅವುಗಳ ಮೇಲೆ ವಿಧಿಸಬಹುದಾದ ತೆರಿಗೆಗೆ ಪೂರ್ಣವಾಗಿ ಅಥವಾ ಭಾಗಶಃ, ಸಾಮಾನ್ಯವಾಗಿ ನಿರುಪಾಧಿಕವಾಗಿ ಅಥವಾ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅನ್ವಯವಾಗುವಂತೆ ವಿನಾಯಿತಿ ನೀಡುವುದು ಅಗತ್ಯವೆಂದು ಮನಗಂಡರೆ ಹಾಗೆ ವಿನಾಯಿತಿ ನೀಡಬಹುದು.

(2) ಸರ್ಕಾರವು, ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಪ್ರತ್ಯೇಕ ಸಂದರ್ಭಗಳಲ್ಲಿ ವಿಶೇಷ ಆದೇಶದ ಮೂಲಕ, ಅಂಥ ಆದೇಶದಲ್ಲಿ ನಿರೂಪಿಸಲಾಗುವ ಅಸಾಧಾರಣ ಸನ್ನಿವೇಶಗಳಲ್ಲಿ, ತೆರಿಗೆಯನ್ನು ವಿಧಿಸಬಹುದಾದ ಯಾವುದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೇಲೆ ಸಂದಾಯ ಮಾಡಬೇಕಾದ ತೆರಿಗೆಗೆ ವಿನಾಯಿತಿ ನೀಡುವುದು ಅಗತ್ಯವೆಂದು ಮನಗಂಡರೆ, ಹಾಗೆ ವಿನಾಯಿತಿ ನೀಡಬಹುದು.

(3) ಸರ್ಕಾರವು, ಉಪಪ್ರಕರಣ (1)ರ ಅಡಿಯಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯ ಅಥವಾ ಉಪಪ್ರಕರಣ (2)ರ ಅಡಿಯಲ್ಲಿ ಹೊರಡಿಸಿದ ಆದೇಶದ, ವ್ಯಾಪ್ತಿಯ ಬಗ್ಗೆ ಅಥವಾ ಅದು ಅನ್ವಯವಾಗುವ ಬಗ್ಗೆ ಸ್ಪಷ್ಟೀಕರಣ ಉದ್ದೇಶಕ್ಕಾಗಿ ಉಪಪ್ರಕರಣ (1)ರ ಅಡಿಯಲ್ಲಿನ ಅಧಿಸೂಚನೆಯನ್ನು ಅಥವಾ ಉಪಪ್ರಕರಣ (2)ರ ಅಡಿಯಲ್ಲಿನ ಆದೇಶವನ್ನು ಹೊರಡಿಸಿದ

ಒಂದು ವರ್ಷದ ಒಳಗಿನ ಯಾವುದೇ ಸಮಯದಲ್ಲಿ, ಅಂಥ ಅಧಿಸೂಚನೆಯಲ್ಲಿ ಅಥವಾ ಸಂದರ್ಭಾನುಸಾರ ಅಂಥ ಆದೇಶದಲ್ಲಿ ವಿವರಣೆಯನ್ನು, ಅಧಿಸೂಚನೆಯ ಮೂಲಕ ಸೇರಿಸುವುದು ಅವಶ್ಯಕ ಅಥವಾ ವಿಹಿತ ಎಂದು ಪರಿಗಣಿಸಿದರೆ, ಅಂಥ ವಿವರಣೆಯನ್ನು ಅಂಥ ಅಧಿಸೂಚನೆಗೆ ಅಥವಾ ಆದೇಶಕ್ಕೆ ಸೇರಿಸಬಹುದು ಮತ್ತು ಅಂಥ ಪ್ರತಿಯೊಂದು ವಿವರಣೆಯು, ಅಂಥ ಮೊದಲಿನ ಅಧಿಸೂಚನೆಯ ಅಥವಾ ಸಂದರ್ಭಾನುಸಾರ ಹೊರಡಿಸಿದ ಆದೇಶದ ಭಾಗವಾಗಿ ಯಾವಾಗಲೂ ಇದ್ದಿದ್ದರೆ ಯಾವ ಪರಿಣಾಮ ಉಳ್ಳದ್ದಾಗಿರುತ್ತಿತ್ತೋ ಅದೇ ಪರಿಣಾಮವನ್ನು ಹೊಂದಿರತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, ಯಾವುದೇ ಸರಕು ಅಥವಾ ಸೇವೆಗಳಿಗೆ ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ, ಅವುಗಳ ಮೇಲೆ ವಿಧಿಸಬಹುದಾಗಿದ್ದ ಇಡೀ ತೆರಿಗೆಗೆ ಅಥವಾ ತೆರಿಗೆಗೆ ವಿನಾಯಿತಿಯನ್ನು ನಿರುಪಾಧಿಕವಾಗಿ ನೀಡಿದ್ದರೆ, ಅಂಥ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಪೂರೈಕೆ ಮಾಡುತ್ತಿರುವ ನೋಂದಾಯಿತ ವ್ಯಕ್ತಿಯು, ಅಂಥ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೇಲೆ, ಅನ್ವಯವಾಗುವ ದರಕ್ಕಿಂತಲೂ ಅಧಿಕವಾಗಿ ತೆರಿಗೆಯನ್ನು ಸಂಗ್ರಹಿಸತಕ್ಕದ್ದಲ್ಲ.

## ಅಧ್ಯಾಯ IV

## ಪೂರೈಕೆಯ ಕಾಲ ಮತ್ತು ಮೌಲ್ಯ

**12. ಸರಕುಗಳ ಪೂರೈಕೆಯ ಕಾಲ.–** (1) ಸರಕುಗಳ ಮೇಲೆ ತೆರಿಗೆಯನ್ನು ಸಂದಾಯ ಮಾಡುವ ಬಾಧ್ಯತೆಯು ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ನಿರ್ಧರಿಸಿದಂಥ ಪೂರೈಕೆಯ ಕಾಲದಲ್ಲಿ ಉದ್ಭವಿಸತಕ್ಕದ್ದು.

(2) ಸರಕುಗಳ ಪೂರೈಕೆಯ ಕಾಲವು ಈ ಕೆಳಕಂಡ ದಿನಾಂಕಗಳಿಗೂ ಮುಂಚಿನದಾಗಿರತಕ್ಕದ್ದು, ಎಂದರೆ:–

(ಎ) ಪೂರೈಕೆದಾರನು ನೀಡಿದ ದರಪಟ್ಟಿಯ ದಿನಾಂಕ ಅಥವಾ ಪೂರೈಕೆಗೆ ಸಂಬಂಧಿಸಿದಂತೆ ಅವನು ದರಪಟ್ಟಿಯನ್ನು ಯಾವ ಕೊನೆಯ ದಿನಾಂಕದಂದು ನೀಡಲು ಪ್ರಕರಣ 31ರ ಮೇರೆಗೆ ಅವನಿಗೆ ಅಗತ್ಯಪಡಿಸಲಾಗಿದೆಯೋ ಆ ಕೊನೆಯ ದಿನಾಂಕ; ಅಥವಾ

(ಬಿ) ಪೂರೈಕೆಗೆ ಸಂಬಂಧಿಸಿದಂತೆ ಪೂರೈಕೆದಾರನು ಸಂದಾಯವನ್ನು ಸ್ವೀಕರಿಸುವ ದಿನಾಂಕ:

ಪರಂತು, ತೆರಿಗೆದಾಯಕ ಸರಕುಗಳ ಪೂರೈಕೆದಾರನು ತೆರಿಗೆ ದರಪಟ್ಟಿಯಲ್ಲಿ ಸೂಚಿಸಿರುವ ಮೊತ್ತಕ್ಕಿಂತ ಒಂದು ಸಾವಿರ ರೂಪಾಯಿವರೆಗಿನ ಮೊತ್ತವನ್ನು ಅಧಿಕವಾಗಿ ಸ್ವೀಕರಿಸಿದ್ದಲ್ಲಿ, ಅಂಥ ಅಧಿಕ ಮೊತ್ತದ ಮಟ್ಟಿಗೆ, ಪೂರೈಕೆಯ ಕಾಲವು ಯಾವುದೆಂದರೆ, ಸದರಿ ಪೂರೈಕೆದಾರನು ಯಾವ ದಿನಾಂಕವನ್ನು ಆಯ್ಕೆ ಮಾಡಿಕೊಳ್ಳುವನೋ ಅದಕ್ಕನುಗುಣವಾಗಿ ಆ ಅಧಿಕ ಮೊತ್ತಕ್ಕೆ ಸಂಬಂಧಿಸಿದ ದರಪಟ್ಟಿಯನ್ನು ನೀಡುವ ದಿನಾಂಕ.

**ವಿವರಣೆ 1.–** ಖಂಡ (ಎ) ಮತ್ತು ಖಂಡ (ಬಿ)ಗಳ ಉದ್ದೇಶಗಳಿಗಾಗಿ, ದರಪಟ್ಟಿಯಲ್ಲಿ ಅಥವಾ ಸಂದರ್ಭಾನುಸಾರ ಸಂದಾಯದಲ್ಲಿ ಹೇಳಿರುವಷ್ಟರಮಟ್ಟಿಗೆ "ಪೂರೈಕೆ" ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

**ವಿವರಣೆ 2.–** ಖಂಡ (ಬಿ)ಯ ಉದ್ದೇಶಗಳಿಗಾಗಿ, "ಪೂರೈಕೆದಾರನು ಸಂದಾಯವನ್ನು ಸ್ವೀಕರಿಸುವ ದಿನಾಂಕ" ಎಂದರೆ, ಯಾವ ಪೂರೈಕೆಗಳಿಗೆ ಸಂಬಂಧಿಸಿದಂತೆ ಯಾವ ದಿನಾಂಕದಂದು ಆತನ ಲೆಕ್ಕಪುಸ್ತಕಗಳಲ್ಲಿ ಸಂದಾಯವನ್ನು ನಮೂದು

ಮಾಡಲಾಗಿದೆಯೋ ಆ ದಿನಾಂಕ ಅಥವಾ ಆತನ ಬ್ಯಾಂಕಿನ ಖಾತೆಯಲ್ಲಿ ಯಾವ ದಿನಾಂಕದಂದು ಸಂದಾಯವು ಜಮೆಯಾಗಿದೆಯೋ ಆ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕ.

(3) ಪೂರೈಕೆಯ ಸ್ವೀಕರ್ತನ ತೆರಿಗೆ ಸಂದಾಯದ ಆಧಾರದ ಮೇಲೆ ತೆರಿಗೆಯನ್ನು ಸಂದಾಯ ಮಾಡಲಾಗಿದೆಯೋ ಅಥವಾ ಸಂದಾಯ ಮಾಡಬೇಕಾಗಿದೆಯೋ ಆ ಪೂರೈಕೆಗಳ ಸಂದರ್ಭದಲ್ಲಿ, ಪೂರೈಕೆಯ ಕಾಲವು ಕೆಳಕಂಡ ದಿನಾಂಕಗಳಿಗೂ ಮೊದಲಿನದಾಗಿರತಕ್ಕದ್ದು, ಎಂದರೆ:–

(ಎ) ಸರಕುಗಳನ್ನು ಸ್ವೀಕರಿಸಿದ ದಿನಾಂಕ; ಅಥವಾ

(ಬಿ) ಸ್ವೀಕರ್ತನ ಲೆಕ್ಕಪುಸ್ತಕಗಳಲ್ಲಿ ನಮೂದಾಗಿರುವ ಸಂದಾಯದ ದಿನಾಂಕ ಅಥವಾ ಆತನ ಬ್ಯಾಂಕಿನ ಖಾತೆಗೆ ಸಂದಾಯವನ್ನು ಖರ್ಚು ಹಾಕಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕ; ಅಥವಾ

(ಸಿ) ಪೂರೈಕೆದಾರನು ದರಪಟ್ಟಿಯನ್ನು ಅಥವಾ ಅದಕ್ಕೆ ಬದಲಾಗಿ ಯಾವುದಾದರೂ ಹೆಸರಿನಿಂದ ಕರೆಯಲಾಗುವ ಯಾವುದೇ ಇತರ ದಸ್ತಾವೇಜನ್ನು ನೀಡುವ ದಿನಾಂಕದಿಂದ ಮೂವತ್ತು ದಿನಗಳ ನಿಕಟ ತರುವಾಯ ಬರುವ ದಿನಾಂಕ:

ಪರಂತು, ಪೂರೈಕೆಯ ಕಾಲವನ್ನು ಖಂಡ (ಎ)ಯ ಅಥವಾ ಖಂಡ (ಬಿ)ಯ ಅಥವಾ ಖಂಡ (ಸಿ)ಯ ಅಡಿಯಲ್ಲಿ ನಿರ್ಧರಿಸಲು ಸಾಧ್ಯವಾಗದಿದ್ದರೆ, ಪೂರೈಕೆಯ ಕಾಲವು ಯಾವುದೆಂದರೆ ಪೂರೈಕೆಯ ಸ್ವೀಕರ್ತನ ಲೆಕ್ಕಪುಸ್ತಕಗಳಲ್ಲಿ ಯಾವ ದಿನಾಂಕವು ನಮೂದಾಗಿದೆಯೋ ಆ ದಿನಾಂಕ.

(4) ಪೂರೈಕೆದಾರನು ವೋಚರ್‌ಗಳ ಮೂಲಕ ಮಾಡಿದ ಪೂರೈಕೆಯ ಸಂದರ್ಭದಲ್ಲಿ, ಪೂರೈಕೆಯ ಕಾಲವು ಯಾವುದೆಂದರೆ:–

(ಎ) ಪೂರೈಕೆ ಆಗಿರುವುದನ್ನು ವೋಚರನ್ನು ನೀಡುವ ದಿನಾಂಕದಂದೇ ಕಂಡುಕೊಳ್ಳಬಹುದಾದರೆ, ವೋಚರನ್ನು ನೀಡಿದ ದಿನಾಂಕ; ಅಥವಾ

(ಬಿ) ಎಲ್ಲಾ ಇತರ ಸಂದರ್ಭಗಳಲ್ಲಿ, ವೋಚರ್‌ನ ಹಣವನ್ನು ನಗದುಗೊಳಿಸುವ ದಿನಾಂಕ.

(5) ಉಪಪ್ರಕರಣ (2)ರ ಅಥವಾ ಉಪಪ್ರಕರಣ (3)ರ ಅಥವಾ ಉಪಪ್ರಕರಣ (4)ರ ಉಪಬಂಧಗಳ ಅಡಿಯಲ್ಲಿ ಪೂರೈಕೆಯ ಕಾಲವನ್ನು ನಿರ್ಧರಿಸಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ, ಪೂರೈಕೆಯ ಕಾಲವು ಯಾವುದೆಂದರೆ,–

(ಎ) ನಿಯತಕಾಲಿಕ ರಿಟರ್ನ್‌ನನ್ನು ಸಲ್ಲಿಸಬೇಕಿರುವ ಸಂದರ್ಭದಲ್ಲಿ, ಅಂಥ ರಿಟರ್ನ್‌ನನ್ನು ಯಾವ ದಿನಾಂಕದಂದು ಸಲ್ಲಿಸಬೇಕಾಗಿದೆಯೋ ಆ ದಿನಾಂಕ; ಅಥವಾ

(ಬಿ) ಯಾವುದೇ ಇತರ ಸಂದರ್ಭದಲ್ಲಿ, ತೆರಿಗೆಯನ್ನು ಸಂದಾಯ ಮಾಡಿದ ದಿನಾಂಕ.

(6) ಯಾವುದೇ ಪ್ರತಿಫಲವನ್ನು ವಿಳಂಬ ಮಾಡಿ ಸಂದಾಯ ಮಾಡಿದ್ದಕ್ಕಾಗಿ ಬಡ್ಡಿ, ವಿಳಂಬ ಶುಲ್ಕ ಅಥವಾ ದಂಡದ ರೂಪದಲ್ಲಿ ಪೂರೈಕೆಯ ಮೌಲ್ಯದಲ್ಲಾಗುವ ಹೆಚ್ಚಳಕ್ಕೆ ಸಂಬಂಧಿಸಿರುವಷ್ಟರ ಮಟ್ಟಿಗೆ, ಪೂರೈಕೆಯ ಕಾಲ ಯಾವುದೆಂದರೆ, ಪೂರೈಕೆದಾರನು ಮೌಲ್ಯದಲ್ಲಾದ ಅಂಥ ಹೆಚ್ಚಳವನ್ನು ಸ್ವೀಕರಿಸುವ ದಿನಾಂಕ.

**13. ಸೇವೆಗಳ ಪೂರೈಕೆಯ ಕಾಲ.–** (1) ಸೇವೆಗಳ ಮೇಲೆ ತೆರಿಗೆಯನ್ನು ಸಂದಾಯ ಮಾಡುವ ಬಾಧ್ಯತೆಯು ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ನಿರ್ಧರಿಸಿದಂಥ ಪೂರೈಕೆಯ ಕಾಲದಲ್ಲಿ ಉದ್ಭವಿಸತಕ್ಕದ್ದು.

(2) ಸೇವೆಗಳ ಪೂರೈಕೆಯ ಕಾಲವು ಈ ಕೆಳಕಂಡ ದಿನಾಂಕಗಳಿಗೂ ಮುಂಚಿನದಾಗಿರತಕ್ಕದ್ದು, ಎಂದರೆ:–

(ಎ) ಪ್ರಕರಣ 31ರ ಮೇರೆಗೆ ನಿಯಮಿಸಿದ ಅವಧಿಯೊಳಗಾಗಿ ದರಪಟ್ಟಿಯನ್ನು ನೀಡಿದ್ದರೆ, ಪೂರೈಕೆದಾರನು ದರಪಟ್ಟಿಯನ್ನು ನೀಡಿದ ದಿನಾಂಕ ಅಥವಾ ಸಂದಾಯವನ್ನು ಸ್ವೀಕರಿಸಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕ; ಅಥವಾ

(ಬಿ) ಪ್ರಕರಣ 31ರ ಮೇರೆಗೆ ನಿಯಮಿಸಿದ ಅವಧಿಯೊಳಗಾಗಿ ದರಪಟ್ಟಿಯನ್ನು ನೀಡಿಲ್ಲದಿದ್ದರೆ, ಸೇವೆಯನ್ನು ಒದಗಿಸಿದ ದಿನಾಂಕ ಅಥವಾ ಸಂದಾಯವನ್ನು ಸ್ವೀಕರಿಸಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕ; ಅಥವಾ

(ಸಿ) ಖಂಡ (ಎ)ಯ ಅಥವಾ ಖಂಡ (ಬಿ)ಯ ಉಪಬಂಧಗಳು ಅನ್ವಯವಾಗದ ಸಂದರ್ಭದಲ್ಲಿ, ಸ್ವೀಕರ್ತನು, ತನ್ನ ಲೆಕ್ಕಪುಸ್ತಕಗಳಲ್ಲಿ ಸೇವೆಯ ಸ್ವೀಕೃತಿಯನ್ನು ತೋರಿಸಿರುವ ದಿನಾಂಕ:

ಪರಂತು, ತೆರಿಗೆದಾಯಕ ಸೇವೆಗಳ ಪೂರೈಕೆದಾರನು ತೆರಿಗೆ ದರಪಟ್ಟಿಯಲ್ಲಿ ಸೂಚಿಸಿರುವ ಮೊತ್ತಕ್ಕಿಂತ ಒಂದು ಸಾವಿರ ರೂಪಾಯಿವರೆಗಿನ ಮೊತ್ತವನ್ನು ಅಧಿಕವಾಗಿ ಸ್ವೀಕರಿಸಿದ್ದಲ್ಲಿ, ಅಂಥ ಅಧಿಕ ಮೊತ್ತದ ಮಟ್ಟಿಗೆ, ಪೂರೈಕೆಯ ಕಾಲವು ಯಾವುದೆಂದರೆ, ಸದರಿ ಪೂರೈಕೆದಾರನು ಯಾವ ದಿನಾಂಕದಂದು ಆಯ್ಕೆ ಮಾಡಿಕೊಳ್ಳುವನೋ ಅದಕ್ಕನುಗುಣವಾಗಿ ಆ ಅಧಿಕ ಮೊತ್ತಕ್ಕೆ ಸಂಬಂಧಿಸಿದ ದರಪಟ್ಟಿಯನ್ನು ನೀಡುವ ದಿನಾಂಕ.

**ವಿವರಣೆ.–** ಖಂಡ (ಎ) ಮತ್ತು ಖಂಡ (ಬಿ)ಗಳ ಉದ್ದೇಶಗಳಿಗಾಗಿ,–

(i) ದರಪಟ್ಟಿಯಲ್ಲಿ ಅಥವಾ ಸಂದರ್ಭಾನುಸಾರ ಸಂದಾಯದಲ್ಲಿ ಹೇಳಿರುವಷ್ಟರ ಮಟ್ಟಿಗೆ ಪೂರೈಕೆಯನ್ನು ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು.

(ii) "ಸಂದಾಯವನ್ನು ಸ್ವೀಕರಿಸಿದ ದಿನಾಂಕ" ಯಾವುದೆಂದರೆ ಪೂರೈಕೆದಾರನ ಲೆಕ್ಕಪುಸ್ತಕಗಳಲ್ಲಿ ಸಂದಾಯವು ಯಾವ ದಿನಾಂಕದಂದು ನಮೂದಾಗಿದೆಯೋ ಆ ದಿನಾಂಕ ಅಥವಾ ಆತನ ಬ್ಯಾಂಕಿನ ಖಾತೆಯಲ್ಲಿ ಸಂದಾಯವು ಜಮೆಯಾದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕ.

(3) ಪೂರೈಕೆಯ ಸ್ವೀಕರ್ತನ ತೆರಿಗೆ ಸಂದಾಯದ ಆಧಾರದ ಮೇಲೆ ತೆರಿಗೆಯನ್ನು ಸಂದಾಯ ಮಾಡಲಾಗಿದೆಯೋ ಅಥವಾ ಸಂದಾಯ ಮಾಡಬೇಕಾಗಿದೆಯೋ ಆ ಪೂರೈಕೆಗಳ ಸಂದರ್ಭದಲ್ಲಿ, ಪೂರೈಕೆಯ ಕಾಲವು ಕೆಳಕಂಡ ದಿನಾಂಕಗಳಿಗೂ ಮೊದಲಿನದಾಗಿರತಕ್ಕದ್ದು, ಎಂದರೆ:–

(ಎ) ಸ್ವೀಕರ್ತನ ಲೆಕ್ಕಪುಸ್ತಕಗಳಲ್ಲಿ ನಮೂದಾಗಿರುವ ಸಂದಾಯದ ದಿನಾಂಕ ಅಥವಾ ಆತನ ಬ್ಯಾಂಕಿನ ಖಾತೆಗೆ ಸಂದಾಯವನ್ನು ಖರ್ಚು ಹಾಕಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕ; ಅಥವಾ

(ಬಿ) ಪೂರೈಕೆದಾರನು ದರಪಟ್ಟಿಯನ್ನು ಅಥವಾ ಅದಕ್ಕೆ ಬದಲಾಗಿ ಯಾವುದಾದರೂ ಹೆಸರಿನಿಂದ ಕರೆಯಲಾಗುವ ಯಾವುದೇ ಇತರ ದಸ್ತಾವೇಜನ್ನು ನೀಡುವ ದಿನಾಂಕದಿಂದ ಅರವತ್ತು ದಿನಗಳ ನಿಕಟ ತರುವಾಯ ಬರುವ ದಿನಾಂಕ:

ಪರಂತು, ಪೂರೈಕೆಯ ಕಾಲವನ್ನು ಖಂಡ (ಎ) ಅಥವಾ ಖಂಡ (ಬಿ) ಗಳ ಅಡಿಯಲ್ಲಿ ನಿರ್ಧರಿಸಲು ಸಾಧ್ಯವಾಗದಿದ್ದರೆ, ಪೂರೈಕೆಯ ಕಾಲವು ಯಾವುದೆಂದರೆ ಪೂರೈಕೆಯ ಸ್ವೀಕರ್ತನ ಲೆಕ್ಕಪುಸ್ತಕಗಳಲ್ಲಿ ಯಾವ ದಿನಾಂಕವು ನಮೂದಾಗಿದೆಯೋ ಆ ದಿನಾಂಕ:

ಮತ್ತು ಪರಂತು, ಸಹವರ್ತಿ ಉದ್ಯಮಗಳಿಂದಾಗುವ ಪೂರೈಕೆಯ ಸಂದರ್ಭದಲ್ಲಿ, ಸೇವೆ ಪೂರೈಕೆದಾರನ ಸ್ಥಳ ಭಾರತದ ಹೊರಗಿದ್ದಾಗ, ಪೂರೈಕೆಯ ಕಾಲವು ಯಾವುದೆಂದರೆ, ಪೂರೈಕೆಯ ಸ್ವೀಕರ್ತನ ಲೆಕ್ಕಪುಸ್ತಕಗಳಲ್ಲಿ ನಮೂದಾಗಿರುವ ದಿನಾಂಕ ಅಥವಾ ಸಂದಾಯದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕ.

(4) ಪೂರೈಕೆದಾರನು ವೋಚರ್‌ಗಳ ಮೂಲಕ ಮಾಡಿದ ಪೂರೈಕೆಯ ಸಂದರ್ಭದಲ್ಲಿ, ಪೂರೈಕೆಯ ಕಾಲವು ಯಾವುದೆಂದರೆ:–

(ಎ) ಪೂರೈಕೆಯಾಗಿರುವುದನ್ನು, ವೋಚರನ್ನು ನೀಡುವ ದಿನಾಂಕದಂದೇ ಆ ಸಮಯದಲ್ಲಿಯೇ ಕಂಡುಕೊಳ್ಳಬಹುದಾದರೆ, ವೋಚರನ್ನು ನೀಡಿದ ದಿನಾಂಕ; ಅಥವಾ

(ಬಿ) ಎಲ್ಲಾ ಇತರ ಸಂದರ್ಭಗಳಲ್ಲಿ, ವೋಚರ್‌ನ ಹಣವನ್ನು ನಗದುಗೊಳಿಸುವ ದಿನಾಂಕ.

(5) ಉಪಪ್ರಕರಣ (2)ರ ಅಥವಾ ಉಪಪ್ರಕರಣ (3)ರ ಅಥವಾ ಉಪಪ್ರಕರಣ (4)ರ ಉಪಬಂಧಗಳ ಅಡಿಯಲ್ಲಿ ಪೂರೈಕೆಯ ಕಾಲವನ್ನು ನಿರ್ಧರಿಸಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ, ಪೂರೈಕೆಯ ಕಾಲವು ಯಾವುದೆಂದರೆ:–

(ಎ) ನಿಯತಕಾಲಿಕ ರಿಟರ್ನ್‌ನನ್ನು ಸಲ್ಲಿಸಬೇಕಿರುವ ಸಂದರ್ಭದಲ್ಲಿ ಅಂಥ ರಿಟರ್ನ್‌ನನ್ನು ಯಾವ ದಿನಾಂಕದಂದು ಸಲ್ಲಿಸಲಾಗಿದೆಯೋ ಆ ದಿನಾಂಕ; ಅಥವಾ

(ಬಿ) ಯಾವುದೇ ಇತರ ಸಂದರ್ಭದಲ್ಲಿ, ತೆರಿಗೆಯನ್ನು ಸಂದಾಯ ಮಾಡಿದ ದಿನಾಂಕ.

(6) ಯಾವುದೇ ಪ್ರತಿಫಲವನ್ನು ವಿಳಂಬ ಮಾಡಿ ಸಂದಾಯ ಮಾಡಿದ್ದಕ್ಕಾಗಿ ಬಡ್ಡಿ, ವಿಳಂಬ ಶುಲ್ಕ ಅಥವಾ ದಂಡದ ರೂಪದಲ್ಲಿ ಪೂರೈಕೆಯ ಮೌಲ್ಯದಲ್ಲಾಗುವ ಹೆಚ್ಚಳಕ್ಕೆ ಸಂಬಂಧಿಸಿರುವಷ್ಟರಮಟ್ಟಿಗೆ, ಪೂರೈಕೆಯ ಕಾಲ ಯಾವುದೆಂದರೆ, ಪೂರೈಕೆದಾರನು ಮೌಲ್ಯದಲ್ಲಾದ ಅಂಥ ಹೆಚ್ಚಳವನ್ನು ಸ್ವೀಕರಿಸುವ ದಿನಾಂಕ.

**14. ಸರಕು ಮತ್ತು ಸೇವೆಗಳ ಪೂರೈಕೆಗೆ ಸಂಬಂಧಿಸಿದಂತೆ ತೆರಿಗೆ ದರದಲ್ಲಿನ ಬದಲಾವಣೆ.–** ಪ್ರಕರಣ 12ರಲ್ಲಿ ಅಥವಾ ಪ್ರಕರಣ 13ರಲ್ಲಿ ಏನೇ ಒಳಗೊಂಡಿದ್ದರೂ, ಸರಕು ಅಥವಾ ಸೇವೆಗಳಿಗೆ ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ತೆರಿಗೆಯ ದರದಲ್ಲಿ ಬದಲಾವಣೆಯಾದಾಗ, ಪೂರೈಕೆಯ ಕಾಲವನ್ನು ಈ ಕೆಳಕಂಡ ವಿಧಾನದಲ್ಲಿ ನಿರ್ಧರಿಸತಕ್ಕದ್ದು, ಎಂದರೆ:–

(ಎ) ತೆರಿಗೆ ದರದಲ್ಲಿ ಬದಲಾವಣೆಯಾಗುವುದಕ್ಕೂ ಮುನ್ನವೇ, ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಪೂರೈಕೆ ಮಾಡಿದ್ದ ಸಂದರ್ಭದಲ್ಲಿ,–

(i) ಸದರಿ ಪೂರೈಕೆಗೆ, ತೆರಿಗೆ ದರ ಬದಲಾವಣೆಯಾದ ನಂತರ ದರಪಟ್ಟಿಯನ್ನು ನೀಡಲಾಗಿದ್ದಲ್ಲಿ ಮತ್ತು ಸಂದಾಯವನ್ನೂ ಸಹ ಸ್ವೀಕರಿಸಿದ್ದಲ್ಲಿ, ಪೂರೈಕೆಯ ಕಾಲ ಯಾವುದೆಂದರೆ ಸಂದಾಯದ ಸ್ವೀಕೃತಿಯ ದಿನಾಂಕ ಅಥವಾ ದರಪಟ್ಟಿಯನ್ನು ನೀಡಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕ; ಅಥವಾ

(ii) ತೆರಿಗೆ ದರದಲ್ಲಿ ಬದಲಾವಣೆಯಾಗುವುದಕ್ಕಿಂತ ಮೊದಲು ದರಪಟ್ಟಿಯನ್ನು ನೀಡಿದ್ದರೆ, ಆದರೆ, ತೆರಿಗೆ ದರ ಬದಲಾವಣೆಯಾದ ನಂತರ ಸಂದಾಯವನ್ನು ಸ್ವೀಕರಿಸಿದ್ದರೆ, ಪೂರೈಕೆಯ ಕಾಲವು ಯಾವುದೆಂದರೆ ದರಪಟ್ಟಿಯನ್ನು ನೀಡಿದ ದಿನಾಂಕ; ಅಥವಾ

(iii) ತೆರಿಗೆ ದರದಲ್ಲಿ ಬದಲಾವಣೆಯಾಗುವುದಕ್ಕಿಂತಲೂ ಮೊದಲು ಸಂದಾಯವನ್ನು ಸ್ವೀಕರಿಸಿದ್ದರೆ, ಆದರೆ ತೆರಿಗೆಯ ದರದಲ್ಲಿ ಬದಲಾವಣೆಯಾದ ನಂತರ ಅದಕ್ಕಾಗಿ ದರಪಟ್ಟಿಯನ್ನು ನೀಡಿದ್ದರೆ, ಪೂರೈಕೆಯ ಕಾಲವು ಯಾವುದೆಂದರೆ ಸಂದಾಯದ ಸ್ವೀಕೃತಿಯ ದಿನಾಂಕ.

(ಬಿ) ತೆರಿಗೆ ದರದಲ್ಲಿ ಬದಲಾವಣೆಯಾದ ನಂತರ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಪೂರೈಕೆ ಮಾಡಿದ್ದ ಸಂದರ್ಭದಲ್ಲಿ,–

(i) ತೆರಿಗೆ ದರದಲ್ಲಿ ಬದಲಾವಣೆಯಾದ ನಂತರ ಸಂದಾಯವನ್ನು ಸ್ವೀಕರಿಸಿದ್ದರೆ, ಆದರೆ ದರಪಟ್ಟಿಯನ್ನು ತೆರಿಗೆ ದರದಲ್ಲಿ ಬದಲಾವಣೆಯಾಗುವುದಕ್ಕಿಂತ ಮೊದಲೇ ನೀಡಿದ್ದರೆ, ಪೂರೈಕೆಯ ಕಾಲವು ಯಾವುದೆಂದರೆ ಸಂದಾಯದ ಸ್ವೀಕೃತಿಯ ದಿನಾಂಕ; ಅಥವಾ

(ii) ತೆರಿಗೆ ದರದಲ್ಲಿ ಬದಲಾವಣೆಯಾಗುವುದಕ್ಕೂ ಮೊದಲು ದರಪಟ್ಟಿಯನ್ನು ನೀಡಿದ್ದರೆ ಮತ್ತು ಸಂದಾಯವನ್ನು ಸ್ವೀಕರಿಸಿದ್ದರೆ, ಪೂರೈಕೆಯ ಕಾಲವು ಯಾವುದೆಂದರೆ ಸಂದಾಯದ ಸ್ವೀಕೃತಿಯ ದಿನಾಂಕ ಅಥವಾ ದರಪಟ್ಟಿಯನ್ನು ನೀಡಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕ; ಅಥವಾ

(iii) ತೆರಿಗೆ ದರದಲ್ಲಿ ಬದಲಾವಣೆಯಾದ ನಂತರ ದರಪಟ್ಟಿಯನ್ನು ನೀಡಿದ್ದರೆ, ಆದರೆ ತೆರಿಗೆ ದರದಲ್ಲಿ ಬದಲಾವಣೆಯಾಗುವುದಕ್ಕಿಂತಲೂ ಮೊದಲು ಸಂದಾಯವನ್ನು ಸ್ವೀಕರಿಸಿದ್ದರೆ, ಪೂರೈಕೆಯ ಕಾಲವು ಯಾವುದೆಂದರೆ ದರಪಟ್ಟಿಯನ್ನು ನೀಡಿದ ದಿನಾಂಕ:

ಪರಂತು, ತೆರಿಗೆ ದರದಲ್ಲಿ ಬದಲಾವಣೆಯಾದ ದಿನಾಂಕದಿಂದ ನಾಲ್ಕು ಕಾರ್ಯನಿರತ ದಿನಗಳ ನಂತರ ಸಂದಾಯದ ಸ್ವೀಕೃತಿಯು ಬ್ಯಾಂಕಿನ ಖಾತೆಯಲ್ಲಿ ಜಮೆಯಾಗಿದ್ದರೆ, ಸಂದಾಯದ ಸ್ವೀಕೃತಿಯ ದಿನಾಂಕವು ಯಾವುದೆಂದರೆ ಬ್ಯಾಂಕಿನ ಖಾತೆಯಲ್ಲಿ ಜಮೆಯಾದ ದಿನಾಂಕ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, 'ಸಂದಾಯವನ್ನು ಸ್ವೀಕರಿಸಿದ ದಿನಾಂಕ' ಯಾವುದೆಂದರೆ ಪೂರೈಕೆದಾರನ ಲೆಕ್ಕಪುಸ್ತಕಗಳಲ್ಲಿ ಸಂದಾಯವು ಯಾವ ದಿನಾಂಕದಂದು ನಮೂದಾಗಿದೆಯೋ ಆ ದಿನಾಂಕ ಅಥವಾ ಆತನ ಬ್ಯಾಂಕಿನ ಖಾತೆಯಲ್ಲಿ ಸಂದಾಯವು ಜಮೆಯಾದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕ.

**15. ತೆರಿಗೆದಾಯಕ ಪೂರೈಕೆಯ ಮೌಲ್ಯ.–** (1) ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯವು ಯಾವುದೆಂದರೆ ವ್ಯವಹಾರದ ಮೌಲ್ಯ. ಇಲ್ಲಿ ವ್ಯವಹಾರದ ಮೌಲ್ಯ ಎಂದರೆ, ಸದರಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ, ಪೂರೈಕೆದಾರನು ಮತ್ತು ಸ್ವೀಕರ್ತನು ಸಂಬಂಧಪಟ್ಟಿರದಿದ್ದರೆ ಮತ್ತು ಪೂರೈಕೆಗೆ ಬೆಲೆಯೇ ಏಕಮಾತ್ರ ಪ್ರತಿಫಲವಾಗಿದ್ದಾಗ, ವಾಸ್ತವಿಕವಾಗಿ ಸಂದಾಯ ಮಾಡಿದ ಅಥವಾ ಮಾಡಬೇಕಾದ ಬೆಲೆ.

(2) ಪೂರೈಕೆಯ ಮೌಲ್ಯವು ಈ ಕೆಳಕಂಡವುಗಳನ್ನು ಎಂದರೆ:–

(ಎ) ಈ ಅಧಿನಿಯಮ, ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ ಮತ್ತು ಸರಕುಗಳ ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ನಷ್ಟಪರಿಹಾರ) ಅಧಿನಿಯಮ ಇವುಗಳ ಹೊರತು, ಪೂರೈಕೆದಾರನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಯಾವುವಾದರೂ ತೆರಿಗೆಗಳನ್ನು, ಸುಂಕಗಳನ್ನು, ಉಪಕರಗಳನ್ನು, ಶುಲ್ಕಗಳನ್ನು ಮತ್ತು ಚಾರ್ಜುಗಳನ್ನು ವಿಧಿಸಿದ್ದರೆ ಅವುಗಳನ್ನು;

(ಬಿ) ಪೂರೈಕೆಯ ಸ್ವೀಕರ್ತನು ಭರಿಸಿದ, ಆದರೆ ಅಂಥ ಪೂರೈಕೆಗೆ ಸಂಬಂಧಿಸಿದಂತೆ ಪೂರೈಕೆದಾರನು ಸಂದಾಯ ಮಾಡುವುದಕ್ಕೆ ಬದ್ಧನಾಗಿರುವ ಮತ್ತು ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ವಾಸ್ತವಿಕವಾಗಿ ಸಂದಾಯ ಮಾಡಿದ ಅಥವಾ ಮಾಡಬೇಕಾದ ಬೆಲೆಯಲ್ಲಿ ಒಳಗೊಂಡಿರದ ಯಾವುದೇ ಮೊತ್ತವನ್ನು;

(ಸಿ) ಪೂರೈಕೆದಾರನು ಪೂರೈಕೆಯ ಸ್ವೀಕರ್ತನ ಮೇಲೆ ವಿಧಿಸಿದ ಕಮಿಷನ್ ಮತ್ತು ಪ್ಯಾಕಿಂಗ್ ಶುಲ್ಕಗಳೂ ಒಳಗೊಂಡಂತೆ ಪ್ರಾಸಂಗಿಕ ವೆಚ್ಚಗಳು ಮತ್ತು ಸರಕುಗಳ ಬಟವಾಡೆಯ ಅಥವಾ ಸೇವೆಗಳ ಪೂರೈಕೆಯ ಕಾಲದಲ್ಲಿ ಅಥವಾ ಅದಕ್ಕೂ ಮೊದಲು ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಪೂರೈಕೆದಾರನು ಏನನ್ನಾದರೂ ಮಾಡಿದ್ದಕ್ಕಾಗಿ ವಿಧಿಸಿದ ಯಾವುದೇ ಮೊತ್ತವನ್ನು;

(ಡಿ) ಯಾವುದೇ ಪೂರೈಕೆಯ ನಿಮಿತ್ತ ಯಾವುದೇ ಪ್ರತಿಫಲವನ್ನು ವಿಳಂಬ ಮಾಡಿ ಸಂದಾಯ ಮಾಡಿದ್ದಕ್ಕಾಗಿ ಹಾಕಿದ ಬಡ್ಡಿಯನ್ನು ಅಥವಾ ವಿಳಂಬ ಶುಲ್ಕವನ್ನು ಅಥವಾ ದಂಡವನ್ನು; ಮತ್ತು

(ಇ) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ನೀಡಿದ ಸಬ್ಸಿಡಿಗಳನ್ನು ಹೊರತುಪಡಿಸಿ, ಬೆಲೆಗೆ ನೇರವಾಗಿ ಸಂಬಂಧಿಸಿದ ಸಬ್ಸಿಡಿಗಳನ್ನು

– ಒಳಗೊಂಡಿರತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಗಳಿಗಾಗಿ ಸಬ್ಸಿಡಿ ಮೊತ್ತವು, ಸಬ್ಸಿಡಿಯನ್ನು ಸ್ವೀಕರಿಸುವ ಪೂರೈಕೆದಾರನ ಪೂರೈಕೆಯ ಮೌಲ್ಯದಲ್ಲಿ ಸೇರಿರತಕ್ಕದ್ದು.

(3) ಪೂರೈಕೆಯ ಮೌಲ್ಯವು,–

(ಎ) ಪೂರೈಕೆಯ ಕಾಲದಲ್ಲಿ ಅಥವಾ ಅದಕ್ಕಿಂತಲೂ ಮೊದಲು ನೀಡಿದ ಸೋಡಿಯನ್ನು ಅಂಥ ಪೂರೈಕೆಗೆ ಸಂಬಂಧಿಸಿದಂತೆ ನೀಡಿದ ದರಪಟ್ಟಿಯಲ್ಲಿ ಸೋಡಿಯನ್ನು ಯುಕ್ತವಾಗಿ ದಾಖಲಿಸಿದ್ದರೆ ಅಂಥ ಸೋಡಿಯನ್ನು; ಮತ್ತು

(ಬಿ) ಒಂದು ವೇಳೆ,–

(i) ಅಂಥ ಸೋಡಿಯನ್ನು ಅಂಥ ಪೂರೈಕೆಯ ಕಾಲದಲ್ಲಿ ಅಥವಾ ಅದಕ್ಕಿಂತ ಮುನ್ನವೇ ಮಾಡಿಕೊಂಡ ಒಪ್ಪಂದದ ಪ್ರಕಾರ ಸ್ಥಿರೀಕರಿಸಿದ್ದರೆ ಮತ್ತು ಅದಕ್ಕೂ ಸುಸಂಗತ ದರಪಟ್ಟಿಗಳಿಗೂ ನಿರ್ದಿಷ್ಟವಾಗಿ ಪರಸ್ಪರ ಸಂಬಂಧ ಇದ್ದರೆ; ಮತ್ತು

(ii) ಅಂಥ ಸೋಡಿಗೆ ಕಾರಣವೆನ್ನಬಹುದಾದ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಹಣವನ್ನು ಆ ಪೂರೈಕೆಯ ಸ್ವೀಕರ್ತನು ಪೂರೈಕೆದಾರನು ನೀಡಿದ ದಸ್ತಾವೇಜಿನ ಆಧಾರದ ಮೇಲೆ ಹಿಂದಿರುಗಿಸಿದ್ದರೆ

– ಪೂರೈಕೆ ಮಾಡಿದ ನಂತರ ಸೋಡಿಯನ್ನು ನೀಡಿದ್ದರೆ ಆ ಯಾವುದೇ ಸೋಡಿಯನ್ನು ಒಳಗೊಳ್ಳುವುದಿಲ್ಲ.

(4) ಉಪಪ್ರಕರಣ (1)ರ ಅಡಿಯಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೌಲ್ಯವನ್ನು ನಿರ್ಧರಿಸಲು ಆಗದಿದ್ದರೆ, ಅದನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ನಿರ್ಧರಿಸತಕ್ಕದ್ದು.

(5) ಉಪಪ್ರಕರಣ (1)ರ ಅಥವಾ ಉಪಪ್ರಕರಣ (4)ರ ಅಡಿಯಲ್ಲಿ ಏನೇ ಒಳಗೊಂಡಿದ್ದರೂ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದಂಥ ಪೂರೈಕೆಗಳ ಮೌಲ್ಯವನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ನಿರ್ಧರಿಸತಕ್ಕದ್ದು.

**ವಿವರಣೆ.–** ಈ ಅಧಿನಿಯಮದ ಉದ್ದೇಶಗಳಿಗಾಗಿ,–

(ಎ) ಈ ಕೆಳಕಂಡ ವ್ಯಕ್ತಿಗಳನ್ನು ಎಂದರೆ:–

(i) ಒಬ್ಬರು ಮತ್ತೊಬ್ಬರ ವ್ಯವಹಾರಗಳಲ್ಲಿ ಅಧಿಕಾರಿಗಳಾಗುವಂಥ ಅಥವಾ ನಿರ್ದೇಶಕರುಗಳಾಗಿರುವಂಥ ವ್ಯಕ್ತಿಗಳನ್ನು;

(ii) ವ್ಯವಹಾರದಲ್ಲಿ ಕಾನೂನು ರೀತ್ಯ ಪಾಲುದಾರರೆಂದು ಮಾನ್ಯತೆ ಪಡೆದಿರುವಂಥ ವ್ಯಕ್ತಿಗಳನ್ನು;

(iii) ಅಂಥ ವ್ಯಕ್ತಿಗಳು ಉದ್ಯೋಗದಾತನಾಗಿರುವಂಥ ಮತ್ತು ಉದ್ಯೋಗಿಯಾಗಿರುವಂಥ ವ್ಯಕ್ತಿಗಳನ್ನು;

(iv) ಯಾವ ವ್ಯಕ್ತಿಯು, ಚುಕ್ತಾ ಆಗಿಲ್ಲದ, ಶೇಕಡ ಇಪ್ಪತ್ತೈದರಷ್ಟು ಅಥವಾ ಅದಕ್ಕಿಂತಲೂ ಹೆಚ್ಚಿಗೆ ಮತದಾನದ ಹಕ್ಕುಳ್ಳ ಸ್ಟಾಕುಗಳ ಅಥವಾ ಷೇರುಗಳ ಅಥವಾ ಅವೆರಡರ ಅಥವಾ ನೇರವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ, ಮಾಲೀಕತ್ವವನ್ನು ಅಥವಾ ನಿಯಂತ್ರಣವನ್ನು ಹೊಂದಿರುವನೋ ಅಥವಾ ಅವುಗಳನ್ನು ಹೊಂದಿರುವನೋ ಆ ಯಾರೇ ವ್ಯಕ್ತಿಯನ್ನು;

(v) ಅಂಥ ವ್ಯಕ್ತಿಗಳಲ್ಲಿ, ಯಾರು ಒಬ್ಬರು ಮತ್ತೊಬ್ಬರನ್ನು ನೇರವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ನಿಯಂತ್ರಿಸಿರುವನೋ ಆ ವ್ಯಕ್ತಿಯನ್ನು;

(vi) ಮೂರನೇ ವ್ಯಕ್ತಿಯು ನೇರವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ, ಅವರಿಬ್ಬರ ನಿಯಂತ್ರಣದಲ್ಲಿದ್ದರೆ ಆ ಇಬ್ಬರನ್ನೂ;

(vii) ಮೂರನೇ ವ್ಯಕ್ತಿಯು ನೇರವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ, ಒಟ್ಟಿಗೆ ಅವರ ನಿಯಂತ್ರಣದಲ್ಲಿದ್ದರೆ ಅವರನ್ನು;

(viii) ಅವರು ಒಂದೇ ಕುಟುಂಬದ ಸದಸ್ಯರಾಗಿದ್ದರೆ ಅವರನ್ನು "ಸಂಬಂಧಿತ ವ್ಯಕ್ತಿ"ಗಳು ಎಂದು ಪರಿಭಾವಿಸತಕ್ಕದ್ದು.

(ಬಿ) "ವ್ಯಕ್ತಿ" ಎಂಬ ಪದವು ಕಾನೂನು ನಿರ್ಮಿತ ವ್ಯಕ್ತಿಗಳನ್ನೂ ಸಹ ಒಳಗೊಳ್ಳುತ್ತದೆ;

(ಸಿ) ಒಬ್ಬರು ಮತ್ತೊಬ್ಬರ ವ್ಯವಹಾರದಲ್ಲಿ ಯಾವ ವ್ಯಕ್ತಿಗಳು ಸಹವರ್ತಿಯಾಗಿರುವರೋ ಅಂದರೆ ಅದರಲ್ಲಿ ಒಬ್ಬರು ಮತ್ತೊಬ್ಬರ ಏಕೈಕ ಏಜೆಂಟ್ ಆಗಿದ್ದರೆ ಅಥವಾ ಏಕೈಕ ಹಂಚಿಕೆದಾರನಾಗಿದ್ದರೆ ಅಥವಾ ಏಕೈಕ ರಿಯಾಯಿತಿದಾರನಾಗಿದ್ದರೆ ಅಥವಾ ಆತನನ್ನು ಹೇಗಾದರೂ ವಿವರಿಸಿರಲಿ ಆ ವ್ಯಕ್ತಿಗಳನ್ನು ಸಂಬಂಧಿತರು ಎಂದು ಪರಿಭಾವಿಸತಕ್ಕದ್ದು.

## ಅಧ್ಯಾಯ V

## ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್

**16. ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಹಣವನ್ನು ತೆಗೆದುಕೊಳ್ಳಲು ಅರ್ಹತೆ ಮತ್ತು ಷರತ್ತುಗಳು.–** (1) ಪ್ರತಿಯೊಬ್ಬ ನೋಂದಾಯಿತ ತೆರಿಗೆದಾಯಕ ವ್ಯಕ್ತಿಯು, ತನಗೆ ಯಾವ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಪೂರೈಕೆ ಮಾಡಲಾಗಿದೆಯೋ ಅವುಗಳನ್ನು ಆತನ ವ್ಯವಹಾರವು ನಡೆಯುತ್ತಿರುವಾಗ ಅಥವಾ ಅದರ ಮುಂದುವರಿಕೆಯಲ್ಲಿ ಬಳಸಲಾಗಿದೆಯೋ ಅಥವಾ ಬಳಸಲು ಉದ್ದೇಶಿಸಲಾಗಿದೆಯೋ ಅಂಥ ಯಾವುದೇ ಪೂರೈಕೆ ಮೇಲೆ ವಿಧಿಸಿದ್ದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ್ನು ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಹಾಗೂ ಪ್ರಕರಣ 49ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ, ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಸದರಿ ಮೊತ್ತವನ್ನು ಅಂಥ ವ್ಯಕ್ತಿಯ ವಿದ್ಯುನ್ಮಾನ ಜಮೆ ಖಾತೆಗೆ ಜಮೆ ಮಾಡತಕ್ಕದ್ದು.

(2) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ನೋಂದಾಯಿತ ವ್ಯಕ್ತಿಯು ಸರಕುಗಳನ್ನು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಆತನಿಗೆ ಪೂರೈಕೆ ಮಾಡಿದ್ದಕ್ಕೆ ಸಂಬಂಧಿಸಿದಂತೆ,–

(ಎ) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಪೂರೈಕೆದಾರನು ನೀಡಿದ್ದ ತೆರಿಗೆ ದರಪಟ್ಟಿ ಅಥವಾ ಖರ್ಚಿನ ಚೀಟಿ ಅಥವಾ ನಿಯಮಿಸಬಹುದಾದಂಥ ತೆರಿಗೆ ಸಂದಾಯ ಮಾಡುವ ಇತರ ದಸ್ತಾವೇಜುಗಳ ಸ್ವಾಧೀನತೆ ಹೊಂದಿದ್ದ ಹೊರತು;

(ಬಿ) ಅವನು ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಸ್ವೀಕರಿಸಿದ್ದ ಹೊರತು;

**ವಿವರಣೆ.–** ಈ ಖಂಡದ ಉದ್ದೇಶಗಳಿಗಾಗಿ,–

(i) ಪೂರೈಕೆದಾರನು ಸ್ವೀಕರ್ತನಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ಅಂಥ ನೋಂದಾಯಿತ ವ್ಯಕ್ತಿಯ ನಿರ್ದೇಶನದ ಮೇಲೆ, ಏಜೆಂಟ್ ಆಗಿಯೋ ಅಥವಾ ಅನ್ಯಥಾ, ಸರಕುಗಳ ಸಾಗಾಣಿಕೆಗೆ ಮುಂಚೆ ಅಥವಾ ಸಾಗಣೆಯಾಗುತ್ತಿರುವ ಸಮಯದಲ್ಲಿ, ಸರಕುಗಳ ಅಥವಾ ಅನ್ಯಥಾ, ಸರಕುಗಳನ್ನು ತಲುಪಿಸಿದ್ದಾಗ;

(ii) ಅಂಥ ನೋಂದಾಯಿತ ವ್ಯಕ್ತಿಯ ನಿರ್ದೇಶನದ ಮೇಲೆ ಮತ್ತು ಕಾರಣದಿಂದಾಗಿ ಯಾರೇ ವ್ಯಕ್ತಿಗೆ ಪೂರೈಕೆದಾರನು ಸೇವೆಗಳನ್ನು ಒದಗಿಸಿದ್ದಾಗ

– ನೋಂದಾಯಿತ ವ್ಯಕ್ತಿಯು ಸರಕುಗಳು ಅಥವಾ ಸಂದರ್ಭಾನುಸಾರ ಸೇವೆಗಳನ್ನು ಸ್ವೀಕರಿಸಿದ್ದಾನೆ ಎಂದು ಭಾವಿಸತಕ್ಕದ್ದು.

(ಬಿಎ) ಪ್ರಕರಣ 38ರ ಅಡಿಯಲ್ಲಿ ಅಂಥ ನೋಂದಾಯಿತ ವ್ಯಕ್ತಿಗೆ ತಿಳಿಸಲಾದ ಸದರಿ ಸರಬರಾಜಿಗೆ ಸಂಬಂಧಿಸಿದಂತೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ವಿವರಗಳನ್ನು ನಿರ್ಬಂಧಿಸದ ಹೊರತು;

(ಸಿ) ಪ್ರಕರಣ 41ರ ಉಪಬಂಧಗಳಿಗೆ ಒಳಪಟ್ಟು, ಅಂಥ ಪೂರೈಕೆಗೆ ಸಂಬಂಧಿಸಿದಂತೆ ವಿಧಿಸಲಾದ ತೆರಿಗೆಯನ್ನು ಸರ್ಕಾರದ ಖಾತೆಗೆ, ನಗದು ರೂಪದಲ್ಲಿಯಾಗಲಿ ಅಥವಾ ಸದರಿ ಪೂರೈಕೆಗೆ ಸಂಬಂಧಿಸಿದಂತೆ ಯಾವುದೇ ಪೂರೈಕೆ ಮೇಲಿನ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಬಳಸಿಕೊಳ್ಳುವುದರ ಮೂಲಕವಾಗಲಿ, ವಾಸ್ತವಿಕವಾಗಿ ಸಂದಾಯ ಮಾಡಿದ್ದ ಹೊರತು;

(ಡಿ) ಅವನು ಪ್ರಕರಣ 39ರ ಅಡಿಯಲ್ಲಿ ರಿಟರ್ನ್ ಸಲ್ಲಿಸಿದ್ದ ಹೊರತು

– ಯಾವುದೇ ಪೂರೈಕೆ ಮೇಲೆ ವಿಧಿಸಿದ ತೆರಿಗೆಯ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ:

ಪರಂತು, ದರಪಟ್ಟಿನ ಪ್ರಕಾರ ಸರಕುಗಳನ್ನು ಲಾಟ್‌ಗಳಲ್ಲಿ ಅಥವಾ ಕಂತುಗಳಲ್ಲಿ ಸ್ವೀಕರಿಸಿದ್ದರೆ, ನೋಂದಾಯಿತ ವ್ಯಕ್ತಿಯು ಕೊನೆಯ ಲಾಟ್‌ನ್ನು ಅಥವಾ ಕಂತನ್ನು ಸ್ವೀಕರಿಸಿದ ಮೇಲೆ ರಿಬೇಟ್‌ಗೆ ಹಕ್ಕುಳ್ಳವನಾಗಿರತಕ್ಕದ್ದು:

ಮತ್ತು ಪರಂತು, ಪೂರೈಕೆ ಸ್ವೀಕರ್ತನ ತೆರಿಗೆ ಬಾಧ್ಯತೆ ಆಧಾರದಲ್ಲಿ ಯಾವ ಪೂರೈಕೆಗಳ ಮೇಲೆ ತೆರಿಗೆ ಸಂದಾಯ ಮಾಡಬೇಕಾಗುತ್ತದೋ ಆ ಪೂರೈಕೆಗಳ ಹೊರತು, ಸ್ವೀಕರ್ತನು ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆದಾರನಿಗೆ ಪೂರೈಕೆಯ ಮೌಲ್ಯವಾಗಿ, ಅದರ ಮೇಲಿನ ತೆರಿಗೆಯೊಂದಿಗೆ, ಸಂದಾಯ ಮಾಡಬೇಕಾದ ಮೊತ್ತವನ್ನು, ಪೂರೈಕೆದಾರನು ದರಪಟ್ಟಿ ನೀಡಿದ ದಿನಾಂಕದಿಂದ ಒಂದು ನೂರ ಎಂಬತ್ತು ದಿನಗಳ ಅವಧಿಯ ಒಳಗಾಗಿ, ಸಂದಾಯ

ಮಾಡಲು ವಿಫಲನಾದಲ್ಲಿ, ಪೂರೈಕೆ ಮೇಲೆ ವಿಧಿಸಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಸ್ವೀಕರ್ತನು ಬಳಸಿಕೊಂಡಿದ್ದರೆ ಅದಕ್ಕೆ ಸಮಾನವಾದ ಮೊತ್ತವನ್ನು ಅದರ ಮೇಲಿನ ಬಡ್ಡಿ ಸಹಿತ, ನಿಯಮಿಸಬಹುದಾದಂಥ ವಿಧಾನದಲ್ಲಿ, ಸ್ವೀಕರ್ತನ ತೆರಿಗೆದಾಯಕ ಔಟ್‌ಪುಟ್ ಟ್ಯಾಕ್ಸ್ ಬಾಧ್ಯತೆಗೆ ಸೇರಿಸತಕ್ಕದ್ದು:

ಮತ್ತೂ ಪರಂತು, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೌಲ್ಯದ ಹಣವನ್ನು ಅದರ ಮೇಲಿನ ತೆರಿಗೆ ಸಹಿತ, ಆತನು ಸಂದಾಯ ಮಾಡಿದಾಗ, ಸ್ವೀಕರ್ತನು ಸದರಿ ಇನ್‌ಪುಟ್ ಟ್ಯಾಕ್ಸ್ ಬಳಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(3) ನೋಂದಾಯಿತ ವ್ಯಕ್ತಿಯು, ಆದಾಯ ತೆರಿಗೆ ಅಧಿನಿಯಮ, 1961 (1961ರ 43) ರ ಉಪಬಂಧಗಳ ಮೇರೆಗೆ, ಮೂಲ ಸರಕುಗಳ ಹಾಗೂ ಸ್ಥಾವರ ಮತ್ತು ಯಂತ್ರೋಪಕರಣಗಳ ಅಸಲು ಬೆಲೆಯಲ್ಲಿ ತೆರಿಗೆ ಭಾಗದ ಮೊತ್ತದ ಇಳುವರಿಯನ್ನು ಕ್ಲೇಮು ಮಾಡಿದ್ದರೆ, ಸದರಿ ತೆರಿಗೆ ಭಾಗ ಮೊತ್ತಕ್ಕೆ ಸದರಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನುಮತಿಸತಕ್ಕದ್ದಲ್ಲ.

(4) ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಯಾವುದೇ ದರಪಟ್ಟಿ ಅಥವಾ ಖರ್ಚಿನ ಚೀಟಿಗೆ ಸಂಬಂಧಿಸಿದಂತೆ ಸದರಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್, ಅಂಥ ದರಪಟ್ಟಿ ಅಥವಾ ಖರ್ಚಿನ ಚೀಟಿ ಯಾವ ಹಣಕಾಸು ವರ್ಷಕ್ಕೆ ಸಂಬಂಧಿಸಿದೆಯೋ ಆ ಹಣಕಾಸು ವರ್ಷವು ಕೊನೆಗೊಂಡ ತರುವಾಯದ ನವೆಂಬರ್ ಮೂವತ್ತನೇ ದಿನಾಂಕ ಅಥವಾ ಸುಸಂಗತ ವಾರ್ಷಿಕ ರಿಟರ್ನ್‌ನನ್ನು ಸಲ್ಲಿಸಲು ಯಾವುದು ಕೊನೆಯ ದಿನಾಂಕವೋ ಆ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ, ಆ ದಿನಾಂಕದ ನಂತರ, ಸದರಿ ತೆರಿಗೆ ರಿಬೇಟ್‌ನ್ನು ತೆಗೆದುಕೊಳ್ಳಲು ನೊಂದಾಯಿತ ವ್ಯಕ್ತಿಯು ಹಕ್ಕುಳ್ಳವನಾಗಿರತಕ್ಕದ್ದಲ್ಲ:

ಪರಂತು, 2017–18ನೇ ಹಣಕಾಸು ವರ್ಷದಲ್ಲಿ ಮಾಡಲಾದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಾಗಿನ ಯಾವುದೇ ದರಪಟ್ಟಿಗೆ ಸಂಬಂಧಿಸಿದಂತೆ ಅಥವಾ ಅಂಥ ಖರ್ಚಿನ ಚೀಟಿಗೆ ಸಂಬಂಧಪಟ್ಟ ದರಪಟ್ಟಿಗೆ ಸಂಬಂಧಿಸಿದಂತೆ, ಪ್ರಕರಣ 39ರ ಮೇರೆಗೆ ರಿಟರ್ನ್ ಅನ್ನು ಸಲ್ಲಿಸುವ ವಾಯಿದೆ ದಿನಾಂಕವಾದ ಸೆಪ್ಟೆಂಬರ್ 2018ರ ಅವಧಿಗಾಗಿ, ಸದರಿ ಪ್ರಕರಣದ ಮೇರೆಗೆ ರಿಟರ್ನ್ ಅನ್ನು ಸಲ್ಲಿಸುವ ವಾಯಿದೆ ದಿನಾಂಕವಾದ ಮಾರ್ಚ್ 2019ರವರೆಗೆ, ಪ್ರಕರಣ 37ರ ಉಪಪ್ರಕರಣ (1)ರ ಮೇರೆಗೆ ಪೂರೈಕೆದಾರನು ಯಾವ ವಿವರಗಳನ್ನು ಅಪ್‌ಲೋಡ್ ಮಾಡಿರುವನೋ ಆ ವಿವರಗಳನ್ನು ಸದರಿ ಪ್ರಕರಣದ ಉಪಪ್ರಕರಣ (1)ರ ಮೇರೆಗಿನ ವಿವರಗಳನ್ನು ಸಲ್ಲಿಸುವ ವಾಯಿದೆ ದಿನಾಂಕವಾದ ಮಾರ್ಚ್ 2019ರವರೆಗೆ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಪಡೆದುಕೊಳ್ಳಲು ನೋಂದಾಯಿತ ವ್ಯಕ್ತಿಯು ಹಕ್ಕುಳ್ಳವನಾಗಿರತಕ್ಕದ್ದು.

**17. ಕ್ರೆಡಿಟ್‌ನ ಮತ್ತು ತಡೆ ಹಿಡಿದಿದ್ದ ಕ್ರೆಡಿಟ್‌ನ ವಿಂಗಡಣೆ.–** (1) ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು, ನೋಂದಾಯಿತ ವ್ಯಕ್ತಿಯು, ಭಾಗಶಃ ಯಾವುದೇ ವ್ಯವಹಾರದ ಉದ್ದೇಶಗಳಿಗಾಗಿ ಮತ್ತು ಭಾಗಶಃ ಇತರ ಉದ್ದೇಶಗಳಿಗಾಗಿ ಬಳಸಿಕೊಂಡಿದ್ದರೆ, ಆತನ ವ್ಯವಹಾರದ ಉದ್ದೇಶಗಳಿಗಾಗಿ ಕ್ರೆಡಿಟ್‌ನ ಮೊತ್ತವನ್ನು, ಇನ್‌ಪುಟ್ ಟ್ಯಾಕ್ಸ್ ಇಂತಿಷ್ಟೇ ಕ್ರೆಡಿಟ್ ಎಂದು ಹೇಳಬಹುದಾದಷ್ಟು ಕ್ರೆಡಿಟ್ ನಷ್ಟಕ್ಕೆ ಮಾತ್ರವೇ ಸೀಮಿತಗೊಳಿಸತಕ್ಕದ್ದು.

(2) ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ, ನೋಂದಾಯಿತ ವ್ಯಕ್ತಿಯು, ಭಾಗಶಃ ಈ ಅಧಿನಿಯಮದ ಅಥವಾ ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮಗಳ ಅಡಿಯಲ್ಲಿನ, ಶೂನ್ಯ ದರದ ಪೂರೈಕೆಗಳನ್ನು ಒಳಗೊಂಡಂಥ ತೆರಿಗೆದಾಯಕ ಪೂರೈಕೆಗಳಿಗಾಗಿ ಮತ್ತು ಭಾಗಶಃ ಸದರಿ ಅಧಿನಿಯಮಗಳ ಅಡಿಯಲ್ಲಿ ವಿನಾಯಿತಿ

ಪೂರೈಕೆಗಳನ್ನು ಮಾಡುವುದಕ್ಕಾಗಿ ಉಪಯೋಗಿಸಿದಾಗ, ಕ್ರೆಡಿಟ್ ಮೊತ್ತವನ್ನು, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಎಂದು ಹೇಳಬಹುದಾಗಿದೆಯೋ ಅಷ್ಟು ಕ್ರೆಡಿಟ್‌ನ್ನು ಶೂನ್ಯ ದರದ ಪೂರೈಕೆಗಳನ್ನು ಒಳಗೊಂಡಂಥ ತೆರಿಗೆದಾಯಕ ಪೂರೈಕೆಗಳಿಗೆ ಸೀಮಿತಗೊಳಿಸತಕ್ಕದ್ದು.

(3) ಉಪಪ್ರಕರಣ (2)ರ ಅಡಿಯಲ್ಲಿನ ವಿನಾಯಿತಿ ಪೂರೈಕೆಯ ಮೌಲ್ಯವು, ನಿಯಮಿಸಬಹುದಾದಂಥದಾಗಿರತಕ್ಕದ್ದು ಮತ್ತು ಯಾವ ಪೂರೈಕೆಗಳ ಮೇಲೆ ಪೂರೈಕೆ ಸ್ವೀಕರ್ತನ ತೆರಿಗೆ ಬಾಧ್ಯತೆ ಆಧಾರದಲ್ಲಿ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಸ್ವೀಕರ್ತನು ಬದ್ಧನಾಗಿರುವನೋ ಆ ಪೂರೈಕೆಗಳನ್ನು, ಭದ್ರತಾಪತ್ರಗಳ ವಹಿವಾಟುಗಳನ್ನು, ಭೂಮಿಯ ಮಾರಾಟವನ್ನು ಹಾಗೂ ಅನುಸೂಚಿ II ರ ಕಂಡಿಕೆ 5ರ ಖಂಡ (ಬಿ)ಗೆ ಒಳಪಟ್ಟು, ಕಟ್ಟಡದ ಮಾರಾಟವನ್ನು ಒಳಗೊಳ್ಳತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಗಳಿಗಾಗಿ "ವಿನಾಯಿತಿ ಪೂರೈಕೆಯ ಮೌಲ್ಯ" ಎಂಬ ಪದವು ಅನುಸೂಚಿ IIIರಲ್ಲಿ ಕಂಡಿಕೆ 5ರಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ ಸದರಿ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಚಟುವಟಿಕೆಗಳ ಅಥವಾ ವ್ಯವಹಾರಗಳ ಮೌಲ್ಯವನ್ನು ಒಳಗೊಳ್ಳತಕ್ಕದ್ದಲ್ಲ.

(4) ಠೇವಣಿಗಳನ್ನು ಸ್ವೀಕರಿಸುವ, ಸಾಲಗಳು ಅಥವಾ ಮುಂಗಡಗಳನ್ನು ನೀಡುವ ಮೂಲಕ ಸೇವೆಗಳ ಪೂರೈಕೆಯಲ್ಲಿ ತೊಡಗಿಕೊಂಡಿರುವ ಬ್ಯಾಂಕಿಂಗ್ ಕಂಪನಿಯು ಅಥವಾ ಬ್ಯಾಂಕೇತರ ಹಣಕಾಸು ಕಂಪನಿಯನ್ನು ಒಳಗೊಂಡಂತೆ ಹಣಕಾಸು ಸಂಸ್ಥೆಯು, ಉಪಪ್ರಕರಣ (2)ರ ಉಪಬಂಧಗಳನ್ನು ಪಾಲಿಸುವುದು ಅಥವಾ ಪ್ರತಿ ತಿಂಗಳಲ್ಲಿನ ಸರಕು ಹಾಗೂ ಸೇವೆಗಳು (ಇನ್‌ಪುಟ್ಸ್), ಮೂಲ ಸರಕುಗಳು ಮತ್ತು ಸರಕುದಾರನು ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಸೇವೆಗಳು ಕುರಿತಂತೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಶೇಕಡಾ ಐವತ್ತರಷ್ಟಕ್ಕೆ ಸಮನಾದ ಮೊತ್ತವನ್ನು ಆ ತಿಂಗಳಲ್ಲಿ ಉಪಯೋಗಿಸಿಕೊಳ್ಳುವುದು ಇವುಗಳರೆಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು ಮತ್ತು ಅದರ ನಂತರ ಮಿಕ್ಕಿದ್ದು ಲ್ಯಾಪ್ಸ್ ಆಗತಕ್ಕದ್ದು:

ಪರಂತು, ಒಮ್ಮೆ ಆಯ್ಕೆಯನ್ನು ಮಾಡಿಕೊಂಡ ಮೇಲೆ ಆ ಹಣಕಾಸು ವರ್ಷದ ಉಳಿದ ಭಾಗದಲ್ಲಿ ಆಯ್ಕೆಯನ್ನು ಹಿಂತೆಗೆದುಕೊಳ್ಳತಕ್ಕದ್ದಲ್ಲ:

ಮತ್ತೂ ಪರಂತು, ಒಬ್ಬ ನೋಂದಾಯಿತ ವ್ಯಕ್ತಿಯು ಅದೇ ಪರ್ಮನೆಂಟ್ ಅಕೌಂಟ್ ನಂಬರನ್ನು ಹೊಂದಿರುವ ಮತ್ತೊಬ್ಬ ನೋಂದಾಯಿತ ವ್ಯಕ್ತಿಗೆ ಮಾಡಿದ ಪೂರೈಕೆಗಳ ಮೇಲೆ ಸಂದಾಯ ಮಾಡಿದ ತೆರಿಗೆಗೆ ಶೇಕಡ ಐವತ್ತರ ನಿರ್ಬಂಧವು ಅನ್ವಯವಾಗತಕ್ಕದ್ದಲ್ಲ.

(5) ಪ್ರಕರಣ 16ರ ಉಪಪ್ರಕರಣ (1)ರಲ್ಲಿ ಮತ್ತು ಪ್ರಕರಣ 18ರ ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಕೆಳಕಂಡವುಗಳಿಗೆ ಎಂದರೆ:–

(ಎ) ಹದಿಮೂರು ವ್ಯಕ್ತಿಗಳಿಗಿಂತ ಹೆಚ್ಚಲ್ಲದ (ಚಾಲಕನನ್ನು ಒಳಗೊಂಡು) ಅನುಮೋದಿತ ಆಸನ ಸಾಮರ್ಥ್ಯ ಹೊಂದಿರುವ ವ್ಯಕ್ತಿಗಳ ಸಾಗಾಣಿಕೆಗಾಗಿ ಇರುವ ಮೋಟಾರು ವಾಹನಗಳನ್ನು ಅವರು ಈ ಕೆಳಕಂಡ ತೆರಿಗೆದಾಯಕ ಪೂರೈಕೆಗಳನ್ನು ಮಾಡುವುದಕ್ಕಾಗಿ ಉಪಯೋಗಿಸಿದ ಹೊರತು, ಎಂದರೆ:–

(A) ಅಂಥ ಮೋಟಾರು ವಾಹನಗಳ ಮುಂದುವರೆದ ಪೂರೈಕೆಗಾಗಿ; ಅಥವಾ

(B) ಪ್ರಯಾಣಿಕರ ಸಾಗಾಣಿಕೆಗಾಗಿ; ಅಥವಾ

(C) ಅಂಥ ಮೋಟಾರು ವಾಹನಗಳ ಚಾಲನೆಯಲ್ಲಿ ತರಬೇತಿಯನ್ನು ನೀಡುವುದಕ್ಕಾಗಿ;

(ಎಎ) ನೌಕೆಗಳು ಮತ್ತು ವಿಮಾನವನ್ನು ಅವರು ಉಪಯೋಗಿಸಿದಾಗ ಹೊರತು,–

(i) ಈ ಕೆಳಕಂಡ ತೆರಿಗೆದಾಯಕ ಪೂರೈಕೆಗಳನ್ನು ಮಾಡುವುದಕ್ಕಾಗಿ, ಎಂದರೆ:–

(A) ಅಂಥ ನೌಕೆಗಳು ಅಥವಾ ವಿಮಾನದ ಮುಂದುವರೆದ ಪೂರೈಕೆಗಾಗಿ; ಅಥವಾ

(B) ಪ್ರಯಾಣಿಕರ ಸಾಗಾಣಿಕೆಗಾಗಿ; ಅಥವಾ

(C) ಅಂಥ ನೌಕೆಗಳ ಸಮುದ್ರಯಾನದಲ್ಲಿ ತರಬೇತಿಯನ್ನು ನೀಡುವುದಕ್ಕಾಗಿ; ಅಥವಾ

(D) ಅಂಥ ವಿಮಾನದ ಹಾರಾಟಕ್ಕಾಗಿ ತರಬೇತಿಯನ್ನು ನೀಡುವುದಕ್ಕಾಗಿ;

(ii) ಸರಕುಗಳ ಸಾಗಾಣಿಕೆಗಾಗಿ;

(ಎಬಿ) ಖಂಡ (ಎ) ಅಥವಾ ಖಂಡ (ಎಎ) ಯಲ್ಲಿ ಉಲ್ಲೇಖಿಸಲಾದ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನಕ್ಕೆ ಸಂಬಂಧಿಸಿದಷ್ಟರ ಮಟ್ಟಿಗೆ ಅವುಗಳ ಸಾಮಾನ್ಯ ವಿಮೆಯ ಸೇವೆಗಳು, ಸೇವೆಗಳು, ದುರಸ್ತಿ ಮತ್ತು ನಿರ್ವಹಣೆ:

ಪರಂತು, ಅಂಥ ಸೇವೆಗಳ ಸಂಬಂಧದಲ್ಲಿ,–

(i) ಖಂಡ (ಎ) ಅಥವಾ ಖಂಡ (ಎಎ) ಯಲ್ಲಿ ಉಲ್ಲೇಖಿಸಲಾದ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನವನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಬಳಸಲಾಗಿದ್ದರೆ;

(ii) (I) ಅಂಥ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನದ ತಯಾರಿಕೆಯಲ್ಲಿ; ಅಥವಾ

(II) ಅವನಿಂದ ವಿಮೆ ಮಾಡಲಾದ ಅಂಥ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನದ ಸಂಬಂಧದಲ್ಲಿ ಸಾಮಾನ್ಯ ವಿಮೆಯ ಸೇವೆಗಳ ಪೂರೈಕೆಯಲ್ಲಿ

–ನಿರತನಾದ ತೆರಿಗೆದಾಯಕ ವ್ಯಕ್ತಿಯು ಸ್ವೀಕರಿಸಿದ್ದರೆ

–ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಲಭ್ಯವಾಗತಕ್ಕದ್ದು.

(ಬಿ) ಈ ಕೆಳಕಂಡ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ,–

(i) ಖಂಡ (ಎ) ಅಥವಾ ಖಂಡ (ಎಎ) ಯಲ್ಲಿ ಉಲ್ಲೇಖಿಸಿದ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನವನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಬಳಸಿದುದನ್ನು ಹೊರತುಪಡಿಸಿ ಆಹಾರ ಮತ್ತು ಪಾನೀಯಗಳು, ಹೊರಾಂಗಣ ಆಹಾರ ಸರಬರಾಜು, ಸೌಂದರ್ಯವರ್ಧನ, ಆರೋಗ್ಯ ಸೇವೆಗಳು,

ಸೌಂದರ್ಯವರ್ಧಕ ಮತ್ತು ಸುರೂಪಿಕಾ ಶಸ್ತ್ರಚಿಕಿತ್ಸೆ, ಇವುಗಳಿಗೆ ಗುತ್ತಿಗೆ, ಗೇಣಿ ಅಥವಾ ಬಾಡಿಗೆಗಾಗಿ ಜೀವ ವಿಮೆ ಮತ್ತು ಆರೋಗ್ಯ ವಿಮೆಗೆ:

ಪರಂತು, ಸರಕುಗಳು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಅಥವಾ ತೆರಿಗೆದಾಯಕ ಸಂಯೋಜಿತ ಅಥವಾ ಮಿಶ್ರ ಪೂರೈಕೆಯ ಭಾಗವಾಗಿ ಹೊರಗಡೆಗೆ ತೆರಿಗೆದಾಯಕ ಪೂರೈಕೆ ಮಾಡಲು ನೋಂದಾಯಿತ ವ್ಯಕ್ತಿಯು ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಒಳ ಪೂರೈಕೆಗೆ ಬಳಸಿದಾಗ ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಸಂಬಂಧದಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಲಭ್ಯವಾಗತಕ್ಕದ್ದು;

(ii) ಕ್ಲಬ್‌ನ, ಆರೋಗ್ಯ ಹಾಗೂ ಫಿಟ್ನೆಸ್ ಕೇಂದ್ರದ ಸದಸ್ಯತ್ವಕ್ಕೆ; ಮತ್ತು

(iii) ರಜೆ ಮೇಲಿನ ಅಥವಾ ಸ್ವಂತ ಊರಿಗೆ ಪ್ರಯಾಣ ರಿಯಾಯಿತಿಯಂಥ ಪ್ರಯಾಣದ ಮೇಲೆ ನೌಕರರಿಗೆ ನೀಡಲಾಗುವ ಪ್ರಯಾಣದ ಸೌಲಭ್ಯಗಳು:

ಪರಂತು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ, ನಿಯೋಜಕನು ತನ್ನ ಉದ್ಯೋಗಿಗಳಿಗೆ ಅದನ್ನು ಒದಗಿಸಲು ಬದ್ಧನಾದರೆ ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಸಂಬಂಧದಲ್ಲಿನ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಲಭ್ಯವಾಗತಕ್ಕದ್ದು.

(ಸಿ) ಕಾಮಗಾರಿ ಕರಾರು ಸೇವೆಗಳು, ಕಾಮಗಾರಿ ಕರಾರು ಸೇವೆಯ ಮುಂದುವರೆದ ಪೂರೈಕೆಗಾಗಿ ಪೂರೈಕೆದಾರನು ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಸೇವೆಯಾಗಿದ್ದರೆ ಅದರ ಹೊರತು (ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲದ) ಸ್ಥಿರಸ್ವತ್ತಿನ ನಿರ್ಮಾಣಕ್ಕಾಗಿ ಮಾಡಿದ ಅಂಥ ಕಾಮಗಾರಿ ಕರಾರು ಸೇವೆಗಳ ಪೂರೈಕೆಗೆ;

(ಡಿ) ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ವ್ಯವಹಾರ ನಡೆಯುತ್ತಿರುವಾಗ ಅಥವಾ ಅದರ ಮುಂದುವರಿಕೆಯಲ್ಲಿ ಬಳಕೆ ಮಾಡಿರುವುದನ್ನೂ ಒಳಗೊಂಡಂತೆ ತೆರಿಗೆದಾಯಕ ವ್ಯಕ್ತಿಯು ತನ್ನ ಸ್ವಂತ ಜವಾಬ್ದಾರಿ ಮೇಲೆ ಸ್ಥಿರ ಸ್ವತ್ತಿನ (ಸ್ಥಾವರ ಅಥವಾ ಯಂತ್ರೋಪಕರಣಗಳಲ್ಲದ) ನಿರ್ಮಾಣಕ್ಕಾಗಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸ್ವೀಕರಿಸಿರುವ;

**ವಿವರಣೆ.–** ಖಂಡ (ಸಿ) ಮತ್ತು ಖಂಡ (ಡಿ)ಗಳ ಉದ್ದೇಶಗಳಿಗಾಗಿ, 'ನಿರ್ಮಾಣ'ದಲ್ಲಿ ಸದರಿ ಸ್ಥಿರಸ್ವತ್ತಿಗೆ ಮಾಡಿರುವ ಪುನರ್-ನಿರ್ಮಾಣ, ನವೀಕರಣ, ಸೇರ್ಪಡೆಗಳು ಅಥವಾ ಮಾರ್ಪಾಟುಗಳು ಅಥವಾ ದುರಸ್ತಿಗಳನ್ನು ಇವು ಬಂಡವಾಳೀಕೃತಗೊಂಡಿರುವಷ್ಟರಮಟ್ಟಿಗೆ ಒಳಗೊಳ್ಳುತ್ತದೆ.

(ಇ) ಪ್ರಕರಣ 10ರ ಅಡಿಯಲ್ಲಿ ಯಾವ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೇಲೆ ಸಂದಾಯ ಮಾಡಲಾಗಿದೆಯೋ ಆ ಸರಕುಗಳು ಅಥವಾ ಸೇವೆಗಳಿಗೆ ಅಥವಾ ಅವೆರಡಕ್ಕೆ;

(ಎಫ್) ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ಆತನು ಆಮದು ಮಾಡಿಕೊಂಡಿರುವ ಸರಕುಗಳ ಹೊರತು, ಸ್ವೀಕರಿಸಿರುವ ಸರಕು ಅಥವಾ ಸೇವೆಗಳಿಗೆ ಅಥವಾ ಅವುಗಳೆರಡಕ್ಕೆ;

(ಜಿ) ಸ್ವಂತ ಅನುಭೋಗಕ್ಕಾಗಿ ಬಳಸಿದ ಸರಕು ಅಥವಾ ಸೇವೆಗಳಿಗೆ ಅಥವಾ ಅವುಗಳೆರಡಕ್ಕೆ;

(ಹೆಚ್) ಕಳೆದುಹೋದ, ಕಳ್ಳತನವಾದ, ನಾಶಗೊಂಡ, ಲೆಕ್ಕದಿಂದ ತೆಗೆದುಹಾಕಿದ ಅಥವಾ ಉಡುಗೊರೆಯಾಗಿ ಅಥವಾ ಉಚಿತ ಮಾದರಿಗಳಾಗಿ ವಿಲೆ ಮಾಡಿದ ಸರಕುಗಳಿಗೆ; ಮತ್ತು

(ಐ) ಪ್ರಕರಣ 74, 129 ಮತ್ತು 130ರ ಉಪಬಂಧಗಳಿಗೆ ಅನುಸಾರವಾಗಿ ಸಂದಾಯ ಮಾಡಿದ ಯಾವುದೇ ತೆರಿಗೆಗೆ

– ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಲಭ್ಯವಾಗತಕ್ಕದ್ದಲ್ಲ.

(6) ಸರ್ಕಾರವು ಉಪಪ್ರಕರಣ (1)ರಲ್ಲಿ ಮತ್ತು (2)ರಲ್ಲಿ ಹೇಳಿರುವ ಕ್ರೆಡಿಟ್ ಯಾವ ರೀತಿಯಲ್ಲಿ ಕೊಡಬೇಕೋ ಆ ರೀತಿಯ ವಿಧಾನವನ್ನು ನಿಯಮಿಸಬಹುದು.

**ವಿವರಣೆ.–** ಈ ಅಧ್ಯಾಯದ ಮತ್ತು ಅಧ್ಯಾಯ VI ರ ಉದ್ದೇಶಗಳಿಗಾಗಿ, 'ಸ್ಥಾವರ ಮತ್ತು ಯಂತ್ರೋಪಕರಣ' ಎಂದರೆ, ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಹೊರಗಡೆಗೆ ಪೂರೈಕೆ ಮಾಡುವುದಕ್ಕಾಗಿ ಬಳಕೆಯಾದ, ಅಡಿಪಾಯದ ಅಥವಾ ರಚನಾಧಾರದ ಮೂಲಕ ಭೂಮಿಗೆ ನೆಲೆಗೊಳಿಸಿದ ಸಲಕರಣೆಗಳು, ಸಾಧನ ಸಾಮಗ್ರಿಗಳು ಮತ್ತು ಯಂತ್ರೋಪಕರಣಗಳು ಹಾಗೂ ಅಂಥ ಅಡಿಪಾಯ ಮತ್ತು ರಚನಾಧಾರಗಳನ್ನು ಒಳಗೊಂಡಿರುತ್ತವೆ, ಆದರೆ ಈ ಕೆಳಕಂಡವುಗಳು ಎಂದರೆ:–

(i) ಭೂಮಿ, ಕಟ್ಟಡ ಅಥವಾ ಇತರ ಯಾವುದೇ ಸಿವಿಲ್ ರಚನೆಗಳು;

(ii) ದೂರ ಸಂಪರ್ಕ ಗೋಪುರಗಳು; ಮತ್ತು

(iii) ಕಾರ್ಖಾನೆಯ ಆವರಣದ ಹೊರಗೆ ಹಾಕಲಾಗಿರುವ ಪೈಪ್‌ಲೈನ್‌ಗಳು

– ಒಳಗೊಳ್ಳುವುದಿಲ್ಲ.

**18. ವಿಶೇಷ ಸಂದರ್ಭಗಳಲ್ಲಿ ಕ್ರೆಡಿಟ್‌ನ ಲಭ್ಯತೆ.–** (1) ನಿಯಮಿಸಬಹುದಾದಂಥ ಷರತ್ತುಗಳಿಗೆ ಹಾಗೂ ನಿರ್ಬಂಧಗಳಿಗೆ ಒಳಪಟ್ಟು,–

(ಎ) ಯಾರೇ ವ್ಯಕ್ತಿಯು ಯಾವ ದಿನಾಂಕದಂದು ನೋಂದಣಿ ಮಾಡಿಸಲು ಬದ್ಧನಾಗುವನೋ ಆ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಿದ್ದರೆ ಮತ್ತು ಅಂಥ ನೋಂದಣಿಯನ್ನು ಮಂಜೂರು ಮಾಡಿದ್ದರೆ, ಈ ಅಧಿನಿಯಮದ ಅಡಿಯಲ್ಲಿ ಅವನು ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬದ್ಧನಾಗುವ ದಿನಾಂಕದ ನಿಕಟಪೂರ್ವದ ದಿನದಂದು ದಾಸ್ತಾನಿನಲ್ಲಿರುವ ಸರಕುಗಳಿಗೆ ಹಾಗೂ ಸೇವೆಗಳಿಗೆ ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ ಸರಕುಗಳಲ್ಲಿ ಒಳಗೊಂಡಿರುವ ಸರಕುಗಳಿಗೆ ಹಾಗೂ ಸೇವೆಗಳಿಗೆ ಸಂಬಂಧಿಸಿದಂತೆ ಜಮೆ ಮಾಡಿರುವ ಇನ್‌ಪುಟ್ ಟ್ಯಾಕ್ಸನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು;

(ಬಿ) ಪ್ರಕರಣ 25ರ ಉಪಪ್ರಕರಣ (3)ರ ಅಡಿಯಲ್ಲಿ ನೋಂದಣಿಯನ್ನು ಮಾಡಿಸುವ ವ್ಯಕ್ತಿಯು, ನೋಂದಣಿಯು ಮಂಜೂರಾದ ದಿನಾಂಕದ ನಿಕಟಪೂರ್ವ ದಿನದಂದು ದಾಸ್ತಾನಿನಲ್ಲಿರುವ ಸರಕುಗಳಿಗೆ ಹಾಗೂ ಸೇವೆಗಳಿಗೆ ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ ಸರಕುಗಳಲ್ಲಿ ಒಳಗೊಂಡಿರುವ ಸರಕುಗಳಿಗೆ ಹಾಗೂ ಸೇವೆಗಳಿಗೆ ಸಂಬಂಧಿಸಿದಂತೆ ಜಮೆ ಮಾಡಿರುವ ಇನ್‌ಪುಟ್ ಟ್ಯಾಕ್ಸನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(ಸಿ) ಯಾರೇ ನೋಂದಾಯಿತ ವ್ಯಕ್ತಿಯು, ಪ್ರಕರಣ 10ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವುದು ನಿಂತು ಹೋದಾಗ ಅವನು, ಪ್ರಕರಣ 9ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬದ್ಧನಾಗುವ ದಿನಾಂಕದ ನಿಕಟಪೂರ್ವ ದಿನದಂದು ದಾಸ್ತಾನಿನಲ್ಲಿರುವ ಸರಕುಗಳು ಮತ್ತು ಸೇವೆಗಳಿಗೆ ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ ಸರಕುಗಳಲ್ಲಿ ಮತ್ತು ಮೂಲ ಸರಕುಗಳಲ್ಲಿ ಒಳಗೊಂಡಿರುವ ಸರಕುಗಳಿಗೆ ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಜಮೆ ಮಾಡಿರುವ ಇನ್‌ಪುಟ್ ಟ್ಯಾಕ್ಸನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಮೂಲ ಸರಕುಗಳ ಮೇಲಿನ ಕ್ರೆಡಿಟ್ ನಿಯಮಿಸಬಹುದಾದಂಥ ಶೇಕಡಾವಾರು ಅಂಶಗಳಷ್ಟು ಕಡಿಮೆ ಮಾಡತಕ್ಕದ್ದು.

(ಡಿ) ಯಾರೇ ನೋಂದಾಯಿತ ವ್ಯಕ್ತಿಯು ಮಾಡಿದ, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ವಿನಾಯಿತಿ ಪೂರೈಕೆಯು ತೆರಿಗೆದಾಯಕ ಪೂರೈಕೆಯಾದಾಗ, ಅಂಥ ವಿನಾಯಿತಿ ಪೂರೈಕೆಯು ತೆರಿಗೆದಾಯಕವಾಗುವ ದಿನಾಂಕದ ನಿಕಟಪೂರ್ವ ದಿನದಂದು ದಾಸ್ತಾನಿನಲ್ಲಿರುವ ಸರಕುಗಳಿಗೆ ಮತ್ತು ಸೇವೆಗಳಿಗೆ ಮತ್ತು ಅಂಥ ವಿನಾಯಿತಿ ಪೂರೈಕೆಗೆ ಸಂಬಂಧಿಸಿದ ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ ಸರಕುಗಳಲ್ಲಿ ಒಳಗೊಂಡಿರುವ ಸರಕುಗಳಿಗೆ ಮತ್ತು ಸೇವೆಗಳಿಗೆ ಹಾಗೂ ಅಂಥ ವಿನಾಯಿತಿ ಪೂರೈಕೆಗಾಗಿ ಪ್ರತ್ಯೇಕವಾಗಿ ಬಳಸಿದ ಮೂಲ ಸರಕುಗಳಿಗೆ ಸಂಬಂಧಿಸಿದ ಜಮೆ ಮಾಡಿರುವ ಇನ್‌ಪುಟ್ ಟ್ಯಾಕ್ಸನ್ನು ತೆಗೆದುಕೊಳ್ಳಲು ಆ ನೋಂದಾಯಿತ ವ್ಯಕ್ತಿಯು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಮೂಲ ಸರಕುಗಳ ಮೇಲಿನ ಕ್ರೆಡಿಟ್ ನಿಯಮಿಸಬಹುದಾದಂಥ ಶೇಕಡವಾರು ಅಂಶಗಳಷ್ಟು ಕಡಿಮೆ ಮಾಡತಕ್ಕದ್ದು.

(2) ಯಾರೇ ನೋಂದಾಯಿತ ವ್ಯಕ್ತಿಯು, ಆತನಿಗೆ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಯಾವುದೇ ಪೂರೈಕೆಗೆ ಸಂಬಂಧಿಸಿದಂತೆ, ಅಂಥ ಪೂರೈಕೆಗೆ ಸಂಬಂಧಿಸಿದಂತೆ ನೀಡಿದ ತೆರಿಗೆ ದರಪಟ್ಟಿಯ ದಿನಾಂಕದಿಂದ ಒಂದು ವರ್ಷ ಮುಕ್ತಾಯಗೊಂಡ ನಂತರ ಉಪಪ್ರಕರಣ (1)ರ ಅಡಿಯಲ್ಲಿ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ತೆಗೆದುಕೊಳ್ಳುವಂತಿಲ್ಲ.

(3) ಬಾಧ್ಯತೆಗಳ ವರ್ಗಾವಣೆಗಾಗಿ ನಿರ್ದಿಷ್ಟ ನಿಬಂಧನೆಗಳ ಸಹಿತ, ವ್ಯವಹಾರದ ಮಾರಾಟ, ವಿಲೀನ, ಬೇರ್ಪಡೆ, ಸಮ್ಮಿಳಿತ, ಭೋಗ್ಯ ಅಥವಾ ವರ್ಗಾವಣೆ ಇವುಗಳಿಂದಾಗಿ ನೋಂದಾಯಿತ ವ್ಯಕ್ತಿಯ ಸಂರಚನೆಯಲ್ಲಿ ಬದಲಾವಣೆಯಾದಾಗ, ಆತನ ವಿದ್ಯುನ್ಮಾನ ಜಮಾ ಖಾತೆಯಲ್ಲಿ ಬಳಕೆಯಾಗದೆ ಉಳಿದಿರುವ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ, ಅಂಥ ಮಾರಾಟಗೊಂಡ, ವಿಲೀನಗೊಂಡ, ಬೇರ್ಪಡೆಗೊಂಡ, ಸಮ್ಮಿಳಿತಗೊಂಡ,

ಭೋಗ್ಯಕ್ಕೆ ನೀಡಲಾದ ಅಥವಾ ವರ್ಗಾವಣೆಗೊಂಡ ವ್ಯವಹಾರಕ್ಕೆ ವರ್ಗಾಯಿಸಲು ಸದರಿ ತೆರಿಗೆದಾಯಕ ವ್ಯಕ್ತಿಗೆ ಅನುಮತಿ ಕೊಡತಕ್ಕದ್ದು.

(4) ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಉಪಯೋಗಿಸಿರುವ ಯಾರೇ ನೋಂದಾಯಿತ ವ್ಯಕ್ತಿಯು ಪ್ರಕರಣ 10ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡಲು ಆಯ್ಕೆ ಮಾಡಿಕೊಂಡಾಗ ಅಥವಾ ಆತನಿಂದ ಪೂರೈಕೆಯಾಗುವ ಸರಕು ಅಥವಾ ಸೇವೆಗಳಿಗೆ ಅಥವಾ ಅವುಗಳೆರಡಕ್ಕೂ ಸಂಪೂರ್ಣವಾಗಿ ವಿನಾಯಿತಿ ದೊರೆತಾಗ, ಸಂದರ್ಭಾನುಸಾರವಾಗಿ ಅಂಥ ಬದಲಾವಣೆಗೊಂಡ ದಿನಾಂಕದ ಅಥವಾ ಅಂಥ ವಿನಾಯಿತಿಗೊಂಡ ದಿನಾಂಕದ ನಿಕಟಪೂರ್ವ ದಿನದಂದು ದಾಸ್ತಾನಿನಲ್ಲಿರುವ ಸರಕುಗಳಿಗೆ ಮತ್ತು ಸೇವೆಗಳಿಗೆ ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ ಸರಕುಗಳಲ್ಲಿ ಒಳಗೊಂಡಿರುವ ಸರಕುಗಳಿಗೆ ಮತ್ತು ಸೇವೆಗಳಿಗೆ ಅಥವಾ ಮೂಲ ಸರಕುಗಳಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ಶೇಕಡಾವಾರು ಅಂಶಗಳಷ್ಟು ಕಡಿಮೆ ಮಾಡಿದಷ್ಟು, ಜಮೆ ಮಾಡಿರುವ ಇನ್‌ಪುಟ್ ಟ್ಯಾಕ್ಸ್‌ನ ಜಮೆಗೆ ಸಮನಾದ ಮೊತ್ತವನ್ನು ಆತನ ವಿದ್ಯುನ್ಮಾನ ಜಮಾ ಖಾತೆಗೆ ಅಥವಾ ವಿದ್ಯುನ್ಮಾನ ನಗದು ಖಾತೆಗೆ  ಖರ್ಚು ಹಾಕುವ ಮುಖಾಂತರ ಸಂದಾಯ ಮಾಡತಕ್ಕದ್ದು:

ಪರಂತು, ಅಂಥ ಮೊತ್ತವನ್ನು ಸಂದಾಯ ಮಾಡಿದ ನಂತರ ಆತನ ವಿದ್ಯುನ್ಮಾನ ಜಮೆ ಖಾತೆಯಲ್ಲಿ ಉಳಿದಿರುವ ಯಾವುದೇ ಜಮೆ ಮಾಡಿರುವ ಇನ್‌ಪುಟ್ ಟ್ಯಾಕ್ಸ್ ಜಮೆಯು ಲ್ಯಾಪ್ಸ್ ಆಗತಕ್ಕದ್ದು.

(5) ಉಪಪ್ರಕರಣ (1)ರ ಅಡಿಯಲ್ಲಿನ ಕ್ರೆಡಿಟ್ ಮೊತ್ತವನ್ನು ಮತ್ತು ಉಪಪ್ರಕರಣ (4)ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊತ್ತವನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಲೆಕ್ಕ ಹಾಕತಕ್ಕದ್ದು.

(6) ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮೂಲ ಸರಕುಗಳ ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ ಪೂರೈಕೆಗಾಗಿ ತೆಗೆದುಕೊಂಡಿದ್ದ ಸಂದರ್ಭದಲ್ಲಿ, ನೋಂದಾಯಿತ ವ್ಯಕ್ತಿಯು, ಸದರಿ ಮೂಲ ಸರಕುಗಳ ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ತೆಗೆದುಕೊಂಡ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗೆ ಸಮನಾದ ಮೊತ್ತದಲ್ಲಿ ನಿಯಮಿಸಬಹುದಾದಂಥ ಶೇಕಡವಾರು ಅಂಶಗಳಷ್ಟನ್ನು ಕಡಿಮೆ ಮಾಡಿದಷ್ಟು ಮೊತ್ತ ಅಥವಾ ಅಂಥ ಮೂಲ ಸರಕುಗಳ ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ, ಪ್ರಕರಣ 15ರ ಅಡಿಯಲ್ಲಿ ನಿರ್ಧರಿಸಿದ, ವಹಿವಾಟಿನ ಮೌಲ್ಯದ ಮೇಲೆ ತೆರಿಗೆ, ಇವುಗಳಲ್ಲಿ ಯಾವುದು ಅಧಿಕವೋ ಅಷ್ಟು ಮೊತ್ತವನ್ನು ಸಂದಾಯ ಮಾಡತಕ್ಕದ್ದು:

ಪರಂತು, ರಿಫ್ರ್ಯಾಕ್ಟರಿ ಇಟ್ಟಿಗೆಗಳ, ಎರಕಗಳ ಮತ್ತು ಅಚ್ಚುಗಳ, ಜಿಗ್ಸ್ ಮತ್ತು ಫಿಕ್ಚರ್ಸ್ ಗಳ ಚೂರುಪಾರುಗಳನ್ನು (scarp) ಪೂರೈಕೆ ಮಾಡಿದ್ದರೆ, ತೆರಿಗೆದಾಯಕ ವ್ಯಕ್ತಿಯು ಪ್ರಕರಣ 15ರ ಅಡಿಯಲ್ಲಿ ನಿರ್ಧರಿಸಿದ, ಅಂಥ ಸರಕುಗಳ ವಹಿವಾಟಿನ ಮೌಲ್ಯದ ಮೇಲೆ ತೆರಿಗೆಯನ್ನು ಸಂದಾಯ ಮಾಡಬಹುದು.

**19. ಜಾಬ್ ವರ್ಕ್‌ಗಾಗಿ ಕಳುಹಿಸಿದ ಇನ್‌ಪುಟ್ಸ್‌ಗೆ ಮತ್ತು ಮೂಲ ಸರಕುಗಳಿಗೆ ಸಂಬಂಧಿಸಿದಂತೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತೆಗೆದುಕೊಳ್ಳುವುದು.–** (1) ಜಾಬ್ ವರ್ಕರ್‌ನಿಗೆ ಜಾಬ್ ವರ್ಕ್‌ಗಾಗಿ ಕಳುಹಿಸಿದ ಇನ್‌ಪುಟ್ಸ್ ಮೇಲೆ, ನಿಯಮಿಸಬಹುದಾದಂಥ ಷರತ್ತುಗಳಿಗೆ ಹಾಗೂ ನಿರ್ಬಂಧಗಳಿಗೆ ಒಳಪಟ್ಟು, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತೆಗೆದುಕೊಳ್ಳಲು ಪ್ರಧಾನಕರ್ತನಿಗೆ ಅನುಮತಿ ನೀಡತಕ್ಕದ್ದು.

(2) ಪ್ರಕರಣ 16ರ ಉಪಪ್ರಕರಣ (2)ರ ಖಂಡ (ಬಿ)ಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಧಾನಕರ್ತನು ಇನ್‌ಪುಟ್ಸ್‌ನನ್ನು ಆತನ ವ್ಯವಹಾರದ ಸ್ಥಳಕ್ಕೆ ಮೊದಲು ತರದೆ, ಜಾಬ್ ವರ್ಕ್‌ಗಾಗಿ ಜಾಬ್ ವರ್ಕರ್‌ನಿಗೆ ನೇರವಾಗಿ ಕಳುಹಿಸಿದ್ದರೂ ಸಹ, ಇನ್‌ಪುಟ್ಸ್ ಮೇಲೆ ಇನ್‌ಪುಟ್ ಟ್ಯಾಕ್ಸ್ ತೆರಿಗೆ ಕ್ರೆಡಿಟನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(3) ಪ್ರಧಾನಕರ್ತನು ಜಾಬ್ ವರ್ಕ್‌ಗಾಗಿ ಕಳುಹಿಸಿರುವ ಇನ್‌ಪುಟ್ಸ್‌ನನ್ನು, ಜಾಬ್ ವರ್ಕ್ ಪೂರ್ಣಗೊಂಡ ನಂತರ ಮರಳಿ ಸ್ವೀಕರಿಸದಿದ್ದರೆ ಅಥವಾ ಅವುಗಳನ್ನು ಹೊರಕ್ಕೆ ಕಳುಹಿಸಿದ ಒಂದು ವರ್ಷದೊಳಗಾಗಿ ಪ್ರಕರಣ 143ರ ಉಪಪ್ರಕರಣ (1)ರ ಖಂಡ (ಎ)ಗೆ ಅಥವಾ ಖಂಡ (ಬಿ)ಗೆ ಅನುಸಾರವಾಗಿ ಜಾಬ್ ವರ್ಕರ್‌ನ ವ್ಯವಹಾರ ಸ್ಥಳದಿಂದ ಪೂರೈಕೆ ಮಾಡದಿದ್ದರೆ, ಪ್ರಧಾನಕರ್ತನು ಜಾಬ್ ವರ್ಕರ್‌ನಿಗೆ ಸದರಿ ಇನ್‌ಪುಟ್ಸನ್ನು ಹೊರ ಕಳುಹಿಸಿದ ದಿನದಂದೇ, ಅಂಥ ಇನ್‌ಪುಟ್ಸನ್ನು ಪೂರೈಕೆ ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು:

ಪರಂತು, ಜಾಬ್ ವರ್ಕರ್‌ನಿಗೆ ಇನ್‌ಪುಟ್ಸನ್ನು ನೇರವಾಗಿ ಕಳುಹಿಸಿದ್ದರೆ, ಒಂದು ವರ್ಷದ ಅವಧಿಯನ್ನು ಜಾಬ್ ವರ್ಕರ್‌ನು ಇನ್‌ಪುಟ್ಸನ್ನು ಸ್ವೀಕರಿಸಿದ ದಿನಾಂಕದಿಂದ ಲೆಕ್ಕಹಾಕತಕ್ಕದ್ದು.

(4) ಜಾಬ್ ವರ್ಕರ್‌ನಿಗೆ ಜಾಬ್ ವರ್ಕ್‌ಗಾಗಿ ಕಳುಹಿಸಿದ ಮೂಲ ಸರಕುಗಳ ಮೇಲೆ, ನಿಯಮಿಸಬಹುದಾದಂಥ ಷರತ್ತುಗಳಿಗೆ ಹಾಗೂ ನಿರ್ಬಂಧಗಳಿಗೆ ಒಳಪಟ್ಟು, ಪ್ರಧಾನಕರ್ತನಿಗೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗೆ ಅನುಮತಿ ನೀಡತಕ್ಕದ್ದು.

(5) ಪ್ರಕರಣ 16ರ ಉಪಪ್ರಕರಣ (2)ರ ಖಂಡ (ಬಿ)ಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಧಾನಕರ್ತನು ಮೂಲ ಸರಕುಗಳನ್ನು ಆತನ ವ್ಯವಹಾರದ ಸ್ಥಳಕ್ಕೆ ಮೊದಲು ತರದೆ, ಜಾಬ್ ವರ್ಕ್‌ಗಾಗಿ ಜಾಬ್ ವರ್ಕರ್‌ನಿಗೆ ನೇರವಾಗಿ ಕಳುಹಿಸಿದ್ದರೂ ಸಹ, ಮೂಲ ಸರಕುಗಳ ಮೇಲೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(6) ಜಾಬ್ ವರ್ಕ್‌ಗಾಗಿ ಕಳುಹಿಸಿರುವ ಮೂಲ ಸರಕುಗಳನ್ನು ಪ್ರಧಾನಕರ್ತನು, ಅವುಗಳನ್ನು ಹೊರಕ್ಕೆ ಕಳುಹಿಸಿದ ಮೂರು ವರ್ಷದೊಳಗಾಗಿ ಮರಳಿ ಸ್ವೀಕರಿಸದಿದ್ದರೆ, ಸದರಿ ಮೂಲ ಸರಕುಗಳನ್ನು ಯಾವ ದಿನದಂದು ಹೊರಕ್ಕೆ ಕಳುಹಿಸಲಾಗಿದೆಯೋ ಆ ದಿನದಂದೇ ಅಂಥ ಮೂಲ ಸರಕುಗಳನ್ನು ಪ್ರಧಾನ ಕರ್ತನು ಜಾಬ್ ವರ್ಕರ್‌ನಿಗೆ ಪೂರೈಕೆ ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು:

ಪರಂತು, ಜಾಬ್ ವರ್ಕರ್‌ನಿಗೆ ಮೂಲ ಸರಕುಗಳನ್ನು ನೇರವಾಗಿ ಕಳುಹಿಸಿದ್ದರೆ, ಮೂರು ವರ್ಷದ ಅವಧಿಯನ್ನು ಜಾಬ್ ವರ್ಕರ್‌ನು ಮೂಲ ಸರಕುಗಳನ್ನು ಸ್ವೀಕರಿಸಿದ ದಿನಾಂಕದಿಂದ ಲೆಕ್ಕಹಾಕತಕ್ಕದ್ದು.

(7) ಉಪಪ್ರಕರಣ (3) ಅಥವಾ ಉಪಪ್ರಕರಣ (6)ರಲ್ಲಿ ಏನೇ ಒಳಗೊಂಡಿರುವುದು ಯಾವುದೂ ಜಾಬ್ ವರ್ಕರ್‌ನಿಗೆ ಜಾಬ್ ವರ್ಕ್‌ಗಾಗಿ ಕಳುಹಿಸಿದ ಎರಕಗಳು ಮತ್ತು ಅಚ್ಚುಗಳು, ಜಿಗ್ಸ್ ಮತ್ತು ಫಿಕ್ಚರುಗಳಿಗೆ ಅನ್ವಯವಾಗತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ, "ಪ್ರಧಾನಕರ್ತ" ಎಂದರೆ, ಪ್ರಕರಣ 143ರಲ್ಲಿ ಹೇಳಿರುವ ವ್ಯಕ್ತಿ.

**20. ಇನ್‌ಪುಟ್ ಸರ್ವಿಸ್ ಹಂಚಿಕೆದಾರನಿಂದ ಕ್ರೆಡಿಟ್‌ನ ಹಂಚಿಕೆಯ ವಿಧಾನ.–** (1) ಇನ್‌ಪುಟ್ಸ್ ಸರ್ವಿಸ್ ಹಂಚಿಕೆದಾರನು ನಿಯಮಿಸಬಹುದಾದಂಥ ವಿಧಾನದಲ್ಲಿ ಹಂಚಬೇಕಾದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಮೊತ್ತವನ್ನು

ಒಳಗೊಂಡಿರುವ ದಸ್ತಾವೇಜನ್ನು ನೀಡುವುದರ ಮೂಲಕ ಕೇಂದ್ರ ತೆರಿಗೆ ಕ್ರೆಡಿಟನ್ನು ಕೇಂದ್ರ ತೆರಿಗೆಯಂತೆ ಅಥವಾ ಏಕೀಕೃತ ತೆರಿಗೆಯಂತೆ ಮತ್ತು ಏಕೀಕೃತ ತೆರಿಗೆ ಕ್ರೆಡಿಟನ್ನು ಏಕೀಕೃತ ತೆರಿಗೆಯಂತೆ ಅಥವಾ ಕೇಂದ್ರ ತೆರಿಗೆಯಂತೆ ಹಂಚಿಕೆ ಮಾಡತಕ್ಕದ್ದು.

(2) ಇನ್‌ಪುಟ್ ಸರ್ವಿಸ್ ಹಂಚಿಕೆದಾರನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕ್ರೆಡಿಟನ್ನು ಹಂಚಿಕೆ ಮಾಡಬಹುದು, ಎಂದರೆ:–

(ಎ) ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರುವ ದಸ್ತಾವೇಜನ್ನು ನೀಡಿ ಕ್ರೆಡಿಟ್‌ನ ಸ್ವೀಕರ್ತರಿಗೆ ಕ್ರೆಡಿಟನ್ನು ಹಂಚಿಕೆ ಮಾಡಬಹುದು;

(ಬಿ) ಹಂಚಿಕೆ ಮಾಡಿದ ಕ್ರೆಡಿಟ್‌ನ ಮೊತ್ತವು ಹಂಚಿಕೆಗೆ ಲಭ್ಯವಿರುವ ಕ್ರೆಡಿಟ್‌ನ ಮೊತ್ತವನ್ನು ಮೀರತಕ್ಕದ್ದಲ್ಲ;

(ಸಿ) ಕ್ರೆಡಿಟ್‌ನ ಸ್ವೀಕರ್ತನಿಗೆ ಸಂಬಂಧಿಸಿದುದು ಎನ್ನಬಹುದಾದ ಇನ್‌ಪುಟ್ ಸರ್ವಿಸ್‌ಗಳ ಮೇಲೆ ಸಂದಾಯ ಮಾಡಿದ ಟ್ಯಾಕ್ಸ್ ಕ್ರೆಡಿಟನ್ನು ಅಂಥ ಸ್ವೀಕರ್ತನಿಗೆ ಮಾತ್ರ ಹಂಚಿಕೆ ಮಾಡತಕ್ಕದ್ದು;

(ಡಿ) ಒಬ್ಬನಿಗಿಂತ ಹೆಚ್ಚಿಗೆ ಸ್ವೀಕರ್ತರಿಗೆ ಸಂಬಂಧಿಸಿದುದು ಎನ್ನಬಹುದಾದ ಇನ್‌ಪುಟ್ ಸರ್ವಿಸ್‌ಗಳ ಮೇಲೆ ಸಂದಾಯ ಮಾಡಿದ ಟ್ಯಾಕ್ಸ್ ಕ್ರೆಡಿಟನ್ನು, ಇನ್‌ಪುಟ್ ಸರ್ವಿಸಸ್ ಯಾರಿಗೆ ಸಂಬಂಧಿಸಿದುದು ಎನ್ನಬಹುದೋ ಅಂಥ ಸ್ವೀಕರ್ತರಿಗೆ ಮಾತ್ರವೇ ಹಂಚಿಕೆ ಮಾಡತಕ್ಕದ್ದು ಮತ್ತು ಅಂಥ ಹಂಚಿಕೆಯು ಸುಸಂಗತ ಅವಧಿಯಲ್ಲಿ ಅಂಥ ಸ್ವೀಕರ್ತನಿಂದ ರಾಜ್ಯದಲ್ಲಿ ಆದ ವಹಿವಾಟಿನ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಆದ ವಹಿವಾಟಿನ ಆಧಾರದ ಮೇಲೆ ಅಂಥ ಇನ್‌ಪುಟ್ ಸರ್ವಿಸ್ ಯಾವ ಸ್ವೀಕರ್ತರುಗಳಿಗೆ ಸಂಬಂಧಿಸಿದುದು ಎನ್ನಬಹುದೋ ಮತ್ತು ಚಾಲ್ತಿ ವರ್ಷದಲ್ಲಿ ಅಂಥ ಯಾವ ಎಲ್ಲ ಸ್ವೀಕರ್ತರುಗಳು ಸದರಿ ಕಾರ್ಯಾಚರಣೆಯಲ್ಲಿ ತೊಡಗಿದ್ದರೋ ಸುಸಂಗತ ಅವಧಿಯಲ್ಲಿ ಅಂಥ ಎಲ್ಲಾ ಸ್ವೀಕರ್ತರುಗಳ ವಹಿವಾಟಿನ ಒಟ್ಟು ಪ್ರಮಾಣಕ್ಕೆ ಪ್ರಮಾಣಾನುಗುಣವಾಗಿರತಕ್ಕದ್ದು;

(ಇ) ಸ್ವೀಕರ್ತರೆಲ್ಲರಿಗೆ ಸಂಬಂಧಿಸಿದುದು ಎನ್ನಬಹುದಾದ ಇನ್‌ಪುಟ್ ಸರ್ವಿಸಸ್ ಮೇಲೆ ಸಂದಾಯ ಮಾಡಿದ ತೆರಿಗೆಯ ಕ್ರೆಡಿಟನ್ನು ಅಂಥ ಸ್ವೀಕರ್ತರಿಗೆ ಮಾತ್ರವೇ ಹಂಚಿಕೆ ಮಾಡತಕ್ಕದ್ದು ಮತ್ತು ಅಂಥ ಹಂಚಿಕೆಯು ಸದರಿ ಸುಸಂಗತ ಅವಧಿಯಲ್ಲಿ ಅಂಥ ಸ್ವೀಕರ್ತನಿಂದ ರಾಜ್ಯದಲ್ಲಿ ಆದ ವಹಿವಾಟಿನ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಆದ ವಹಿವಾಟಿನ ಆಧಾರದ ಮೇಲೆ ಚಾಲ್ತಿ ವರ್ಷದಲ್ಲಿ ಅಂಥ ಯಾವ ಸ್ವೀಕರ್ತರುಗಳು ಕಾರ್ಯಾಚರಣೆಯಲ್ಲಿ ತೊಡಗಿದ್ದರೋ ಅಂಥ ಎಲ್ಲಾ ಸ್ವೀಕರ್ತರುಗಳಿಂದ ಸುಸಂಗತ ಅವಧಿಯಲ್ಲಾದ ವಹಿವಾಟಿನ ಒಟ್ಟು ಪ್ರಮಾಣಕ್ಕೆ ಪ್ರಮಾಣಾನುಗುಣವಾಗಿರತಕ್ಕದ್ದು;

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) 'ಸುಸಂಗತ ಅವಧಿ' ಯಾವುದೆಂದರೆ:–

(i) ಕ್ರೆಡಿಟನ್ನು ಯಾವ ವರ್ಷದ ಹಿಂದಿನ ಹಣಕಾಸು ವರ್ಷದಲ್ಲಿ ಹಂಚಿಕೆ ಮಾಡಬೇಕಿತ್ತೋ ಆ ವರ್ಷದ ಹಿಂದಿನ ಹಣಕಾಸು ವರ್ಷದಲ್ಲಿ ಕ್ರೆಡಿಟ್‌ನ ಸ್ವೀಕರ್ತರುಗಳು ಅವರವರ ರಾಜ್ಯಗಳಲ್ಲಿ ಅಥವಾ ಒಕ್ಕೂಟ

ರಾಜ್ಯಕ್ಷೇತ್ರಗಳಲ್ಲಿ ವಹಿವಾಟನ್ನು ನಡೆಸಿದ್ದರೆ, ಅದೇ ಹಣಕಾಸು ವರ್ಷವೇ ಸುಸಂಗತ ಅವಧಿಯಾಗಿರತಕ್ಕದ್ದು; ಅಥವಾ

(ii) ಕ್ರೆಡಿಟನ್ನು ಸ್ವೀಕರಿಸುವ ಕೆಲವರು ಅಥವಾ ಎಲ್ಲರೂ, ಕ್ರೆಡಿಟನ್ನು ಯಾವ ವರ್ಷದ ಹಿಂದಿನ ಹಣಕಾಸು ವರ್ಷದಲ್ಲಿ ಹಂಚಿಕೆ ಮಾಡಬೇಕಿತ್ತೋ ಆ ವರ್ಷದ ಹಿಂದಿನ ಹಣಕಾಸು ವರ್ಷದಲ್ಲಿ ಅವರವರ ರಾಜ್ಯಗಳಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರಗಳಲ್ಲಿ ಯಾವುದೇ ವಹಿವಾಟನ್ನು ನಡೆಸಿರದಿದ್ದರೆ, ಕ್ರೆಡಿಟನ್ನು ಯಾವ ತಿಂಗಳಲ್ಲಿ ಹಂಚಿಕೆ ಮಾಡಬೇಕಿತ್ತೋ ಆ ತಿಂಗಳಲ್ಲಿ, ಸ್ವೀಕರ್ತರೆಲ್ಲರ ಅಂಥ ವಹಿವಾಟಿನ ವಿವರಗಳು ಲಭ್ಯವಿರುವವೋ ಆ ಕೊನೆಯ ತ್ರೈಮಾಸಿಕವೇ ಸುಸಂಗತ ಅವಧಿಯಾಗಿರತಕ್ಕದ್ದು.

(ಬಿ) 'ಕ್ರೆಡಿಟ್‌ನ ಸ್ವೀಕರ್ತ' ಎಂದರೆ, ಇನ್‌ಪುಟ್ ಸರ್ವಿಸ್ ಹಂಚಿಕೆದಾರನು ಹೊಂದಿರುವ ಶಾಶ್ವತ ಖಾತೆ ಸಂಖ್ಯೆಯನ್ನೇ ಹೊಂದಿರುವ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆದಾರ.

(ಸಿ) ಈ ಅಧಿನಿಯಮದ ಅಡಿಯಲ್ಲಿ ತೆರಿಗೆದಾಯಕ ಸರಕುಗಳ ಪೂರೈಕೆಯಲ್ಲಿ ಹಾಗೆಯೇ ತೆರಿಗೆ ವಿಧಿಸಲಾಗದ ಸರಕುಗಳ ಪೂರೈಕೆಯಲ್ಲಿ ತೊಡಗಿರುವ ಯಾರೇ ನೋಂದಾಯಿತ ವ್ಯಕ್ತಿಗೆ ಸಂಬಂಧಿಸಿದಂತೆ, 'ವಹಿವಾಟು' ಎಂದರೆ, ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ I ರ 84ನೇ ಮತ್ತು 92ಎ ಯ ನಮೂದುಗಳ ಅಡಿಯಲ್ಲಿ ಮತ್ತು ಸದರಿ ಅನುಸೂಚಿಯ ಪಟ್ಟಿ IIರ 51ನೇ ಮತ್ತು 54ನೇ ನಮೂದುಗಳಂತೆ ವಿಧಿಸಿದ ಯಾವುದೇ ಸುಂಕದ ಅಥವಾ ತೆರಿಗೆಯ ಮೊತ್ತದಷ್ಟನ್ನು ಕಡಿಮೆ ಮಾಡಿದ ವಹಿವಾಟಿನ ಮೌಲ್ಯ.

**21. ಅಧಿಕವಾಗಿ ಹಂಚಿಕೆ ಮಾಡಿದ ಕ್ರೆಡಿಟ್‌ನ ವಸೂಲಿ ವಿಧಾನ.–** ಪ್ರಕರಣ 20ರಲ್ಲಿ ಒಳಗೊಂಡಿರುವ ಉಪಬಂಧಗಳನ್ನು ಉಲ್ಲಂಘಿಸಿ ಇನ್‌ಪುಟ್ ಸರ್ವಿಸ್ ಹಂಚಿಕೆದಾರನು, ಕ್ರೆಡಿಟನ್ನು ಹಂಚಿಕೆ ಮಾಡಿದುದರ ಪರಿಣಾಮವಾಗಿ ಒಬ್ಬ ಸ್ವೀಕರ್ತನಿಗೆ ಅಥವಾ ಅದಕ್ಕಿಂತ ಹೆಚ್ಚಿನ ಸ್ವೀಕರ್ತರಿಗೆ ಕ್ರೆಡಿಟ್ ಅಧಿಕವಾಗಿ ಹಂಚಿಕೆಯಾಗಿದ್ದರೆ, ಹಾಗೆ ಹಂಚಿಕೆ ಮಾಡಿದ ಅಧಿಕ ಕ್ರೆಡಿಟನ್ನು ಬಡ್ಡಿ ಸಹಿತ ಅಂಥ ಸ್ವೀಕರ್ತರಿಂದ ವಸೂಲಿ ಮಾಡತಕ್ಕದ್ದು ಮತ್ತು ಪ್ರಕರಣ 73ರ ಅಥವಾ ಸಂದರ್ಭಾನುಸಾರವಾಗಿ ಪ್ರಕರಣ 74ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ವಸೂಲು ಮಾಡಬೇಕಾದ ಮೊತ್ತವನ್ನು ನಿರ್ಧರಿಸುವುದಕ್ಕಾಗಿ ಅನ್ವಯವಾಗತಕ್ಕದ್ದು.

## ಅಧ್ಯಾಯ VI

## ನೋಂದಣಿ

**22. ನೋಂದಣಿ ಮಾಡಿಸಲು ಬದ್ಧರಾದ ವ್ಯಕ್ತಿಗಳು.–** (1) ವಿಶೇಷ ಪ್ರವರ್ಗದ ರಾಜ್ಯಗಳ ಹೊರತು ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ತೆರಿಗೆದಾಯಕ ಪೂರೈಕೆ ಮಾಡುತ್ತಿರುವ ಪ್ರತಿಯೊಬ್ಬ ಪೂರೈಕೆದಾರನು, ಆತನ ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಮೀರಿದರೆ ಅವನು ಈ ಅಧಿನಿಯಮದ ಅಡಿಯಲ್ಲಿ ನೋಂದಣಿ ಮಾಡಿಸಲು ಬದ್ಧನಾಗತಕ್ಕದ್ದು:

ಪರಂತು, ಅಂಥ ವ್ಯಕ್ತಿಯು, ಯಾವುದೇ ವಿಶೇಷ ಪ್ರವರ್ಗದ ರಾಜ್ಯಗಳಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ತೆರಿಗೆದಾಯಕ ಪೂರೈಕೆಗಳನ್ನು ಮಾಡಿದ್ದಲ್ಲಿ, ಆತನ ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಮೀರಿದರೆ, ಆತನು ನೋಂದಣಿ ಮಾಡಿಸಲು ಬದ್ಧನಾಗತಕ್ಕದ್ದು:

ಮತ್ತು ಪರಂತು, ಸರ್ಕಾರವು, ವಿಶೇಷ ಪ್ರವರ್ಗ ರಾಜ್ಯದ ಕೋರಿಕೆಯಂತೆ ಮತ್ತು ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ, ಮೊದಲನೇ ಪರಂತುಕದಲ್ಲಿ ಉಲ್ಲೇಖಿಸಲಾದ ಸಮಗ್ರ ವಹಿವಾಟನ್ನು ಹಾಗೆ ಅಧಿಸೂಚಿಸಿರಬಹುದಾದಂತೆ, ಹತ್ತು ಲಕ್ಷ ರೂಪಾಯಿಗಳಿಂದ ಇಪ್ಪತ್ತು ಲಕ್ಷ ರೂಪಾಯಿಗಳಿಗೆ ಮೀರದಂತೆ ಮತ್ತು ಅಂಥ ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಟ್ಟು, ನಿರ್ದಿಷ್ಟಪಡಿಸಬಹುದಾದ ಮೊತ್ತಕ್ಕೆ ಹೆಚ್ಚಿಸಬಹುದು:

ಮತ್ತೂ ಪರಂತು, ಸರ್ಕಾರವು, ರಾಜ್ಯದ ಕೋರಿಕೆ ಮೇರೆಗೆ ಮತ್ತು ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ಅಧಿಸೂಚಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಟ್ಟು, ಪ್ರತ್ಯೇಕವಾಗಿ ಸರಕುಗಳ ಪೂರೈಕೆಯಲ್ಲಿ ತೊಡಗಿರುವ ಪೂರೈಕೆದಾರನ ಸಂದರ್ಭದಲ್ಲಿ ಒಟ್ಟು ವಹಿವಾಟು ಇಪ್ಪತ್ತು ಲಕ್ಷ ರೂಪಾಯಿಗಳಿಂದ ನಲವತ್ತು ಲಕ್ಷ ರೂಪಾಯಿಗಳನ್ನು ಮೀರದಂಥ ಮೊಬಲಗಿಗೆ ಹೆಚ್ಚಿಸಬಹುದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಒಬ್ಬ ವ್ಯಕ್ತಿಯು ಬಡ್ಡಿ ಅಥವಾ ರಿಯಾಯಿತಿಯ ರೂಪದಲ್ಲಿ ಪ್ರತಿಫಲವನ್ನು ಪ್ರತಿನಿಧಿಸುವಷ್ಟರಮಟ್ಟಿಗೆ, ಠೇವಣಿಗಳು, ಸಾಲಗಳು ಅಥವಾ ಮುಂಗಡಗಳನ್ನು ವಿಸ್ತರಿಸುವ ರೂಪದಲ್ಲಿ ಒದಗಿಸಿದ ಸೇವಾ ವಿನಾಯಿತಿ ಪೂರೈಕೆಯಲ್ಲಿ ಅವನು ತೊಡಗಿದ್ದರೂ ಸಹ, ಪ್ರತ್ಯೇಕವಾಗಿ ಸರಕುಗಳ ಪೂರೈಕೆಯಲ್ಲಿ ತೊಡಗಿದ್ದಾನೆಂದು ಪರಿಗಣಿಸತಕ್ಕದ್ದು.

(2) ನಿಗದಿಪಡಿಸಿದ ದಿನದ ನಿಕಟಪೂರ್ವ ದಿನದಂದು, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ನೋಂದಣಿಯಾಗಿರುವ ಅಥವಾ ಪರವಾನಗಿಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ನಿಗದಿಪಡಿಸಿದ ದಿನದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಅಡಿಯಲ್ಲಿ ನೋಂದಣಿ ಮಾಡಿಸಲು ಬದ್ಧನಾಗತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ತೆರಿಗೆದಾಯಕ ವ್ಯಕ್ತಿಯು ನಡೆಸುತ್ತಿರುವ ವ್ಯವಹಾರವು, ಉತ್ತರಾಧಿಕಾರದ ಅಥವಾ ಅನ್ಯಥಾ ಕಾರಣದಿಂದಾಗಲಿ, ಮತ್ತೊಬ್ಬ ವ್ಯಕ್ತಿಗೆ ಚಾಲ್ತಿಯಲ್ಲಿರುವ ಸ್ಥಿತಿಯಲ್ಲಿಯೇ ವರ್ಗಾವಣೆಯಾದರೆ, ವರ್ಗಾವಣೆ ಪಡೆದವನು ಅಥವಾ ಸಂದರ್ಭಾನುಸಾರ ಉತ್ತರಾಧಿಕಾರಿಯು, ಅಂಥ ವರ್ಗಾವಣೆಯ ಅಥವಾ ಉತ್ತರಾಧಿಕಾರದ ದಿನಾಂಕದಿಂದ ಜಾರಿಗೆ ಬರುವಂತೆ ನೋಂದಣಿ ಮಾಡಿಸಲು ಬದ್ಧನಿರತಕ್ಕದ್ದು.

(4) ಉಪಪ್ರಕರಣ (1)ರಲ್ಲಿ ಮತ್ತು (3)ರಲ್ಲಿ ಏನೇ ಒಳಗೊಂಡಿದ್ದರೂ, ಉಚ್ಚ ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಆದೇಶಕ್ಕನುಸಾರವಾಗಿ ಅಥವಾ ಅನ್ಯಥಾ ಸಂದರ್ಭಾನುಸಾರ ಅಥವಾ ಸಮ್ಮಿಳನದ ವ್ಯವಸ್ಥೆಗಾಗಿ ಯೋಜನೆಯ ಮಂಜೂರಾತಿಯ ಅಥವಾ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಕಂಪನಿಗಳ ಬೇರ್ಪಟ್ಟ ಪರಿಣಾಮವಾಗಿ ಆದ ವರ್ಗಾವಣೆಯ ಸಂದರ್ಭದಲ್ಲಿ, ಉಚ್ಚ ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಅಂಥ ಆದೇಶವನ್ನು ಜಾರಿಗೊಳಿಸುವುದಕ್ಕಾಗಿ ಕಂಪನಿಗಳ ರಿಜಿಸ್ಟ್ರಾರ್‌ನು ಸಂಸ್ಥೆಯಾಗಿ ರಚನೆ ಕುರಿತಂತೆ ಯಾವ ದಿನಾಂಕದಂದು ಪ್ರಮಾಣಪತ್ರ ನೀಡುವರೋ ಆ ದಿನಾಂಕದಿಂದ ಜಾರಿಗೆ ಬರುವಂತೆ ನೋಂದಣಿ ಮಾಡಿಸಲು ವರ್ಗಾವಣೆ ಪಡೆದವನು ಬದ್ಧನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(i) "ಸಮಗ್ರ ವಹಿವಾಟು" ಪದಾವಳಿಯು, ತೆರಿಗೆದಾಯಕ ವ್ಯಕ್ತಿಯು, ತಾನಾಗಿಯೇ ಸ್ವತಃ ಮಾಡಿದ ಅಥವಾ ತನ್ನ ಎಲ್ಲಾ ಪ್ರಧಾನಕರ್ತರ ಪರವಾಗಿ ಮಾಡಿದ ಎಲ್ಲಾ ಪೂರೈಕೆಗಳನ್ನು ಒಳಗೊಳ್ಳತಕ್ಕದ್ದು;

(ii) ನೋಂದಾಯಿತ ಜಾಬ್ ವರ್ಕರ್‌ನಿಂದ ಜಾಬ್ ವರ್ಕ್ ಪೂರ್ಣಗೊಂಡ ನಂತರ ಮಾಡಿದ ಸರಕುಗಳ ಪೂರೈಕೆಯನ್ನು, ಪ್ರಕರಣ 143ರಲ್ಲಿ ಹೇಳಿರುವ ಪ್ರಧಾನಕರ್ತನಿಂದಾದ ಪೂರೈಕೆ ಎಂದು ಪರಿಗಣಿಸತಕ್ಕದ್ದು ಮತ್ತು ಅಂಥ ಸರಕುಗಳ ಮೌಲ್ಯವು ನೋಂದಾಯಿತ ಜಾಬ್ ವರ್ಕರ್‌ನ ಒಟ್ಟು ವಹಿವಾಟಿಗೆ ಸೇರಿಸತಕ್ಕದ್ದಲ್ಲ;

(iii) "ವಿಶೇಷ ಪ್ರವರ್ಗದ ರಾಜ್ಯಗಳು" ಪದಾವಳಿಯನ್ನು, [ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ*] ಸಂವಿಧಾನದ 279ಎ ಅನುಚ್ಛೇದದ (4)ನೇ ಖಂಡದ (ಜಿ) ಉಪ–ಖಂಡದ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ರಾಜ್ಯಗಳು ಮತ್ತು ಅರುಣಾಚಲ ಪ್ರದೇಶ ರಾಜ್ಯ, ಅಸ್ಸಾಂ, ಹಿಮಾಚಲ ಪ್ರದೇಶ, ಮೇಘಾಲಯ, ಸಿಕ್ಕಿಂ ಮತ್ತು ಉತ್ತರಾಖಂಡ ರಾಜ್ಯಗಳು ಎಂದು ಅರ್ಥೈಸತಕ್ಕದ್ದು.

**23. ನೋಂದಣಿ ಮಾಡಿಸಲು ಬದ್ಧರಾಗಿರದ ವ್ಯಕ್ತಿಗಳು.–** (1) ಈ ಕೆಳಕಂಡ ವ್ಯಕ್ತಿಗಳು ನೋಂದಣಿಗೆ ಬಾಧ್ಯರಿರತಕ್ಕದ್ದಲ್ಲ, ಎಂದರೆ:–

(ಎ) ಈ ಅಧಿನಿಯಮದ ಅಡಿಯಲ್ಲಿ ಅಥವಾ ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಬದ್ಧರಾಗಿರದ ಅಥವಾ ತೆರಿಗೆಯಿಂದ ಸಂಪೂರ್ಣವಾಗಿ ವಿನಾಯಿತಿಗೊಂಡಿರುವ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ವ್ಯವಹಾರದಲ್ಲಿ ಏಕೈಕವಾಗಿ ತೊಡಗಿಕೊಂಡಿರುವ ಯಾರೇ ವ್ಯಕ್ತಿ;

(ಬಿ) ಭೂಮಿಯ ಸಾಗುವಳಿಯಿಂದ ಬಂದ ಉತ್ಪನ್ನದ ಪೂರೈಕೆಯಷ್ಟರ ಮಟ್ಟಿಗೆ ಕೃಷಿಕ.

(2) ಪರಿಷತ್ತು ಶಿಫಾರಸ್ಸು ಮಾಡಿದಾಗ, ಸರ್ಕಾರವು ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಅಡಿಯಲ್ಲಿ ನೋಂದಣಿ ಪಡೆಯದಂತೆ ವ್ಯಕ್ತಿಗಳ ಯಾವ ಪ್ರವರ್ಗಕ್ಕೆ ವಿನಾಯಿತಿ ನೀಡಬಹುದೋ ಆ ವ್ಯಕ್ತಿಗಳ ಪ್ರವರ್ಗವನ್ನು ನಿರ್ದಿಷ್ಟಪಡಿಸಬಹುದು.

**24. ಕೆಲವೊಂದು ಪ್ರಕರಣಗಳಲ್ಲಿ ಕಡ್ಡಾಯ ನೋಂದಣಿ.–** ಪ್ರಕರಣ 22ರ ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಕೆಳಕಂಡ ಪ್ರವರ್ಗಗಳ ವ್ಯಕ್ತಿಗಳು ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಿಕೊಳ್ಳುವುದು ಅಗತ್ಯವಾಗಿರತಕ್ಕದ್ದು,–

(i) ಯಾವುದೇ ಅಂತರ–ರಾಜ್ಯ ತೆರಿಗೆದಾಯಕ ಪೂರೈಕೆ ಮಾಡುತ್ತಿರುವ ವ್ಯಕ್ತಿಗಳು;

(ii) ತೆರಿಗೆದಾಯಕ ಪೂರೈಕೆ ಮಾಡುತ್ತಿರುವ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಗಳು;

---

* ಅಧಿಸೂಚನೆ ಸಂಖ್ಯೆ ಎಸ್.ಓ 3912 (ಇ) ದಿನಾಂಕ: 30ನೇ ಅಕ್ಟೋಬರ್ 2019 ನೋಡಿ, ಈ ಅಧಿನಿಯಮವು ಜಮ್ಮು ಮತ್ತು ಕಾಶ್ಮೀರ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಮತ್ತು ಲಡಾಖ್ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಅನ್ವಯವಾಗುವಂತೆ ಮಾಡಲಾಗಿದೆ.

(iii) ರಿವರ್ಸ್ ಚಾರ್ಜ್ ಆಧಾರದ ಮೇಲೆ ತೆರಿಗೆಯನ್ನು ಸಂದಾಯ ಮಾಡುವುದು ಅಗತ್ಯವಿರುವಂಥ ವ್ಯಕ್ತಿಗಳು;

(iv) ಪ್ರಕರಣ 9ರ ಉಪಪ್ರಕರಣ (5)ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಅಗತ್ಯವಿರುವಂಥ ವ್ಯಕ್ತಿಗಳು;

(v) ತೆರಿಗೆದಾಯಕ ಪೂರೈಕೆ ಮಾಡುತ್ತಿರುವ ಅನಿವಾಸಿ ತೆರಿಗೆದಾಯಕ ವ್ಯಕ್ತಿಗಳು;

(vi) ಈ ಅಧಿನಿಯಮದ ಅಡಿಯಲ್ಲಿ ಪ್ರತ್ಯೇಕವಾಗಿ ಯಾವ ವ್ಯಕ್ತಿಗಳ ನೋಂದಣಿ ಆಗಿದೆಯೋ ಅಥವಾ ನೋಂದಣಿ ಆಗಿಲ್ಲವೋ, ಪ್ರಕರಣ 51ರ ಅಡಿಯಲ್ಲಿ ತೆರಿಗೆಯನ್ನು ಮುರುಗಡೆ ಮಾಡಲು ಅಗತ್ಯವಿರುವಂಥ ಆ ವ್ಯಕ್ತಿಗಳು;

(vii) ಏಜೆಂಟನಾಗಿ ಅಥವಾ ಅನ್ಯಥಾ, ಇತರ ತೆರಿಗೆದಾಯಕ ವ್ಯಕ್ತಿಗಳ ಪರವಾಗಿ ತೆರಿಗೆದಾಯಕ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆ ಮಾಡುವ ವ್ಯಕ್ತಿಗಳು;

(viii) ಈ ಅಧಿನಿಯಮದ ಅಡಿಯಲ್ಲಿ ಪ್ರತ್ಯೇಕವಾಗಿ ನೋಂದಣಿಯಾಗಿರಲಿ ಅಥವಾ ನೋಂದಣಿಯಾಗಿರದಿರಲಿ, ಇನ್‌ಪುಟ್ ಸರ್ವಿಸ್ ಹಂಚಿಕೆದಾರ;

(ix) ಪ್ರಕರಣ 9ರ ಉಪಪ್ರಕರಣ (5)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಪೂರೈಕೆಗಳಲ್ಲದ ಯಾವ ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕನು ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು ಅಗತ್ಯವಿದೆಯೋ ಅಂಥ ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕನ ಮೂಲಕ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯನ್ನು, ಮಾಡುವ ವ್ಯಕ್ತಿಗಳು;

(x) ಪ್ರಕರಣ 52ರ ಅಡಿಯಲ್ಲಿ ಯಾರಿಗೆ ಮೂಲದಲ್ಲಿ ತೆರಿಗೆ ಸಂಗ್ರಹಿಸಲು ಅಗತ್ಯಪಡಿಸಲಾಗಿದೆಯೋ ಆ ಪ್ರತಿಯೊಬ್ಬ ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕ;

(xi) ನೋಂದಾಯಿತವಲ್ಲದ ವ್ಯಕ್ತಿ ಭಾರತದಲ್ಲಿನ ವ್ಯಕ್ತಿಗೆ, ಭಾರತದ ಹೊರಗಡೆಯಿರುವ ಸ್ಥಳದಿಂದ, ಆನ್‌ಲೈನ್ ಮಾಹಿತಿಯ ಮತ್ತು ಸಂಗ್ರಹಿತ ದತ್ತಾಂಶದ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ಪ್ರತಿಯೊಬ್ಬ ವ್ಯಕ್ತಿ; ಮತ್ತು

(xii) ಪರಿಷತ್ತು ಶಿಫಾರಸ್ಸು ಮಾಡಿದಾಗ ಸರ್ಕಾರವು ಅಧಿಸೂಚಿಸಬಹುದಾದಂಥ ಇತರೆ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗ.

**25. ನೋಂದಣಿ ಪ್ರಕ್ರಿಯೆ.–** (1) ಪ್ರಕರಣ 22ರ ಅಥವಾ ಪ್ರಕರಣ 24ರ ಅಡಿಯಲ್ಲಿ ನೋಂದಾಯಿತನಾಗಲು ಬದ್ಧನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಯಾವ ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ನೋಂದಣಿ ಮಾಡಿಸಲು ಬದ್ಧನಾಗುವನೋ ಹಾಗೆ ಬದ್ಧನಾಗುವಂಥ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ನಿಯಮಿಸಬಹುದಾದಂಥ

ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಆ ಪ್ರತಿಯೊಂದು ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಪರಂತು, ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಯು ಅಥವಾ ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ವ್ಯವಹಾರವನ್ನು ಪ್ರಾರಂಭಿಸುವುದಕ್ಕಿಂತ ಕನಿಷ್ಠ ಪಕ್ಷ ಐದು ದಿನಗಳಿಗೆ ಮುಂಚಿತವಾಗಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಮತ್ತೂ ಪರಂತು, ವಿಶೇಷ ಆರ್ಥಿಕ ವಲಯಗಳ ಅಧಿನಿಯಮ, 2005 (2005ರ 28)ರಲ್ಲಿ ಪರಿಭಾಷಿಸಲಾದಂತೆ, ವಿಶೇಷ ಆರ್ಥಿಕ ವಲಯದಲ್ಲಿ ಒಂದು ಘಟಕವನ್ನು ಹೊಂದಿರುವ ಅಥವಾ ವಿಶೇಷ ಆರ್ಥಿಕ ವಲಯದ ಡೆವಲೆಪರ್ ಆಗಿರುವ ಒಬ್ಬ ವ್ಯಕ್ತಿಯು, ವಿಶೇಷ ಆರ್ಥಿಕ ವಲಯವನ್ನು ಆ ರಾಜ್ಯದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಹೊರಗೆ ಗುರುತಿಸಿರುವ ತನ್ನ ವ್ಯವಹಾರದ ಸ್ಥಳದಿಂದ ದೂರದಲ್ಲಿರುವಂತೆ ಪ್ರತ್ಯೇಕ ನೋಂದಣಿಗಾಗಿ ಅರ್ಜಿ ಸಲ್ಲಿಸತಕ್ಕದ್ದು.

**ವಿವರಣೆ.–** ಭಾರತದ ಶಾಸನದ ವ್ಯಾಪ್ತಿಗಳ ಪಟ್ಟಿಯಲ್ಲಿ ಜಲಕ್ಷೇತ್ರದಿಂದ ಯಾವುದೇ ಪೂರೈಕೆಯನ್ನು ಮಾಡುವಂಥ ಪ್ರತಿಯೊಬ್ಬ ವ್ಯಕ್ತಿಯು, ಸಮುಚಿತ ಎಲ್ಲೆಗೆರೆಯ ಅತ್ಯಂತ ಹತ್ತಿರದ ಬಿಂದುವು ಯಾವ ಕರಾವಳಿ ರಾಜ್ಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಇದೆಯೋ ಆ ಕರಾವಳಿ ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ನೋಂದಣಿಯನ್ನು ಪಡೆದುಕೊಳ್ಳತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯನ್ನು ಕೋರುವ ವ್ಯಕ್ತಿಗೆ, ಅದೇ ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಒಂದೇ ನೋಂದಣಿಯನ್ನು ನೀಡತಕ್ಕದ್ದು:

ಪರಂತು, ಒಂದು ರಾಜ್ಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಅನೇಕ ವ್ಯವಹಾರ ಸ್ಥಳಗಳನ್ನು ಹೊಂದಿರುವ ವ್ಯಕ್ತಿಗೆ ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಅಂಥ ವ್ಯವಹಾರಗಳ ಪ್ರತಿಯೊಂದು ಸ್ಥಳಕ್ಕೂ ಪ್ರತ್ಯೇಕ ನೋಂದಣಿಯನ್ನು ನೀಡಬಹುದು.

(3) ಪ್ರಕರಣ 22ರ ಅಥವಾ ಪ್ರಕರಣ 24ರ ಅಡಿಯಲ್ಲಿ ನೋಂದಾಯಿತನಾಗಲು ಬದ್ಧನಾಗಿರದಿದ್ದರೂ, ವ್ಯಕ್ತಿಯು ತಾನೇ ಸ್ವಇಚ್ಛೆಯಿಂದ ನೋಂದಾಯಿತನಾಗಬಹುದು ಮತ್ತು ನೋಂದಾಯಿತ ವ್ಯಕ್ತಿಗೆ ಅನ್ವಯವಾಗುವ ಈ ಅಧಿನಿಯಮದ ಎಲ್ಲಾ ಉಪಬಂಧಗಳು, ಅಂಥ ವ್ಯಕ್ತಿಗೂ ಅನ್ವಯವಾಗತಕ್ಕದ್ದು.

(4) ರಾಜ್ಯದಲ್ಲಾಗಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಾಗಲಿ ಅಥವಾ ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಾಗಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರಗಳಲ್ಲಾಗಲಿ, ಒಂದಕ್ಕಿಂತ ಹೆಚ್ಚಿನ ನೋಂದಣಿಯನ್ನು ಪಡೆದಿರುವ ಅಥವಾ ಪಡೆಯುವುದು ಅಗತ್ಯವಿರುವ ವ್ಯಕ್ತಿಯನ್ನು, ಅಂಥ ಪ್ರತಿಯೊಂದು ನೋಂದಣಿಗೆ ಸಂಬಂಧಿಸಿದಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಬೇರೆ ಬೇರೆ ವ್ಯಕ್ತಿಗಳೆಂದು ಪರಿಗಣಿಸತಕ್ಕದ್ದು.

(5) ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ, ಒಂದು ಕಾರ್ಯಸ್ಥಳಕ್ಕೆ ಸಂಬಂಧಿಸಿದಂತೆ ನೋಂದಣಿಯನ್ನು ಪಡೆದಿರುವ ಅಥವಾ ಪಡೆಯುವುದು ಅಗತ್ಯವಿರುವ ವ್ಯಕ್ತಿಯು, ಮತ್ತೊಂದು ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಕಾರ್ಯಸ್ಥಳವನ್ನು ಹೊಂದಿದ್ದಲ್ಲಿ, ಆಗ ಅಂಥ ಕಾರ್ಯಸ್ಥಳಗಳನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಬೇರೆ ಬೇರೆ ವ್ಯಕ್ತಿಗಳ ಕಾರ್ಯಸ್ಥಳಗಳೆಂದು ಪರಿಗಣಿಸತಕ್ಕದ್ದು.

(6) ಪ್ರತಿಯೊಬ್ಬ ವ್ಯಕ್ತಿಯು ನೋಂದಣಿ ಮಂಜೂರಾತಿಗೆ ಅರ್ಹನಾಗುವುದಕ್ಕಾಗಿ, ಆದಾಯ ತೆರಿಗೆ ಅಧಿನಿಯಮ, 1961 (1961 ರ 43) ರ ಅಡಿಯಲ್ಲಿ ನೀಡಿದ ಪರ್ಮನೆಂಟ್ ಅಕೌಂಟ್ ನಂಬರನ್ನು ಹೊಂದಿರತಕ್ಕದ್ದು:

ಪರಂತು, ಪ್ರಕರಣ 51ರ ಅಡಿಯಲ್ಲಿ ತೆರಿಗೆ ಮುರುಗಡೆ ಮಾಡುವುದು ಅಗತ್ಯವಿರುವ ವ್ಯಕ್ತಿಯು, ನೋಂದಣಿ ನೀಡಿಕೆಗೆ ಅರ್ಹನಾಗುವುದಕ್ಕಾಗಿ, ಪರ್ಮನೆಂಟ್ ಅಕೌಂಟ್ ನಂಬರಿನ ಬದಲಾಗಿ ಸದರಿ ಅಧಿನಿಯಮದ ಅಡಿಯಲ್ಲಿ ನೀಡಿದ ಒಂದು ತೆರಿಗೆ ಮುರುಗಡೆ ಮತ್ತು ಸಂಗ್ರಹಣೆ ಖಾತೆ ನಂಬರನ್ನು ಹೊಂದಿರಬಹುದು.

(6ಎ) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಅಧಿಪ್ರಮಾಣನಕ್ಕೆ ಒಳಗಾಗತಕ್ಕದ್ದು ಅಥವಾ ಆಧಾರ್ ಸಂಖ್ಯೆಯನ್ನು ಹೊಂದಿರುವ ರುಜುವಾತನ್ನು ಒದಗಿಸತಕ್ಕದ್ದು:

ಪರಂತು, ಆಧಾರ್ ಸಂಖ್ಯೆಯನ್ನು ನೋಂದಾಯಿತ ವ್ಯಕ್ತಿಗೆ ನೀಡಿರದಿದ್ದರೆ, ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ, ಅಂಥ ವ್ಯಕ್ತಿಗೆ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಗುರುತಿನ ಬದಲೀ ಮತ್ತು ಕಾರ್ಯಸಾಧ್ಯ ಸಾಧನವನ್ನು ನೀಡತಕ್ಕದ್ದು:

ಮತ್ತೂ ಪರಂತು, ಅಂಥ ವ್ಯಕ್ತಿ ಅಧಿಪ್ರಮಾಣನಕ್ಕೆ ಒಳಗಾಗಲು ಅಥವಾ ಆಧಾರ್ ಸಂಖ್ಯೆಯನ್ನು ಹೊಂದಿರುವ ರುಜುವಾತನ್ನು ಒದಗಿಸಲು ಅಥವಾ ಅಂಥ ವ್ಯಕ್ತಿಯ ಗುರುತಿನ ಬದಲೀ ಮತ್ತು ಕಾರ್ಯಸಾಧ್ಯ ಸಾಧನವನ್ನು ನೀಡಲು ವಿಫಲನಾದ ಸಂದರ್ಭದಲ್ಲಿ ಅಂಥ ವ್ಯಕ್ತಿಗೆ ಹಂಚಿಕೆ ಮಾಡಲಾದ ನೋಂದಣಿಯನ್ನು ಅಸಿಂಧು ಎಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಇತರ ಉಪಬಂಧಗಳು, ಅಂಥ ವ್ಯಕ್ತಿ ನೋಂದಣಿ ಮಾಡಿಕೊಳ್ಳದಿದ್ದರೆ ಹೇಗೊ ಹಾಗೆ ಅನ್ವಯವಾಗತಕ್ಕದ್ದು.

(6ಬಿ) ಅಧಿಸೂಚನೆ ಹೊರಡಿಸಿದ ದಿನಾಂಕದಂದು ಮತ್ತು ದಿನಾಂಕದಿಂದ, ಪ್ರತಿಯೊಬ್ಬ ವ್ಯಕ್ತಿಯು, ನೋಂದಣಿ ಪಡೆಯುವುದಕ್ಕೆ ಅರ್ಹನಾಗಿರುವ ಸಲುವಾಗಿ ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ ಸರ್ಕಾರವು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಅಧಿಪ್ರಮಾಣನಕ್ಕೆ ಒಳಗಾಗತಕ್ಕದ್ದು ಅಥವಾ ಆಧಾರ್ ಸಂಖ್ಯೆಯನ್ನು ಹೊಂದಿರುವ ರುಜುವಾತನ್ನು ಒದಗಿಸತಕ್ಕದ್ದು:

ಪರಂತು, ಆಧಾರ್ ಸಂಖ್ಯೆಯನ್ನು ವ್ಯಕ್ತಿಗೆ ನೀಡಿರದಿದ್ದರೆ, ಅಂಥ ವ್ಯಕ್ತಿಯು, ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ ಸರ್ಕಾರವು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಬದಲೀ ಗುರುತಿನ ಮತ್ತು ಕಾರ್ಯಸಾಧ್ಯ ಸಾಧನವನ್ನು ನೀಡತಕ್ಕದ್ದು.

(6ಸಿ) ಅಧಿಸೂಚನೆ ಹೊರಡಿಸಿದ ದಿನಾಂಕದಂದು ಮತ್ತು ದಿನಾಂಕದಿಂದ, ನೋಂದಣಿ ಪಡೆದ ವ್ಯಕ್ತಿಯನ್ನು ಹೊರತುಪಡಿಸಿ, ಪ್ರತಿಯೊಬ್ಬ ವ್ಯಕ್ತಿಯು, ನೋಂದಣಿ ಪಡೆದುಕೊಳ್ಳುವುದಕ್ಕೆ ಅರ್ಹನಾಗಿರುವ ಸಲುವಾಗಿ, ಪರಿಷತ್ತಿನ ಶಿಫಾರಸ್ಸುಗಳ ಮೇಲೆ ಸರ್ಕಾರವು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಕರ್ತ, ವ್ಯವಸ್ಥಾಪಕ ನಿರ್ದೇಶಕ, ಪೂರ್ಣಕಾಲಿಕ ನಿರ್ದೇಶಕ, ಅಂಥ ಹಲವು ಪಾಲುದಾರರು, ಸಂಸ್ಥೆಯ ನಿರ್ವಹಣಾ ಸಮಿತಿಯ ಸದಸ್ಯರು, ನ್ಯಾಸಧಾರಿಗಳ ಮಂಡಳಿ, ಅಧಿಕೃತಗೊಳಿಸಿದ ಪ್ರತಿನಿಧಿ, ಅಧಿಕೃತಗೊಳಿಸಿದ ಸಹಿದಾರ ಮತ್ತು ಅಂಥ ಇತರೆ ವ್ಯಕ್ತಿಗಳ ವರ್ಗವು ಅಧಿಪ್ರಮಾಣನಕ್ಕೆ ಒಳಗಾಗತಕ್ಕದ್ದು ಅಥವಾ ಆಧಾರ್ ಸಂಖ್ಯೆಯನ್ನು ಹೊಂದಿರುವ ರುಜುವಾತನ್ನು ಒದಗಿಸತಕ್ಕದ್ದು:

ಪರಂತು, ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಕ್ಕೆ ಆಧಾರ್ ಸಂಖ್ಯೆಯನ್ನು ನೀಡಿರದಿದ್ದಲ್ಲಿ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಕ್ಕೆ, ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ಸರ್ಕಾರವು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಬದಲೀ ಗುರುತಿನ ಮತ್ತು ಕಾರ್ಯಸಾಧ್ಯ ಸಾಧನವನ್ನು ನೀಡತಕ್ಕದ್ದು.

(6ಡಿ) ಉಪಪ್ರಕರಣ (6ಎ) ಅಥವಾ ಪ್ರಕರಣ (6ಬಿ) ಅಥವಾ ಉಪಪ್ರಕರಣ (6ಸಿ)ಯ ಉಪಬಂಧಗಳು, ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ, ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗ ಅಥವಾ ಯಾವುದೇ ರಾಜ್ಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಅಥವಾ ಅದರ ಭಾಗಕ್ಕೆ ಅನ್ವಯವಾಗತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಆಧಾರ್ ಸಂಖ್ಯೆ" ಎಂಬ ಪದಾವಳಿಯು ಆಧಾರ್ (ಉದ್ದೇಶಿತರಿಗೆ ಹಣಕಾಸು ಮತ್ತು ಇತರೆ ಸಹಾಯಧನಗಳ, ಪ್ರಯೋಜನಗಳ ಹಾಗೂ ಸೇವೆಗಳ ನೀಡಿಕೆ) ಅಧಿನಿಯಮ, 2016 (2016 ರ 18)ರ ಪ್ರಕರಣ 2ರ (ಎ) ಖಂಡದಲ್ಲಿ ಅದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

(7) ಉಪಪ್ರಕರಣ (6)ರಲ್ಲಿ ಏನೇ ಒಳಗೊಂಡಿದ್ದರೂ, ಉಪಪ್ರಕರಣ (1)ರ ಅಡಿಯಲ್ಲಿ ಅನಿವಾಸಿ ತೆರಿಗೆದಾಯಕ ವ್ಯಕ್ತಿಗೆ ನಿಯಮಿಸಬಹುದಾದಂಥ ಯಾವುದೇ ಇತರ ದಸ್ತಾವೇಜುಗಳ ಆಧಾರದ ಮೇಲೆ ನೋಂದಣಿಯನ್ನು ನೀಡಬಹುದು.

(8) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾಗಲು ಬದ್ಧನಾಗಿರುವ ವ್ಯಕ್ತಿಯು ನೋಂದಣಿಯನ್ನು ಪಡೆಯಲು ವಿಫಲನಾದಲ್ಲಿ, ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ತೆಗೆದುಕೊಳ್ಳಬಹುದಾದ ಯಾವುದೇ ಕ್ರಮಕ್ಕೆ ಬಾಧಕವಾಗದಂತೆ, ಯುಕ್ತ ಅಧಿಕಾರಿಯು ಅಂಥ ವ್ಯಕ್ತಿಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ನೋಂದಾಯಿಸಲು ಮುಂದಾಗಬಹುದು.

(9) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ,–

(ಎ) ವಿಶ್ವಸಂಸ್ಥೆಯ ಯಾವುದೇ ವಿಶೇಷ ಏಜೆನ್ಸಿ ಅಥವಾ ವಿಶ್ವಸಂಸ್ಥೆ (ವಿಶೇಷ ಸ್ಥಾನಮಾನ ಮತ್ತು ಉನ್ಮುಕ್ತಿಗಳು) ಅಧಿನಿಯಮ, 1947 (1947 ರ 46) ರ ಅಡಿಯಲ್ಲಿ ಅಧಿಸೂಚಿಸಿರುವ ಯಾವುದೇ ಬಹುಪಕ್ಷೀಯ ಹಣಕಾಸು ಸಂಸ್ಥೆಗೆ ಮತ್ತು ಸಂಘಟನೆಗೆ, ವಿದೇಶಗಳ ಕಾನ್ಸುಲೇಟ್‌ಗೆ ಅಥವಾ ರಾಯಭಾರ ಕಾರ್ಯಾಲಯಗಳಿಗೆ; ಮತ್ತು

(ಬಿ) ಆಯುಕ್ತರು ಅಧಿಸೂಚಿಸಬಹುದಾದ ಯಾವುದೇ ಇತರ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ

– ಅವುಗಳು ಅವರು ಸ್ವೀಕರಿಸಿದ ಅಧಿಸೂಚಿತ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಳ ಮೇಲಿನ ತೆರಿಗೆಗಳ ಮರುಪಾವತಿಯನ್ನು ಒಳಗೊಂಡಂತೆ, ನಿಯಮಿಸಬಹುದಾದಂಥ ಉದ್ದೇಶಗಳಿಗಾಗಿ ಮತ್ತು ಅಂಥ ವಿಧಾನದಲ್ಲಿ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡತಕ್ಕದ್ದು.

(10) ಸೂಕ್ತ ಪರಿಶೀಲನೆಯ ನಂತರ ನೋಂದಣಿಯನ್ನು ಅಥವಾ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಅವಧಿಯ ಒಳಗಾಗಿ ನೀಡತಕ್ಕದ್ದು ಅಥವಾ ತಿರಸ್ಕರಿಸತಕ್ಕದ್ದು.

(11) ನೋಂದಣಿ ಪ್ರಮಾಣಪತ್ರವನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಜಾರಿಗೆ ಬರುವ ಅಂಥ ದಿನಾಂಕದೊಂದಿಗೆ ನೀಡತಕ್ಕದ್ದು.

(12) ಉಪಪ್ರಕರಣ (10)ರ ಅಡಿಯಲ್ಲಿ ನಿಯಮಿಸಿದ ಅವಧಿಯು ಕೊನೆಗೊಂಡ ನಂತರ, ಆ ಅವಧಿಯೊಳಗೆ ಯಾವುದೇ ನ್ಯೂನತೆಯನ್ನು ಅರ್ಜಿದಾರನಿಗೆ ತಿಳಿಸಿಲ್ಲದಿದ್ದರೆ, ನೋಂದಣಿ ಅಥವಾ ಒಂದು ವಿಶಿಷ್ಟ ಗುರುತಿನ ಸಂಖ್ಯೆಯನ್ನು ಮಂಜೂರು ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು.

**26. ಪರಿಭಾವಿತ ನೋಂದಣಿ.–** (1) ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿನ ನೋಂದಣಿ ಅಥವಾ ವಿಶಿಷ್ಟ ಗುರುತಿನ ಸಂಖ್ಯೆ ಮಂಜೂರಾತಿಯನ್ನು, ಪ್ರಕರಣ 25ರ ಉಪಪ್ರಕರಣ (10)ರಲ್ಲಿ ನಿರ್ದಿಷ್ಟಪಡಿಸಿದ ಸಮಯದ ಒಳಗಾಗಿ ಈ ಅಧಿನಿಯಮದ ಅಡಿಯಲ್ಲಿ ನೋಂದಣಿ ಅಥವಾ ವಿಶಿಷ್ಟ ಗುರುತಿನ ಸಂಖ್ಯೆಗೋಸ್ಕರ ಸಲ್ಲಿಸಿದ ಅರ್ಜಿಯು ತಿರಸ್ಕೃತಗೊಂಡಿರಬಾರದು ಎನ್ನುವ ಷರತ್ತಿಗೆ ಒಳಪಟ್ಟು, ಈ ಅಧಿನಿಯಮದ ಅಡಿಯಲ್ಲಿನ ನೋಂದಣಿ ಅಥವಾ ವಿಶಿಷ್ಟ ಗುರುತಿನ ಸಂಖ್ಯೆ ಮಂಜೂರಾತಿ ಎಂದು ಪರಿಭಾವಿಸತಕ್ಕದ್ದು.

(2) ಪ್ರಕರಣ 25ರ ಉಪಪ್ರಕರಣ (10)ರಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿನ ನೋಂದಣಿಗೆ ಅಥವಾ ವಿಶಿಷ್ಟ ಗುರುತಿನ ಸಂಖ್ಯೆಗೆ ಸಲ್ಲಿಸಿದ ಅರ್ಜಿಯು ತಿರಸ್ಕೃತವಾಗಿರುವುದನ್ನು, ಈ ಅಧಿನಿಯಮದ ಅಡಿಯಲ್ಲಿನ ನೋಂದಣಿ ಅರ್ಜಿಯ ತಿರಸ್ಕರಣೆ ಎಂದು ಪರಿಭಾವಿಸತಕ್ಕದ್ದು.

**27. ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಗೆ ಮತ್ತು ಅನಿವಾಸಿ ತೆರಿಗೆದಾಯಕ ವ್ಯಕ್ತಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು.–** (1) ನೋಂದಣಿಯ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿರುವ ಅವಧಿ ಅಥವಾ ನೋಂದಣಿಯು ಜಾರಿಗೆ ಬಂದ ದಿನಾಂಕದಿಂದ ತೊಂಭತ್ತು ದಿನಗಳು, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಗೆ ಅಥವಾ ಅನಿವಾಸಿ ತೆರಿಗೆದಾಯಕ ವ್ಯಕ್ತಿಗೆ ನೀಡಿದ ನೋಂದಣಿ ಪ್ರಮಾಣಪತ್ರವು ಸಿಂಧುವಾಗಿರತಕ್ಕದ್ದು ಮತ್ತು ನೋಂದಣಿ ಪ್ರಮಾಣಪತ್ರದ ನೀಡಿಕೆಯ ನಂತರವೇ ಅಂಥ ವ್ಯಕ್ತಿಯು ತೆರಿಗೆದಾಯಕ ಪೂರೈಕೆಯನ್ನು ಮಾಡತಕ್ಕದ್ದು:

ಪರಂತು, ಯುಕ್ತ ಅಧಿಕಾರಿಯು, ಸದರಿ ತೆರಿಗೆದಾಯಕ ವ್ಯಕ್ತಿಯು ಸಾಕಷ್ಟು ಕಾರಣವನ್ನು ತೋರಿಸಿದರೆ, ಸದರಿ ತೊಂಭತ್ತು ದಿನಗಳ ಅವಧಿಯನ್ನು, ಮುಂದುವರಿದ ತೊಂಭತ್ತು ದಿನಗಳನ್ನು ಮೀರದ ಹೆಚ್ಚಿನ ಅವಧಿಗೆ ವಿಸ್ತರಿಸಬಹುದು.

(2) ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಯು ಅಥವಾ ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ಪ್ರಕರಣ 25ರ ಉಪಪ್ರಕರಣ (1)ರ ಅಡಿಯಲ್ಲಿ ನೋಂದಣಿಗಾಗಿ ಅರ್ಜಿ ಸಲ್ಲಿಸುವ ಸಮಯದಲ್ಲಿ, ನೋಂದಣಿಯನ್ನು ಕೋರಿರುವ ಅವಧಿಗೆ ಅಂಥ ವ್ಯಕ್ತಿಗೆ ಸಂಬಂಧಿಸಿದಂತೆ ಅಂದಾಜು ಮಾಡಿದ ತೆರಿಗೆ ಬಾಧ್ಯತೆಗೆ ಸಮನಾದ ಮೊತ್ತದ ತೆರಿಗೆಯ ಮುಂಗಡ ಠೇವಣಿಯನ್ನು ಜಮೆ ಮಾಡತಕ್ಕದ್ದು:

ಪರಂತು, ಉಪಪ್ರಕರಣ (1)ರ ಅಡಿಯಲ್ಲಿ ಯಾವುದೇ ಸಮಯದ ವಿಸ್ತರಣೆಯನ್ನು ಕೋರಿದ್ದಲ್ಲಿ, ಅಂಥ ತೆರಿಗೆದಾಯಕ ವ್ಯಕ್ತಿಯು, ವಿಸ್ತರಣೆಯನ್ನು ಕೋರಿರುವ ಅವಧಿಗೆ, ಅಂದಾಜು ಮಾಡಿದ್ದ ತೆರಿಗೆ ಬಾಧ್ಯತೆಗೆ ಸಮನಾದ ಹೆಚ್ಚುವರಿ ತೆರಿಗೆಯ ಮೊತ್ತವನ್ನು ಜಮೆ ಮಾಡತಕ್ಕದ್ದು.

(3) ಉಪಪ್ರಕರಣ (2)ರ ಅಡಿಯಲ್ಲಿ ಠೇವಣಿ ಇಟ್ಟಿರುವ ಮೊತ್ತವು ಅಂಥ ವ್ಯಕ್ತಿಯ ವಿದ್ಯುನ್ಮಾನ ನಗದು ಖಾತೆಗೆ ಜಮೆ ಮಾಡತಕ್ಕದ್ದು ಮತ್ತು ಪ್ರಕರಣ 49ರ ಅಡಿಯಲ್ಲಿ ಉಪಬಂಧಿಸಿದ ರೀತಿಯಲ್ಲಿ ಬಳಸತಕ್ಕದ್ದು.

**28. ನೋಂದಣಿಯ ತಿದ್ದುಪಡಿ.–** (1) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು ಮತ್ತು ವಿಶಿಷ್ಟ ಗುರುತಿನ ಸಂಖ್ಯೆಯನ್ನು ಪಡೆದಿರುವ ವ್ಯಕ್ತಿಯು, ನೋಂದಣಿಯ ಸಮಯದಲ್ಲಿ ಅಥವಾ ಅದರ ತರುವಾಯ ಒದಗಿಸಿದ್ದ ಮಾಹಿತಿಯಲ್ಲಿ ಯಾವುದೇ ಬದಲಾವಣೆಗಳಾಗಿದ್ದರೆ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಹಾಗೂ ಅಂಥ ಅವಧಿಯ ಒಳಗಾಗಿ, ಅಂಥ ಬದಲಾವಣೆಗಳನ್ನು ಯುಕ್ತ ಅಧಿಕಾರಿಗೆ ತಿಳಿಸತಕ್ಕದ್ದು.

(2) ಯುಕ್ತ ಅಧಿಕಾರಿಯು, ಉಪಪ್ರಕರಣ (1)ರ ಅಡಿಯಲ್ಲಿ ಒದಗಿಸಿದ ಮಾಹಿತಿಯ ಆಧಾರದ ಮೇಲೆ ಅಥವಾ ಆತನಿಂದಲೇ ಖಚಿತಪಡಿಸಿಕೊಂಡಂತೆ, ನೋಂದಣಿಯ ವಿವರಗಳಲ್ಲಿನ ತಿದ್ದುಪಡಿಗಳನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಅವಧಿಯ ಒಳಗಾಗಿ ಅನುಮೋದಿಸಬಹುದು ಅಥವಾ ತಿರಸ್ಕರಿಸಬಹುದು:

ಪರಂತು, ನಿಯಮಿಸಬಹುದಾದಂಥ ವಿವರಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಯುಕ್ತ ಅಧಿಕಾರಿಯ ಅನುಮೋದನೆಯು ಅಗತ್ಯವಿರತಕ್ಕದ್ದಲ್ಲ:

ಮತ್ತು ಪರಂತು, ಯುಕ್ತ ಅಧಿಕಾರಿಯು ನೋಂದಣಿಯ ವಿವರಗಳಲ್ಲಿನ ತಿದ್ದುಪಡಿಯ ಕೋರಿಕೆಯ ಅರ್ಜಿಯನ್ನು, ಆ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡದೇ ತಿರಸ್ಕರಿಸತಕ್ಕದ್ದಲ್ಲ.

(3) ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಸಂದರ್ಭಾನುಸಾರ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿನ ತಿದ್ದುಪಡಿಗಳ ಯಾವುದೇ ತಿರಸ್ಕರಣೆ ಅಥವಾ ಅನುಮೋದನೆಯನ್ನು, ಈ ಅಧಿನಿಯಮದ ಅಡಿಯಲ್ಲಿನ ತಿರಸ್ಕರಣೆ ಅಥವಾ ಅನುಮೋದನೆ ಎಂದು ಭಾವಿಸತಕ್ಕದ್ದು.

**29. ನೋಂದಣಿಯ ರದ್ದು ಅಥವಾ ಅಮಾನತ್ತು.–** (1) ಯುಕ್ತ ಅಧಿಕಾರಿಯು ಸ್ವಪ್ರೇರಣೆಯಿಂದಾಗಲಿ ಅಥವಾ ನೋಂದಾಯಿತ ವ್ಯಕ್ತಿಯು ಅಥವಾ ಅಂಥ ವ್ಯಕ್ತಿ ಮರಣ ಹೊಂದಿದ ಸಂದರ್ಭದಲ್ಲಿ ಆತನ ಕಾನೂನುಸಮ್ಮತ ವಾರಸುದಾರರು ಅರ್ಜಿಯನ್ನು ಸಲ್ಲಿಸಿದಾಗ, ಈ ಕೆಳಕಂಡ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು, ಎಂದರೆ:–

(ಎ) ಮಾಲೀಕನ ಮರಣದ, ಇತರ ಕಾನೂನುಸಮ್ಮತ ಅಸ್ತಿತ್ವದ ವಿಲೀನದಿಂದ, ಬೇರ್ಪಡೆಯ ಅಥವಾ ಅನ್ಯಥಾ ವಿಲೆ ಮಾಡಿರುವುದನ್ನು ಒಳಗೊಂಡಿರುವಂಥ ಯಾವುದೇ ಕಾರಣಗಳಿಗಾಗಿ, ವ್ಯವಹಾರವು ಸ್ಥಗಿತಗೊಂಡಿರುವುದು, ಸಂಪೂರ್ಣವಾಗಿ ವರ್ಗಾವಣೆಯಾಗಿರುವ; ಅಥವಾ

(ಬಿ) ವ್ಯವಹಾರದ ಸಂರಚನೆಯಲ್ಲಿ ಯಾವುದೇ ಬದಲಾವಣೆಯಾಗಿರುವ; ಅಥವಾ

(ಸಿ) ಪ್ರಕರಣ 22 ಅಥವಾ ಪ್ರಕರಣ 24ರ ಮೇರೆಗೆ ತೆರಿಗೆದಾರ ವ್ಯಕ್ತಿಯು, ನೋಂದಾಯಿತನಾಗಲು ಇನ್ನು ಮುಂದೆ ಹೊಣೆಗಾರನಾಗಿರದ ಅಥವಾ ಪ್ರಕರಣ 25ರ ಉಪಪ್ರಕರಣ (3)ರ ಮೇರೆಗೆ ಸ್ವಯಂಪ್ರೇರಿತವಾಗಿ ನೋಂದಣಿಯನ್ನು ಆಯ್ಕೆ ಮಾಡಿಕೊಳ್ಳಲು ಉದ್ದೇಶಿಸಿರುವ ಕಡೆಗಳ

– ಸಂದರ್ಭಗಳಿಗೆ ಗಮನಕೊಟ್ಟು ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಅವಧಿಯ ಒಳಗಾಗಿ, ನೋಂದಣಿಯನ್ನು ರದ್ದುಗೊಳಿಸಬಹುದು:

ಪರಂತು, ನೋಂದಾಯಿತ ವ್ಯಕ್ತಿಯು ಸಲ್ಲಿಸಿದ ನೋಂದಣಿಯ ರದ್ದಿಯಾತಿಗೆ ಸಂಬಂಧಿಸದ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ, ನಿಯಮಿಸಬಹುದಾದಂಥ ಅವಧಿಗೆ ಮತ್ತು ವಿಧಾನದಲ್ಲಿ ನೋಂದಣಿಯನ್ನು ಅಮಾನತ್ತಿನಲ್ಲಿಡಬಹುದು.

(2) ಯುಕ್ತ ಅಧಿಕಾರಿಯು ತೆರಿಗೆದಾಯಕ ವ್ಯಕ್ತಿಯ ನೋಂದಣಿಯನ್ನು ಈ ಕೆಳಕಂಡ ಕಾರಣಗಳಿಗಾಗಿ ಎಂದರೆ:–

(ಎ) ನಿಯಮಿಸಬಹುದಾದಂಥ ಈ ಅಧಿನಿಯಮದ ಅಂಥ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ನೋಂದಾಯಿತ ವ್ಯಕ್ತಿಯು, ಉಲ್ಲಂಘಿಸಿರುವ; ಅಥವಾ

(ಬಿ) ಪ್ರಕರಣ 10ರ ಮೇರೆಗೆ ತೆರಿಗೆ ಸಂದಾಯ ಮಾಡುವ ವ್ಯಕ್ತಿಯು ಹಣಕಾಸಿನ ವರ್ಷದ ರಿಟರ್ನ್ ಅನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕದಿಂದ ಮೂರು ತಿಂಗಳ ನಂತರವೂ ಸದರಿ ರಿಟರ್ನನ್ನು ಸಲ್ಲಿಸದಿರುವ; ಅಥವಾ

(ಸಿ) ಖಂಡ (ಬಿ)ಯಲ್ಲಿ ನಿರ್ದಿಷ್ಟಪಡಿಸಲಾದ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿ, ಯಾರೇ ನೋಂದಾಯಿತ ವ್ಯಕ್ತಿಯು ನಿಯಮಿಸಬಹುದಾದಂಥ ನಿರಂತರ ತೆರಿಗೆ ಅವಧಿಯಲ್ಲಿ ರಿಟರ್ನನ್ನು ಸಲ್ಲಿಸದಿರುವ; ಅಥವಾ

(ಡಿ) ಪ್ರಕರಣ 25ರ ಉಪಪ್ರಕರಣ (3)ರ ಅಡಿಯಲ್ಲಿ ಸ್ವಇಚ್ಛೆಯಿಂದ ನೋಂದಣಿ ಪಡೆದುಕೊಂಡಿರುವ ಯಾರೇ ವ್ಯಕ್ತಿಯು ನೋಂದಣಿಯ ದಿನಾಂಕದಿಂದ ಆರು ತಿಂಗಳೊಳಗಾಗಿ ವ್ಯವಹಾರವನ್ನು ಪ್ರಾರಂಭಿಸದಿರುವ; ಅಥವಾ

(ಇ) ಮೋಸದಿಂದ, ಉದ್ದೇಶಪೂರ್ವಕ ತಪ್ಪುಹೇಳಿಕೆಯಿಂದ ಅಥವಾ ಸಂಗತಿಗಳನ್ನು ಮರೆಮಾಚಿ ನೋಂದಣಿಯನ್ನು ಪಡೆದುಕೊಂಡಿರುವ

– ಕಾರಣಗಳಿಗಾಗಿ ಸೂಕ್ತವೆಂದು ತಾನು ಭಾವಿಸಬಹುದಾದಂಥ ದಿನಾಂಕದಿಂದ ಯಾವುದೇ ಪೂರ್ವಾನ್ವಯ ದಿನಾಂಕವನ್ನು ಒಳಗೊಂಡಂತೆ ರದ್ದುಗೊಳಿಸಬಹುದು:

ಪರಂತು, ಯುಕ್ತ ಅಧಿಕಾರಿಯು, ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡದೇ ನೋಂದಣಿಯನ್ನು ರದ್ದುಗೊಳಿಸತಕ್ಕದ್ದಲ್ಲ:

ಮತ್ತು ಪರಂತು, ನೋಂದಣಿಯ ರದ್ದಿಯಾತಿಗೆ ಸಂಬಂಧಿಸಿದ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಯುಕ್ತ ಅಧಿಕಾರಿಯು ನಿಯಮಿಸಬಹುದಾದಂಥ ಅವಧಿಗಾಗಿ ಮತ್ತು ವಿಧಾನದಲ್ಲಿ ನೋಂದಣಿಯನ್ನು ಅಮಾನತ್ತಿನಲ್ಲಿಡಬಹುದು.

(3) ಈ ಪ್ರಕರಣದ ಅಡಿಯಲ್ಲಿ ನೋಂದಣಿಯು ರದ್ದಾಗಿರುವುದು, ಅದು ರದ್ದಾದ ದಿನಾಂಕದ ಹಿಂದಿನ ಯಾವುದೇ ಅವಧಿಗೆ ಅಂಥ ತೆರಿಗೆಯನ್ನು ಮತ್ತು ಇತರ ಬಾಕಿಗಳನ್ನು ರದ್ದಾದ ದಿನಾಂಕಕ್ಕಿಂತ ಮುಂಚಿತವಾಗಿ ನಿರ್ಧರಿಸಿರಲಿ ಅಥವಾ ನಂತರ ನಿರ್ಧರಿಸಿರಲಿ ಅಥವಾ ನಿರ್ಧರಿಸಿರದಿರಲಿ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ಮತ್ತು ಇತರ ಬಾಕಿಗಳನ್ನು

ಸಂದಾಯ ಮಾಡಬೇಕಾದ ವ್ಯಕ್ತಿಯ ಬಾಧ್ಯತೆಗೆ ಅಥವಾ ಈ ಅಧಿನಿಯಮದ ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿನ ಯಾವುದೇ ಹೊಣೆಗಾರಿಕೆಯ ನಿರ್ವಹಣೆಗೆ ಬಾಧಕವಾಗತಕ್ಕದ್ದಲ್ಲ.

(4) ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಸಂದರ್ಭಾನುಸಾರ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ನೋಂದಣಿಯು ರದ್ದಾಗಿರುವುದನ್ನು ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯು ರದ್ದಾಗಿದೆಯೆಂದು ಭಾವಿಸತಕ್ಕದ್ದು.

(5) ಯಾವ ನೋಂದಾಯಿತ ವ್ಯಕ್ತಿಯ ನೋಂದಣಿಯು ರದ್ದಾಗಿದೆಯೋ ಆ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ರದ್ದಾದ ದಿನಾಂಕದ ನಿಕಟಪೂರ್ವ ದಿನದಂದು, ನಿಯಮಿಸಬಹುದಾದಂಥ ವಿಧಾನದಲ್ಲಿ ಲೆಕ್ಕಹಾಕಿದ, ದಾಸ್ತಾನಿನಲ್ಲಿರುವ ಇನ್‌ಪುಟ್ಸ್‌ಗೆ ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧ ಅಥವಾ ಸಿದ್ಧ ಸರಕುಗಳಲ್ಲಿ ಒಳಗೊಂಡಿರುವ ಇನ್‌ಪುಟ್ಸ್‌ಗೆ ಅಥವಾ ಮೂಲ ಸರಕುಗಳಿಗೆ ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳಿಗೆ ಸಂಬಂಧಿಸಿದಂಥ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗೆ ಸಮನಾದ ಮೊತ್ತ ಅಥವಾ ಅಂಥ ಸರಕುಗಳ ಮೇಲೆ ಸಂದಾಯ ಮಾಡಬೇಕಾದ ಔಟ್‌ಪುಟ್ ಟ್ಯಾಕ್ಸ್ ಇವುಗಳಲ್ಲಿ ಯಾವುದು ಅಧಿಕವೋ ಅದನ್ನು ವಿದ್ಯುನ್ಮಾನ ಜಮೆ ಲೆಡ್ಜರ್‌ಗೆ ಅಥವಾ ವಿದ್ಯುನ್ಮಾನ ನಗದು ಲೆಡ್ಜರ್‌ಗೆ ಖರ್ಚು ಹಾಕುವ ಮೂಲಕ ಸಂದಾಯ ಮಾಡತಕ್ಕದ್ದು:

ಪರಂತು, ಮೂಲ ಸರಕುಗಳು ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ ಸಂದರ್ಭದಲ್ಲಿ, ತೆರಿಗೆದಾಯಕ ವ್ಯಕ್ತಿಯು, ಸದರಿ ಮೂಲ ಸರಕುಗಳ ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ತೆಗೆದುಕೊಂಡ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗೆ ಸಮನಾದ ಮೊತ್ತದಲ್ಲಿ ನಿಯಮಿಸಬಹುದಾದಂಥ ಶೇಕಡವಾರು ಅಂಶಗಳಷ್ಟು ಕಡಿಮೆ ಮಾಡಿದಷ್ಟು ಮೊತ್ತ ಅಥವಾ ಪ್ರಕರಣ 15ರ ಅಡಿಯಲ್ಲಿ ಹೇಳಿರುವ ಅಂಥ ಮೂಲ ಸರಕುಗಳ, ವ್ಯವಹಾರ ಮೌಲ್ಯದ ಮೇಲಿನ ತೆರಿಗೆ, ಇವುಗಳಲ್ಲಿ ಯಾವುದು ಅಧಿಕವೋ ಅದನ್ನು ಸಂದಾಯ ಮಾಡತಕ್ಕದ್ದು.

(6) ಉಪಪ್ರಕರಣ (5)ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊತ್ತವನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಲೆಕ್ಕ ಹಾಕತಕ್ಕದ್ದು.

**30. ರದ್ದಾಗಿರುವ ನೋಂದಣಿಯನ್ನು ಪೂರ್ವಸ್ಥಿತಿಗೆ ತರುವುದು.–** (1) ಯಾವ ನೋಂದಾಯಿತ ವ್ಯಕ್ತಿಯ ನೋಂದಣಿಯನ್ನು ಸ್ವಪ್ರೇರಣೆಯಿಂದ ಯುಕ್ತ ಅಧಿಕಾರಿಯು ರದ್ದುಗೊಳಿಸಿದ್ದಾರೋ ಆ ಯಾರೇ ನೋಂದಾಯಿತ ವ್ಯಕ್ತಿಯು, ಅಂಥ ಅಧಿಕಾರಿಗೆ, ರದ್ದಾಗಿರುವ ನೋಂದಣಿಯನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ ರದ್ದು ಮಾಡಿದ ಆ ಆದೇಶವನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ನಿಯಮಿಸಿದ ವಿಧಾನದಲ್ಲಿ ಅರ್ಜಿಯನ್ನು ಸಲ್ಲಿಸಬಹುದು:

ಪರಂತು, ನೋಂದಾಯಿತ ವ್ಯಕ್ತಿಯು, ಸಾಕಷ್ಟು ಕಾರಣಗಳನ್ನು ತೋರಿಸಿದ ಮೇಲೆ, ಮತ್ತು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ,–

(ಎ) ಹೆಚ್ಚುವರಿ ಆಯುಕ್ತರು ಅಥವಾ ಸಂದರ್ಭಾನುಸಾರ, ಜಂಟಿ ಆಯುಕ್ತರು ಮೂವತ್ತು ದಿನಗಳನ್ನು ಮೀರದ ಅವಧಿಗೆ;

(ಬಿ) ಆಯುಕ್ತರು (ಎ)ಖಂಡದಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು ಮೀರಿ, ಮೂವತ್ತು ದಿನಗಳನ್ನು ಮೀರದ ಹೆಚ್ಚಿನ ಅವಧಿಗೆ

– ಅಂಥ ಅವಧಿಯನ್ನು ವಿಸ್ತರಿಸಬಹುದು.

(2) ಯುಕ್ತ ಅಧಿಕಾರಿಯು, ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಅವಧಿಯೊಳಗೆ ಆದೇಶದ ಮೂಲಕ, ರದ್ದಾಗಿರುವ ನೋಂದಣಿಯನ್ನು ಪೂರ್ವಸ್ಥಿತಿಗೆ ತರಬಹುದು ಅಥವಾ ಆ ಅರ್ಜಿಯನ್ನು ತಿರಸ್ಕರಿಸಬಹುದು:

ಪರಂತು, ಯುಕ್ತ ಅಧಿಕಾರಿಯು, ರದ್ದಾದ ನೋಂದಣಿಯನ್ನು ಪೂರ್ವಸ್ಥಿತಿಗೆ ತರಲು ಸಲ್ಲಿಸಿದ ಅರ್ಜಿಯನ್ನು ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡದ ಹೊರತು ತಿರಸ್ಕರಿಸತಕ್ಕದ್ದಲ್ಲ.

(3) ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಸಂದರ್ಭಾನುಸಾರ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ರದ್ದಾದ ನೋಂದಣಿಯನ್ನು ಪೂರ್ವಸ್ಥಿತಿಗೆ ತಂದಿರುವುದನ್ನು ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯನ್ನು ಪೂರ್ವಸ್ಥಿತಿಗೆ ತರಲಾಗಿದೆ ಎಂದು ಪರಿಭಾವಿಸತಕ್ಕದ್ದು.

## ಅಧ್ಯಾಯ VII

## ತೆರಿಗೆ ದರಪಟ್ಟಿ, ಜಮಾ ಮತ್ತು ಖರ್ಚಿನ ಚೀಟಿಗಳು

**31. ತೆರಿಗೆ ದರಪಟ್ಟಿ.–** (1) ತೆರಿಗೆದಾಯಕ ಸರಕುಗಳನ್ನು ಪೂರೈಕೆ ಮಾಡುವ ನೋಂದಾಯಿತ ವ್ಯಕ್ತಿಯು,–

(ಎ) ಆ ಪೂರೈಕೆಯು ಸರಕುಗಳ ಚಲನೆಯನ್ನು ಒಳಗೊಂಡಿದ್ದಲ್ಲಿ, ಸ್ವೀಕರ್ತನಿಗೆ ಪೂರೈಕೆಗಾಗಿ ಸರಕುಗಳನ್ನು ತೆಗೆಯುವುದಕ್ಕೂ ಮೊದಲು ಅಥವಾ ಆ ಸಮಯದಲ್ಲಿ; ಅಥವಾ

(ಬಿ) ಇತರ ಯಾವುದೇ ಸಂದರ್ಭದಲ್ಲಿ, ಸ್ವೀಕರ್ತನಿಗೆ ಸರಕುಗಳನ್ನು ಬಟವಾಡೆ ಮಾಡುವುದಕ್ಕೂ ಮೊದಲು ಅಥವಾ ಅವುಗಳು ಲಭ್ಯವಾಗುವಂತೆ ಮಾಡುವುದಕ್ಕೂ ಮೊದಲು ಅಥವಾ ಆ ಸಮಯದಲ್ಲಿ

– ಸರಕುಗಳ ವಿವರಣೆ, ಪ್ರಮಾಣ ಮತ್ತು ಮೌಲ್ಯ, ಅವುಗಳ ಮೇಲೆ ವಿಧಿಸಿದ ತೆರಿಗೆ ಮತ್ತು ನಿಯಮಿಸಬಹುದಾದಂಥ ಇತರ ವಿವರಗಳನ್ನು ತೋರಿಸುವಂಥ ಒಂದು ತೆರಿಗೆ ದರಪಟ್ಟಿಯನ್ನು ನೀಡತಕ್ಕದ್ದು:

ಪರಂತು, ಸರ್ಕಾರವು ಪರಿಷತ್ತು ಶಿಫಾರಸ್ಸು ಮಾಡಿದಾಗ, ಅಧಿಸೂಚನೆಯ ಮೂಲಕ, ಸರಕು ಅಥವಾ ಪೂರೈಕೆಗಳ ವರ್ಗಗಳನ್ನು, ಅವುಗಳಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ವಿಧಾನದಲ್ಲಿ, ತೆರಿಗೆ ದರಪಟ್ಟಿಯನ್ನು ನೀಡುವಂತೆ ನಿರ್ದಿಷ್ಟಪಡಿಸಬಹುದು.

(2) ತೆರಿಗೆದಾಯಕ ಸೇವೆಗಳನ್ನು ಪೂರೈಕೆ ಮಾಡುವ ನೋಂದಾಯಿತ ವ್ಯಕ್ತಿಯು, ಸೇವೆಗಳನ್ನು ಒದಗಿಸುವುದಕ್ಕೂ ಮೊದಲು ಅಥವಾ ನಂತರ, ಆದರೆ ನಿಯಮಿಸಿದ ಅವಧಿಯ ಒಳಗಾಗಿ, ಅವುಗಳ ವಿವರಣೆಯನ್ನು, ಮೌಲ್ಯವನ್ನು, ಅವುಗಳ ಮೇಲೆ ವಿಧಿಸಿದ ತೆರಿಗೆಯನ್ನು ಮತ್ತು ನಿಯಮಿಸಬಹುದಾದಂಥ ಇತರ ವಿವರಗಳನ್ನು ತೋರಿಸುವ ತೆರಿಗೆ ದರಪಟ್ಟಿ ನೀಡತಕ್ಕದ್ದು:

ಪರಂತು, ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ ಸರ್ಕಾರವು ಅಧಿಸೂಚನೆಯ ಮೂಲಕ,–

(ಎ) ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ವಿಧಾನದಲ್ಲಿ ಯಾವ ಸೇವೆಗಳ ಅಥವಾ ಪೂರೈಕೆಗಳ ಪ್ರವರ್ಗಗಳ ಸಂಬಂಧದಲ್ಲಿ ತೆರಿಗೆ ದರಪಟ್ಟಿಯನ್ನು ನೀಡತಕ್ಕದ್ದೋ ಆ ಸೇವೆಗಳ ಅಥವಾ ಪೂರೈಕೆಗಳ ಪ್ರವರ್ಗಗಳನ್ನು ನಿರ್ದಿಷ್ಟಪಡಿಸಬಹುದು;

(ಬಿ) ಅದರಲ್ಲಿ ನಮೂದಿಸಿದ ಷರತ್ತಿಗೆ ಒಳಪಟ್ಟು,–

(i) ಪೂರೈಕೆಗೆ ಸಂಬಂಧಿಸಿದಂತೆ ನೀಡಿದ ಇತರೆ ಯಾವುದೇ ದಸ್ತಾವೇಜನ್ನು ತೆರಿಗೆ ದರಪಟ್ಟಿ ಎಂದು ಪರಿಭಾವಿಸತಕ್ಕದ್ದೋ; ಅಥವಾ

(ii) ತೆರಿಗೆ ದರಪಟ್ಟಿಯನ್ನು ನೀಡಬೇಕಾಗಿಲ್ಲವೋ

– ಅಂಥ ಸೇವೆಗಳ ಪ್ರವರ್ಗಗಳನ್ನು ನಿರ್ದಿಷ್ಟಪಡಿಸಬಹುದು.

(3) ಉಪಪ್ರಕರಣ (1) ಮತ್ತು (2)ರಲ್ಲಿ ಏನೇ ಒಳಗೊಂಡಿದ್ದರೂ,–

(ಎ) ನೋಂದಾಯಿತ ವ್ಯಕ್ತಿಯು, ನೋಂದಣಿಯು ಜಾರಿಗೆ ಬಂದ ದಿನಾಂಕದಿಂದ ಪ್ರಾರಂಭವಾಗಿ ಆತನಿಗೆ ನೋಂದಣಿ ಪ್ರಮಾಣಪತ್ರ ನೀಡಿದ ದಿನಾಂಕದವರೆಗಿನ ಅವಧಿಯಲ್ಲಿ ಈಗಾಗಲೇ ನೀಡಿರುವ ದರಪಟ್ಟಿಗೆ ಪ್ರತಿಯಾಗಿ ಪರಿಷ್ಕೃತ ದರಪಟ್ಟಿಯನ್ನು ನೋಂದಣಿ ಪ್ರಮಾಣಪತ್ರ ನೀಡಿದ ದಿನಾಂಕದ ಒಂದು ತಿಂಗಳ ಒಳಗಾಗಿ ಮತ್ತು ನಿಯಮಿಸಬಹುದಾದಂಥ ವಿಧಾನದಲ್ಲಿ ನೀಡಬಹುದು;

(ಬಿ) ನೋಂದಾಯಿತ ವ್ಯಕ್ತಿಯು, ಪೂರೈಕೆ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೌಲ್ಯವು ಎರಡು ನೂರು ರೂಪಾಯಿಗಳಿಗಿಂತ ಕಡಿಮೆಯಿದ್ದರೆ, ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ವಿಧಾನದಲ್ಲಿ ತೆರಿಗೆ ದರಪಟ್ಟಿಯನ್ನು ನೀಡದಿರಬಹುದು;

(ಸಿ) ವಿನಾಯಿತಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಪೂರೈಕೆ ಮಾಡುವ ಅಥವಾ ಪ್ರಕರಣ 10ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ನೋಂದಾಯಿತ ವ್ಯಕ್ತಿಯು, ತೆರಿಗೆ ದರಪಟ್ಟಿಯ ಬದಲಾಗಿ, ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರುವ ಮತ್ತು ಅಂಥ ವಿಧಾನದಲ್ಲಿ ಪೂರೈಕೆಯ ರಸೀದಿಯನ್ನು ನೀಡತಕ್ಕದ್ದು:

ಪರಂತು, ನೋಂದಾಯಿತ ವ್ಯಕ್ತಿಯು, ಪೂರೈಕೆ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೌಲ್ಯವು ಎರಡು ನೂರು ರೂಪಾಯಿಗಳಿಗಿಂತ ಕಡಿಮೆಯಿದ್ದರೆ, ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ವಿಧಾನದಲ್ಲಿ ಪೂರೈಕೆಯ ಬಿಲ್ಲನ್ನು ನೀಡದಿರಬಹುದು.

(ಡಿ) ನೋಂದಾಯಿತ ವ್ಯಕ್ತಿಯು, ಯಾವುದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಮುಂಗಡ ಸಂದಾಯವನ್ನು ಸ್ವೀಕರಿಸಿದಾಗ, ಅಂಥ ಸಂದಾಯವನ್ನು ಸ್ವೀಕರಿಸಿದ್ದಕ್ಕೆ ಪುರಾವೆ

ಒದಗಿಸುವ, ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರುವ, ಸ್ವೀಕೃತಿ ವೋಚರ್‌ನ್ನು ಅಥವಾ ಯಾವುದೇ ಇತರ ದಸ್ತಾವೇಜನ್ನು ನೀಡತಕ್ಕದ್ದು;

(ಇ) ನೋಂದಾಯಿತ ವ್ಯಕ್ತಿಯು, ಯಾವುದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಮುಂಗಡ ಸಂದಾಯವನ್ನು ಸ್ವೀಕರಿಸಿದಾಗ, ಸ್ವೀಕೃತಿ ವೋಚರನ್ನು ನೀಡಿದ್ದರೆ, ಆದರೆ ಆ ತರುವಾಯ ಪೂರೈಕೆಯನ್ನು ಮಾಡಿರದಿದ್ದರೆ ಅಥವಾ ಅದಕ್ಕನುಗುಣವಾಗಿ ತೆರಿಗೆ ದರಪಟ್ಟಿಯನ್ನು ನೀಡಿರದಿದ್ದರೆ, ಸದರಿ ನೋಂದಾಯಿತ ವ್ಯಕ್ತಿಯು, ಸಂದಾಯವನ್ನು ಮಾಡಿದ್ದ ವ್ಯಕ್ತಿಗೆ ಅಂಥ ಸಂದಾಯಕ್ಕೆ ಪ್ರತಿಯಾಗಿ ರೀಫಂಡ್ ವೋಚರನ್ನು ನೀಡಬಹುದು;

(ಎಫ್) ಪ್ರಕರಣ 9ರ ಉಪಪ್ರಕರಣ (3)ರ ಅಥವಾ ಉಪಪ್ರಕರಣ (4)ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡಲು ಬದ್ಧನಾಗಿರುವ ನೋಂದಾಯಿತ ವ್ಯಕ್ತಿಯು, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಸ್ವೀಕೃತಿಯ ದಿನಾಂಕದಂದು ನೋಂದಾಯಿತನಾಗಿರದಂಥ ಪೂರೈಕೆದಾರನಿಂದ ಸ್ವೀಕರಿಸಿದ ಸರಕು ಅಥವಾ ಸೇವೆಗಳಿಗೆ ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ದರಪಟ್ಟಿಯನ್ನು ನೀಡತಕ್ಕದ್ದು;

(ಜಿ) ಪ್ರಕರಣ 9ರ ಉಪಪ್ರಕರಣ (3)ರ ಅಥವಾ ಉಪಪ್ರಕರಣ (4)ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡಲು ಬದ್ಧನಾಗಿರುವ ನೋಂದಾಯಿತ ವ್ಯಕ್ತಿಯು, ಪೂರೈಕೆದಾರನಿಗೆ ಸಂದಾಯ ಮಾಡುವ ಸಮಯದಲ್ಲಿ ಪೇಮೆಂಟ್ ವೋಚರನ್ನು ನೀಡತಕ್ಕದ್ದು.

(4) ಅನುಕ್ರಮವಾಗಿ ಲೆಕ್ಕಗಳ ವಿವರಪತ್ರಗಳನ್ನು ಅಥವಾ ಅನುಕ್ರಮವಾಗಿ ಮಾಡಿದ ಸಂದಾಯಗಳನ್ನು ಒಳಗೊಂಡಿರುವ ಸರಕುಗಳ ನಿರಂತರ ಪೂರೈಕೆಯ ಸಂದರ್ಭದಲ್ಲಿ, ಅಂಥ ಪ್ರತಿಯೊಂದು ವಿವರಪತ್ರವನ್ನು ನೀಡಿದ ಅಥವಾ ಪ್ರತಿಯೊಂದು ಅಂಥ ಸಂದಾಯವನ್ನು ಸ್ವೀಕರಿಸುವುದಕ್ಕೂ ಮೊದಲು ಅಥವಾ ಸಂದರ್ಭಾನುಸಾರ ಆ ಸಮಯದಲ್ಲಿ ದರಪಟ್ಟಿಯನ್ನು ನೀಡತಕ್ಕದ್ದು.

(5) ಉಪಪ್ರಕರಣ (3)ರ ಖಂಡ (ಡಿ)ಯ ಉಪಬಂಧಗಳಿಗೆ ಒಳಪಟ್ಟು, ಸೇವೆಗಳ ನಿರಂತರ ಪೂರೈಕೆಯ ಸಂದರ್ಭದಲ್ಲಿ,–

(ಎ)ಸಂದಾಯದ ಗಡುವಿನ ದಿನಾಂಕವನ್ನು ಕರಾರಿನಿಂದ ಖಚಿತಪಡಿಸಿಕೊಳ್ಳಬಹುದಾದರೆ, ಸಂದಾಯದ ಗಡುವಿನ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು, ದರಪಟ್ಟಿಯನ್ನು ನೀಡತಕ್ಕದ್ದು;

(ಬಿ) ಸಂದಾಯದ ಗಡುವಿನ ದಿನಾಂಕವನ್ನು ಕರಾರಿನಿಂದ ಖಚಿತಪಡಿಸಿಕೊಳ್ಳಲು ಆಗದಿದ್ದರೆ, ಸೇವೆಗಳ ಪೂರೈಕೆದಾರನು ಸಂದಾಯವನ್ನು ಸ್ವೀಕರಿಸುವ ಸಮಯದಲ್ಲಿ ಅಥವಾ ಅದಕ್ಕಿಂತ ಮೊದಲು, ದರಪಟ್ಟಿಯನ್ನು ನೀಡತಕ್ಕದ್ದು;

(ಸಿ) ಸಂದಾಯಕ್ಕೂ ಪೂರೈಕೆಯನ್ನು ಪೂರ್ಣಗೊಳಿಸುವುದಕ್ಕೂ ಸಂಬಂಧ ಇದ್ದರೆ, ಆ ಪೂರೈಕೆಯು ಪೂರ್ಣಗೊಳ್ಳುವ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು, ದರಪಟ್ಟಿಯನ್ನು ನೀಡತಕ್ಕದ್ದು.

(6) ಕರಾರಿನಂತೆ ಪೂರೈಕೆಯು ಪೂರ್ಣಗೊಳ್ಳುವುದಕ್ಕೂ ಮೊದಲೇ ಸೇವೆಗಳ ಪೂರೈಕೆಯು ಸ್ಥಗಿತಗೊಂಡ ಸಂದರ್ಭದಲ್ಲಿ, ಪೂರೈಕೆ ಸ್ಥಗಿತಗೊಂಡ ಸಮಯದಲ್ಲಿ ದರಪಟ್ಟಿಯನ್ನು ನೀಡತಕ್ಕದ್ದು ಮತ್ತು ಅಂಥ ದರಪಟ್ಟಿಯನ್ನು ಹಾಗೆ ಸ್ಥಗಿತಗೊಳ್ಳುವುದಕ್ಕೂ ಮೊದಲೇ ಎಷ್ಟು ಪೂರೈಕೆ ಮಾಡಲಾಗುವುದೋ ಅಷ್ಟರ ಮಟ್ಟಿಗೆ ನೀಡತಕ್ಕದ್ದು.

(7) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಮಾರಾಟಕ್ಕೆ ಅಥವಾ ವಾಪಸಾತಿಗೆ ಅನುಮೋದನೆ ಸಿಕ್ಕಿದಾಗ ಕಳುಹಿಸಿರುವ ಅಥವಾ ತೆಗೆದುಕೊಂಡಿರುವ ಸರಕುಗಳನ್ನು ಪೂರೈಕೆ ಆಗುವುದಕ್ಕೇ ಮೊದಲೇ ತೆಗೆದಿದ್ದಲ್ಲಿ, ದರಪಟ್ಟಿಯನ್ನು ಪೂರೈಕೆಯ ಸಮಯದಲ್ಲಿ ಅಥವಾ ಅದಕ್ಕಿಂತ ಮೊದಲು ಅಥವಾ ತೆಗೆಯಲಾದ ದಿನಾಂಕದಿಂದ ಆರು ತಿಂಗಳು, ಇವುಗಳಲ್ಲಿ ಯಾವುದು ಮೊದಲೋ ಆಗ ನೀಡತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ "ತೆರಿಗೆ ದರಪಟ್ಟಿ" ಪದಾವಳಿಯು ಪೂರೈಕೆದಾರನು, ಈ ಹಿಂದೆ ಮಾಡಿದ ಪೂರೈಕೆಗೆ ಸಂಬಂಧಿಸಿದಂತೆ, ನೀಡಿದ ಯಾವುದೇ ಪರಿಷ್ಕೃತ ದರಪಟ್ಟಿಯನ್ನು ಸಹ ಒಳಗೊಳ್ಳತಕ್ಕದ್ದು.

**31ಎ. ಸ್ವೀಕರ್ತನಿಗೆ ಡಿಜಿಟಲ್ ಪಾವತಿಯ ಸೌಲಭ್ಯ.–** ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಆತನು ಮಾಡಿದ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಸ್ವೀಕರ್ತನಿಗೆ ನಿಯಮಿಸಿದ ವಿದ್ಯುನ್ಮಾನ ಪಾವತಿಯ ವಿಧಾನಗಳನ್ನು ಒದಗಿಸಿರತಕ್ಕ ನೋಂದಾಯಿತ ವ್ಯಕ್ತಿಗಳ ವರ್ಗವನ್ನು ಗೊತ್ತುಪಡಿಸಬಹುದು ಮತ್ತು ತದನುಸಾರವಾಗಿ ಅಂಥ ಸ್ವೀಕರ್ತನಿಗೆ ಪಾವತಿ ಮಾಡಲು ಆಯ್ಕೆಯನ್ನು ನೀಡಬಹುದು.

**32. ತೆರಿಗೆಯ ಅನಧಿಕೃತ ಸಂಗ್ರಹಣೆಯ ನಿಷೇಧ.–** (1) ನೋಂದಾಯಿತ ವ್ಯಕ್ತಿಯಲ್ಲದ ವ್ಯಕ್ತಿಯು, ಯಾವುದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯ ರೂಪದಲ್ಲಿ ಯಾವುದೇ ಮೊತ್ತವನ್ನು ಸಂಗ್ರಹಿಸತಕ್ಕದ್ದಲ್ಲ.

(2) ತೆರಿಗೆದಾಯಕ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿಯಲ್ಲದೆ ಯಾವುದೇ ತೆರಿಗೆಯನ್ನು ಸಂಗ್ರಹಣೆ ಮಾಡತಕ್ಕದ್ದಲ್ಲ.

**33. ತೆರಿಗೆ ದರಪಟ್ಟಿಯಲ್ಲಿ ಮತ್ತು ಇತರ ದಸ್ತಾವೇಜುಗಳಲ್ಲಿ ನಮೂದಿಸಬೇಕಾದ ತೆರಿಗೆಯ ಮೊತ್ತ.–** ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಪ್ರತಿಫಲಕ್ಕಾಗಿ ಯಾವುದೇ ಪೂರೈಕೆಯನ್ನು ಮಾಡಿದ್ದರೆ, ಅಂಥ ಪೂರೈಕೆಗಾಗಿ ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಯಾವ ಬೆಲೆಗೆ ಅಂಥ ಪೂರೈಕೆಯನ್ನು ಮಾಡಲಾಗಿದೆಯೋ ಆ ಪೂರೈಕೆಯ ಬೆಲೆಯ ಭಾಗವಾಗಿರುವ ತೆರಿಗೆಯ ಮೊತ್ತವನ್ನು, ಕರನಿರ್ಧರಣೆಗೆ ಸಂಬಂಧಿಸಿದ ಎಲ್ಲಾ ದಸ್ತಾವೇಜುಗಳಲ್ಲಿ, ತೆರಿಗೆ ದರಪಟ್ಟಿಯಲ್ಲಿ ಮತ್ತು ಇತರ ಅಂಥ ದಸ್ತಾವೇಜುಗಳಲ್ಲಿ ಪ್ರಮುಖವಾಗಿ ನಮೂದಿಸಿರತಕ್ಕದ್ದು.

**34. ಜಮಾ ಮತ್ತು ಖರ್ಚಿನ ಚೀಟಿಗಳು.–** (1) ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಾಗಿ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ತೆರಿಗೆ ದರಪಟ್ಟಿಗಳನ್ನು ನೀಡುವ ಮತ್ತು ಆ ತೆರಿಗೆ ದರಪಟ್ಟಿಯಲ್ಲಿ ತೆರಿಗೆದಾಯಕ ಮೌಲ್ಯವು ಅಥವಾ ವಿಧಿಸಿರುವ ತೆರಿಗೆಯು, ಅಂಥ ಪೂರೈಕೆಗೆ ಸಂಬಂಧಿಸಿದ ತೆರಿಗೆದಾಯಕ ಮೌಲ್ಯವನ್ನು ಅಥವಾ ಸಂದಾಯ

ಮಾಡಬೇಕಾದ ತೆರಿಗೆಯನ್ನು ಮೀರಿರುವುದು ಕಂಡುಬಂದಾಗ ಅಥವಾ ಪೂರೈಕೆ ಮಾಡಿದ ಸರಕುಗಳನ್ನು ಸ್ವೀಕರ್ತನು ಹಿಂದಿರುಗಿಸಿದ್ದರೆ ಅಥವಾ ಮಾಡಿರುವ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯಲ್ಲಿ ನ್ಯೂನತೆ ಕಂಡುಬಂದರೆ ಅಂಥ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಪೂರೈಕೆ ಮಾಡಿರುವ ನೋಂದಾಯಿತ ವ್ಯಕ್ತಿಯು ಸ್ವೀಕರ್ತನಿಗೆ ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರುವ ಒಂದು ಹಣಕಾಸಿನ ವರ್ಷದಲ್ಲಿ ಮಾಡಿದ ಒಂದು ಅಥವಾ ಹೆಚ್ಚಿನ ಜಮಾ ಚೀಟಿಯನ್ನು ನೀಡಬಹುದು.

(2) ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಜಮಾ ಚೀಟಿಯನ್ನು ನೀಡುವ ಯಾರೇ ನೋಂದಾಯಿತ ವ್ಯಕ್ತಿಯು ಅಂಥ ಜಮಾ ಚೀಟಿಯನ್ನು ಯಾವ ತಿಂಗಳಲ್ಲಿ ನೀಡಿರುವನೋ ಆ ತಿಂಗಳಿನ, ಆದರೆ, ಯಾವ ಹಣಕಾಸು ವರ್ಷದಲ್ಲಿ ಅಂಥ ಪೂರೈಕೆ ಮಾಡಲಾಗಿದೆಯೋ ಆ ಹಣಕಾಸು ವರ್ಷ ಕೊನೆಗೊಂಡ ತರುವಾಯ ಬರುವ ನವೆಂಬರ್ ಮೂವತ್ತನೇ ದಿನಾಂಕದ ನಂತರದಲ್ಲದ ಅಥವಾ ಸುಸಂಗತ ವಾರ್ಷಿಕ ರಿಟರ್ನ್‌ನನ್ನು ಸಲ್ಲಿಸುವ ದಿನಾಂಕ ಇವುಗಳಲ್ಲಿ ಯಾವುದು ಮೊದಲೋ ಆ ತಿಂಗಳ ರಿಟರ್ನ್‌ನಲ್ಲಿ ಅಂಥ ಜಮಾ ಚೀಟಿಯ ವಿವರಗಳನ್ನು ಘೋಷಿಸತಕ್ಕದ್ದು ಮತ್ತು ತೆರಿಗೆ ಬಾಧ್ಯತೆಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಹೊಂದಾಣಿಕೆ ಮಾಡತಕ್ಕದ್ದು:

ಪರಂತು, ಅಂಥ ಪೂರೈಕೆ ಮೇಲಣ ತೆರಿಗೆ ಮತ್ತು ಬಡ್ಡಿಯ ಹೊರೆಯನ್ನು ಆತ ಯಾರೇ ಇತರ ವ್ಯಕ್ತಿಗೆ ವರ್ಗಾಯಿಸಿದ್ದರೆ, ಪೂರೈಕೆದಾರನ ಔಟ್‌ಪುಟ್ ಟ್ಯಾಕ್ಸ್ ಬಾಧ್ಯತೆಯಲ್ಲಿ ಇಳಿಕೆಗೆ ಅನುಮತಿ ನೀಡತಕ್ಕದ್ದಲ್ಲ.

(3) ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಾಗಿ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ತೆರಿಗೆ ದರಪಟ್ಟಿಗಳನ್ನು ನೀಡುವ ಮತ್ತು ಆ ತೆರಿಗೆ ದರಪಟ್ಟಿಯಲ್ಲಿರುವ ತೆರಿಗೆದಾಯಕ ಮೌಲ್ಯವು ಅಥವಾ ವಿಧಿಸಿರುವ ತೆರಿಗೆಯು, ಅಂಥ ಪೂರೈಕೆಗೆ ಸಂಬಂಧಿಸಿದ ತೆರಿಗೆದಾಯಕ ಮೌಲ್ಯಕ್ಕಿಂತ ಅಥವಾ ಸಂದಾಯ ಮಾಡಬೇಕಾದ ತೆರಿಗೆಗಿಂತ ಕಡಿಮೆಯಿರುವುದು ಕಂಡುಬಂದಾಗ, ಅಂಥ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಪೂರೈಕೆ ಮಾಡಿರುವ ನೋಂದಾಯಿತ ವ್ಯಕ್ತಿಯು ಸ್ವೀಕರ್ತನಿಗೆ, ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರುವ, ಒಂದು ಹಣಕಾಸಿನ ವರ್ಷದಲ್ಲಿ ಮಾಡಿದ ಒಂದು ಅಥವಾ ಹೆಚ್ಚಿನ ಖರ್ಚಿನ ಚೀಟಿಯನ್ನು ನೀಡತಕ್ಕದ್ದು.

(4) ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಖರ್ಚಿನ ಚೀಟಿಯನ್ನು ನೀಡುವ ಯಾರೇ ನೋಂದಾಯಿತ ವ್ಯಕ್ತಿಯು ಅಂಥ ಖರ್ಚಿನ ಚೀಟಿಯನ್ನು ಯಾವ ತಿಂಗಳಲ್ಲಿ ನೀಡಲಾಗಿದೆಯೋ ಆ ತಿಂಗಳಿನ ರಿಟರ್ನ್‌ನಲ್ಲಿ ಅಂಥ ಖರ್ಚಿನ ಚೀಟಿಯ ವಿವರಗಳನ್ನು ಘೋಷಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ವಿಧಾನದಲ್ಲಿ ತೆರಿಗೆ ಬಾಧ್ಯತೆಯನ್ನು ಹೊಂದಾಣಿಕೆ ಮಾಡತಕ್ಕದ್ದು.

**ವಿವರಣೆ.–** ಈ ಅಧಿನಿಯಮದ ಉದ್ದೇಶಗಳಿಗಾಗಿ 'ಖರ್ಚಿನ ಚೀಟಿ'ಯು ಒಂದು ಪೂರಕ ದರಪಟ್ಟಿಯನ್ನು ಒಳಗೊಂಡಿರತಕ್ಕದ್ದು.

## ಅಧ್ಯಾಯ VIII

## ಲೆಕ್ಕಪತ್ರಗಳು ಮತ್ತು ದಾಖಲೆಗಳು

**35. ಲೆಕ್ಕಪತ್ರಗಳು ಮತ್ತು ಇತರ ದಾಖಲೆಗಳು.–** (1) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ನೋಂದಣಿ ಪ್ರಮಾಣಪತ್ರದಲ್ಲಿ ನಮೂದಾಗಿರುವ ತನ್ನ ಪ್ರಧಾನ ವ್ಯವಹಾರದ ಸ್ಥಳದಲ್ಲಿ,–

(ಎ) ಸರಕುಗಳ ಉತ್ಪಾದನೆ ಅಥವಾ ತಯಾರಿಕೆಯ;

(ಬಿ) ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಒಳಗಡೆಗೆ ಮತ್ತು ಹೊರಗಡೆಗೆ ಮಾಡಿದ ಪೂರೈಕೆಯ;

(ಸಿ) ಸರಕುಗಳ ದಾಸ್ತಾನಿನ;

(ಡಿ) ಬಳಸಿಕೊಂಡ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ;

(ಇ) ಸಂದಾಯ ಮಾಡಬೇಕಾದ ಮತ್ತು ಮಾಡಿದ ಔಟ್‌ಪುಟ್ ಟ್ಯಾಕ್ಸ್‌ನ; ಮತ್ತು

(ಎಫ್) ನಿಯಮಿಸಬಹುದಾದಂಥ ಇತರ ವಿವರಗಳ

–ನಿಜವಾದ ಮತ್ತು ಸರಿಯಾದ ವಿವರವನ್ನು ಇಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು:

ಪರಂತು, ನೋಂದಣಿ ಪ್ರಮಾಣಪತ್ರದಲ್ಲಿ ಒಂದಕ್ಕಿಂತ ಹೆಚ್ಚಿನ ವ್ಯವಹಾರದ ಸ್ಥಳವನ್ನು ನಿರ್ದಿಷ್ಟಪಡಿಸಿದ್ದಲ್ಲಿ, ಪ್ರತಿಯೊಂದು ವ್ಯವಹಾರದ ಸ್ಥಳಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಅಂಥ ವ್ಯವಹಾರದ ಸ್ಥಳಗಳಲ್ಲಿ ಇಡತಕ್ಕದ್ದು:

ಮತ್ತು ಪರಂತು, ನೋಂದಾಯಿತ ವ್ಯಕ್ತಿಯು ಅಂಥ ಲೆಕ್ಕಪತ್ರಗಳನ್ನು ಮತ್ತು ಇತರ ವಿವರಗಳನ್ನು ನಿಯಮಿಸಬಹುದಾದ ವಿಧಾನದಲ್ಲಿ ವಿದ್ಯುನ್ಮಾನ ರೂಪದಲ್ಲಿ ಇಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಸರಕುಗಳನ್ನು ಸಂಗ್ರಹಿಸುವುದಕ್ಕಾಗಿ ಬಳಸುವ ಉಗ್ರಾಣದ ಅಥವಾ ಗೋದಾಮಿನ ಅಥವಾ ಯಾವುದೇ ಇತರ ಸ್ಥಳದ ಪ್ರತಿಯೊಬ್ಬ ಮಾಲೀಕನು ಅಥವಾ ನಿರ್ವಾಹಕನು ಮತ್ತು ಪ್ರತಿಯೊಬ್ಬ ಸಾಗಾಣಿಕೆದಾರನು, ಆತನು ನೋಂದಾಯಿತ ವ್ಯಕ್ತಿಯಾಗಿರಲಿ ಅಥವಾ ಆಗಿರದಿರಲಿ, ಸರಕುಗಳ ರವಾನೆದಾರರ, ಸ್ವೀಕರ್ತ ಮತ್ತು ಇತರ ಸುಸಂಗತ ವಿವರಗಳ ದಾಖಲೆಗಳನ್ನು, ನಿಯಮಿಸಬಹುದಾದಂಥ ವಿಧಾನದಲ್ಲಿ ನಿರ್ವಹಿಸತಕ್ಕದ್ದು.

(3) ಆಯುಕ್ತರು, ನಿರ್ದಿಷ್ಟಪಡಿಸಬಹುದಾದಂಥ ಉದ್ದೇಶಕ್ಕಾಗಿ, ಹೆಚ್ಚುವರಿ ಲೆಕ್ಕಪತ್ರಗಳು ಅಥವಾ ದಸ್ತಾವೇಜುಗಳನ್ನು ನಿರ್ವಹಿಸುವುದಕ್ಕಾಗಿ ತೆರಿಗೆದಾಯಕ ವ್ಯಕ್ತಿಗಳ ವರ್ಗವನ್ನು ಅಧಿಸೂಚಿಸಬಹುದು.

(4) ಆಯುಕ್ತರು, ಯಾವುದೇ ತೆರಿಗೆದಾಯಕ ವ್ಯಕ್ತಿಗಳ ವರ್ಗವು ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಲೆಕ್ಕಪತ್ರಗಳನ್ನು ಇಡುವ ಮತ್ತು ನಿರ್ವಹಿಸುವ ಸ್ಥಿತಿಯಲ್ಲಿ ಇಲ್ಲವೆಂದು ಭಾವಿಸಿದರೆ, ಅವರು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಅಂಥ ತೆರಿಗೆದಾಯಕ ವ್ಯಕ್ತಿಗಳ ವರ್ಗಕ್ಕೆ, ನಿಯಮಿಸಬಹುದಾದಂಥ ವಿಧಾನದಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸಲು ಅನುಮತಿ ನೀಡಬಹುದು.

(5) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಆತನ ವಹಿವಾಟು ಹಣಕಾಸು ವರ್ಷದಲ್ಲಿ ನಿಯಮಿಸಿದ ಮಿತಿಯನ್ನು ಮೀರಿದಾಗ, ತನ್ನ ಲೆಕ್ಕಪತ್ರಗಳನ್ನು ಚಾರ್ಟರ್ಡ್ ಅಕೌಂಟೆಂಟ್‌ನಿಂದ ಅಥವಾ ಕಾಸ್ಟ್ ಅಕೌಂಟೆಂಟ್‌ನಿಂದ ಪರಿಶೋಧನೆ ಮಾಡಿಸಿಕೊಳ್ಳತಕ್ಕದ್ದು ಮತ್ತು ಪ್ರಕರಣ 44ರ ಉಪಪ್ರಕರಣ (2)ರ ಅಡಿಯಲ್ಲಿ ಪರಿಶೋಧಿತ ವಾರ್ಷಿಕ ಲೆಕ್ಕಪತ್ರಗಳು, ಸರಿಹೊಂದಾಣಿಕೆಯ ವಿವರಪತ್ರದ ಪ್ರತಿಯನ್ನು ಮತ್ತು ಅಂಥ ಇತರ ದಸ್ತಾವೇಜುಗಳನ್ನು ನಿಯಮಿಸಬಹುದಾದಂಥ ನಮೂನೆ ಮತ್ತು ವಿಧಾನದಲ್ಲಿ ಸಲ್ಲಿಸತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದಾವುದು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಅಥವಾ ಸ್ಥಳೀಯ ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಗಾಗಿ ನೇಮಕಗೊಂಡ ಲೆಕ್ಕಪರಿಶೋಧಕರ ಮೂಲಕ ಲೆಕ್ಕಪರಿಶೋಧನೆಗೆ ಒಳಪಟ್ಟು, ಯಾವುದೇ ಲೆಕ್ಕ ಪುಸ್ತಕಗಳನ್ನು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದ ಯಾವುದೇ ಇಲಾಖೆಗೆ ಅನ್ವಯಿಸತಕ್ಕದ್ದಲ್ಲ.

(6) ಪ್ರಕರಣ 17ರ ಉಪಪ್ರಕರಣ (5)ರ ಖಂಡ (ಹೆಚ್)ನ ಉಪಬಂಧಗಳಿಗೆ ಒಳಪಟ್ಟು, ನೋಂದಾಯಿತ ವ್ಯಕ್ತಿಯು, ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಲೆಕ್ಕ ಇಡಲು ವಿಫಲನಾದಲ್ಲಿ, ಲೆಕ್ಕ ಇಟ್ಟಿಲ್ಲದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯ ಮೊತ್ತವನ್ನು, ಯುಕ್ತ ಅಧಿಕಾರಿಯು, ಅಂಥ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಅಂಥ ವ್ಯಕ್ತಿಯು ಪೂರೈಕೆ ಮಾಡಿದ್ದರೆ ತೆರಿಗೆಯನ್ನು ಹೇಗೆ ನಿರ್ಧರಿಸಲಾಗುತ್ತಿತ್ತೋ, ಹಾಗೆಯೇ ನಿರ್ಧರಿಸತಕ್ಕದ್ದು ಮತ್ತು ಪ್ರಕರಣ 73ರ ಅಥವಾ ಸಂದರ್ಭಾನುಸಾರವಾಗಿ ಪ್ರಕರಣ 74ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಡನೆ, ಅಂಥ ತೆರಿಗೆಯನ್ನು ನಿರ್ಧರಿಸುವುದಕ್ಕಾಗಿ ಅನ್ವಯವಾಗತಕ್ಕದ್ದು.

**36. ಲೆಕ್ಕಪತ್ರಗಳನ್ನು ಎಷ್ಟು ಅವಧಿಯವರೆಗೆ ಇಟ್ಟುಕೊಂಡಿರಬೇಕಾಗುತ್ತದೆ.–** ಪ್ರಕರಣ 35ರ ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ಲೆಕ್ಕಪುಸ್ತಕಗಳನ್ನು ಅಥವಾ ಇತರ ದಾಖಲೆಗಳನ್ನು ಇಡುವುದು ಮತ್ತು ನಿರ್ವಹಿಸುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ಲೆಕ್ಕಪತ್ರಗಳು ಮತ್ತು ದಾಖಲೆಗಳು ಯಾವ ವರ್ಷಕ್ಕೆ ಸಂಬಂಧಿಸಿವೆಯೋ ಆ ವರ್ಷಕ್ಕೆ ವಾರ್ಷಿಕ ರಿಟರ್ನ್‌ನನ್ನು ಒದಗಿಸಲು ಇರುವ ಗಡುವು ದಿನಾಂಕದಿಂದ ಎಪ್ಪತ್ತೆರಡು ತಿಂಗಳು ಕೊನೆಗೊಳ್ಳುವವರೆಗೂ ಅವುಗಳನ್ನು ಇಟ್ಟುಕೊಂಡಿರತಕ್ಕದ್ದು:

ಪರಂತು, ಯಾವುದೇ ಅಪೀಲು ಪ್ರಾಧಿಕಾರದ ಅಥವಾ ಪುನರೀಕ್ಷಣಾ ಪ್ರಾಧಿಕಾರದ ಅಥವಾ ಅಪೀಲು ನ್ಯಾಯಾಧಿಕರಣದ ಅಥವಾ ನ್ಯಾಯಾಲಯದ ಮುಂದಿರುವ ಅಥವಾ ಅಧ್ಯಾಯ XIXರ ಅಡಿಯಲ್ಲಿನ ಅಪರಾಧಕ್ಕಾಗಿ ತನಿಖೆಯಾಗುತ್ತಿರುವ ಅಪೀಲಿನಲ್ಲಿ ಅಥವಾ ಪುನರೀಕ್ಷಣೆಯಲ್ಲಿ ಅಥವಾ ಯಾವುದೇ ಇತರ ವ್ಯವಹರಣೆಗಳಲ್ಲಿ ಪಕ್ಷಕಾರನಾಗಿರುವ ತೆರಿಗೆದಾಯಕ ವ್ಯಕ್ತಿಯು, ಆತನು ಅಥವಾ ಆಯುಕ್ತರು ಸಲ್ಲಿಸಿದ್ದ ಲೆಕ್ಕಪುಸ್ತಕಗಳನ್ನು ಮತ್ತು ಅಂಥ ಅಪೀಲಿನ ಅಥವಾ ಪುನರೀಕ್ಷಣೆಯ ಅಥವಾ ವ್ಯವಹರಣೆಗಳ ಅಥವಾ ತನಿಖೆಯ ವಸ್ತುವಿಷಯಕ್ಕೆ ಸಂಬಂಧಪಡುವ ಲೆಕ್ಕಪತ್ರಗಳನ್ನು ಇತರ ದಾಖಲೆಗಳನ್ನು ಅಂಥ ಅಪೀಲು ಅಥವಾ ಪುನರೀಕ್ಷಣೆಯು ಅಥವಾ ವ್ಯವಹರಣೆಗಳು ಅಥವಾ ತನಿಖೆಯು

ಅಂತಿಮವಾಗಿ ವಿಲೇಯಾದ ನಂತರದ ಒಂದು ವರ್ಷದ ಅವಧಿ ಅಥವಾ ಮೇಲೆ ನಿರ್ದಿಷ್ಟಪಡಿಸಿದ ಅವಧಿ ಇವುಗಳಲ್ಲಿ ಯಾವುದು ನಂತರದ್ದೋ, ಅಲ್ಲಿಯವರೆಗೆ ಇಟ್ಟುಕೊಂಡಿರತಕ್ಕದ್ದು.

## ಅಧ್ಯಾಯ IX

## ರಿಟರ್ನ್‌ಗಳು

**37. ಹೊರಗಡೆಗೆ ಮಾಡಿದ ಪೂರೈಕೆಗಳ ವಿವರಗಳನ್ನು ಒದಗಿಸುವುದು.–** (1) ಇನ್‌ಪುಟ್ ಸರ್ವೀಸ್ ಹಂಚಿಕೆದಾರನಲ್ಲದ, ನೋಂದಾಯಿತ ವ್ಯಕ್ತಿಯು, ಅನಿವಾಸಿ ತೆರಿಗೆದಾಯಕ ವ್ಯಕ್ತಿಯು ಮತ್ತು ಪ್ರಕರಣ 10ರ ಅಥವಾ ಪ್ರಕರಣ 51ರ ಅಥವಾ ಪ್ರಕರಣ 52ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ವ್ಯಕ್ತಿಯು, ತೆರಿಗೆ ಅವಧಿಯಲ್ಲಿ ಹೊರಗಡೆಗೆ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಳ ವಿವರಗಳನ್ನು ಸದರಿ ತೆರಿಗೆ ಅವಧಿಯ ತದನಂತರ ಬರುವ ತಿಂಗಳಿನ ಹತ್ತನೇ ದಿನದಂದು ಅಥವಾ ಅದಕ್ಕಿಂತ ಮೊದಲು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಮತ್ತು ವಿದ್ಯುನ್ಮಾನ ರೂಪದಲ್ಲಿ ಸಲ್ಲಿಸತಕ್ಕದ್ದು ಮತ್ತು ಅಂಥ ವಿವರಗಳನ್ನು ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಅಂಥ ಸಮಯದೊಳಗೆ ಮತ್ತು ವಿಧಾನದಲ್ಲಿ ಸದರಿ ಪೂರೈಕೆಗಳ ಸ್ವೀಕರ್ತನಿಗೆ ತಿಳಿಸತಕ್ಕದ್ದು:

ಪರಂತು, ಆಯುಕ್ತರು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ತೆರಿಗೆದಾಯಕ ವ್ಯಕ್ತಿಗಳ ವರ್ಗಕ್ಕೆ ಅಂಥ ವಿವರಗಳನ್ನು ಒದಗಿಸುವುದಕ್ಕೆ ಕಾಲಮಿತಿಯನ್ನು ವಿಸ್ತರಿಸಬಹುದು:

ಮತ್ತು ಪರಂತು, ರಾಜ್ಯ ತೆರಿಗೆ ಆಯುಕ್ತರು ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆ ಆಯುಕ್ತರು ಅಧಿಸೂಚಿಸಿದ ಕಾಲಮಿತಿಯ ಯಾವುದೇ ವಿಸ್ತರಣೆಯು, ಆಯುಕ್ತರಿಂದ ಅಧಿಸೂಚಿತಗೊಂಡಿದೆ ಎಂದು ಪರಿಭಾವಿಸತಕ್ಕದ್ದು.

(2) [****ಬಿಟ್ಟುಬಿಡಲಾಗಿದೆ].

(3) ಯಾರೇ ನೋಂದಾಯಿತ ವ್ಯಕ್ತಿಯು, ಯಾವುದೇ ತೆರಿಗೆ ಅವಧಿಗೆ ಉಪಪ್ರಕರಣ (1)ರ ಅಡಿಯಲ್ಲಿ ವಿವರಗಳನ್ನು ಸಲ್ಲಿಸಿದ್ದರೆ, ಅವುಗಳಲ್ಲಿ ಯಾವುದೇ ತಪ್ಪು ಅಥವಾ ಲೋಪ ಪತ್ತೆಯಾದಲ್ಲಿ, ನಿಯಮಿಸಬಹುದಾದಂಥ ವಿಧಾನದಲ್ಲಿ ಅಂಥ ತಪ್ಪು ಅಥವಾ ಲೋಪವನ್ನು ಸರಿಪಡಿಸಿಕೊಳ್ಳತಕ್ಕದ್ದು ಮತ್ತು ಅಂಥ ತಪ್ಪು ಅಥವಾ ಲೋಪದ ಕಾರಣದಿಂದಾಗಿ ತೆರಿಗೆಯು ಕಡಿಮೆ ಸಂದಾಯವಾಗಿದ್ದ ಸಂದರ್ಭದಲ್ಲಿ, ಯಾವುದಾದರೂ ತೆರಿಗೆ ಮತ್ತು ಬಡ್ಡಿಯನ್ನು ಅಂಥ ತೆರಿಗೆ ಅವಧಿಗೆ ಒದಗಿಸಬೇಕಾಗಿರುವ ರಿಟರ್ನ್‌ನಲ್ಲಿ ಸಂದಾಯ ಮಾಡತಕ್ಕದ್ದು:

ಪರಂತು, ಉಪಪ್ರಕರಣ (1)ರ ಅಡಿಯಲ್ಲಿ ಸಲ್ಲಿಸಿದ ವಿವರಗಳಿಗೆ ಸಂಬಂಧಿಸಿದ ತಪ್ಪನ್ನು ಅಥವಾ ಲೋಪವನ್ನು ಸರಿಪಡಿಸುವುದಕ್ಕೆ, ಅಂಥ ವಿವರಗಳು ಯಾವ ಹಣಕಾಸು ವರ್ಷಕ್ಕೆ ಸಂಬಂಧಿಸಿವೆಯೋ ಆ ಹಣಕಾಸು ವರ್ಷ ಕೊನೆಗೊಂಡ ನಂತರ ಬರುವ ನವೆಂಬರ್ ಮೂವತ್ತನೇ ದಿನಾಂಕದ ಅಥವಾ ಸುಸಂಗತ ವಾರ್ಷಿಕ ರಿಟರ್ನ್‌ನನ್ನು ಸಲ್ಲಿಸಿದ ನಂತರ, ಇವುಗಳಲ್ಲಿ ಯಾವುದು ಮೊದಲೋ ಆ ನಂತರ ಅನುಮತಿ ನೀಡತಕ್ಕದ್ದಲ್ಲ:

ಮತ್ತು ಪರಂತು, ಉಪಪ್ರಕರಣ (1)ರ ಮೇರೆಗೆ ಸಲ್ಲಿಸಿದ ವಿವರಗಳಿಗೆ ಸಂಬಂಧಿಸಿದ ತಪ್ಪನ್ನು ಅಥವಾ ಲೋಪವನ್ನು ಸರಿಪಡಿಸುವುದಕ್ಕೆ ಅವಕಾಶವನ್ನು, ಪ್ರಕರಣ 39ರ ಮೇರೆಗೆ ವಿವರಗಳನ್ನು ಒದಗಿಸಿದ ತರುವಾಯ 2018ರ ಸೆಪ್ಟೆಂಬರ್ ತಿಂಗಳಿಗೆ, 2019ರ ಮಾರ್ಚ್ ತಿಂಗಳಿಗೆ ಅಥವಾ ಜನವರಿ 2019ರಿಂದ ಮಾರ್ಚ್ 2019ರ ತ್ರೈಮಾಸಿಕಕ್ಕೆ ವಿವರಗಳನ್ನು ಒದಗಿಸಲು ಗೊತ್ತುಪಡಿಸಿದ ಕೊನೆಯ ದಿನಾಂಕದವರೆಗೆ ನೀಡತಕ್ಕದ್ದು.

**ವಿವರಣೆ.–** ಈ ಅಧ್ಯಾಯದ ಉದ್ದೇಶಗಳಿಗಾಗಿ, "ಹೊರಗಡೆಗೆ ಮಾಡಿದ ಪೂರೈಕೆಗಳ ವಿವರಗಳು" ಪದಾವಳಿಯು ಯಾವುದೇ ತೆರಿಗೆ ಅವಧಿಯಲ್ಲಿ ಹೊರಗಡೆಗೆ ಮಾಡಿದ ಪೂರೈಕೆಗಳಿಗೆ ಸಂಬಂಧಿಸಿದಂತೆ ನೀಡಿದ ದರಪಟ್ಟಿಗಳ, ಖರ್ಚಿನ ಚೀಟಿಗಳ, ಜಮಾ ಚೀಟಿಗಳ ಮತ್ತು ಪರಿಷ್ಕೃತ ದರಪಟ್ಟಿಗಳ ವಿವರಗಳನ್ನು ಒಳಗೊಂಡಿರತಕ್ಕದ್ದು.

(4) ನೋಂದಾಯಿತ ವ್ಯಕ್ತಿಯು ಹಿಂದಿನ ಯಾವುದೇ ತೆರಿಗೆ ಅವಧಿಗಳಿಗೆ ಹೊರ ಪೂರೈಕೆಗಳ ವಿವರಗಳನ್ನು ಸಲ್ಲಿಸದಿರುವಲ್ಲಿ, ಆತನು ತೆರಿಗೆ ಅವಧಿಗಾಗಿ ಉಪಪ್ರಕರಣ (1)ರ ಅಡಿಯಲ್ಲಿ ಹೊರ ಪೂರೈಕೆಗಳ ವಿವರಗಳನ್ನು ಒದಗಿಸಲು ಅನುಮತಿಸಲಾಗುವುದಿಲ್ಲ:

ಪರಂತು, ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ನೋಂದಾಯಿತ ವ್ಯಕ್ತಿಯು ಅಥವಾ ನೋಂದಾಯಿತ ವ್ಯಕ್ತಿಗಳ ವರ್ಗವು ಒಂದು ಅಥವಾ ಹೆಚ್ಚು ಹಿಂದಿನ ತೆರಿಗೆ ಅವಧಿಗಳಿಗಾಗಿ ಹೊರ ಪೂರೈಕೆಗಳ ವಿವರಗಳನ್ನು ಒದಗಿಸದಿದ್ದರೂ ಸಹ ಉಪಪ್ರಕರಣ (1)ರ ಅಡಿಯಲ್ಲಿ ಹೊರ ಪೂರೈಕೆಗಳ ವಿವರಗಳನ್ನು ಸಲ್ಲಿಸಲು ಅವರಿಗೆ ಅನುಮತಿಸಬಹುದು.

**38. ಒಳ ಪೂರೈಕೆಗಳ ಮತ್ತು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ವಿವರಗಳನ್ನು ತಿಳಿಸುವುದು.–** (1) ಪ್ರಕರಣ 37ರ ಉಪಪ್ರಕರಣ (1)ರ ಅಡಿಯಲ್ಲಿ ನೋಂದಾಯಿತ ವ್ಯಕ್ತಿಗಳು ತೆರಿಗೆ ಅವಧಿಗೆ ಹೊರಗಡೆಗೆ ಮಾಡಿದ ಪೂರೈಕೆಗಳ ವಿವರಗಳನ್ನು ಮತ್ತು ನಿಯಮಿಸಬಹುದಾದಂಥ ಇತರ ಸರಬರಾಜುಗಳನ್ನು ಮತ್ತು ಮಾಡಿದ ಪೂರೈಕೆಗಳ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ವಿವರಗಳನ್ನು ಒಳಗೊಂಡ ಸ್ವಯಂ ಉತ್ಪಾದಿತ ವಿವರಪಟ್ಟಿಕೆಗಳನ್ನು ಸ್ವೀಕರ್ತರಿಗೆ ನಿಯಮಿಸಬಹುದಾದಂಥ ರೂಪದಲ್ಲಿ ಮತ್ತು ರೀತಿಯಲ್ಲಿ ಅಂಥ ಸಮಯದೊಳಗೆ ಮತ್ತು ಸೂಚಿಸಬಹುದಾದ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ವಿದ್ಯುನ್ಮಾನವಾಗಿ ಲಭ್ಯವಾಗುವಂತೆ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಅಡಿಯಲ್ಲಿ ಸ್ವಯಂ ಉತ್ಪಾದಿತ ವಿವರಪಟ್ಟಿಯು ಕೆಳಕಂಡವುಗಳು ಎಂದರೆ:–

(ಎ) ಯಾವ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಸಂಬಂಧದಲ್ಲಿ ಸ್ವೀಕರ್ತನಿಗೆ ಲಭ್ಯವಾಗಬಹುದಾದ ಒಳ ಪೂರೈಕೆಗಳ ವಿವರಗಳು; ಮತ್ತು

(ಬಿ) ಪ್ರಕರಣ 37ರ ಉಪಪ್ರಕರಣ (1)ರ ಅಡಿಯಲ್ಲಿ ಸಲ್ಲಿಸಲಾಗುತ್ತಿರುವ ಸದರಿ ಪೂರೈಕೆಗಳ ವಿವರಗಳ ಕಾರಣದಿಂದ ಸ್ವೀಕರ್ತನು ಸಂಪೂರ್ಣವಾಗಿ ಆಗಲಿ ಅಥವಾ ಭಾಗಶಃ ಆಗಲಿ ಅಂಥ ಕ್ರೆಡಿಟ್ ಅನ್ನು ಬಳಸಿಕೊಳ್ಳಲು ಸಾಧ್ಯವಾಗದಿರುವುದಕ್ಕೆ ಸಂಬಂಧಪಟ್ಟ ಪೂರೈಕೆಗಳ ವಿವರಗಳನ್ನು,–

(i) ನಿಯಮಿಸಬಹುದಾದಂಥ ನೋಂದಣಿಯನ್ನು ಪಡೆದುಕೊಳ್ಳುವಂತೆ ಅವಧಿಯೊಳಗಾಗಿ ಯಾರೇ ನೋಂದಾಯಿತ ವ್ಯಕ್ತಿಯು; ಅಥವಾ

(ii) ತೆರಿಗೆಯನ್ನು ಸಂದಾಯ ಮಾಡುವಲ್ಲಿ ತಪ್ಪಿರುವಂಥ ಮತ್ತು ಅಂಥ ತಪ್ಪಿತವನ್ನು ನಿಯಮಿಸಬಹುದಾದಂಥ ಅವಧಿಯವರೆಗೆ ಮುಂದುವರೆಸಿರುವ ಯಾರೇ ನೋಂದಾಯಿತ ವ್ಯಕ್ತಿಯು; ಅಥವಾ

(iii) ನಿಯಮಿಸಬಹುದಾದಂಥ ಅವಧಿಯಲ್ಲಿ ಸದರಿ ಉಪಪ್ರಕರಣದ ಯಾರೇ ನೋಂದಾಯಿತ ವ್ಯಕ್ತಿಯು ಸಲ್ಲಿಸಿದ ಹೊರ ಪೂರೈಕೆಗಳ ವಿವರಪಟ್ಟಿಕೆಯ ಅನುಸಾರವಾಗಿ ಸಂದಾಯ ಮಾಡಬೇಕಾದ ಔಟ್ ಪುಟ್ ತೆರಿಗೆಯು ನಿಯಮಿಸಬಹುದಾದಂಥ ಕಾಲಮಿತಿಯೊಳಗೆ ಅವನು ಸಂದಾಯ ಮಾಡಿರುವ ಔಟ್ ಪುಟ್ ತೆರಿಗೆಯನ್ನು ಮೀರಿದ್ದರೆ ಅಂಥ ವ್ಯಕ್ತಿಯು; ಅಥವಾ

(iv) ಯಾವ ನೋಂದಾಯಿತ ವ್ಯಕ್ತಿಯು, ನಿಯಮಿಸಬಹುದಾದ ಅವಧಿಯಲ್ಲಿ ಅವನು (ಎ) ಖಂಡದ ಅನುಸಾರವಾಗಿ ಬಳಸಿಕೊಳ್ಳಬಹುದಾದಂಥ ಕ್ರೆಡಿಟ್ ಮಿತಿಯನ್ನು ಮೀರಿದ ಮೊತ್ತದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಬಳಸಿಕೊಂಡಿರುವ ಆ ಯಾರೇ ನೋಂದಾಯಿತ ವ್ಯಕ್ತಿಯು; ಅಥವಾ

(v) ಯಾವ ನೋಂದಾಯಿತ ವ್ಯಕ್ತಿಯು ನಿಯಮಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಪ್ರಕರಣ 49ರ ಉಪಪ್ರಕರಣ (12)ರ ಉಪಬಂಧಗಳಿಗೆ ಅನುಸಾರವಾಗಿ ತನ್ನ ತೆರಿಗೆ ಹೊಣೆಗಾರಿಕೆಯನ್ನು ನೆರವೇರಿಸಲು ತಪ್ಪಿರುವ ಆ ಯಾರೇ ನೋಂದಾಯಿತ ವ್ಯಕ್ತಿಯು; ಅಥವಾ

(vi) ನಿಯಮಿಸಬಹುದಾದಂಥ ಇತರೆ ವರ್ಗದ ವ್ಯಕ್ತಿಗಳು

– ಸಲ್ಲಿಸಿರುವ ವಿವರಗಳನ್ನು ಒಳಗೊಂಡಿರತಕ್ಕದ್ದು.

**39. ರಿಟರ್ನ್‌ಗಳನ್ನು ಸಲ್ಲಿಸುವುದು.–** (1) ಇನ್‌ಪುಟ್ ಸರ್ವೀಸ್ ಹಂಚಿಕೆದಾರನಲ್ಲದ ಅಥವಾ ಅನಿವಾಸಿ ತೆರಿಗೆದಾರ ವ್ಯಕ್ತಿಯು ಅಥವಾ ಪ್ರಕರಣ 10ರ ಅಥವಾ ಪ್ರಕರಣ 51ರ ಅಥವಾ ಪ್ರಕರಣ 52ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರತಿಯೊಂದು ಕ್ಯಾಲೆಂಡರ್ ತಿಂಗಳಿಗೆ ಅಥವಾ ಅದರ ಭಾಗಕ್ಕೆ ಒಳಗಡೆಗೆ ಮಾಡಿದ ಮತ್ತು ಹೊರಗಡೆಗೆ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಳ ಬಳಸಿಕೊಂಡ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ, ಸಂದಾಯ ಮಾಡಬೇಕಾದ ತೆರಿಗೆ, ಸಂದಾಯ ಮಾಡಿದ ತೆರಿಗೆ ಮತ್ತು ಅಂಥ ಇತರೆ ವಿವರಗಳ ಒಂದು ರಿಟರ್ನ್ ಅನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಮತ್ತು ಅಂಥ ಕಾಲದೊಳಗೆ ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು:

ಪರಂತು, ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಪ್ರತಿ ತ್ರೈಮಾಸಿಕ ಅಥವಾ ಅದರ ಭಾಗಕ್ಕೆ ರಿಟರ್ನ್ ಅನ್ನು ಸಲ್ಲಿಸಿರತಕ್ಕ ಕೆಲವು ನೋಂದಾಯಿತ ವ್ಯಕ್ತಿಗಳ ವರ್ಗವನ್ನು ಅಧಿಸೂಚಿಸಬಹುದು.

(2) ಪ್ರಕರಣ 10ರ ಉಪಬಂಧಗಳ ಮೇರೆಗೆ ತೆರಿಗೆ ಸಂದಾಯ ಮಾಡುವ ನೋಂದಾಯಿತ ವ್ಯಕ್ತಿಯು, ಪ್ರತಿಯೊಂದು ಹಣಕಾಸು ವರ್ಷಕ್ಕೆ ಅಥವಾ ಅದರ ಭಾಗಕ್ಕೆ ರಾಜ್ಯದಲ್ಲಾದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಾದ ವಹಿವಾಟಿನ, ಒಳಗಡೆಗೆ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವೆರಡರ ಪೂರೈಕೆಗಳ, ಸಂದಾಯ ಮಾಡಬೇಕಾದ ತೆರಿಗೆಯ, ಸಂದಾಯ

ಮಾಡಿದ ತೆರಿಗೆಯ ಮತ್ತು ಅಂಥ ಇತರ ವಿವರಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ವಿಧಾನದಲ್ಲಿ ಮತ್ತು ಅಂಥ ಕಾಲದೊಳಗೆ ವಿದ್ಯುನ್ಮಾನ ರೀತಿಯಲ್ಲಿ ರಿಟರ್ನ್ ಅನ್ನು ಸಲ್ಲಿಸತಕ್ಕದ್ದು.

(3) ಪ್ರಕರಣ 51ರ ಉಪಬಂಧಗಳ ಅಡಿಯಲ್ಲಿ, ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು ಯಾವ ತಿಂಗಳಿನಲ್ಲಿ ಅಂಥ ಮುರುಗಡೆಗಳನ್ನು ಮಾಡಲಾಗಿದೆಯೋ ಆ ತಿಂಗಳಿಗೆ ರಿಟರ್ನ್‌ನನ್ನು ವಿದ್ಯುನ್ಮಾನ ರೀತಿಯಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ, ಅಂಥ ತಿಂಗಳು ಕೊನೆಗೊಂಡ ಹತ್ತು ದಿನಗಳ ಒಳಗಾಗಿ ಒದಗಿಸತಕ್ಕದ್ದು.

(4) ಇನ್‌ಪುಟ್ ಸರ್ವೀಸ್ ಹಂಚಿಕೆದಾರನಾಗಿ ನೋಂದಾಯಿತನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಪ್ರತಿಯೊಂದು ಕ್ಯಾಲೆಂಡರ್ ತಿಂಗಳಿಗೆ ಅಥವಾ ಅದರ ಭಾಗಕ್ಕೆ ರಿಟರ್ನ್‌ನನ್ನು ವಿದ್ಯುನ್ಮಾನ ರೀತಿಯಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಅಂಥ ತಿಂಗಳು ಕೊನೆಗೊಂಡ ಹದಿಮೂರು ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು.

(5) ಪ್ರತಿಯೊಬ್ಬ ನೋಂದಾಯಿತ ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ಪ್ರತಿಯೊಂದು ಕ್ಯಾಲೆಂಡರ್ ತಿಂಗಳಿಗೆ ಅಥವಾ ಅದರ ಭಾಗಕ್ಕೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ, ರಿಟರ್ನ್‌ನನ್ನು ವಿದ್ಯುನ್ಮಾನ ರೀತಿಯಲ್ಲಿ ಕ್ಯಾಲೆಂಡರ್ ತಿಂಗಳು ಕೊನೆಗೊಂಡ ತರುವಾಯದ ಹದಿಮೂರು ದಿನಗಳ ಒಳಗೆ ಅಥವಾ ಪ್ರಕರಣ 27ರ ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ನೋಂದಣಿ ಅವಧಿಯ ಕೊನೆಯ ದಿನದ ತರುವಾಯದ ಏಳು ದಿನಗಳ ಒಳಗೆ, ಇವೆರಡರಲ್ಲಿ ಯಾವುದು ಮೊದಲೋ ಅದರ ಒಳಗಾಗಿ ಸಲ್ಲಿಸತಕ್ಕದ್ದು.

(6) ಆಯುಕ್ತರು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ತೆರಿಗೆದಾಯಕ ವ್ಯಕ್ತಿಗಳ ವರ್ಗಕ್ಕೆ ಈ ಪ್ರಕರಣದ ಅಡಿಯಲ್ಲಿ ರಿಟರ್ನ್‌ಗಳನ್ನು ಸಲ್ಲಿಸುವುದಕ್ಕೆ ಕಾಲಮಿತಿಯನ್ನು ವಿಸ್ತರಿಸಬಹುದು:

ಪರಂತು, ರಾಜ್ಯ ತೆರಿಗೆ ಆಯುಕ್ತರಿಂದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆ ಆಯುಕ್ತರಿಂದ ಅಧಿಸೂಚಿಸಿದ ಕಾಲಮಿತಿಯ ಯಾವುದೇ ವಿಸ್ತರಣೆಯು ಆಯುಕ್ತರಿಂದ ಅಧಿಸೂಚಿತಗೊಂಡಿದೆ ಎಂದು ಪರಿಭಾವಿಸತಕ್ಕದ್ದು.

(7) ಉಪಪ್ರಕರಣ (1)ರ ಪರಂತುಕದಲ್ಲಿ, ಉಲ್ಲೇಖಿಸಿದ ವ್ಯಕ್ತಿಯನ್ನು ಹೊರತುಪಡಿಸಿ ಅಥವಾ ಉಪಪ್ರಕರಣ (3) ಅಥವಾ ಉಪಪ್ರಕರಣ (5)ರ ಮೇರೆಗೆ ರಿಟರ್ನ್ ಅನ್ನು ಸಲ್ಲಿಸಲು ಅಗತ್ಯಪಡಿಸಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅವನು ಅಂಥ ರಿಟರ್ನ್ ಅನ್ನು ಯಾವ ಕೊನೆಯ ದಿನಾಂಕದಂದು ಸಲ್ಲಿಸಲು ಅಗತ್ಯಪಡಿಸಲಾಗಿದೆಯೋ ಆ ಕೊನೆಯ ದಿನಾಂಕವನ್ನು ಮೀರದಂತೆ ಅಂಥ ರಿಟರ್ನ್‌ನ ಪ್ರಕಾರ ಬಾಕಿ ಇರುವ ತೆರಿಗೆಯನ್ನು ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು:

ಪರಂತು, ಉಪಪ್ರಕರಣ (1)ರ ಪರಂತುಕದ ಮೇರೆಗೆ ರಿಟರ್ನ್ ಅನ್ನು ಸಲ್ಲಿಸುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮತ್ತು ಸಮಯದೊಳಗೆ ಸರ್ಕಾರಕ್ಕೆ ಪಾವತಿಸತಕ್ಕದ್ದು:

(ಎ) ಒಂದು ತಿಂಗಳ ಅವಧಿಯಲ್ಲಿ ಸರಕುಗಳ ಮತ್ತು ಸೇವೆಗಳ ಅಥವಾ ಅವೆರಡರ ಒಳ ಮತ್ತು ಹೊರ ಪೂರೈಕೆಗಳನ್ನು ಬಳಸಿಕೊಳ್ಳಲಾದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಸಂದಾಯ ಮಾಡಬೇಕಾದ ತೆರಿಗೆಯನ್ನು ಮತ್ತು

ಅಂಥ ಇತರ ವಿವರಗಳನ್ನು ಗಣನೆಗೆ ತೆಗೆದುಕೊಂಡ ಮೇಲೆ ಬಾಕಿಯಿರುವ ತೆರಿಗೆಗೆ ಸಮಾನವಾದ ಮೊಬಲಗು; ಅಥವಾ

(ಬಿ) ಖಂಡ (ಎ)ಯಲ್ಲಿ ಉಲ್ಲೇಖಿಸಲಾದ ಮೊಬಲಗಿಗೆ ಬದಲಾಗಿ ನಿಯಮಿಸಬಹುದಾದ ವಿಧಾನದಲ್ಲಿ ಮತ್ತು ನಿಯಮಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ನಿರ್ಧರಿಸಲಾದ ಮೊಬಲಗು:

ಮತ್ತು ಪರಂತು, ಉಪಪ್ರಕರಣ (2)ರ ಮೇರೆಗೆ ರಿಟರ್ನ್ ಅನ್ನು ಸಲ್ಲಿಸುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ರಾಜ್ಯದಲ್ಲಾದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಾದ ವಹಿವಾಟನ್ನು, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಒಳ ಪೂರೈಕೆಗಳನ್ನು, ಸಂದಾಯ ಮಾಡಬೇಕಾದ ತೆರಿಗೆಯನ್ನು ಮತ್ತು ಅಂಥ ಇತರ ವಿವರಗಳನ್ನು ಗಣನೆಗೆ ತೆಗೆದುಕೊಂಡು ಬಾಕಿ ಇರುವ ತೆರಿಗೆಯನ್ನು ತ್ರೈಮಾಸಿಕವಾಗಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಮತ್ತು ಅಂಥ ಕಾಲದೊಳಗೆ, ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

(8) ಉಪಪ್ರಕರಣ (1)ರ ಅಥವಾ ಉಪಪ್ರಕರಣ (2)ರ ಅಡಿಯಲ್ಲಿ ರಿಟರ್ನ್‌ನನ್ನು ಸಲ್ಲಿಸುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ತೆರಿಗೆ ಅವಧಿಯಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯನ್ನು ಮಾಡಿರಲಿ ಅಥವಾ ಇಲ್ಲದಿರಲಿ ಪ್ರತಿಯೊಂದು ತೆರಿಗೆ ಅವಧಿಗೆ ಒಂದು ರಿಟರ್ನ್‌ನನ್ನು ಸಲ್ಲಿಸತಕ್ಕದ್ದು.

(9) ಯಾರೇ ನೋಂದಾಯಿತ ವ್ಯಕ್ತಿಯು, ಉಪಪ್ರಕರಣ (1) ಅಥವಾ ಉಪಪ್ರಕರಣ (2) ಅಥವಾ ಉಪಪ್ರಕರಣ (3) ಅಥವಾ ಉಪಪ್ರಕರಣ (4) ಅಥವಾ ಉಪಪ್ರಕರಣ (5)ರ ಅಡಿಯಲ್ಲಿ ರಿಟರ್ನ್ ಅನ್ನು ಸಲ್ಲಿಸಿದ ನಂತರ, ಅದರಲ್ಲಿ, ತೆರಿಗೆ ಪ್ರಾಧಿಕಾರದಿಂದ ಸೂಕ್ಷ್ಮ ಪರಿಶೀಲನೆ, ಲೆಕ್ಕಪರಿಶೋಧನೆ, ತಪಾಸಣೆ ಅಥವಾ ಜಾರಿ ಚಟುವಟಿಕೆಗಳ ಪರಿಣಾಮವಾಗಿ ಕಂಡುಬಂದವುಗಳ ಹೊರತು, ಯಾವುದೇ ಲೋಪ ಅಥವಾ ತಪ್ಪು ವಿವರಗಳು ಪತ್ತೆಯಾದಲ್ಲಿ, ಅವನು, ನಿಯಮಿಸಬಹುದಾದ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಅಂಥ ಲೋಪದ ಅಥವಾ ತಪ್ಪು ವಿವರಗಳನ್ನು, ಈ ಅಧಿನಿಯಮದ ಅಡಿಯಲ್ಲಿನ ಬಡ್ಡಿಯ ಸಂದಾಯದ ನಿಬಂಧನೆಗೆ ಒಳಪಟ್ಟು, ಸರಿಪಡಿಸಿಕೊಳ್ಳತಕ್ಕದ್ದು:

ಪರಂತು, ಅಂಥ ವಿವರಗಳು ಸಂಬಂಧಿಸಿದ ಹಣಕಾಸು ವರ್ಷದ ಕೊನೆಗೊಂಡ ನಂತರ ಬರುವ ನವೆಂಬರ್ ಮೂವತ್ತನೇ ದಿನಾಂಕದ ಅಥವಾ ಸುಸಂಗತ ವಾರ್ಷಿಕ ರಿಟರ್ನ್‌ನನ್ನು ಸಲ್ಲಿಸಿದ ವಾಸ್ತವಿಕ ದಿನಾಂಕ ಇವುಗಳಲ್ಲಿ ಯಾವುದು ಮೊದಲೋ ಅದರ ನಂತರ ಯಾವುದೇ ಲೋಪದ ಅಥವಾ ತಪ್ಪು ವಿವರಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಅನುಮತಿ ನೀಡತಕ್ಕದ್ದಲ್ಲ.

(10) ಹಿಂದಿನ ತೆರಿಗೆ ಅವಧಿಗಳಲ್ಲಿನ ಯಾವುದಾದರೂ ಅವಧಿಗೆ ರಿಟರ್ನ್‌ನನ್ನು ಸಲ್ಲಿಸಿಲ್ಲದಿದ್ದರೆ, ನೋಂದಾಯಿತ ವ್ಯಕ್ತಿಗೆ ತೆರಿಗೆ ಅವಧಿಗೆ ರಿಟರ್ನ್‌ನನ್ನು ಸಲ್ಲಿಸಲು ಅಥವಾ ಸದರಿ ತೆರಿಗೆ ಅವಧಿಗೆ ಪ್ರಕರಣ 37ರ ಉಪಪ್ರಕರಣ (1)ರ ಅಡಿಯಲ್ಲಿ ಹೊರ ಪೂರೈಕೆಗಳ ವಿವರಗಳನ್ನು ಸಲ್ಲಿಸದಿದ್ದಾಗ್ಯೂ ರಿಟರ್ನ್ ಅನ್ನು ಸಲ್ಲಿಸಲು ಅನುಮತಿಸತಕ್ಕದ್ದಲ್ಲ.

ಪರಂತು, ಸರ್ಕಾರವು ಪರಿಷತ್ತಿನ ಶಿಫಾರಸ್ಸುಗಳ ಮೇಲೆ ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ರಿಟರ್ನ್ ಅನ್ನು ಸಲ್ಲಿಸದಿದ್ದರೂ ಸಹ ಒಂದು ಅಥವಾ ಹೆಚ್ಚಿನ ತೆರಿಗೆ ಅವಧಿಗಳಿಗೆ ರಿಟರ್ನ್ ಸಲ್ಲಿಸದಿದ್ದಾಗ್ಯೂ ಅಥವಾ ಸದರಿ ತೆರಿಗೆ ಅವಧಿಗೆ ಪ್ರಕರಣ 37ರ ಉಪಪ್ರಕರಣ

(1)ರ ಅಡಿಯಲ್ಲಿ ಹೊರ ಪೂರೈಕೆಗಳ ವಿವರಗಳನ್ನು ಸಲ್ಲಿಸದಿದ್ದಾಗ್ಯೂ ರಿಟರ್ನ್ ಅನ್ನು ಸಲ್ಲಿಸಲು ನೋಂದಾಯಿತ ವ್ಯಕ್ತಿ ಅಥವಾ ನೋಂದಾಯಿತ ವ್ಯಕ್ತಿಗಳ ವರ್ಗವು ಅನುಮತಿಸಬಹುದು.

**40. ಪ್ರಥಮ ರಿಟರ್ನ್.–** ನೋಂದಣಿಗೆ ಬಾಧ್ಯನಾಗುವ ದಿನಾಂಕದಿಂದ ನೋಂದಣಿ ಮಂಜೂರಾದ ದಿನಾಂಕದವರೆಗಿನ ನಡುವಿನ ಅವಧಿಯಲ್ಲಿ ಹೊರಗಡೆಗೆ ಪೂರೈಕೆಗಳನ್ನು ಮಾಡಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ನೋಂದಣಿ ಮಂಜೂರಾತಿಯ ನಂತರ ಆತನು ಒದಗಿಸುವ ಪ್ರಥಮ ರಿಟರ್ನ್‌ನಲ್ಲಿ ಪೂರೈಕೆ ಮಾಡಿರುವುದನ್ನು ಘೋಷಿಸತಕ್ಕದ್ದು.

**41. ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಲಭ್ಯತೆ.–** (1) ನಿಯಮಿಸಬಹುದಾದಂಥ ಷರತ್ತುಗಳಿಗೆ ಹಾಗೂ ನಿರ್ಬಂಧಗಳಿಗೆ ಒಳಪಟ್ಟು, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಅವನು ತನ್ನ ರಿಟರ್ನ್‌ನಲ್ಲಿ ಸ್ವಯಂ ನಿರ್ಧರಿಸಿದಂತೆ ಅರ್ಹನಾಗಿರುವಷ್ಟು ಇನ್‌ಪುಟ್ ಕ್ರೆಡಿಟ್ ಮೊಬಲಗನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ಮೊಬಲಗು ಅವನ ವಿದ್ಯುನ್ಮಾನ ಕ್ರೆಡಿಟ್ ಖಾತೆಗೆ ಜಮೆಯಾಗತಕ್ಕದ್ದು.

(2) ಅಂಥ ಸರಕುಗಳು ಮತ್ತು ಸೇವೆಗಳ ಪೂರೈಕೆಗೆ ಅಥವಾ ಎರಡಕ್ಕೂ ಸಂಬಂಧಿಸಿದಂತೆ, ಉಪಪ್ರಕರಣ (1)ರ ಅಡಿಯಲ್ಲಿ ನೋಂದಾಯಿತ ವ್ಯಕ್ತಿಯು ಪಡೆದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ಪೂರೈಕೆದಾರನು, ಅದರ ಮೇಲೆ ಸಂದಾಯ ಮಾಡಬೇಕಾಗಿದ್ದ ತೆರಿಗೆಯನ್ನು ಸಂದಾಯ ಮಾಡದಿರುವಲ್ಲಿ, ಆ ತೆರಿಗೆಯನ್ನು ಸದರಿ ವ್ಯಕ್ತಿಯು ನಿಯಮಿಸಬಹುದಾದಂಥ ವಿಧಾನದಲ್ಲಿ ಅನ್ವಯವಾಗತಕ್ಕ ಬಡ್ಡಿಯ ಸಮೇತ ವಿಪರ್ಯಯಗೊಳಿಸತಕ್ಕದ್ದು.

ಪರಂತು, ಪೂರೈಕೆದಾರನು, ಮೇಲೆ ಹೇಳಿದ ಪೂರೈಕೆಗಳ ಸಂಬಂಧದಲ್ಲಿ, ಸಂದಾಯ ಮಾಡಬೇಕಾದ ತೆರಿಗೆಯನ್ನು ಸದರಿ ನೋಂದಾಯಿತ ವ್ಯಕ್ತಿಯು ಸಂದಾಯ ಮಾಡಿದ್ದಲ್ಲಿ ತಾನು ವಿಪರ್ಯಯಗೊಳಿಸಿದ ಮೊಬಲಗನ್ನು ನಿಯಮಿಸಬಹುದಾದ ವಿಧಾನದಲ್ಲಿ ಪುನಃ ಪಡೆದುಕೊಳ್ಳಬಹುದು.

**42. ಐಬಿಟ್ಟುಬಿಡಲಾಗಿದೆ.1**

**43. ಐಬಿಟ್ಟುಬಿಡಲಾಗಿದೆ.1**

**43ಎ. ಐಬಿಟ್ಟುಬಿಡಲಾಗಿದೆ.1**

**44. ವಾರ್ಷಿಕ ರಿಟರ್ನ್.–** (1) ಇನ್‌ಪುಟ್ ಸರ್ವೀಸ್ ಡಿಸ್ಟ್ರಿಬ್ಯೂಟರ್‌ನಲ್ಲದ, ಪ್ರಕರಣ 51 ಅಥವಾ ಪ್ರಕರಣ 52ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ವ್ಯಕ್ತಿಯಲ್ಲದ, ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಯಲ್ಲದ ಮತ್ತು ಅನಿವಾಸಿ–ತೆರಿಗೆದಾಯಕ ವ್ಯಕ್ತಿಯಲ್ಲದ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರತಿಯೊಂದು ಹಣಕಾಸು ವರ್ಷಕ್ಕೂ ಒಂದು ವಾರ್ಷಿಕ ರಿಟರ್ನ್‌ನನ್ನು ಅಂಥ ಹಣಕಾಸು ವರ್ಷ ಕೊನೆಗೊಂಡ ತರುವಾಯದ ಡಿಸೆಂಬರ್ ತಿಂಗಳಿನ ಮೂವತ್ತೊಂದನೇ ದಿನದಂದು ಅಥವಾ ಅದಕ್ಕಿಂತ ಮೊದಲು ನಿಯಮಿಸಬಹುದಾದಂಥ ನಮೂನೆ ಮತ್ತು ವಿಧಾನದಲ್ಲಿ ವಿದ್ಯುನ್ಮಾನ ಮಾಧ್ಯಮದ ಮೂಲಕ ಸಲ್ಲಿಸತಕ್ಕದ್ದು:

ಪರಂತು, ಆಯುಕ್ತರು, ಅಧಿಸೂಚನೆ ಮೂಲಕ, ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ ಮತ್ತು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನೋಂದಾಯಿತ ವ್ಯಕ್ತಿಗಳ ವರ್ಗಕ್ಕೆ ವಾರ್ಷಿಕ ರಿಟರ್ನ್ ಅನ್ನು ಸಲ್ಲಿಸುವ ಕಾಲಮಿತಿಯನ್ನು ವಿಸ್ತರಿಸಬಹುದು:

ಮತ್ತು ಪರಂತು, ರಾಜ್ಯ ತೆರಿಗೆ ಆಯುಕ್ತರ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ತೆರಿಗೆ ಆಯುಕ್ತರು ಅಧಿಸೂಚಿಸಿದ ಕಾಲಮಿತಿಯ ಯಾವುದೇ ವಿಸ್ತರಣೆಯನ್ನು, ಆಯುಕ್ತರು ಅಧಿಸೂಚಿಸಿದ್ದಾರೆಂದು ಪರಿಭಾವಿಸತಕ್ಕದ್ದು.

(2) ಪ್ರಕರಣ 35ರ ಉಪಪ್ರಕರಣ (5)ರ ಉಪಬಂಧಗಳಿಗೆ ಅನುಸಾರವಾಗಿ ತನ್ನ ಲೆಕ್ಕಪತ್ರಗಳನ್ನು ಪರಿಶೋಧಿಸಿಕೊಳ್ಳುವುದು ಅಗತ್ಯವಿರುವಂಥ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪರಿಶೋಧಿತ ವಾರ್ಷಿಕ ಲೆಕ್ಕಗಳ ಮತ್ತು ಜೊತೆಯಲ್ಲಿ ಆ ಹಣಕಾಸು ವರ್ಷಕ್ಕೆ ಒದಗಿಸಿದ ರಿಟರ್ನ್‌ನಲ್ಲಿ ಘೋಷಿಸಿದ ಪೂರೈಕೆಗಳ ಮೌಲ್ಯವನ್ನು ಪರಿಶೋಧಿತ ವಾರ್ಷಿಕ ಹಣಕಾಸು ವಿವರಣೆಯೊಂದಿಗೆ ಸರಿ ಹೊಂದಾಣಿಕೆ ಮಾಡಿರುವ ಸರಿ ಹೊಂದಾಣಿಕೆ ವಿವರಣೆಯ ಒಂದು ಪ್ರತಿ ಸಹಿತ ಹಾಗೂ ನಿಯಮಿಸಬಹುದಾದಂಥ ಇತರ ವಿವರಗಳ ಜೊತೆಗೆ ಉಪಪ್ರಕರಣ (1)ರಲ್ಲಿ ಹೇಳಿರುವ ವಾರ್ಷಿಕ ರಿಟರ್ನ್‌ನನ್ನು ವಿದ್ಯುನ್ಮಾನ ಮಾಧ್ಯಮದ ಮೂಲಕ ಸಲ್ಲಿಸತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, 1ನೇ ಜುಲೈ 2017 ರಿಂದ 31ನೇ ಮಾರ್ಚ್ 2018ರ ಅವಧಿಯ ವಾರ್ಷಿಕ ರಿಟರ್ನ್ ಅನ್ನು 31ನೇ ಜನವರಿ 2020ರಂದು ಅಥವಾ ಮುಂಚೆ ಒದಗಿಸತಕ್ಕದ್ದೆಂದು ಮತ್ತು 1ನೇ ಏಪ್ರಿಲ್ 2018ರಿಂದ 31ನೇ ಮಾರ್ಚ್ 2019ರ ಅವಧಿಯ ವಾರ್ಷಿಕ ರಿಟನ್ ಅನ್ನು, 31ನೇ ಮಾರ್ಚ್ 2020ರಂದು ಅಥವಾ ಮುಂಚೆ ಒದಗಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

**45. ಅಂತಿಮ ರಿಟರ್ನ್.–** ಪ್ರಕರಣ 39ರ ಉಪಪ್ರಕರಣ (1)ರ ಅಡಿಯಲ್ಲಿ ರಿಟರ್ನ್ ಅನ್ನು ಸಲ್ಲಿಸುವುದು ಅಗತ್ಯವಿದೆಯೋ ಮತ್ತು ಯಾವ ನೋಂದಾಯಿತ ವ್ಯಕ್ತಿಯ ನೋಂದಣಿಯನ್ನು ರದ್ದುಗೊಳಿಸಲಾಗಿದೆಯೋ ಆ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ರದ್ಧತಿಯ ದಿನಾಂಕ ಅಥವಾ ರದ್ಧತಿ ಆದೇಶದ ದಿನಾಂಕ ಇವುಗಳಲ್ಲಿ ಯಾವುದು ತರುವಾಯವೋ ಆ ದಿನಾಂಕದ ಮೂರು ತಿಂಗಳ ಒಳಗಾಗಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಅಂತಿಮ ರಿಟರ್ನ್‌ನನ್ನು ಸಲ್ಲಿಸತಕ್ಕದ್ದು.

**46. ರಿಟರ್ನ್ ಸಲ್ಲಿಸಲು ತಪ್ಪಿದವರಿಗೆ ತಿಳಿವಳಿಕೆ ಪತ್ರ.–** ಯಾರೇ ನೋಂದಾಯಿತ ವ್ಯಕ್ತಿಯು ಪ್ರಕರಣ 39ರ ಅಥವಾ ಪ್ರಕರಣ 44ರ ಅಥವಾ ಪ್ರಕರಣ 45ರ ಅಡಿಯಲ್ಲಿ ರಿಟರ್ನ್‌ನನ್ನು ಸಲ್ಲಿಸಲು ವಿಫಲನಾದಲ್ಲಿ, ಅಂಥ ರಿಟರ್ನ್‌ನನ್ನು ಹದಿನೈದು ದಿನಗಳ ಒಳಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಸಲ್ಲಿಸಲು ಆತನಿಗೆ ಅಗತ್ಯಪಡಿಸಿ ತಿಳಿವಳಿಕೆ ಪತ್ರವನ್ನು ನೀಡತಕ್ಕದ್ದು.

**47. ವಿಳಂಬ ಶುಲ್ಕ ವಿಧಿಸುವಿಕೆ.–** (1) ಪ್ರಕರಣ 37ರ ಅಡಿಯಲ್ಲಿ ಅಗತ್ಯಪಡಿಸಿದ ಹೊರ ಪೂರೈಕೆ ವಿವರಗಳನ್ನು ಸಲ್ಲಿಸಲು ಅಥವಾ ಪ್ರಕರಣ 39ರ ಅಥವಾ ಪ್ರಕರಣ 45ರ ಅಥವಾ ಪ್ರಕರಣ 52ರ ಅಡಿಯಲ್ಲಿ ಸಲ್ಲಿಸಲು ಅಗತ್ಯಪಡಿಸಿರುವ ರಿಟರ್ನ್‌ನನ್ನು, ಗಡುವು ದಿನಾಂಕದೊಳಗೆ ಸಲ್ಲಿಸಲು ವಿಫಲನಾದ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಗರಿಷ್ಠ ಐದು

ಸಾವಿರ ರೂಪಾಯಿ ಮೊಬಲಿಗಿಗೆ ಒಳಪಟ್ಟು ಅಂಥ ವಿಫಲತೆಯು ಮುಂದುವರೆಯುವ ಅವಧಿಯಲ್ಲಿನ ಪ್ರತಿಯೊಂದು ದಿನಕ್ಕೆ ನೂರು ರೂಪಾಯಿಯ ವಿಳಂಬ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

(2) ಪ್ರಕರಣ 44ರ ಅಡಿಯಲ್ಲಿ ಅಗತ್ಯವಿರುವ ರಿಟರ್ನ್‌ನನ್ನು ಗಡುವು ದಿನಾಂಕದೊಳಗೆ ಸಲ್ಲಿಸಲು ವಿಫಲನಾದ ಯಾರೇ ನೋಂದಾಯಿತ ವ್ಯಕ್ತಿಯು, ರಾಜ್ಯದಲ್ಲಿನ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿನ ಆತನ ವಹಿವಾಟಿನ ಶೇಕಡಾ ಕಾಲು ಭಾಗದಷ್ಟು ಲೆಕ್ಕ ಹಾಕಿದ ಗರಿಷ್ಠ ಮೊತ್ತಕ್ಕೆ ಒಳಪಟ್ಟು ಅಂಥ ವಿಫಲತೆಯು ಮುಂದುವರೆಯುವ ಪ್ರತಿಯೊಂದು ದಿನಕ್ಕೆ, ನೂರು ರೂಪಾಯಿಯ ವಿಳಂಬ ಶುಲ್ಕವನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

**48. ಸರಕು ಮತ್ತು ಸೇವೆಗಳ ತೆರಿಗೆ ಪ್ರಾಕ್ಟೀಷನರುಗಳು.–** (1) ಸರಕು ಮತ್ತು ಸೇವೆಗಳ ತೆರಿಗೆ ಪ್ರಾಕ್ಟೀಷನರುಗಳನ್ನು ಅನುಮೋದಿಸುವ ವಿಧಾನ, ಅವರ ಅರ್ಹತೆಯ ಷರತ್ತುಗಳು, ಕರ್ತವ್ಯಗಳು ಮತ್ತು ಬಾಧ್ಯತೆಗಳು, ತೆಗೆದುಹಾಕುವ ವಿಧಾನ ಮತ್ತು ಅವರ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಇತರ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(2) ನೋಂದಾಯಿತ ವ್ಯಕ್ತಿಯು, ಪ್ರಕರಣ 37ರ ಅಡಿಯಲ್ಲಿ ಹೊರ ಪೂರೈಕೆಗಳ ವಿವರಗಳನ್ನು ಮತ್ತು ಪ್ರಕರಣ 39ರ ಅಥವಾ ಪ್ರಕರಣ 44ರ ಅಥವಾ ಪ್ರಕರಣ 45ರ ಅಡಿಯಲ್ಲಿ ರಿಟರ್ನ್ ಅನ್ನು ಸಲ್ಲಿಸಲು ಮತ್ತು ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸಲು ಅಂಥ ವಿಧಾನದಲ್ಲಿ ನೆರವೇರಿಸಲು ಸರಕುಗಳ ಮತ್ತು ಸೇವೆಗಳ ತೆರಿಗೆ ಪ್ರಾಕ್ಟೀಷನ್ ರನ್ನು ಅಧಿಕೃತಗೊಳಿಸಬಹುದು.

(3) ಉಪಪ್ರಕರಣ (2)ರಲ್ಲಿ ಏನೇ ಒಳಗೊಂಡಿದ್ದರೂ, ಸರಕು ಮತ್ತು ಸೇವೆಗಳ ತೆರಿಗೆ ಪ್ರಾಕ್ಟೀಷನರುಗಳು ರಿಟರ್ನ್‌ನಲ್ಲಿ ಒದಗಿಸಿದ ಯಾವುವೇ ವಿವರಗಳು ಸರಿಯಾಗಿರುವುದರ ಬಗೆಗಿನ ಜವಾಬ್ದಾರಿಯು, ಯಾವ ನೋಂದಾಯಿತ ವ್ಯಕ್ತಿಯ ಪರವಾಗಿ ಅಂಥ ರಿಟರ್ನ್‌ನನ್ನು ಮತ್ತು ವಿವರಗಳನ್ನು ಸಲ್ಲಿಸಲಾಗಿದೆಯೋ ಆ ನೋಂದಾಯಿತ ವ್ಯಕ್ತಿಯ ಮೇಲೆ ಸದಾ ಇರತಕ್ಕದ್ದು.

## ಅಧ್ಯಾಯ X

## ತೆರಿಗೆಯ ಸಂದಾಯ

**49. ತೆರಿಗೆ, ಬಡ್ಡಿ, ದಂಡ ಮತ್ತು ಇತರ ಮೊತ್ತಗಳ ಸಂದಾಯ.–** (1) ಯಾರೇ ವ್ಯಕ್ತಿಯು, ಇಂಟರ್‌ನೆಟ್ ಬ್ಯಾಂಕಿಂಗ್ ಮೂಲಕ ಅಥವಾ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡುಗಳನ್ನು ಬಳಸುವುದರ ಮೂಲಕ ಅಥವಾ ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ (ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್ಫರ್) ಮೂಲಕ ಅಥವಾ ರಿಯಲ್ ಟೈಮ್ ಗ್ರಾಸ್ ಸೆಟ್ಲ್‌ಮೆಂಟ್ ಮೂಲಕ ಅಥವಾ ಅಂಥ ಇತರ ವಿಧಾನಗಳ ಮೂಲಕ ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರ ಮೊತ್ತಕ್ಕಾಗಿ ಮಾಡಿದ ಪ್ರತಿಯೊಂದು ಠೇವಣಿಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ನಿರ್ವಹಿಸಬೇಕಾದಂಥ ವ್ಯಕ್ತಿಯ ವಿದ್ಯುನ್ಮಾನ ನಗದು ಖಾತೆಗೆ ಜಮೆ ಮಾಡತಕ್ಕದ್ದು.

(2) ನೋಂದಾಯಿತ ವ್ಯಕ್ತಿಯ ರಿಟರ್ನ್‌ನಲ್ಲಿ ಸ್ವಯಂ–ನಿರ್ಧರಿಸಿದಂಥ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು, ನಿಯಮಿಸಬಹುದಾದ ವಿಧಾನದಲ್ಲಿ ನಿರ್ವಹಿಸಬೇಕಾದ ಆತನ ವಿದ್ಯುನ್ಮಾನ ಜಮಾ ಖಾತೆಗೆ, ಪ್ರಕರಣ 41ರ ಅನುಸಾರವಾಗಿ ಜಮೆ ಮಾಡತಕ್ಕದ್ದು.

(3) ವಿದ್ಯುನ್ಮಾನ ನಗದು ಲೆಡ್ಜರ್‌ನಲ್ಲಿ ಲಭ್ಯವಿರುವ ಮೊತ್ತವನ್ನು, ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರ ಮೊತ್ತಗಳ ಸಂದಾಯಕ್ಕಾಗಿ, ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಹಾಗೂ ಅಂಥ ಸಮಯದೊಳಗಾಗಿ ಬಳಸಿಕೊಳ್ಳಬಹುದು.

(4) ವಿದ್ಯುನ್ಮಾನ ಜಮಾ ಲೆಡ್ಜರ್‌ನಲ್ಲಿ ಲಭ್ಯವಿರುವ ಮೊತ್ತವನ್ನು, ಈ ಅಧಿನಿಯಮದ ಅಥವಾ ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಔಟ್‌ಪುಟ್ ಟ್ಯಾಕ್ಸ್ ಸಂದಾಯಕ್ಕಾಗಿ, ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಹಾಗೂ ಅಂಥ ಸಮಯದೊಳಗಾಗಿ ಬಳಸಿಕೊಳ್ಳಬಹುದು.

(5) ನೋಂದಾಯಿತ ವ್ಯಕ್ತಿಯ ವಿದ್ಯುನ್ಮಾನ ಜಮಾ ಲೆಡ್ಜರ್‌ನಲ್ಲಿ,–

(ಎ) ಏಕೀಕೃತ ತೆರಿಗೆಗೆ ಸಂಬಂಧಿಸಿದಂತೆ ಲಭ್ಯವಿರುವ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮೊತ್ತವನ್ನು ಮೊದಲು ಏಕೀಕೃತ ತೆರಿಗೆಯ ಸಂದಾಯಕ್ಕಾಗಿ ಬಳಸತಕ್ಕದ್ದು ಮತ್ತು ಏನಾದರೂ ಬಾಕಿ ಮೊತ್ತ ಉಳಿದಿದ್ದರೆ, ಅದನ್ನು ಕೇಂದ್ರ ತೆರಿಗೆಯ ಮತ್ತು ರಾಜ್ಯ ತೆರಿಗೆಯ ಅಥವಾ ಸಂದರ್ಭಾನುಸಾರ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆಯ ಸಂದಾಯಕ್ಕಾಗಿ ಅದೇ ಕ್ರಮದಲ್ಲಿ ಎಂದರೆ, ಮೊದಲು ಕೇಂದ್ರ ತೆರಿಗೆಯ ನಂತರ ರಾಜ್ಯ ತೆರಿಗೆಯ ತದನಂತರ ಒಕ್ಕೂಟ ರಾಜ್ಯಕ್ಷೇತ್ರದ ತೆರಿಗೆಯ ಸಂದಾಯಕ್ಕಾಗಿ ಬಳಸಿಕೊಳ್ಳಬಹುದು;

(ಬಿ) ಕೇಂದ್ರ ತೆರಿಗೆಗೆ ಸಂಬಂಧಿಸಿದಂತೆ ಲಭ್ಯವಿರುವ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮೊತ್ತವನ್ನು ಮೊದಲು ಕೇಂದ್ರ ತೆರಿಗೆಯ ಸಂದಾಯಕ್ಕಾಗಿ ಬಳಸತಕ್ಕದ್ದು ಮತ್ತು ಏನಾದರೂ ಬಾಕಿ ಮೊತ್ತ ಉಳಿದಿದ್ದರೆ ಅದನ್ನು ಏಕೀಕೃತ ತೆರಿಗೆಯ ಸಂದಾಯಕ್ಕಾಗಿ ಬಳಸಿಕೊಳ್ಳಬಹುದು;

(ಸಿ) ರಾಜ್ಯ ತೆರಿಗೆಗೆ ಸಂಬಂಧಿಸಿದಂತೆ ಲಭ್ಯವಿರುವ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮೊತ್ತವನ್ನು ಮೊದಲು ರಾಜ್ಯ ತೆರಿಗೆಯ ಸಂದಾಯಕ್ಕಾಗಿ ಬಳಸತಕ್ಕದ್ದು ಮತ್ತು ಏನಾದರೂ ಬಾಕಿ ಮೊತ್ತ ಉಳಿದಿದ್ದರೆ ಅದನ್ನು ಏಕೀಕೃತ ತೆರಿಗೆಯ ಸಂದಾಯಕ್ಕಾಗಿ ಬಳಸಿಕೊಳ್ಳಬಹುದು:

ಪರಂತು, ಏಕೀಕೃತ ತೆರಿಗೆ ಸಂದಾಯಕ್ಕಾಗಿ ಕೇಂದ್ರ ತೆರಿಗೆಯ ಲೆಕ್ಕದಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಬಾಕಿಯು ಲಭ್ಯವಿಲ್ಲದೇ ಇರುವಾಗ ಮಾತ್ರ ರಾಜ್ಯ ತೆರಿಗೆ ಲೆಕ್ಕದಲ್ಲಿನ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಏಕೀಕೃತ ತೆರಿಗೆ ಸಂದಾಯಕ್ಕಾಗಿ ಬಳಸಿಕೊಳ್ಳತಕ್ಕದ್ದು.

(ಡಿ) ಒಕ್ಕೂಟ ರಾಜ್ಯಕ್ಷೇತ್ರದ ತೆರಿಗೆಗೆ ಸಂಬಂಧಿಸಿದಂತೆ ಲಭ್ಯವಿರುವ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮೊತ್ತವನ್ನು ಮೊದಲು ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆಯ ಸಂದಾಯಕ್ಕಾಗಿ ಬಳಸತಕ್ಕದ್ದು ಮತ್ತು ಏನಾದರೂ ಬಾಕಿ ಮೊತ್ತ ಉಳಿದಿದ್ದರೆ ಅದನ್ನು ಏಕೀಕೃತ ತೆರಿಗೆಯ ಸಂದಾಯಕ್ಕಾಗಿ ಬಳಸಿಕೊಳ್ಳಬಹುದು:

ಪರಂತು, ಒಕ್ಕೂಟ ರಾಜ್ಯಕ್ಷೇತ್ರದ ಲೆಕ್ಕದ ಮೇಲೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು, ಏಕೀಕೃತ ತೆರಿಗೆ ಸಂದಾಯಕ್ಕಾಗಿ ಕೇಂದ್ರ ತೆರಿಗೆಯ ಲೆಕ್ಕದಲ್ಲಿನ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಬಾಕಿಯು ಲಭ್ಯವಿಲ್ಲದೇ ಇರುವಾಗ ಮಾತ್ರ ಏಕೀಕೃತ ತೆರಿಗೆ ಸಂದಾಯಕ್ಕಾಗಿ ಬಳಸಿಕೊಳ್ಳತಕ್ಕದ್ದು;

(ಇ) ಕೇಂದ್ರ ತೆರಿಗೆಗೆ ಸಂಬಂಧಿಸಿದಂತೆ ಲಭ್ಯವಿರುವ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ರಾಜ್ಯ ತೆರಿಗೆಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ತೆರಿಗೆಯ ಸಂದಾಯಕ್ಕಾಗಿ ಬಳಸಿಕೊಳ್ಳತಕ್ಕದ್ದಲ್ಲ; ಮತ್ತು

(ಎಫ್) ರಾಜ್ಯ ತೆರಿಗೆಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ತೆರಿಗೆಗೆ ಸಂಬಂಧಿಸಿದಂತೆ ಲಭ್ಯವಿರುವ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ಕೇಂದ್ರ ತೆರಿಗೆಯ ಸಂದಾಯಕ್ಕಾಗಿ ಬಳಸಿಕೊಳ್ಳತಕ್ಕದ್ದಲ್ಲ.

(6) ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯನ್ನು, ಬಡ್ಡಿಯನ್ನು, ದಂಡವನ್ನು, ಶುಲ್ಕವನ್ನು ಅಥವಾ ಯಾವುದೇ ಇತರ ಮೊತ್ತಗಳನ್ನು ಸಂದಾಯ ಮಾಡಿದ ನಂತರ, ವಿದ್ಯುನ್ಮಾನ ನಗದು ಲೆಡ್ಜರ್‌ನಲ್ಲಿ ಅಥವಾ ವಿದ್ಯುನ್ಮಾನ ಜಮಾ ಲೆಡ್ಜರ್‌ನಲ್ಲಿ ಉಳಿದಿರುವುದನ್ನು, ಪ್ರಕರಣ 54ರ ಉಪಬಂಧಗಳಿಗೆ ಅನುಸಾರವಾಗಿ ವಾಪಸು ಮಾಡಬಹುದು.

(7) ಈ ಅಧಿನಿಯಮದ ಅಡಿಯಲ್ಲಿ ತೆರಿಗೆದಾಯಕ ವ್ಯಕ್ತಿಯ ಎಲ್ಲಾ ಬಾಧ್ಯತೆಗಳನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ, ವಿದ್ಯುನ್ಮಾನ ಬಾಧ್ಯತಾ ರಿಜಿಸ್ಟರ್‌ನಲ್ಲಿ ದಾಖಲಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(8) ಪ್ರತಿಯೊಬ್ಬ ತೆರಿಗೆದಾಯಕ ವ್ಯಕ್ತಿಯು, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಆತನ ತೆರಿಗೆಯನ್ನು ಮತ್ತು ಇತರ ಬಾಕಿಗಳನ್ನು ಎಂದರೆ:–

(ಎ) ಹಿಂದಿನ ತೆರಿಗೆ ಅವಧಿಗಳಿಗೆ ಸಂಬಂಧಿಸಿದ ಸ್ವಯಂ–ನಿರ್ಧರಿತ ತೆರಿಗೆಯನ್ನು ಮತ್ತು ಇತರ ಬಾಕಿಗಳನ್ನು;

(ಬಿ) ಪ್ರಚಲಿತ ತೆರಿಗೆ ಅವಧಿಗೆ ಸಂಬಂಧಿಸಿದ ಸ್ವಯಂ–ನಿರ್ಧರಿತ ತೆರಿಗೆಯನ್ನು ಮತ್ತು ಇತರ ಬಾಕಿಗಳನ್ನು;

(ಸಿ) ಪ್ರಕರಣ 73ರ ಅಥವಾ ಪ್ರಕರಣ 74ರ ಅಡಿಯಲ್ಲಿ ನಿರ್ಧರಿಸಿದ ತಗಾದೆಯನ್ನೂ ಒಳಗೊಂಡಂತೆ ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ, ಸಂದಾಯ ಮಾಡಬೇಕಾದ ಯಾವುದೇ ಇತರ ಮೊತ್ತವನ್ನು

– ತೀರಿಸತಕ್ಕದ್ದು

(9) ಈ ಅಧಿನಿಯಮದ ಅಡಿಯಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೇಲಣ ತೆರಿಗೆಯನ್ನು ಸಂದಾಯ ಮಾಡಿರುವ ಪ್ರತಿಯೊಬ್ಬ ತೆರಿಗೆದಾಯಕ ವ್ಯಕ್ತಿಯು, ತದ್ವಿರುದ್ಧವಾದುದನ್ನು ರುಜುವಾತುಪಡಿಸಿದ ಹೊರತು, ಅಂಥ ತೆರಿಗೆಯ ಪೂರ್ಣ ಹೊರೆಯನ್ನು ಅಂಥ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಸ್ವೀಕರ್ತನಿಗೆ ಆ ವ್ಯಕ್ತಿಯು ವರ್ಗಾಯಿಸಿದ್ದಾನೆ ಎಂದು ಪರಿಭಾವಿಸತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) ಅಧಿಕೃತಗೊಳಿಸಿದ ಬ್ಯಾಂಕಿನಲ್ಲಿನ ಸರ್ಕಾರದ ಖಾತೆಗೆ ಜಮೆಯಾಗುವ ದಿನಾಂಕವನ್ನು, ವಿದ್ಯುನ್ಮಾನ ನಗದು ಲೆಡ್ಜರ್‌ನಲ್ಲಿ ಠೇವಣಿ ಮಾಡಿದ ದಿನಾಂಕ ಎಂದು ಪರಿಭಾವಿಸತಕ್ಕದ್ದು.

(ಬಿ) ಈ ಮುಂದೆ ಹೇಳಿರುವ ಪದಾವಳಿಯು, ಎಂದರೆ:–

(i) "ತೆರಿಗೆ ಬಾಕಿಗಳು" ಎಂದರೆ, ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆ, ಆದರೆ, ಇದು ಬಡ್ಡಿಯನ್ನು, ಶುಲ್ಕವನ್ನು ಅಥವಾ ದಂಡವನ್ನು ಒಳಗೊಳ್ಳುವುದಿಲ್ಲ; ಮತ್ತು

(ii) "ಇತರ ಬಾಕಿಗಳು" ಎಂದರೆ, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರ ಮೊತ್ತ.

(10) ಸಾಮಾನ್ಯ ಪೋರ್ಟಲ್ ನಲ್ಲಿ ನೋಂದಾಯಿತನಾಗಿರುವ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ವಿದ್ಯುನ್ಮಾನ ನಗದು ಲೆಡ್ಜರ್ ನಲ್ಲಿ ಲಭ್ಯವಿರುವ ಯಾವುದೇ ತೆರಿಗೆಯ ಮೊಬಲಗು, ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರ ಮೊಬಲಗನ್ನು,–

(ಎ) ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಒಕ್ಕೂಟ ರಾಜ್ಯಕ್ಷೇತ್ರದ ತೆರಿಗೆ ಅಥವಾ ಉಪಕರಕ್ಕಾಗಿನ; ಅಥವಾ

(ಬಿ) ಸಂದರ್ಭಾನುಸಾರ, ಪ್ರಕರಣ 25ರ ಉಪಪ್ರಕರಣ (4) ಅಥವಾ ಉಪಪ್ರಕರಣ (5)ರಲ್ಲಿ ನಿರ್ದಿಷ್ಟಪಡಿಸಲಾದಂತೆ ಪ್ರತ್ಯೇಕ ವ್ಯಕ್ತಿಯ ಏಕೀಕೃತ ತೆರಿಗೆ ಅಥವಾ ಕೇಂದ್ರ ತೆರಿಗೆಗಾಗಿನ

– ವಿದ್ಯುನ್ಮಾನ ಲೆಡ್ಜರ್ ಗೆ, ನಿಯಮಿಸಬಹುದಾದಂಥ ನಮೂನೆ ಮತ್ತು ವಿಧಾನದಲ್ಲಿ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ವರ್ಗಾವಣೆ ಮಾಡಬಹುದು ಮತ್ತು ಅಂಥ ವರ್ಗಾವಣೆಯನ್ನು ಈ ಅಧಿನಿಯಮದ ಮೇರೆಗೆ ವಿದ್ಯುನ್ಮಾನ ನಗದು ಲೆಡ್ಜರ್‌ನಿಂದ ಮರುಪಾವತಿಸಲಾಗಿದೆಯೆಂದು ಭಾವಿಸತಕ್ಕದ್ದು:

ಪರಂತು, ಸದರಿ ನೋಂದಾಯಿತ ವ್ಯಕ್ತಿಯು, ಅವನ ವಿದ್ಯುನ್ಮಾನ ಹೊಣೆಗಾರಿಕೆ ರಿಜಿಸ್ಟರ್‌ನಲ್ಲಿ ಯಾವುದೇ ಸಂದಾಯವಾಗದ ಹೊಣೆಗಾರಿಕೆ ಇದ್ದರೆ, (ಬಿ) ಖಂಡದ ಮೇರೆಗೆ ಅಂಥ ವರ್ಗಾವಣೆಯನ್ನು ಅನುಮತಿಸತಕ್ಕದ್ದಲ್ಲ.

(11) ಈ ಅಧಿನಿಯಮದ ಮೇರೆಗೆ ವಿದ್ಯುನ್ಮಾನ ನಗದು ಲೆಡ್ಜರ್‌ಗೆ ಯಾವುದೇ ಮೊಬಲಗನ್ನು ವರ್ಗಾವಣೆ ಮಾಡಲಾಗಿದ್ದಲ್ಲಿ, ಉಪಪ್ರಕರಣ (1)ರಲ್ಲಿ ಉಪಬಂಧಿಸಲಾದಂತೆ ಸದರಿ ಲೆಡ್ಜರ್‌ನಲ್ಲಿ ಅದನ್ನು ಠೇವಣಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(12) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ನಿಯಮಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ಅಥವಾ ಏಕೀಕೃತ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017 ರ 13)ರ ಮೇರೆಗೆ ನೋಂದಾಯಿತ ವ್ಯಕ್ತಿಯು ಅಥವಾ ವ್ಯಕ್ತಿಗಳ ವರ್ಗವು ವಿದ್ಯುನ್ಮಾನ ನಗದು ಲೆಡ್ಜರ್ ಮುಖಾಂತರ ನಿರ್ವಹಿಸಬಹುದಾದಂಥ ಗರಿಷ್ಠ ಪ್ರಮಾಣದ ಔಟ್‌ಪುಟ್ ಟ್ಯಾಕ್ಸ್ ಹೊಣೆಗಾರಿಕೆಯನ್ನು ನಿರ್ದಿಷ್ಟಪಡಿಸಬಹುದು.

**49ಎ. ಕೆಲವೊಂದು ಷರತ್ತುಗಳಿಗೆ ಒಳಪಟ್ಟು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಬಳಸಿಕೊಳ್ಳುವುದು.–** ಪ್ರಕರಣ 49ರಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆ ಲೆಕ್ಕದಲ್ಲಿನ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ಸಂದರ್ಭಾನುಸಾರ ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆಯ ಸಂದಾಯಕ್ಕಾಗಿ, ಏಕೀಕೃತ ತೆರಿಗೆಯ ಲೆಕ್ಕದ ಮೇಲೆ ಲಭ್ಯವಿರುವ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಮೊದಲು ಅಂಥ ಸಂದಾಯಕ್ಕಾಗಿ ಪೂರ್ಣವಾಗಿ ಉಪಯೋಗಿಸಿಕೊಂಡಿರುವಾಗ ಮಾತ್ರ ಬಳಸಿಕೊಳ್ಳತಕ್ಕದ್ದು.

**49ಬಿ. ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಬಳಸಿಕೊಳ್ಳಲು ಆದೇಶ.–** ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಪ್ರಕರಣ 49ರ ಉಪಪ್ರಕರಣ (5)ರ ಖಂಡ (ಇ) ಮತ್ತು ಖಂಡ (ಎಫ್) ನ ಉಪಬಂಧಗಳಿಗೆ ಒಳಪಟ್ಟು ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಮೇಲೆ ಸಂದರ್ಭಾನುಸಾರ ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆಯನ್ನು ಅಂಥ ಯಾವುದೇ ತೆರಿಗೆ ಸಂದಾಯಕ್ಕಾಗಿ ಬಳಸಿಕೊಳ್ಳಬಹುದಾದ ಕ್ರಮ ಮತ್ತು ರೀತಿಯನ್ನು ನಿಯಮಿತಗೊಳಿಸಬಹುದು.

**50. ತೆರಿಗೆಯ ವಿಳಂಬ ಸಂದಾಯದ ಮೇಲೆ ಬಡ್ಡಿ.–** (1) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಅನುಸಾರವಾಗಿ ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರುವ, ಆದರೆ ತೆರಿಗೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಗೊತ್ತುಪಡಿಸಿದ ಅವಧಿಯೊಳಗೆ ಸರ್ಕಾರಕ್ಕೆ ಸಂದಾಯ ಮಾಡಲು ವಿಫಲನಾದ ಪ್ರತಿಯೊಬ್ಬ ವ್ಯಕ್ತಿಯು, ತೆರಿಗೆಯು ಅಥವಾ ಅದರ ಯಾವುದೇ ಭಾಗವು ಸಂದಾಯವಾಗದೆ ಉಳಿದ ಅವಧಿಗೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದಂಥ, ಆದರೆ ಶೇಕಡಾ ಹದಿನೆಂಟರಷ್ಟನ್ನು ಮೀರದ ದರದಲ್ಲಿ ಬಡ್ಡಿಯನ್ನು ತಾನಾಗಿಯೇ ಸಂದಾಯ ಮಾಡತಕ್ಕದ್ದು:

ಪರಂತು, ಪ್ರಕರಣ 39ರ ಉಪಬಂಧಗಳಿಗೆ ಅನುಸಾರವಾಗಿ ಕೊನೆಯ ದಿನಾಂಕದ ನಂತರ, ತೆರಿಗೆ ಅವಧಿಯಲ್ಲಿ ಮಾಡಿದ ಮತ್ತು ಸದರಿ ಅವಧಿಗೆ ಸಲ್ಲಿಸಿದ ರಿಟರ್ನ್‌ನಲ್ಲಿ ಘೋಷಿಸಿದ ಪೂರೈಕೆಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ತೆರಿಗೆ ಮೇಲಿನ ಬಡ್ಡಿಯನ್ನು, ಸದರಿ ಅವಧಿಯ ಸಂಬಂಧದಲ್ಲಿ, ಪ್ರಕರಣ 73 ಅಥವಾ ಪ್ರಕರಣ 74ರ ಮೇರೆಗೆ ಯಾವುದೇ ವ್ಯವಹರಣೆಗಳನ್ನು ಪ್ರಾರಂಭಿಸಿದ ನಂತರ ಅಂಥ ರಿಟರ್ನ್‌ನನ್ನು ಸಲ್ಲಿಸಿರುವುದನ್ನು ಹೊರತುಪಡಿಸಿ, ವಿದ್ಯುನ್ಮಾನ ನಗದು ಲೆಡ್ಜರ್‌ನ್ನು ಡೆಬಿಟ್ ಮಾಡುವುದರ ಮೂಲಕ ಪಾವತಿ ಮಾಡಲಾಗಿರುವಂಥ ತೆರಿಗೆಯ ಭಾಗದ ಮೇಲೆ ವಿಧಿಸತಕ್ಕದ್ದು.

(2) ಉಪಪ್ರಕರಣ (1)ರ ಅಡಿಯಲ್ಲಿ ಹೇಳಿರುವಂಥ ಬಡ್ಡಿಯನ್ನು, ಯಾವ ದಿನಾಂಕದಂದು ಅಂಥ ತೆರಿಗೆಯನ್ನು ಸಂದಾಯ ಮಾಡಬೇಕಾಗುತ್ತದೋ ಆ ದಿನದ ನಂತರ ಬರುವ ದಿನದಿಂದ, ನಿಯಮಿಸಬಹುದಾದಂಥ ವಿಧಾನದಲ್ಲಿ ಲೆಕ್ಕ ಹಾಕತಕ್ಕದ್ದು.

[1][(3) ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತಪ್ಪಾಗಿ ಪಡೆದುಕೊಂಡಿರುವಲ್ಲಿ ಮತ್ತು ಬಳಸಿಕೊಂಡಿರುವಲ್ಲಿ, ಹಾಗೆ ತಪ್ಪಾಗಿ ಪಡೆದುಕೊಂಡಿರುವ ಮತ್ತು ಬಳಸಿಕೊಂಡಿರುವ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮೇಲೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ

---

[1]ಅಧಿನಿಯಮ ಸಂಖ್ಯೆ 2022ರ 6ರ ಪ್ರ.111ರ ಮೂಲಕ (01.07.2017ರಿಂದ ಜಾರಿಗೆ ಬರುವಂತೆ) ಉಪಪ್ರಕರಣ (3)ಅನ್ನು ಪ್ರತ್ಯಾಯೋಜಿಸಲಾಗಿದೆ

ಸರ್ಕಾರವು ಅಧಿಸೂಚಿಸಬಹುದಾದ ಶೇಕಡಾ ಇಪ್ಪತ್ನಾಲ್ಕರಷ್ಟನ್ನು ಮೀರದಂಥ ದರದಲ್ಲಿ ಬಡ್ಡಿಯನ್ನು ನೋಂದಾಯಿತ ವ್ಯಕ್ತಿಯು ಸಂದಾಯ ಮಾಡತಕ್ಕದ್ದು ಮತ್ತು ಬಡ್ಡಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಲೆಕ್ಕಹಾಕತಕ್ಕದ್ದು.]

**51. ಮೂಲದಲ್ಲಿ ತೆರಿಗೆ ಮುರುಗಡೆ.–** (1) ಈ ಅಧಿನಿಯಮದಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ ಸರ್ಕಾರವು,–

(ಎ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಇಲಾಖೆಯು ಅಥವಾ ಕಾರ್ಯಸಂಸ್ಥೆಯು; ಅಥವಾ

(ಬಿ) ಸ್ಥಳೀಯ ಪ್ರಾಧಿಕಾರವು; ಅಥವಾ

(ಸಿ) ಸರ್ಕಾರಿ ಏಜೆನ್ಸಿಗಳು; ಅಥವಾ

(ಡಿ) ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದಂಥ ವ್ಯಕ್ತಿಗಳು

ಅಥವಾ ಅಂಥ ವ್ಯಕ್ತಿಗಳ ವರ್ಗವು

– (ಈ ಪ್ರಕರಣದಲ್ಲಿ ಇನ್ನು ಮುಂದೆ "ಮುರುಗಡೆದಾರ" ಎಂದು ಉಲ್ಲೇಖಿಸಲಾಗಿದೆ) ತೆರಿಗೆದಾಯಕ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆದಾರನಿಗೆ, (ಈ ಪ್ರಕರಣದಲ್ಲಿ ಇನ್ನು ಮುಂದೆ "ಮುರುಗಡೆಗೊಳಗಾದವನು" ಎಂದು ಉಲ್ಲೇಖಿಸಲಾಗಿದೆ) ಸಂದಾಯ ಮಾಡಿದ ಅಥವಾ ಜಮೆ ಮಾಡಿದ ಸಂದಾಯದಿಂದ, ಕರಾರಿನ ಪ್ರಕಾರ ಮಾಡಿದ ಅಂಥ ಪೂರೈಕೆಯ ಮೌಲ್ಯವು ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು ಮೀರಿದ್ದಲ್ಲಿ, ಶೇಕಡ ಒಂದರ ದರದಲ್ಲಿ ತೆರಿಗೆಯನ್ನು ಮುರುಗಡೆ ಮಾಡಲು ಆಜ್ಞಾಪಿಸಬಹುದು:

ಪರಂತು, ಪೂರೈಕೆದಾರನ ನಿಖರ ಸ್ಥಳವು ಮತ್ತು ಪೂರೈಕೆಯ ಸ್ಥಳವು, ಯಾವುದೇ ರಾಜ್ಯದಲ್ಲಿದ್ದು ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿದ್ದು, ಅದು ಸ್ವೀಕರ್ತನು ನೋಂದಣಿಯಾದ ರಾಜ್ಯಕ್ಕಿಂತ ಅಥವಾ ಸಂದರ್ಭಾನುಸಾರ ಒಕ್ಕೂಟ ರಾಜ್ಯಕ್ಷೇತ್ರಕ್ಕಿಂತ ಬೇರೆಯದೇ ಆಗಿದ್ದರೆ, ಮುರುಗಡೆ ಮಾಡತಕ್ಕದ್ದಲ್ಲ.

**ವಿವರಣೆ.–** ಮೇಲೆ ನಿರ್ದಿಷ್ಟಪಡಿಸಿದ ತೆರಿಗೆ ಮುರುಗಡೆಯ ಉದ್ದೇಶಕ್ಕಾಗಿ, ದರಪಟ್ಟಿಯಲ್ಲಿ ನಮೂದಾಗಿರುವ ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆ, ಏಕೀಕೃತ ತೆರಿಗೆ ಮತ್ತು ಉಪಕರವನ್ನು ಹೊರತುಪಡಿಸಿದ ಮೊತ್ತವನ್ನು ಪೂರೈಕೆಯ ಮೌಲ್ಯವೆಂದು ಪರಿಗಣಿಸತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿ ತೆರಿಗೆಯೆಂದು ಮುರುಗಡೆ ಮಾಡಿದ ಮೊತ್ತವು, ಅಂಥ ಮುರುಗಡೆ ಮಾಡಿದ ತಿಂಗಳು ಕೊನೆಗೊಂಡ ನಂತರದ ಹತ್ತು ದಿನಗಳ ಒಳಗಾಗಿ ನಿಯಮಿಸಬಹುದಾದಂಥ ವಿಧಾನದಲ್ಲಿ ಮುರುಗಡೆದಾರನು ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

(3) ಮೂಲದಲ್ಲಿ ಕಡಿತಗೊಳಿಸಿದ ತೆರಿಗೆ ಪ್ರಮಾಣಪತ್ರವನ್ನು, ನಿಯಮಿಸಬಹುದಾದಂಥ ನಮೂನೆ ಮತ್ತು ಅಂಥ ರೀತಿಯಲ್ಲಿ ನೀಡತಕ್ಕದ್ದು.

(4) *****

(5) ಮುರುಗಡೆ ಮಾಡಿದ ಮತ್ತು ಪ್ರಕರಣ 39ರ ಉಪಪ್ರಕರಣ (3)ರ ಅಡಿಯಲ್ಲಿ ಒದಗಿಸಿದ ಮುರುಗಡೆದಾರನ ರಿಟರ್ನ್‌ನಲ್ಲಿ ನಮೂದಾಗಿರುವ ತೆರಿಗೆಯ ಜಮೆಯನ್ನು, ನಿಯಮಿಸಬಹುದಾದಂಥ ವಿಧಾನದಲ್ಲಿ ಮುರುಗಡೆಗೊಳಗಾದವನು, ತನ್ನ ವಿದ್ಯುನ್ಮಾನ ನಗದು ಲೆಡ್ಜರ್‌ನಲ್ಲಿ ಕ್ಲೇಮು ಮಾಡತಕ್ಕದ್ದು.

(6) ಯಾರೇ ಮುರುಗಡೆದಾರನು ಉಪಪ್ರಕರಣ (1)ರ ಅಡಿಯಲ್ಲಿ ತೆರಿಗೆಯೆಂದು ಮುರುಗಡೆ ಮಾಡಿದ ಮೊತ್ತವನ್ನು ಸರ್ಕಾರಕ್ಕೆ ಸಂದಾಯ ಮಾಡಲು ವಿಫಲನಾದರೆ, ಮುರುಗಡೆ ಮಾಡಿದ ತೆರಿಗೆ ಮೊತ್ತದ ಜೊತೆಗೆ, ಪ್ರಕರಣ 50ರ ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

(7) ಈ ಪ್ರಕರಣದ ಅಡಿಯಲ್ಲಿ ಬಾಕಿಯಿರುವ ಮೊತ್ತದ ನಿರ್ಧರಣೆಯನ್ನು ಪ್ರಕರಣ 73ರಲ್ಲಿ ಅಥವಾ ಪ್ರಕರಣ 74ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಮಾಡತಕ್ಕದ್ದು.

(8) ಮುರುಗಡೆದಾರನಿಗೆ ಅಥವಾ ಮುರುಗಡೆಗೊಳಗಾದವನಿಗೆ, ಹೆಚ್ಚಿಗೆ ಮುರುಗಡೆ ಮಾಡಿದ ಪ್ರಯುಕ್ತ ಅಥವಾ ತಪ್ಪಾಗಿ ಮುರುಗಡೆ ಮಾಡಿದ ಪ್ರಯುಕ್ತ ಉದ್ಭವಿಸಿರುವ ಮರುಪಾವತಿಯನ್ನು ಪ್ರಕರಣ 54ರ ಉಪಬಂಧಗಳಿಗೆ ಅನುಸಾರವಾಗಿ ವ್ಯವಹರಿಸತಕ್ಕದ್ದು:

ಪರಂತು, ಮುರುಗಡೆ ಮಾಡಿದ ಮೊತ್ತವು, ಮುರುಗಡೆಗೊಳಗಾದವನ ವಿದ್ಯುನ್ಮಾನ ನಗದು ಲೆಡ್ಜರ್‌ಗೆ ಜಮೆ ಮಾಡಿದ್ದರೆ, ಮುರುಗಡೆದಾರನಿಗೆ ಮರುಪಾವತಿ ಮಾಡತಕ್ಕದ್ದಲ್ಲ.

**52. ಮೂಲದಲ್ಲಿ ತೆರಿಗೆ ಸಂಗ್ರಹಣೆ.–** (1) ಈ ಅಧಿನಿಯಮದಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ, ಏಜೆಂಟನಾಗಿರದ ಪ್ರತಿಯೊಬ್ಬ ವಿದ್ಯುನ್ಮಾನ ವಾಣಿಜ್ಯ ಪ್ರವರ್ತಕನು (ಈ ಪ್ರಕರಣದಲ್ಲಿ ಇನ್ನು ಮುಂದೆ "ಪ್ರವರ್ತಕ" ಎಂದು ಉಲ್ಲೇಖಿಸಲಾಗಿದೆ), ಇತರ ಪೂರೈಕೆದಾರ ತನ್ನ ಮೂಲಕ ಮಾಡಿದ ತೆರಿಗೆದಾಯಕ ಪೂರೈಕೆಗಳ ನಿವ್ವಳ ಮೌಲ್ಯದ ಶೇಕಡ ಒಂದರಷ್ಟನ್ನು ಮೀರದ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದಂಥ ದರದಲ್ಲಿ ಲೆಕ್ಕ ಹಾಕಿದ ಮೊತ್ತವನ್ನು, ಅಂಥ ಪೂರೈಕೆಗಳಿಗೆ ಸಂಬಂಧಿಸಿದಂತೆ ಪ್ರತಿಫಲವನ್ನು ಪ್ರವರ್ತಕನೇ ಸಂಗ್ರಹಿಸಿಬೇಕಿದ್ದರೆ, ಸಂಗ್ರಹಿಸತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ತೆರಿಗೆದಾಯಕ ಪೂರೈಕೆಗಳ ನಿವ್ವಳ ಮೌಲ್ಯ" ಪದಾವಳಿಯನ್ನು, ಪ್ರವರ್ತಕನ ಮೂಲಕ ಎಲ್ಲಾ ನೋಂದಾಯಿತ ವ್ಯಕ್ತಿಗಳು ಯಾವುದೇ ತಿಂಗಳಿನಲ್ಲಿ, ಆ ತಿಂಗಳಿನ ಅವಧಿಯಲ್ಲಿ ಪೂರೈಕೆದಾರರಿಗೆ ವಾಪಸ್ಸು ಮಾಡಿದ ತೆರಿಗೆದಾಯಕ ಪೂರೈಕೆಗಳ ಸಮಗ್ರ ಮೌಲ್ಯದಿಂದ ಕಡಿಮೆ ಮಾಡಿದ, ಪ್ರಕರಣ 9ರ ಉಪಪ್ರಕರಣ (5)ರ ಅಡಿಯಲ್ಲಿ ಅಧಿಸೂಚಿಸಿದ ಸೇವೆಗಳನ್ನು ಹೊರತುಪಡಿಸಿದ, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ತೆರಿಗೆದಾಯಕ ಪೂರೈಕೆಗಳ ಸಮಗ್ರ ಮೌಲ್ಯ ಎಂಬುದಾಗಿ ಅರ್ಥೈಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂಗ್ರಹಿಸುವ ಅಧಿಕಾರವು, ಪ್ರವರ್ತಕನು ಕೈಗೊಳ್ಳುವ ಯಾವುದೇ ಇತರ ವಸೂಲಾತಿಯ ವಿಧಾನಗಳಿಗೆ ಬಾಧಕವಾಗತಕ್ಕದ್ದಲ್ಲ.

(3) ಉಪಪ್ರಕರಣ (1)ರ ಅಡಿಯಲ್ಲಿ ಸಂಗ್ರಹಿಸಿದ ಮೊತ್ತವು, ಹಾಗೆ ಸಂಗ್ರಹಣೆ ಮಾಡಿದ ತಿಂಗಳು ಕೊನೆಗೊಂಡ ನಂತರದ ಹತ್ತು ದಿನಗಳ ಒಳಗಾಗಿ, ನಿಯಮಿಸಬಹುದಾದಂಥ ವಿಧಾನದಲ್ಲಿ ಪ್ರವರ್ತಕನು, ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

(4) ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂಗ್ರಹಿಸುವ ಪ್ರತಿಯೊಬ್ಬ ಪ್ರವರ್ತಕನು, ಯಾವುದೇ ತಿಂಗಳಿನಲ್ಲಿ ತನ್ನ ಮೂಲಕ ವಾಪಸ್ಸು ಮಾಡಿದ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಮತ್ತು ಉಪಪ್ರಕರಣ (1)ರ ಅಡಿಯಲ್ಲಿ ಸಂಗ್ರಹಿಸಿದ ಮೊತ್ತವನ್ನು ಒಳಗೊಂಡಂತೆ, ತನ್ನ ಮೂಲಕ ಹೊರಗಡೆಗೆ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆ ವಿವರಗಳನ್ನು ಒಳಗೊಂಡ ಒಂದು ವಿವರಪತ್ರವನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ, ವಿದ್ಯುನ್ಮಾನ ಮಾಧ್ಯಮದ ಮೂಲಕ ಆ ತಿಂಗಳು ಮುಗಿದ ಹತ್ತು ದಿನಗಳ ಒಳಗಾಗಿ ಒದಗಿಸತಕ್ಕದ್ದು:

ಪರಂತು, ಆಯುಕ್ತರು, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನೋಂದಾಯಿತ ವ್ಯಕ್ತಿಗಳ ಅಂಥ ವರ್ಗಕ್ಕೆ ವಿವರಪತ್ರವನ್ನು ಸಲ್ಲಿಸುವುದಕ್ಕಾಗಿ ಕಾಲಮಿತಿಯನ್ನು ವಿಸ್ತರಿಸಬಹುದು:

ಮತ್ತು ಪರಂತು, ರಾಜ್ಯ ತೆರಿಗೆ ಆಯುಕ್ತರು ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆ ಆಯುಕ್ತರು ಅಧಿಸೂಚಿಸಿದ ಕಾಲಮಿತಿಯ ಯಾವುದೇ ವಿಸ್ತರಣೆಯನ್ನು, ಆಯುಕ್ತರು ಅಧಿಸೂಚಿಸಿದ್ದಾರೆಂದು ಭಾವಿಸತಕ್ಕದ್ದು.

(5) ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂಗ್ರಹಿಸುವ ಪ್ರತಿಯೊಬ್ಬ ಪ್ರವರ್ತಕನು, ಹಣಕಾಸು ವರ್ಷದ ಅವಧಿಯಲ್ಲಿ ತನ್ನ ಮೂಲಕ ವಾಪಸ್ಸು ಮಾಡಿದ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಮತ್ತು ಸದರಿ ಉಪಪ್ರಕರಣದ ಅಡಿಯಲ್ಲಿ ಸಂಗ್ರಹಿಸಿದ ಮೊತ್ತವನ್ನು ಒಳಗೊಂಡಂತೆ, ತನ್ನ ಮೂಲಕ ಹೊರಗಡೆಗೆ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆ ವಿವರಗಳನ್ನು ಒಳಗೊಂಡ ಒಂದು ವಾರ್ಷಿಕ ವಿವರಪತ್ರವನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ, ಅಂಥ ಹಣಕಾಸು ವರ್ಷ ಕೊನೆಗೊಂಡ ತರುವಾಯದ ಡಿಸೆಂಬರ್‌ನ ಮೂವತ್ತೊಂದನೇ ದಿನಕ್ಕಿಂತ ಮುಂಚಿತವಾಗಿ ವಿದ್ಯುನ್ಮಾನ ಮಾಧ್ಯಮದ ಮೂಲಕ ಒದಗಿಸತಕ್ಕದ್ದು:

ಪರಂತು, ಆಯುಕ್ತರು, ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ ಮತ್ತು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನೋಂದಾಯಿತ ವ್ಯಕ್ತಿಗಳ ವರ್ಗದ ವಾರ್ಷಿಕ ವಿವರಪತ್ರವನ್ನು ಸಲ್ಲಿಸುವುದಕ್ಕಾಗಿ ಕಾಲಮಿತಿಯನ್ನು ವಿಸ್ತರಿಸಬಹುದು:

ಮತ್ತು ಪರಂತು, ರಾಜ್ಯ ತೆರಿಗೆ ಆಯುಕ್ತರು ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆ ಆಯುಕ್ತರು ಅಧಿಸೂಚಿಸಿದ ಕಾಲಮಿತಿಯ ಯಾವುದೇ ವಿಸ್ತರಣೆಯನ್ನು, ಆಯುಕ್ತರು ಅಧಿಸೂಚಿಸಿದ್ದಾರೆಂದು ಭಾವಿಸತಕ್ಕದ್ದು.

(6) ಯಾರೇ ಪ್ರವರ್ತಕನು, ಉಪಪ್ರಕರಣ (4)ರ ಅಡಿಯಲ್ಲಿ ವಿವರಪತ್ರವನ್ನು ಒದಗಿಸಿದ ನಂತರ, ಅದರಲ್ಲಿ, ತೆರಿಗೆ ಪ್ರಾಧಿಕಾರಿಗಳಿಂದ ಸೂಕ್ಷ್ಮ ಪರಿಶೀಲನೆ, ಲೆಕ್ಕಪರಿಶೋಧನೆ, ತಪಾಸಣೆ ಅಥವಾ ಜಾರಿ ಕಾರ್ಯಗಳಿಂದ ಕಂಡುಬಂದವುಗಳನ್ನು ಹೊರತುಪಡಿಸಿ, ಇತರೆ ಯಾವುದೇ ಲೋಪವನ್ನು ಅಥವಾ ತಪ್ಪು ವಿವರಗಳನ್ನು ಪತ್ತೆ ಹಚ್ಚಿದರೆ, ಅವನು, ಅಂಥ ಲೋಪವನ್ನು

ಅಥವಾ ತಪ್ಪು ವಿವರಗಳನ್ನು ಗಮನಿಸಿದ ಅವಧಿಯಲ್ಲಿನ ತಿಂಗಳಿಗೆ ಒದಗಿಸಬೇಕಾಗಿರುವ ವಿವರಪತ್ರದಲ್ಲಿ, ಪ್ರಕರಣ 50ರ ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದಂತೆ ಬಡ್ಡಿಯನ್ನು ಸಂದಾಯ ಮಾಡುವುದಕ್ಕೆ ಒಳಪಟ್ಟು, ಅಂಥ ಲೋಪವನ್ನು ಅಥವಾ ತಪ್ಪು ವಿವರಗಳನ್ನು ಸರಿಪಡಿಸಬಹುದು:

ಪರಂತು, ಹಣಕಾಸು ವರ್ಷ ಕೊನೆಗೊಂಡ ತರುವಾಯದ ನವೆಂಬರ್ ಮೂವತ್ತನೇ ದಿನಾಂಕದ ಅಥವಾ ಸಂಬಂಧಿಸಿದ ವಾರ್ಷಿಕ ವಿವರಪತ್ರವನ್ನು ಒದಗಿಸಿದ ವಾಸ್ತವಿಕ ದಿನಾಂಕ ಇವುಗಳಲ್ಲಿ ಯಾವುದು ಮೊದಲೋ ಅದರ ನಂತರ, ಯಾವುದೇ ಲೋಪವನ್ನು ಅಥವಾ ತಪ್ಪು ವಿವರಗಳನ್ನು ಹಾಗೆ ಸರಿಪಡಿಸಿಕೊಳ್ಳುವುದಕ್ಕೆ ಅವಕಾಶ ನೀಡತಕ್ಕದ್ದಲ್ಲ.

(7) ಪ್ರವರ್ತಕನ ಮೂಲಕ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಪೂರೈಕೆ ಮಾಡಿರುವ ಪೂರೈಕೆದಾರನು, ಸಂಗ್ರಹಣೆಯಾದ ಮತ್ತು ಪ್ರವರ್ತಕನು ಉಪಪ್ರಕರಣ (4)ರ ಅಡಿಯಲ್ಲಿ ಒದಗಿಸಿರುವ ವಿವರಪತ್ರದಲ್ಲಿ ನಮೂದಾಗಿರುವ ಮೊತ್ತದ ಜಮೆಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ತನ್ನ ವಿದ್ಯುನ್ಮಾನ ನಗದು ಲೆಡ್ಜರಲ್ಲಿ ಕ್ಲೇಮು ಮಾಡತಕ್ಕದ್ದು.

(8) ಪ್ರತಿಯೊಬ್ಬ ಪ್ರವರ್ತಕನು ಉಪಪ್ರಕರಣ (4)ರ ಅಡಿಯಲ್ಲಿ ಒದಗಿಸಿದ ವಿವರಗಳು, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಸಂಬಂಧಪಟ್ಟ ಪೂರೈಕೆದಾರನು ಹೊರಗಡೆಗೆ ಒದಗಿಸಿದ ಪೂರೈಕೆ ಮಾಡಿದ ಸದೃಶ ವಿವರಗಳೊಂದಿಗೆ, ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಅವಧಿಯೊಳಗೆ ಸರಿ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.

(9) ಹೊರಗಡೆಗೆ ಮಾಡಿದ ಪೂರೈಕೆಯ ಬಗ್ಗೆ ಪ್ರವರ್ತಕನು ಉಪಪ್ರಕರಣ (4)ರ ಅಡಿಯಲ್ಲಿ ಒದಗಿಸಿದ ವಿವರಗಳು, ಪ್ರಕರಣ 37ರ ಅಥವಾ ಪ್ರಕರಣ 39ರ ಅಡಿಯಲ್ಲಿ ಪೂರೈಕೆದಾರನು ಒದಗಿಸಿದ ಅವುಗಳ ಸದೃಶ ವಿವರಗಳೊಂದಿಗೆ ಸರಿ ಹೊಂದಿಕೆಯಾಗದಿದ್ದರೆ, ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಅವಧಿಯೊಳಗೆ ಆ ಇಬ್ಬರು ವ್ಯಕ್ತಿಗಳಿಗೂ ವ್ಯತ್ಯಾಸವನ್ನು ತಿಳಿಸತಕ್ಕದ್ದು.

(10) ಉಪಪ್ರಕರಣ (9)ರ ಅಡಿಯಲ್ಲಿ ಯಾವ ಮೊತ್ತಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯತ್ಯಾಸವನ್ನು ತಿಳಿಸಲಾಗಿದೆಯೋ ಮತ್ತು ಪೂರೈಕೆದಾರನು ಆ ವ್ಯತ್ಯಾಸವನ್ನು ತಿಳಿಸಿದ ತಿಂಗಳಿನ ತನ್ನ ಸಿಂಧುವಾದ ರಿಟರ್ನ್‌ನಲ್ಲಿ ಅಥವಾ ಪ್ರವರ್ತಕನು ತನ್ನ ವಿವರಪತ್ರದಲ್ಲಿ ಆ ಬಗ್ಗೆ ಸರಿಪಡಿಸಿಕೊಂಡಿಲ್ಲವೋ ಅಥವಾ ಯಾವ ತಿಂಗಳಿನ ಅಂಥ ವ್ಯತ್ಯಾಸವನ್ನು ಪ್ರವರ್ತಕನಿಗೆ ತಿಳಿಸಲಾಯಿತೋ ಆ ತಿಂಗಳಿನ ತನ್ನ ವಿವರಪತ್ರದಲ್ಲಿ ಪ್ರವರ್ತಕನ ಆ ವ್ಯತ್ಯಾಸವನ್ನು ಸರಿಪಡಿಸಿಕೊಂಡಿಲ್ಲವೋ ಆ ಮೊತ್ತವನ್ನು, ಹೊರಗಡೆಗೆ ಮಾಡಿದ ಪೂರೈಕೆಗಳ ಬಗ್ಗೆ ಪ್ರವರ್ತಕನು ಹೇಳಿದ ಮೌಲ್ಯವು ಪೂರೈಕೆದಾರನು ಹೊರಗಡೆಗೆ ಮಾಡಿದ ಪೂರೈಕೆಗಳ ಮೌಲ್ಯಕ್ಕಿಂತ ಹೆಚ್ಚಿಗೆ ಇದ್ದಲ್ಲಿ, ಆ ಪೂರೈಕೆದಾರನ ಔಟ್‌ಪುಟ್ ಟ್ಯಾಕ್ಸ್ ಬಾಧ್ಯತೆಗೆ, ಆ ವ್ಯತ್ಯಾಸವನ್ನು ತಿಳಿಸಿದ ತಿಂಗಳಿನ ತದನಂತರದ ತಿಂಗಳಿನ ಅವನ ರಿಟರ್ನ್‌ನಲ್ಲಿ ನಿಯಮಿಸಬಹುದಾದಂಥ ವಿಧಾನದಲ್ಲಿ ಸೇರಿಸತಕ್ಕದ್ದು.

(11) ಉಪಪ್ರಕರಣ (10)ರ ಅಡಿಯಲ್ಲಿ ಯಾವ ಪೂರೈಕೆದಾರನ ಔಟ್‌ಪುಟ್ ಟ್ಯಾಕ್ಸ್ ಬಾಧ್ಯತೆಗೆ ಯಾವುದೇ ಮೊತ್ತವನ್ನು ಸೇರಿಸಲಾಗಿದೆಯೋ ಆ ಪೂರೈಕೆದಾರನು, ಆ ಪೂರೈಕೆಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ತೆರಿಗೆಯನ್ನು, ಅಂಥ ತೆರಿಗೆಯು ಬಾಕಿಯಾದ ದಿನಾಂಕದಿಂದ ಅದರ ಸಂದಾಯದವರೆಗೆ, ಪ್ರಕರಣ 50ರ ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ, ಹಾಗೆ ಸೇರಿಸಿದ ಮೊತ್ತದ ಮೇಲಿನ ಬಡ್ಡಿ ಸಹಿತ ಸಂದಾಯ ಮಾಡತಕ್ಕದ್ದು.

(12) ಉಪ–ಆಯುಕ್ತರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಯಾರೇ ಪ್ರಾಧಿಕಾರಿಯು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ನಡವಳಿಗಳು ನಡೆಯುವುದಕ್ಕೂ ಮೊದಲು ಅಥವಾ ನಡೆಯುತ್ತಿರುವಾಗ ನೋಟೀಸನ್ನು ಪ್ರವರ್ತಕನಿಗೆ, ಸೂಚನಾ ಪತ್ರದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿವರಗಳನ್ನು ಒದಗಿಸುವಂತೆ ನಿರ್ವಾಹಕನನ್ನು ಅಗತ್ಯಪಡಿಸುವ,–

(ಎ) ಯಾವುದೇ ಅವಧಿಯಲ್ಲಿ ಆ ಪ್ರವರ್ತಕನು ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಳಿಗೆ ಸಂಬಂಧಿಸಿದಂತೆ; ಅಥವಾ

(ಬಿ) ಆ ಪ್ರವರ್ತಕನು ನಿರ್ವಹಿಸುವ ಇನ್ನಾವುದೇ ಹೆಸರಿನಿಂದ ಕರೆಯಲಾಗುವ ಮತ್ತು ವ್ಯವಹಾರವು ನಡೆಯುವ ಹೆಚ್ಚುವರಿ ಸ್ಥಳವೆಂದು ಆ ಪೂರೈಕೆದಾರರುಗಳು ಘೋಷಿಸಿರುವ ಗೋದಾಮುಗಳಲ್ಲಿ ಅಥವಾ ಉಗ್ರಾಣಗಳಲ್ಲಿ ಅಂಥ ಪ್ರವರ್ತಕನ ಮೂಲಕ ಪೂರೈಕೆಗಳನ್ನು ಮಾಡುತ್ತಿರುವ ಪೂರೈಕೆದಾರರುಗಳ ಬಳಿ ಇರುವ ಸರಕುಗಳ ದಾಸ್ತಾನನ್ನು

– ನೀಡಬಹುದು.

(13) ಉಪಪ್ರಕರಣ (12)ರ ಅಡಿಯಲ್ಲಿ ನೋಟೀಸನ್ನು ಯಾವ ಪ್ರವರ್ತಕನಿಗೆ ನೀಡಲಾಗಿದೆಯೋ ಆ ಪ್ರತಿಯೊಬ್ಬ ಪ್ರವರ್ತಕನು, ಅಂಥ ನೋಟೀಸು ಜಾರಿಯಾದ ದಿನಾಂಕದಿಂದ ಹದಿನೈದು ಕೆಲಸದ ದಿನಗಳ ಒಳಗಾಗಿ ಅಗತ್ಯಪಡಿಸಿದ ಮಾಹಿತಿಯನ್ನು ಒದಗಿಸತಕ್ಕದ್ದು.

(14) ಉಪಪ್ರಕರಣ (12)ರ ಅಡಿಯಲ್ಲಿ ಜಾರಿಯಾದ ನೋಟೀಸಿನಲ್ಲಿ ಅಗತ್ಯಪಡಿಸಿದ ಮಾಹಿತಿಯನ್ನು ಒದಗಿಸಲು ವಿಫಲನಾಗುವ ಯಾರೇ ವ್ಯಕ್ತಿಯು, ಪ್ರಕರಣ 122ರ ಅಡಿಯಲ್ಲಿ ತೆಗೆದುಕೊಳ್ಳಬಹುದಾದ ಯಾವುದೇ ಕ್ರಮಗಳಿಗೆ ಬಾಧಕವಾಗದಂತೆ, ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಸಂಬಂಧಿತ ಪೂರೈಕೆದಾರ" ಪದಾವಳಿಯನ್ನು, ಪ್ರವರ್ತಕನ ಮೂಲಕ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಪೂರೈಕೆ ಮಾಡುವ ಪೂರೈಕೆದಾರ ಎಂಬುದಾಗಿ ಅರ್ಥೈಸತಕ್ಕದ್ದು.

**53. ಹೂಡುವಳಿ ತೆರಿಗೆ ಜಮೆಯ ವರ್ಗಾವಣೆ.–** ಈ ಅಧಿನಿಯಮದ ಅಡಿಯಲ್ಲಿ ಲಭ್ಯವಿರುವ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು, ಪ್ರಕರಣ 39ರ ಉಪಪ್ರಕರಣ (1)ರ ಅಡಿಯಲ್ಲಿ ಒದಗಿಸಿದ ಸಿಂಧುವಾದ ರಿಟರ್ನ್‌ನಲ್ಲಿ ಹೇಳಿರುವಂತೆ, ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿನ ತೆರಿಗೆ ಬಾಕಿಯನ್ನು ಪ್ರಕರಣ 49ರ ಉಪಪ್ರಕರಣ (5)ಕ್ಕೆ ಅನುಸಾರವಾಗಿ ಸಂದಾಯ ಮಾಡಲು ಬಳಸಿಕೊಂಡಾಗ, ಕೇಂದ್ರ ತೆರಿಗೆಯಾಗಿ ಸಂಗ್ರಹಿಸಿದ ಮೊತ್ತವು, ಹಾಗೆ ಬಳಸಿಕೊಂಡ ಅಂಥ ಕ್ರೆಡಿಟ್‌ಗೆ ಸಮನಾದ ಮೊತ್ತದಷ್ಟು ಇಳಿಕೆಯಾಗತಕ್ಕದ್ದು ಹಾಗೂ ಕೇಂದ್ರ ಸರ್ಕಾರವು, ಕೇಂದ್ರ ತೆರಿಗೆ ಖಾತೆಯಿಂದ ಹಾಗೆ ಇಳಿಕೆ ಮಾಡಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ಏಕೀಕೃತ ತೆರಿಗೆ ಖಾತೆಗೆ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಸಮಯದ ಒಳಗಾಗಿ ವರ್ಗಾಯಿಸತಕ್ಕದ್ದು.

**53ಎ. ಕೆಲವು ಮೊಬಲಗುಗಳ ವರ್ಗಾವಣೆ.–** ಈ ಅಧಿನಿಯಮದ ಮೇರೆಗೆ ವಿದ್ಯುನ್ಮಾನ ನಗದು ಲೆಡ್ಜರ್‌ನಿಂದ, ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಮೇರೆಗಿನ ವಿದ್ಯುನ್ಮಾನ ನಗದು ಲೆಡ್ಜರ್‌ಗೆ ಯಾವುದೇ ಮೊಬಲಗನ್ನು ವರ್ಗಾಯಿಸಿದ್ದಲ್ಲಿ, ಸರ್ಕಾರವು, ನಿಯಮಿಸಬಹುದಾದಂಥ

ವಿಧಾನದಲ್ಲಿ ಮತ್ತು ಕಾಲದೊಳಗೆ, ವಿದ್ಯುನ್ಮಾನ ನಗದು ಲೆಡ್ಜರ್‌ನಿಂದ ವರ್ಗಾಯಿಸಲಾದ ಮೊಬಲಿಗಿಗೆ ಸಮನಾದ ಮೊಬಲಗನ್ನು, ರಾಜ್ಯ ತೆರಿಗೆ ಖಾತೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆ ಖಾತೆಗೆ ವರ್ಗಾಯಿಸತಕ್ಕದ್ದು.

## ಅಧ್ಯಾಯ XI

## ಮರುಪಾವತಿಗಳು

**54. ತೆರಿಗೆಯ ಮರುಪಾವತಿ.–** (1) ಯಾರೇ ವ್ಯಕ್ತಿಯು, ಯಾವುದೇ ತೆರಿಗೆಯ ಮರುಪಾವತಿಗಾಗಿ ಮತ್ತು ಅಂಥ ತೆರಿಗೆ ನಿಮಿತ್ತ ಅಥವಾ ಆತನು ಸಂದಾಯ ಮಾಡಿದ ಯಾವುದೇ ಇತರ ಮೊತ್ತಕ್ಕೆ ಬಡ್ಡಿಯನ್ನೇನಾದರೂ ಸಂದಾಯ ಮಾಡಿದ್ದರೆ ಮತ್ತು ಆ ಬಡ್ಡಿಯ ಮರುಪಾವತಿಗಾಗಿ ಕ್ಲೇಮು ಮಾಡುವ ಆ ವ್ಯಕ್ತಿಯು, ಸುಸಂಗತ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾಗುವುದಕ್ಕೂ ಮೊದಲು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಅರ್ಜಿಯನ್ನು ಸಲ್ಲಿಸಬಹುದು:

ಪರಂತು, ಪ್ರಕರಣ 49ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ವಿದ್ಯುನ್ಮಾನ ನಗದು ಲೆಡ್ಜರ್‌ನ ಯಾವುದೇ ಉಳಿಕೆಯ ಮರುಪಾವತಿಯನ್ನು ಕ್ಲೇಮು ಮಾಡುವ ನೋಂದಾಯಿತ ವ್ಯಕ್ತಿಯು, ಅಂಥ ಮರುಪಾವತಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಕ್ಲೇಮು ಮಾಡಬಹುದು.

(2) ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಒಳ ಪೂರೈಕೆಗಾಗಿ ಸಂದಾಯ ಮಾಡಿದ ರಾಜ್ಯ ತೆರಿಗೆಯ ಮರುಪಾವತಿಗೆ ಹಕ್ಕುಳ್ಳ ವಿಶ್ವಸಂಸ್ಥೆಯ ಯಾವುದೇ ವಿಶೇಷ ಏಜೆನ್ಸಿಯು ಅಥವಾ ವಿಶ್ವಸಂಸ್ಥೆ (ವಿಶೇಷ ಸ್ಥಾನಮಾನ ಮತ್ತು ಉನ್ಮುಕ್ತಿಗಳು) ಅಧಿನಿಯಮ, 1947 (1947ರ 46) ರ ಅಡಿಯಲ್ಲಿ ಅಧಿಸೂಚಿಸಿದ ಯಾವುದೇ ಬಹುಪಕ್ಷೀಯ ಹಣಕಾಸಿನ ಸಂಸ್ಥೆ ಮತ್ತು ಸಂಘಟನೆಯು, ವಿದೇಶಗಳ ಕಾನ್ಸುಲೇಟ್ ಅಥವಾ ರಾಯಭಾರ ಕಾರ್ಯಾಲಯವು ಅಥವಾ ಪ್ರಕರಣ 55ರ ಅಡಿಯಲ್ಲಿ ಅಧಿಸೂಚಿಸಿದ ಯಾವುದೇ ಇತರ ವ್ಯಕ್ತಿಯು ಅಥವಾ ವ್ಯಕ್ತಿಗಳ ವರ್ಗವು, ಅಂಥ ಪೂರೈಕೆಯನ್ನು ಸ್ವೀಕರಿಸಿದ ತ್ರೈಮಾಸಿಕದ ಕೊನೆಯ ದಿನದಿಂದ ಎರಡು ವರ್ಷಗಳು ಮುಗಿಯುವುದಕ್ಕೆ ಮುಂಚೆ, ಅಂಥ ಮರುಪಾವತಿಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

(3) ಉಪಪ್ರಕರಣ (10)ರ ಉಪಬಂಧಗಳಿಗೆ ಒಳಪಟ್ಟು, ನೋಂದಾಯಿತ ವ್ಯಕ್ತಿಯು, ಯಾವುದೇ ತೆರಿಗೆ ಅವಧಿಯ ಕೊನೆಯಲ್ಲಿ ಬಳಕೆಯಾಗದೆ ಉಳಿದಿರುವ ಯಾವುದೇ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಮರುಪಾವತಿಗೆ ಕ್ಲೇಮು ಮಾಡಬಹುದು:

ಪರಂತು, ಬಳಕೆಯಾಗದೆ ಉಳಿದಿರುವ ಯಾವುದೇ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಮರುಪಾವತಿಗೆ,–

(i) ತೆರಿಗೆ ಸಂದಾಯ ಮಾಡದೆಯೇ ಮಾಡಿದ ಶೂನ್ಯ ದರದ ಪೂರೈಕೆಗಳಲ್ಲದ ಪ್ರಕರಣಗಳಲ್ಲಿ;

(ii) ಪರಿಷತ್ತಿನ ಶಿಫಾರಸ್ಸಿನ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಳ ಹೊರತು, ಔಟ್‌ಪುಟ್ ಪೂರೈಕೆಗಳ ಮೇಲಿನ ತೆರಿಗೆ ದರಕ್ಕಿಂತಲೂ ಇನ್‌ಪುಟ್ಸ್‌ನ ಮೇಲಿನ ತೆರಿಗೆ ದರವು ಹೆಚ್ಚಿಗೆ ಇರುವ (ಶೂನ್ಯ ದರವಿಲ್ಲದ ಅಥವಾ ಸಂಪೂರ್ಣ ವಿನಾಯಿತಿ ಉಳ್ಳ ಪೂರೈಕೆಗಳನ್ನು ಹೊರತುಪಡಿಸಿ) ಕಾರಣಕ್ಕಾಗಿ ಜಮೆಯು ಸಂಚಯಿತವಾಗಿದ್ದರೆ

– ಅವಕಾಶ ನೀಡತಕ್ಕದ್ದಲ್ಲ:

ಮತ್ತು ಪರಂತು, ಭಾರತದಿಂದ ಹೊರಗಡೆಗೆ ರಫ್ತಾದ ಸರಕುಗಳು ರಫ್ತು ಸುಂಕಕ್ಕೆ ಒಳಪಟ್ಟಿರುವ ಸಂದರ್ಭಗಳಲ್ಲಿ ಬಳಕೆಯಾಗದೆ ಉಳಿದಿರುವ ಯಾವುದೇ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಮರುಪಾವತಿಗೆ ಅವಕಾಶ ನೀಡತಕ್ಕದ್ದಲ್ಲ:

ಮತ್ತೂ ಪರಂತು, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆದಾರನು ಕೇಂದ್ರ ತೆರಿಗೆಗೆ ಸಂಬಂಧಿಸಿದಂತೆ ಸುಂಕ ರಿಯಾಯಿತಿಯನ್ನು ಬಳಸಿಕೊಂಡರೆ ಅಥವಾ ಅಂಥ ಪೂರೈಕೆಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿಯನ್ನು ಕ್ಲೇಮು ಮಾಡಿದರೆ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಮರುಪಾವತಿಗೆ ಅವಕಾಶ ನೀಡತಕ್ಕದ್ದಲ್ಲ.

(4) ಅರ್ಜಿಯ ಜತೆ ಕೆಳಗೆ ಹೇಳಿದವುಗಳು ಇರತಕ್ಕದ್ದು,–

(ಎ) ಅರ್ಜಿದಾರನಿಗೆ ಮರುಪಾವತಿಯು ಬಾಕಿ ಇದೆ ಎನ್ನುವುದನ್ನು ಸ್ಥಿರೀಕರಿಸಲು, ನಿಯಮಿಸಬಹುದಾದಂಥ ದಸ್ತಾವೇಜು ಪುರಾವೆ; ಮತ್ತು

(ಬಿ) ಯಾವ ತೆರಿಗೆಗೆ ಅಥವಾ ಸಂದಾಯ ಮಾಡಿದ ಯಾವ ಇತರ ಮೊತ್ತಕ್ಕೆ ಸಂಬಂಧಿಸಿದಂತೆ ಮರುಪಾವತಿಯನ್ನು ಕ್ಲೇಮು ಮಾಡಲಾಗಿದೆಯೋ ಆ ತೆರಿಗೆ ಮೊತ್ತವನ್ನು ಮತ್ತು ಅಂಥ ತೆರಿಗೆ ನಿಮಿತ್ತ ಅಥವಾ ಸಂದಾಯ ಮಾಡಿದ ಯಾವುದೇ ಇತರ ಮೊತ್ತಕ್ಕೆ ಬಡ್ಡಿಯನ್ನೇನಾದರೂ ಸಂದಾಯ ಮಾಡಿದ್ದರೆ ಆ ಬಡ್ಡಿಯನ್ನು ಆತನಿಂದ ಸಂಗ್ರಹಿಸಲಾಗಿದೆಯೆಂಬುದನ್ನು ಅಥವಾ ಆತನು ಸಂದಾಯ ಮಾಡಿದ್ದಾನೆಂಬುದನ್ನು ಮತ್ತು ಅಂಥ ತೆರಿಗೆ ಹಾಗೂ ಬಡ್ಡಿಯ ಹೊರೆಯನ್ನು ಯಾರೇ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎನ್ನುವುದನ್ನು ಸ್ಥಿರೀಕರಿಸುವುದಕ್ಕಾಗಿ ಅರ್ಜಿದಾರನು ಒದಗಿಸಬಹುದಾದಂಥ ದಸ್ತಾವೇಜುಗಳು ಮತ್ತು ಇತರ ಪುರಾವೆಗಳು (ಪ್ರಕರಣ 33ರಲ್ಲಿ ಉಲ್ಲೇಖಿಸಿರುವ ದಸ್ತಾವೇಜುಗಳನ್ನು ಒಳಗೊಂಡಂತೆ):

ಪರಂತು, ಮರುಪಾವತಿಯಾಗಬೇಕೆಂದು ಕ್ಲೇಮು ಮಾಡಿರುವ ಮೊತ್ತವು ಎರಡು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿದ್ದಲ್ಲಿ, ಅರ್ಜಿದಾರನು ಯಾವುದೇ ದಸ್ತಾವೇಜುಗಳನ್ನು ಮತ್ತು ಇತರ ಪುರಾವೆಗಳನ್ನು ಒದಗಿಸುವುದು ಅವಶ್ಯಕವಿರತಕ್ಕದ್ದಲ್ಲ, ಆದರೆ, ಅದಕ್ಕೆ ಬದಲಾಗಿ ಅವನ ಬಳಿ ಲಭ್ಯವಿರುವ ದಸ್ತಾವೇಜುಗಳ ಮತ್ತು ಇತರ ಪುರಾವೆಗಳ ಆಧಾರದ ಮೇಲೆ, ಅಂಥ ತೆರಿಗೆ ಹಾಗೂ ಬಡ್ಡಿಯ ಹೊರೆಯನ್ನು ಯಾರೇ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎಂದು ಪ್ರಮಾಣೀಕರಿಸುವ ಘೋಷಣೆಯನ್ನು ಅವನು ಸಲ್ಲಿಸಬಹುದು.

(5) ಅಂಥ ಯಾವುದೇ ಅರ್ಜಿಯನ್ನು ಸ್ವೀಕರಿಸಿದಾಗ, ಮರುಪಾವತಿಗಾಗಿ ಕ್ಲೇಮು ಮಾಡಿರುವ ಮೊತ್ತವನ್ನು ಪೂರ್ಣವಾಗಿ ಅಥವಾ ಭಾಗಶಃ ಮರುಪಾವತಿ ಮಾಡಬಹುದು ಎಂದು ಯುಕ್ತ ಅಧಿಕಾರಿಯು ಮನದಟ್ಟು ಮಾಡಿಕೊಂಡರೆ, ಆತನು ಅದಕ್ಕನುಸಾರವಾಗಿ ಆದೇಶ ಮಾಡಬಹುದು ಮತ್ತು ಹಾಗೆ ನಿರ್ಧರಿಸಿದ ಮೊತ್ತವು ಪ್ರಕರಣ 57ರಲ್ಲಿ ಉಲ್ಲೇಖಿಸಿದ ನಿಧಿಗೆ ಜಮೆ ಮಾಡತಕ್ಕದ್ದು.

(6) ಉಪಪ್ರಕರಣ (5)ರಲ್ಲಿ ಏನೇ ಒಳಗೊಂಡಿದ್ದರೂ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದಂಥ ನೋಂದಾಯಿತ ವ್ಯಕ್ತಿಗಳ ವರ್ಗದವರಲ್ಲದ ನೋಂದಾಯಿತ ವ್ಯಕ್ತಿಗಳು ಸರಕು ಅಥವಾ

ಸೇವೆಗಳನ್ನು ಅಥವಾ ಅವುಗಳೆರಡನ್ನು ಶೂನ್ಯ ದರದಲ್ಲಿ ಪೂರೈಕೆ ಮಾಡಿದ ಪ್ರಯುಕ್ತ ಮರುಪಾವತಿಗಾಗಿ ಯಾವುದೇ ಕ್ಲೇಮನ್ನು ಮಾಡಿದ್ದರೆ, ಯುಕ್ತ ಅಧಿಕಾರಿಯು, ಹಾಗೆ ಕ್ಲೇಮು ಮಾಡಿರುವ ಒಟ್ಟು ಮೊತ್ತದ ಶೇಕಡಾ ತೊಂಬತ್ತರಷ್ಟನ್ನು ತಾತ್ಕಾಲಿಕವಾಗಿ ಅಂಗೀಕರಿಸಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮೊತ್ತವನ್ನು ಹೊರತುಪಡಿಸಿ, ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ, ಮಿತಿಗಳಿಗೆ ಮತ್ತು ರಕ್ಷಣೋಪಾಯಗಳಿಗೆ ಒಳಪಟ್ಟು ತಾತ್ಕಾಲಿಕವಾಗಿ ಮರುಪಾವತಿ ಮಾಡಬಹುದು ಮತ್ತು ತದನಂತರ ಅರ್ಜಿದಾರನು ಒದಗಿಸಿದ ದಸ್ತಾವೇಜುಗಳ ಸೂಕ್ತ ಪರಿಶೀಲನೆಯ ನಂತರ ಮರುಪಾವತಿ ಕ್ಲೇಮಿನ ಅಂತಿಮ ಇತ್ಯರ್ಥಕ್ಕಾಗಿ ಉಪಪ್ರಕರಣ (5)ರ ಅಡಿಯಲ್ಲಿ ಆದೇಶ ಮಾಡಬಹುದು.

(7) ಎಲ್ಲಾ ವಿಧದಲ್ಲಿಯೂ ಪೂರ್ಣವಾಗಿರುವ ಅರ್ಜಿಯ ಸ್ವೀಕೃತಿ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಯುಕ್ತ ಅಧಿಕಾರಿಯು ಉಪಪ್ರಕರಣ (5)ರ ಅಡಿಯಲ್ಲಿ ಆದೇಶವನ್ನು ಹೊರಡಿಸತಕ್ಕದ್ದು.

(8) ಉಪಪ್ರಕರಣ (5)ರಲ್ಲಿ ಏನೇ ಒಳಗೊಂಡಿದ್ದರೂ, ಮರುಪಾವತಿ ಮಾಡಬಹುದಾದ ಮೊತ್ತವು, ಈ ಕೆಳಗಿನವುಗಳಿಗೆ ಸಂಬಂಧಿಸಿದ್ದರೆ, ಅಂಥ ಮೊತ್ತವನ್ನು ನಿಧಿಗೆ ಜಮೆಗೊಳಿಸುವುದಕ್ಕೆ ಬದಲಾಗಿ,–

(ಎ) ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡರನ್ನೂ ರಫ್ತು ಮಾಡಿದ್ದಕ್ಕಾಗಿ ಅಥವಾ ಹಾಗೆ ರಫ್ತುಗಳನ್ನು ಮಾಡುವಾಗ ಬಳಕೆ ಮಾಡಿದ ಇನ್‌ಪುಟ್‌ಗಳಿಗೆ ಹಾಗೂ ಇನ್‌ಪುಟ್ ಸರ್ವಿಸಸ್‌ಗಳಿಗೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿಗೆ ಸಂಬಂಧಪಟ್ಟಿದ್ದರೆ;

(ಬಿ) ಉಪಪ್ರಕರಣ (3)ರ ಅಡಿಯಲ್ಲಿ ಬಳಕೆ ಮಾಡಿಕೊಳ್ಳದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಮರುಪಾವತಿಗೆ ಸಂಬಂಧಪಟ್ಟಿದ್ದರೆ;

(ಸಿ) ಯಾವ ಪೂರೈಕೆಗೆ ತೆರಿಗೆ ಮರುಪಾವತಿಗೆ ಸಂಪೂರ್ಣವಾಗಿ ಅಥವಾ ಭಾಗಶಃ ಅವಕಾಶ ಕಲ್ಪಿಸಿಲ್ಲವೋ ಮತ್ತು ಅದಕ್ಕಾಗಿ ದರಪಟ್ಟಿಯನ್ನು ನೀಡಿಲ್ಲವೋ ಅಥವಾ ಮರುಪಾವತಿ ವೋಚರನ್ನು ನೀಡಿಲ್ಲವೋ ಆ ಪೂರೈಕೆಗಾಗಿ ಸಂದಾಯ ಮಾಡಿದ್ದ ತೆರಿಗೆಯ ಮರುಪಾವತಿಗೆ ಸಂಬಂಧಪಟ್ಟಿದ್ದರೆ;

(ಡಿ) ಪ್ರಕರಣ 77ರ ಅನುಸಾರವಾಗಿ ತೆರಿಗೆಯ ಮರುಪಾವತಿಗೆ ಸಂಬಂಧಪಟ್ಟಿದ್ದರೆ;

(ಇ) ಅರ್ಜಿದಾರನು ತೆರಿಗೆ ಮತ್ತು ಬಡ್ಡಿಯನ್ನೇನಾದರೂ ಅಥವಾ ಇತರ ಯಾವುದೇ ಮೊತ್ತವನ್ನು ಅಂಥ ತೆರಿಗೆ ಮತ್ತು ಬಡ್ಡಿಯ ಹೊರೆಯನ್ನು ಅವನು ಯಾವುದೇ ಇತರ ವ್ಯಕ್ತಿಗೆ ವರ್ಗಾಯಿಸಿರದಿದ್ದು ಸಂದಾಯ ಮಾಡಿದ್ದರೆ ಹಾಗೆ ಸಂದಾಯ ಮಾಡಿದ ತೆರಿಗೆಗೆ ಮತ್ತು ಬಡ್ಡಿಗೆ ಸಂಬಂಧಪಟ್ಟಿದ್ದರೆ; ಅಥವಾ

(ಎಫ್) ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ, ಅರ್ಜಿದಾರರ ಇತರ ವರ್ಗವು ಹೊತ್ತುಕೊಂಡ ತೆರಿಗೆಗೆ ಅಥವಾ ಬಡ್ಡಿಗೆ ಸಂಬಂಧಪಟ್ಟಿದ್ದರೆ

– ಅರ್ಜಿದಾರನಿಗೆ ಸಂದಾಯ ಮಾಡತಕ್ಕದ್ದು.

(8ಎ) ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ರಾಜ್ಯ ತೆರಿಗೆಯ ಮರುಪಾವತಿ ಹಣವನ್ನು ಬಟವಾಡೆ ಮಾಡಬಹುದು.

(9) ಅಪೀಲು ನ್ಯಾಯಾಧಿಕರಣದ ಅಥವಾ ಯಾವುದೇ ನ್ಯಾಯಾಲಯದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ, ಆದೇಶದಲ್ಲಿ ಅಥವಾ ನಿರ್ದೇಶನದಲ್ಲಿ ಅಥವಾ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಯಾವುದೇ ಇತರ ಉಪಬಂಧಗಳಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಉಪಪ್ರಕರಣ (8)ರ ಉಪಬಂಧಗಳಿಗೆ ಅನುಸಾರವಾಗಿ ಹೊರತು ಮರುಪಾವತಿ ಮಾಡತಕ್ಕದ್ದಲ್ಲ.

(10) ಯಾವುದಾದರೂ ರಿಟರ್ನ್‌ನನ್ನು ಒದಗಿಸಲು ತಪ್ಪಿರುವ ಅಥವಾ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಯಾವುದೇ ನ್ಯಾಯಾಲಯದಿಂದ, ನ್ಯಾಯಾಧಿಕರಣದಿಂದ ಅಥವಾ ಅಪೀಲು ಪ್ರಾಧಿಕಾರದಿಂದ ತಡೆಯಾಜ್ಞೆ ಇರದಂಥ ಯಾವುದೇ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು ಸಂದಾಯ ಮಾಡಬೇಕಾಗಿದ್ದ ನೋಂದಾಯಿತ ವ್ಯಕ್ತಿಗೆ, ಯಾವುದೇ ಮರುಪಾವತಿಯು ಬಾಕಿಯಿದ್ದಲ್ಲಿ, ಯುಕ್ತ ಅಧಿಕಾರಿಯು,–

(ಎ) ಸದರಿ ವ್ಯಕ್ತಿಯು ರಿಟರ್ನ್‌ನನ್ನು ಒದಗಿಸುವವರೆಗೆ ಅಥವಾ ತೆರಿಗೆ, ಬಡ್ಡಿ ಅಥವಾ ಸಂದರ್ಭಾನುಸಾರ ದಂಡವನ್ನು ಸಂದಾಯ ಮಾಡುವವರೆಗೆ ಬಾಕಿಯಿರುವ ಮರುಪಾವತಿಯ ಸಂದಾಯವನ್ನು ತಡೆಹಿಡಿಯಬಹುದು;

(ಬಿ) ತೆರಿಗೆದಾಯಕ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಂದಾಯ ಮಾಡುವುದಕ್ಕೆ ಬದ್ಧನಾಗಿರುವ, ಆದರೆ ಸಂದಾಯ ಮಾಡದೆ ಬಾಕಿ ಉಳಿದಿರುವ ಯಾವುದೇ ತೆರಿಗೆಯನ್ನು, ಬಡ್ಡಿಯನ್ನು, ದಂಡವನ್ನು, ಶುಲ್ಕವನ್ನು ಅಥವಾ ಯಾವುದೇ ಇತರ ಮೊತ್ತವನ್ನು ಮರುಪಾವತಿ ಮಾಡಬೇಕಾದ ಮೊತ್ತದಿಂದ ಕಡಿತಗೊಳಿಸಬಹುದು.

**ವಿವರಣೆ:–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, 'ನಿರ್ದಿಷ್ಟಪಡಿಸಿದ ದಿನಾಂಕ' ಪದಾವಳಿಯನ್ನು ಈ ಅಧಿನಿಯಮದ ಅಡಿಯಲ್ಲಿ ಅಪೀಲು ಸಲ್ಲಿಸಲು ಇರುವ ಕೊನೆಯ ದಿನಾಂಕ ಎಂಬುದಾಗಿ ಅರ್ಥೈಸತಕ್ಕದ್ದು.

(11) ಮರುಪಾವತಿಗೆ ಎಡೆ ಮಾಡಿಕೊಡುವ ಆದೇಶವು, ಅಪೀಲಿನ ಅಥವಾ ಮುಂದುವರೆದ ವ್ಯವಹರಣೆಗಳ ವಸ್ತುವಿಷಯವಾಗಿದ್ದರೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಇತರ ವ್ಯವಹರಣೆಗಳು ಇತ್ಯರ್ಥದಲ್ಲಿದ್ದರೆ ಮತ್ತು ದುಷ್ಕೃತ್ಯ ಅಥವಾ ಮೋಸ ಮಾಡಿದುದರ ಕಾರಣದಿಂದಾಗಿ ಹಾಗೆ ಮರುಪಾವತಿಗೆ ಮಂಜೂರಾತಿ ನೀಡುವುದು. ಸದರಿ ಅಪೀಲಿನಲ್ಲಿ ಅಥವಾ ಇತರ ವ್ಯವಹರಣೆಗಳಲ್ಲಿ ರಾಜಸ್ವಕ್ಕೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿದೆ ಎಂದು ಆಯುಕ್ತರು ಅಭಿಪ್ರಾಯಪಟ್ಟರೆ, ಅವರು, ತೆರಿಗೆದಾಯಕ ವ್ಯಕ್ತಿಗೆ ಅಹವಾಲುಗಳನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ಅವರು ನಿರ್ಧರಿಸಬಹುದಾದಂಥ ಸಮಯದವರೆಗೆ ಮರುಪಾವತಿಯನ್ನು ತಡೆಹಿಡಿಯಬಹುದು.

(12) ಉಪಪ್ರಕರಣ (11)ರ ಅಡಿಯಲ್ಲಿ ಮರುಪಾವತಿಯನ್ನು ತಡೆಹಿಡಿದಿದ್ದಲ್ಲಿ, ಅಪೀಲಿನ ಅಥವಾ ಮುಂದೆ ನಡೆಯುವ ವ್ಯವಹರಣೆಗಳ ಪರಿಣಾಮವಾಗಿ ತೆರಿಗೆದಾಯಕ ವ್ಯಕ್ತಿಯು ಮರುಪಾವತಿಗೆ ಹಕ್ಕುಳ್ಳವನಾದರೆ, ಪ್ರಕರಣ 56ರಲ್ಲಿ ಏನೇ

ಒಳಗೊಂಡಿದ್ದರೂ ಸಹ, ಶೇಕಡಾ ಆರರಷ್ಟನ್ನು ಮೀರದಂತೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಅಧಿಸೂಚಿಸಬಹುದಾದಂಥ ದರದಲ್ಲಿ ಬಡ್ಡಿಗೆ ಹಕ್ಕುಳ್ಳವನಾಗಿರತಕ್ಕದ್ದು.

(13) ಈ ಪ್ರಕರಣದಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾಗಿ ಏನೇ ಇದ್ದರೂ, ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಯು ಅಥವಾ ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ಪ್ರಕರಣ 27ರ ಉಪಪ್ರಕರಣ (2)ರ ಅಡಿಯಲ್ಲಿ ಠೇವಣಿ ಮಾಡಿದ ಮುಂಗಡ ತೆರಿಗೆಯ ಮೊತ್ತವನ್ನು, ಆತನಿಗೆ ಮಂಜೂರು ಮಾಡಿದ್ದ ನೋಂದಣಿ ಪ್ರಮಾಣಪತ್ರವು ಜಾರಿಯಲ್ಲಿ ಉಳಿದಿರುವ ಸಂಪೂರ್ಣ ಅವಧಿಗೆ ಸಂಬಂಧಿಸಿದಂತೆ, ಪ್ರಕರಣ 39ರ ಅಡಿಯಲ್ಲಿ ಅಗತ್ಯವಿರುವ ಎಲ್ಲಾ ರಿಟರ್ನ್‌ಗಳನ್ನು ಅಂಥ ವ್ಯಕ್ತಿಯು ಸಲ್ಲಿಸಿದ ಹೊರತು ಮರುಪಾವತಿ ಮಾಡತಕ್ಕದ್ದಲ್ಲ.

(14) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಮರುಪಾವತಿ ಮೊತ್ತವು, ಸಾವಿರ ರೂಪಾಯಿಗಳಿಗಿಂತ ಕಡಿಮೆ ಇದ್ದರೆ, ಅಂಥ ಕಡಿಮೆ ಮೊತ್ತವನ್ನು ಉಪಪ್ರಕರಣ (5)ರ ಅಥವಾ ಉಪಪ್ರಕರಣ (6)ರ ಅಡಿಯಲ್ಲಿ ಅರ್ಜಿದಾರನಿಗೆ ಸಂದಾಯ ಮಾಡತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(1) "ಮರುಪಾವತಿ"ಯು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಶೂನ್ಯ ದರದ ಪೂರೈಕೆಗಳ ಮೇಲೆ ಅಥವಾ ಅಂಥ ಶೂನ್ಯ ದರದ ಪೂರೈಕೆಗಳನ್ನು ಮಾಡಲು ಬಳಸಿದ ಇನ್‌ಪುಟ್‌ಗಳ ಮತ್ತು ಇನ್‌ಪುಟ್ ಸರ್ವೀಸ್‌ಗಳ ಮೇಲಿನ ತೆರಿಗೆಯ ಮರುಪಾವತಿಯನ್ನು ಅಥವಾ ಪರಿಭಾವಿತ ರಫ್ತುಗಳು ಎಂದು ಪರಿಗಣನೆಗೆ ತೆಗೆದುಕೊಂಡ ಸರಕುಗಳ ಪೂರೈಕೆ ಮೇಲಿನ ತೆರಿಗೆಯ ಮರುಪಾವತಿಯನ್ನು ಅಥವಾ ಉಪಪ್ರಕರಣ (3)ರ ಅಡಿಯಲ್ಲಿ ಕಲ್ಪಿಸಿರುವ ಬಳಕೆಯಾಗದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಮರುಪಾವತಿಯನ್ನು ಒಳಗೊಳ್ಳುತ್ತದೆ.

(2) "ಸುಸಂಗತ ದಿನಾಂಕ" ಎಂದರೆ:–

(ಎ) ಸರಕುಗಳು ಭಾರತದ ಹೊರಗಡೆಗೆ ರಫ್ತಾದ ಸಂದರ್ಭದಲ್ಲಿ, ಅದೇ ಸರಕುಗಳಿಗೆ ಅಥವಾ ಅಂಥ ಸರಕುಗಳಲ್ಲಿ ಬಳಸಿದ ಇನ್‌ಪುಟ್‌ಗಳ ಅಥವಾ ಸಂದರ್ಭಾನುಸಾರ ಇನ್‌ಪುಟ್ ಸರ್ವೀಸ್‌ಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ತೆರಿಗೆಯು ಮರುಪಾವತಿಗೆ ಲಭ್ಯವಿದ್ದಲ್ಲಿ,–

(i) ಸರಕುಗಳು ಸಮುದ್ರ ಅಥವಾ ವಾಯು ಮಾರ್ಗದ ಮೂಲಕ ರಫ್ತಾಗಿದ್ದರೆ, ಅಂಥ ಸರಕುಗಳನ್ನು ತುಂಬಿರುವ ಹಡಗು ಅಥವಾ ವಿಮಾನವು ಭಾರತವನ್ನು ಬಿಟ್ಟ ದಿನಾಂಕ; ಅಥವಾ

(ii) ಸರಕುಗಳು ಭೂ ಮಾರ್ಗದ ಮೂಲಕ ರಫ್ತಾಗಿದ್ದರೆ, ಅಂಥ ಸರಕುಗಳು ಗಡಿಯನ್ನು ದಾಟಿದ ದಿನಾಂಕ; ಅಥವಾ

(iii) ಸರಕುಗಳು ಅಂಚೆಯ ಮೂಲಕ ರಫ್ತಾಗಿದ್ದರೆ, ಸಂಬಂಧಿಸಿದ ಅಂಚೆ ಕಛೇರಿಯಿಂದ ಭಾರತದ ಹೊರಗಿನ ಸ್ಥಳಕ್ಕೆ ಸರಕುಗಳ ರವಾನೆ ದಿನಾಂಕ;

(ಬಿ) ಪರಿಭಾವಿತ ರಫ್ತುಗಳು ಎಂದು ಪರಿಗಣನೆಗೆ ತೆಗೆದುಕೊಂಡ ಸರಕುಗಳ ಪೂರೈಕೆಯಾಗಿದ್ದರೆ, ಸರಕುಗಳಿಗೆ ಸಂಬಂಧಿಸಿದಂತೆ ತೆರಿಗೆ ಸಂದಾಯ ಮಾಡಿರುವ ಹಣವು ಮರುಪಾವತಿಗೆ ಲಭ್ಯವಿದ್ದಲ್ಲಿ, ಅಂಥ ಪರಿಭಾವಿತ ರಫ್ತುಗಳಿಗೆ ಸಂಬಂಧಿಸಿದ ರಿಟರ್ನ್‌ನನ್ನು ಒದಗಿಸಿದ ದಿನಾಂಕ;

(ಬಿಎ) ವಿಶೇಷ ಆರ್ಥಿಕ ವಲಯ ಡೆವೆಲಪರ್ ಗೆ ಅಥವಾ ವಿಶೇಷ ಆರ್ಥಿಕ ವಲಯಕ್ಕೆ ಶೂನ್ಯ ದರದಲ್ಲಿ ಪೂರೈಕೆ ಮಾಡಿದ ಸರಕುಗಳು ಅಥವಾ ಸೇವೆಗಳು ಅಥವಾ ಅವೆರಡರ ಸಂದರ್ಭದಲ್ಲಿ ಸಂದಾಯ ಮಾಡಿದ್ದ ತೆರಿಗೆಯ ಮರುಪಾವತಿಯು, ಅಂಥ ಪೂರೈಕೆಗಳಿಗಾಗಿಯೇ ಲಭ್ಯವಿದ್ದಲ್ಲಿ ಅಥವಾ ಸಂದರ್ಭಾನುಸಾರ ಅಂಥ ಪೂರೈಕೆಗಳಲ್ಲಿ ಬಳಸಿದ ಇನ್‌ಪುಟ್ ಅಥವಾ ಇನ್‌ಪುಟ್ ಸೇವೆಗಳ ಪೂರೈಕೆಗಳ ಸಂಬಂಧದಲ್ಲಿ ಪ್ರಕರಣ 39ರ ಅಡಿಯಲ್ಲಿ ರಿಟರ್ನ್ ಅನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕ;

(ಸಿ) ಭಾರತದ ಹೊರಗಡೆಗೆ ರಫ್ತಾದ ಸೇವೆಗಳ ಸಂದರ್ಭದಲ್ಲಿ, ಅದೇ ಸೇವೆಗಳಿಗೆ ಅಥವಾ ಅಂಥ ಸೇವೆಗಳಲ್ಲಿ ಉಪಯೋಗಿಸಿದ ಇನ್‌ಪುಟ್‌ಗಳು ಅಥವಾ ಸಂದರ್ಭಾನುಸಾರ, ಇನ್‌ಪುಟ್ ಸರ್ವೀಸ್‌ಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ತೆರಿಗೆಯ ಹಣವು ಮರುಪಾವತಿಗೆ ಲಭ್ಯವಿದ್ದಲ್ಲಿ,–

(i) ಅಂಥ ಸಂದಾಯವನ್ನು ಸ್ವೀಕರಿಸುವುದಕ್ಕಿಂತ ಮುಂಚಿತವಾಗಿಯೇ ಸೇವೆಗಳ ಪೂರೈಕೆಯು ಪೂರ್ಣಗೊಂಡಿದ್ದಲ್ಲಿ, ಪರಿವರ್ತನೀಯ ವಿದೇಶಿ ವಿನಿಮಯದ ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ ಅನುಮತಿಸಿದ ಕಡೆಗಳಲ್ಲೆಲ್ಲ ಭಾರತೀಯ ರೂಪಾಯಿಗಳಲ್ಲಿ ರೀತ್ಯ ಸಂದಾಯವನ್ನು ಸ್ವೀಕರಿಸಿದ ದಿನಾಂಕ; ಅಥವಾ

(ii) ಸೇವೆಗಳಿಗಾಗಿ, ದರಪಟ್ಟಿಯ ನೀಡಿಕೆಯ ದಿನಾಂಕಕ್ಕಿಂತಲೂ ಮೊದಲು, ಸಂದಾಯವನ್ನು ಮುಂಚಿತವಾಗಿ ಸ್ವೀಕರಿಸಿದ್ದರೆ, ದರಪಟ್ಟಿಯ ನೀಡಿಕೆಯ ದಿನಾಂಕ;

(ಡಿ) ಅಪೀಲು ಪ್ರಾಧಿಕಾರದ, ಅಪೀಲು ನ್ಯಾಯಾಧಿಕರಣದ ಅಥವಾ ಯಾವುದೇ ನ್ಯಾಯಾಲಯದ ತೀರ್ಪಿನ, ಡಿಕ್ರಿಯ, ಆದೇಶದ ಅಥವಾ ನಿರ್ದೇಶನದ ಪರಿಣಾಮದಿಂದಾಗಿ, ತೆರಿಗೆಯು ಮರುಪಾವತಿಯಾಗಬೇಕಾದ ಸಂದರ್ಭದಲ್ಲಿ, ಅಂಥ ತೀರ್ಪನ್ನು, ಡಿಕ್ರಿಯನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ತಿಳಿಸಿದ ದಿನಾಂಕ;

(ಇ) ಉಪಪ್ರಕರಣ (3)ರ ಮೊದಲ ಪರಂತುಕದ ಖಂಡ (ii)ರ ಮೇರೆಗೆ ಬಳಸಿಕೊಳ್ಳದಿರುವ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಮರುಪಾವತಿಯ ಸಂದರ್ಭದಲ್ಲಿ, ಯಾವ ಅವಧಿಯಲ್ಲಿ ಮರುಪಾವತಿಗಾಗಿ ಅಂಥ ಕ್ಲೇಮು ಉದ್ಭವಿಸುವುದೋ ಆ ಅವಧಿಯಲ್ಲಿ ಪ್ರಕರಣ 39ರ ಅಡಿಯಲ್ಲಿ ವಿವರಪಟ್ಟಿಕೆ ಸಲ್ಲಿಸಲು ಕೊನೆಯ ದಿನಾಂಕ;

(ಎಫ್) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ತಾತ್ಕಾಲಿಕವಾಗಿ ತೆರಿಗೆಯನ್ನು ಸಂದಾಯ ಮಾಡಿದ ಸಂದರ್ಭದಲ್ಲಿ, ಅದರ ಅಂತಿಮ ಕರನಿರ್ಧರಣೆಯ ನಂತರದಲ್ಲಿ ತೆರಿಗೆಯ ಹೊಂದಾಣಿಕೆ ಮಾಡಿಕೊಂಡ ದಿನಾಂಕ;

(ಜಿ) ವ್ಯಕ್ತಿಯು ಪೂರೈಕೆದಾರನಲ್ಲದಿದ್ದರೆ, ಅಂಥ ವ್ಯಕ್ತಿಯು ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಸ್ವೀಕರಿಸಿದ ದಿನಾಂಕ;

(ಹೆಚ್) ಯಾವುದೇ ಇತರ ಸಂದರ್ಭದಲ್ಲಿ, ತೆರಿಗೆಯನ್ನು ಸಂದಾಯ ಮಾಡಿದ ದಿನಾಂಕ.

**55. ಕೆಲವೊಂದು ಪ್ರಕರಣಗಳಲ್ಲಿ ಮರುಪಾವತಿ.–** ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸರ್ಕಾರವು, ಅಧಿಸೂಚನೆಯ ಮೂಲಕ, ವಿಶ್ವಸಂಸ್ಥೆಯ ಯಾವುದೇ ವಿಶೇಷ ಏಜೆನ್ಸಿಯನ್ನು ಅಥವಾ ವಿಶ್ವಸಂಸ್ಥೆ (ವಿಶೇಷ ಸ್ಥಾನಮಾನ ಮತ್ತು ಉನ್ಮುಕ್ತಿಗಳು) ಅಧಿನಿಯಮ, 1947 (1947ರ 46)ರ ಅಡಿಯಲ್ಲಿ ಅಧಿಸೂಚಿಸಲಾದ ಯಾವುದೇ ಬಹುಪಕ್ಷೀಯ ಹಣಕಾಸಿನ ಸಂಸ್ಥೆ ಮತ್ತು ಸಂಘಟನೆಯನ್ನು, ವಿದೇಶಗಳ ಕಾನ್ಸುಲೇಟ್‌ನ್ನು ಅಥವಾ ರಾಯಭಾರ ಕಾರ್ಯಾಲಯವನ್ನು ಮತ್ತು ಈ ಸಂಬಂಧ ನಿರ್ದಿಷ್ಟಪಡಿಸಬಹುದಾದ ಯಾರೇ ಇತರ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳ ವರ್ಗವನ್ನು, ನಿಯಮಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಅವು ಅಥವಾ ಆ ಯಾರೇ ಇತರ ವ್ಯಕ್ತಿಯು ಅಥವಾ ವ್ಯಕ್ತಿಗಳ ವರ್ಗವು ಸ್ವೀಕರಿಸಿದ ಅಧಿಸೂಚಿತ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಳ ಮೇಲೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯನ್ನು ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕದ್ದೆಂದು ನಿರ್ದಿಷ್ಟಪಡಿಸಬಹುದು.

**56. ವಿಳಂಬವಾಗಿ ಮಾಡಿದ ಮರುಪಾವತಿಗಳ ಮೇಲೆ ಬಡ್ಡಿ.–** ಪ್ರಕರಣ 54ರ ಉಪಪ್ರಕರಣ (5)ರ ಅಡಿಯಲ್ಲಿ ಯಾರೇ ಯಾವುದೇ ತೆರಿಗೆಯನ್ನು, ಮರುಪಾವತಿ ಮಾಡಲು ಅರ್ಜಿದಾರನಿಗೆ ಆದೇಶಿಸಲಾಗಿದೆಯೋ ಆ ತೆರಿಗೆಯನ್ನು ಆ ಪ್ರಕರಣದ ಉಪಪ್ರಕರಣ (1)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಮರುಪಾವತಿ ಮಾಡಿರದಿದ್ದರೆ, ಸದರಿ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳು ಕೊನೆಗೊಂಡ ನಂತರದ ನಿಕಟ ದಿನಾಂಕದಿಂದ ಅಂಥ ತೆರಿಗೆಯ ಮರುಪಾವತಿಯಾಗುವವರೆಗೂ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಶೇಕಡ ಆರರಷ್ಟನ್ನು ಮೀರದಂಥ ದರದಲ್ಲಿನ ಬಡ್ಡಿಯು ಅಂಥ ಮರುಪಾವತಿಗೆ ಸಂಬಂಧಿಸಿದಂತೆ ಸಂದಾಯವಾಗತಕ್ಕದ್ದು:

ಪರಂತು, ನ್ಯಾಯನಿರ್ಣಯ ಪ್ರಾಧಿಕಾರವು ಅಥವಾ ಅಪೀಲು ಪ್ರಾಧಿಕಾರವು ಅಥವಾ ಅಪೀಲು ನ್ಯಾಯಾಧಿಕರಣವು ಅಥವಾ ನ್ಯಾಯಾಲಯವು ಹೊರಡಿಸಿದ ಯಾವ ಆದೇಶವು ಅಂತಿಮ ಸ್ವರೂಪದ್ದಾಗಿದೆಯೋ ಆ ಆದೇಶದಿಂದಾಗಿ ಮರುಪಾವತಿಗೆ ಯಾವುದೇ ಕ್ಲೇಮು ಉದ್ಭವಿಸಿದರೆ ಮತ್ತು ಅಂಥ ಆದೇಶದ ಪರಿಣಾಮವಾಗಿ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಮರುಪಾವತಿ ಮಾಡಿರದಿದ್ದರೆ, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳು ಕೊನೆಗೊಂಡ ನಂತರದ ನಿಕಟ ದಿನಾಂಕದಿಂದ ಅಂಥ ತೆರಿಗೆಯ ಮರುಪಾವತಿಯ ದಿನಾಂಕದವರೆಗೆ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಶೇಕಡ ಒಂಬತ್ತರಷ್ಟನ್ನು ಮೀರದಂಥ ದರದ ಬಡ್ಡಿಯು ಅಂಥ ಮರುಪಾವತಿಗೆ ಸಂಬಂಧಿಸಿದಂತೆ ಸಂದಾಯವಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, ಪ್ರಕರಣ 54ರ ಉಪಪ್ರಕರಣ (5)ರ ಅಡಿಯಲ್ಲಿ ಯುಕ್ತ ಅಧಿಕಾರಿಯ ಆದೇಶದ ವಿರುದ್ಧ, ಅಪೀಲು ಪ್ರಾಧಿಕಾರವು, ಅಪೀಲು ನ್ಯಾಯಾಧಿಕರಣವು ಅಥವಾ ಯಾವುದೇ ನ್ಯಾಯಾಲಯವು ಮರುಪಾವತಿಗೆ ಆದೇಶವನ್ನು ಮಾಡಿದ್ದರೆ, ಆ ಅಪೀಲು ಪ್ರಾಧಿಕಾರವು, ಅಪೀಲು ನ್ಯಾಯಾಧಿಕರಣವು ಅಥವಾ ಯಾವುದೇ

ನ್ಯಾಯಾಲಯವು ಹೊರಡಿಸಿದ ಆ ಆದೇಶವನ್ನು, ಈ ಪ್ರಕರಣದ ಉದ್ದೇಶಕ್ಕಾಗಿ ಸದರಿ ಉಪಪ್ರಕರಣ (5)ರ ಅಡಿಯಲ್ಲಿ ಹೊರಡಿಸಿದ ಆದೇಶ ಎಂದು ಪರಿಭಾವಿಸತಕ್ಕದ್ದು.

**57. ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿ.–** ಸರ್ಕಾರವು, ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿ ಎಂದು ಕರೆಯಲಾಗುವ ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಆ ನಿಧಿಗೆ,–

(ಎ) ಪ್ರಕರಣ 54ರ ಉಪಪ್ರಕರಣ (5)ರಲ್ಲಿ ಹೇಳಿರುವ ತೆರಿಗೆಯ ಮೊತ್ತವನ್ನು;

(ಬಿ) ನಿಧಿಗೆ ಜಮೆ ಮಾಡಿದ ಮೊತ್ತದ ಹೂಡಿಕೆಯಿಂದ ಗಳಿಸಿದ ಯಾವುದೇ ಆದಾಯವನ್ನು; ಮತ್ತು

(ಸಿ) ಆ ನಿಧಿಗೆ ಬಂದ ಯಾವುದೇ ಇತರ ಹಣಗಳನ್ನು

– ನಿಯಮಿಸಬಹುದಾದಂಥ ವಿಧಾನದಲ್ಲಿ ನಿಧಿಗೆ ಜಮೆ ಮಾಡತಕ್ಕದ್ದು.

**58. ನಿಧಿಯ ಬಳಕೆ.–** (1) ಈ ನಿಧಿಗೆ ಜಮೆಯಾಗುವ ಯಾವುದೇ ಮೊತ್ತಗಳನ್ನು, ಸರ್ಕಾರವು ಗ್ರಾಹಕರ ಕ್ಷೇಮಾಭಿವೃದ್ಧಿಗಾಗಿ, ನಿಯಮಿಸಬಹುದಾದಂಥ ವಿಧಾನದಲ್ಲಿ ಬಳಸತಕ್ಕದ್ದು.

(2) ಸರ್ಕಾರವು ಅಥವಾ ಸರ್ಕಾರವು ನಿರ್ದಿಷ್ಟಪಡಿಸಿದ ಪ್ರಾಧಿಕಾರಿಯು, ಭಾರತದ ಕಂಟ್ರೋಲರ್ ಮತ್ತು ಆಡಿಟರ್–ಜನರಲ್‌ರವರೊಡನೆ ಸಮಾಲೋಚನೆಯನ್ನು ನಡೆಸಿ ನಿಯಮಿಸಬಹುದಾದಂಥ ನಮೂನೆಯಲ್ಲಿ ನಿಧಿಗೆ ಸಂಬಂಧಿಸಿದ ಸೂಕ್ತ ಮತ್ತು ಪ್ರತ್ಯೇಕ ಲೆಕ್ಕಪತ್ರವನ್ನು, ನಮೂನೆಯನ್ನು ಮತ್ತು ಸಂಬಂಧಿಸಿದ ಇತರ ದಾಖಲೆಗಳನ್ನು ನಿರ್ವಹಿಸತಕ್ಕದ್ದು.

**ಅಧ್ಯಾಯ XII**

**ಕರನಿರ್ಧರಣೆ**

**59. ಸ್ವಯಂ–ಕರನಿರ್ಧರಣೆ.–** ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಗಳನ್ನು ಸ್ವಯಂ–ನಿರ್ಧರಣೆ ಮಾಡತಕ್ಕದ್ದು ಮತ್ತು ಪ್ರತಿಯೊಂದು ತೆರಿಗೆ ಅವಧಿಗೆ ಪ್ರಕರಣ 39ರ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ರಿಟರ್ನ್‌ನನ್ನು ಸಲ್ಲಿಸತಕ್ಕದ್ದು.

**60. ತಾತ್ಕಾಲಿಕ ಕರನಿರ್ಧರಣೆ.–** (1) ಉಪಪ್ರಕರಣ (2)ರ ಉಪಬಂಧಗಳಿಗೆ ಒಳಪಟ್ಟು, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೌಲ್ಯವನ್ನು ನಿರ್ಧರಿಸುವುದಕ್ಕೆ ಅಥವಾ ಅವುಗಳಿಗೆ ಅನ್ವಯವಾಗುವ ತೆರಿಗೆ ದರವನ್ನು ನಿರ್ಧರಿಸುವುದಕ್ಕೆ ತೆರಿಗೆದಾಯಕ ವ್ಯಕ್ತಿಗೆ ಸಾಧ್ಯವಾಗದಿದ್ದಲ್ಲಿ, ಅವನು ತಾತ್ಕಾಲಿಕ ಆಧಾರದ ಮೇಲೆ ತೆರಿಗೆಯನ್ನು ಸಂದಾಯ ಮಾಡುವುದಕ್ಕಾಗಿ ತನಗಿರುವ ಕಾರಣಗಳನ್ನು ವಿವರಿಸಿ ಯುಕ್ತ ಅಧಿಕಾರಿಯನ್ನು ಲಿಖಿತದಲ್ಲಿ ಕೋರಬಹುದು ಮತ್ತು ಯುಕ್ತ ಅಧಿಕಾರಿಯು, ಅಂಥ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳನ್ನು ಮೀರದ ಅವಧಿಯೊಳಗಾಗಿ ಆತನು ನಿರ್ದಿಷ್ಟಪಡಿಸಬಹುದಾದಂಥ ದರದಲ್ಲಿ ಅಥವಾ ಅಂಥ ಮೌಲ್ಯದ ಮೇಲೆ ತಾತ್ಕಾಲಿಕ ಆಧಾರದ ಮೇಲೆ ತೆರಿಗೆ ಸಂದಾಯಕ್ಕೆ ಅನುಮತಿ ನೀಡಿರುವ ಆದೇಶವನ್ನು ಹೊರಡಿಸತಕ್ಕದ್ದು.

(2) ಯುಕ್ತ ಅಧಿಕಾರಿಯು ಅಂತಿಮವಾಗಿ ನಿರ್ಧರಿಸಬಹುದಾದ ತೆರಿಗೆಯ ಮೊತ್ತದ ಹಾಗೂ ತಾತ್ಕಾಲಿಕವಾಗಿ ನಿರ್ಧರಿಸಿದ ತೆರಿಗೆಯ ಮೊತ್ತದ ನಡುವಿನ ವ್ಯತ್ಯಾಸವನ್ನು ಸಂದಾಯ ಮಾಡುವುದಾಗಿ ಬದ್ಧನಾಗಿರುವೆಂದು ತೆರಿಗೆದಾಯಕ ವ್ಯಕ್ತಿಯು ಸೂಕ್ತವೆಂದು ಯುಕ್ತ ಅಧಿಕಾರಿಯು ಭಾವಿಸಬಹುದಾದಂಥ ಜಾಮೀನು ಅಥವಾ ಭದ್ರತೆ ಸಹಿತ, ಈ ಸಂಬಂಧದಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಬಾಂಡ್‌ನ್ನು ಬರೆದುಕೊಟ್ಟರೆ, ತಾತ್ಕಾಲಿಕ ಆಧಾರದ ಮೇಲೆ ತೆರಿಗೆ ಸಂದಾಯವನ್ನು ಮಾಡಲು ಆ ತೆರಿಗೆದಾಯಕ ವ್ಯಕ್ತಿಗೆ ಅನುಮತಿ ನೀಡಬಹುದು.

(3) ಉಪಪ್ರಕರಣ (1)ರ ಅಡಿಯಲ್ಲಿ ಹೊರಡಿಸಿದ ಆದೇಶವನ್ನು ತಿಳಿಸಿದ ದಿನಾಂಕದಿಂದ ಆರು ತಿಂಗಳನ್ನು ಮೀರದ ಅವಧಿಯ ಒಳಗಾಗಿ, ಯುಕ್ತ ಅಧಿಕಾರಿಯು, ಕರನಿರ್ಧರಣೆಯನ್ನು ಅಂತಿಮಗೊಳಿಸುವುದಕ್ಕಾಗಿ ಅಗತ್ಯವಿರಬಹುದಾದಂಥ ಮಾಹಿತಿಯನ್ನು ಗಣನೆಗೆ ತೆಗೆದುಕೊಂಡ ನಂತರ ಅಂತಿಮ ಆದೇಶವನ್ನು ಹೊರಡಿಸತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು, ಸಾಕಷ್ಟು ಕಾರಣವನ್ನು ತೋರಿಸಿದಾಗ ಮತ್ತು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ಜಂಟಿ ಆಯುಕ್ತರು ಅಥವಾ ಅಪರ ಆಯುಕ್ತರು ಆರು ತಿಂಗಳು ಮೀರದಂತೆ ಮುಂದಿನ ಅವಧಿಗೆ ಮತ್ತು ಆಯುಕ್ತರು ನಾಲ್ಕು ವರ್ಷಗಳನ್ನು ಮೀರದಂಥ ಮುಂದಿನ ಅವಧಿಗೆ ವಿಸ್ತರಿಸಬಹುದು.

(4) ನೋಂದಾಯಿತ ವ್ಯಕ್ತಿಯು, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ತಾತ್ಕಾಲಿಕ ಕರನಿರ್ಧರಣೆ ಪ್ರಕಾರ ಮೇಲೆ ಸಂದಾಯ ಮಾಡಬೇಕಾದ, ಆದರೆ ಪ್ರಕರಣ 39ರ ಉಪಪ್ರಕರಣ (7)ರ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಕೊನೆಯ ದಿನಾಂಕದ ಒಳಗಾಗಿ ಸಂದಾಯ ಮಾಡದಿರುವ ಯಾವುದೇ ತೆರಿಗೆಯ ಮೇಲೆ, ಸದರಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ತೆರಿಗೆಯನ್ನು ಸಂದಾಯ ಮಾಡಬೇಕಾದ ಗಡುವು ದಿನಾಂಕದ ನಂತರದ ಮೊದಲ ದಿನದಿಂದ ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ದಿನಾಂಕದವರೆಗೆ, ಪ್ರಕರಣ 50ರ ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಬಡ್ಡಿಯನ್ನು, ಅಂತಿಮ ಕರನಿರ್ಧರಣೆಯ ಆದೇಶವನ್ನು ಹೊರಡಿಸುವುದಕ್ಕೂ ಮೊದಲು ಅಥವಾ ನಂತರ ಸಂದಾಯ ಮಾಡುವಂಥದ್ದಾದರೂ, ಅಂಥ ಬಡ್ಡಿ ಮೊತ್ತವನ್ನು ಸಂದಾಯ ಮಾಡುವುದಕ್ಕೆ ಬದ್ಧನಾಗಿರತಕ್ಕದ್ದು.

(5) ಉಪಪ್ರಕರಣ (3)ರ ಅಡಿಯಲ್ಲಿನ ಅಂತಿಮ ಕರನಿರ್ಧರಣೆಯ ಆದೇಶದ ಪರಿಣಾಮವಾಗಿ ತೆರಿಗೆದಾಯಕ ವ್ಯಕ್ತಿಯು ಮರುಪಾವತಿಗೆ ಹಕ್ಕುಳ್ಳವನಾಗಿದ್ದಲ್ಲಿ, ಪ್ರಕರಣ 54ರ ಉಪಪ್ರಕರಣ (8)ರ ಉಪಬಂಧಗಳಿಗೆ ಒಳಪಟ್ಟು, ಅಂಥ ಮರುಪಾವತಿಯ ಮೇಲೆ ಬಡ್ಡಿಯನ್ನು, ಪ್ರಕರಣ 56ರಲ್ಲಿ ಹೇಳಿರುವಂತೆ, ಸಂದಾಯ ಮಾಡತಕ್ಕದ್ದು.

**61. ರಿಟರ್ನ್‌ಗಳ ಸೂಕ್ಷ್ಮ ಪರಿಶೀಲನೆ.–** (1) ನೋಂದಾಯಿತ ವ್ಯಕ್ತಿಯು, ಒದಗಿಸಿದ ರಿಟರ್ನ್‌ನನ್ನು ಮತ್ತು ಸಂಬಂಧಿಸಿದ ವಿವರಗಳನ್ನು ಯುಕ್ತ ಅಧಿಕಾರಿಯು ರಿಟರ್ನ್‌ನಿನ ಸರಿತನವನ್ನು ಪರಿಶೀಲಿಸುವುದಕ್ಕಾಗಿ, ಸೂಕ್ಷ್ಮಪರಿಶೀಲನೆ ಮಾಡಬಹುದು ಮತ್ತು ಯಾವುದಾದರೂ ನ್ಯೂನ್ಯತೆಗಳು ಗಮನಕ್ಕೆ ಬಂದರೆ, ನಿಯಮಿಸಬಹುದಾದಂಥ ವಿಧಾನದಲ್ಲಿ ಆತನಿಗೆ ತಿಳಿಸಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಅವನ ವಿವರಣೆಯನ್ನು ಕೇಳಬಹುದು.

(2) ವಿವರಣೆಯು ಸಮ್ಮತವಾಗಿದ್ದರೆ ಎಂದು ಕಂಡುಬಂದ ಸಂದರ್ಭದಲ್ಲಿ, ಅದಕ್ಕನುಸಾರವಾಗಿ ನೋಂದಾಯಿತ ವ್ಯಕ್ತಿಗೆ ತಿಳಿಸತಕ್ಕದ್ದು ಮತ್ತು ಅದಕ್ಕೆ ಸಂಬಂಧಿಸಿದಂತೆ ಮುಂದಿನ ಕ್ರಮವನ್ನು ತೆಗೆದುಕೊಳ್ಳತಕ್ಕದ್ದಲ್ಲ.

(3) ಯುಕ್ತ ಅಧಿಕಾರಿಯು ತಿಳಿಸಿದ ಮೂವತ್ತು ದಿನಗಳ ಅವಧಿಯ ಒಳಗಾಗಿ ಅಥವಾ ಆತನು ಅನುಮತಿಸಬಹುದಾದಂಥ ಹೆಚ್ಚಿನ ಅವಧಿಯ ಒಳಗಾಗಿ ತೃಪ್ತಿದಾಯಕವಾದ ವಿವರಣೆಯನ್ನು ಒದಗಿಸಿಲ್ಲದ ಸಂದರ್ಭದಲ್ಲಿ ಅಥವಾ ನೋಂದಾಯಿತ ವ್ಯಕ್ತಿಯು ನ್ಯೂನತೆಗಳನ್ನು ಒಪ್ಪಿಕೊಂಡ ನಂತರ, ಆ ನ್ಯೂನತೆಯನ್ನು ಒಪ್ಪಿಕೊಂಡ ತಿಂಗಳಿನ ರಿಟರ್ನ್‌ನಲ್ಲಿ ಸರಿಪಡಿಸಿಕೊಳ್ಳುವ ಕ್ರಮವನ್ನು ತೆಗೆದುಕೊಳ್ಳಲು ವಿಫಲನಾದರೆ, ಯುಕ್ತ ಅಧಿಕಾರಿಯು ಪ್ರಕರಣ 65ರಲ್ಲಿ ಅಥವಾ ಪ್ರಕರಣ 66ರಲ್ಲಿ ಅಥವಾ ಪ್ರಕರಣ 67ರಲ್ಲಿ ಹೇಳಿರುವವುಗಳನ್ನು ಒಳಗೊಂಡಂತೆ ಸೂಕ್ತ ಕ್ರಮಗಳನ್ನು ಪ್ರಾರಂಭಿಸಬಹುದು ಅಥವಾ ಪ್ರಕರಣ 73 ಅಥವಾ ಪ್ರಕರಣ 74ರ ಅಡಿಯಲ್ಲಿ ತೆರಿಗೆ ಮತ್ತು ಇತರ ಬಾಕಿಗಳನ್ನು ನಿರ್ಧರಿಸಲು ಕ್ರಮ ಜರುಗಿಸಬಹುದು.

**62. ರಿಟರ್ನ್‌ಗಳನ್ನು ಸಲ್ಲಿಸದಿರುವವರ ಕರನಿರ್ಧರಣೆ.–** (1) ಪ್ರಕರಣ 73ರಲ್ಲಿ ಅಥವಾ ಪ್ರಕರಣ 74ರಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ, ಪ್ರಕರಣ 46ರ ಅಡಿಯಲ್ಲಿ ನೋಟೀಸು ಜಾರಿಯಾದ ನಂತರವೂ, ನೋಂದಾಯಿತ ವ್ಯಕ್ತಿಯು, ಪ್ರಕರಣ 39ರ ಅಥವಾ ಪ್ರಕರಣ 45ರ ಅಡಿಯಲ್ಲಿ ರಿಟರ್ನ್‌ನನ್ನು ಒದಗಿಸಲು ವಿಫಲನಾದರೆ, ಯುಕ್ತ ಅಧಿಕಾರಿಯು, ಲಭ್ಯವಿರುವ ಹಾಗೂ ಆತನೇ ಕಲೆಹಾಕಿದ ಎಲ್ಲಾ ಸಂಬಂಧಿತ ಮಾಹಿತಿಗಳನ್ನು ಗಣನೆಗೆ ತೆಗೆದುಕೊಂಡು, ತಾನು ಅತ್ಯುತ್ತಮ ವಿವೇಚನಾ ನಿರ್ಣಯಕ್ಕೆ ಬಂದು ಸದರಿ ವ್ಯಕ್ತಿಯ ತೆರಿಗೆ ಬಾಧ್ಯತೆಯನ್ನು ನಿರ್ಧರಿಸಲು ಕ್ರಮ ಜರುಗಿಸಬಹುದು ಮತ್ತು ಸಂದಾಯ ಮಾಡದಿರುವ ತೆರಿಗೆಯು ಯಾವ ಹಣಕಾಸು ವರ್ಷಕ್ಕೆ ಸಂಬಂಧಿಸಿದೆಯೋ ಆ ಹಣಕಾಸು ವರ್ಷಕ್ಕಾಗಿ ವಾರ್ಷಿಕ ವಿವರಪಟ್ಟಿಯನ್ನು ಒದಗಿಸುವುದಕ್ಕೆ ಪ್ರಕರಣ 44ರಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗಾಗಿ ಕರನಿರ್ಧರಣಾ ಆದೇಶವನ್ನು ಹೊರಡಿಸಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ಕರನಿರ್ಧರಣಾ ಆದೇಶವನ್ನು ಹೊರಡಿಸಿದ ಮೂವತ್ತು ದಿನಗಳ ಒಳಗಾಗಿ ನೋಂದಾಯಿತ ವ್ಯಕ್ತಿಯು ಸಿಂಧುವಾದ ರಿಟರ್ನ್‌ನನ್ನು ಒದಗಿಸಿದರೆ, ಸದರಿ ಕರನಿರ್ಧರಣಾ ಆದೇಶವನ್ನು ಹಿಂಪಡೆಯಲಾಗಿದೆ ಎಂದು ಭಾವಿಸತಕ್ಕದ್ದು. ಆದರೆ, ಪ್ರಕರಣ 50ರ ಉಪಪ್ರಕರಣ (1)ರ ಅಡಿಯಲ್ಲಿ ಬಡ್ಡಿ ಸಂದಾಯದ ಅಥವಾ ಪ್ರಕರಣ 47ರ ಅಡಿಯಲ್ಲಿ ವಿಳಂಬ ಶುಲ್ಕ ಸಂದಾಯದ ಆ ವ್ಯಕ್ತಿಯ ಬಾಧ್ಯತೆಯು ಮುಂದುವರಿಯತಕ್ಕದ್ದು.

**63. ನೋಂದಾಯಿತರಲ್ಲದ ವ್ಯಕ್ತಿಗಳ ಕರನಿರ್ಧರಣೆ.–** ಪ್ರಕರಣ 73ರಲ್ಲಿ ಅಥವಾ ಪ್ರಕರಣ 74ರಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ ಸಹ, ತೆರಿಗೆದಾಯಕ ವ್ಯಕ್ತಿಯು, ನೋಂದಣಿಯನ್ನು ಪಡೆಯಲು ಬದ್ಧನಾಗಿದ್ದರೂ ಸಹ ನೋಂದಣಿ ಪಡೆದುಕೊಳ್ಳಲು ವಿಫಲನಾಗಿದ್ದರೆ ಅಥವಾ ತೆರಿಗೆ ಸಂದಾಯ ಮಾಡುವುದಕ್ಕೆ ಬದ್ಧನಾಗಿದ್ದ ಆತನ ನೋಂದಣಿಯು ಪ್ರಕರಣ 29ರ ಉಪಪ್ರಕರಣ (2)ರ ಅಡಿಯಲ್ಲಿ ರದ್ದಾಗಿದ್ದರೆ ಯುಕ್ತ ಅಧಿಕಾರಿಯು, ಅತ್ಯುತ್ತಮ ವಿವೇಚನಾ ನಿರ್ಣಯಕ್ಕೆ ಬಂದು, ಆಯಾಯ ತೆರಿಗೆ ಅವಧಿಗಳಿಗೆ ಅಂಥ ವ್ಯಕ್ತಿಯ ತೆರಿಗೆ ಬಾಧ್ಯತೆಯನ್ನು ನಿರ್ಧರಿಸಲು ಕ್ರಮ ಜರುಗಿಸಬಹುದು ಮತ್ತು ಸಂದಾಯ ಮಾಡದಿರುವ ತೆರಿಗೆಯು ಯಾವ ಹಣಕಾಸು ವರ್ಷಕ್ಕೆ ಸಂಬಂಧಿಸಿದೆಯೋ ಆ ಹಣಕಾಸು ವರ್ಷಕ್ಕೆ ವಾರ್ಷಿಕ ವಿವರಪಟ್ಟಿಯನ್ನು ಒದಗಿಸುವುದಕ್ಕಾಗಿ ಪ್ರಕರಣ 44ರಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗಾಗಿ ಕರನಿರ್ಧರಣಾ ಆದೇಶವನ್ನು ಹೊರಡಿಸಬಹುದು:

ಪರಂತು, ಆ ವ್ಯಕ್ತಿಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಅಂಥ ಕರನಿರ್ಧರಣಾ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**64. ಕೆಲವೊಂದು ವಿಶೇಷ ಪ್ರಕರಣಗಳಲ್ಲಿ ಕ್ಷಿಪ್ರ ಕರನಿರ್ಧರಣೆ.–** (1) ತೆರಿಗೆದಾಯಕ ವ್ಯಕ್ತಿಯ ತೆರಿಗೆ ಬಾಧ್ಯತೆಯನ್ನು ತೋರಿಸುವ ಯಾವುದೇ ಪುರಾವೆಯು ಯುಕ್ತ ಅಧಿಕಾರಿಯ ಗಮನಕ್ಕೆ ಬಂದರೆ, ರಾಜಸ್ವದ ಹಿತದೃಷ್ಟಿಯ ರಕ್ಷಣೆಗಾಗಿ ಅಪರ ಆಯುಕ್ತರ ಅಥವಾ ಜಂಟಿ ಆಯುಕ್ತರ ಅನುಮತಿಯನ್ನು ಮುಂಚಿತವಾಗಿಯೇ ಪಡೆದು ಅಂಥ ವ್ಯಕ್ತಿಯ ತೆರಿಗೆ ಬಾಧ್ಯತೆಯನ್ನು ನಿರ್ಧರಿಸಲು ಕ್ರಮ ಜರುಗಿಸಬಹುದು ಮತ್ತು ಹಾಗೆ ಮಾಡಲು ಏನಾದರೂ ವಿಳಂಬ ಮಾಡಿದರೆ ರಾಜಸ್ವದ ಹಿತಾಸಕ್ತಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಬಹುದು ಎನ್ನುವುದನ್ನು ನಂಬಲು ತನಗೆ ಸಾಕಷ್ಟು ಆಧಾರಗಳಿದ್ದರೆ, ಕರನಿರ್ಧರಣಾ ಆದೇಶವನ್ನು ಹೊರಡಿಸಬಹುದು:

ಪರಂತು, ತೆರಿಗೆ ಬಾಧ್ಯತೆಯು ಯಾವ ತೆರಿಗೆದಾಯಕ ವ್ಯಕ್ತಿಗೆ ಸಂಬಂಧಪಟ್ಟಿರುವುದೋ ಆ ತೆರಿಗೆದಾಯಕ ವ್ಯಕ್ತಿಯು ಯಾರೆಂದು ಖಚಿತಪಡಿಸಿಕೊಳ್ಳಲು ಆಗದಿದ್ದರೆ ಮತ್ತು ಅಂಥ ಬಾಧ್ಯತೆಯು ಸರಕುಗಳ ಪೂರೈಕೆಗೆ ಸಂಬಂಧಪಟ್ಟಿದ್ದರೆ, ಅಂಥ ಸರಕುಗಳ ಮೇಲೆ ಉಸ್ತುವಾರಿಯನ್ನು ಹೊಂದಿರುವ ವ್ಯಕ್ತಿಯು, ಕರನಿರ್ಧರಣೆಗೆ ಗುರಿಯಾಗಬೇಕಾದ ಮತ್ತು ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ತೆರಿಗೆಯನ್ನು ಮತ್ತು ಇತರೆ ಮೊತ್ತವನ್ನು ಸಂದಾಯ ಮಾಡುವುದಕ್ಕೆ ಬದ್ಧನಾಗಿರುವ ತೆರಿಗೆದಾಯಕ ವ್ಯಕ್ತಿ ಎಂದು ಪರಿಭಾವಿಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಹೊರಡಿಸಿದ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ತೆರಿಗೆದಾಯಕ ವ್ಯಕ್ತಿಯು ಅರ್ಜಿಯನ್ನು ಸಲ್ಲಿಸಿದಾಗ ಅಥವಾ ಅಪರ ಆಯುಕ್ತರು ಅಥವಾ ಜಂಟಿ ಆಯುಕ್ತರು ಅಂಥ ಆದೇಶವು ತಪ್ಪಾದುದು ಎಂದು ಪರಿಗಣಿಸಿದಲ್ಲಿ, ತಾನಾಗಿಯೇ ಸ್ವಪ್ರೇರಣೆಯಿಂದ ಅಂಥ ಆದೇಶವನ್ನು ಹಿಂತೆಗೆದುಕೊಳ್ಳಬಹುದು ಮತ್ತು ಪ್ರಕರಣ 73ರಲ್ಲಿ ಅಥವಾ ಪ್ರಕರಣ 74ರಲ್ಲಿ ಹೇಳಿರುವ ಕಾರ್ಯವಿಧಾನವನ್ನು ಅನುಸರಿಸಬಹುದು.

## ಅಧ್ಯಾಯ XIII

## ಲೆಕ್ಕಪರಿಶೋಧನೆ

**65. ತೆರಿಗೆ ಪ್ರಾಧಿಕಾರಿಗಳಿಂದ ಲೆಕ್ಕಪರಿಶೋಧನೆ.–** (1) ಆಯುಕ್ತರು ಅಥವಾ ಸಾಮಾನ್ಯ ಅಥವಾ ನಿರ್ದಿಷ್ಟ ಆದೇಶದ ಮೂಲಕ ಆಯುಕ್ತರು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು, ಯಾರೇ ನೋಂದಾಯಿತ ವ್ಯಕ್ತಿಯ ಲೆಕ್ಕಪರಿಶೋಧನೆಯನ್ನು ನಿಯಮಿಸಬಹುದಾದಂಥ ಅವಧಿಗಾಗಿ, ಅಂಥ ಅಂತರದಲ್ಲಿ ಮತ್ತು ಅಂಥ ವಿಧಾನದಲ್ಲಿ ಕೈಗೊಳ್ಳಬಹುದು.

(2) ಉಪಪ್ರಕರಣ (1)ರಲ್ಲಿ ಹೇಳಿರುವ ಅಧಿಕಾರಿಗಳು, ನೋಂದಾಯಿತ ವ್ಯಕ್ತಿಯ ವ್ಯವಹಾರ ಸ್ಥಳದಲ್ಲಿ ಅಥವಾ ಅವರ ಕಾರ್ಯಾಲಯದಲ್ಲಿ ಲೆಕ್ಕಪರಿಶೋಧನೆಯನ್ನು ನಡೆಸಬಹುದು.

(3) ಲೆಕ್ಕಪರಿಶೋಧನೆಯನ್ನು ನಡೆಸುವುದಕ್ಕಿಂತ ಮುಂಚೆ ಹದಿನೈದು ಕೆಲಸದ ದಿನಗಳಿಗೆ ಕಡಿಮೆಯಿರದಂತೆ ನೋಟೀಸನ್ನು ನೀಡುವ ಮೂಲಕ, ನಿಯಮಿಸಬಹುದಾದಂಥ ರೀತಿಯಲ್ಲಿ ನೋಂದಾಯಿತ ವ್ಯಕ್ತಿಗೆ ತಿಳಿಸತಕ್ಕದ್ದು.

(4) ಉಪಪ್ರಕರಣ (1)ರ ಅಡಿಯಲ್ಲಿನ ಲೆಕ್ಕಪರಿಶೋಧನೆಯನ್ನು, ಲೆಕ್ಕಪರಿಶೋಧನೆ ಪ್ರಾರಂಭಗೊಂಡ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು:

ಪರಂತು, ಅಂಥ ನೋಂದಾಯಿತ ವ್ಯಕ್ತಿಗೆ ಸಂಬಂಧಿಸಿದ ಲೆಕ್ಕಪರಿಶೋಧನೆಯು, ಮೂರು ತಿಂಗಳ ಅವಧಿಯೊಳಗೆ ಪೂರ್ಣಗೊಳ್ಳುವುದಿಲ್ಲ ಎಂದು ಆಯುಕ್ತರಿಗೆ ಮನವರಿಕೆಯಾದಲ್ಲಿ, ಅವರು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಆ ಅವಧಿಯನ್ನು ಆರು ತಿಂಗಳುಗಳನ್ನು ಮೀರದ ಹೆಚ್ಚಿನ ಅವಧಿಗೆ ವಿಸ್ತರಿಸಬಹುದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಲೆಕ್ಕಪರಿಶೋಧನೆಯ ಪ್ರಾರಂಭ" ಪದಾವಳಿಯನ್ನು ತೆರಿಗೆ ಪ್ರಾಧಿಕಾರಿಗಳು ತರಿಸಿಕೊಂಡ ದಾಖಲೆಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ತೆರಿಗೆದಾಯಕ ವ್ಯಕ್ತಿಯು ಹಾಜರುಪಡಿಸಿದ ಅಥವಾ ವ್ಯವಹಾರದ ಸ್ಥಳದಲ್ಲಿ ಲೆಕ್ಕಪರಿಶೋಧನೆಯನ್ನು ವಾಸ್ತವಿಕವಾಗಿ ಏರ್ಪಡಿಸಿದ ದಿನಾಂಕ ಇವುಗಳಲ್ಲಿ ಯಾವುದು ತರುವಾಯದ್ದೋ ಅದು ಎಂದು ಅರ್ಥೈಸತಕ್ಕದ್ದು.

(5) ಲೆಕ್ಕಪರಿಶೋಧನೆ ನಡೆಯುವ ಸಮಯದಲ್ಲಿ, ಪ್ರಾಧಿಕೃತಗೊಂಡ ಅಧಿಕಾರಿಯು,–

(i) ತನಗೆ ಅಗತ್ಯವೆನಿಸುವ ಲೆಕ್ಕಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಪರಿಶೀಲಿಸುವುದಕ್ಕಾಗಿ ಅವಶ್ಯಕವಾದ ಸೌಲಭ್ಯಗಳನ್ನು ಕಲ್ಪಿಸುವಂತೆ;

(ii) ತನಗೆ ಅಗತ್ಯವೆನಿಸುವಂಥ ಮಾಹಿತಿಯನ್ನು ಒದಗಿಸುವಂತೆ ಮತ್ತು ಲೆಕ್ಕಪರಿಶೋಧನೆಯನ್ನು ಸಕಾಲದಲ್ಲಿ ಪೂರ್ಣಗೊಳಿಸಲು ನೆರವಾಗುವಂತೆ

– ನೋಂದಾಯಿತ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(6) ಲೆಕ್ಕಪರಿಶೋಧನೆಯು ಮುಗಿದ ಮೇಲೆ, ಯುಕ್ತ ಅಧಿಕಾರಿಯು, ಮೂವತ್ತು ದಿನಗಳ ಒಳಗಾಗಿ, ಯಾರ ದಾಖಲೆಗಳನ್ನು ಪರಿಶೋಧಿಸಲಾಗಿದೆಯೋ ಆ ನೋಂದಾಯಿತ ವ್ಯಕ್ತಿಗೆ ತೀರ್ಮಾನಗಳನ್ನು, ಆತನ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಹಾಗೂ ಅಂಥ ತೀರ್ಮಾನ ಕೈಗೊಂಡ ಬಗೆಗಿನ ಕಾರಣಗಳ ಬಗ್ಗೆ ತಿಳಿಸತಕ್ಕದ್ದು.

(7) ಉಪಪ್ರಕರಣ (1)ರಡಿಯಲ್ಲಿ ಲೆಕ್ಕಪರಿಶೋಧನೆ ನಡೆಸಿದಾಗ, ತೆರಿಗೆ ಸಂದಾಯ ಮಾಡದಿರುವುದು ಅಥವಾ ಕಡಿಮೆ ತೆರಿಗೆ ಸಂದಾಯ ಮಾಡಿರುವುದು ಅಥವಾ ತಪ್ಪಿನಿಂದ ಮರುಪಾವತಿ ಮಾಡಿರುವುದು ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತಪ್ಪಾಗಿ ಉಪಯೋಗಿಸಿಕೊಂಡಿರುವುದು ಅಥವಾ ಬಳಸಿಕೊಂಡಿರುವುದು ಪತ್ತೆಯಾದರೆ, ಯುಕ್ತ ಅಧಿಕಾರಿಯು ಪ್ರಕರಣ 73ರ ಅಥವಾ ಪ್ರಕರಣ 74ರ ಅಡಿಯಲ್ಲಿ ಕ್ರಮ ಕೈಗೊಳ್ಳಬಹುದು.

**66. ವಿಶೇಷ ಲೆಕ್ಕಪರಿಶೋಧನೆ.–** (1) ಸಹಾಯಕ ಆಯುಕ್ತರ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಯಾರೇ ಅಧಿಕಾರಿಯು, ತನ್ನ ಮುಂದಿರುವ ಸೂಕ್ಷ್ಮಪರಿಶೀಲನೆ, ವಿಚಾರಣೆ, ತನಿಖೆ ಅಥವಾ ಯಾವುದೇ ಇತರ ನಡಾವಳಿಗಳ ಯಾವುದೇ ಹಂತದಲ್ಲಿ, ವಿಷಯದ ಸ್ವರೂಪ ಮತ್ತು ಸಂಕೀರ್ಣತೆಯನ್ನು ಹಾಗೂ ರಾಜಸ್ವದ ಹಿತದೃಷ್ಟಿಯನ್ನು ಗಮನದಲ್ಲಿ ಇಟ್ಟುಕೊಂಡು ಅವಲೋಕಿಸಿದಾಗ, ಮೌಲ್ಯವನ್ನು ಸರಿಯಾಗಿ ಘೋಷಿಸಿಲ್ಲ ಅಥವಾ ಬಳಸಿದ ಕ್ರೆಡಿಟ್ ಸಹಜ ಮಿತಿಗಳ ಒಳಗಿರಲಿಲ್ಲ ಎಂದು ಅಭಿಪ್ರಾಯಪಟ್ಟರೆ, ಅವರು, ಆಯುಕ್ತರಿಂದ ಮುಂಚಿತವಾಗಿಯೇ ಅನುಮೋದನೆ ಪಡೆದು, ಅಂಥ ನೋಂದಾಯಿತ ವ್ಯಕ್ತಿಗೆ, ಲೆಕ್ಕಪುಸ್ತಕಗಳನ್ನು ಒಳಗೊಂಡಂತೆ ಆತನ ದಾಖಲೆಗಳನ್ನು ಆಯುಕ್ತರು ನಾಮನಿರ್ದೇಶಿಸಬಹುದಾದಂಥ ಚಾರ್ಟರ್ಡ್ ಅಕೌಂಟೆಂಟ್‌ನಿಂದ ಅಥವಾ ಕಾಸ್ಟ್ ಅಕೌಂಟೆಂಟ್‌ನಿಂದ ಪರಿಶೀಲಿಸಿಕೊಳ್ಳುವಂತೆ ಮತ್ತು ಲೆಕ್ಕಪರಿಶೋಧನೆ ಮಾಡಿಸಿಕೊಳ್ಳುವಂತೆ ಲಿಖಿತದಲ್ಲಿ ನಿರ್ದೇಶನ ನೀಡಬಹುದು.

(2) ಹಾಗೆ ನಾಮನಿರ್ದೇಶಿತಗೊಂಡ ಚಾರ್ಟರ್ಡ್ ಅಕೌಂಟೆಂಟ್‌ರು ಅಥವಾ ಕಾಸ್ಟ್ ಅಕೌಂಟೆಂಟ್‌ರು, ತೊಂಬತ್ತು ದಿನಗಳ ಅವಧಿಯ ಒಳಗಾಗಿ, ಯುಕ್ತವಾಗಿ ತಾನು ಸಹಿಮಾಡಿದ ಮತ್ತು ಪ್ರಮಾಣೀಕರಿಸಿದಂಥ ಲೆಕ್ಕಪರಿಶೋಧನೆಯ ವರದಿಯನ್ನು, ನಿರ್ದಿಷ್ಟಪಡಿಸಬಹುದಾದಂಥ ಇತರ ವಿವರಗಳನ್ನು ಅದರಲ್ಲಿ ನಮೂದಿಸಿ ಸದರಿ ಸಹಾಯಕ ಆಯುಕ್ತರಿಗೆ ಸಲ್ಲಿಸತಕ್ಕದ್ದು:

ಪರಂತು, ಸಹಾಯಕ ಆಯುಕ್ತರು, ತನಗೆ ಈ ಸಂಬಂಧದಲ್ಲಿ ನೋಂದಾಯಿತ ವ್ಯಕ್ತಿಯು ಅಥವಾ ಚಾರ್ಟರ್ಡ್ ಅಕೌಂಟೆಂಟ್‌ರು ಅಥವಾ ಕಾಸ್ಟ್ ಅಕೌಂಟೆಂಟ್‌ರು ಅರ್ಜಿ ಸಲ್ಲಿಸಿದಾಗ ಅಥವಾ ಯಾವುದೇ ಪ್ರಮುಖ ಮತ್ತು ಸಾಕಷ್ಟು ಕಾರಣಗಳಿಗಾಗಿ, ಸದರಿ ಅವಧಿಯನ್ನು ಮುಂದಿನ ತೊಂಭತ್ತು ದಿನಗಳವರೆಗೆ ವಿಸ್ತರಿಸಬಹುದು.

(3) ನೋಂದಾಯಿತ ವ್ಯಕ್ತಿಯ ಲೆಕ್ಕಪುಸ್ತಕಗಳನ್ನು, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಇತರ ಉಪಬಂಧಗಳ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡಿದ್ದರೂ ಸಹ, ಉಪಪ್ರಕರಣ (1)ರ ಉಪಬಂಧಗಳು ಜಾರಿಗೆ ತರುವಂಥವುಗಳಾಗಿರತಕ್ಕದ್ದು.

(4) ಉಪಪ್ರಕರಣ (1)ರ ಪ್ರಕಾರ ಆಗಿರುವ ವಿಶೇಷ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಸಂಗ್ರಹಿಸಿದ ಯಾವ ಮಾಹಿತಿಯನ್ನು, ಈ ಅಧಿನಿಯಮದ ಹಾಗೂ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಆತನ ವಿರುದ್ಧದ ಯಾವುದೇ ನಡಾವಳಿಗಳಲ್ಲಿ ಬಳಸಲು ಉದ್ದೇಶಿಸಲಾಗಿದೆಯೋ ಆ ಮಾಹಿತಿಗೆ ಸಂಬಂಧಿಸಿದಂತೆ ನೋಂದಾಯಿತ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕದ್ದು.

(5) ಅಂಥ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್‌ನ ಸಂಭಾವನೆಯೂ ಒಳಗೊಂಡಂತೆ, ಉಪಪ್ರಕರಣ (1)ರ ಅಡಿಯಲ್ಲಿನ ದಾಖಲೆಗಳ ಪರಿಶೀಲನೆಗೆ ಮತ್ತು ಲೆಕ್ಕಪರಿಶೋಧನೆಗೆ ಆದ ವೆಚ್ಚಗಳನ್ನು ಆಯುಕ್ತರು ನಿರ್ಧರಣೆ ಮಾಡತಕ್ಕದ್ದು ಮತ್ತು ಸಂದಾಯ ಮಾಡತಕ್ಕದ್ದು ಹಾಗೂ ಅಂಥ ನಿರ್ಧರಣೆಯು ಅಂತಿಮವಾದುದಾಗಿರತಕ್ಕದ್ದು.

(6) ಉಪಪ್ರಕರಣ (1)ರ ಅಡಿಯಲ್ಲಿ ವಿಶೇಷ ಲೆಕ್ಕಪರಿಶೋಧನೆ ನಡೆಸಿದಾಗ ತೆರಿಗೆ ಸಂದಾಯ ಮಾಡಿಲ್ಲದಿರುವುದು ಅಥವಾ ಕಡಿಮೆ ತೆರಿಗೆ ಸಂದಾಯ ಮಾಡಿರುವುದು ಅಥವಾ ತಪ್ಪಿನಿಂದ ಮರುಪಾವತಿ ಮಾಡಿರುವುದು ಅಥವಾ ಇನ್‌ಪುಟ್ ಟ್ಯಾಕ್ಸನ್ನು ತಪ್ಪಾಗಿ ಉಪಯೋಗಿಸಿಕೊಂಡ ಅಥವಾ ಬಳಸಿಕೊಂಡಿರುವುದು ಪತ್ತೆಯಾದರೆ, ಯುಕ್ತ ಅಧಿಕಾರಿಯು ಪ್ರಕರಣ 73ರ ಅಥವಾ ಪ್ರಕರಣ 74ರ ಅಡಿಯಲ್ಲಿ ಕ್ರಮಕೈಗೊಳ್ಳಬಹುದು.

## ಅಧ್ಯಾಯ XIV

## ತಪಾಸಣೆ, ಶೋಧನೆ, ವಶಕ್ಕೆ ತೆಗೆದುಕೊಳ್ಳುವಿಕೆ ಮತ್ತು ಬಂಧನ

**67. ತಪಾಸಣೆಗೆ, ಶೋಧನೆಗೆ ಮತ್ತು ವಶಕ್ಕೆ ತೆಗೆದುಕೊಳ್ಳಲು ಅಧಿಕಾರ.–** (1) ಜಂಟಿ ಆಯುಕ್ತರ ದರ್ಜೆಗಿಂತಲೂ ಕಡಿಮೆ ದರ್ಜೆಯವರಲ್ಲದ ಯುಕ್ತ ಅಧಿಕಾರಿಗೆ,–

(ಎ) ತೆರಿಗೆದಾಯಕ ವ್ಯಕ್ತಿಯು, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದ ಯಾವುದೇ ವಹಿವಾಟನ್ನು ಗೊತ್ತಾಗದಂತೆ ಮರೆಮಾಚಿದ್ದಾನೆಂದು ಅಥವಾ ತನ್ನ ಬಳಿ ಇರುವ ಸರಕುಗಳ ದಾಸ್ತಾನನ್ನು

ಬಚ್ಚಿಟ್ಟಿದ್ದಾನೆಂದು ಅಥವಾ ಈ ಅಧಿನಿಯಮದ ಅಡಿಯಲ್ಲಿ ತನಗೆ ಹಕ್ಕಿರುವುದಕ್ಕಿಂತಲೂ ಅಧಿಕವಾಗಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ಕ್ಲೇಮು ಮಾಡಿದ್ದಾನೆಂದು ಅಥವಾ ಈ ಅಧಿನಿಯಮದ ಅಡಿಯಲ್ಲಿನ ತೆರಿಗೆಯನ್ನು ತಪ್ಪಿಸುವುದಕ್ಕಾಗಿ ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಲ್ಲಂಘನೆಯಲ್ಲಿ ತೊಡಗಿದ್ದಾನೆಂದು; ಅಥವಾ

(ಬಿ) ಸರಕುಗಳ ಸಾಗಾಣಿಕೆಯ ವ್ಯವಹಾರದಲ್ಲಿ ತೊಡಗಿರುವ ಯಾರೇ ವ್ಯಕ್ತಿಯು ಅಥವಾ ಉಗ್ರಾಣದ ಅಥವಾ ಗೋದಾಮಿನ ಅಥವಾ ಯಾವುದೇ ಇತರ ಸ್ಥಳದ ಮಾಲೀಕನು ಅಥವಾ ನಿರ್ವಾಹಕನು, ತೆರಿಗೆ ಸಂದಾಯ ಮಾಡದೆ ತಪ್ಪಿಸಿಕೊಂಡಿರುವ ಸರಕುಗಳನ್ನು ಇಟ್ಟುಕೊಂಡಿದ್ದಾನೆಂದು ಅಥವಾ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯನ್ನು ಸಂದಾಯ ಮಾಡದೆ ನುಣುಚಿಕೊಳ್ಳುವುದಕ್ಕೆ ಆಸ್ಪದ ಕೊಡುವಂಥ ರೀತಿಯಲ್ಲಿ ತನ್ನ ಲೆಕ್ಕಪುಸ್ತಕಗಳನ್ನು ಅಥವಾ ಸರಕುಗಳನ್ನು ಇಟ್ಟಿದ್ದಾನೆಂದು

– ನಂಬಲು ಕಾರಣಗಳು ಇದ್ದರೆ, ಯುಕ್ತ ಅಧಿಕಾರಿಯು, ತೆರಿಗೆದಾಯಕ ವ್ಯಕ್ತಿಯ ಅಥವಾ ಸರಕುಗಳ ಸಾಗಾಣಿಕೆಯ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿಯ ಅಥವಾ ಉಗ್ರಾಣದ ಅಥವಾ ಗೋದಾಮಿನ ಅಥವಾ ಯಾವುದೇ ಇತರ ಸ್ಥಳದ ಮಾಲೀಕನ ಅಥವಾ ನಿರ್ವಾಹಕನ ಯಾವುದೇ ವ್ಯವಹಾರ ಸ್ಥಳಗಳನ್ನು ತಪಾಸಣೆ ಮಾಡಲು ಯಾರೇ ಇತರ ಕೇಂದ್ರ ತೆರಿಗೆ ಅಧಿಕಾರಿಗೆ ಲಿಖಿತದಲ್ಲಿ ಅಧಿಕೃತಗೊಳಿಸಬಹುದು.

(2) ಜಂಟಿ ಆಯುಕ್ತನ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಯುಕ್ತ ಅಧಿಕಾರಿಗೆ, ಉಪಪ್ರಕರಣ (1)ರ ಅಡಿಯಲ್ಲಿ ನಡೆಸಿದ ತಪಾಸಣೆಗೆ ಅನುಸಾರವಾಗಿಯಾಗಲಿ ಅಥವಾ ಅನ್ಯಥಾ, ಯಾವ ಸರಕುಗಳು ಮುಟ್ಟುಗೋಲಿಗೆ ಗುರಿಯಾಗುತ್ತವೆಂದು ನಂಬಲು ಕಾರಣಗಳಿವೆಯೋ ಅಥವಾ ಯಾವ ದಸ್ತಾವೇಜುಗಳು ಅಥವಾ ಪುಸ್ತಕಗಳು ಅಥವಾ ವಸ್ತುಗಳು ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ವ್ಯವಹರಣೆಗಳಿಗೆ ಉಪಯುಕ್ತವಾಗುವ ಅಥವಾ ಸುಸಂಗತವಾಗುವ ಆ ಯಾವುದೇ ದಸ್ತಾವೇಜುಗಳನ್ನು ಅಥವಾ ಪುಸ್ತಕಗಳನ್ನು ಅಥವಾ ವಸ್ತುಗಳನ್ನು, ಯಾವುದೇ ಸ್ಥಳದಲ್ಲಿ ರಹಸ್ಯವಾಗಿಟ್ಟುಕೊಳ್ಳಲಾಗಿದೆಯೆಂದು ಆ ಅಧಿಕಾರಿಯು ಅಭಿಪ್ರಾಯಪಡುವರೋ, ಅವುಗಳನ್ನು ಶೋಧಿಸಲು ಅಥವಾ ವಶಕ್ಕೆ ತೆಗೆದುಕೊಳ್ಳಲು ಇತರ ಯಾವುದೇ ಕೇಂದ್ರ ತೆರಿಗೆ ಅಧಿಕಾರಿಯನ್ನು ಲಿಖಿತದಲ್ಲಿ ಅಧಿಕೃತಗೊಳಿಸಬಹುದು ಅಥವಾ ಸ್ವತಃ ತಾನೇ ಅಂಥ ಸರಕುಗಳನ್ನು, ದಸ್ತಾವೇಜುಗಳನ್ನು, ಪುಸ್ತಕಗಳನ್ನು ಅಥವಾ ವಸ್ತುಗಳನ್ನು ಶೋಧಿಸಬಹುದು ಅಥವಾ ವಶಕ್ಕೆ ತೆಗೆದುಕೊಳ್ಳಬಹುದು:

ಪರಂತು, ಯಾವುದೇ ಅಂಥ ಸರಕುಗಳನ್ನು ವಶಕ್ಕೆ ತೆಗೆದುಕೊಳ್ಳಲು ಕಾರ್ಯಸಾಧ್ಯವಾಗದಿದ್ದಲ್ಲಿ, ಯುಕ್ತ ಅಧಿಕಾರಿಯು ಸರಕುಗಳ ಮಾಲೀಕನಿಗೆ ಅಥವಾ ಸುಪರ್ದುದಾರನಿಗೆ, ತಾನು ಮುಂಚಿತವಾಗಿಯೇ ತನ್ನ ಅನುಮತಿ ಪಡೆಯದ ಹೊರತು ಅವನು ಆ ಸರಕುಗಳನ್ನು ತೆಗೆಯತಕ್ಕದ್ದಲ್ಲ, ಬಿಟ್ಟುಕೊಡತಕ್ಕದ್ದಲ್ಲ ಅಥವಾ ಅನ್ಯಥಾ ವ್ಯವಹಾರ ಮಾಡತಕ್ಕದ್ದಲ್ಲ ಎನ್ನುವ ಆದೇಶವನ್ನು ಜಾರಿಗೊಳಿಸಬಹುದು:

ಮತ್ತು ಪರಂತು, ಹಾಗೆ ವಶಕ್ಕೆ ತೆಗೆದುಕೊಂಡಿದ್ದ ಸರಕುಗಳನ್ನು, ದಸ್ತಾವೇಜುಗಳನ್ನು, ಪುಸ್ತಕಗಳನ್ನು ಅಥವಾ ವಸ್ತುಗಳನ್ನು, ಪರಿಶೀಲನೆಗಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಆರೋಪ ವಿಚಾರಣೆಗೆ ಅಥವಾ ವ್ಯವಹರಣೆಗಳಿಗೆ ಅವುಗಳು ಎಲ್ಲಿಯವರೆಗೆ ಅಗತ್ಯವೋ ಆವರೆಗೆ ಮಾತ್ರ ಅಂಥ ಅಧಿಕಾರಿಯು ಉಳಿಸಿಕೊಳ್ಳತಕ್ಕದ್ದು.

(3) ಉಪಪ್ರಕರಣ (2)ರಲ್ಲಿ ಹೇಳಿರುವ ದಸ್ತಾವೇಜುಗಳನ್ನು, ಪುಸ್ತಕಗಳನ್ನು ಅಥವಾ ವಸ್ತುಗಳನ್ನು ಅಥವಾ ತೆರಿಗೆದಾಯಕ ವ್ಯಕ್ತಿಯು ಅಥವಾ ಯಾರೇ ಇತರೇ ವ್ಯಕ್ತಿಯು ಹಾಜರುಪಡಿಸಿದ ಯಾವುದೇ ಇತರ ದಸ್ತಾವೇಜುಗಳನ್ನು, ಪುಸ್ತಕಗಳನ್ನು ಅಥವಾ ವಸ್ತುಗಳನ್ನು, ಈ ಅಧಿನಿಯಮದ ಅಥವಾ ಇದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ನೋಟೀಸನ್ನು ನೀಡುವುದಕ್ಕೆ ಅವಲಂಬಿಸಿರದಿದ್ದಾಗ, ಅಂಥ ವ್ಯಕ್ತಿಗೆ ಸದರಿ ನೋಟೀಸನ್ನು ನೀಡಿದ ಮೂವತ್ತು ದಿನಗಳನ್ನು ಮೀರದ ಅವಧಿಯೊಳಗಾಗಿ ಹಿಂದಿರುಗಿಸತಕ್ಕದ್ದು.

(4) ಉಪಪ್ರಕರಣ (2)ರ ಅಡಿಯಲ್ಲಿ ಅಧಿಕೃತಗೊಂಡ ಅಧಿಕಾರಿಯು, ಯಾವುದೇ ಆವರಣಗಳ ಬಾಗಿಲನ್ನು ಮೊಹರು ಮಾಡಲು ಅಥವಾ ಒಡೆದು ತೆಗೆಯಲು ಅಥವಾ ಯಾವ ಅಲ್ಮೆರಾದಲ್ಲಿ, ವಿದ್ಯುನ್ಮಾನ ಉಪಕರಣಗಳಲ್ಲಿ, ಪೆಟ್ಟಿಗೆಯಲ್ಲಿ, ಕೋಶದಲ್ಲಿ, ಆ ವ್ಯಕ್ತಿಯ ಯಾವುದೇ ಸರಕುಗಳನ್ನು, ಲೆಕ್ಕಪತ್ರಗಳನ್ನು, ರಿಜಿಸ್ಟರ್‌ಗಳನ್ನು ಅಥವಾ ದಸ್ತಾವೇಜುಗಳನ್ನು ಬಚ್ಚಿಡಲಾಗಿದೆ ಎಂದು ಸಂಶಯಪಡಲಾಗಿದೆಯೋ, ಅಂಥ ಆವರಣಗಳಿಗೆ, ಅಲ್ಮೆರಾವನ್ನು, ವಿದ್ಯುನ್ಮಾನ ಉಪಕರಣಗಳನ್ನು, ಪೆಟ್ಟಿಗೆಯನ್ನು ಅಥವಾ ಕೋಶವನ್ನು ಪರಿಶೀಲಿಸಲು ನಿರಾಕರಿಸಲಾಗಿದೆಯೋ ಅವುಗಳನ್ನು ಪ್ರವೇಶಿಸಲು ಒಡೆದು ತೆಗೆಯಲು ಅಧಿಕಾರ ಇರುತ್ತದೆ.

(5) ಯಾವ ವ್ಯಕ್ತಿಯ ಸುಪರ್ದಿನಲ್ಲಿದ್ದ ಯಾವ ದಸ್ತಾವೇಜುಗಳನ್ನು ಉಪಪ್ರಕರಣ (2)ರ ಅಡಿಯಲ್ಲಿ ವಶಕ್ಕೆ ತೆಗೆದುಕೊಳ್ಳಲಾಗಿದೆಯೋ ಆ ವ್ಯಕ್ತಿಯು, ಅಧಿಕೃತ ಅಧಿಕಾರಿಯ ಸಮಕ್ಷಮದಲ್ಲಿ ಆ ಅಧಿಕೃತ ಅಧಿಕಾರಿಯು ಈ ಸಂಬಂಧದಲ್ಲಿ ಸೂಚಿಸಬಹುದಾದಂಥ ಸ್ಥಳ ಮತ್ತು ಸಮಯದಲ್ಲಿ, ಪ್ರತಿಗಳನ್ನು ಮಾಡಿಸಿಕೊಳ್ಳುವುದರಿಂದ ಅಥವಾ ಅವುಗಳಿಂದ ಉದ್ಧೃತ ಭಾಗಗಳನ್ನು ತೆಗೆದುಕೊಳ್ಳುವುದರಿಂದ ತನಿಖೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದ ಹೊರತು ಯುಕ್ತ ಅಧಿಕಾರಿಯು ಅವುಗಳನ್ನು ಪ್ರತಿ ಮಾಡಿಸಿಕೊಳ್ಳಲು ಅಥವಾ ಅವುಗಳಿಂದ ಉದ್ಧೃತ ಭಾಗಗಳನ್ನು ತೆಗೆಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(6) ಉಪಪ್ರಕರಣ (2)ರ ಅಡಿಯಲ್ಲಿ ಹಾಗೆ ವಶಕ್ಕೆ ತೆಗೆದುಕೊಂಡ ಸರಕುಗಳನ್ನು ಅನುಕ್ರಮವಾಗಿ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ನಿಯಮಿಸಬಹುದಾದಷ್ಟು ಪ್ರಮಾಣದಲ್ಲಿ, ಬಾಂಡ್‌ನ್ನು ಬರೆದುಕೊಟ್ಟ ಮೇಲೆ ಮತ್ತು ಭದ್ರತೆಯನ್ನು ಒದಗಿಸಿದ ಮೇಲೆ ಅಥವಾ ಅನ್ವಯವಾಗುವ ತೆರಿಗೆಯನ್ನು, ಬಡ್ಡಿಯನ್ನು ಮತ್ತು ಸಂದರ್ಭಾನುಸಾರ ಸಂದಾಯ ಮಾಡಬೇಕಾದ ದಂಡವನ್ನು ಸಂದಾಯ ಮಾಡಿದ ಮೇಲೆ ತಾತ್ಕಾಲಿಕವಾಗಿ ಬಿಡುಗಡೆ ಮಾಡತಕ್ಕದ್ದು.

(7) ಉಪಪ್ರಕರಣ (2)ರ ಅಡಿಯಲ್ಲಿ ಯಾವುದೇ ಸರಕುಗಳನ್ನು ವಶಕ್ಕೆ ತೆಗೆದುಕೊಂಡಿದ್ದರೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಸರಕುಗಳನ್ನು ವಶಕ್ಕೆ ತೆಗೆದುಕೊಂಡ ಆರು ತಿಂಗಳುಗಳ ಒಳಗಾಗಿ ಯಾವುದೇ ನೋಟೀಸನ್ನು ನೀಡಿರದಿದ್ದರೆ, ಆ ಸರಕುಗಳನ್ನು ಯಾರ ಸ್ವಾಧೀನದಿಂದ ವಶಕ್ಕೆ ತೆಗೆದುಕೊಳ್ಳಲಾಗಿದೆಯೋ ಆ ವ್ಯಕ್ತಿಗೆ ಹಿಂದಿರುಗಿಸತಕ್ಕದ್ದು:

ಪರಂತು, ಯುಕ್ತ ಅಧಿಕಾರಿಯು ಆರು ತಿಂಗಳುಗಳ ಅವಧಿಯನ್ನು, ಸಾಕಷ್ಟು ಕಾರಣವನ್ನು ತೋರಿಸಿದರೆ, ಆರು ತಿಂಗಳುಗಳನ್ನು ಮೀರದ ಮುಂದಿನ ಅವಧಿಗೆ ವಿಸ್ತರಿಸಬಹುದು.

(8) ಸರ್ಕಾರವು, ಯಾವುದೇ ಸರಕುಗಳು ಕೆಟ್ಟು ಹೋಗುವ ಅಥವಾ ಅಪಾಯಕಾರಿ ಸ್ವರೂಪವನ್ನು, ಕಾಲಾಂತರದಲ್ಲಿ ಸರಕುಗಳ ಮೌಲ್ಯ ಸವಕಳಿಯಾಗುವುದನ್ನು, ಸರಕುಗಳ ದಾಸ್ತಾನಿಗಾಗಿ ಸ್ಥಳದ ಇತಿಮಿತಿಗಳನ್ನು ಅಥವಾ ಸಂಬಂಧಪಟ್ಟ

ಯಾವುದೇ ಇತರ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು, ಉಪಪ್ರಕರಣ (2)ರ ಅಡಿಯಲ್ಲಿ ಅವುಗಳನ್ನು ವಶಕ್ಕೆ ತೆಗೆದುಕೊಂಡ ನಂತರ ಆದಷ್ಟು ಬೇಗನೆ, ನಿಯಮಿಸಬಹುದಾದಂಥ ವಿಧಾನದಲ್ಲಿ ಯುಕ್ತ ಅಧಿಕಾರಿಯು ವಿಲೇವಾರಿ ಮಾಡಬೇಕಾದ ಸರಕುಗಳನ್ನು ಅಥವಾ ಸರಕುಗಳ ವರ್ಗವನ್ನು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದು.

(9) ಉಪಪ್ರಕರಣ (8)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಸರಕುಗಳನ್ನು, ಯುಕ್ತ ಅಧಿಕಾರಿಯು ಉಪಪ್ರಕರಣ (2)ರ ಅಡಿಯಲ್ಲಿ ವಶಕ್ಕೆ ತೆಗೆದುಕೊಂಡಿದ್ದರೆ, ಅವನು ಆ ಬಗ್ಗೆ ನಿಯಮಿಸಬಹುದಾದಂಥ ವಿಧಾನದಲ್ಲಿ ಅಂಥ ಸರಕುಗಳ ತಪಶೀಲು ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(10) ಶೋಧನೆ ಮತ್ತು ವಶಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು, ಸದರಿ ಸಂಹಿತೆಯ ಪ್ರಕರಣ 165ರ ಉಪಪ್ರಕರಣ (5)ರಲ್ಲಿ "ಮ್ಯಾಜಿಸ್ಟ್ರೇಟ್" ಪದ ಎಲ್ಲೆಲ್ಲಿ ಬರುತ್ತದೆಯೋ ಅಲ್ಲೆಲ್ಲ "ಆಯುಕ್ತ" ಪದವನ್ನು ಪ್ರತಿಯೋಜಿಸಿದ್ದಿದ್ದರೆ ಯಾವ ಪರಿಣಾಮ ಉಂಟು ಮಾಡುತ್ತಿತ್ತೋ ಮಾರ್ಪಾಟು ಮಾಡುವುದಕ್ಕೆ ಒಳಪಟ್ಟು, ಈ ಪ್ರಕರಣದ ಅಡಿಯಲ್ಲಿನ ಶೋಧನೆ ಮತ್ತು ವಶಕ್ಕೆ ತೆಗೆದುಕೊಳ್ಳುವುದಕ್ಕೆ ಅನ್ವಯವಾಗತಕ್ಕದ್ದು.

(11) ಯುಕ್ತ ಅಧಿಕಾರಿಗೆ, ಯಾರೇ ವ್ಯಕ್ತಿಯು ಯಾವುದೇ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿಸಿಕೊಂಡಿದ್ದಾನೆ ಅಥವಾ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ ಎಂದು ನಂಬಲು ಕಾರಣಗಳಿದ್ದರೆ, ಅವರು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ತನ್ನ ಮುಂದೆ ಹಾಜರುಪಡಿಸಿದ ಅಂಥ ವ್ಯಕ್ತಿಯ ಲೆಕ್ಕಪತ್ರಗಳನ್ನು, ರಿಜಿಸ್ಟರುಗಳನ್ನು ಅಥವಾ ದಸ್ತಾವೇಜುಗಳನ್ನು ವಶಕ್ಕೆ ತೆಗೆದುಕೊಳ್ಳಬಹುದು ಮತ್ತು ಅದಕ್ಕಾಗಿ ಸ್ವೀಕೃತಿಯನ್ನು ನೀಡತಕ್ಕದ್ದು ಮತ್ತು ಅವುಗಳನ್ನು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿನ ಯಾವುದೇ ವ್ಯವಹರಣೆಗಳಿಗೆ ಸಂಬಂಧಪಟ್ಟಂತೆ ಅವುಗಳು ಪ್ರಾಸಿಕ್ಯೂಷನ್‌ಗೆ ಎಲ್ಲಿಯವರೆಗೆ ಅವಶ್ಯಕವಿರುವುದೋ ಆವರೆಗೆ ಉಳಿಸಿಕೊಳ್ಳತಕ್ಕದ್ದು.

(12) ಆಯುಕ್ತರು ಅಥವಾ ಅವರಿಂದ ಅಧಿಕೃತನಾದ ಅಧಿಕಾರಿಯು, ಅವರಿಂದ ಅಧಿಕೃತನಾದ ಯಾರೇ ವ್ಯಕ್ತಿಯಿಂದ, ಯಾವುದೇ ತೆರಿಗೆದಾಯಕ ವ್ಯಕ್ತಿಯ ವ್ಯವಹಾರ ಸ್ಥಳದಿಂದ, ಅಂಥ ತೆರಿಗೆದಾಯಕ ವ್ಯಕ್ತಿಯು ತೆರಿಗೆ ದರಪಟ್ಟಿಗಳನ್ನು ಅಥವಾ ಪೂರೈಕೆಯ ಬಿಲ್ಲುಗಳನ್ನು ನೀಡುವುದನ್ನು ಪರೀಕ್ಷಿಸಲು, ಯಾವುದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಖರೀದಿಯನ್ನು ಮಾಡಿಸಬಹುದು ಮತ್ತು ಅಂಥ ಅಧಿಕಾರಿಯು ಹಾಗೆ ಖರೀದಿ ಮಾಡಿದ ಸರಕುಗಳನ್ನು ಹಿಂದಿರುಗಿಸಿದ ಮೇಲೆ, ಅಂಥ ತೆರಿಗೆದಾಯಕ ವ್ಯಕ್ತಿಯು ಅಥವಾ ವ್ಯವಹಾರ ಸ್ಥಳದ ಪ್ರಭಾರದಲ್ಲಿರುವ ಯಾರೇ ವ್ಯಕ್ತಿಯು, ಸರಕುಗಳ ಖರೀದಿಗಾಗಿ ಸಂದಾಯ ಮಾಡಿದ ಮೊತ್ತವನ್ನು, ಈ ಹಿಂದೆ ನೀಡಿದ್ದ ಪೂರೈಕೆಯ ಯಾವುದೇ ತೆರಿಗೆ ದರಪಟ್ಟಿಗಳನ್ನು ಅಥವಾ ಪೂರೈಕೆಯ ಬಿಲ್ಲುಗಳನ್ನು ರದ್ದುಗೊಳಿಸಿದ ನಂತರ ಮರುಪಾವತಿ ಮಾಡತಕ್ಕದ್ದು.

**68. ಸಾಗಾಣಿಕೆಯಲ್ಲಿರುವ ಸರಕುಗಳ ಪರಿಶೀಲನೆ.–** (1) ಸರ್ಕಾರವು, ನಿರ್ದಿಷ್ಟಪಡಿಸಬಹುದಾದಂಥ ಮೊತ್ತವನ್ನು ಮೀರಿದ ಮೌಲ್ಯದ, ರವಾನೆಯಲ್ಲಿರುವ ಯಾವುವೇ ಸರಕುಗಳನ್ನು ಸಾಗಿಸುತ್ತಿರುವ ಸಾಗಾಣಿಕೆ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯನ್ನು, ನಿಯಮಿಸಬಹುದಾದಂಥ ದಸ್ತಾವೇಜುಗಳನ್ನು ಮತ್ತು ಅಂಥ ಸಾಧನಗಳನ್ನು ಅವನ ಜೊತೆಯಲ್ಲಿ ಒಯ್ಯುವಂತೆ ಅಗತ್ಯಪಡಿಸಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ಒಯ್ಯುವುದು ಅಗತ್ಯವಿರುವ ದಸ್ತಾವೇಜುಗಳಲ್ಲಿನ ವಿವರಗಳನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಸಿಂಧುಗೊಳಿಸತಕ್ಕದ್ದು.

(3) ಯುಕ್ತ ಅಧಿಕಾರಿಯು, ಉಪಪ್ರಕರಣ (1)ರಲ್ಲಿ ಹೇಳಿರುವ ಯಾವುದೇ ಸಾಗಾಣಿಕೆ ವಾಹನವನ್ನು, ಯಾವುದೇ ಸ್ಥಳದಲ್ಲಿ ತಡೆದರೆ, ಸದರಿ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದಸ್ತಾವೇಜುಗಳನ್ನು ಮತ್ತು ಸಾಧನಗಳನ್ನು ಪರಿಶೀಲನೆಗಾಗಿ ಹಾಜರುಪಡಿಸುವಂತೆ ಸದರಿ ಸಾಗಾಣಿಕೆ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯನ್ನು ಅಗತ್ಯಪಡಿಸಬಹುದು ಹಾಗೂ ಸದರಿ ವ್ಯಕ್ತಿಯು ದಸ್ತಾವೇಜುಗಳನ್ನು ಮತ್ತು ಸಾಧನಗಳನ್ನು ಹಾಜರುಪಡಿಸಲು ಬದ್ಧನಾಗಿರತಕ್ಕದ್ದು ಮತ್ತು ಸರಕುಗಳ ತಪಾಸಣೆಗೂ ಸಹ ಅವಕಾಶ ನೀಡತಕ್ಕದ್ದು.

**69. ದಸ್ತಗಿರಿ ಮಾಡಲು ಅಧಿಕಾರ.–** (1) ಪ್ರಕರಣ 132ರ ಉಪಪ್ರಕರಣ (1)ರ ಖಂಡ (ಎ)ಯಲ್ಲಿ ಅಥವಾ ಖಂಡ (ಬಿ)ಯಲ್ಲಿ ಅಥವಾ ಖಂಡ (ಸಿ)ಯಲ್ಲಿ ಅಥವಾ ಖಂಡ (ಡಿ)ಯಲ್ಲಿ ನಿರ್ದಿಷ್ಟಪಡಿಸಿರುವ ಅಪರಾಧವನ್ನು ವ್ಯಕ್ತಿ ಎಸಗಿದ್ದಾನೆಂದು, ಅದು, ಸದರಿ ಪ್ರಕರಣದ ಉಪಪ್ರಕರಣ (1)ರ ಖಂಡ (i)ಯಲ್ಲಿ ಅಥವಾ (ii)ಯಲ್ಲಿ ಅಥವಾ ಉಪಪ್ರಕರಣ (2)ರ ಅಡಿಯಲ್ಲಿ ಶಿಕ್ಷಾರ್ಹವಾದುದು ಎಂದು ಆಯುಕ್ತರು ನಂಬಲು ಕಾರಣಗಳಿದ್ದರೆ, ಅವರು, ಆದೇಶದ ಮೂಲಕ, ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಕೇಂದ್ರ ತೆರಿಗೆಯ ಯಾರೇ ಅಧಿಕಾರಿಯನ್ನು ಅಧಿಕೃತಗೊಳಿಸಬಹುದು.

(2) ಪ್ರಕರಣ 132ರ ಉಪಪ್ರಕರಣ (5)ರಲ್ಲಿ ನಿರ್ದಿಷ್ಟಪಡಿಸಿರುವ ಅಪರಾಧಕ್ಕಾಗಿ ವ್ಯಕ್ತಿಯನ್ನು ಉಪಪ್ರಕರಣ (1)ರ ಅಡಿಯಲ್ಲಿ ದಸ್ತಗಿರಿ ಮಾಡಿದ್ದರೆ, ಆ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಅಧಿಕೃತನಾದ ಅಧಿಕಾರಿಯು ಅಂಥ ವ್ಯಕ್ತಿಗೆ ದಸ್ತಗಿರಿಗೆ ಆಧಾರಗಳನ್ನು ತಿಳಿಸತಕ್ಕದ್ದು ಮತ್ತು ಇಪ್ಪತ್ನಾಲ್ಕು ಗಂಟೆಯ ಒಳಗಾಗಿ ಅವನನ್ನು ಮ್ಯಾಜಿಸ್ಟ್ರೇಟ್‌ರ ಮುಂದೆ ಹಾಜರುಪಡಿಸತಕ್ಕದ್ದು.

(3) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳಿಗೆ ಒಳಪಟ್ಟು,–

(ಎ) ಪ್ರಕರಣ 132ರ ಉಪಪ್ರಕರಣ (4)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅಪರಾಧಕ್ಕಾಗಿ ವ್ಯಕ್ತಿಯನ್ನು ಉಪಪ್ರಕರಣ (1)ರ ಅಡಿಯಲ್ಲಿ ದಸ್ತಗಿರಿ ಮಾಡಿದ್ದರೆ, ಅವನು ಜಾಮೀನು ಒದಗಿಸಿ, ಅವನನ್ನು ಜಾಮೀನಿನ ಮೇಲೆ ಬಿಡತಕ್ಕದ್ದು ಅಥವಾ ಜಾಮೀನನ್ನು ಒದಗಿಸಲು ತಪ್ಪಿದರೆ, ಮ್ಯಾಜಿಸ್ಟ್ರೇಟ್‌ರ ಕಸ್ಟಡಿಗೆ ಕಳುಹಿಸತಕ್ಕದ್ದು.

(ಬಿ) ಸಂಜ್ಞಾನಕ್ಕೆ ತೆಗೆದುಕೊಳ್ಳದ ಅಥವಾ ಜಾಮೀನು ಒದಗಿಸಬಹುದಾದ ಅಪರಾಧದ ಸಂದರ್ಭದಲ್ಲಿ, ಉಪ–ಆಯುಕ್ತರು ಅಥವಾ ಸಹಾಯಕ ಆಯುಕ್ತರು, ದಸ್ತಗಿರಿಯಾಗಿದ್ದ ವ್ಯಕ್ತಿಯನ್ನು ಜಾಮೀನಿನ ಮೇಲೆ ಅಥವಾ ಅನ್ಯಥಾ ಬಿಡುಗಡೆಗೊಳಿಸುವ ಉದ್ದೇಶಕ್ಕಾಗಿ, ಪೋಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು ಹೊಂದಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅವೇ ಉಪಬಂಧಗಳನ್ನು ಪಾಲಿಸತಕ್ಕದ್ದು.

**70. ಪುರಾವೆಯನ್ನು ನೀಡುವುದಕ್ಕಾಗಿ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕಾಗಿ ವ್ಯಕ್ತಿಗಳನ್ನು ಸಮನ್ ಮಾಡಲು ಅಧಿಕಾರ.–** (1) ಈ ಅಧಿನಿಯಮದ ಅಡಿಯಲ್ಲಿನ ಯುಕ್ತ ಅಧಿಕಾರಿಯು, ಯಾವುದೇ ವಿಚಾರಣೆಯಲ್ಲಿ ಪುರಾವೆಯನ್ನು ನೀಡುವುದಕ್ಕಾಗಲಿ ಅಥವಾ ದಸ್ತಾವೇಜನ್ನು ಅಥವಾ ಇನ್ನೇನಾದರನ್ನೂ ಹಾಜರುಪಡಿಸುವುದಕ್ಕಾಗಲಿ ಯಾರೇ ವ್ಯಕ್ತಿಯ ಹಾಜರಾತಿ ಅವಶ್ಯಕ ಎಂದು ಅವರು ಪರಿಗಣಿಸಿದಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರ ಅಡಿಯಲ್ಲಿ

ಸಿವಿಲ್ ನ್ಯಾಯಾಲಯವು ವ್ಯಕ್ತಿಯನ್ನು ಸಮನ್ ಮಾಡುವ ರೀತಿಯಲ್ಲೇ ಆ ಯಾರೇ ವ್ಯಕ್ತಿಯನ್ನು ಸಮನ್ ಮಾಡಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಉಪಪ್ರಕರಣ (1)ರ ಅಡಿಯಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಅಂಥ ವಿಚಾರಣೆಯು, ಭಾರತ ದಂಡ ಸಂಹಿತೆ, 1860 (1860ರ 45)ರ ಪ್ರಕರಣ 193 ಮತ್ತು ಪ್ರಕರಣ 228ರ ಅರ್ಥವ್ಯಾಪ್ತಿಯಲ್ಲಿನ "ನ್ಯಾಯಿಕ ನಡಾವಳಿಗಳು" ಎಂದು ಪರಿಭಾವಿಸತಕ್ಕದ್ದು.

**71. ವ್ಯವಹಾರ ಸ್ಥಳಗಳಿಗೆ ಪ್ರವೇಶಾವಕಾಶ.–** (1) ಜಂಟಿ ಆಯುಕ್ತರ ಶ್ರೇಣಿಗಿಂತ ಕಡಿಮೆಯಲ್ಲದ ಯುಕ್ತ ಅಧಿಕಾರಿಯಿಂದ ಪ್ರಾಧಿಕೃತನಾದ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಧಿಕಾರಿಯು, ರಾಜಸ್ವದ ಹಿತಾಸಕ್ತಿಯ ಸಂರಕ್ಷಣೆಗಾಗಿ ಅಗತ್ಯವಾಗಬಹುದಾದ ಯಾವುದೇ ಲೆಕ್ಕಪರಿಶೋಧನೆ, ಪರಿಷ್ಕರಣೆ, ಪರಿಶೀಲನೆ ಮತ್ತು ಸರಿನೋಡುವಿಕೆಗಳಿಗಾಗಿ ಅವನು ಅಗತ್ಯಪಡಿಸಬಹುದಾದ ಮತ್ತು ಅಂಥ ಸ್ಥಳದಲ್ಲಿ ಲಭ್ಯವಿರಬಹುದಾದ ಲೆಕ್ಕಪುಸ್ತಕ, ದಸ್ತಾವೇಜುಗಳು, ಗಣಕಯಂತ್ರಗಳು, ಕಂಪ್ಯೂಟರ್ ಪ್ರೋಗ್ರಾಂಗಳು, ಗಣಕಯಂತ್ರದಲ್ಲಿ ಅಳವಡಿಸಿದ ಅಥವಾ ಅನ್ಯಥಾ ಅಳವಡಿಸದ ಗಣಕಯಂತ್ರದ ತಂತ್ರಾಂಶ ಮತ್ತು ಅಂಥ ಇತರ ವಸ್ತುಗಳನ್ನು ಪರಿಶೀಲಿಸುವುದಕ್ಕಾಗಿ ಒಬ್ಬ ನೋಂದಾಯಿತ ವ್ಯಕ್ತಿಯ ಯಾವುದೇ ವ್ಯವಹಾರ ಸ್ಥಳಕ್ಕೆ ಪ್ರವೇಶಾವಕಾಶವನ್ನು ಹೊಂದಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಹೇಳಿರುವ ಸ್ಥಳದ ಪ್ರಭಾರದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು, ಉಪಪ್ರಕರಣ (1)ರ ಅಡಿಯಲ್ಲಿ ಅಧಿಕೃತನಾದ ಅಧಿಕಾರಿಗೆ ಅಥವಾ ಯುಕ್ತ ಅಧಿಕಾರಿಯಿಂದ ನಿಯೋಜನೆಗೊಂಡ ಲೆಕ್ಕ ಪರಿಶೋಧನಾ ತಂಡಕ್ಕೆ ಅಥವಾ ಪ್ರಕರಣ 66ರ ಅಡಿಯಲ್ಲಿ ನಾಮನಿರ್ದೇಶನಗೊಂಡ ಕಾಸ್ಟ್ ಅಕೌಂಟೆಂಟ್‌ಗೆ ಅಥವಾ ಚಾರ್ಟರ್ಡ್ ಅಕೌಂಟೆಂಟ್‌ಗೆ, ಅವರು ಕೇಳಿದ ಕೂಡಲೇ,–

(i) ನೋಂದಾಯಿತ ವ್ಯಕ್ತಿಯು ಸಿದ್ಧಪಡಿಸಿರುವ ಅಥವಾ ಇಟ್ಟಿರುವ ಮತ್ತು ನಿಯಮಿಸಬಹುದಾದಂಥ ವಿಧಾನದಲ್ಲಿ ಯುಕ್ತ ಅಧಿಕಾರಿಗೆ ಘೋಷಿಸಿರುವಂಥ ದಾಖಲೆಗಳನ್ನು;

(ii) ಶಿಲ್ಕು ಲೆಕ್ಕ ಪರೀಕ್ಷಾ ಪಟ್ಟಿಯನ್ನು ಅಥವಾ ಅದಕ್ಕೆ ಸಮನಾದುದನ್ನು;

(iii) ಅಗತ್ಯಪಡಿಸಿದಾಗ, ಸೂಕ್ತವಾಗಿ ಪರಿಶೋಧಿಸಿದ ವಾರ್ಷಿಕ ಹಣಕಾಸಿನ ಲೆಕ್ಕಗಳ ವಿವರಣೆಪಟ್ಟಿಗಳನ್ನು;

(iv) ಕಂಪನಿಗಳ ಅಧಿನಿಯಮ, 2013 (2013ರ 18)ರ ಪ್ರಕರಣ 148ರ ಅಡಿಯಲ್ಲಿನ ಕಾಸ್ಟ್ ಲೆಕ್ಕಪರಿಶೋಧನಾ ವರದಿ ಏನಾದರೂ ಇದ್ದರೆ ಅದನ್ನು;

(v) ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ ಪ್ರಕರಣ 44ಎಬಿ ಅಡಿಯಲ್ಲಿನ ಆದಾಯ–ತೆರಿಗೆ ಪರಿಶೋಧನಾ ವರದಿ ಏನಾದರೂ ಇದ್ದರೆ ಅದನ್ನು; ಮತ್ತು

(vi) ಯಾವುದೇ ಇತರ ಸಂಬಂಧಪಟ್ಟ ದಾಖಲೆಗಳನ್ನು

– ಆ ಅಧಿಕಾರಿಯ ಅಥವಾ ಆ ಲೆಕ್ಕ ಪರಿಶೋಧನಾ ತಂಡದ ಅಥವಾ ಆ ಕಾಸ್ಟ್ ಅಕೌಂಟೆಂಟ್‌ರ ಅಥವಾ ಚಾರ್ಟರ್ಡ್ ಅಕೌಂಟೆಂಟ್‌ರ ಸೂಕ್ಷ್ಮ ಪರಿಶೀಲನೆಗಾಗಿ, ಅವರು ಕೋರಿದ ಹದಿನೈದು ಕೆಲಸದ ದಿನಗಳನ್ನು ಮೀರದ ಅವಧಿಯ ಒಳಗಾಗಿ

ಅಥವಾ ಆ ಅಧಿಕಾರಿಯು ಅಥವಾ ಆ ಲೆಕ್ಕ ಪರಿಶೋಧನಾ ತಂಡವು ಅಥವಾ ಕಾಸ್ಟ್ ಅಕೌಂಟೆಂಟ್‌ರು ಅಥವಾ ಚಾರ್ಟರ್ಡ್ ಅಕೌಂಟೆಂಟ್‌ರು ಅನುಮತಿಸಬಹುದಾದಂಥ ಹೆಚ್ಚಿನ ಅವಧಿಯ ಒಳಗಾಗಿ ಒದಗಿಸತಕ್ಕದ್ದು.

**72. ಯುಕ್ತ ಅಧಿಕಾರಿಗಳಿಗೆ ನೆರವು ನೀಡಬೇಕಾದ ಅಧಿಕಾರಿಗಳು.–** (1) ಪೊಲೀಸ್‌ನ, ರೈಲ್ವೆಯ, ಕಸ್ಟಮ್ಸ್ ನ ಎಲ್ಲಾ ಅಧಿಕಾರಿಗಳು ಮತ್ತು ಗ್ರಾಮಾಧಿಕಾರಿಗಳನ್ನು ಒಳಗೊಂಡಂತೆ ಭೂ ಕಂದಾಯದ ಸಂಗ್ರಹಣೆಯಲ್ಲಿ ತೊಡಗಿರುವ ಅಂಥ ಅಧಿಕಾರಿಗಳು, ಕೇಂದ್ರ ತೆರಿಗೆ ಅಧಿಕಾರಿಗಳು ಮತ್ತು ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆ ಅಧಿಕಾರಿಗಳು, ಈ ಅಧಿನಿಯಮದ ಅನುಷ್ಠಾನದಲ್ಲಿ ಯುಕ್ತ ಅಧಿಕಾರಿಗಳಿಗೆ ನೆರವು ನೀಡತಕ್ಕದ್ದು.

(2) ಈ ಅಧಿನಿಯಮದ ಅನುಷ್ಠಾನದಲ್ಲಿ, ಯುಕ್ತ ಅಧಿಕಾರಿಗಳಿಗೆ ನೆರವಾಗಬೇಕೆಂದು ಆಯುಕ್ತರು ಕೇಳಿದಾಗ ಯುಕ್ತ ಅಧಿಕಾರಿಗಳಿಗೆ ನೆರವಾಗಲು ಯಾವುದೇ ಇತರ ಅಧಿಕಾರಿಗಳ ವರ್ಗಕ್ಕೆ ಸರ್ಕಾರವು, ಅಧಿಸೂಚನೆಯ ಮೂಲಕ ಅಧಿಕಾರವನ್ನು ನೀಡಬಹುದು ಮತ್ತು ನೆರವಾಗುವಂತೆ ಅಗತ್ಯಪಡಿಸಬಹುದು.

## ಅಧ್ಯಾಯ XV

## ತಗಾದೆಗಳು ಮತ್ತು ವಸೂಲಿ

**73. ಮೋಸ ಮಾಡಿರುವುದರ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳಿರುವುದರ ಅಥವಾ ಯಾವುವೇ ಸಂಗತಿಗಳು ಗೊತ್ತಾಗದಂತೆ ಮಾಡಿರುವುದರ ಹೊರತು ಇತರ ಯಾವುದೇ ಕಾರಣಕ್ಕಾಗಿ ತೆರಿಗೆ ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿರುವ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿಯ ಅಥವಾ ತಪ್ಪಾಗಿ ಉಪಯೋಗಿಸಿಕೊಂಡ ಅಥವಾ ಬಳಸಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ನಿರ್ಧರಣೆ.–** (1) ತೆರಿಗೆ ಕೊಡದೆ ತಪ್ಪಿಸಿಕೊಳ್ಳುವುದಕ್ಕಾಗಿ ಮೋಸ ಮಾಡಿರುವ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳಿರುವ ಅಥವಾ ಯಾವುವೇ ಸಂಗತಿಗಳು ಗೊತ್ತಾಗದಂತೆ ಮಾಡಿರುವ ಕಾರಣಗಳ ಹೊರತು, ಇತರ ಯಾವುದೇ ಕಾರಣಗಳಿಗಾಗಿ, ಯಾವುದೇ ತೆರಿಗೆಯನ್ನು ಸಂದಾಯ ಮಾಡದಿರುವುದು ಅಥವಾ ಕಡಿಮೆ ತೆರಿಗೆ ಸಂದಾಯ ಮಾಡಿರುವುದು ಅಥವಾ ತಪ್ಪಿನಿಂದ ಮರುಪಾವತಿ ಮಾಡಿರುವುದು ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತಪ್ಪಾಗಿ ಉಪಯೋಗಿಸಿಕೊಂಡಿರುವುದು ಅಥವಾ ಬಳಸಿರುವುದು ಯುಕ್ತ ಅಧಿಕಾರಿಗೆ ಕಂಡುಬಂದರೆ, ಅವರು, ಹಾಗೆ ಸಂದಾಯ ಮಾಡದೇ ಇರುವ ತೆರಿಗೆಯ ಅಥವಾ ಹಾಗೆ ಕಡಿಮೆ ತೆರಿಗೆ ಸಂದಾಯ ಮಾಡಿರುವ ತೆರಿಗೆಯ ಹೊಣೆಯನ್ನು ಯಾವ ವ್ಯಕ್ತಿಗೆ ಹೊರಿಸಬಹುದಾಗಿದೆಯೋ ಆ ವ್ಯಕ್ತಿಗೆ ಅಥವಾ ಯಾರಿಗೆ ತಪ್ಪಿನಿಂದ ಮರುಪಾವತಿ ಮಾಡಲಾಗಿದೆಯೋ ಅಥವಾ ಯಾರು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತಪ್ಪಾಗಿ ಉಪಯೋಗಿಸಿಕೊಂಡಿರುವನೋ ಅಥವಾ ಬಳಸಿರುವನೋ ಆ ವ್ಯಕ್ತಿಗೆ, ನೋಟೀಸನ್ನು ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು, ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯನ್ನು ಮತ್ತು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ವಿಧಿಸಬಹುದಾದ ದಂಡದ ಜೊತೆಗೆ, ಆತ ಏಕೆ ಸಂದಾಯ ಮಾಡಬೇಕಿಲ್ಲ ಎನ್ನುವುದಕ್ಕೆ ಕಾರಣಗಳನ್ನು ತೋರಿಸುವಂತೆ ಕೋರಿ ಜಾರಿ ಮಾಡತಕ್ಕದ್ದು.

(2) ಯುಕ್ತ ಅಧಿಕಾರಿಯು, ಆದೇಶ ಹೊರಡಿಸುವುದಕ್ಕಾಗಿ ಉಪಪ್ರಕರಣ (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಕಾಲಮಿತಿಗಿಂತ ಕೊನೆಯ ಪಕ್ಷ ಮೂರು ತಿಂಗಳಿಗೆ ಮುಂಚಿತವಾಗಿ ಉಪಪ್ರಕರಣ (1)ರ ಅಡಿಯಲ್ಲಿ ನೋಟೀಸನ್ನು ಹೊರಡಿಸತಕ್ಕದ್ದು.

(3) ಉಪಪ್ರಕರಣ (1)ರ ಅಡಿಯಲ್ಲಿ ಯಾವುದೇ ಅವಧಿಗಾಗಿ ನೋಟೀಸನ್ನು ಹೊರಡಿಸಿದ್ದರೆ, ಉಪಪ್ರಕರಣ (1)ರ ಅಡಿಯಲ್ಲಿ ಹೇಳಿರುವವುಗಳಲ್ಲದ ಅಂಥ ಅವಧಿಗಳಿಗೆ ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿರುವ ತೆರಿಗೆಯ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿಯ ಅಥವಾ ತಪ್ಪಾಗಿ ಉಪಯೋಗಿಸಿಕೊಂಡ ಅಥವಾ ಬಳಸಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ವಿವರಗಳನ್ನು ಒಳಗೊಂಡ ಒಂದು ವಿವರಪತ್ರವನ್ನು, ಯುಕ್ತ ಅಧಿಕಾರಿಯು ತೆರಿಗೆಯ ಹೊಣೆಯನ್ನು ಯಾವ ವ್ಯಕ್ತಿಗೆ ಹೊರಿಸಬಹುದೋ ಆ ವ್ಯಕ್ತಿಗೆ ಜಾರಿ ಮಾಡಬಹುದು.

(4) ಅಂಥ ವಿವರಪತ್ರವು ಜಾರಿಯಾಗಿರುವುದನ್ನು ಅಂಥ ತೆರಿಗೆ ಅವಧಿಗಳಿಗಾಗಿ ಉಪಪ್ರಕರಣ (1)ರ ಅಡಿಯಲ್ಲಿ ಹೇಳಿರುವವುಗಳಲ್ಲದ ಅಂಥ ತೆರಿಗೆ ಅವಧಿಗಳಿಗೆ ಅವಲಂಬಿಸಿರುವ ಆಧಾರಗಳು, ಮುಂಚಿನ ನೋಟೀಸಿನಲ್ಲಿ ನಮೂದಿಸಿರುವ ಆಧಾರಗಳು ಒಂದೇ ಎನ್ನುವ ಷರತ್ತಿಗೆ ಒಳಪಟ್ಟು ಉಪಪ್ರಕರಣ (1)ರ ಅಡಿಯಲ್ಲಿ ಅಂಥ ವ್ಯಕ್ತಿಗೆ ಜಾರಿ ಮಾಡಿದ ನೋಟೀಸ್ ಎಂದು ಪರಿಭಾವಿಸತಕ್ಕದ್ದು.

(5) ತೆರಿಗೆಯ ಹೊಣೆಯನ್ನು ಯಾವ ವ್ಯಕ್ತಿಯ ಮೇಲೆ ಹೊರಿಸಬಹುದಾಗಿದೆಯೋ ಆ ವ್ಯಕ್ತಿಯು, ಉಪಪ್ರಕರಣ (1)ರ ಅಡಿಯಲ್ಲಿ ನೋಟೀಸನ್ನು ಅಥವಾ ಸಂದರ್ಭಾನುಸಾರ ಉಪಪ್ರಕರಣ (3)ರ ಅಡಿಯಲ್ಲಿ ವಿವರಪತ್ರವನ್ನು ಜಾರಿ ಮಾಡುವುದಕ್ಕೂ ಮೊದಲೇ, ಸ್ವತಃ ತಾನೇ ನಿಶ್ಚಿತಪಡಿಸಿಕೊಂಡಿರುವುದರ ಆಧಾರದ ಮೇಲೆ ಅಂಥ ತೆರಿಗೆಯ ಮೊತ್ತವನ್ನು ಅಥವಾ ಯುಕ್ತ ಅಧಿಕಾರಿಯು ನಿಶ್ಚಿತಪಡಿಸಿದ ತೆರಿಗೆಯ ಮೊತ್ತವನ್ನು, ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯ ಜೊತೆಗೆ, ಸಂದಾಯ ಮಾಡಬಹುದು ಮತ್ತು ಅಂಥ ಸಂದಾಯದ ಮಾಹಿತಿಯನ್ನು ಯುಕ್ತ ಅಧಿಕಾರಿಗೆ ಲಿಖಿತವಾಗಿ ತಿಳಿಸಬಹುದು.

(6) ಅಂಥ ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ಯುಕ್ತ ಅಧಿಕಾರಿಯು, ಹಾಗೆ ಸಂದಾಯ ಮಾಡಿದ ತೆರಿಗೆಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ದಂಡಕ್ಕೆ ಸಂಬಂಧಿಸಿದಂತೆ, ಉಪಪ್ರಕರಣ (1)ರ ಅಡಿಯಲ್ಲಿ ನೋಟೀಸ್‌ನ್ನು ಅಥವಾ ಸಂದರ್ಭಾನುಸಾರವಾಗಿ, ಉಪಪ್ರಕರಣ (3)ರ ಅಡಿಯಲ್ಲಿ ವಿವರಪತ್ರವನ್ನು ಜಾರಿ ಮಾಡತಕ್ಕದ್ದಲ್ಲ.

(7) ಉಪಪ್ರಕರಣ (5)ರ ಅಡಿಯಲ್ಲಿ ಸಂದಾಯ ಮಾಡಿದ ಮೊತ್ತವು, ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಿದೆ ಎಂದು ಯುಕ್ತ ಅಧಿಕಾರಿಯು ಅಭಿಪ್ರಾಯಪಟ್ಟರೆ, ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಿರುವ ಅಂಥ ಮೊತ್ತಕ್ಕೆ ಸಂಬಂಧಿಸಿದಂತೆ ಉಪಪ್ರಕರಣ (1)ರಲ್ಲಿ ಉಪಬಂಧಿಸಿದಂತೆ ಅವರು ನೋಟೀಸನ್ನು ಹೊರಡಿಸಲು ಮುಂದುವರೆಯತಕ್ಕದ್ದು.

(8) ಉಪಪ್ರಕರಣ (1)ರ ಅಡಿಯಲ್ಲಿ ಅಥವಾ ಉಪಪ್ರಕರಣ (3)ರ ಅಡಿಯಲ್ಲಿ ಯಾವ ವ್ಯಕ್ತಿಯ ಮೇಲೆ ತೆರಿಗೆಯ ಹೊಣೆಯನ್ನು ಹೊರಿಸಬಹುದೋ ಆ ವ್ಯಕ್ತಿಯು, ಸದರಿ ತೆರಿಗೆಯನ್ನು ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ

ಬಡ್ಡಿಯ ಜೊತೆಗೆ, ಕಾರಣ ಕೇಳುವ ನೋಟೀಸನ್ನು ನೀಡಿದ ಮೂವತ್ತು ದಿನಗಳ ಒಳಗಾಗಿ ಸಂದಾಯ ಮಾಡಿದರೆ, ದಂಡವನ್ನು ಸಂದಾಯ ಮಾಡತಕ್ಕದ್ದಲ್ಲ ಮತ್ತು ಸದರಿ ನೋಟೀಸಿಗೆ ಸಂಬಂಧಿಸಿದ ಎಲ್ಲಾ ವ್ಯವಹರಣೆಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.

(9) ಯಾವ ವ್ಯಕ್ತಿಯ ಮೇಲೆ ತೆರಿಗೆಯ ಹೊಣೆಯನ್ನು ಹೊರಿಸಬಹುದೋ ಆ ವ್ಯಕ್ತಿಯು ಮನವಿಯನ್ನೇನಾದರೂ ಮಾಡಿಕೊಂಡಿದ್ದರೆ ಅದನ್ನು ಪರಿಗಣಿಸಿದ ನಂತರ, ಯುಕ್ತ ಅಧಿಕಾರಿಯು, ಅಂಥ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆ, ಬಡ್ಡಿ ಮತ್ತು ತೆರಿಗೆಯ ಶೇಕಡಾ ಹತ್ತರಷ್ಟು ಅಥವಾ ಹತ್ತು ಸಾವಿರ ರೂಪಾಯಿಗಳು, ಇವುಗಳಲ್ಲಿ ಯಾವುದು ಹೆಚ್ಚೋ ಅದಕ್ಕೆ ಸಮನಾದ ದಂಡದ ಮೊತ್ತವನ್ನು ನಿರ್ಧರಿಸತಕ್ಕದ್ದು ಮತ್ತು ಆದೇಶವನ್ನು ಹೊರಡಿಸತಕ್ಕದ್ದು.

(10) ತೆರಿಗೆಯನ್ನು ಸಂದಾಯ ಮಾಡದಿರುವುದು ಅಥವಾ ಕಡಿಮೆ ಸಂದಾಯ ಮಾಡಿರುವುದು ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತಪ್ಪಾಗಿ ಉಪಯೋಗಿಸಿಕೊಂಡಿರುವುದು ಅಥವಾ ಬಳಸಿರುವುದು ಯಾವ ಹಣಕಾಸು ವರ್ಷಕ್ಕೆ ಸಂಬಂಧಿಸಿದೆಯೋ ಆ ಹಣಕಾಸು ವರ್ಷಕ್ಕಾಗಿ ವಾರ್ಷಿಕ ರಿಟರ್ನನ್ನು ಒದಗಿಸುವುದಕ್ಕೆ ಇರುವ ಗಡುವಿನ ದಿನಾಂಕದಿಂದ ಮೂರು ವರ್ಷದ ಒಳಗಾಗಿ ಅಥವಾ ತಪ್ಪಿನಿಂದಾಗಿ ಮರುಪಾವತಿ ಮಾಡಿದ ದಿನಾಂಕದಿಂದ ಮೂರು ವರ್ಷದ ಒಳಗಾಗಿ ಯುಕ್ತ ಅಧಿಕಾರಿಯು ಉಪಪ್ರಕರಣ (9)ರ ಅಡಿಯಲ್ಲಿ ಆದೇಶವನ್ನು ಹೊರಡಿಸತಕ್ಕದ್ದು.

(11) ಉಪಪ್ರಕರಣ (6)ರಲ್ಲಿ ಅಥವಾ ಉಪಪ್ರಕರಣ (8)ರಲ್ಲಿ ಏನೇ ಒಳಗೊಂಡಿದ್ದರೂ, ಸ್ವಯಂ-ನಿರ್ಧರಿತ ತೆರಿಗೆಯ ಯಾವುದೇ ಮೊತ್ತವನ್ನು ಅಥವಾ ತೆರಿಗೆಯಾಗಿ ಸಂಗ್ರಹಿಸಿರುವ ಯಾವುದೇ ಮೊತ್ತವನ್ನು ಅಂಥ ತೆರಿಗೆ ಸಂದಾಯದ ಗಡುವು ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಸಂದಾಯ ಮಾಡದಿದ್ದರೆ, ಉಪಪ್ರಕರಣ (9)ರ ಅಡಿಯಲ್ಲಿ ದಂಡವನ್ನು ಸಂದಾಯ ಮಾಡತಕ್ಕದ್ದು.

**74. ಸಂದಾಯ ಮಾಡದಿರುವ ತೆರಿಗೆ ಬಗ್ಗೆ ಅಥವಾ ಕಡಿಮೆ ಸಂದಾಯ ಮಾಡಿರುವ ತೆರಿಗೆ ಬಗ್ಗೆ ಅಥವಾ ತಪ್ಪಿನಿಂದ ಮರುಪಾವತಿ ಮಾಡಿರುವ ತೆರಿಗೆ ಬಗ್ಗೆ ಅಥವಾ ಮೋಸ ಮಾಡಿರುವುದರ ಅಥವಾ ಉದ್ದೇಶಪೂರ್ವಕವಾಗಿ ಸಂಗತಿಗಳನ್ನು ತಪ್ಪಾಗಿ ಹೇಳಿರುವುದರ ಅಥವಾ ಯಾವುವೇ ಸಂಗತಿಗಳು ಗೊತ್ತಾಗದಂತೆ ಮಾಡಿರುವುದರ ಯಾವುದೇ ಕಾರಣಗಳಿಂದ ತಪ್ಪಾಗಿ ಉಪಯೋಗಿಸಿಕೊಂಡ ಅಥವಾ ಬಳಸಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಬಗ್ಗೆ ನಿರ್ಧರಣೆ.–** (1) ಯಾವುದೇ ತೆರಿಗೆಯನ್ನು ಸಂದಾಯ ಮಾಡದಿರುವುದು ಅಥವಾ ಕಡಿಮೆ ತೆರಿಗೆಯನ್ನು ಸಂದಾಯ ಮಾಡಿರುವುದು ಅಥವಾ ತಪ್ಪಿನಿಂದ ಮರುಪಾವತಿ ಮಾಡಿರುವುದು ಅಥವಾ ಮೋಸದಿಂದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತಪ್ಪಾಗಿ ಉಪಯೋಗಿಸಿಕೊಂಡಿರುವುದು ಅಥವಾ ಬಳಸಿರುವುದು ಅಥವಾ ತೆರಿಗೆಯನ್ನು ತಪ್ಪಿಸುವುದಕ್ಕಾಗಿ, ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳಿರುವುದು ಅಥವಾ ಗೊತ್ತಾಗದಂತೆ ಮಾಡಿರುವುದು ಯುಕ್ತ ಅಧಿಕಾರಿಗೆ ಕಂಡುಬಂದರೆ, ಆತನು, ಹಾಗೆ ಸಂದಾಯ ಮಾಡದೇ ಇರುವ ಅಥವಾ ಹಾಗೆ ಕಡಿಮೆ ಸಂದಾಯ ಮಾಡಿರುವ ತೆರಿಗೆಯ ಹೊಣೆಯನ್ನು ಯಾವ ವ್ಯಕ್ತಿಯ ಮೇಲೆ ಹೊರಿಸಲಾಗಿದೆಯೋ ಅಥವಾ ಯಾರಿಗೆ ತಪ್ಪಿನಿಂದ ಮರುಪಾವತಿ ಮಾಡಲಾಗಿದೆಯೊ ಅಥವಾ ಯಾರು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತಪ್ಪಾಗಿ ಉಪಯೋಗಿಸಿಕೊಂಡಿರುವನೋ ಅಥವಾ ಬಳಸಿರುವನೋ, ಆ ವ್ಯಕ್ತಿಗೆ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯ ಮತ್ತು ನೋಟೀಸಿನಲ್ಲಿ

ನಿರ್ದಿಷ್ಟಪಡಿಸಿದ ತೆರಿಗೆ ಮೊತ್ತಕ್ಕೆ ಸಮನಾದ ದಂಡದ ಜೊತೆಗೆ, ಆ ವ್ಯಕ್ತಿಯು ಏಕೆ ಸಂದಾಯ ಮಾಡಬಾರದು ಎನ್ನುವುದಕ್ಕೆ ಕಾರಣಗಳನ್ನು ತೋರಿಸುವಂತೆ ಕೋರಿ ನೋಟೀಸನ್ನು ಜಾರಿ ಮಾಡತಕ್ಕದ್ದು.

(2) ಯುಕ್ತ ಅಧಿಕಾರಿಯು, ಆದೇಶವನ್ನು ಹೊರಡಿಸುವುದಕ್ಕಾಗಿ ಉಪಪ್ರಕರಣ (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಕಾಲಮಿತಿಗಿಂತ ಕೊನೆಯ ಪಕ್ಷ ಆರು ತಿಂಗಳು ಮುಂಚಿತವಾಗಿ ಉಪಪ್ರಕರಣ (1)ರ ಅಡಿಯಲ್ಲಿ ನೋಟೀಸನ್ನು ನೀಡತಕ್ಕದ್ದು.

(3) ಉಪಪ್ರಕರಣ (1)ರ ಅಡಿಯಲ್ಲಿ ಯಾವುದೇ ಅವಧಿಗಾಗಿ ನೋಟೀಸನ್ನು ನೀಡಲಾಗಿದ್ದಲ್ಲಿ, ಉಪಪ್ರಕರಣ (1)ರ ಅಡಿಯಲ್ಲಿ ವ್ಯಾಪ್ತವಾಗಿರುವ ಅವಧಿಗಳನ್ನು ಹೊರತುಪಡಿಸಿದ ಇತರ ಅಂಥ ಅವಧಿಗಳಿಗೆ, ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿದ ತೆರಿಗೆಯ ಅಥವಾ ತಪ್ಪಿನಿಂದ ಮಾಡಿದ ಮರುಪಾವತಿಯ ಅಥವಾ ತಪ್ಪಾಗಿ ತೆಗೆದುಕೊಂಡ ಅಥವಾ ಬಳಸಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ವಿವರಗಳನ್ನು ಒಳಗೊಂಡ ಒಂದು ವಿವರಪತ್ರವನ್ನು, ಯುಕ್ತ ಅಧಿಕಾರಿಯು ತೆರಿಗೆಯ ಹೊಣೆಯನ್ನು ಹೊರಿಸಬಹುದಾದ ವ್ಯಕ್ತಿಗೆ ಜಾರಿ ಮಾಡಬಹುದು.

(4) ಉಪಪ್ರಕರಣ (3)ರ ಅಡಿಯಲ್ಲಿ ವಿವರಪತ್ರ ಜಾರಿಯಾಗಿರುವುದನ್ನು, ತೆರಿಗೆಯನ್ನು ತಪ್ಪಿಸುವುದಕ್ಕಾಗಿ, ಮೋಸದ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳಿರುವುದಕ್ಕೆ ಅಥವಾ ಯಾವುವೇ ಸಂಗತಿಗಳು ಗೊತ್ತಾಗದಂತೆ ಮಾಡಿರುವುದಕ್ಕೆ ಇರುವ ಆಧಾರದ ಹೊರತು, ಸದರಿ ವಿವರಪತ್ರದಲ್ಲಿ ಉಪಪ್ರಕರಣ (1)ರ ಅಡಿಯಲ್ಲಿ ಹೇಳಿರುವವುಗಳಲ್ಲದ ಅವಧಿಗಳಿಗಾಗಿ, ಅವಲಂಬಿಸಿರುವ ಆಧಾರಗಳು, ಮುಂಚಿನ ನೋಟೀಸಿನಲ್ಲಿ ಹೇಳಿರುವ ಆಧಾರಗಳು ಒಂದೇ ಷರತ್ತಿಗೆ ಒಳಪಟ್ಟು, ಪ್ರಕರಣ 73ರ ಉಪಪ್ರಕರಣ (1)ರ ಅಡಿಯಲ್ಲಿ ಅಂಥ ವ್ಯಕ್ತಿಗೆ ಜಾರಿ ಮಾಡಿದ ನೋಟೀಸು ಎಂದು ಪರಿಭಾವಿಸತಕ್ಕದ್ದು.

(5) ತೆರಿಗೆಯ ಹೊಣೆಯನ್ನು ಯಾವ ವ್ಯಕ್ತಿಯ ಮೇಲೆ ಹೊರಿಸಬಹುದಾಗಿದೆಯೋ ಆ ವ್ಯಕ್ತಿಯು, ಉಪಪ್ರಕರಣ (1)ರ ಅಡಿಯಲ್ಲಿನ ನೋಟೀಸನ್ನು ಜಾರಿ ಮಾಡುವುದಕ್ಕೂ ಮೊದಲೇ, ಸ್ವತಃ ತಾನೇ ನಿಶ್ಚಿತಪಡಿಸಿಕೊಂಡಿರುವುದರ ಆಧಾರದ ಮೇಲೆ ಅಂಥ ತೆರಿಗೆಯ ಮೊತ್ತವನ್ನು ಅಥವಾ ಯುಕ್ತ ಅಧಿಕಾರಿಯು ನಿಶ್ಚಿತಪಡಿಸಿದ ತೆರಿಗೆಯ ಮೊತ್ತವನ್ನು, ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯನ್ನು ಅಂಥ ತೆರಿಗೆಯ ಶೇಕಡ ಹದಿನೈದಕ್ಕೆ ಸಮನಾದ ದಂಡದ ಸಹಿತ ಸಂದಾಯ ಮಾಡತಕ್ಕದ್ದು ಮತ್ತು ಅಂಥ ಸಂದಾಯದ ಮಾಹಿತಿಯನ್ನು ಯುಕ್ತ ಅಧಿಕಾರಿಗೆ ಲಿಖಿತವಾಗಿ ತಿಳಿಸತಕ್ಕದ್ದು.

(6) ಅಂಥ ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ಯುಕ್ತ ಅಧಿಕಾರಿಯು, ಹಾಗೆ ಸಂದಾಯ ಮಾಡಿದ ತೆರಿಗೆಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ದಂಡಕ್ಕೆ ಸಂಬಂಧಿಸಿದಂತೆ ಉಪಪ್ರಕರಣ (1)ರ ಅಡಿಯಲ್ಲಿ ನೋಟೀಸನ್ನು ಜಾರಿ ಮಾಡತಕ್ಕದ್ದಲ್ಲ.

(7) ಉಪಪ್ರಕರಣ (5)ರ ಅಡಿಯಲ್ಲಿ ಸಂದಾಯ ಮಾಡಿದ ಮೊತ್ತವು, ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಿದೆ ಎಂದು ಯುಕ್ತ ಅಧಿಕಾರಿಯು ಅಭಿಪ್ರಾಯಪಟ್ಟರೆ, ಅವರು ವಾಸ್ತವಿಕವಾಗಿ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆಯಿರುವ ಅಂಥ ಮೊತ್ತಕ್ಕೆ ಸಂಬಂಧಿಸಿದಂತೆ ಉಪಪ್ರಕರಣ (1)ರಲ್ಲಿ ಹೇಳಿರುವಂತೆ ನೋಟೀಸನ್ನು ಹೊರಡಿಸಲು ಮುಂದುವರೆಯತಕ್ಕದ್ದು.

(8) ಉಪಪ್ರಕರಣ (1)ರ ಅಡಿಯಲ್ಲಿ ತೆರಿಗೆಯ ಹೊಣೆಯನ್ನು ಹೊರಿಸಬಹುದಾಗಿದೆಯೋ ಆ ಯಾರೇ ವ್ಯಕ್ತಿಯು, ಸದರಿ ತೆರಿಗೆಯನ್ನು ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯನ್ನು ಅಂಥ ತೆರಿಗೆಯ ಶೇಕಡಾ ಇಪ್ಪತ್ತೈದಕ್ಕೆ ಸಮನಾದ ದಂಡದ ಸಹಿತ, ಕಾರಣ ಕೇಳುವ ನೋಟೀಸನ್ನು ನೀಡಿದ ಮೂವತ್ತು ದಿನಗಳ ಒಳಗಾಗಿ ಸಂದಾಯ ಮಾಡಿದರೆ, ಸದರಿ ನೋಟೀಸಿಗೆ ಸಂಬಂಧಿಸಿದ ಎಲ್ಲಾ ವ್ಯವಹರಣೆಗಳು ಮುಕ್ತಾಯವಾಗಿವೆ ಎಂದು ಭಾವಿಸತಕ್ಕದ್ದು.

(9) ತೆರಿಗೆಯ ಹೊಣೆಯನ್ನು ಯಾರ ಮೇಲೆ ಹೊರಿಸಬಹುದಾಗಿದೆಯೋ ಆ ವ್ಯಕ್ತಿಯು ಮನವಿಯನ್ನೇನಾದರೂ ಮಾಡಿಕೊಂಡಿದ್ದರೆ ಅದನ್ನು ಪರಿಗಣಿಸಿದ ನಂತರ, ಯುಕ್ತ ಅಧಿಕಾರಿಯು, ಅಂಥ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆ, ಬಡ್ಡಿ ಮತ್ತು ದಂಡದ ಮೊತ್ತವನ್ನು ನಿರ್ಧರಿಸತಕ್ಕದ್ದು ಮತ್ತು ಆದೇಶವನ್ನು ಹೊರಡಿಸತಕ್ಕದ್ದು.

(10) ತೆರಿಗೆಯನ್ನು ಸಂದಾಯ ಮಾಡದಿರುವುದು ಅಥವಾ ಕಡಿಮೆ ಸಂದಾಯ ಮಾಡಿರುವುದು ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತಪ್ಪಾಗಿ ಉಪಯೋಗಿಸಿಕೊಂಡಿರುವುದು ಅಥವಾ ಬಳಸಿರುವುದು ಯಾವ ಹಣಕಾಸು ವರ್ಷಕ್ಕೆ ಸಂಬಂಧಿಸಿದೆಯೋ ಆ ಹಣಕಾಸು ವರ್ಷಕ್ಕೆ ವಾರ್ಷಿಕ ರಿಟರ್ನನ್ನು ಒದಗಿಸುವುದಕ್ಕೆ ಇರುವ ಗಡುವಿನ ದಿನಾಂಕದಿಂದ ಐದು ವರ್ಷದ ಒಳಗಾಗಿ ಅಥವಾ ತಪ್ಪಿನಿಂದಾದ ಮರುಪಾವತಿಯ ದಿನಾಂಕದಿಂದ ಐದು ವರ್ಷದ ಒಳಗಾಗಿ ಯುಕ್ತ ಅಧಿಕಾರಿಯು ಉಪಪ್ರಕರಣ (9)ರ ಅಡಿಯಲ್ಲಿ ಆದೇಶವನ್ನು ಹೊರಡಿಸತಕ್ಕದ್ದು.

(11) ಉಪಪ್ರಕರಣ (9)ರ ಅಡಿಯಲ್ಲಿ ಹೊರಡಿಸಿದ ಆದೇಶವನ್ನು ಯಾವ ವ್ಯಕ್ತಿಗೆ ಜಾರಿ ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯು, ಆ ಆದೇಶವನ್ನು ತಿಳಿಸಿದ ಮೂವತ್ತು ದಿನಗಳ ಒಳಗಾಗಿ, ತೆರಿಗೆಯನ್ನು ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿಯನ್ನು ಅಂಥ ತೆರಿಗೆಯ ಶೇಕಡಾ ಐವತ್ತಕ್ಕೆ ಸಮನಾದ ದಂಡದ ಸಹಿತ ಸಂದಾಯ ಮಾಡಿದ್ದರೆ, ಸದರಿ ತೆರಿಗೆಗೆ ಸಂಬಂಧಿಸಿದ ಎಲ್ಲಾ ವ್ಯವಹರಣೆಗಳ ಮುಕ್ತಾಯವಾಗಿವೆ ಎಂದು ಭಾವಿಸತಕ್ಕದ್ದು.

**ವಿವರಣೆ 1.–** ಪ್ರಕರಣ 73ರ ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ,–

(i) "ಸದರಿ ನೋಟೀಸಿಗೆ ಸಂಬಂಧಿಸಿದ ಎಲ್ಲಾ ವ್ಯವಹರಣೆಗಳು" ಪದಾವಳಿಯು, ಪ್ರಕರಣ 132ರ ಅಡಿಯಲ್ಲಿನ ವ್ಯವಹರಣೆಗಳನ್ನು ಒಳಗೊಳ್ಳತಕ್ಕದ್ದಲ್ಲ;

(ii) ತೆರಿಗೆ ಸಂದಾಯ ಮಾಡಲು ಬಾಧ್ಯನಿರುವ ಮುಖ್ಯ ವ್ಯಕ್ತಿಗೆ ಮತ್ತು ಕೆಲವು ಇತರ ವ್ಯಕ್ತಿಗಳಿಗೆ ಅದೇ ವ್ಯವಹರಣೆಗಳ ಪ್ರಕಾರ ನೋಟೀಸನ್ನು ಹೊರಡಿಸಿದ್ದರೆ ಮತ್ತು ಮುಖ್ಯ ವ್ಯಕ್ತಿಗೆ ಸಂಬಂಧಿಸಿದ ಅಂಥ ವ್ಯವಹರಣೆಗಳನ್ನು, ಪ್ರಕರಣ 73ರ ಅಥವಾ ಪ್ರಕರಣ 74ರ ಅಡಿಯಲ್ಲಿ ಮುಕ್ತಾಯಗೊಳಿಸಿದ್ದರೆ, ಪ್ರಕರಣ 122ರ, 125ರ, 129ರ ಮತ್ತು 130ರ ಅಡಿಯಲ್ಲಿ ದಂಡವನ್ನು ಸಂದಾಯ ಮಾಡುವುದಕ್ಕೆ ಬಾಧ್ಯರಿರುವ ಎಲ್ಲಾ ವ್ಯಕ್ತಿಗಳಿಗೆ ಸಂಬಂಧಿಸಿದ ವ್ಯವಹರಣೆಗಳು ಮುಕ್ತಾಯವಾಗಿವೆ ಎಂದು ಭಾವಿಸತಕ್ಕದ್ದು.

**ವಿವರಣೆ 2.–** ಈ ಅಧಿನಿಯಮದ ಉದ್ದೇಶಗಳಿಗಾಗಿ "ಗೊತ್ತಾಗದಂತೆ ಮಾಡಿರುವುದು" ಪದಾವಳಿಯನ್ನು, ತೆರಿಗೆದಾಯಕ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಸಲ್ಲಿಸಬೇಕಾದ ರಿಟರ್ನ್‌ನಲ್ಲಿ, ವಿವರಪತ್ರದಲ್ಲಿ, ವರದಿಯಲ್ಲಿ ಅಥವಾ ಯಾವುದೇ ಇತರ ದಸ್ತಾವೇಜುಗಳಲ್ಲಿ ಘೋಷಿಸಬೇಕಾದ ಸಂಗತಿಗಳನ್ನು

ಅಥವಾ ಮಾಹಿತಿಯನ್ನು ಘೋಷಿಸದಿರುವುದು ಅಥವಾ ಯುಕ್ತ ಅಧಿಕಾರಿಯು ಲಿಖಿತದಲ್ಲಿ ಕೇಳಿರುವ ಯಾವುದೇ ಮಾಹಿತಿಯನ್ನು ಒದಗಿಸಲು ವಿಫಲವಾಗಿರುವುದು ಎಂದು ಅರ್ಥೈಸತಕ್ಕದ್ದು.

**75. ತೆರಿಗೆ ನಿರ್ಧರಣೆಗೆ ಸಂಬಂಧಿಸಿದ ಸಾಮಾನ್ಯ ಉಪಬಂಧಗಳು.–** (1) ನೋಟೀಸ್ ಜಾರಿಯಾಗುವುದಕ್ಕೆ ಅಥವಾ ಆದೇಶವನ್ನು ಹೊರಡಿಸುವುದಕ್ಕೆ, ನ್ಯಾಯಾಲಯದ ಅಥವಾ ಅಪೀಲು ನ್ಯಾಯಾಧಿಕರಣದ ಆದೇಶದ ಮೂಲಕ ತಡೆಯಾಜ್ಞೆ ಇದ್ದರೆ, ಪ್ರಕರಣ 73ರ ಉಪಪ್ರಕರಣ (2) ಮತ್ತು (10)ರಲ್ಲಿ ಅಥವಾ ಸಂದರ್ಭಾನುಸಾರ ಪ್ರಕರಣ 74ರ ಉಪಪ್ರಕರಣ (2) ಮತ್ತು (10)ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು ಲೆಕ್ಕಹಾಕುವಾಗ ಅಂಥ ತಡೆಯಾಜ್ಞೆಯ ಚಾಲ್ತಿಯಲ್ಲಿದ್ದ ಅವಧಿಯನ್ನು ಬಿಡತಕ್ಕದ್ದು.

(2) ಪ್ರಕರಣ 74ರ ಉಪಪ್ರಕರಣ (1)ರ ಅಡಿಯಲ್ಲಿ ಹೊರಡಿಸಿದ ನೋಟೀಸು, ತೆರಿಗೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ, ಮೋಸದ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳಿರುವ ಅಥವಾ ಸಂಗತಿಗಳು ಗೊತ್ತಾಗದಂತೆ ಮಾಡಿರುವ ಆರೋಪಗಳು ಯಾವ ವ್ಯಕ್ತಿಗೆ ನೋಟೀಸನ್ನು ಹೊರಡಿಸಲಾಗಿದೆಯೋ ಆ ವ್ಯಕ್ತಿಯ ವಿರುದ್ಧ ಸಾಬೀತಾಗಿಲ್ಲ ಎನ್ನುವ ಕಾರಣದಿಂದಾಗಿ ಸಮರ್ಥನೀಯವಲ್ಲ ಎಂದು ಯಾವುದೇ ಅಪೀಲು ಪ್ರಾಧಿಕಾರವು ಅಥವಾ ಅಪೀಲು ನ್ಯಾಯಾಧಿಕರಣವು ಅಥವಾ ನ್ಯಾಯಾಲಯವು ತೀರ್ಮಾನಿಸಿದರೆ, ಯುಕ್ತ ಅಧಿಕಾರಿಯು, ಅಂಥ ವ್ಯಕ್ತಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು, ಪ್ರಕರಣ 73ರ ಉಪಪ್ರಕರಣ (1)ರ ಅಡಿಯಲ್ಲಿ ನೋಟೀಸನ್ನು ನೀಡಲಾಗಿದೆ ಎಂದು ಪರಿಭಾವಿಸಿ ನಿರ್ಧರಿಸತಕ್ಕದ್ದು.

(3) ಅಪೀಲು ಪ್ರಾಧಿಕಾರದ ಅಥವಾ ಅಪೀಲು ನ್ಯಾಯಾಧಿಕರಣದ ಅಥವಾ ನ್ಯಾಯಾಲಯದ ನಿರ್ದೇಶನಕ್ಕೆ ಅನುಗುಣವಾಗಿ ಯಾವುದೇ ಆದೇಶವನ್ನು ಹೊರಡಿಸುವುದು ಅಗತ್ಯವಾಗಿದ್ದಲ್ಲಿ, ಅಂಥ ಆದೇಶವನ್ನು, ಸದರಿ ನಿರ್ದೇಶನವನ್ನು ನೀಡಿದ ದಿನಾಂಕದಿಂದ ಎರಡು ವರ್ಷಗಳ ಒಳಗಾಗಿ ಹೊರಡಿಸತಕ್ಕದ್ದು.

(4) ಯಾವ ವ್ಯಕ್ತಿಯ ಮೇಲೆ ತೆರಿಗೆಯನ್ನು ಅಥವಾ ದಂಡವನ್ನು ವಿಧಿಸಬಹುದಾಗಿದೆಯೋ ಆ ವ್ಯಕ್ತಿಯಿಂದ ಲಿಖಿತ ಕೋರಿಕೆಯನ್ನು ಸ್ವೀಕರಿಸಿದ್ದಲ್ಲಿ ಅಥವಾ ಅಂಥ ವ್ಯಕ್ತಿಯ ವಿರುದ್ಧವಾಗಿ ಯಾವುದೇ ವ್ಯತಿರಿಕ್ತವಾದ ನಿರ್ಣಯವನ್ನು ತೆಗೆದುಕೊಳ್ಳಬೇಕಾದಲ್ಲಿ ಅವನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡತಕ್ಕದ್ದು.

(5) ಯುಕ್ತ ಅಧಿಕಾರಿಯು, ಯಾವ ವ್ಯಕ್ತಿಯ ಮೇಲೆ ತೆರಿಗೆಯನ್ನು ವಿಧಿಸಬಹುದಾಗಿದೆಯೋ ಆ ವ್ಯಕ್ತಿಯು ಸಾಕಷ್ಟು ಕಾರಣಗಳನ್ನು ತೋರಿಸಿದ್ದರೆ, ಸದರಿ ವ್ಯಕ್ತಿಗೆ ಕಾಲಾವಕಾಶವನ್ನು ನೀಡತಕ್ಕದ್ದು ಮತ್ತು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಅಹವಾಲು ಕೇಳಿಕೆಯನ್ನು ಮುಂದೂಡತಕ್ಕದ್ದು:

ಪರಂತು, ವ್ಯವಹರಣೆಗಳು ನಡೆಯುತ್ತಿರುವಾಗ ವ್ಯಕ್ತಿಗೆ ಮೂರು ಬಾರಿಗಿಂತ ಹೆಚ್ಚಿಗೆ ಅಂಥ ಮುಂದೂಡಿಕೆಗೆ ಅನುಮತಿ ನೀಡತಕ್ಕದ್ದಲ್ಲ.

(6) ಯುಕ್ತ ಅಧಿಕಾರಿಯು, ತನ್ನ ಆದೇಶದಲ್ಲಿ, ಸಂಬಂಧಿತ ಸಂಗತಿಗಳನ್ನು ಮತ್ತು ತನ್ನ ನಿರ್ಣಯಕ್ಕೆ ಆಧಾರವಾದ ಅಂಶಗಳನ್ನು ನಿರೂಪಿಸತಕ್ಕದ್ದು.

(7) ಆದೇಶದಲ್ಲಿ ತಗಾದೆ ಮಾಡಿರುವ ತೆರಿಗೆಯ, ಬಡ್ಡಿಯ ಮತ್ತು ದಂಡದ ಮೊತ್ತವು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಮೊತ್ತಕ್ಕಿಂತ ಅಧಿಕವಾಗಿರತಕ್ಕದ್ದಲ್ಲ ಮತ್ತು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಆಧಾರಗಳ ಹೊರತು ಇತರ ಆಧಾರಗಳ ಮೇಲೆ ತಗಾದೆಯನ್ನು ಸ್ಥಿರೀಕರಿಸುವಂತಿಲ್ಲ.

(8) ಯುಕ್ತ ಅಧಿಕಾರಿಯು ನಿರ್ಧರಿಸಿದ ತೆರಿಗೆಯ ಮೊತ್ತವನ್ನು ಅಪೀಲು ಪ್ರಾಧಿಕಾರವು ಅಥವಾ ಅಪೀಲು ನ್ಯಾಯಾಧಿಕರಣವು ಅಥವಾ ನ್ಯಾಯಾಲಯವು ಮಾರ್ಪಡಿಸಿದಲ್ಲಿ, ಹಾಗೆ ಮಾರ್ಪಡಿಸಿದ ತೆರಿಗೆಯ ಮೊತ್ತವನ್ನು ಪರಿಗಣನೆಗೆ ತೆಗೆದುಕೊಂಡು, ಅದಕ್ಕನುಸಾರವಾಗಿ ಬಡ್ಡಿ ಮತ್ತು ದಂಡದ ಮೊತ್ತವು ಮಾರ್ಪಾಡಾಗತಕ್ಕದ್ದು.

(9) ಕಡಿಮೆ ತೆರಿಗೆ ಸಂದಾಯ ಮಾಡಿದ ಅಥವಾ ಸಂದಾಯ ಮಾಡದೇ ಇರುವ ತೆರಿಗೆಯ ಮೇಲಿನ ಬಡ್ಡಿಯನ್ನು, ತೆರಿಗೆ ಬಾಧ್ಯತೆಯನ್ನು ನಿರ್ಧರಿಸುವ ಆದೇಶದಲ್ಲಿ ನಿರ್ದಿಷ್ಟಪಡಿಸಿರಲಿ ಅಥವಾ ಇಲ್ಲದಿರಲಿ ಸಂದಾಯ ಮಾಡತಕ್ಕದ್ದು.

(10) ಪ್ರಕರಣ 73ರ ಉಪಪ್ರಕರಣ (10)ರಲ್ಲಿ ಹೇಳಿರುವಂತೆ ಮೂರು ವರ್ಷದ ಒಳಗಾಗಿ ಅಥವಾ ಪ್ರಕರಣ 74ರ ಉಪಪ್ರಕರಣ (10)ರಲ್ಲಿ ಹೇಳಿರುವಂತೆ ಐದು ವರ್ಷದ ಒಳಗಾಗಿ ಆದೇಶವನ್ನು ಹೊರಡಿಸದಿದ್ದಲ್ಲಿ, ನ್ಯಾಯನಿರ್ಣಯ ವ್ಯವಹರಣೆಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.

(11) ಯಾವ ವಿಷಯದ ಮೇಲೆ ಅಪೀಲು ಪ್ರಾಧಿಕಾರವು ಅಥವಾ ಅಪೀಲು ನ್ಯಾಯಾಧಿಕರಣವು ಅಥವಾ ಉಚ್ಚ ನ್ಯಾಯಾಲಯವು ನಿರ್ಣಯವನ್ನು ನೀಡಿದೆಯೋ ಅದು, ಕೆಲವು ಇತರ ವ್ಯವಹರಣೆಗಳಲ್ಲಿನ ರಾಜಸ್ವದ ಹಿತಾಸಕ್ತಿಗೆ ಬಾಧಕವಾಗುವಂತಿದ್ದರೆ ಮತ್ತು ಅಂಥ ಅಪೀಲು ಪ್ರಾಧಿಕಾರದ ಅಥವಾ ಅಪೀಲು ನ್ಯಾಯಾಧಿಕರಣದ ಅಥವಾ ಉಚ್ಚ ನ್ಯಾಯಾಲಯದ ಅಂಥ ನಿರ್ಣಯದ ವಿರುದ್ಧ ಅಪೀಲು ನ್ಯಾಯಾಧಿಕರಣಕ್ಕೆ ಅಥವಾ ಉಚ್ಚ ನ್ಯಾಯಾಲಯಕ್ಕೆ ಅಥವಾ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವ ಅಪೀಲು ಇತ್ಯರ್ಥದಲ್ಲಿರುವಾಗ, ಅಪೀಲು ಪ್ರಾಧಿಕಾರದ ನಿರ್ಣಯದ ದಿನಾಂಕದಿಂದ ಅಪೀಲು ನ್ಯಾಯಾಧಿಕರಣದ ನಿರ್ಣಯದ ದಿನಾಂಕದ ನಡುವಣ ಅವಧಿಯನ್ನು ಅಥವಾ ಅಪೀಲು ನ್ಯಾಯಾಧಿಕರಣದ ನಿರ್ಣಯದ ದಿನಾಂಕದಿಂದ ಉಚ್ಚ ನ್ಯಾಯಾಲಯದ ನಿರ್ಣಯದ ದಿನಾಂಕದ ನಡುವಣ ಅವಧಿಯನ್ನು ಅಥವಾ ಉಚ್ಚ ನ್ಯಾಯಾಲಯದ ನಿರ್ಣಯದ ದಿನಾಂಕದಿಂದ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ದಿನಾಂಕದ ನಡುವಣ ಅವಧಿಯನ್ನು, ಸದರಿ ಪ್ರಕರಣಗಳ ಅಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ನೀಡುವುದರ ಮೂಲಕ ವ್ಯವಹರಣೆಗಳನ್ನು ಪ್ರಾರಂಭಿಸಿದ್ದಲ್ಲಿ, ಪ್ರಕರಣ 73ರ ಉಪಪ್ರಕರಣ (10)ರಲ್ಲಿ ಅಥವಾ ಪ್ರಕರಣ 74ರ ಉಪಪ್ರಕರಣ (10)ರಲ್ಲಿ ಹೇಳಿರುವ ಅವಧಿಯನ್ನು ಲೆಕ್ಕ ಹಾಕುವಾಗ ಬಿಡತಕ್ಕದ್ದು.

(12) ಪ್ರಕರಣ 73ರಲ್ಲಿ ಅಥವಾ ಪ್ರಕರಣ 74ರಲ್ಲಿ ಏನೇ ಒಳಗೊಂಡಿದ್ದರೂ, ಪ್ರಕರಣ 39ರ ಅಡಿಯಲ್ಲಿ ಸಲ್ಲಿಸಿದ ರಿಟರ್ನ್‌ಗೆ ಅನುಸಾರವಾಗಿ ಸ್ವಯಂ–ನಿರ್ಧರಿತ ತೆರಿಗೆಯಲ್ಲಿ ಯಾವುದೇ ಮೊತ್ತವು ಪೂರ್ಣವಾಗಿ ಅಥವಾ ಭಾಗಶಃ ಸಂದಾಯವಾಗದೆ ಉಳಿದಿದ್ದಲ್ಲಿ ಅಥವಾ ಅಂಥ ತೆರಿಗೆಯ ಮೇಲೆ ಸಂದಾಯ ಮಾಡಬೇಕಾದ ಬಡ್ಡಿಯ ಯಾವುದೇ ಮೊತ್ತವು ಸಂದಾಯವಾಗದೆ ಉಳಿದಿದ್ದಲ್ಲಿ, ಅದನ್ನು ಪ್ರಕರಣ 79ರ ಉಪಬಂಧಗಳಿಗೆ ಅನುಸಾರವಾಗಿ ವಸೂಲಿ ಮಾಡತಕ್ಕದ್ದು.

(13) ಪ್ರಕರಣ 73ರ ಅಥವಾ ಪ್ರಕರಣ 74ರ ಅಡಿಯಲ್ಲಿ ಯಾವುದಾದರೂ ದಂಡ ವಿಧಿಸಿದ್ದಲ್ಲಿ, ಈ ಅಧಿನಿಯಮದ ಯಾವುದೇ ಇತರೆ ಉಪಬಂಧಗಳ ಅಡಿಯಲ್ಲಿ ಅದೇ ವ್ಯಕ್ತಿಯ ಮೇಲೆ, ಅದೇ ಕೃತ್ಯಕ್ಕಾಗಿ ಅಥವಾ ಲೋಪಕ್ಕಾಗಿ ದಂಡ ವಿಧಿಸತಕ್ಕದ್ದಲ್ಲ.

**76. ತೆರಿಗೆಯನ್ನು ಸಂಗ್ರಹಿಸಿ ಸರ್ಕಾರಕ್ಕೆ ಸಂದಾಯ ಮಾಡದಿರುವುದು.–** (1) ಯಾವುದೇ ಅಪೀಲು ಪ್ರಾಧಿಕಾರದ ಅಥವಾ ಅಪೀಲು ನ್ಯಾಯಾಧಿಕರಣದ ಅಥವಾ ನ್ಯಾಯಾಲಯದ ಯಾವುದೇ ಆದೇಶದಲ್ಲಿ ಅಥವಾ ನಿರ್ದೇಶನದಲ್ಲಿ ಅಥವಾ ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ, ಯಾರೇ ಇತರ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಸಂಬಂಧಿಸಿದ ಯಾವುದೇ ಮೊತ್ತವನ್ನು ಸಂಗ್ರಹಿಸಿದ್ದು ಸದರಿ ಮೊತ್ತವನ್ನು ಸರ್ಕಾರಕ್ಕೆ ಸಂದಾಯ ಮಾಡಿರದಿದ್ದರೆ ಅಂಥ ಪ್ರತಿಯೊಬ್ಬ ವ್ಯಕ್ತಿಯೂ, ಸಂಗ್ರಹಿಸಿದ ಅಂಥ ಮೊತ್ತಕ್ಕೆ ಸಂಬಂಧಿಸಿದ ಪೂರೈಕೆಗಳು ತೆರಿಗೆದಾಯಕವಾಗಿರಲಿ ಅಥವಾ ಇಲ್ಲದಿರಲಿ ಸದರಿ ಮೊತ್ತವನ್ನು ಸರ್ಕಾರಕ್ಕೆ ತತ್‌ಕ್ಷಣವೇ ಸಂದಾಯ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಅಡಿಯಲ್ಲಿ ಸರ್ಕಾರಕ್ಕೆ ಯಾವುದೇ ಮೊತ್ತವನ್ನು ಸಂದಾಯ ಮಾಡುವುದು ಅಗತ್ಯವಿದ್ದಲ್ಲಿ ಆದರೆ ಅದನ್ನು ಸಂದಾಯ ಮಾಡಿರದಿದ್ದಲ್ಲಿ, ಯುಕ್ತ ಅಧಿಕಾರಿಯು, ಅಂಥ ಮೊತ್ತವನ್ನು ಸಂದಾಯ ಮಾಡಲು ಬಾಧ್ಯನಿರುವ ವ್ಯಕ್ತಿಗೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸದರಿ ಮೊತ್ತವನ್ನು ಅವನು ಸರ್ಕಾರಕ್ಕೆ ಏಕೆ ಸಂದಾಯ ಮಾಡಬಾರದು ಎನ್ನುವುದಕ್ಕೆ ಕಾರಣಗಳನ್ನು ತೋರಿಸುವಂತೆ ಮತ್ತು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸದರಿ ಮೊತ್ತಕ್ಕೆ ಸಮನಾದ ದಂಡವನ್ನು ಅವನ ಮೇಲೆ ಏಕೆ ವಿಧಿಸಬಾರದು ಎನ್ನುವುದಕ್ಕೆ ಅವನಿಗೆ ನೋಟೀಸನ್ನು ಜಾರಿ ಮಾಡತಕ್ಕದ್ದು.

(3) ಉಪಪ್ರಕರಣ (2)ರ ಅಡಿಯಲ್ಲಿ ಯಾವ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಲಾಗಿದೆಯೋ ಆ ವ್ಯಕ್ತಿಯು ಮನವಿಯನ್ನೇನಾದರೂ ಮಾಡಿಕೊಂಡಿದ್ದರೆ ಅದನ್ನು ಪರಿಗಣಿಸಿದ ನಂತರ, ಯುಕ್ತ ಅಧಿಕಾರಿಯು, ಅಂಥ ವ್ಯಕ್ತಿಯಿಂದ ಬಾಕಿಯಿರುವ ಮೊತ್ತವನ್ನು ನಿರ್ಧರಿಸತಕ್ಕದ್ದು ಮತ್ತು ಅದಾದ ಕೂಡಲೇ ಅಂಥ ವ್ಯಕ್ತಿಯು ಹಾಗೆ ನಿರ್ಧರಿಸಿದ ಮೊತ್ತವನ್ನು ಸಂದಾಯ ಮಾಡತಕ್ಕದ್ದು.

(4) ಉಪಪ್ರಕರಣ (1)ರಲ್ಲಿ ಹೇಳಿರುವ ವ್ಯಕ್ತಿಯು, ಉಪಪ್ರಕರಣ (1)ರಲ್ಲಿ ಅಥವಾ ಉಪಪ್ರಕರಣ (3)ರಲ್ಲಿ ಹೇಳಿರುವ ಮೊತ್ತವನ್ನು ಸಂದಾಯ ಮಾಡುವುದರ ಜೊತೆಗೆ, ಅಂಥ ಮೊತ್ತವು ಆತನಿಂದ ಸಂಗ್ರಹಣೆಯಾದ ದಿನಾಂಕದಿಂದ ಆತನು ಸರ್ಕಾರಕ್ಕೆ ಸಂದಾಯ ಮಾಡಿದ ದಿನಾಂಕದವರೆಗೆ, ಅದರ ಮೇಲೆ ಪ್ರಕರಣ 50ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಬಡ್ಡಿಯನ್ನು ಸಹ ಸಂದಾಯ ಮಾಡುವುದಕ್ಕೆ ಬದ್ಧನಾಗಿರತಕ್ಕದ್ದು.

(5) ಕಾರಣ ಕೇಳುವ ನೋಟೀಸನ್ನು ಯಾವ ವ್ಯಕ್ತಿಗೆ ನೀಡಲಾಗಿದೆಯೋ ಅಂಥ ವ್ಯಕ್ತಿಯಿಂದ ಲಿಖಿತದಲ್ಲಿ ಕೋರಿಕೆಯನ್ನು ಸ್ವೀಕರಿಸಿದ್ದಲ್ಲಿ, ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕದ್ದು.

(6) ಯುಕ್ತ ಅಧಿಕಾರಿಯು ನೋಟೀಸು ಜಾರಿಗೊಳಿಸಿದ ದಿನಾಂಕದಿಂದ ಒಂದು ವರ್ಷದ ಒಳಗಾಗಿ ಆದೇಶವನ್ನು ಹೊರಡಿಸತಕ್ಕದ್ದು.

(7) ಆದೇಶ ಹೊರಡಿಸಿರುವುದನ್ನು, ನ್ಯಾಯಾಲಯದ ಅಥವಾ ಅಪೀಲು ನ್ಯಾಯಾಧಿಕರಣದ ಆದೇಶದಿಂದ ತಡೆಹಿಡಿದಿದ್ದರೆ, ಒಂದು ವರ್ಷದ ಅವಧಿಯನ್ನು ಲೆಕ್ಕಹಾಕುವಾಗ ಅಂಥ ತಡೆಹಿಡಿಯಲ್ಪಟ್ಟ ಅವಧಿಯನ್ನು ಬಿಡತಕ್ಕದ್ದು.

(8) ಯುಕ್ತ ಅಧಿಕಾರಿಯು, ತನ್ನ ಆದೇಶದಲ್ಲಿ, ಸುಸಂಗತ ಸಂಗತಿಗಳನ್ನು ಮತ್ತು ತನ್ನ ನಿರ್ಣಯಕ್ಕೆ ಆಧಾರವನ್ನು ನಿರೂಪಿಸಿರತಕ್ಕದ್ದು.

(9) ಉಪಪ್ರಕರಣ (1)ರ ಅಥವಾ ಉಪಪ್ರಕರಣ (3)ರ ಅಡಿಯಲ್ಲಿ ಸರ್ಕಾರಕ್ಕೆ ಸಂದಾಯ ಮಾಡಿದ ಮೊತ್ತವನ್ನು, ಉಪಪ್ರಕರಣ (1)ರಲ್ಲಿ ಹೇಳಿರುವ ಪೂರೈಕೆಗಳಿಗೆ ಸಂಬಂಧಿಸಿದಂತೆ ಆ ವ್ಯಕ್ತಿಯಿಂದ ಯಾವುದಾದರೂ ತೆರಿಗೆ ಸಂದಾಯವಾಗಬೇಕಿದ್ದಲ್ಲಿ ಅದಕ್ಕೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.

(10) ಉಪಪ್ರಕರಣ (9)ರ ಅಡಿಯಲ್ಲಿ ಹೊಂದಾಣಿಕೆ ಮಾಡಿದ ನಂತರ ಯಾವುದೇ ಹೆಚ್ಚುವರಿ ಮೊತ್ತ ಉಳಿದರೆ, ಅಂಥ ಹೆಚ್ಚುವರಿಯ ಮೊತ್ತವನ್ನು ನಿಧಿಗೆ ಜಮೆ ಮಾಡತಕ್ಕದ್ದು ಅಥವಾ ಆ ಮೊತ್ತದ ಹೊಣೆ ಹೊತ್ತಿದ್ದ ವ್ಯಕ್ತಿಗೆ ಮರುಪಾವತಿ ಮಾಡತಕ್ಕದ್ದು.

(11) ಮೊತ್ತದ ಹೊಣೆಯನ್ನು ಹೊತ್ತಿದ್ದ ವ್ಯಕ್ತಿಯು, ಪ್ರಕರಣ 54ರ ಉಪಬಂಧಗಳಿಗೆ ಅನುಸಾರವಾಗಿ ಅದರ ಮರುಪಾವತಿಗಾಗಿ ಅರ್ಜಿಯನ್ನು ಸಲ್ಲಿಸಬಹುದು.

**77. ತಪ್ಪಾಗಿ ಸಂಗ್ರಹಿಸಿದ್ದ ಮತ್ತು ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡಿದ್ದ ತೆರಿಗೆ.–** (1) ರಾಜ್ಯದೊಳಗಡೆಗೆ ಪೂರೈಕೆ ಎಂದು ನೋಂದಾಯಿತ ವ್ಯಕ್ತಿಯು, ಪರಿಗಣಿಸಿದ್ದ, ವ್ಯವಹಾರಕ್ಕೆ ಸಂಬಂಧಿಸಿದಂತೆ ಆತನು ರಾಜ್ಯ ತೆರಿಗೆಯನ್ನು ಮತ್ತು ಕೇಂದ್ರ ತೆರಿಗೆಯನ್ನು ಅಥವಾ ಸಂದರ್ಭಾನುಸಾರ ಕೇಂದ್ರ ತೆರಿಗೆ ಮತ್ತು ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆಯನ್ನು ಸಂದಾಯ ಮಾಡಿದ್ದರೆ, ಆದರೆ, ತರುವಾಯದಲ್ಲಿ ಅದು ಅಂತರ–ರಾಜ್ಯ ಪೂರೈಕೆ ಎಂದು ಅವನಿಗೆ ಅನ್ನಿಸಿದರೆ, ಹಾಗೆ ಸಂದಾಯ ಮಾಡಿದ ತೆರಿಗೆಯನ್ನು ಆತನು ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಮರುಪಾವತಿ ಮಾಡತಕ್ಕದ್ದು.

(2) ಅಂತರ–ರಾಜ್ಯ ಪೂರೈಕೆ ಎಂದು ನೋಂದಾಯಿತ ವ್ಯಕ್ತಿಯು, ಪರಿಗಣಿಸಿದ್ದ, ವ್ಯವಹಾರಕ್ಕೆ ಸಂಬಂಧಿಸಿದಂತೆ ಆತನು ಏಕೀಕೃತ ತೆರಿಗೆಯನ್ನು ಸಂದಾಯ ಮಾಡಿದ್ದರೆ, ಆದರೆ ತರುವಾಯದಲ್ಲಿ ಅದು ರಾಜ್ಯದೊಳಗಡೆಗೆ ಮಾಡಿದ ಪೂರೈಕೆ ಎಂದು ಆತನಿಗೆ ಅನ್ನಿಸಿದರೆ, ಸಂದಾಯ ಮಾಡಬೇಕಾದ ಕೇಂದ್ರ ತೆರಿಗೆಯ ಮತ್ತು ರಾಜ್ಯ ತೆರಿಗೆಯ ಅಥವಾ ಸಂದರ್ಭಾನುಸಾರ ಕೇಂದ್ರ ತೆರಿಗೆ ಮತ್ತು ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆಯ ಮೊತ್ತದ ಮೇಲೆ ಯಾವುದೇ ಬಡ್ಡಿಯನ್ನು ಸಂದಾಯ ಮಾಡುವುದು ಅಗತ್ಯವಿರತಕ್ಕದ್ದಲ್ಲ.

**78. ವಸೂಲಿ ವ್ಯವಹರಣೆಗಳನ್ನು ಪ್ರಾರಂಭಿಸುವುದು.–** ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಆದೇಶಕ್ಕೆ ಅನುಗುಣವಾಗಿ ತೆರಿಗೆದಾಯಕ ವ್ಯಕ್ತಿಯು ಸಂದಾಯ ಮಾಡಬೇಕಾದ ಯಾವುದೇ ಮೊತ್ತವನ್ನು ಅಂಥ ವ್ಯಕ್ತಿಯು ಅಂಥ ಆದೇಶವನ್ನು ಜಾರಿಗೊಳಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯ ಒಳಗಾಗಿ ಸಂದಾಯ ಮಾಡತಕ್ಕದ್ದು, ಹಾಗೆ ಮಾಡಲು ವಿಫಲವಾದಲ್ಲಿ ವಸೂಲಿ ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದು:

ಪರಂತು, ಯುಕ್ತ ಅಧಿಕಾರಿಯು, ಅವರು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ತಾನು ನಿರ್ದಿಷ್ಟಪಡಿಸಬಹುದಾದ ಮೂರು ತಿಂಗಳುಗಳ ಅವಧಿಗಿಂತ ಕಡಿಮೆಯಾಗುವಂಥ ಅವಧಿಯೊಳಗಾಗಿ ಅಂಥ ಮೊತ್ತವನ್ನು ಸಂದಾಯ ಮಾಡಲು ತೆರಿಗೆದಾಯಕ ವ್ಯಕ್ತಿಯನ್ನು ಅಗತ್ಯಪಡಿಸುವುದು ರಾಜಸ್ವದ ಹಿತದೃಷ್ಟಿಯಿಂದ ವಿಹಿತವೆಂದು ಪರಿಗಣಿಸಿದರೆ, ಹಾಗೆ ಅಗತ್ಯಪಡಿಸಬಹುದು.

**79. ತೆರಿಗೆಯ ವಸೂಲಿ.–** (1) ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಯಾರೇ ವ್ಯಕ್ತಿಯು ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಯಾವುದೇ ಮೊತ್ತವನ್ನು ಸಂದಾಯ ಮಾಡದಿದ್ದರೆ, ಯುಕ್ತ ಅಧಿಕಾರಿಯು ಈ ಕೆಳಗಿನ ಒಂದು ಅಥವಾ ಹೆಚ್ಚಿನ ವಿಧಾನಗಳಲ್ಲಿ ವಸೂಲಿ ಮಾಡಲು ಮುಂದುವರಿಯತಕ್ಕದ್ದು, ಅವುಗಳೆಂದರೆ:–

(ಎ) ಅಂಥ ವ್ಯಕ್ತಿಗೆ ಕೊಡತಕ್ಕ ಯಾವುದೇ ಹಣವು, ಯುಕ್ತ ಅಧಿಕಾರಿಯ ಅಥವಾ ಯಾವುದೇ ಇತರ ನಿರ್ದಿಷ್ಟಪಡಿಸಿದ ಅಧಿಕಾರಿಯ ನಿಯಂತ್ರಣದಲ್ಲಿದ್ದರೆ, ಆ ಯಾವುದೇ ಮೊತ್ತದಿಂದ ಹಾಗೆ ಸಂದಾಯ ಮಾಡಬೇಕಾದ ಮೊತ್ತವನ್ನು, ಆ ಯುಕ್ತ ಅಧಿಕಾರಿಯು ಕಡಿತ ಮಾಡಬಹುದು ಅಥವಾ ಅಂಥ ಇತರೆ ನಿರ್ದಿಷ್ಟಪಡಿಸಿದ ಅಧಿಕಾರಿಗೆ ಕಡಿತ ಮಾಡುವಂತೆ ಅಗತ್ಯಪಡಿಸಬಹುದು;

(ಬಿ) ಅಂಥ ವ್ಯಕ್ತಿಗೆ ಸೇರಿದ, ಯಾವುದೇ ಸರಕುಗಳು, ಯುಕ್ತ ಅಧಿಕಾರಿಯ ಅಥವಾ ಯಾವುದೇ ಇತರ ನಿರ್ದಿಷ್ಟಪಡಿಸಿದ ಅಧಿಕಾರಿಯ ನಿಯಂತ್ರಣದಲ್ಲಿದ್ದರೆ, ಆ ಯಾವುವೇ ಸರಕುಗಳನ್ನು ತಡೆಹಿಡಿದಿಟ್ಟುಕೊಂಡು ಮಾರಾಟ ಮಾಡಿ, ಹಾಗೆ ಸಂದಾಯ ಮಾಡಬೇಕಾದ ಮೊತ್ತವನ್ನು ಆ ಯುಕ್ತ ಅಧಿಕಾರಿಯು ವಸೂಲಿ ಮಾಡಬಹುದು ಅಥವಾ ಅಂಥ ಇತರೆ ನಿರ್ದಿಷ್ಟಪಡಿಸಿದ ಅಧಿಕಾರಿಯು ವಸೂಲಿ ಮಾಡುವಂತೆ ಅಗತ್ಯಪಡಿಸಬಹುದು;

(ಸಿ) ಯುಕ್ತ ಅಧಿಕಾರಿಯು,–

(i) ಯಾವ ಇತರ ವ್ಯಕ್ತಿಯಿಂದ ಅಂಥ ವ್ಯಕ್ತಿಗೆ ಹಣ ಬಾಕಿಯಾಗಿದೆಯೋ ಅಥವಾ ಮುಂದೆ ಬಾಕಿಯಾಗಬಹುದೋ ಅಥವಾ ಇತರ ಯಾವ ವ್ಯಕ್ತಿಯು ಅಂಥ ವ್ಯಕ್ತಿಗಾಗಿ ಅಥವಾ ಆತನ ಪರವಾಗಿ, ಹಣವನ್ನು ಇಟ್ಟುಕೊಂಡಿರುವನೋ ಅಥವಾ ತರುವಾಯ ಇಟ್ಟುಕೊಳ್ಳಬಹುದೋ ಆ ಯಾರೇ ಇತರೆ ವ್ಯಕ್ತಿಯನ್ನು, ಲಿಖಿತ ನೋಟೀಸಿನ ಮೂಲಕ, ಹಣವು ಬಾಕಿಯಾದ ಕೂಡಲೇ ಅಥವಾ ಇಟ್ಟುಕೊಂಡಿರುವ ಹಣವನ್ನು ಅಥವಾ ಆ ಹಣವು ಬಾಕಿಯಾಗುವುದಕ್ಕಿಂತಲೂ ಅಥವಾ ಇಟ್ಟುಕೊಳ್ಳುವುದಕ್ಕೆ ಮುಂಚಿತವಾಗಿ ಅಲ್ಲದಂಥ, ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸಮಯದ ಒಳಗಾಗಿ, ಅಂಥ ವ್ಯಕ್ತಿಯಿಂದ ಬಾಕಿಯಿರುವ ಮೊತ್ತವನ್ನು ಸಂದಾಯ ಮಾಡಲು ಸಾಕಾಗುವಷ್ಟು ಪ್ರಮಾಣದ ಹಣವನ್ನು ಅಥವಾ ಆ ಇಡೀ ಹಣವನ್ನು, ಅದು ಆ ಮೊತ್ತಕ್ಕೆ ಸಮವಾಗಿದ್ದರೆ ಅಥವಾ ಅದಕ್ಕಿಂತ ಕಡಿಮೆ ಇದ್ದರೆ, ಸಂಪೂರ್ಣ ಹಣವನ್ನು ಸರ್ಕಾರಕ್ಕೆ ಸಂದಾಯ ಮಾಡುವಂತೆ ಯುಕ್ತ ಅಧಿಕಾರಿಯು ಲಿಖಿತ ನೋಟೀಸಿನ ಮೂಲಕ ಅಗತ್ಯಪಡಿಸಬಹುದು;

(ii) ಉಪ–ಖಂಡ (i)ರ ಅಡಿಯಲ್ಲಿ ಯಾವ ವ್ಯಕ್ತಿಗೆ ನೋಟೀಸು ನೀಡಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು, ಅಂಥ ನೋಟೀಸನ್ನು ಪಾಲಿಸಲು ಬದ್ಧನಾಗಿರತಕ್ಕದ್ದು ಮತ್ತು ಅದರಲ್ಲೂ ಮುಖ್ಯವಾಗಿ, ಅಂಥ

ನೋಟೀಸನ್ನು ಅಂಚೆ ಕಛೇರಿಗೆ, ಬ್ಯಾಂಕಿಂಗ್ ಕಂಪನಿಗೆ ಅಥವಾ ವಿಮಾದಾರನಿಗೆ ನೀಡಿದ್ದಲ್ಲಿ, ಯಾವುದೇ ನಿಯಮದಲ್ಲಿ, ಆಚರಣೆಯಲ್ಲಿ ಅಥವಾ ಅಗತ್ಯತೆಯಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಮೊತ್ತವನ್ನು ಸಂದಾಯ ಮಾಡುವುದಕ್ಕಿಂತ ಮುಂಚಿತವಾಗಿ ಯಾವುದೇ ನಮೂದು ಮಾಡುವ, ಹಿಂಬರಹ ಮಾಡುವ ಅಥವಾ ಅಂಥ ಉದ್ದೇಶಕ್ಕಾಗಿ, ಯಾವುದೇ ಪಾಸು ಬುಕ್ಕನ್ನು, ಠೇವಣಿ ರಶೀದಿಯನ್ನು, ಪಾಲಿಸಿಯನ್ನು ಅಥವಾ ಯಾವುದೇ ಇತರೇ ದಸ್ತಾವೇಜುಗಳನ್ನು ಹಾಜರುಪಡಿಸುವ ಅಗತ್ಯವಿರತಕ್ಕದ್ದಲ್ಲ;

(iii) ಉಪ–ಖಂಡ (i)ರ ಅಡಿಯಲ್ಲಿ ಯಾವ ವ್ಯಕ್ತಿಗೆ ನೋಟೀಸನ್ನು ನೀಡಲಾಗಿದೆಯೋ ಆ ವ್ಯಕ್ತಿಯು, ಅದಕ್ಕನುಗುಣವಾಗಿ ಸರ್ಕಾರಕ್ಕೆ ಸಂದಾಯ ಮಾಡಲು ವಿಫಲನಾದ ಸಂದರ್ಭದಲ್ಲಿ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತಕ್ಕೆ ಸಂಬಂಧಿಸಿದಂತೆ ಅವನನ್ನು ಬಾಕಿದಾರ ಎಂದು ಪರಿಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿನ ಎಲ್ಲಾ ಪರಿಣಾಮಗಳು ಅನುಗತವಾಗತಕ್ಕದ್ದು;

(iv) ಉಪ–ಖಂಡ (i)ರ ಅಡಿಯಲ್ಲಿ ಒಂದು ನೋಟೀಸನ್ನು ನೀಡುವ ಅಧಿಕಾರಿಯು, ಯಾವುದೇ ಸಮಯದಲ್ಲಿ ಅಂಥ ನೋಟೀಸನ್ನು ತಿದ್ದುಪಡಿ ಮಾಡಬಹುದು ಅಥವಾ ಹಿಂಪಡೆಯಬಹುದು ಅಥವಾ ನೋಟೀಸಿಗೆ ಅನುಗುಣವಾಗಿ ಯಾವುದೇ ಸಂದಾಯವನ್ನು ಮಾಡಲು ಕಾಲಾವಕಾಶವನ್ನು ವಿಸ್ತರಿಸಬಹುದು;

(v) ಉಪ–ಖಂಡ (i)ರ ಅಡಿಯಲ್ಲಿ ನೀಡಲಾದ ನೋಟೀಸಿಗೆ ಅನುಸಾರವಾಗಿ ಯಾವುದೇ ಸಂದಾಯವನ್ನು ಮಾಡುವ ಯಾರೇ ವ್ಯಕ್ತಿಯು, ಬಾಕಿದಾರನಾಗಿರುವ ವ್ಯಕ್ತಿಯು ಹೇಳಿರುವಂತೆಯೇ ಸಂದಾಯ ಮಾಡಿದ್ದಾನೆ ಎಂದು ಪರಿಭಾವಿಸತಕ್ಕದ್ದು ಮತ್ತು ಸರ್ಕಾರಕ್ಕೆ ಜಮೆಯಾದ ಅಂಥ ಮೊತ್ತವನ್ನು, ಬಾಕಿದಾರನಾಗಿರುವ ವ್ಯಕ್ತಿಗೆ, ರಶೀದಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೊತ್ತದಷ್ಟರ ಮಟ್ಟಿಗೆ, ಆ ಯಾರೇ ವ್ಯಕ್ತಿಯ ಬಾಧ್ಯತೆಯು ತಕ್ಕಷ್ಟು ಮತ್ತು ಸಾಕಷ್ಟು ನೆರವೇರಿಕೆಯಾಗಿದೆ ಎಂದು ಪರಿಭಾವಿಸತಕ್ಕದ್ದು;

(vi) ಉಪ–ಖಂಡ (i)ರ ಅಡಿಯಲ್ಲಿ ಆತನಿಗೆ ಒಂದು ನೋಟೀಸನ್ನು ಜಾರಿಮಾಡಿದ ನಂತರ, ಬಾಕಿದಾರನಾಗಿರುವ ವ್ಯಕ್ತಿಗೆ ಯಾವುದೇ ಬಾಧ್ಯತೆಯನ್ನು ವಿಮೋಚನೆ ಮಾಡುವ ಯಾವುದೇ ವ್ಯಕ್ತಿಯು, ಬಾಧ್ಯತೆಯನ್ನು ವಿಮೋಚನೆ ಮಾಡಿದಷ್ಟು ಅಥವಾ ಬಾಕಿದಾರನಾಗಿರುವ ವ್ಯಕ್ತಿಯ ತೆರಿಗೆ, ಬಡ್ಡಿ ಮತ್ತು ದಂಡದಷ್ಟು, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟರ ಮಟ್ಟಿಗೆ ಸರ್ಕಾರಕ್ಕೆ ವೈಯಕ್ತಿಕವಾಗಿ ಬಾಧ್ಯನಿರತಕ್ಕದ್ದು;

(vii) ಉಪ–ಖಂಡ (i)ರ ಅಡಿಯಲ್ಲಿ ಯಾವ ವ್ಯಕ್ತಿಗೆ ನೋಟೀಸನ್ನು ಜಾರಿಮಾಡಲಾಗಿದೆಯೋ ಆ ವ್ಯಕ್ತಿಯು, ನೋಟೀಸನ್ನು ಹೊರಡಿಸುವ ಅಧಿಕಾರಿಗೆ ಮನದಟ್ಟಾಗುವ ಹಾಗೆ, ಸೂಚನಾಪತ್ರವನ್ನು ಆತನಿಗೆ ನೀಡಿದ ಸಮಯದಲ್ಲಿ ತಗಾದೆ ಮಾಡಿದ್ದ ಹಣವು ಅಥವಾ ಅದರ ಯಾವುದೇ ಭಾಗವು ಬಾಕಿದಾರ ವ್ಯಕ್ತಿಗೆ ಬಾಕಿಯಾಗಿಲ್ಲವೆಂದೋ ಅಥವಾ ಬಾಕಿದಾರ ವ್ಯಕ್ತಿಗಾಗಿ ಅಥವಾ ಆತನ ಪರವಾಗಿ ಯಾವುದೇ ಹಣವನ್ನು ತಾನು ಇಟ್ಟುಕೊಂಡಿಲ್ಲವೆಂದೋ, ತಗಾದೆ ಮಾಡಿದ ಹಣವು ಅಥವಾ ಅದರ ಯಾವುದೇ ಭಾಗವು ಸದರಿ ವ್ಯಕ್ತಿಗೆ ಬಾಕಿಯಾಗುವ ಅಥವಾ ಅಂಥ ವ್ಯಕ್ತಿಯ ಪರವಾಗಿ ಅದನ್ನು ಇಟ್ಟುಕೊಳ್ಳುವ ಸಂಭವವಿಲ್ಲವೆಂದೋ

ಸಾಬೀತುಪಡಿಸಿದಲ್ಲಿ, ಯಾವುದೇ ಅಂಥ ಹಣವನ್ನು ಅಥವಾ ಅದರ ಯಾವುದೇ ಭಾಗವನ್ನು ಸರ್ಕಾರಕ್ಕೆ ಸಂದಾಯ ಮಾಡುವಂತೆ, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ನೋಟೀಸನ್ನು ಯಾರಿಗೆ ನೀಡಲಾಗಿದೆಯೋ ಆ ವ್ಯಕ್ತಿಯನ್ನು ಅಗತ್ಯಪಡಿಸಲಾಗಿದೆ ಎಂದು ಪರಿಭಾವಿಸತಕ್ಕದ್ದಲ್ಲ;

(ಡಿ) ಯುಕ್ತ ಅಧಿಕಾರಿಯು, ಈ ಸಂಬಂಧದಲ್ಲಿ ರಚಿಸುವ ನಿಯಮಗಳಿಗೆ ಅನುಸಾರವಾಗಿ, ಅಂಥ ವ್ಯಕ್ತಿಗೆ ಸೇರಿದ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ವಶಕ್ಕೆ ತೆಗೆದುಕೊಳ್ಳಬಹುದು ಮತ್ತು ಆ ಸ್ಥಿರ ಸ್ವತ್ತನ್ನು ಸಂದಾಯ ಮಾಡಬೇಕಾದ ಮೊತ್ತವು ಸಂದಾಯವಾಗುವವರೆಗೂ ತಡೆಹಿಡಿದಿಟ್ಟುಕೊಳ್ಳಬಹುದು; ಮತ್ತು ಸಂದಾಯ ಮಾಡಬೇಕಾದ ಸದರಿ ಮೊತ್ತದ ಅಥವಾ ಜಪ್ತಿಯ ಅಥವಾ ಸ್ವತ್ತನ್ನು ತಡೆಹಿಡಿದಿಟ್ಟುಕೊಳ್ಳುವುದಕ್ಕೆ ತಗಲಿದ ವೆಚ್ಚದ ಯಾವುದೇ ಭಾಗವು ಅಂಥ ಜಪ್ತಿಯಾದ ಮೂವತ್ತು ದಿನಗಳ ಅವಧಿಯವರೆಗೆ ಸಂದಾಯವಾಗದೆ ಉಳಿದಂಥ ಸಂದರ್ಭದಲ್ಲಿ, ಸದರಿ ಸ್ವತ್ತನ್ನು ಮಾರಾಟ ಮಾಡಿಸಬಹುದು ಹಾಗೂ ಸಂದಾಯವಾಗಬೇಕಾದ ಮೊತ್ತವನ್ನು ಮತ್ತು ಮಾರಾಟದ ವೆಚ್ಚವನ್ನು ಒಳಗೊಂಡಂತೆ ಸಂದಾಯವಾಗದ ವೆಚ್ಚಗಳನ್ನು ಅಂಥ ಮಾರಾಟದ ಉತ್ಪತ್ತಿಯಿಂದ ತೀರಿಸಬಹುದು ಮತ್ತು ಹೆಚ್ಚುವರಿ ಮೊತ್ತವೇನಾದರೂ ಇದ್ದರೆ, ಅದನ್ನು ಅಂಥ ವ್ಯಕ್ತಿಗೆ ಕೊಡತಕ್ಕದ್ದು;

(ಇ) ಯುಕ್ತ ಅಧಿಕಾರಿಯು ಅಂಥ ವ್ಯಕ್ತಿಯಿಂದ ಬರಬೇಕಾದ ಮೊತ್ತವನ್ನು ನಿರ್ದಿಷ್ಟಪಡಿಸಿರುವ, ತಾನು ಸಹಿ ಮಾಡಿರುವ ಪ್ರಮಾಣಪತ್ರವನ್ನು ಸಿದ್ಧಪಡಿಸಬಹುದು ಮತ್ತು ಅಂಥ ವ್ಯಕ್ತಿಯು ಯಾವ ಜಿಲ್ಲೆಯಲ್ಲಿ, ಯಾವುದೇ ಸ್ವತ್ತನ್ನು ಹೊಂದಿದ್ದರೆ ಅಥವಾ ವಾಸಿಸುತ್ತಿದ್ದರೆ ಅಥವಾ ಆತನು ವ್ಯವಹಾರವನ್ನು ನಡೆಸುತ್ತಿದ್ದರೆ ಆ ಜಿಲ್ಲೆಯ ಜಿಲ್ಲಾಧಿಕಾರಿಗೆ ಅಥವಾ ಸಂದರ್ಭಾನುಸಾರ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಅಧಿಕಾರಿಗೆ ಆ ಪ್ರಮಾಣಪತ್ರವನ್ನು ಕಳುಹಿಸಬಹುದು ಮತ್ತು ಸದರಿ ಜಿಲ್ಲಾಧಿಕಾರಿಯು ಅಥವಾ ಸದರಿ ಅಧಿಕಾರಿಯು, ಅಂಥ ಪ್ರಮಾಣಪತ್ರವನ್ನು ಸ್ವೀಕರಿಸಿದ ಮೇಲೆ, ಅದರಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಭೂಕಂದಾಯದ ಬಾಕಿಯಂತೆ ಅಂಥ ವ್ಯಕ್ತಿಯಿಂದ ವಸೂಲಿ ಮಾಡಲು ಮುಂದುವರಿಯತಕ್ಕದ್ದು;

(ಎಫ್) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದರೂ, ಯುಕ್ತ ಅಧಿಕಾರಿಯು ಸೂಕ್ತ ಮ್ಯಾಜಿಸ್ಟ್ರೇಟ್‌ಗೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅದರಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಸದರಿ ಮ್ಯಾಜಿಸ್ಟ್ರೇಟರು ಒಂದು ವೇಳೆ ತಾನು ಜುಲ್ಮಾನೆಯನ್ನು ವಿಧಿಸಿದ್ದಿದ್ದರೆ ಹೇಗೆ ವಸೂಲಾಗುತ್ತಿತ್ತೋ ಹಾಗೆಯೇ ಅಂಥ ವ್ಯಕ್ತಿಯಿಂದ ವಸೂಲಿ ಮಾಡಲು ಮುಂದುವರಿಯತಕ್ಕದ್ದು.

(2) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮಗಳು ಅಥವಾ ವಿನಿಯಮಗಳ ಅಡಿಯಲ್ಲಿ ಬರೆದುಕೊಟ್ಟಿರುವ ಯಾವುದೇ ಬಾಂಡ್‌ನಲ್ಲಿನ ಅಥವಾ ಇತರೆ ಲಿಖಿತ ಪತ್ರದಲ್ಲಿನ ನಿಬಂಧನೆಗಳಲ್ಲಿ ಅಂಥ ಲಿಖಿತ ಪತ್ರದಂತೆ ಬಾಕಿಯಿರುವ ಯಾವುದೇ ಮೊತ್ತವನ್ನು ಉಪಪ್ರಕರಣ (1)ರಲ್ಲಿ ಹೇಳಿರುವ ವಿಧಾನದಲ್ಲಿ ವಸೂಲಿ ಮಾಡಬಹುದು ಎಂದು ಹೇಳಿದ್ದರೆ, ಆ ಮೊತ್ತವನ್ನು, ಯಾವುದೇ ಇತರ ವಸೂಲಿಯ ವಿಧಾನಗಳಿಗೆ ಬಾಧಕವಾಗದಂತೆ, ಆ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ವಸೂಲಿ ಮಾಡತಕ್ಕದ್ದು.

(3) ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮಗಳ ಅಡಿಯಲ್ಲಿ ಸರ್ಕಾರಕ್ಕೆ ಯಾರೇ ವ್ಯಕ್ತಿಯು ಯಾವುದೇ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡದ ಮೊತ್ತವನ್ನು ಸಂದಾಯ

ಮಾಡಬೇಕಿದ್ದರೆ ಮತ್ತು ಅದು ಸಂದಾಯವಾಗದೆ ಹಾಗೆಯೇ ಉಳಿದಿದ್ದರೆ, ರಾಜ್ಯ ತೆರಿಗೆಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆಯ ಯುಕ್ತ ಅಧಿಕಾರಿಯು ಸದರಿ ತೆರಿಗೆಯ ಬಾಕಿಯನ್ನು ವಸೂಲು ಮಾಡುವಾಗ, ಸದರಿ ವ್ಯಕ್ತಿಯಿಂದ ಆ ಮೊತ್ತವನ್ನು ರಾಜ್ಯ ತೆರಿಗೆಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆಯ ಬಾಕಿಯಂತೆಯೇ ವಸೂಲಿ ಮಾಡಬಹುದು ಮತ್ತು ಹಾಗೆ ವಸೂಲಿ ಮಾಡಿದ ಮೊತ್ತವನ್ನು ಸರ್ಕಾರಕ್ಕೆ ಮಾಡತಕ್ಕದ್ದು.

(4) ಉಪಪ್ರಕರಣ (3)ರ ಅಡಿಯಲ್ಲಿ ವಸೂಲಿ ಮಾಡಿದ ಮೊತ್ತವು ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಬಾಕಿಯಿರುವ ಮೊತ್ತಕ್ಕಿಂತ ಕಡಿಮೆಯಿದ್ದರೆ, ಆಯಾಯ ಸರ್ಕಾರಗಳ ಖಾತೆಗೆ ಜಮೆ ಮಾಡಬೇಕಾದ ಮೊತ್ತವು, ಪ್ರತಿಯೊಂದು ಅಂಥ ಸರ್ಕಾರಕ್ಕೆ ಬಾಕಿಯಿರುವ ಮೊತ್ತಗಳ ಅನುಪಾತಕ್ಕೆ ಅನುಗುಣವಾಗಿರತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, ವ್ಯಕ್ತಿ ಎಂಬ ಪದವು ಪ್ರಕರಣ 25ರ ಉಪಪ್ರಕರಣ (4) ಅಥವಾ ಸಂದರ್ಭಾನುಸಾರ ಉಪಪ್ರಕರಣ (5)ರಲ್ಲಿ ಉಲ್ಲೇಖಿಸಲಾದ "ವಿಶಿಷ್ಟ ವ್ಯಕ್ತಿತ್ವವುಳ್ಳ ವ್ಯಕ್ತಿಗಳನ್ನು" ಎಂಬ ಪದಗಳನ್ನು ಒಳಗೊಳ್ಳತಕ್ಕದ್ದು.

**80. ಕಂತುಗಳಲ್ಲಿ ತೆರಿಗೆ ಮತ್ತು ಇತರೇ ಮೊತ್ತಗಳ ಸಂದಾಯ.–** ಒಬ್ಬ ತೆರಿಗೆದಾಯಕ ವ್ಯಕ್ತಿಯು ಅರ್ಜಿಯನ್ನು ಸಲ್ಲಿಸಿದಾಗ, ಆಯುಕ್ತರು, ಯಾವುದೇ ರಿಟರ್ನ್‌ನಲ್ಲಿ ಸ್ವಯಂ–ನಿರ್ಧರಿತ ಬಾಧ್ಯತೆಯ ಪ್ರಕಾರ ಬಾಕಿಯಿರುವ ಮೊತ್ತವನ್ನು ಹೊರತುಪಡಿಸಿ, ಅಂಥ ವ್ಯಕ್ತಿಯಿಂದ ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ಯಾವುದೇ ಮೊತ್ತವನ್ನು ಸಂದಾಯ ಮಾಡಲು ಸಮಯವನ್ನು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ವಿಸ್ತರಿಸಬಹುದು ಅಥವಾ ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ಮಿತಿಗಳಿಗೆ ಒಳಪಟ್ಟು ಮತ್ತು ಪ್ರಕರಣ 50ರ ಅಡಿಯಲ್ಲಿ ಬಡ್ಡಿ ಸಂದಾಯದ ನಿಬಂಧನೆಗೆ ಒಳಪಟ್ಟು, ಇಪ್ಪತ್ನಾಲ್ಕಕ್ಕೆ ಮೀರದ ಮಾಸಿಕ ಕಂತುಗಳಲ್ಲಿ ಸಂದಾಯ ಮಾಡಲು ಅವಕಾಶ ನೀಡಬಹುದು:

ಪರಂತು, ಯಾವುದೇ ಒಂದು ಕಂತು ಅದರ ಗಡುವು ದಿನಾಂಕದಂದು ಸಂದಾಯವಾಗದೆ ಬಾಕಿ ಉಳಿದರೆ, ಅಂಥ ದಿನಾಂಕದಂದು ಸಂದಾಯ ಮಾಡಬೇಕಿರುವ ಬಾಕಿ ಉಳಿದ ಇಡೀ ಮೊತ್ತವು ಬಾಕಿಯಾಗತಕ್ಕದ್ದು ಮತ್ತು ಅದನ್ನು ಕೂಡಲೇ ಸಂದಾಯ ಮಾಡತಕ್ಕದ್ದು ಮತ್ತು ಮುಂದೆ ಯಾವುದೇ ನೋಟೀಸನ್ನು ಜಾರಿ ಮಾಡದೆಯೇ ಆ ವ್ಯಕ್ತಿಯು ವಸೂಲಿಗೆ ಗುರಿಯಾಗತಕ್ಕದ್ದು.

**81. ಕೆಲವೊಂದು ಪ್ರಕರಣಗಳಲ್ಲಿ ಸ್ವತ್ತಿನ ವರ್ಗಾವಣೆ ಅನೂರ್ಜಿತವಾಗುವುದು.–** ಯಾರೇ ವ್ಯಕ್ತಿಯು, ಯಾವುದೇ ಮೊತ್ತವು ಅವನಿಂದ ಬಾಕಿಯಾದ ನಂತರ, ಸರ್ಕಾರದ ರಾಜಸ್ವಕ್ಕೆ ಮೋಸ ಮಾಡುವ ಉದ್ದೇಶದಿಂದ ಅವನಿಗೆ ಸೇರಿದ ಅಥವಾ ಆತನ ಸ್ವಾಧೀನದಲ್ಲಿರುವ, ಸ್ವತ್ತಿನ ಮೇಲೆ ಋಣಭಾರವನ್ನು ಸೃಷ್ಟಿಸಿದ್ದಲ್ಲಿ ಅಥವಾ ಆತನ ಯಾವುದಾದರೂ ಆಸ್ತಿಗಳನ್ನು ಯಾರೇ ಇತರ ವ್ಯಕ್ತಿಯ ಪರವಾಗಿ ಮಾರಾಟದ, ಅಡಮಾನದ, ವಿನಿಮಯದ ಅಥವಾ ಯಾವುದೇ ಇತರೆ ಯಾವುದೇ ವರ್ಗಾವಣೆಯ ವಿಧಾನದ ಮೂಲಕ ಬಿಟ್ಟುಕೊಟ್ಟಿದ್ದರೆ, ಅಂಥ ಋಣಭಾರವು ಅಥವಾ ವರ್ಗಾವಣೆಯು ಸದರಿ ವ್ಯಕ್ತಿಯು ಸಂದಾಯ ಮಾಡಬೇಕಾದ ಯಾವುದೇ ತೆರಿಗೆಯ ಅಥವಾ ಯಾವುದೇ ಇತರೇ ಮೊತ್ತದ ಕ್ಲೇಮಿಗೆ ಸಂಬಂಧಿಸಿದಂತೆ ಅನೂರ್ಜಿತವಾಗತಕ್ಕದ್ದು:

ಪರಂತು, ಅಂಥ ಋಣಭಾರವು ಅಥವಾ ವರ್ಗಾವಣೆಯು, ಅದನ್ನು ಸಾಕಷ್ಟು ಪ್ರತಿಫಲಕ್ಕಾಗಿ, ಸದ್ಭಾವನೆಯಿಂದ ಮತ್ತು ಈ ಅಧಿನಿಯಮದ ಅಡಿಯಲ್ಲಿ ಅಂಥ ವ್ಯವಹರಣೆಗಳು ಇತ್ಯರ್ಥದಲ್ಲಿರುವುದರ ತಿಳುವಳಿಕೆಯಿಲ್ಲದೆ ಅಥವಾ ಸದರಿ ವ್ಯಕ್ತಿಯಿಂದ ಸಂದಾಯವಾಗಬೇಕಾದ ಅಂಥ ತೆರಿಗೆಯ ಅಥವಾ ಇತರೇ ಮೊತ್ತದ ಬಗ್ಗೆ ತಿಳುವಳಿಕೆಯಿಲ್ಲದೆ ಅಥವಾ ಯುಕ್ತ ಅಧಿಕಾರಿಯಿಂದ ಮುಂಚಿತವಾಗಿಯೇ ಅನುಮತಿ ಪಡೆದು ಮಾಡಿದ್ದರೆ ಅನೂರ್ಜಿತಗೊಳ್ಳತಕ್ಕದ್ದಲ್ಲ.

**82. ಸ್ವತ್ತಿನ ಮೇಲೆ ತೆರಿಗೆಯೇ ಮೊದಲನೇ ಋಣಭಾರವಾಗುತ್ತದೆ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ, ದಿವಾಳಿ ಮತ್ತು ಸಾಲ ತೀರಿಕೆ ಅಸಮರ್ಥತೆಯ ಸಂಹಿತೆ, 2016 (2016ರ 31)ರಲ್ಲಿ ಉಪಬಂಧಿಸಿರುವುದನ್ನುಳಿದು, ತೆರಿಗೆದಾಯಕ ವ್ಯಕ್ತಿಯು ಅಥವಾ ಇತರ ಯಾರೇ ವ್ಯಕ್ತಿಯು ಸರ್ಕಾರಕ್ಕೆ, ಅವನು ಸಂದಾಯ ಮಾಡಲು ಬದ್ಧನಿರುವ, ತೆರಿಗೆಯ, ಬಡ್ಡಿಯ ಅಥವಾ ದಂಡದ ಕಾರಣದಿಂದಾಗಿ ಸಂದಾಯ ಮಾಡಬೇಕಿರುವ ಯಾವುದೇ ಮೊತ್ತವು ಅಂಥ ತೆರಿಗೆದಾಯಕ ವ್ಯಕ್ತಿಯ ಅಥವಾ ಅಂಥ ವ್ಯಕ್ತಿಯ ಸ್ವತ್ತಿನ ಮೇಲೆ ಮೊದಲನೇ ಋಣಭಾರವಾಗಿರತಕ್ಕದ್ದು.

**83. ರಾಜಸ್ವದ ರಕ್ಷಣೆಗಾಗಿ ಕೆಲವೊಂದು ಪ್ರಕರಣಗಳಲ್ಲಿ ತಾತ್ಕಾಲಿಕ ಜಪ್ತಿ.–** (1) ಪ್ರಕರಣ 62ರ ಅಥವಾ ಪ್ರಕರಣ 63ರ ಅಥವಾ ಪ್ರಕರಣ 64ರ ಅಥವಾ ಪ್ರಕರಣ 67ರ ಅಥವಾ ಪ್ರಕರಣ 73ರ ಅಥವಾ ಪ್ರಕರಣ 74ರ ಅಡಿಯಲ್ಲಿ ಯಾವುದೇ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಸಮಯದಲ್ಲಿ, ಆಯುಕ್ತರು, ಸರ್ಕಾರದ ರಾಜಸ್ವದ ಹಿತಾಸಕ್ತಿಯ ರಕ್ಷಣೆಯ ಉದ್ದೇಶಕ್ಕಾಗಿ ತೆರಿಗೆದಾಯಕ ವ್ಯಕ್ತಿಗೆ ಸೇರಿದ ಬ್ಯಾಂಕ್ ಖಾತೆಯನ್ನು ಒಳಗೊಂಡಂತೆ ಯಾವುದೇ ಸ್ವತ್ತನ್ನು ಜಪ್ತಿ ಮಾಡುವುದು ಅಗತ್ಯ ಎಂದು ಅಭಿಪ್ರಾಯಪಟ್ಟರೆ, ಅವರು ಲಿಖಿತ ಆದೇಶದ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ತಾತ್ಕಾಲಿಕವಾಗಿ ಸ್ವತ್ತನ್ನು ಜಪ್ತಿ ಮಾಡಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ಮಾಡಿದ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿ ಮುಗಿದ ನಂತರ ಪ್ರತಿಯೊಂದು ಅಂಥ ತಾತ್ಕಾಲಿಕ ಜಪ್ತಿಯ ಪರಿಣಾಮವು ನಿಂತು ಹೋಗತಕ್ಕದ್ದು.

**84. ಕೆಲವೊಂದು ವಸೂಲಿ ವ್ಯವಹರಣೆಗಳ ಮುಂದುವರಿಕೆ ಮತ್ತು ಸಿಂಧುಗೊಳಿಸುವಿಕೆ.–** (1) ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಯಾವುದೇ ತೆರಿಗೆಗೆ, ದಂಡಕ್ಕೆ, ಬಡ್ಡಿಗೆ ಅಥವಾ ಯಾವುದೇ ಇತರ ಮೊತ್ತಕ್ಕೆ (ಈ ಪ್ರಕರಣದಲ್ಲಿ ಇನ್ನು ಮುಂದೆ "ಸರ್ಕಾರಿ ಬಾಕಿಗಳು" ಎಂದು ಉಲ್ಲೇಖಿಸಲಾಗಿದೆ) ಸಂಬಂಧಿಸಿದಂತೆ ತಗಾದೆ ನೋಟೀಸನ್ನು ಯಾವುದೇ ತೆರಿಗೆದಾಯಕ ವ್ಯಕ್ತಿಯ ಅಥವಾ ಯಾವುದೇ ಇತರ ವ್ಯಕ್ತಿಯ ಮೇಲೆ ಜಾರಿಗೊಳಿಸಿದ್ದಲ್ಲಿ ಮತ್ತು ಅಂಥ ಸರ್ಕಾರಿ ಬಾಕಿಗಳಿಗೆ ಸಂಬಂಧಿಸಿದಂತೆ ಯಾವುದೇ ಅಪೀಲು ಅಥವಾ ಪುನರೀಕ್ಷಣೆ ಅರ್ಜಿ ಸಲ್ಲಿಕೆಯಾಗಿದ್ದಲ್ಲಿ ಅಥವಾ ಇತರ ವ್ಯವಹರಣೆಗಳು ಪ್ರಾರಂಭಗೊಂಡಿದ್ದಲ್ಲಿ, ಆಗ,–

(ಎ) ಅಂಥ ಅಪೀಲಿನಲ್ಲಿ, ಪುನರೀಕ್ಷಣೆಯಲ್ಲಿ ಅಥವಾ ಇತರ ವ್ಯವಹರಣೆಗಳಲ್ಲಿ ಅಂಥ ಸರ್ಕಾರಿ ಬಾಕಿಗಳು ಹೆಚ್ಚಳವಾದಲ್ಲಿ, ಆಯುಕ್ತರು ಯಾರೇ ತೆರಿಗೆದಾಯಕ ವ್ಯಕ್ತಿಯ ಅಥವಾ ಯಾರೇ ಇತರ ವ್ಯಕ್ತಿಗೆ, ಅಂಥ ಸರ್ಕಾರಿ ಬಾಕಿಗಳಲ್ಲಿ ಎಷ್ಟು ಹೆಚ್ಚಳವಾಯಿತೋ ಅಷ್ಟು ಮೊತ್ತಕ್ಕೆ ಸಂಬಂಧಿಸಿದಂತೆ ಮಾತ್ರವೇ ಮತ್ತೊಂದು ತಗಾದೆ ನೋಟೀಸನ್ನು ಜಾರಿ ಮಾಡತಕ್ಕದ್ದು ಮತ್ತು ಅಂಥ ಅಪೀಲು, ಪುನರೀಕ್ಷಣೆ ಅಥವಾ ಇತರ ವ್ಯವಹರಣೆಗಳು ವಿಲೆಯಾಗುವುದಕ್ಕಿಂತ ಮೊದಲು ಅವನಿಗೆ ಜಾರಿ ಮಾಡಲಾಗಿದ್ದ ತಗಾದೆ ನೋಟೀಸಿನಲ್ಲಿ ಹೇಳಿರುವ ಅಂಥ ಸರ್ಕಾರಿ ಬಾಕಿಗಳಿಗೆ

ಸಂಬಂಧಿಸಿದ ಯಾವುದೇ ವಸೂಲಾತಿ ವ್ಯವಹರಣೆಗಳನ್ನು, ಯಾವುದೇ ಹೊಸದಾದ ತಗಾದೆ ನೋಟೀಸನ್ನು ಜಾರಿಗೊಳಿಸದೆಯೇ, ಅಂಥ ವಿಲೆಗಿಂತ ನಿಕಟಪೂರ್ವದಲ್ಲಿ ಅಂಥ ವ್ಯವಹರಣೆಗಳು ಯಾವ ಹಂತದಲ್ಲಿ ಇದ್ದವೋ ಆ ಹಂತದಿಂದಲೇ ಮುಂದುವರಿಸಬಹುದು.

(ಬಿ) ಅಂಥ ಅಪೀಲಿನಲ್ಲಿ, ಪುನರೀಕ್ಷಣೆಯಲ್ಲಿ ಅಥವಾ ಇತರ ವ್ಯವಹರಣೆಗಳಲ್ಲಿ ಅಂಥ ಸರ್ಕಾರಿ ಬಾಕಿಗಳು ಇಳಿಕೆಯಾದಲ್ಲಿ,–

(i) ಆಯುಕ್ತರಿಗೆ, ತೆರಿಗೆದಾಯಕ ವ್ಯಕ್ತಿಯ ಮೇಲೆ ಹೊಸದಾಗಿ ತಗಾದೆ ನೋಟೀಸನ್ನು ಜಾರಿ ಮಾಡುವುದು ಅಗತ್ಯವಿರತಕ್ಕದ್ದಲ್ಲ;

(ii) ಆಯುಕ್ತರು, ಅಂಥ ಇಳಿಕೆಯ ತಿಳುವಳಿಕೆಯನ್ನು ಆ ವ್ಯಕ್ತಿಗೆ ಮತ್ತು ವಸೂಲಾತಿ ವ್ಯವಹರಣೆಗಳು ಯಾವ ಪ್ರಾಧಿಕಾರದಲ್ಲಿ ಇತ್ಯರ್ಥದಲ್ಲಿರುವವೋ ಆ ಸೂಕ್ತ ಪ್ರಾಧಿಕಾರಕ್ಕೆ ನೀಡತಕ್ಕದ್ದು;

(iii) ಅಂಥ ಅಪೀಲು, ಪುನರೀಕ್ಷಣೆ ಅಥವಾ ಇತರ ವ್ಯವಹರಣೆಗಳು ವಿಲೆಯಾಗುವುದಕ್ಕಿಂತ ಮೊದಲು ಅವನಿಗೆ ಜಾರಿ ಮಾಡಲಾಗಿದ್ದ ತಗಾದೆಯ ಆಧಾರದ ಮೇಲೆ ಪ್ರಾರಂಭಿಸಿದ್ದ ಯಾವುದೇ ವಸೂಲಾತಿ ವ್ಯವಹರಣೆಗಳನ್ನು, ಅಂಥ ವಿಲೆಗಿಂತ ನಿಕಟಪೂರ್ವದಲ್ಲಿ ಅಂಥ ವ್ಯವಹಾರಗಳು ಯಾವ ಹಂತದಲ್ಲಿ ಇದ್ದವೋ ಆ ಹಂತದಿಂದಲೇ ಹಾಗೆ ಇಳಿಕೆ ಮಾಡಲಾದ ಮೊತ್ತಕ್ಕೆ ಸಂಬಂಧಿಸಿದಂತೆ ಮುಂದುವರಿಸಬಹುದು.

## ಅಧ್ಯಾಯ XVI

### ಕೆಲವೊಂದು ಸಂದರ್ಭಗಳಲ್ಲಿ ಸಂದಾಯ ಮಾಡಲು ಹೊಣೆಗಾರಿಕೆ

**85. ವ್ಯವಹಾರದ ವರ್ಗಾವಣೆಯಾದಾಗ ಹೊಣೆಗಾರಿಕೆ.–** (1) ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬದ್ಧನಾಗಿರುವ ಯಾರೇ ತೆರಿಗೆದಾಯಕ ವ್ಯಕ್ತಿಯು, ತನ್ನ ವ್ಯವಹಾರವನ್ನು, ಪೂರ್ಣವಾಗಿ ಅಥವಾ ಭಾಗಶಃ, ಮಾರಾಟದ, ದಾನದ, ಭೋಗ್ಯದ, ಬಿಟ್ಟು ಕೊಡುವ ಮತ್ತು ಪರವಾನಗಿ ನೀಡುವ, ಬಾಡಿಗೆ ಅಥವಾ ಇತರೆ ಯಾವುದೇ ವಿಧಾನದ ಮೂಲಕ ಇತರೆ ವ್ಯಕ್ತಿಗೆ ವರ್ಗಾಯಿಸಿದ್ದಲ್ಲಿ, ತೆರಿಗೆದಾಯಕ ವ್ಯಕ್ತಿಯು ಮತ್ತು ಯಾವ ವ್ಯಕ್ತಿಗೆ ಹಾಗೆ ವ್ಯವಹಾರ ವರ್ಗಾವಣೆಗೊಂಡಿರುತ್ತದೆಯೋ ಆ ವ್ಯಕ್ತಿಯು, ಅಂಥ ವರ್ಗಾವಣೆಯ ಸಮಯದವರೆಗೆ ತೆರಿಗೆದಾಯಕ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆಯನ್ನು, ಬಡ್ಡಿಯನ್ನು ಅಥವಾ ಯಾವುದೇ ದಂಡವನ್ನು, ಅಂಥ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು ಅಂಥ ವರ್ಗಾವಣೆಗೆ ಮೊದಲೇ ನಿರ್ಧರಿಸಿದ್ದರೆ ಆದರೆ ಅದು ಸಂದಾಯವಾಗದೇ ಉಳಿದಿದ್ದಲ್ಲಿ ಅಥವಾ ಉಳಿದ ಸಂದಾಯವಾಗಲೀ ಅಥವಾ ವರ್ಗಾವಣೆಯ ತದನಂತರ ನಿರ್ಧರಿಸಿರಲಿ, ಪೂರ್ಣವಾಗಿ ಅಥವಾ ಅಂಥ ವರ್ಗಾವಣೆಯಷ್ಟರ ಮಟ್ಟಿಗೆ ಸಂದಾಯಮಾಡುವುದಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬದ್ಧರಾಗಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಹೇಳಿರುವಂತೆ ಯಾವ ವ್ಯಕ್ತಿಗೆ ವ್ಯವಹಾರದ ವರ್ಗಾವಣೆಯಾಗಿದೆಯೋ ಆ ವ್ಯಕ್ತಿಯು, ಅಂಥ ವ್ಯವಹಾರವನ್ನು ತನ್ನ ಸ್ವಂತ ಹೆಸರಿನಲ್ಲಿಯಾಗಲಿ ಅಥವಾ ಇತರ ಯಾವುದೇ ಹೆಸರಿನಲ್ಲಾಗಲಿ ನಡೆಸುತ್ತಿದ್ದಲ್ಲಿ, ಅವನು, ಅಂಥ ವರ್ಗಾವಣೆಯ ದಿನಾಂಕದಿಂದ ಜಾರಿಗೆ ಬರುವಂತೆ, ಆತನು ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೇಲೆ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬದ್ಧನಾಗಿರತಕ್ಕದ್ದು ಮತ್ತು ಅವನು ಈ

ಅಧಿನಿಯಮದ ಅಡಿಯಲ್ಲಿ ನೋಂದಾಯಿತ ವ್ಯಕ್ತಿಯಾಗಿದ್ದರೆ, ನೋಂದಣಿ ಪ್ರಮಾಣಪತ್ರದ ತಿದ್ದುಪಡಿಗಾಗಿ ನಿಯಮಿಸಿದ ಸಮಯದ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

**86. ಏಜೆಂಟ್ ಮತ್ತು ಪ್ರಧಾನಕರ್ತನ ಹೊಣೆಗಾರಿಕೆ.–** ಯಾರೇ ಏಜೆಂಟನು ತನ್ನ ಪ್ರಧಾನಕರ್ತನ ಪರವಾಗಿ ಯಾವುದೇ ತೆರಿಗೆದಾಯಕ ಸರಕುಗಳನ್ನು ಪೂರೈಕೆ ಮಾಡಿದರೆ ಅಥವಾ ಸ್ವೀಕರಿಸಿದರೆ, ಅಂಥ ಏಜೆಂಟ್ ಮತ್ತು ಆತನ ಪ್ರಧಾನಕರ್ತ ಇಬ್ಬರೂ, ಈ ಅಧಿನಿಯಮದ ಅಡಿಯಲ್ಲಿ ಅಂಥ ಸರಕುಗಳ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬದ್ಧರಾಗಿರತಕ್ಕದ್ದು.

**87. ಕಂಪನಿಗಳ ಸಮ್ಮಿಲನ ಅಥವಾ ವಿಲೀನದ ಸಂದರ್ಭದಲ್ಲಿ ಹೊಣೆಗಾರಿಕೆ.–** (1) ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಆದೇಶಕ್ಕೆ ಅನುಗುಣವಾಗಿ ಅಥವಾ ಅನ್ಯಥಾ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಕಂಪನಿಗಳು ಸಮ್ಮಿಲನಗೊಂಡಿದ್ದಾಗ ಅಥವಾ ವಿಲೀನಗೊಂಡಿದ್ದಾಗ ಮತ್ತು ಆ ಆದೇಶದ ದಿನಾಂಕಕ್ಕಿಂತ ಮುಂಚಿತದ ದಿನಾಂಕದಿಂದ ಆ ಆದೇಶವು ಜಾರಿಗೆ ಬರಬೇಕಿದ್ದಾಗ ಮತ್ತು ಅಂಥ ಕಂಪೆನಿಗಳಲ್ಲಿ ಯಾವುದೇ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಕಂಪನಿಗಳು ಒಂದು ಇನ್ನೊಂದಕ್ಕೆ ಪೂರೈಕೆ ಮಾಡಿದ್ದರೆ, ಆ ಆದೇಶವು ಜಾರಿಯಾಗುವ ದಿನಾಂಕದಿಂದ ಪ್ರಾರಂಭಗೊಂಡು ಆದೇಶದ ದಿನಾಂಕದವರೆಗಿನ ಅವಧಿಯಲ್ಲಿ, ಯಾವುದೇ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಅಥವಾ ಯಾವುದೇ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಒಂದರಿಂದ ಇನ್ನೊಂದು ಸ್ವೀಕರಿಸಿದ್ದಲ್ಲಿ, ಆಗ ಅಂಥ ಪೂರೈಕೆ ಅಥವಾ ಸ್ವೀಕೃತಿಯ ವ್ಯವಹಾರಗಳನ್ನು ಸಂಬಂಧಪಟ್ಟ ಕಂಪನಿಗಳ ಪೂರೈಕೆ ಅಥವಾ ಸ್ವೀಕೃತಿಯ ವಹಿವಾಟಿಗೆ ಸೇರಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವುಗಳು ತೆರಿಗೆಗೆ ಗುರಿಯಾಗತಕ್ಕದ್ದು.

(2) ಸದರಿ ಆದೇಶದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಅಂಥ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಕಂಪನಿಗಳನ್ನು, ಸದರಿ ಆದೇಶದ ದಿನಾಂಕದವರೆಗಿನ ಅವಧಿಗೆ, ವಿಭಿನ್ನ ಕಂಪನಿಗಳು ಎಂದು ಪರಿಗಣಿಸತಕ್ಕದ್ದು ಮತ್ತು ಸದರಿ ಆದೇಶದ ದಿನಾಂಕದಿಂದ ಜಾರಿಗೆ ಬರುವಂತೆ ಸದರಿ ಕಂಪನಿಗಳ ನೋಂದಣಿ ಪ್ರಮಾಣಪತ್ರಗಳನ್ನು ರದ್ದುಗೊಳಿಸತಕ್ಕದ್ದು.

**88. ಮುಚ್ಚುವ ಸ್ಥಿತಿಯಲ್ಲಿರುವ ಕಂಪನಿಯ ಹೊಣೆಗಾರಿಕೆ.–** (1) ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಆದೇಶದಿಂದಾಗಲಿ ಅಥವಾ ಅನ್ಯಥಾ ಯಾವುದೇ ಕಂಪನಿಯನ್ನು ಮುಚ್ಚುತ್ತಿರುವಾಗ, ಕಂಪನಿಯ ಯಾವುದೇ ಸ್ವತ್ತುಗಳ ರಿಸೀವರ್ ಎಂದು ನೇಮಕಗೊಂಡಿರುವ ಪ್ರತಿಯೊಬ್ಬ ವ್ಯಕ್ತಿಯು (ಇನ್ನು ಮುಂದೆ "ಲಿಕ್ವಿಡೇಟರ್" ಎಂದು ಉಲ್ಲೇಖಿಸಲಾಗಿದೆ), ಆತನು ನೇಮಕಗೊಂಡ ಮೂವತ್ತು ದಿನಗಳ ಒಳಗಾಗಿ, ಆಯುಕ್ತರಿಗೆ ತನ್ನ ನೇಮಕದ ಮಾಹಿತಿಯನ್ನು ತಿಳಿಸತಕ್ಕದ್ದು.

(2) ಆಯುಕ್ತರು, ತಾನು ಸೂಕ್ತ ಎಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ನಂತರ ಅಥವಾ ಅಂಥ ಮಾಹಿತಿಯನ್ನು ಪಡೆದುಕೊಂಡ ನಂತರ, ಲಿಕ್ವಿಡೇಟರ್‌ನ ನೇಮಕದ ಮಾಹಿತಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ಲಿಕ್ವಿಡೇಟರ್‌ನನ್ನು ಮತ್ತು ಯಾವ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡನೆಯನ್ನು ಆಗ ಅಥವಾ ತದನಂತರದಲ್ಲಿ ಕಂಪನಿಯು ಸಂದಾಯ ಮಾಡಬೇಕಾಗುತ್ತದೋ ಆ ಯಾವುದೇ ತೆರಿಗೆಗೆ ಬಡ್ಡಿ ಅಥವಾ ದಂಡನೆಗೆ ಏರ್ಪಾಡು ಮಾಡುವುದಕ್ಕೆ ಎಷ್ಟು ಮೊತ್ತ ಸಾಕಾಗುತ್ತದೆಂದು, ಆಯುಕ್ತರು ಅಭಿಪ್ರಾಯಪಡುವರೋ ಆ ಮೊತ್ತವನ್ನು ಅಧಿಸೂಚಿಸತಕ್ಕದ್ದು.

(3) ಯಾವುದೇ ಖಾಸಗಿ ಕಂಪನಿಯನ್ನು ಮುಚ್ಚಿದಾಗ ಮತ್ತು ಅದನ್ನು ಮುಚ್ಚುವುದಕ್ಕಿಂತ ಮುಂಚಿತವಾಗಿ ಅಥವಾ ಮುಚ್ಚುತ್ತಿರುವಾಗ ಅಥವಾ ನಂತರದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಆ ಕಂಪನಿಯ ಮೇಲೆ ಯಾವುದೇ ಅವಧಿಗೆ ನಿರ್ಧರಿಸಿದ ಯಾವುದೇ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು ವಸೂಲಿ ಮಾಡಲಿಕ್ಕಾಗದಿದ್ದರೆ, ಆಗ, ಯಾವ ಅವಧಿಗೆ ತೆರಿಗೆ ಬಾಕಿಯಿತ್ತೋ ಆ ಅವಧಿಯಲ್ಲಿನ ಯಾವುದೇ ಸಮಯದಲ್ಲಿ, ಅಂಥ ಕಂಪನಿಯ ನಿರ್ದೇಶಕನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ವಸೂಲಿ ಮಾಡಲಿಕ್ಕಾಗದಿರುವುದು ಕಂಪನಿಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಆತನಿಂದಾದ ಅತಿಯಾದ ನಿರ್ಲಕ್ಷ್ಯತೆಯ, ಅಕ್ರಮ ಕಾರ್ಯದ ಅಥವಾ ಕರ್ತವ್ಯದ ಉಲ್ಲಂಘನೆಯ ಕಾರಣದಿಂದಾದುದಲ್ಲ ಎನ್ನುವುದನ್ನು ಆಯುಕ್ತರಿಗೆ ಮನದಟ್ಟಾಗುವಂತೆ ರುಜುವಾತುಪಡಿಸಿದ ಹೊರತು ಅಂಥ ತೆರಿಗೆಯ, ಬಡ್ಡಿಯ ಅಥವಾ ದಂಡದ ಸಂದಾಯಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬದ್ಧನಾಗಿರತಕ್ಕದ್ದು.

**89. ಖಾಸಗಿ ಕಂಪನಿಯ ನಿರ್ದೇಶಕರುಗಳ ಹೊಣೆಗಾರಿಕೆ.–** (1) ಕಂಪನಿ ಅಧಿನಿಯಮ, 2013 (2013ರ 18)ರಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ಅವಧಿಯಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಯಾವುದೇ ಪೂರೈಕೆಗೆ ಸಂಬಂಧಿಸಿದಂತೆ ಖಾಸಗಿ ಕಂಪನಿಯಿಂದ ಬಾಕಿಯಿರುವ ಯಾವುದೇ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು ವಸೂಲಿ ಮಾಡಲಿಕ್ಕಾಗದಿದ್ದರೆ, ಆಗ, ಅವಧಿಯಲ್ಲಿ ಖಾಸಗಿ ಕಂಪನಿಯ ನಿರ್ದೇಶಕನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ವಸೂಲಿ ಮಾಡಲಿಕ್ಕಾಗದಿರುವುದು ಕಂಪನಿಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಆತನಿಂದಾದ ಅತಿಯಾದ ನಿರ್ಲಕ್ಷ್ಯತೆ, ಅಕ್ರಮ ಕಾರ್ಯ ಅಥವಾ ಕರ್ತವ್ಯ ಉಲ್ಲಂಘನೆಯ ಕಾರಣದಿಂದಾದದುದಲ್ಲ ಎನ್ನುವುದನ್ನು ಅವನು ರುಜುವಾತುಪಡಿಸಿದ ಹೊರತು ಅಂಥ ತೆರಿಗೆಯ, ಬಡ್ಡಿಯ ಅಥವಾ ದಂಡದ ಸಂದಾಯಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬದ್ಧನಾಗಿರತಕ್ಕದ್ದು.

(2) ಖಾಸಗಿ ಕಂಪನಿಯು ಸಾರ್ವಜನಿಕ ಕಂಪನಿಯಾಗಿ ಪರಿವರ್ತನೆಗೊಂಡಾಗ, ಅಂಥ ಕಂಪನಿಯು ಖಾಸಗಿ ಕಂಪನಿಯಾಗಿದ್ದಂಥ ಯಾವುದೇ ಅವಧಿಯಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಯಾವುದೇ ಪೂರೈಕೆಗೆ ಸಂಬಂಧಿಸಿದಂತೆ ಬಾಕಿಯಿರುವ ಯಾವುದೇ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು ಪರಿವರ್ತನೆಗಿಂತ ಮುಂಚಿತವಾಗಿ ವಸೂಲಿ ಮಾಡಲಿಕ್ಕಾಗದಿದ್ದರೆ, ಆಗ, ಅಂಥ ಖಾಸಗಿ ಕಂಪನಿಯು ಮಾಡಿದ ಯಾವುದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಯಾವುದೇ ಪೂರೈಕೆಗೆ ಸಂಬಂಧಿಸಿದಂತೆ ಬಾಕಿಯಿರುವ ತೆರಿಗೆಗೆ, ಬಡ್ಡಿಗೆ ಅಥವಾ ದಂಡಕ್ಕೆ ಸಂಬಂಧಪಟ್ಟಂತೆ ಅಂಥ ಖಾಸಗಿ ಕಂಪನಿಯ ನಿರ್ದೇಶಕನಾಗಿದ್ದ ಯಾರೇ ವ್ಯಕ್ತಿಗೆ ಉಪಪ್ರಕರಣ (1)ರಲ್ಲಿ ಒಳಗೊಂಡಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ:

ಪರಂತು, ಅಂಥ ನಿರ್ದೇಶಕನ ಮೇಲೆಯೇ ವಿಧಿಸಿದ ದಂಡಕ್ಕೆ ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

**90. ತೆರಿಗೆ ಸಂದಾಯ ಮಾಡುವುದಕ್ಕೆ ಪಾಲುದಾರಿಕಾ ಸಂಸ್ಥೆಯ ಪಾಲುದಾರರ ಹೊಣೆಗಾರಿಕೆ.–** ಯಾವುದೇ ಒಪ್ಪಂದದಲ್ಲಿ ತದ್ವಿರುದ್ಧವಾದುದು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಯಾವುದೇ ಪಾಲುದಾರಿಕಾ ಸಂಸ್ಥೆಯು ಈ ಅಧಿನಿಯಮದ ಅಡಿಯಲ್ಲಿ ತೆರಿಗೆ, ಬಡ್ಡಿ ಅಥವಾ ದಂಡದ ಸಂದಾಯಕ್ಕೆ

ಬದ್ಧವಾಗಿದ್ದರೆ, ಆ ಪಾಲುದಾರಿಕಾ ಸಂಸ್ಥೆಯು ಹಾಗೂ ಆ ಪಾಲುದಾರಿಕಾ ಸಂಸ್ಥೆಯ ಪ್ರತಿಯೊಬ್ಬ ಪಾಲುದಾರರು ಅಂಥ ಸಂದಾಯಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬದ್ಧರಾಗಿರತಕ್ಕದ್ದು:

ಪರಂತು, ಯಾವುದೇ ಪಾಲುದಾರನು ಪಾಲುದಾರಿಕಾ ಸಂಸ್ಥೆಯಿಂದ ನಿವೃತ್ತಿಹೊಂದಿದ್ದಲ್ಲಿ, ಅವನು ಅಥವಾ ಪಾಲುದಾರಿಕಾ ಸಂಸ್ಥೆಯು ಸದರಿ ಪಾಲುದಾರನ ನಿವೃತ್ತಿಯ ದಿನಾಂಕವನ್ನು ಆ ಬಗೆಗಿನ ಲಿಖಿತ ನೋಟೀಸಿನ ಮೂಲಕ ಆಯುಕ್ತರಿಗೆ ತಿಳಿಸತಕ್ಕದ್ದು ಮತ್ತು ಅಂಥ ಪಾಲುದಾರನು ಆತನ ನಿವೃತ್ತಿಯ ದಿನಾಂಕದವರೆಗೆ, ಆ ದಿನಾಂಕದಂದು ತೆರಿಗೆಯು, ಬಡ್ಡಿಯು ಅಥವಾ ದಂಡವು ನಿರ್ಧಾರವಾಗಿರಲಿ ಅಥವಾ ನಿರ್ಧಾರವಾಗಿರದಿರಲಿ, ಬಾಕಿಯಿರುವ ತೆರಿಗೆ, ಬಡ್ಡಿ ಅಥವಾ ದಂಡದ ಸಂದಾಯಕ್ಕೆ ಬದ್ಧರಾಗಿರತಕ್ಕದ್ದು:

ಮತ್ತು ಪರಂತು, ನಿವೃತ್ತಿಯ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಅಂಥ ಮಾಹಿತಿಯನ್ನು ನೀಡದಿದ್ದರೆ, ಮೊದಲನೇ ಪರಂತುಕದ ಅಡಿಯಲ್ಲಿನ ಅಂಥ ಪಾಲುದಾರನ ಬಾಧ್ಯತೆಯು ಆಯುಕ್ತರಿಂದ ಅಂಥ ಮಾಹಿತಿಯು ಸ್ವೀಕೃತವಾಗುವ ದಿನಾಂಕದವರೆಗೂ ಮುಂದುವರಿಯತಕ್ಕದ್ದು.

**91. ಪೋಷಕರು, ಟ್ರಸ್ಟಿಗಳು, ಮುಂತಾದವರ ಹೊಣೆಗಾರಿಕೆ.–** ಯಾವ ವ್ಯವಹಾರಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಯಾವುದೇ ತೆರಿಗೆಗೆ, ಬಡ್ಡಿಗೆ ಅಥವಾ ದಂಡವನ್ನು ಸಂದಾಯ ಮಾಡಬೇಕಾಗಿದೆಯೋ ವ್ಯವಹಾರವನ್ನು ಅಪ್ರಾಪ್ತನ ವಯಸ್ಕನ ಅಥವಾ ಇತರ ಅಸಮರ್ಥ ವ್ಯಕ್ತಿಯ ಪರವಾಗಿ ಮತ್ತು ಅಂಥ ಅಪ್ರಾಪ್ತ ವಯಸ್ಕನ ಅಥವಾ ಇತರ ಅಸಮರ್ಥ ವ್ಯಕ್ತಿಯ ಅನುಕೂಲಕ್ಕಾಗಿ ಯಾರೇ ಪೋಷಕನು, ಟ್ರಸ್ಟಿಯು ಅಥವಾ ಏಜೆಂಟನು ನಡೆಸಿದ್ದರೆ, ಆ ಯಾವುದೇ ಅಪ್ರಾಪ್ತ ವಯಸ್ಕನು ಅಥವಾ ಇತರ ಅಸಮರ್ಥ ವ್ಯಕ್ತಿಯು, ಪ್ರಾಪ್ತ ವಯಸ್ಕನಾಗಿದ್ದಿದ್ದರೆ ಅಥವಾ ಸಮರ್ಥ ವ್ಯಕ್ತಿಯಾಗಿದ್ದಿದ್ದರೆ ಮತ್ತು ಆತನೇ ವ್ಯವಹಾರವನ್ನು ಸ್ವತಃ ನಡೆಸಿದ್ದಿದ್ದರೆ ನಿರ್ಧರಿಸಬಹುದಿತ್ತೋ ಮತ್ತು ವಸೂಲಿ ಮಾಡಬಹುದಿತ್ತೋ ಆ ರೀತಿಯಲ್ಲಿ ಮತ್ತು ಅಷ್ಟರ ಮಟ್ಟಿಗೆ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು ಅಂಥ ಪೋಷಕನ, ಟ್ರಸ್ಟಿಯ ಅಥವಾ ಏಜೆಂಟನ ಮೇಲೆ ವಿಧಿಸತಕ್ಕದ್ದು ಮತ್ತು ಅದು, ವಸೂಲಿ ಮಾಡಬಹುದಾದುದಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಎಲ್ಲಾ ಉಪಬಂಧಗಳು ಹಾಗೂ ಅದರ ಅಡಿಯಲ್ಲಿ ರಚಿಸಿದ ನಿಯಮಗಳು ತದಕ್ಕನುಸಾರವಾಗಿ ಅನ್ವಯವಾಗತಕ್ಕದ್ದು.

**92. ಕೋರ್ಟ್ ಆಫ್ ವಾರ್ಡ್ಸ್, ಮುಂತಾದವರ ಹೊಣೆಗಾರಿಕೆ.–** ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಯಾವುದೇ ತೆರಿಗೆಗೆ, ಬಡ್ಡಿಗೆ ಅಥವಾ ದಂಡಕ್ಕೆ ಸಂಬಂಧಿಸಿದ ವ್ಯವಹಾರದ ಮಾಲಿಕತ್ವವನ್ನು ಹೊಂದಿರುವ ತೆರಿಗೆದಾಯಕ ವ್ಯಕ್ತಿಯ ಯಾವುದೇ ಭೂಮಿಕಾಣಿಯು (estate) ಅಥವಾ ಭೂಮಿಕಾಣಿಯ ಯಾವುದೇ ಭಾಗವು, ನ್ಯಾಯಾಲಯದ ಯಾವುದೇ ಆದೇಶದ ಮೂಲಕ ಅಥವಾ ಆ ಆದೇಶದಂತೆ ನೇಮಕಗೊಂಡಿರುವ ಕೋರ್ಟ್ ಆಫ್ ವಾರ್ಡ್ಸ್, ಅಡ್ಮಿನಿಸ್ಟ್ರೇಟರ್ ಜನರಲ್, ಅಧಿಕೃತ ಟ್ರಸ್ಟಿ ಅಥವಾ ಯಾರೇ ರಿಸೀವರ್‌ನ ಅಥವಾ ಮ್ಯಾನೇಜರನ (ಆತನ ಪದನಾಮವು ಏನೇ ಇರಲಿ, ವಾಸ್ತವಿಕವಾಗಿ ವ್ಯವಹಾರವನ್ನು ನಿರ್ವಹಿಸುವ ಯಾರೇ ವ್ಯಕ್ತಿಯನ್ನು ಒಳಗೊಂಡಂತೆ) ನಿಯಂತ್ರಣದಲ್ಲಿದ್ದಲ್ಲಿ, ತೆರಿಗೆದಾಯಕ ವ್ಯಕ್ತಿಯು ಆತನೇ ಸ್ವತಃ ವ್ಯವಹಾರವನ್ನು ನಡೆಸುತ್ತಿದ್ದರೆ ಹೇಗೆ ಮತ್ತು ಯಾವ ರೀತಿಯಲ್ಲಿ ಅಂಥ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು ನಿರ್ಧರಿಸಬಹುದಿತ್ತೋ ಮತ್ತು ವಸೂಲಿ ಮಾಡಬಹುದಿತ್ತೋ ಆ ರೀತಿಯಲ್ಲಿ ಮತ್ತು ಅಷ್ಟರ ಮಟ್ಟಿಗೆ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು ಅಂಥ ಕೋರ್ಟ್ ಆಫ್ ವಾರ್ಡ್ಸ್ ನ ಅಥವಾ ಅಡ್ಮಿನಿಸ್ಟ್ರೇಟರ್

ಜನರಲ್‌ರ ಅಥವಾ ಅಧಿಕೃತ ಟ್ರಸ್ಟಿಯ ಅಥವಾ ಯಾರೇ ರಿಸೀವರ್‌ನ ಅಥವಾ ಮ್ಯಾನೇಜರ್ ಮೇಲೆ ವಿಧಿಸತಕ್ಕದ್ದು ಮತ್ತು ಅದು ವಸೂಲಿ ಮಾಡಬಹುದಾದುದಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಎಲ್ಲಾ ಉಪಬಂಧಗಳು ಹಾಗೂ ಅದರ ಅಡಿಯಲ್ಲಿ ರಚಿಸಿದ ನಿಯಮಗಳು ಆಗಬಹುದಾದಷ್ಟು ಮಟ್ಟಿಗೆ ತದಕ್ಕನುಸಾರವಾಗಿ ಅನ್ವಯವಾಗತಕ್ಕದ್ದು.

**93. ನಿರ್ದಿಷ್ಟ ಪ್ರಕರಣಗಳಲ್ಲಿ ತೆರಿಗೆ, ಬಡ್ಡಿ ಅಥವಾ ದಂಡದ ಸಂದಾಯದ ಹೊಣೆಗಾರಿಕೆಗೆ ಸಂಬಂಧಿಸಿದ ವಿಶೇಷ ಉಪಬಂಧಗಳು.–** (1) ದಿವಾಳಿ ಮತ್ತು ಸಾಲ ತೀರಿಕೆಯ ಅಸಮರ್ಥತೆ ಸಂಹಿತೆ, 2016 (2016ರ 31)ರಲ್ಲಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆಯ, ಬಡ್ಡಿಯ ಅಥವಾ ದಂಡದ ಸಂದಾಯಕ್ಕೆ ಬದ್ಧನಾಗಿರುವ ವ್ಯಕ್ತಿಯು ಮರಣಿಸಿದಾಗ, ಅಂಥ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು, ಆತನ ಮರಣಕ್ಕಿಂತ ಮುಂಚಿತವಾಗಿ ನಿರ್ಧರಿಸಿದ್ದರೆ ಆದರೆ ಅದು ಸಂದಾಯವಾಗದೇ ಉಳಿದಿದ್ದಲ್ಲಿ ಅಥವಾ ಅದನ್ನು ಆತನ ಮರಣದ ನಂತರ ನಿರ್ಧರಿಸಿರಲಿ,–

(ಎ) ಆ ವ್ಯಕ್ತಿಯು ನಡೆಸುತ್ತಿದ್ದ ವ್ಯವಹಾರವನ್ನು, ಆತನ ಮರಣದ ನಂತರ ಆತನ ಕಾನೂನುಸಮ್ಮತ ಪ್ರತಿನಿಧಿಯು ಅಥವಾ ಯಾವುದೇ ಇತರೆ ವ್ಯಕ್ತಿಯು ಮುಂದುವರಿಸಿದ್ದರೆ, ಈ ಅಧಿನಿಯಮದ ಅಡಿಯಲ್ಲಿ ಅಂಥ ವ್ಯಕ್ತಿಯಿಂದ ಬಾಕಿಯಿರುವ ಯಾವುದೇ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು ಸಂದಾಯ ಮಾಡುವುದಕ್ಕೆ ಅಂಥ ಕಾನೂನುಸಮ್ಮತ ಪ್ರತಿನಿಧಿಯು ಅಥವಾ ಇತರ ವ್ಯಕ್ತಿಯು ಬದ್ಧನಾಗಿರತಕ್ಕದ್ದು; ಮತ್ತು

(ಬಿ) ಆ ವ್ಯಕ್ತಿಯು ನಡೆಸುತ್ತಿದ್ದ ವ್ಯವಹಾರವು, ಆತನ ಮರಣಕ್ಕಿಂತ ಮುಂಚಿತವಾಗಲಿ ಅಥವಾ ನಂತರವಾಗಲಿ ಮುಂದುವರಿಕೆಯಾಗಿರದಿದ್ದರೆ, ಅಂಥ ವ್ಯಕ್ತಿಯಿಂದ ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡದ ಖರ್ಚನ್ನು ಮೃತ ವ್ಯಕ್ತಿಯ ಭೂಮಿಕಾಣಿಯಲ್ಲಿ ಎಷ್ಟನ್ನು ಭರಿಸಲು ಸಾಕಾಗುತ್ತದೋ ಆ ಮಟ್ಟಿಗೆ ಸಂದಾಯ ಮಾಡಲು ಆತನ ಕಾನೂನುಸಮ್ಮತ ಪ್ರತಿನಿಧಿಯು ಬದ್ಧನಾಗಿರತಕ್ಕದ್ದು

– ಅಂಥ ಸಂದಾಯ ಮಾಡದ ತೆರಿಗೆ, ಬಡ್ಡಿ ಅಥವಾ ದಂಡ ಆತನ (ತೆರಿಗೆದಾಯಕ ವ್ಯಕ್ತಿಯ) ಮರಣದ ಮುಂಚೆಯೇ ನಿರ್ಧರಿಸಿರಲಿ ಅಥವಾ ಮರಣದ ನಂತರ ನಿರ್ಧಾರ ಮಾಡಲಿ.

(2) ದಿವಾಳಿ ಮತ್ತು ಸಾಲ ತೀರಿಕೆಯ ಅಸಮರ್ಥತೆಯ ಸಂಹಿತೆ, 2016 (2016ರ 31)ರಲ್ಲಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆಯ, ಬಡ್ಡಿಯ ಅಥವಾ ದಂಡದ ಸಂದಾಯಕ್ಕೆ ಬದ್ಧನಾಗಿರುವ ತೆರಿಗೆದಾಯಕ ವ್ಯಕ್ತಿಯು, ಹಿಂದೂ ಅವಿಭಾಜ್ಯ ಕುಟುಂಬವಾಗಿದ್ದರೆ ಅಥವಾ ವ್ಯಕ್ತಿಗಳ ಸಂಘವಾಗಿದ್ದರೆ, ಆ ಹಿಂದೂ ಅವಿಭಾಜ್ಯ ಕುಟುಂಬ ಅಥವಾ ವ್ಯಕ್ತಿಗಳ ಸಂಘದ ಸ್ವತ್ತು, ಹಲವಾರು ಸದಸ್ಯರ ಅಥವಾ ಸದಸ್ಯರ ಸಮೂಹಗಳ ನಡುವೆ ವಿಭಜಿತವಾಗಿದ್ದರೆ, ಆಗ ವಿಭಜನೆಯ ಸಮಯದವರೆಗೆ ಈ ಅಧಿನಿಯಮದ ಅಡಿಯಲ್ಲಿ ತೆರಿಗೆದಾಯಕ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು, ಅಂಥ ತೆರಿಗೆಯು, ಬಡ್ಡಿಯು ಅಥವಾ ದಂಡವು ವಿಭಜನೆಯಾಗುವುದಕ್ಕಿಂತ ಮುಂಚಿತವಾಗಿ ನಿರ್ಧರಿಸಿದ್ದರೆ, ಆದರೆ ಸಂದಾಯವಾಗದೇ ಉಳಿದಿರಲಿ ಆಥವಾ ವಿಭಜನೆಯಾದ ನಂತರ ಅದನ್ನು ನಿರ್ಧರಿಸಿರಲಿ, ಸಂದಾಯ ಮಾಡುವುದಕ್ಕೆ ಪ್ರತಿಯೊಬ್ಬ ಸದಸ್ಯನು ಅಥವಾ ಸದಸ್ಯರ ಸಮೂಹವು ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬದ್ಧರಾಗಿರತಕ್ಕದ್ದು.

(3) ದಿವಾಳಿ ಮತ್ತು ಸಾಲ ತೀರಿಕೆಯ ಅಸಮರ್ಥತೆಯ ಸಂಹಿತೆ, 2016 (2016ರ 31) ರಲ್ಲಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆಯ, ಬಡ್ಡಿಯ ಅಥವಾ ದಂಡದ ಸಂದಾಯಕ್ಕೆ ಬದ್ಧನಾಗಿರುವ ತೆರಿಗೆದಾಯಕ ವ್ಯಕ್ತಿಯು, ಪಾಲುದಾರಿಕಾ ಸಂಸ್ಥೆಯಾಗಿದ್ದರೆ ಮತ್ತು ಆ ಪಾಲುದಾರಿಕಾ ಸಂಸ್ಥೆ ವಿಸರ್ಜನೆಯಾಗಿದ್ದಲ್ಲಿ, ಆಗ, ವಿಸರ್ಜನೆಯಾಗುವ ಸಮಯದವರೆಗೆ ಈ ಅಧಿನಿಯಮದ ಅಡಿಯಲ್ಲಿ ಪಾಲುದಾರಿಕಾ ಸಂಸ್ಥೆಯಿಂದ ಬಾಕಿಯಿರುವ ಯಾವುದೇ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು, ಅಂಥ ತೆರಿಗೆಯು, ಬಡ್ಡಿಯು ಅಥವಾ ದಂಡವು ವಿಸರ್ಜನೆಗಿಂತ ಮುಂಚಿತವಾಗಿ ನಿರ್ಧರಿಸಿದ್ದರೆ ಆದರೆ ಅದು ಸಂದಾಯವಾಗದೇ ಉಳಿದಿರಲಿ ಆಥವಾ ಅದನ್ನು ವಿಸರ್ಜನೆಯ ನಂತರ ನಿರ್ಧರಿಸಿರಲಿ, ಸಂದಾಯ ಮಾಡುವುದಕ್ಕೆ ಪಾಲುದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬದ್ಧನಾಗಿರತಕ್ಕದ್ದು.

(4) ದಿವಾಳಿ ಮತ್ತು ಸಾಲ ತೀರಿಕೆಯ ಅಸಮರ್ಥತೆಯ ಸಂಹಿತೆ, 2016 (2016ರ 31)ರಲ್ಲಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡದ ಸಂದಾಯ ಮಾಡುವುದಕ್ಕೆ ಬದ್ಧನಾಗಿರುವ ತೆರಿಗೆದಾಯಕ ವ್ಯಕ್ತಿಯು,–

(ಎ) ಯಾವ ಪೋಷಿತ ಪರವಾಗಿ ಪಾಲಕನು ವ್ಯವಹಾರವನ್ನು ನಡೆಸುತ್ತಿರುವನೋ, ಆ ಪೋಷಿತನ ಪಾಲಕನಾಗಿದ್ದರೆ; ಅಥವಾ

(ಬಿ) ಫಲಾನುಭವಿಗಾಗಿ ಟ್ರಸ್ಟ್ ನ ಅಧೀನದಲ್ಲಿ ವ್ಯವಹಾರವನ್ನು ನಡೆಸುತ್ತಿರುವ ಟ್ರಸ್ಟಿಯಾಗಿದ್ದಲ್ಲಿ

– ಆಗ, ಪಾಲಕತ್ವ ಅಥವಾ ಟ್ರಸ್ಟು ಅಂತ್ಯಗೊಂಡಿದ್ದರೆ, ಪಾಲಕತ್ವ ಅಥವಾ ಟ್ರಸ್ಟು ಅಂತ್ಯಗೊಳ್ಳುವ ಸಮಯದವರೆಗೆ ಈ ಅಧಿನಿಯಮದ ಅಡಿಯಲ್ಲಿ ಆ ತೆರಿಗೆದಾಯಕ ವ್ಯಕ್ತಿಯಿಂದ ಬಾಕಿಯಿರುವ ಯಾವುದೇ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು, ಅಂಥ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು ಪಾಲಕತ್ವ ಅಥವಾ ಟ್ರಸ್ಟು ಅಂತ್ಯಗೊಳ್ಳುವುದಕ್ಕಿಂತ ಮುಂಚಿತವಾಗಿ ನಿರ್ಧರಿಸಿದ್ದರೆ, ಆದರೆ ಅದು ಸಂದಾಯವಾಗದೇ ಉಳಿದಿರಲಿ ಆಥವಾ ತದನಂತರ ನಿರ್ಧರಿಸಿರಲಿ, ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಪೋಷಿತನು ಅಥವಾ ಫಲಾನುಭವಿಯು ಬದ್ಧನಾಗಿರತಕ್ಕದ್ದು.

**94. ಇತರೆ ಸಂದರ್ಭಗಳಲ್ಲಿ ಹೊಣೆಗಾರಿಕೆ.–** (1) ತೆರಿಗೆದಾಯಕ ವ್ಯಕ್ತಿಯು, ಪಾಲುದಾರಿಕಾ ಸಂಸ್ಥೆಯಾಗಿದ್ದರೆ ಅಥವಾ ವ್ಯಕ್ತಿಗಳ ಸಂಘವಾಗಿದ್ದರೆ ಅಥವಾ ಹಿಂದೂ ಅವಿಭಾಜ್ಯ ಕುಟುಂಬವಾಗಿದ್ದರೆ ಮತ್ತು ಅಂಥ ಪಾಲುದಾರಿಕಾ ಸಂಸ್ಥೆಯು ಅಥವಾ ವ್ಯಕ್ತಿಗಳ ಸಂಘವು ಅಥವಾ ಹಿಂದೂ ಅವಿಭಾಜ್ಯ ಕುಟುಂಬದ ವ್ಯವಹಾರವೂ ನಿರಂತರವಾಗಿರದಿದ್ದರೆ,–

(ಎ) ಅಂಥ ಪಾಲುದಾರಿಕಾ ಸಂಸ್ಥೆಯು ಅಥವಾ ವ್ಯಕ್ತಿಗಳ ಸಂಘವು ಅಥವಾ ಕುಟುಂಬವು ಅದರ ಮುಂದುವರಿಕೆಯನ್ನು ನಿಲ್ಲಿಸಿದ ದಿನಾಂಕದವರೆಗೆ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾಗಿರುವ ತೆರಿಗೆಯನ್ನು, ಅದರ ಮುಂದುವರಿಕೆಯನ್ನು ನಿಲ್ಲಿಸಿರದಿದ್ದರೆ ಹೇಗೆ ನಿರ್ಧರಿಸಬಹುದಾಗಿತ್ತೋ ಹಾಗೆಯೇ ನಿರ್ಧರಿಸಬಹುದು; ಮತ್ತು

(ಬಿ) ತದ್ವಿರುದ್ಧವಾದುದು ಹಾಗೆ ಮುಂದುವರಿಯದಿರುವ ಕಾಲದಲ್ಲಿ ಏನೇ ಇದ್ದರೂ, ಅಂಥ ಪಾಲುದಾರಿಕಾ ಸಂಸ್ಥೆಯಲ್ಲಿ ಪಾಲುದಾರನಾಗಿದ್ದಂಥ ಅಥವಾ ಅಂಥ ಸಂಘ/ಸದಸ್ಯನಾಗಿದ್ದಂಥ ಅಥವಾ ಕುಟುಂಬದ ಸದಸ್ಯನಾಗಿದ್ದಂಥ

ಪ್ರತಿಯೊಬ್ಬ ವ್ಯಕ್ತಿಯು, ಅದರ ಮುಂದುವರಿಕೆ ನಿಂತಿದ್ದರೂ, ಅಂಥ ಪಾಲುದಾರಿಕಾ ಸಂಸ್ಥೆಯು ಅಥವಾ ಸಂಘವೂ ಅಥವಾ ಕುಟುಂಬವೂ ನಿರ್ಧರಿಸಿದ ಅಂಥ ತೆರಿಗೆಯನ್ನು ಮತ್ತು ಬಡ್ಡಿಯನ್ನು ಹಾಗೂ ದಂಡವನ್ನು, ವಿಧಿಸಿದ ಹಾಗೂ ಸಂದಾಯ ಮಾಡಬೇಕಾದ ಅಂಥ ತೆರಿಗೆಯನ್ನು ಮತ್ತು ಬಡ್ಡಿಯನ್ನು ನಿರ್ಧರಿಸಿರುವುದನ್ನು ಅಥವಾ ದಂಡ ವಿಧಿಸಿರುವುದನ್ನು ಹಾಗೆ ಮುಂದುವರೆಸದಿರುವಿಕೆಗೆ ಮುಂಚಿತವಾಗಿಯಾಗಲಿ ಅಥವಾ ನಂತರವಾಗಲಿ ಮಾಡಿರಬಹುದು, ಸಂದಾಯ ಮಾಡುವುದಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬದ್ಧರಾಗಿರತಕ್ಕದ್ದು ಮತ್ತು ಮೇಲೆ ಹೇಳಿರುವುದಕ್ಕೆ ಒಳಪಟ್ಟು, ಈ ಅಧಿನಿಯಮದ ಉಪಬಂಧಗಳು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಪ್ರತಿಯೊಬ್ಬ ಅಂಥ ವ್ಯಕ್ತಿಯು ಅಥವಾ ಪಾಲುದಾರನು ಅಥವಾ ಸದಸ್ಯನು ಸ್ವತಃ ತಾನೇ ತೆರಿಗೆದಾಯಕ ವ್ಯಕ್ತಿಯಾಗಿದ್ದಿದ್ದರೆ ಹೇಗೆ ಅನ್ವಯವಾಗುತ್ತಿದ್ದವೊ ಹಾಗೆ ಅನ್ವಯವಾಗತಕ್ಕದ್ದು.

(2) ಪಾಲುದಾರಿಕಾ ಸಂಸ್ಥೆಯ ಅಥವಾ ವ್ಯಕ್ತಿಗಳ ಸಂಘದ ರಚನೆಯಲ್ಲಿ ಬದಲಾವಣೆ ಸಂಭವಿಸಿದ್ದಲ್ಲಿ, ಆ ಪಾಲುದಾರಿಕಾ ಸಂಸ್ಥೆಯ ಪಾಲುದಾರರು ಅಥವಾ ಸಂಘದ ಸದಸ್ಯರು, ಪುನರ್‌ರಚನೆಗಿಂತ ಮುಂಚಿತವಾಗಿ ಅದು ಅಸ್ತಿತ್ವದಲ್ಲಿರುವಂತೆಯೇ ಮತ್ತು ಪುನರ್ ರಚನೆಯ ನಂತರ ಅದು ಅಸ್ತಿತ್ವದ್ದಂತೆಯೇ, ಪ್ರಕರಣ 90ರ ಉಪಬಂಧಗಳಿಗೆ ಬಾಧಕವಾಗದಂತೆ, ಪುನರ್‌ರಚನೆಗಿಂತ ಮುಂಚಿತವಾದ ಯಾವುದೇ ಅವಧಿಗಾಗಿ ಅಂಥ ಪಾಲುದಾರಿಕಾ ಸಂಸ್ಥೆಯಿಂದ ಅಥವಾ ಅಂಥ ಸಂಘದಿಂದ ಬಾಕಿಯಿರುವ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು ಸಂದಾಯ ಮಾಡುವುದಕ್ಕೆ ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಬದ್ಧರಾಗಿರತಕ್ಕದ್ದು.

(3) ಪಾಲುದಾರಿಕಾ ಸಂಸ್ಥೆಯಾಗಿರುವ ಅಥವಾ ವ್ಯಕ್ತಿಗಳ ಸಂಘವಾಗಿರುವ ತೆರಿಗೆದಾಯಕ ವ್ಯಕ್ತಿಯು, ವಿಸರ್ಜನೆಗೊಂಡಲ್ಲಿ ಅಥವಾ ಹಿಂದೂ ಅವಿಭಜಿತ ಕುಟುಂಬವಾಗಿರುವ ತೆರಿಗೆದಾಯಕ ವ್ಯಕ್ತಿಯು ವಿಭಜನೆಗೊಂಡಲ್ಲಿ, ಅದು ನಡೆಸುತ್ತಿದ್ದ ವ್ಯವಹಾರಕ್ಕೆ ಸಂಬಂಧಿಸಿದಂತೆ ಉಪಪ್ರಕರಣ (1)ರ ಉಪಬಂಧಗಳು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು ಮತ್ತು ಅದಕ್ಕನುಸಾರವಾಗಿ ಆ ಉಪಪ್ರಕರಣದಲ್ಲಿ ಮುಂದುವರೆಸದಿರುವಿಕೆಯ ಉಲ್ಲೇಖಗಳನ್ನು, ವಿಸರ್ಜನೆಯ ಅಥವಾ ವಿಭಜನೆಯ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**ವಿವರಣೆ.–** ಈ ಅಧ್ಯಾಯದ ಉದ್ದೇಶಗಳಿಗಾಗಿ,–

(i) ಸೀಮಿತ ಹೊಣೆಗಾರಿಕೆ ಪಾಲುದಾರಿಕೆ ಅಧಿನಿಯಮ, 2008 (2009ರ 6) ರ ಉಪಬಂಧಗಳ ಅಡಿಯಲ್ಲಿ ರೂಪಿಸಿದ ಮತ್ತು ನೋಂದಾಯಿತವಾದ "ಸೀಮಿತ ಹೊಣೆಗಾರಿಕೆ ಪಾಲುದಾರಿಕೆ"ಯನ್ನು ಪಾಲುದಾರಿಕಾ ಸಂಸ್ಥೆಯೆಂದು ಪರಿಗಣಿಸತಕ್ಕದ್ದು;

(ii) "ನ್ಯಾಯಾಲಯ" ಎಂದರೆ, ಜಿಲ್ಲಾ ನ್ಯಾಯಾಲಯ, ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯ.

## ಅಧ್ಯಾಯ XVII

## ಪೂರ್ವ ನಿರ್ಣಯ

**95. ಪರಿಭಾಷೆಗಳು.–** ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪೂರ್ವ ನಿರ್ಣಯ" ಎಂದರೆ, ಅರ್ಜಿದಾರನು ಕೈಗೊಳ್ಳುತ್ತಿರುವ ಅಥವಾ ಕೈಗೊಳ್ಳಲು ಪ್ರಸ್ತಾಪಿಸಿರುವ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ, ಪ್ರಕರಣ 97ರ ಉಪಪ್ರಕರಣ (2)ರಲ್ಲಿ ಅಥವಾ ಪ್ರಕರಣ 100ರ ಉಪಪ್ರಕರಣ (1)ರಲ್ಲಿ ಮತ್ತು ಪ್ರಕರಣ 101ಸಿ ನಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳ ಮೇಲೆ ಅಥವಾ ಪ್ರಶ್ನೆಗಳ ಮೇಲೆ, ಪ್ರಾಧಿಕಾರವು ಅಥವಾ ಅಪೀಲು ಪ್ರಾಧಿಕಾರವು ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರವು ಅರ್ಜಿದಾರನಿಗೆ ಒದಗಿಸಿದ ನಿರ್ಣಯ;

(ಬಿ) "ಅಪೀಲು ಪ್ರಾಧಿಕಾರ" ಎಂದರೆ, ಪ್ರಕರಣ 99ರಲ್ಲಿ ಉಲ್ಲೇಖಿಸಿದ ಪೂರ್ವ ನಿರ್ಣಯ ಅಪೀಲು ಪ್ರಾಧಿಕಾರ;

(ಸಿ) "ಅರ್ಜಿದಾರ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಅಥವಾ ನೋಂದಣಿ ಪಡೆಯಲು ಇಚ್ಛಿಸುವ ಯಾರೇ ವ್ಯಕ್ತಿ;

(ಡಿ) "ಅರ್ಜಿ" ಎಂದರೆ, ಪ್ರಕರಣ 97ರ ಉಪಪ್ರಕರಣ (1)ರ ಅಡಿಯಲ್ಲಿ ಪ್ರಾಧಿಕಾರಕ್ಕೆ ಹಾಕಿರುವ ಅರ್ಜಿ;

(ಇ) "ಪ್ರಾಧಿಕಾರ" ಎಂದರೆ, ಪ್ರಕರಣ 96ರ ಅಡಿಯಲ್ಲಿ ಉಲ್ಲೇಖಿಸಿದ ಪೂರ್ವ ನಿರ್ಣಯ ಪ್ರಾಧಿಕಾರ;

(ಎಫ್) "ರಾಷ್ಟ್ರೀಯ ಅಪೀಲು ಪ್ರಾಧಿಕಾರ" ಎಂದರೆ, ಪ್ರಕರಣ 101ಎ ನಲ್ಲಿ ಉಲ್ಲೇಖಿಸಿದ ರಾಷ್ಟ್ರೀಯ ಪೂರ್ವ ನಿರ್ಣಯ ಅಪೀಲು ಪ್ರಾಧಿಕಾರ.

**96. ಪೂರ್ವ ನಿರ್ಣಯ ಪ್ರಾಧಿಕಾರ.–** ಈ ಅಧ್ಯಾಯದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ, ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಉಪಬಂಧಗಳ ಮೇರೆಗೆ ರಚಿತವಾದ ಪೂರ್ವ ನಿರ್ಣಯ ಪ್ರಾಧಿಕಾರವನ್ನು ರಾಜ್ಯದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಪೂರ್ವ ನಿರ್ಣಯ ಪ್ರಾಧಿಕಾರ ಎಂದು ಭಾವಿಸತಕ್ಕದ್ದು.

**97. ಪೂರ್ವ ನಿರ್ಣಯಕ್ಕಾಗಿ ಅರ್ಜಿ.–** (1) ಈ ಅಧ್ಯಾಯದ ಅಡಿಯಲ್ಲಿ ಪೂರ್ವ ನಿರ್ಣಯವನ್ನು ಪಡೆಯಲು ಇಚ್ಛಿಸುವ ಅರ್ಜಿದಾರನು, ಯಾವ ಪ್ರಶ್ನೆಗೆ ಪೂರ್ವ ನಿರ್ಣಯವನ್ನು ಕೋರಲಾಗುತ್ತದೋ ಆ ಪ್ರಶ್ನೆಯನ್ನು ನಿರೂಪಿಸಿದ ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆ ಮತ್ತು ಅಂಥ ವಿಧಾನದಲ್ಲಿ ಹಾಗೂ ಅಂಥ ಶುಲ್ಕದ ಜೊತೆಯಲ್ಲಿ ಸಲ್ಲಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ, ಯಾವ ಪ್ರಶ್ನೆಗೆ ಪೂರ್ವ ನಿರ್ಣಯವನ್ನು ಕೋರಲಾಗಿದೆಯೋ ಆ ಪ್ರಶ್ನೆಯು ಈ ಕೆಳಕಂಡ,–

(ಎ) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ವರ್ಗೀಕರಣ;

(ಬಿ) ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಹೊರಡಿಸಿದ ಅಧಿಸೂಚನೆಯ ಅನ್ವಯ;

(ಸಿ) ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಸಮಯದ ಮತ್ತು ಮೌಲ್ಯದ ನಿರ್ಧರಣೆ;

(ಡಿ) ತೆರಿಗೆ ಸಂದಾಯ ಮಾಡಿದ ಅಥವಾ ಸಂದಾಯ ಮಾಡಲಾಗಿದೆ ಎಂದು ಪರಿಭಾವಿಸಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಅಂಗೀಕಾರಾರ್ಹತೆ;

(ಇ) ಯಾವುದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಮೇಲೆ ತೆರಿಗೆ ಸಂದಾಯದ ಬಾಧ್ಯತೆಯ ನಿರ್ಧರಣೆ;

(ಎಫ್) ಅರ್ಜಿದಾರನು ನೋಂದಾಯಿತನಾಗುವುದು ಅಗತ್ಯ;

(ಜಿ) ಯಾವುವೇ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ಅರ್ಜಿದಾರನು ಮಾಡಿರುವ ಯಾವುದೇ ನಿರ್ದಿಷ್ಟ ಕಾರ್ಯವು, ಆ ಪದದ ಅರ್ಥವ್ಯಾಪ್ತಿಯೊಳಗೆ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯಾಗುತ್ತದೆಯೋ ಅಥವಾ ಪೂರೈಕೆಯಲ್ಲಿ ಪರಿಣಮಿಸುತ್ತದೆಯೋ

– ಇವುಗಳಿಗೆ ಸಂಬಂಧಿಸಿರತಕ್ಕದ್ದು.

**98. ಅರ್ಜಿ ಸ್ವೀಕೃತಿಯಾದಾಗ ಕಾರ್ಯವಿಧಾನ.–** (1) ಅರ್ಜಿಯ ಸ್ವೀಕೃತಿಯ ನಂತರ ಪ್ರಾಧಿಕಾರವು, ಅದರ ಪ್ರತಿಯನ್ನು ಸಂಬಂಧಿತ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು ಮತ್ತು ಅಗತ್ಯವಿದ್ದಲ್ಲಿ, ಸಂಬಂಧಪಟ್ಟ ದಾಖಲೆಗಳನ್ನು ಒದಗಿಸುವಂತೆ ಅರ್ಜಿದಾರನಿಗೆ ಕರೆ ನೀಡತಕ್ಕದ್ದು:

ಪರಂತು, ಯಾವುದೇ ಸಂದರ್ಭದಲ್ಲಿ, ಪ್ರಾಧಿಕಾರವು ಯಾವುದೇ ದಾಖಲೆಗಳನ್ನು ಕೇಳಿದ್ದರೆ, ಅಂಥ ದಾಖಲೆಗಳನ್ನು, ಸಾಧ್ಯವಾದಷ್ಟು ಬೇಗನೆ, ಸದರಿ ಸಂಬಂಧಿತ ಅಧಿಕಾರಿಗೆ ಹಿಂದಿರುಗಿಸತಕ್ಕದ್ದು.

(2) ಪ್ರಾಧಿಕಾರವು, ಆ ಅರ್ಜಿಯನ್ನು ಮತ್ತು ಕಳುಹಿಸಬೇಕೆಂದು ಕೇಳಿರುವ ಆ ದಾಖಲೆಗಳನ್ನು ಪರಿಶೀಲಿಸಿದ ನಂತರ ಮತ್ತು ಅರ್ಜಿದಾರನ ಅಥವಾ ಆತನ ಅಧಿಕೃತ ಪ್ರತಿನಿಧಿಯ ಹಾಗೂ ಸಂಬಂಧಿತ ಅಧಿಕಾರಿಯ ಅಥವಾ ಆತನ ಅಧಿಕೃತ ಪ್ರತಿನಿಧಿಯ ಅಹವಾಲನ್ನು ಕೇಳಿದ ನಂತರ, ಆದೇಶದ ಮೂಲಕ, ಅರ್ಜಿಯನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು:

ಪರಂತು, ಪ್ರಾಧಿಕಾರವು ಅರ್ಜಿಯಲ್ಲಿ ಎತ್ತಿರುವ ಪ್ರಶ್ನೆಯು, ಈ ಅಧಿನಿಯಮದ ಯಾವುದೇ ಉಪಬಂಧಗಳ ಅಡಿಯಲ್ಲಿ, ಅರ್ಜಿದಾರನ ವಿಷಯವು ಯಾವುದೇ ವ್ಯವಹರಣೆಗಳಲ್ಲಿ ಈಗಾಗಲೇ ಇತ್ಯರ್ಥದಲ್ಲಿದ್ದರೆ ಅಥವಾ ಅದರ ಬಗ್ಗೆ ನಿರ್ಧಾರವಾಗಿದ್ದರೆ ಅರ್ಜಿಯನ್ನು ಅಂಗೀಕರಿಸತಕ್ಕದ್ದಲ್ಲ:

ಮತ್ತು ಪರಂತು, ಈ ಪ್ರಕರಣದ ಅಡಿಯಲ್ಲಿನ ಯಾವುದೇ ಅರ್ಜಿಯನ್ನು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡದ ಹೊರತು ತಿರಸ್ಕರಿಸತಕ್ಕದ್ದಲ್ಲ:

ಮತ್ತೂ ಪರಂತು, ಅರ್ಜಿಯನ್ನು ತಿರಸ್ಕರಿಸಿದ್ದರೆ, ತಿರಸ್ಕರಿಸಿದ್ದಕ್ಕೆ ಕಾರಣಗಳನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಿರತಕ್ಕದ್ದು.

(3) ಉಪಪ್ರಕರಣ (2)ರ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶದ ಪ್ರತಿಯನ್ನು ಅರ್ಜಿದಾರನಿಗೆ ಮತ್ತು ಸಂಬಂಧಿತ ಅಧಿಕಾರಿಗೆ ಕಳುಹಿಸತಕ್ಕದ್ದು.

(4) ಉಪಪ್ರಕರಣ (2)ರ ಅಡಿಯಲ್ಲಿ ಅರ್ಜಿಯನ್ನು ಅಂಗೀಕರಿಸಿದರೆ, ಪ್ರಾಧಿಕಾರವು, ತನ್ನ ಮುಂದೆ ಅರ್ಜಿದಾರನು ಇಡಬಹುದಾದ ಅಥವಾ ಪ್ರಾಧಿಕಾರದಿಂದ ಪಡೆದ ಅಂಥ ಹೆಚ್ಚಿನ ಮಾಹಿತಿಯನ್ನು ಪರೀಕ್ಷಿಸಿದ ನಂತರ ಮತ್ತು ಅರ್ಜಿದಾರನ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಹಾಗೂ ಸಂಬಂಧಿತ ಅಧಿಕಾರಿಯ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ಅರ್ಜಿಯಲ್ಲಿ ನಿರ್ದಿಷ್ಟಪಡಿಸಿರುವ ಪ್ರಶ್ನೆಯ ಮೇಲೆ ತನ್ನ ಪೂರ್ವ ನಿರ್ಣಯವನ್ನು ಹೇಳತಕ್ಕದ್ದು.

(5) ಪ್ರಾಧಿಕಾರದ ಸದಸ್ಯರು ಯಾವ ಪ್ರಶ್ನೆ ಮೇಲೆ ಪೂರ್ವ ನಿರ್ಣಯವನ್ನು ಕೇಳಲಾಗಿದೆಯೋ ಆ ಯಾವುದೇ ಪ್ರಶ್ನೆಯ ಮೇಲೆ ಭಿನ್ನಾಭಿಪ್ರಾಯವನ್ನು ಹೊಂದಿದ್ದರೆ, ಅವರುಗಳು ಯಾವ ಅಂಶದ ಅಥವಾ ಅಂಶಗಳ ಮೇಲೆ ಭಿನ್ನಾಭಿಪ್ರಾಯವನ್ನು ಹೊಂದಿರುವರೋ ಆ ಅಂಶವನ್ನು ಅಥವಾ ಅಂಶಗಳನ್ನು ನಿರೂಪಿಸತಕ್ಕದ್ದು ಮತ್ತು ಅಪೀಲು ಪ್ರಾಧಿಕಾರಕ್ಕೆ ಅಹವಾಲಿಗಾಗಿ ಮತ್ತು ಅಂಥ ಪ್ರಶ್ನೆಯ ಮೇಲೆ ನಿರ್ಣಯಕ್ಕಾಗಿ ಉಲ್ಲೇಖ ಮಾಡತಕ್ಕದ್ದು.

(6) ಪ್ರಾಧಿಕಾರವು, ಅರ್ಜಿಯನ್ನು ಸ್ವೀಕರಿಸಿದ ತೊಂಬತ್ತು ದಿನಗಳ ಒಳಗಾಗಿ ತನ್ನ ಪೂರ್ವ ನಿರ್ಣಯವನ್ನು ಲಿಖಿತದಲ್ಲಿ ಹೇಳತಕ್ಕದ್ದು.

(7) ಸದಸ್ಯರು ಯುಕ್ತವಾಗಿ ಸಹಿ ಮಾಡಿರುವ ಮತ್ತು ನಿಯಮಿಸಬಹುದಾದಂಥ ವಿಧಾನದಲ್ಲಿ ಪ್ರಮಾಣೀಕರಿಸಿರುವ, ಪ್ರಾಧಿಕಾರವು ಹೇಳಿರುವ ಪೂರ್ವ ನಿರ್ಣಯದ ಒಂದು ಪ್ರತಿಯನ್ನು ಅರ್ಜಿದಾರನಿಗೆ, ಸಂಬಂಧಿತ ಅಧಿಕಾರಿಗೆ ಮತ್ತು ಕ್ಷೇತ್ರವ್ಯಾಪ್ತಿಯುಳ್ಳ ಅಧಿಕಾರಿಗೆ ಅದನ್ನು ಪ್ರಕಟಿಸಿದ ನಂತರ ಕಳುಹಿಸತಕ್ಕದ್ದು.

**99. ಪೂರ್ವ ನಿರ್ಣಯದ ಅಪೀಲು ಪ್ರಾಧಿಕಾರ.–** ಈ ಅಧಿನಿಯಮದ ಉದ್ದೇಶಗಳಿಗಾಗಿ, ಈ ಅಧ್ಯಾಯದ ಉಪಬಂಧಗಳಿಗೊಳಪಟ್ಟು, ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ಅಧಿನಿಯಮದ ಉಪಬಂಧಗಳ ಮೇರೆಗೆ ರಚಿಸಿದ ಪೂರ್ವ ನಿರ್ಣಯದ ಅಪೀಲು ಪ್ರಾಧಿಕಾರ ರಾಜ್ಯದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಅಪೀಲು ಪ್ರಾಧಿಕಾರ ಎಂದು ಭಾವಿಸತಕ್ಕದ್ದು.

**100. ಅಪೀಲು ಪ್ರಾಧಿಕಾರಕ್ಕೆ ಅಪೀಲು.–** (1) ಸಂಬಂಧಿತ ಅಧಿಕಾರಿಯು, ಕ್ಷೇತ್ರ ವ್ಯಾಪ್ತಿಯುಳ್ಳ ಅಧಿಕಾರಿಯು ಅಥವಾ ಪ್ರಕರಣ 98ರ ಉಪಪ್ರಕರಣ (4)ರ ಅಡಿಯಲ್ಲಿ ಪ್ರಕಟಪಡಿಸಿದ ಯಾವುದೇ ಪೂರ್ವ ನಿರ್ಣಯದಿಂದ ಬಾಧಿತನಾದ ಅರ್ಜಿದಾರರು, ಅಪೀಲು ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು.

(2) ಈ ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ಅಪೀಲನ್ನು ಆ ನಿರ್ಣಯ ವಿರುದ್ಧ ಯಾವ ದಿನಾಂಕದಂದು ಅಪೀಲು ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಯು, ಕ್ಷೇತ್ರವ್ಯಾಪಿಯುಳ್ಳ ಅಧಿಕಾರಿಯು ಮತ್ತು ಅರ್ಜಿದಾರನಿಗೆ ತಿಳಿಯಪಡಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಸಲ್ಲಿಸತಕ್ಕದ್ದು:

ಪರಂತು, ಅಪೀಲು ಪ್ರಾಧಿಕಾರವು, ಅರ್ಜಿದಾರನು ಸದರಿ ಮೂವತ್ತು ದಿನಗಳ ಅವಧಿಯ ಒಳಗಾಗಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣದಿಂದ ಆಗಲಿಲ್ಲವೆಂಬುದನ್ನು ಅದು ಮನದಟ್ಟು ಮಾಡಿಕೊಂಡರೆ, ಮೂವತ್ತು ದಿನಗಳನ್ನು ಮೀರದ ಹೆಚ್ಚಿನ ಅವಧಿಯ ಒಳಗಾಗಿ ಅದನ್ನು ಸಲ್ಲಿಸಲು ಅವಕಾಶ ನೀಡಬಹುದು.

(3) ಈ ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ಅಪೀಲು, ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು. ಅಂಥ ಶುಲ್ಕ ಅದರ ಜತೆಯಲ್ಲಿರತಕ್ಕದ್ದು ಮತ್ತು ಆ ಅಪೀಲನ್ನು ಅಂಥ ವಿಧಾನದಲ್ಲಿ ಪರಿಶೀಲಿಸಿರತಕ್ಕದ್ದು.

**101. ಅಪೀಲು ಪ್ರಾಧಿಕಾರದ ಆದೇಶಗಳು.–** (1) ಅಪೀಲು ಪ್ರಾಧಿಕಾರವು, ಅಪೀಲಿನ ಪಕ್ಷಕಾರರಿಗೆ ಅಥವಾ ಉಲ್ಲೇಖ ಮಾಡಿದ ಪಕ್ಷಕಾರರಿಗೆ, ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ನಿರ್ಣಯ ವಿರುದ್ಧ ಅಪೀಲು ಮಾಡಿಕೊಂಡಿರುವ ಅಥವಾ ಉಲ್ಲೇಖಿಸಿರುವ ನಿರ್ಣಯವನ್ನು ಸೂಕ್ತ ಎಂದು ಅದು ಭಾವಿಸಿದಂತೆ, ಸ್ಥಿರೀಕರಿಸಿರುವ ಅಥವಾ ಮಾರ್ಪಾಡು ಮಾಡಿರುವ ಆದೇಶವನ್ನು ಹೊರಡಿಸಬಹುದು.

(2) ಪ್ರಕರಣ 100ರ ಅಡಿಯಲ್ಲಿ ಅಪೀಲನ್ನು ಸಲ್ಲಿಸಿರುವ ಅಥವಾ ಪ್ರಕರಣ 98ರ ಉಪಪ್ರಕರಣ (5)ರ ಅಡಿಯಲ್ಲಿನ ಉಲ್ಲೇಖ ಮಾಡಿದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗಾಗಿ ಉಪಪ್ರಕರಣ (1)ರಲ್ಲಿ ಹೇಳಿರುವ ಆದೇಶವನ್ನು ಹೊರಡಿಸತಕ್ಕದ್ದು.

(3) ಅಪೀಲು ಪ್ರಾಧಿಕಾರದ ಸದಸ್ಯರು, ಅಪೀಲಿನಲ್ಲಿ ಅಥವಾ ಉಲ್ಲೇಖದಲ್ಲಿ ಹೇಳಿರುವ ಯಾವುದೇ ಅಂಶದ ಅಥವಾ ಅಂಶಗಳ ಮೇಲೆ ಭಿನ್ನಾಭಿಪ್ರಾಯವನ್ನು ಹೊಂದಿದ್ದರೆ, ಅಪೀಲಿನಲ್ಲಿರುವ ಅಥವಾ ಉಲ್ಲೇಖದಲ್ಲಿರುವ ಪ್ರಶ್ನೆಗೆ ಸಂಬಂಧಿಸಿದಂತೆ, ಪೂರ್ವ ನಿರ್ಣಯವನ್ನು ನೀಡಲಾಗದು ಎಂದು ಪರಿಭಾವಿಸತಕ್ಕದ್ದು.

(4) ಸದಸ್ಯರು ಯುಕ್ತವಾಗಿ ಸಹಿ ಮಾಡಿರುವ ಮತ್ತು ನಿಯಮಿಸಬಹುದಾದಂಥ ವಿಧಾನದಲ್ಲಿ ಪ್ರಮಾಣೀಕರಿಸಿರುವ, ಅಪೀಲು ಪ್ರಾಧಿಕಾರವು ಪ್ರಕಟಿಸಿರುವ ಪೂರ್ವ ನಿರ್ಣಯದ ಪ್ರತಿಯನ್ನು ಅರ್ಜಿದಾರನಿಗೆ, ಸಂಬಂಧಿತ ಅಧಿಕಾರಿಗೆ, ಕ್ಷೇತ್ರವ್ಯಾಪ್ತಿಯುಳ್ಳ ಅಧಿಕಾರಿಗೆ ಮತ್ತು ಪ್ರಾಧಿಕಾರಕ್ಕೆ ಅದನ್ನು ಪ್ರಕಟಿಸಿದ ನಂತರ ಕಳುಹಿಸತಕ್ಕದ್ದು.

**101ಎ. ರಾಷ್ಟ್ರೀಯ ಪೂರ್ವ ನಿರ್ಣಯ ಅಪೀಲು ಪ್ರಾಧಿಕಾರದ ರಚನೆ.–** (1) ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ ಅಧಿಸೂಚನೆ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಪ್ರಕರಣ 101ಬಿ ಯ ಮೇರೆಗೆ ಸಲ್ಲಿಸಿದ ಅಪೀಲುಗಳನ್ನು ವಿಚಾರಣೆ ಮಾಡುವುದಕ್ಕಾಗಿ ರಾಷ್ಟ್ರೀಯ ಪೂರ್ವ ನಿರ್ಣಯ ಅಪೀಲು ಪ್ರಾಧಿಕಾರ ಎಂದು ಕರೆಯುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ರಾಷ್ಟ್ರೀಯ ಅಪೀಲು ಪ್ರಾಧಿಕಾರವು,–

(i) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಅಥವಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿರುವ ಅಥವಾ ಮುಖ್ಯ ನ್ಯಾಯಮೂರ್ತಿಯಾಗಿದ್ದ ಅಥವಾ ಐದು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಗೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ನ್ಯಾಯಾಧೀಶರಾಗಿದ್ದ ಒಬ್ಬ ಅಧ್ಯಕ್ಷರನ್ನು;

(ii) ವೃಂದ–ಎ ನ ಭಾರತೀಯ ಕಂದಾಯ (ಸೀಮಾ ಸುಂಕ ಮತ್ತು ಕೇಂದ್ರ ಅಬಕಾರಿ) ಸೇವೆಯ ಸದಸ್ಯನಾಗಿರುವ ಅಥವಾ ಸದಸ್ಯನಾಗಿದ್ದ ಮತ್ತು ವೃಂದ–ಎ ನಲ್ಲಿ ಕನಿಷ್ಠ ಪಕ್ಷ ಹದಿನೈದು ವರ್ಷಗಳ ಸೇವಾವಧಿಯನ್ನು ಪೂರ್ಣಗೊಳಿಸಿರುವ ಒಬ್ಬ ತಾಂತ್ರಿಕ ಸದಸ್ಯನನ್ನು (ಕೇಂದ್ರ);

(iii) ಮೌಲ್ಯವರ್ಧಿತ ತೆರಿಗೆಯ ಅಪರ ಆಯುಕ್ತರ ಅಥವಾ ರಾಜ್ಯ ತೆರಿಗೆಯ ಅಪರ ಆಯುಕ್ತರ ದರ್ಜೆಗಿಂತ ಕಡಿಮೆಯಿಲ್ಲದ ಅಥವಾ ಅಸ್ತಿತ್ವದಲ್ಲಿರುವ ಕಾನೂನಿನ ಅಥವಾ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಆಡಳಿತ ನಿರ್ವಹಣೆಯಲ್ಲಿ ಅಥವಾ ಹಣಕಾಸು ಮತ್ತು ತೆರಿಗೆ ನಿರ್ಧರಣೆಯ ಕ್ಷೇತ್ರದಲ್ಲಿ ಕನಿಷ್ಠ ಪಕ್ಷ ಮೂರು ವರ್ಷಗಳ ಅನುಭವವಿರುವ ರಾಜ್ಯ ಸರ್ಕಾರದ ಅಧಿಕಾರಿಯಾಗಿರುವ ಅಥವಾ ಅಧಿಕಾರಿಯಾಗಿದ್ದ ಒಬ್ಬ ತಾಂತ್ರಿಕ ಸದಸ್ಯನನ್ನು (ರಾಜ್ಯ)

– ಒಳಗೊಂಡಿರತಕ್ಕದ್ದು.

(3) ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅಧ್ಯಕ್ಷರನ್ನು ಭಾರತದ ಮುಖ್ಯ ನ್ಯಾಯಮೂರ್ತಿಗಳೊಂದಿಗೆ ಅಥವಾ ಅವರ ನಾಮನಿರ್ದೇಶಿತರೊಂದಿಗೆ ಸಮಾಲೋಚಿಸಿದ ತರುವಾಯ ಸರ್ಕಾರವು ನೇಮಕ ಮಾಡತಕ್ಕದ್ದು:

ಪರಂತು, ಅಧ್ಯಕ್ಷರ ಮರಣದ, ರಾಜೀನಾಮೆಯ ಕಾರಣದಿಂದಾಗಿ ಅಥವಾ ಅನ್ಯಥಾ ಅವರ ಹುದ್ದೆಯಲ್ಲಿ ಯಾವುದೇ ಖಾಲಿ ಸ್ಥಾನ ಉಂಟಾದ ಸಂದರ್ಭದಲ್ಲಿ, ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅತ್ಯಂತ ಹಿರಿಯ ಸದಸ್ಯರು ಅಂಥ ಖಾಲಿ ಸ್ಥಾನವನ್ನು ತುಂಬಲು, ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ನೇಮಕಗೊಂಡ ಹೊಸ ಅಧ್ಯಕ್ಷರು ಪದಧಾರಣ ಮಾಡುವ ದಿನಾಂಕದವರೆಗೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸತಕ್ಕದ್ದು:

ಮತ್ತು ಪರಂತು, ಅಧ್ಯಕ್ಷರು, ಗೈರುಹಾಜರಿ, ಅನಾರೋಗ್ಯ ಅಥವಾ ಇತರ ಯಾವುದೇ ಇತರ ಕಾರಣದಿಂದ, ಅವರ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥರಾಗಿರುವಲ್ಲಿ, ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅತ್ಯಂತ ಹಿರಿಯ ಸದಸ್ಯರು, ಅಧ್ಯಕ್ಷರು ತಮ್ಮ ಕರ್ತವ್ಯಗಳನ್ನು ವಹಿಸಿಕೊಳ್ಳುವ ದಿನಾಂಕದವರೆಗೂ ಅಧ್ಯಕ್ಷರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ರಾಷ್ಟ್ರೀಯ ಅಪೀಲು ಪ್ರಾಧಿಕಾರದ ತಾಂತ್ರಿಕ ಸದಸ್ಯನನ್ನು (ಕೇಂದ್ರ) ಮತ್ತು ತಾಂತ್ರಿಕ ಸದಸ್ಯನನ್ನು (ರಾಜ್ಯ), ಗೊತ್ತುಪಡಿಸಬಹುದಾದಂಥ ವ್ಯಕ್ತಿಗಳನ್ನು ಒಳಗೊಂಡಿರುವ ಆಯ್ಕೆ ಸಮಿತಿಯ ಶಿಫಾರಸ್ಸುಗಳ ಮೇಲೆ ಮತ್ತು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಸರ್ಕಾರವು ನೇಮಕ ಮಾಡತಕ್ಕದ್ದು.

(5) ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಸದಸ್ಯರುಗಳ ಯಾವುದೇ ನೇಮಕವು ಆಯ್ಕೆ ಸಮಿತಿಯ ರಚನೆಯಲ್ಲಿರುವ ಯಾವುದೇ ಖಾಲಿಸ್ಥಾನ ಅಥವಾ ನ್ಯೂನತೆಯ ಕಾರಣ ಮಾತ್ರದಿಂದಲೇ ಅಸಿಂಧುವಾಗಿರತಕ್ಕದ್ದಲ್ಲ.

(6) ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅಧ್ಯಕ್ಷರಾಗಿ ಅಥವಾ ಸದಸ್ಯರುಗಳಾಗಿ ಯಾರೇ ವ್ಯಕ್ತಿಯನ್ನು ನೇಮಕ ಮಾಡುವ ಮೊದಲು, ಸರ್ಕಾರವು, ಅಂಥ ವ್ಯಕ್ತಿಯು ಅಂಥ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ತಮ್ಮ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡುವ ಸಾಧ್ಯತೆಯಿರುವ ಯಾವುದೇ ಹಣಕಾಸು ಅಥವಾ ಇತರ ಹಿತಾಸಕ್ತಿಗಳನ್ನು ಹೊಂದಿಲ್ಲದಿರುವುದನ್ನು ಸ್ವತಃ ಮನವರಿಕೆ ಮಾಡಿಕೊಳ್ಳತಕ್ಕದ್ದು.

(7) ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರುಗಳ ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ನಿಯಮಿಸಬಹುದಾಂಥ ರೀತಿಯಲ್ಲಿ ಇರತಕ್ಕದ್ದು:

ಪರಂತು, ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅಧ್ಯಕ್ಷರು ಅಥವಾ ಸದಸ್ಯರುಗಳ ಸಂಬಳ ಮತ್ತು ಭತ್ಯೆಗಳನ್ನಾಗಲೀ ಅಥವಾ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನಾಗಲೀ ಅವರ ನೇಮಕಾತಿಯ ತರುವಾಯ ಅವರಿಗೆ ಅನಾನುಕೂಲವಾಗುವ ರೀತಿಯಲ್ಲಿ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

(8) ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅಧ್ಯಕ್ಷರು, ತಮ್ಮ ಪದವನ್ನು ವಹಿಸಿಕೊಂಡ ದಿನಾಂಕದಿದ ಮೂರು ವರ್ಷಗಳ ಅವಧಿಗೆ ಅಥವಾ ಅವರಿಗೆ ಎಪ್ಪತ್ತು ವರ್ಷಗಳ ವಯಸ್ಸು ತುಂಬುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಅವರು ಮರು ನೇಮಕಕ್ಕೂ ಸಹ ಅರ್ಹರಾಗತಕ್ಕದ್ದು.

(9) ರಾಷ್ಟ್ರೀಯ ಅಪೀಲು ಪ್ರಾಧಿಕಾರದ ತಾಂತ್ರಿಕ ಸದಸ್ಯನು (ಕೇಂದ್ರ) ಅಥವಾ ತಾಂತ್ರಿಕ ಸದಸ್ಯನು (ರಾಜ್ಯ) ತಮ್ಮ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಅಥವಾ ಅವರಿಗೆ ಅರವತ್ತೈದು ವರ್ಷಗಳ ವಯಸ್ಸು ತುಂಬುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮರು ನೇಮಕಾತಿಗೂ ಸಹ ಅರ್ಹರಾಗಿರತಕ್ಕದ್ದು.

(10) ಅಧ್ಯಕ್ಷರು ಅಥವಾ ಯಾರೇ ಸದಸ್ಯನು, ಸರ್ಕಾರಕ್ಕೆ ಸಂಬೋಧಿಸಿ, ಸ್ವತಃ ಸಹಿ ಮಾಡಿದ, ಲಿಖಿತದಲ್ಲಿ ನೋಟೀಸನ್ನು ನೀಡಿ ತಮ್ಮ ಪದಕ್ಕೆ ರಾಜೀನಾಮೆ ಸಲ್ಲಿಸಬಹುದು:

ಪರಂತು, ಅಧ್ಯಕ್ಷರು ಅಥವಾ ಸದಸ್ಯನು ಸರ್ಕಾರವು ಅಂಥ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿ ಮುಕ್ತಾಯವಾಗುವವರೆಗೆ ಅಥವಾ ಅವರ ಉತ್ತರಾಧಿಕಾರಿಯಾಗಿ ಯಥೋಚಿತವಾಗಿ ನೇಮಕಗೊಂಡ ವ್ಯಕ್ತಿಯು ಪದವನ್ನು ವಹಿಸಿಕೊಳ್ಳುವವರೆಗೆ ಅಥವಾ ಅವರ ಪದಾವಧಿ ಮುಕ್ತಾಯವಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(11) ಸರ್ಕಾರವು, ಭಾರತದ ಮುಖ್ಯ ನ್ಯಾಯಮೂರ್ತಿಯವರೊಂದಿಗೆ ಸಮಾಲೋಚಿಸಿದ ನಂತರ,–

(ಎ) ದಿವಾಳಿ ಎಂದು ನ್ಯಾಯನಿರ್ಣೀತನಾಗಿರುವ; ಅಥವಾ

(ಬಿ) ನೈತಿಕ ಅಧಃಪತನ ಒಳಗೊಳ್ಳುವ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವನೆಂದು ಅಂಥ ಸರ್ಕಾರ ಅಭಿಪ್ರಾಯಪಟ್ಟಿರುವ; ಅಥವಾ

(ಸಿ) ಅಂಥ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥರಾಗಿರುವ; ಅಥವಾ

(ಡಿ) ಅಂಥ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ತಮ್ಮ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡುವ ಸಂಭವವಿರುವಂಥ ಹಣಕಾಸಿನ ಅಥವಾ ಇತರೆ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(ಇ) ತಮ್ಮ ಪದದಲ್ಲಿ ಮುಂದುವರಿಯುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಹಾನಿಕರವಾಗುವ ರೀತಿಯಲ್ಲಿ ಅವರು ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿರುವ

– ಅಧ್ಯಕ್ಷರನ್ನು ಅಥವಾ ಸದಸ್ಯನನ್ನು ಅವರ ಪದದಿಂದ ತೆಗೆದುಹಾಕಬಹುದು:

ಪರಂತು, ಅಧ್ಯಕ್ಷರು ಅಥವಾ ಸದಸ್ಯರನ್ನು, ಅವರ ವಿರುದ್ಧ ಮಾಡಿದ ದೋಷಾರೋಪಗಳನ್ನು ಅವರಿಗೆ ತಿಳಿಸಿದ ಹೊರತು ಮತ್ತು ಅವರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು (ಡಿ) ಮತ್ತು (ಇ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಾರಣಗಳ ಮೇಲೆ ಪದದಿಂದ ತೆಗೆದುಹಾಕತಕ್ಕದ್ದಲ್ಲ.

(12) ಉಪಪ್ರಕರಣ (11)ರ ಉಪಬಂಧಗಳಿಗೆ ಬಾಧಕವಾಗದಂತೆ ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅಧ್ಯಕ್ಷರನ್ನು ಮತ್ತು ತಾಂತ್ರಿಕ ಸದಸ್ಯರನ್ನು ಸರ್ಕಾರವು, ಭಾರತದ ಮುಖ್ಯ ನ್ಯಾಯಮೂರ್ತಿಗಳಿಗೆ ಮಾಡಿದ ಉಲ್ಲೇಖದ ಮೇಲೆ ಅವರು ನಾಮನಿರ್ದೇಶಿಸಿದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ವಿಚಾರಣೆ ಮಾಡಿದ ತರುವಾಯ ಮತ್ತು ಅಂಥ ಅಧ್ಯಕ್ಷರಿಗೆ ಅಥವಾ ಸದಸ್ಯರಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ್ದ ನಂತರ, ರುಜುವಾತಾದ ದುರ್ವರ್ತನೆ ಅಥವಾ ಅಸಮರ್ಥತೆಯ ಆಧಾರದ ಮೇಲೆ, ಸರ್ಕಾರವು ಮಾಡಿದ ಆದೇಶದ ಹೊರತಾಗಿ ಅವರನ್ನು ಪದದಿಂದ ತೆಗೆದುಹಾಕತಕ್ಕದ್ದಲ್ಲ.

(13) ಸರ್ಕಾರವು, ಭಾರತದ ಮುಖ್ಯ ನ್ಯಾಯಮೂರ್ತಿಗಳ ಸಮ್ಮತಿ ಪಡೆದು ಯಾರಿಗೆ ಸಂಬಂಧಪಟ್ಟಂತೆ ಉಪಪ್ರಕರಣ (12)ರ ಮೇರೆಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಉಲ್ಲೇಖವನ್ನು ಮಾಡಲಾಗಿದೆಯೋ ಆ ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅಧ್ಯಕ್ಷರನ್ನು ಅಥವಾ ತಾಂತ್ರಿಕ ಸದಸ್ಯರನ್ನು ಪದದಿಂದ ಅಮಾನತು ಮಾಡಬಹುದು.

(14) ಸಂವಿಧಾನದ 220ನೇ ಅನುಚ್ಛೇದದ ಉಪಬಂಧಗಳಿಗೆ ಒಳಪಟ್ಟು, ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅಧ್ಯಕ್ಷರು ಅಥವಾ ಸದಸ್ಯರು ಅವರು ಪದಧಾರಣ ಮಾಡುವುದು ನಿಂತುಹೋದ ಮೇಲೆ, ಅವರು, ಅಧ್ಯಕ್ಷರಾಗಿದ್ದ ಅಥವಾ ಸಂದರ್ಭಾನುಸಾರ ಸದಸ್ಯರಾಗಿದ್ದ ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಮುಂದೆ ಹಾಜರಾಗಲು, ಕಾರ್ಯನಿರ್ವಹಿಸಲು ಅಥವಾ ವಾದ ಮಂಡಿಸಲು ಅರ್ಹರಾಗಿರತಕ್ಕದ್ದಲ್ಲ.

**101ಬಿ. ರಾಷ್ಟ್ರೀಯ ಅಪೀಲು ಪ್ರಾಧಿಕಾರಕ್ಕೆ ಅಪೀಲು.–** (1) ಪ್ರಕರಣ 97ರ ಉಪಪ್ರಕರಣ (2)ರಲ್ಲಿ ಉಲ್ಲೇಖಿಸಿದ ಪ್ರಶ್ನೆಗಳ ಸಂಬಂಧದಲ್ಲಿ, ಪ್ರಕರಣ 101ರ ಉಪಪ್ರಕರಣ (1) ಅಥವಾ ಉಪಪ್ರಕರಣ (3)ರ ಮೇರೆಗೆ, ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ರಾಜ್ಯಗಳು ಅಥವಾ ಒಕ್ಕೂಟ ರಾಜ್ಯಕ್ಷೇತ್ರಗಳ ಅಥವಾ ಅವುಗಳೆರಡರ ಅಪೀಲು ಪ್ರಾಧಿಕಾರಗಳು ಅಸಮಂಜಸ ಪೂರ್ವ ನಿರ್ಣಯವನ್ನು ನೀಡಿದ್ದಲ್ಲಿ, ಆಯುಕ್ತರು ಅಧಿಕೃತಗೊಳಿಸಿದ ಯಾರೇ ಅಧಿಕಾರಿ ಅಥವಾ ಅರ್ಜಿದಾರನು ಪ್ರಕರಣ 25ರಲ್ಲಿ ಉಲ್ಲೇಖಿಸಿದ ಭಿನ್ನ ವ್ಯಕ್ತಿಯು ಅಂಥ ಪೂರ್ವ ನಿರ್ಣಯದಿಂದ ಬಾಧಿತನಾಗಿದ್ದಲ್ಲಿ, ರಾಷ್ಟ್ರೀಯ ಅಪೀಲು ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಅಧಿಕಾರಿಯು, ಯಾವ ರಾಜ್ಯಗಳಲ್ಲಿ ಅಂಥ ಪೂರ್ವ ನಿರ್ಣಯವನ್ನು ಮಾಡಲಾಗಿದೆಯೋ ಆ ರಾಜ್ಯದವನಾಗಿರತಕ್ಕದ್ದು.

(2) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು, ಆ ನಿರ್ಣಯ ವಿರುದ್ಧ ಯಾವ ದಿನಾಂಕದಂದು ಅಪೀಲು ಹಾಕಿಕೊಳ್ಳಲು ಕೋರಲಾಗಿದೆಯೋ ಆ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಅರ್ಜಿದಾರರಿಗೆ, ಸಂಬಂಧಪಟ್ಟ ಅಧಿಕಾರಿಗೆ ಮತ್ತು ಅಧಿಕಾರವ್ಯಾಪ್ತಿಯುಳ್ಳ ಅಧಿಕಾರಿಗೆ ತಿಳಿಯಪಡಿಸಿ ಸಲ್ಲಿಸತಕ್ಕದ್ದು:

ಪರಂತು, ಆಯುಕ್ತರು ಅಧಿಕೃತಗೊಳಿಸಿದ ಅಧಿಕಾರಿಯು, ಆ ನಿರ್ಣಯ ವಿರುದ್ಧ ಯಾವ ದಿನಾಂಕದಂದು ಅಪೀಲು ಹಾಕಿಕೊಳ್ಳಲು ಕೋರಲಾಗಿದೆಯೋ ಆ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗೆ ಸಂಬಂಧಪಟ್ಟ ಅಧಿಕಾರಿಗೆ ಅಥವಾ ಅಧಿಕಾರವ್ಯಾಪ್ತಿಯುಳ್ಳ ಅಧಿಕಾರಿಗೆ ತಿಳಿಯಪಡಿಸಿ ಅಪೀಲನ್ನು ಸಲ್ಲಿಸತಕ್ಕದ್ದು:

ಮತ್ತು ಪರಂತು, ರಾಷ್ಟ್ರೀಯ ಅಪೀಲು ಪ್ರಾಧಿಕಾರವು, ಅರ್ಜಿದಾರನು ಸದರಿ ಮೂವತ್ತು ದಿನಗಳ ಅಥವಾ ಸಂದರ್ಭಾನುಸಾರ ತೊಂಬತ್ತು ದಿನಗಳ ಅವಧಿಯ ಒಳಗಾಗಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣದಿಂದ ತಡೆಯಲಾಗಿತ್ತೆಂಬುದನ್ನು ತಾನು ಮನದಟ್ಟು ಮಾಡಿಕೊಂಡರೆ, ಮೂವತ್ತು ದಿನಗಳನ್ನು ಮೀರದ ಹೆಚ್ಚಿನ ಅವಧಿ ಒಳಗಾಗಿ ಅಂಥ ಅಪೀಲು ಸಲ್ಲಿಸಲು ಅವಕಾಶ ನೀಡಬಹುದು.

**ವಿವರಣೆ.–** ಸಂದೇಹಗಳ ನಿವಾರಣೆಗಾಗಿ, ಮೂವತ್ತು ದಿನಗಳು ಅಥವಾ ಸಂದರ್ಭಾನುಸಾರ ತೊಂಬತ್ತು ದಿನಗಳ ಅವಧಿಯನ್ನು, ಅಸಮಂಜಸ ನಿರ್ಣಯಗಳ ವಿರುದ್ಧ ಅಪೀಲನ್ನು ಹಾಕಿಕೊಳ್ಳಲು ಕೋರಲಾದ ಕೊನೆಯದಾಗಿ ತಿಳಿಸಿದ ದಿನಾಂಕದಿಂದ ಲೆಕ್ಕಹಾಕತಕ್ಕದ್ದೆಂದು ಸ್ಪಷ್ಟೀಕರಿಸಲಾಗಿದೆ.

(3) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲು, ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು, ಅಂಥ ಶುಲ್ಕ ಅದರ ಜೊತೆಯಲ್ಲಿರತಕ್ಕದ್ದು ಮತ್ತು ಅದನ್ನು ಅಂಥ ವಿಧಾನದಲ್ಲಿ ಪರಿಶೀಲಿಸತಕ್ಕದ್ದು.

**101ಸಿ. ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಆದೇಶ.–** (1) ರಾಷ್ಟ್ರೀಯ ಅಪೀಲು ಪ್ರಾಧಿಕಾರವು, ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ನಂತರ, ಆಯುಕ್ತರು ಅಧಿಕೃತಗೊಳಿಸಿದ ಅಧಿಕಾರಿಗೆ, ಎಲ್ಲಾ ಪ್ರಧಾನ ಮುಖ್ಯ ಆಯುಕ್ತರಿಗೆ, ಕೇಂದ್ರ ತೆರಿಗೆಯ ಮುಖ್ಯ ಆಯುಕ್ತರಿಗೆ ಮತ್ತು ಎಲ್ಲ ರಾಜ್ಯಗಳ ರಾಜ್ಯ ತೆರಿಗೆಯ ಮುಖ್ಯ ಆಯುಕ್ತರು ಮತ್ತು ಆಯುಕ್ತರಿಗೆ ಯಾವ ನಿರ್ಣಯ ವಿರುದ್ಧ ಅಪೀಲು ಮಾಡಿಕೊಳ್ಳಲಾಗಿದೆಯೋ ಆ ನಿರ್ಣಯವನ್ನು ತಾನು ಸೂಕ್ತವೆಂದು ಭಾವಿಸುವಂತೆ ಸ್ಥಿರೀಕರಿಸುವ ಅಥವಾ ಮಾರ್ಪಾಟು ಮಾಡುವಂಥ ಆದೇಶವನ್ನು ಮಾಡಬಹುದು.

(2) ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಸದಸ್ಯರು ಯಾವುದೇ ಅಂಶದ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದರೆ ಆ ಅಂಶವನ್ನು ಬಹುಮತದ ಅಭಿಪ್ರಾಯಕ್ಕನುಗುಣವಾಗಿ ನಿರ್ಧರಿಸತಕ್ಕದ್ದು.

(3) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ಆದೇಶವನ್ನು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಪ್ರಕರಣ 101ಬಿ ಯ ಮೇರೆಗೆ ಅಪೀಲನ್ನು ಸಲ್ಲಿಸಿದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗಾಗಿ ಹೊರಡಿಸತಕ್ಕದ್ದು.

(4) ರಾಷ್ಟ್ರೀಯ ಅಪೀಲು ಪ್ರಾಧಿಕಾರವು ಪ್ರಕಟಿಸಿದ ಪೂರ್ವ ನಿರ್ಣಯದ ಪ್ರತಿಗೆ ಸದಸ್ಯರುಗಳು ವಿದ್ಯುಕ್ತವಾಗಿ ಸಹಿ ಮಾಡತಕ್ಕದ್ದು ಮತ್ತು ನಿಯಮಿಸಬಹುದಾಂಥ ರೀತಿಯಲ್ಲಿ ಪ್ರಮಾಣೀಕರಿಸತಕ್ಕದ್ದು ಮತ್ತು ಅರ್ಜಿದಾರನಿಗೆ, ಆಯುಕ್ತರು ಅಧಿಕೃತಗೊಳಿಸಿದ ಅಧಿಕಾರಿಗೆ, ಮಂಡಳಿಗೆ, ಎಲ್ಲಾ ರಾಜ್ಯಗಳ ರಾಜ್ಯ ತೆರಿಗೆಯ ಮುಖ್ಯ ಆಯುಕ್ತರಿಗೆ ಮತ್ತು ಆಯುಕ್ತರಿಗೆ ಎಲ್ಲಾ ಒಕ್ಕೂಟ ರಾಜ್ಯಕ್ಷೇತ್ರಗಳ ಒಕ್ಕೂಟ ರಾಜ್ಯಕ್ಷೇತ್ರ ತೆರಿಗೆ ಮುಖ್ಯ ಆಯುಕ್ತರಿಗೆ ಮತ್ತು ಆಯುಕ್ತರಿಗೆ ಮತ್ತು ಸಂದರ್ಭಾನುಸಾರ ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರಕ್ಕೆ ಅಂಥ ಘೋಷಣೆಯ ನಂತರ ಕಳುಹಿಸತಕ್ಕದ್ದು.

**102. ಪೂರ್ವ ನಿರ್ಣಯವನ್ನು ಸರಿಪಡಿಸಿಕೊಳ್ಳುವುದು.–** ಪ್ರಾಧಿಕಾರವು ಅಥವಾ ಅಪೀಲು ಪ್ರಾಧಿಕಾರವು ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರವು, ಪ್ರಕರಣ 98ರ ಅಥವಾ ಪ್ರಕರಣ 101ರ ಅಥವಾ ಪ್ರಕರಣ 101ಸಿ ಯ ಅಡಿಯಲ್ಲಿ, ತಾನು

ಹೊರಡಿಸಿದ ಯಾವುದೇ ಆದೇಶವನ್ನು ಸರಿಪಡಿಸಿಕೊಳ್ಳುವುದಕ್ಕಾಗಿ, ದಾಖಲೆಯಲ್ಲಿ ಮೇಲ್ನೋಟಕ್ಕೆ ಕಾಣುವ ಯಾವುದೇ ತಪ್ಪನ್ನು ಆ ಪ್ರಾಧಿಕಾರವು ಅಥವಾ ಅಪೀಲು ಪ್ರಾಧಿಕಾರವು ಸ್ವಯಂ ಗಮನಿಸಿದ್ದರೆ ಅಥವಾ ಸಂಬಂಧಿತ ಅಧಿಕಾರಿಯಾಗಲಿ, ಕ್ಷೇತ್ರವ್ಯಾಪ್ತಿಯುಳ್ಳ ಅಧಿಕಾರಿಯಾಗಲಿ, ಅರ್ಜಿದಾರನಾಗಲಿ, ಅಪೀಲುದಾರನಾಗಲಿ, ಪ್ರಾಧಿಕಾರವಾಗಲಿ ಅಥವಾ ಅಪೀಲು ಪ್ರಾಧಿಕಾರವಾಗಲಿ ಅಂಥ ತಪ್ಪನ್ನು ಅಂಥ ಆದೇಶದ ದಿನಾಂಕದಿಂದ ಆರು ತಿಂಗಳ ಅವಧಿಯ ಒಳಗಾಗಿ, ಅದರ ಗಮನಕ್ಕೆ ತಂದಿದ್ದರೆ, ತಿದ್ದುಪಡಿ ಮಾಡಬಹುದು:

ಪರಂತು, ತೆರಿಗೆ ಬಾಧ್ಯತೆಯನ್ನು ಹೆಚ್ಚಿಸುವ ಅಥವಾ ಅಂಗೀಕರಿಸಬಹುದಾದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮೊತ್ತವನ್ನು ಕಡಿಮೆ ಮಾಡುವ ಪರಿಣಾಮವನ್ನು ಹೊಂದಿರುವ ಸರಿಪಡಿಸುವಿಕೆಯನ್ನು, ಅರ್ಜಿದಾರನಿಗೆ ಅಥವಾ ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಮಾಡತಕ್ಕದ್ದಲ್ಲ.

**103. ಪೂರ್ವ ನಿರ್ಣಯದ ಅನ್ವಯ.–** (1) ಈ ಅಧ್ಯಾಯದ ಅಡಿಯಲ್ಲಿನ ಪ್ರಾಧಿಕಾರವು ಅಥವಾ ಅಪೀಲು ಪ್ರಾಧಿಕಾರವು ಪ್ರಕಟಪಡಿಸಿದ ಪೂರ್ವ ನಿರ್ಣಯಕ್ಕೆ ಈ ಕೆಳಕಂಡವರುಗಳು ಮಾತ್ರ ಬದ್ಧರಾಗಿರತಕ್ಕದ್ದು,–

(ಎ) ಪ್ರಕರಣ 97ರ ಉಪಪ್ರಕರಣ (2)ರಲ್ಲಿ ಹೇಳಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪೂರ್ವ ನಿರ್ಣಯಕ್ಕಾಗಿ ಕೋರಿರುವ ಅರ್ಜಿದಾರ;

(ಬಿ) ಅರ್ಜಿದಾರನಿಗೆ ಸಂಬಂಧಿಸಿರುವ, ಸಂಬಂಧಪಟ್ಟ ಅಧಿಕಾರಿ ಅಥವಾ ಕ್ಷೇತ್ರವ್ಯಾಪ್ತಿಯುಳ್ಳ ಅಧಿಕಾರಿ.

(1ಎ) ಈ ಅಧ್ಯಾಯದ ಮೇರೆಗೆ ರಾಷ್ಟ್ರೀಯ ಅಪೀಲು ಪ್ರಾಧಿಕಾರವು ಪ್ರಕಟಿಸಿದ ಪೂರ್ವ ನಿರ್ಣಯಕ್ಕೆ ಈ ಕೆಳಕಂಡವರುಗಳು ಬದ್ಧರಾಗಿರತಕ್ಕದ್ದು,–

(ಎ) ಪ್ರಕರಣ 101ಬಿ ಯ ಉಪಪ್ರಕರಣ (1)ರ ಮೇರೆಗೆ ನಿರ್ಣಯವನ್ನು ಕೋರಿರುವ ಭಿನ್ನ ವ್ಯಕ್ತಿಗಳಾಗಿರುವ ಅರ್ಜಿದಾರರು ಮತ್ತು ಆದಾಯ–ತೆರಿಗೆ ಅಧಿನಿಯಮ, 1961 (1961ರ 43)ರ ಮೇರೆಗೆ ನೀಡಲಾದ ಒಂದೇ ಶಾಶ್ವತ ಖಾತೆ ಸಂಖ್ಯೆಯನ್ನು ಹೊಂದಿರುವ ಎಲ್ಲಾ ನೋಂದಾಯಿತ ವ್ಯಕ್ತಿಗಳು;

(ಬಿ) ಖಂಡ (ಎ)ಯಲ್ಲಿ ಉಲ್ಲೇಖಿಸಿದ ಅರ್ಜಿದಾರರ ಸಂಬಂಧದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಅಧಿಕಾರವ್ಯಾಪ್ತಿಯುಳ್ಳ ಅಧಿಕಾರಿಗಳಿಗೆ ಮತ್ತು ಆದಾಯ ತೆರಿಗೆ ಅಧಿನಿಯಮ, 1961 (1961 ರ 43)ರ ಮೇರೆಗೆ ನೀಡಲಾದ ಒಂದೇ ಶಾಶ್ವತ ಖಾತೆ ಸಂಖ್ಯೆಯನ್ನು ಹೊಂದಿರುವ ನೋಂದಾಯಿತ ವ್ಯಕ್ತಿಗಳು.

(2) ಮೊದಲಿನ ಪೂರ್ವ ನಿರ್ಣಯವನ್ನು ಸಮರ್ಥಿಸುವ ಕಾನೂನಿನಲ್ಲಿ, ಸಂಗತಿಗಳಲ್ಲಿ ಅಥವಾ ಸನ್ನಿವೇಶಗಳಲ್ಲಿ ಬದಲಾವಣೆಯಾಗಿದ್ದ ಹೊರತು ಉಪಪ್ರಕರಣ (1)ರಲ್ಲಿ ಮತ್ತು ಉಪಪ್ರಕರಣ (1ಎ)ನಲ್ಲಿ ಹೇಳಿರುವ ಪೂರ್ವ ನಿರ್ಣಯಕ್ಕೆ ಸಂಬಂಧಪಟ್ಟವರೆಲ್ಲರೂ ಬದ್ಧರಾಗಿರತಕ್ಕದ್ದು.

**104. ಕೆಲವು ಸಂದರ್ಭಗಳಲ್ಲಿ ಪೂರ್ವ ನಿರ್ಣಯ ಅನೂರ್ಜಿತವಾಗುತ್ತದೆ.–** (1) ಪ್ರಾಧಿಕಾರಕ್ಕೆ ಅಥವಾ ಅಪೀಲು ಪ್ರಾಧಿಕಾರಕ್ಕೆ ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರಕ್ಕೆ, ಪ್ರಕರಣ 98ರ ಉಪಪ್ರಕರಣ (4)ರ ಅಡಿಯಲ್ಲಿ ಅಥವಾ ಪ್ರಕರಣ 101ರ ಉಪಪ್ರಕರಣ (1)ರ ಅಡಿಯಲ್ಲಿ ಅಥವಾ ಪ್ರಕರಣ 101ಸಿ ಯ ಅಡಿಯಲ್ಲಿ ಪ್ರಾಧಿಕಾರವು ಅಥವಾ ಅಪೀಲು ಪ್ರಾಧಿಕಾರವು

ಪ್ರಕಟಿಸಿದ ಯಾವುದೇ ಪೂರ್ವ ನಿರ್ಣಯವನ್ನು, ಅರ್ಜಿದಾರನು ಅಥವಾ ಅಪೀಲುದಾರನು ಮೋಸದಿಂದ ಅಥವಾ ಮುಖ್ಯ ಸಂಗತಿಗಳು ಗೊತ್ತಾಗದಂತೆ ಮಾಡಿ ಅಥವಾ ಸಂಗತಿಗಳನ್ನು ತಪ್ಪಾಗಿ ಹೇಳಿ ಪಡೆಯಲಾಗಿದೆ ಎಂದು ಕಂಡುಬಂದಲ್ಲಿ, ಅದು, ಆದೇಶದ ಮೂಲಕ, ಅಂಥ ನಿರ್ಣಯವನ್ನು ಅದರ ಆರಂಭದಿಂದಲೇ ಅನೂರ್ಜಿತ ಎಂದು ಘೋಷಿಸಬಹುದು ಮತ್ತು ಅದಾದ ಕೂಡಲೇ, ಅರ್ಜಿದಾರನಿಗೆ ಅಥವಾ ಅಪೀಲುದಾರನಿಗೆ ಈ ಅಧಿನಿಯಮದ ಎಲ್ಲಾ ಉಪಬಂಧಗಳು ಹಾಗೂ ಅದರ ಅಡಿಯಲ್ಲಿ ರಚಿಸಿದ ನಿಯಮಗಳು, ಅಂಥ ಪೂರ್ವ ನಿರ್ಣಯ ಆಗಿಯೇ ಇರದಿದ್ದರೆ ಹೇಗೆ ಅನ್ವಯವಾಗುತ್ತಿದ್ದವೋ ಹಾಗೆಯೇ ಅನ್ವಯವಾಗತಕ್ಕದ್ದು:

ಪರಂತು, ಅರ್ಜಿದಾರನಿಗೆ ಅಥವಾ ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಈ ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**ವಿವರಣೆ.–** ಪ್ರಕರಣ 73ರ ಉಪಪ್ರಕರಣಗಳಾದ (2) ಮತ್ತು (10)ರಲ್ಲಿ ಅಥವಾ ಪ್ರಕರಣ 74ರ ಉಪಪ್ರಕರಣಗಳಾದ (2) ಮತ್ತು (10)ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು ಲೆಕ್ಕಹಾಕುವಾಗ ಅಂಥ ಪೂರ್ವ ನಿರ್ಣಯದ ದಿನಾಂಕದಿಂದ ಆರಂಭವಾಗುವ ಮತ್ತು ಈ ಉಪಪ್ರಕರಣದ ಅಡಿಯಲ್ಲಿನ ಆದೇಶದ ದಿನಾಂಕದೊಂದಿಗೆ ಅಂತ್ಯಗೊಳ್ಳುವ ಅವಧಿಯನ್ನು ಬಿಡತಕ್ಕದ್ದು.

(2) ಉಪಪ್ರಕರಣ (1)ರ ಅಡಿಯಲ್ಲಿ ಮಾಡಿದ ಆದೇಶದ ಪ್ರತಿಯನ್ನು ಅರ್ಜಿದಾರನಿಗೆ, ಸಂಬಂಧಪಟ್ಟ ಅಧಿಕಾರಿಗೆ ಮತ್ತು ಕ್ಷೇತ್ರವ್ಯಾಪ್ತಿಯುಳ್ಳ ಅಧಿಕಾರಿಗೆ ಕಳುಹಿಸತಕ್ಕದ್ದು.

**105. ಪ್ರಾಧಿಕಾರ, ಅಪೀಲು ಪ್ರಾಧಿಕಾರ ಮತ್ತು ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅಧಿಕಾರಗಳು.–** (1) ಪ್ರಾಧಿಕಾರವು ಅಥವಾ, ಅಪೀಲು ಪ್ರಾಧಿಕಾರವು ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರವು,–

(ಎ) ಶೋಧನೆ ಮತ್ತು ತಪಾಸಣೆಗೆ;

(ಬಿ) ಯಾವುದೇ ವ್ಯಕ್ತಿಯ ಹಾಜರಾತಿಗೆ ಒತ್ತಾಯ ಮಾಡುವುದಕ್ಕೆ ಮತ್ತು ಆತನನ್ನು ಪ್ರಮಾಣ ಮಾಡಿಸಿ ಪರೀಕ್ಷಿಸುವುದಕ್ಕೆ;

(ಸಿ) ಕಾರ್ಯಾಜ್ಞೆಗಳನ್ನು ಹೊರಡಿಸುವುದಕ್ಕೆ ಮತ್ತು ಲೆಕ್ಕಪುಸ್ತಕಗಳನ್ನು ಮತ್ತು ಇತರ ದಾಖಲೆಗಳನ್ನು ಹಾಜರುಪಡಿಸಲು ಅಗತ್ಯಪಡಿಸುವುದಕ್ಕೆ

– ಸಂಬಂಧಿಸಿದಂತೆ ತನ್ನ ಅಧಿಕಾರಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಅಡಿಯಲ್ಲಿ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಪ್ರಾಧಿಕಾರವನ್ನು ಅಥವಾ ಅಪೀಲು ಪ್ರಾಧಿಕಾರವನ್ನು ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರವನ್ನು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಅಧ್ಯಾಯ XXVI ರ ಉದ್ದೇಶಗಳ ಹೊರತು, ಭಾರತ ದಂಡ ಸಂಹಿತೆ, 1860 (1860ರ 45)ರ ಪ್ರಕರಣ 195ರ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯ ಎಂದು ಪರಿಭಾವಿಸತಕ್ಕದ್ದು ಮತ್ತು ಪ್ರಾಧಿಕಾರದ

ಅಥವಾ ಅಪೀಲು ಪ್ರಾಧಿಕಾರದ ಮುಂದಿರುವ ಪ್ರತಿಯೊಂದು ವ್ಯವಹರಣೆಯನ್ನು ಭಾರತ ದಂಡ ಸಂಹಿತೆಯ ಪ್ರಕರಣ 196ರ ಉದ್ದೇಶಕ್ಕಾಗಿ, ಪ್ರಕರಣ 193ರ ಮತ್ತು 228ರ ಅರ್ಥವ್ಯಾಪ್ತಿಯಲ್ಲಿನ ನ್ಯಾಯಿಕ ವ್ಯವಹರಣೆಗಳು ಎಂದು ಭಾವಿಸತಕ್ಕದ್ದು.

**106. ಪ್ರಾಧಿಕಾರ, ಅಪೀಲು ಪ್ರಾಧಿಕಾರ ಮತ್ತು ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಕಾರ್ಯವಿಧಾನ.–** ಪ್ರಾಧಿಕಾರವು ಅಥವಾ ಅಪೀಲು ಪ್ರಾಧಿಕಾರವು ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರವು, ಈ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, ತನ್ನದೇ ಆದ ಸ್ವಂತ ಕಾರ್ಯವಿಧಾನವನ್ನು ನಿಯಮಿಸಿಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು.

## ಅಧ್ಯಾಯ XVIII

## ಅಪೀಲುಗಳು ಮತ್ತು ಪುನರೀಕ್ಷಣೆ

**107. ಅಪೀಲು ಪ್ರಾಧಿಕಾರಕ್ಕೆ ಅಪೀಲುಗಳು.–** (1) ಈ ಅಧಿನಿಯಮದ ಅಥವಾ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಮೇರೆಗೆ ನ್ಯಾಯನಿರ್ಣಯ ಪ್ರಾಧಿಕಾರವು ಹೊರಡಿಸಿದ ಯಾವುದೇ ತೀರ್ಮಾನದಿಂದ ಅಥವಾ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಸದರಿ ತೀರ್ಮಾನವನ್ನು ಅಥವಾ ಆದೇಶವನ್ನು ಅಂಥ ವ್ಯಕ್ತಿಗೆ ತಿಳಿಸಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ, ಅಪೀಲನ್ನು ನಿಯಮಿಸಬಹುದಾದಂಥ ಅಪೀಲು ಪ್ರಾಧಿಕಾರಕ್ಕೆ ಸಲ್ಲಿಸಬಹುದು.

(2) ಆಯುಕ್ತರು, ಸ್ವಪ್ರೇರಣೆಯಿಂದ ಅಥವಾ ರಾಜ್ಯ ತೆರಿಗೆ ಆಯುಕ್ತರಿಂದ ಅಥವಾ ಒಕ್ಕೂಟ ರಾಜ್ಯಕ್ಷೇತ್ರಗಳ ತೆರಿಗೆ ಆಯುಕ್ತರ ಕೋರಿಕೆಯ ಮೇಲೆ, ಈ ಅಧಿನಿಯಮದ ಅಥವಾ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಮೇರೆಗೆ, ನ್ಯಾಯನಿರ್ಣಯ ಪ್ರಾಧಿಕಾರದಿಂದ ಹೊರಡಿಸಿದ ಯಾವುದೇ ನಿರ್ಣಯ ಅಥವಾ ಆದೇಶದ ಯಾವುದೇ ವ್ಯವಹರಣೆಗಳ ದಾಖಲೆಗಳನ್ನು ಅವುಗಳ ಕಾನೂನುಸಮ್ಮತತೆ ಹಾಗೂ ಔಚಿತ್ಯತೆಯನ್ನು ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಆಯುಕ್ತರು, ತಮ್ಮ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಸದರಿ ನಿರ್ಣಯ ಅಥವಾ ಆದೇಶದಿಂದ ಉದ್ಭವಿಸಿರುವ ಅಂಥ ಅಂಶಗಳನ್ನು ನಿರ್ಧರಿಸುವುದಕ್ಕಾಗಿ, ಸದರಿ ನಿರ್ಣಯ ಅಥವಾ ಆದೇಶವನ್ನು ತಿಳಿಸಿದ ದಿನಾಂಕದಿಂದ ಆರು ತಿಂಗಳ ಒಳಗಾಗಿ ಅಪೀಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವಂತೆ, ತನಗೆ ಅಧೀನನಾದ ಯಾರೇ ಅಧಿಕಾರಿಯನ್ನು ಆದೇಶದ ಮೂಲಕ ನಿರ್ದೇಶಿಸಬಹುದು.

(3) ಉಪಪ್ರಕರಣ (2)ರ ಅಡಿಯಲ್ಲಿನ ಆದೇಶದ ಅನುಸರಣೆಯಲ್ಲಿ, ಪ್ರಾಧಿಕೃತ ಅಧಿಕಾರಿಯು ಅಪೀಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ, ಅಂಥ ಅರ್ಜಿಯನ್ನು ಅಪೀಲು ಪ್ರಾಧಿಕಾರವು, ನ್ಯಾಯ ನಿರ್ಣಯ ಪ್ರಾಧಿಕಾರದ ನಿರ್ಣಯ ಅಥವಾ ಆದೇಶದ ವಿರುದ್ಧವಾಗಿ ಅಪೀಲು ಮಾಡಲಾಗಿದ್ದರೆ ಹಾಗೂ ಅಂಥ ಪ್ರಾಧಿಕೃತ ಅಧಿಕಾರಿಯೇ ಅಪೀಲುದಾರನಾಗಿದ್ದರೆ ಹೇಗೆ ವ್ಯವಹರಿಸಲಾಗುತ್ತಿತ್ತೋ ಹಾಗೆ ವ್ಯವಹರಿಸತಕ್ಕದ್ದು ಮತ್ತು ಅಪೀಲಿಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು ಅಂಥ ಅರ್ಜಿಗೆ ಅನ್ವಯವಾಗತಕ್ಕದ್ದು.

(4) ಅಪೀಲು ಪ್ರಾಧಿಕಾರವು, ಮೇಲೆ ಹೇಳಿದ ಮೂರು ತಿಂಗಳುಗಳ ಅಥವಾ ಸಂದರ್ಭಾನುಸಾರ ಆರು ತಿಂಗಳುಗಳ ಅವಧಿಯ ಒಳಗಾಗಿ, ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದಾಗಿ ಅಪೀಲುದಾರನೆ ಅಡೆತಡೆಯುಂಟಾಗಿತ್ತೆಂದು ಆತನು ಮನದಟ್ಟು ಮಾಡಿಕೊಟ್ಟಿದ್ದರೆ, ಅದನ್ನು ಒಂದು ತಿಂಗಳ ಹೆಚ್ಚಿನ ಅವಧಿಯ ಒಳಗಾಗಿ ಸಲ್ಲಿಸಲು ಅವಕಾಶ ನೀಡಬಹುದು.

(5) ಈ ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ಅಪೀಲು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ವಿಧಾನದಲ್ಲಿ ಪರಿಶೀಲಿಸತಕ್ಕದ್ದು.

(6) ಅಪೀಲುದಾರನು, ಈ ಕೆಳಗಿನವುಗಳನ್ನು, ಎಂದರೆ:–

(ಎ) ಆಕ್ಷೇಪಿತ ಆದೇಶದಿಂದಾಗಿ ಉದ್ಭವಿಸಿರುವ ತೆರಿಗೆ, ಬಡ್ಡಿ, ಜುಲ್ಮಾನೆ, ಶುಲ್ಕ ಮತ್ತು ದಂಡದ ಮೊತ್ತದಲ್ಲಿ, ಆತನಿಂದ ಒಪ್ಪಿಕೊಂಡಿರುವ ಅಂಥ ಭಾಗವನ್ನು, ಪೂರ್ಣವಾಗಿ; ಮತ್ತು

(ಬಿ) ಯಾವುದಕ್ಕೆ ಸಂಬಂಧಿಸಿದಂತೆ ಅಪೀಲು ಸಲ್ಲಿಸಲಾಗಿರುವುದೋ, ಆ ಆದೇಶಕ್ಕೆ ಸಂಬಂಧಿಸಿದಂತೆ, ಗರಿಷ್ಠ ಇಪ್ಪತ್ತೈದು ಕೋಟಿ ರೂಪಾಯಿಗಳಿಗೊಳಪಟ್ಟು ಸದರಿ ಆದೇಶದಿಂದ ಉದ್ಭವಿಸಿರುವ ವಿವಾದದಲ್ಲಿರುವ ತೆರಿಗೆಯ ಉಳಿದ ಮೊತ್ತದ ಶೇಕಡಾ ಹತ್ತರಷ್ಟಕ್ಕೆ ಸಮನಾದ ಮೊಬಲಗನ್ನು

– ಸಂದಾಯ ಮಾಡಿದ್ದ ಹೊರತು, ಉಪಪ್ರಕರಣ (1)ರ ಅಡಿಯಲ್ಲಿ ಅಪೀಲನ್ನು ಸಲ್ಲಿಸತಕ್ಕದ್ದಲ್ಲ.

(7) ಅಪೀಲುದಾರನು ಉಪಪ್ರಕರಣ (6)ರ ಅಡಿಯಲ್ಲಿನ ಮೊಬಲಗನ್ನು ಸಂದಾಯ ಮಾಡಿದ್ದಲ್ಲಿ, ಬಾಕಿ ಮೊತ್ತಕ್ಕಾಗಿ ವಸೂಲಾತಿ ವ್ಯವಹರಣೆಗಳನ್ನು ತಡೆಹಿಡಿಯಲಾಗಿದೆ ಎಂದು ಭಾವಿಸತಕ್ಕದ್ದು.

(8) ಅಪೀಲು ಪ್ರಾಧಿಕಾರವು, ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕದ್ದು.

(9) ಅಪೀಲು ಪ್ರಾಧಿಕಾರವು, ಅಪೀಲಿನ ವಿಚಾರಣೆ ಯಾವುದೇ ಹಂತದಲ್ಲಿ ಸಾಕಷ್ಟು ಕಾರಣವನ್ನು ತೋರಿಸಿದರೆ, ಪಕ್ಷಕಾರರಿಗೆ ಅಥವಾ ಅವರಲ್ಲಿ ಯಾರಿಗಾದರೂ ಕಾಲಾವಕಾಶವನ್ನು ಮಂಜೂರು ಮಾಡಬಹುದು ಮತ್ತು ಅಪೀಲಿನ ವಿಚಾರಣೆಯ ಕಾರಣಗಳನ್ನು ಲಿಖಿತವಾಗಿ ದಾಖಲಿಸಿ ಮುಂದೂಡಬಹುದು:

ಪರಂತು, ಅಪೀಲಿನ ವಿಚಾರಣೆ ಸಮಯದಲ್ಲಿ ಒಬ್ಬ ಪಕ್ಷಕಾರನಿಗೆ ಮೂರು ಬಾರಿಗಿಂತ ಹೆಚ್ಚು ಸಲ ಅಂಥ ಮುಂದೂಡಿಕೆಯನ್ನು ನೀಡತಕ್ಕದ್ದಲ್ಲ.

(10) ಅಪೀಲು ಪ್ರಾಧಿಕಾರವು, ಅಪೀಲಿನ ವಿಚಾರಣೆ ಸಮಯದಲ್ಲಿ, ಅಪೀಲಿಗೆ ನೀಡಿದ ಆಧಾರಗಳು, ಆ ಆಧಾರಗಳು ಬಿಟ್ಟುಹೋಗಿರುವುದು ಉದ್ದೇಶಪೂರ್ವಕವಾದವುಗಳಲ್ಲ ಅಥವಾ ಅನುಚಿತವಾದವುಗಳಲ್ಲ ಎಂದು ಅದಕ್ಕೆ ಮನದಟ್ಟಾಗಿದ್ದರೆ, ಅಪೀಲಿನ ಆಧಾರಗಳಲ್ಲಿ ನಿರ್ದಿಷ್ಟಪಡಿಸಿಲ್ಲದ, ಅಪೀಲಿನ ಯಾವುವೇ ಹೆಚ್ಚಿನ ಆಧಾರಗಳನ್ನು ಸೇರಿಸಲು ಅಪೀಲುದಾರನಿಗೆ ಅವಕಾಶವನ್ನು ನೀಡಬಹುದು.

(11) ಅಪೀಲು ಪ್ರಾಧಿಕಾರವು, ಅವಶ್ಯಕವಾಗಬಹುದಾದಂಥ ಮತ್ತಷ್ಟು ವಿಚಾರಣೆಯನ್ನು ಮಾಡಿದ ನಂತರ, ನ್ಯಾಯಸಮ್ಮತ ಮತ್ತು ಉಚಿತ ಎಂದು ಅದು ಭಾವಿಸಿದರೆ, ಯಾವುದರ ವಿರುದ್ಧ ಅಪೀಲು ಸಲ್ಲಿಸಲಾಗಿತ್ತೋ ಆ ನಿರ್ಣಯ ಅಥವಾ ಆದೇಶವನ್ನು ಸ್ಥಿರೀಕರಿಸಿ, ಮಾರ್ಪಡಿಸಿ ಅಥವಾ ರದ್ದುಗೊಳಿಸಿ ಅಂಥ ಆದೇಶವನ್ನು ಹೊರಡಿಸತಕ್ಕದ್ದು, ಆದರೆ ಸದರಿ ನಿರ್ಣಯವನ್ನು ಅಥವಾ ಆದೇಶವನ್ನು ಹೊರಡಿಸಿದ ನ್ಯಾಯನಿರ್ಣಯ ಪ್ರಾಧಿಕಾರಕ್ಕೆ ಪ್ರಕರಣವನ್ನು ಪುನಃ ಒಪ್ಪಿಸತಕ್ಕದ್ದಲ್ಲ:

ಪರಂತು, ಯಾವುದೇ ಶುಲ್ಕ ಅಥವಾ ದಂಡ ಅಥವಾ ಮುಟ್ಟುಗೋಲಿನ ಬದಲಿಗೆ ಜುಲ್ಮಾನೆಯನ್ನು ಹೆಚ್ಚಿಸುವ ಅಥವಾ ಹೆಚ್ಚಿನ ಮೌಲ್ಯದ ಸರಕುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಥವಾ ಮರುಪಾವತಿಯ ಮೊತ್ತ ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ಕಡಿಮೆ ಮಾಡುವ, ಆದೇಶವನ್ನು, ಅಪೀಲುದಾರನಿಗೆ, ಪ್ರಸ್ತಾವಿತ ಆದೇಶದ ವಿರುದ್ಧ ಕಾರಣಗಳನ್ನು ತೋರಿಸಲು ಯುಕ್ತವಾದ ಅವಕಾಶವನ್ನು ನೀಡದ ಹೊರತು ಹೊರಡಿಸತಕ್ಕದ್ದಲ್ಲ:

ಮತ್ತು ಪರಂತು, ಯಾವುದೇ ತೆರಿಗೆಯನ್ನು ಸಂದಾಯ ಮಾಡಲಾಗಿಲ್ಲ ಅಥವಾ ಕಡಿಮೆ ಸಂದಾಯ ಮಾಡಲಾಗಿದೆ ಅಥವಾ ತಪ್ಪಿನಿಂದ ಮರುಪಾವತಿ ಮಾಡಲಾಗಿದೆ ಅಥವಾ ತಪ್ಪಾಗಿ ತೆಗೆದುಕೊಳ್ಳಲಾಗಿದೆ ಅಥವಾ ಬಳಸಲಾಗಿದೆ ಎಂದು ಅಪೀಲು ಪ್ರಾಧಿಕಾರವು ಅಭಿಪ್ರಾಯಪಟ್ಟಲ್ಲಿ, ಅಂಥ ತೆರಿಗೆ ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ಸಂದಾಯ ಮಾಡಲು ಅಪೀಲುದಾರನನ್ನು ಅಗತ್ಯಪಡಿಸುವ ಆದೇಶವನ್ನು, ಪ್ರಸ್ತಾವಿತ ಆದೇಶದ ವಿರುದ್ಧ ಕಾರಣಗಳನ್ನು ತೋರಿಸಲು ಅಪೀಲುದಾರನಿಗೆ ನೋಟೀಸನ್ನು ನೀಡಿದ ಹೊರತು ಮತ್ತು ಪ್ರಕರಣ 73 ಅಥವಾ ಪ್ರಕರಣ 74ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಕಾಲಮಿತಿಯ ಒಳಗಾಗಿ ಆ ಆದೇಶವನ್ನು ಹೊರಡಿಸಿದ್ದ ಹೊರತು ಹೊರಡಿಸತಕ್ಕದ್ದಲ್ಲ.

(12) ಅಪೀಲನ್ನು ವಿಲೆ ಮಾಡುವ ಅಪೀಲು ಪ್ರಾಧಿಕಾರದ ಆದೇಶವು ಲಿಖಿತವಾಗಿರತಕ್ಕದ್ದು ಮತ್ತು ನಿರ್ಧರಣೆಗಾಗಿ ಇರುವ ಅಂಶಗಳನ್ನು, ಅದರ ಮೇಲಿನ ನಿರ್ಣಯವನ್ನು ಮತ್ತು ಅಂಥ ನಿರ್ಣಯಕ್ಕೆ ಕಾರಣಗಳನ್ನು ತಿಳಿಸತಕ್ಕದ್ದು:

(13) ಅಪೀಲು ಪ್ರಾಧಿಕಾರವು, ಅದಕ್ಕೆ ಹಾಗೆ ಮಾಡಲು ಸಾಧ್ಯವಾಗುವಲ್ಲಿ, ಪ್ರತಿಯೊಂದು ಅಪೀಲನ್ನು ಅದು ಸಲ್ಲಿಸಿದ್ದ ದಿನಾಂಕದಿಂದ ಒಂದು ವರ್ಷದ ಅವಧಿಯ ಒಳಗಾಗಿ ವಿಚಾರಣೆ ಮಾಡತಕ್ಕದ್ದು ಮತ್ತು ನಿರ್ಣಯಿಸತಕ್ಕದ್ದು:

ಪರಂತು ಆದೇಶ ನೀಡಿಕೆಗೆ, ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಆದೇಶದಿಂದ ತಡೆಯಲಾಗಿದ್ದಲ್ಲಿ, ಹಾಗೆ ತಡೆಹಿಡಿದ ಅವಧಿಯನ್ನು, ಒಂದು ವರ್ಷದ ಅವಧಿಯನ್ನು ಲೆಕ್ಕಹಾಕುವಾಗ ಬಿಡತಕ್ಕದ್ದು.

(14) ಅಪೀಲನ್ನು ವಿಲೆ ಮಾಡಿದ ನಂತರ, ಅಪೀಲು ಪ್ರಾಧಿಕಾರವು ಅದು ಹೊರಡಿಸಿದ ಆದೇಶವನ್ನು ಅಪೀಲುದಾರನಿಗೆ, ಪ್ರತಿವಾದಿಗೆ ಮತ್ತು ನ್ಯಾಯನಿರ್ಣಯ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(15) ಅಪೀಲು ಪ್ರಾಧಿಕಾರವು ಹೊರಡಿಸಿದ ಆದೇಶದ ಪ್ರತಿಯನ್ನು ಅಧಿಕಾರವ್ಯಾಪ್ತಿಯುಳ್ಳ ಆಯುಕ್ತರಿಗೆ ಅಥವಾ ಈ ಸಂಬಂಧದಲ್ಲಿ ಅವರು ಹೆಸರಿಸಿದ ಪ್ರಾಧಿಕಾರಿಗೆ ಮತ್ತು ರಾಜ್ಯ ತೆರಿಗೆ ಅಧಿಕಾರವ್ಯಾಪ್ತಿಯುಳ್ಳ ಆಯುಕ್ತರಿಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಆಯುಕ್ತರಿಗೆ ಅಥವಾ ಈ ಸಂಬಂಧದಲ್ಲಿ ಅವರು ಹೆಸರಿಸಿದ ಪ್ರಾಧಿಕಾರಿಗೂ ಸಹ ಕಳುಹಿಸತಕ್ಕದ್ದು.

(16) ಪ್ರಕರಣ 108ರ ಅಥವಾ ಪ್ರಕರಣ 113ರ ಅಥವಾ ಪ್ರಕರಣ 117ರ ಅಥವಾ ಪ್ರಕರಣ 118ರ ಉಪಬಂಧಗಳಿಗೆ ಒಳಪಟ್ಟು ಈ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು ಹಾಗೂ ಪಕ್ಷಕಾರರು ಬದ್ಧರಾಗಿರತಕ್ಕದ್ದು.

**108. ಪುನರೀಕ್ಷಣಾ ಪ್ರಾಧಿಕಾರದ ಅಧಿಕಾರಗಳು.–** (1) ಪ್ರಕರಣ 121ರ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳಿಗೆ ಒಳಪಟ್ಟು, ಪುನರೀಕ್ಷಣಾ ಪ್ರಾಧಿಕಾರವು, ಸ್ವತಃ ತಾನೇ ಅಥವಾ ಅದು ಸ್ವೀಕರಿಸಿದ ಮಾಹಿತಿಯ ಮೇಲೆ ಅಥವಾ ರಾಜ್ಯ ತೆರಿಗೆಯ ಆಯುಕ್ತರು ಅಥವಾ ಕೆಂದ್ರಾಡಳಿತ ಪ್ರದೇಶದ ಆಯುಕ್ತರ ಕೋರಿಕೆಯ ಮೇಲೆ, ಯಾವುದೇ ವ್ಯವಹರಣೆಗಳ ದಾಖಲೆಯನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ತನಗೆ ಅಧೀನನಾದ ಯಾರೇ

ಅಧಿಕಾರಿಯಿಂದ, ಈ ಅಧಿನಿಯಮದ ಮೇರೆಗೆ ಅಥವಾ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಕೇಂದ್ರಾಡಳಿತ ಪ್ರದೇಶದ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಮೇರೆಗೆ ಹೊರಡಿಸಿದ ಯಾವುದೇ ನಿರ್ಣಯವು ಅಥವಾ ಆದೇಶವು, ರಾಜಸ್ವದ ಹಿತಾಸಕ್ತಿಗೆ ಬಾಧಕವಾಗುವಷ್ಟರ ಮಟ್ಟಿಗೆ ತಪ್ಪಾಗಿರುವುದನ್ನು ಮತ್ತು ಕಾನೂನುಬಾಹಿರವಾಗಿರುವುದನ್ನು ಅಥವಾ ಅನುಚಿತವಾಗಿರುವುದನ್ನು ಅಥವಾ ಕೆಲವು ಮುಖ್ಯ ಸಂಗತಿಗಳನ್ನು, ಸದರಿ ಆದೇಶವನ್ನು ನೀಡುವ ಸಮಯದಲ್ಲಿ ಲಭ್ಯವಿರಲಿ ಅಥವಾ ಇಲ್ಲದಿರಲಿ, ಗಣನೆಗೆ ತೆಗೆದುಕೊಂಡಿಲ್ಲ ಎಂದು ಪರಿಗಣಿಸಿದ್ದರೆ ಅಥವಾ ಭಾರತೀಯ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರ ಪರಿವೀಕ್ಷಣೆಯ ಪರಿಣಾಮವಾಗಿ, ಅವಶ್ಯವಿದ್ದರೆ, ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅವಧಿಯವರೆಗೆ ಅಂಥ ನಿರ್ಣಯ ಅಥವಾ ಆದೇಶದ ಕಾರ್ಯಾಚರಣೆಯನ್ನು ತಡೆಹಿಡಿಯಬಹುದು ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ ಮತ್ತು ಅವಶ್ಯವಿರಬಹುದಾದ ಅಂಥ ಹೆಚ್ಚಿನ ವಿಚಾರಣೆಯನ್ನು ಮಾಡಿದ ನಂತರ ಅದು ನ್ಯಾಯಸಮ್ಮತ ಮತ್ತು ಉಚಿತವಾದದೆಂದು ಭಾವಿಸುವಂತೆ, ಸದರಿ ನಿರ್ಣಯವನ್ನು ಅಥವಾ ಆದೇಶವನ್ನು ಸ್ಥಿರೀಕರಿಸುವುದು, ಮಾರ್ಪಾಡು ಮಾಡುವುದು ಅಥವಾ ರದ್ದುಗೊಳಿಸುವುದು ಒಳಗೊಂಡಂತೆ ಅಂಥ ಆದೇಶವನ್ನು ಹೊರಡಿಸಬಹುದು.

(2) ಪುನರೀಕ್ಷಣಾ ಪ್ರಾಧಿಕಾರವು,–

(ಎ) ಆದೇಶವು, ಪ್ರಕರಣ 107ರ ಅಥವಾ ಪ್ರಕರಣ 112ರ ಅಥವಾ ಪ್ರಕರಣ 117ರ ಅಥವಾ ಪ್ರಕರಣ 118ರ ಮೇರೆಗೆ ಅಪೀಲಿಗೆ ಒಳಪಟ್ಟಿದ್ದರೆ; ಅಥವಾ

(ಬಿ) ಪ್ರಕರಣ 107ರ ಉಪಪ್ರಕರಣ (2)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯು ಇನ್ನೂ ಮುಕ್ತಾಯವಾಗದೇ ಇದ್ದರೆ ಅಥವಾ ಪರಿಷ್ಕರಿಸಬೇಕಾದ ನಿರ್ಣಯವನ್ನು ಅಥವಾ ಆದೇಶವನ್ನು ಹೊರಡಿಸಿ ಮೂರು ವರ್ಷಗಳಿಗಿಂತ ಹೆಚ್ಚು ಅವಧಿಯು ಮುಕ್ತಾಯವಾಗದಿದ್ದರೆ; ಅಥವಾ

(ಸಿ) ಆ ಆದೇಶವನ್ನು, ಈ ಪ್ರಕರಣದ ಅಡಿಯಲ್ಲಿ ಮುಂಚಿನ ಹಂತದಲ್ಲಿ ಪುನರೀಕ್ಷಣೆಗೆ ಈಗಾಗಲೇ ತೆಗೆದುಕೊಂಡಿದ್ದರೆ; ಅಥವಾ

(ಡಿ) ಉಪಪ್ರಕರಣ (1)ರ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸಿ ಆದೇಶವನ್ನು ಹೊರಡಿಸಿದ್ದರೆ

– ಉಪಪ್ರಕರಣ (1)ರ ಮೇರೆಗೆ ಯಾವುದೇ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ:

ಪರಂತು, ಪುನರೀಕ್ಷಣಾ ಪ್ರಾಧಿಕಾರವು, ಉಪಪ್ರಕರಣ (2)ರ ಖಂಡ (ಎ)ಯಲ್ಲಿ ಉಲ್ಲೇಖಿಸಿದ ಅಪೀಲಿನಲ್ಲಿ ಸವಾಲೊಡ್ಡದ ಮತ್ತು ನಿರ್ಣಯಿಸಿಲ್ಲದ ಯಾವುದೇ ಅಂಶದ ಮೇಲೆ, ಅಂಥ ಅಪೀಲಿನಲ್ಲಿನ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿ ಮುಕ್ತಾಯವಾಗುವುದಕ್ಕೆ ಮೊದಲು ಅಥವಾ ಆ ಉಪಪ್ರಕರಣದ ಖಂಡ (ಬಿ)ಯಲ್ಲಿ ಉಲ್ಲೇಖಿಸಲಾಗಿರುವ ಮೂರು ವರ್ಷಗಳ ಅವಧಿಯು ಮುಕ್ತಾಯವಾಗುವ ಮೊದಲು, ಇವುಗಳಲ್ಲಿ ಯಾವುದು ತರುವಾಯವೋ, ಅದರೊಳಗಾಗಿ ಉಪಪ್ರಕರಣ (1)ರ ಅಡಿಯಲ್ಲಿ, ಒಂದು ಆದೇಶವನ್ನು ಹೊರಡಿಸಬಹುದು.

(3) ಉಪಪ್ರಕರಣ (1)ರ ಅಡಿಯಲ್ಲಿ, ಪುನರೀಕ್ಷಣೆಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು, ಪ್ರಕರಣ 113ರ ಅಥವಾ ಪ್ರಕರಣ 117ರ ಅಥವಾ ಪ್ರಕರಣ 118ರ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು ಹಾಗೂ ಪಕ್ಷಕಾರರು ಬದ್ಧರಾಗಿರತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ನೋಟೀಸನ್ನು ನೀಡುವುದರ ಮೂಲಕ, ಪುನರೀಕ್ಷಣೆಗಾಗಿ ವ್ಯವಹರಣೆಗಳನ್ನು ಪ್ರಾರಂಭಿಸಲಾಗಿದ್ದಲ್ಲಿ, ಸದರಿ ನಿರ್ಣಯವು ಅಥವಾ ಆದೇಶವು, ಯಾವ ವಿವಾದಗಳ ಮೇಲೆ ಅಪೀಲು ನ್ಯಾಯಾಧಿಕರಣವು ಅಥವಾ ಉಚ್ಚ ನ್ಯಾಯಾಲಯವು, ಕೆಲವು ಇತರ ವ್ಯವಹರಣೆಗಳಲ್ಲಿ ತನ್ನ ನಿರ್ಣಯವನ್ನು ನೀಡಿತ್ತೋ ಆ ವಿವಾದವನ್ನು ಒಳಗೊಂಡಿದ್ದರೆ ಮತ್ತು ಅಪೀಲು ನ್ಯಾಯಾಧಿಕರಣದ ಅಥವಾ ಉಚ್ಚ ನ್ಯಾಯಾಲಯದ ಅಂಥ ನಿರ್ಣಯದ ವಿರುದ್ಧ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವ ಅಪೀಲು ಇತ್ಯರ್ಥದಲ್ಲಿದ್ದಾಗ, ಅಪೀಲು ನ್ಯಾಯಾಧಿಕರಣದ ನಿರ್ಣಯದ ದಿನಾಂಕ ಮತ್ತು ಉಚ್ಚ ನ್ಯಾಯಾಲಯದ ನಿರ್ಣಯದ ದಿನಾಂಕ ಅಥವಾ ಉಚ್ಚ ನ್ಯಾಯಾಲಯದ ನಿರ್ಣಯದ ದಿನಾಂಕ ಮತ್ತು ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ದಿನಾಂಕ ಇವುಗಳ ನಡುವಿನ ಅವಧಿಯನ್ನು, ಉಪಪ್ರಕರಣ (2)ರ ಖಂಡ (ಬಿ)ಯಲ್ಲಿ ಉಲ್ಲೇಖಿಸಲಾದ ಕಾಲಮಿತಿಯ ಅವಧಿಯನ್ನು ಲೆಕ್ಕಹಾಕುವಾಗ ಬಿಡತಕ್ಕದ್ದು.

(5) ಉಪಪ್ರಕರಣ (1)ರ ಅಡಿಯಲ್ಲಿ ಆದೇಶ ನೀಡಿಕೆಯನ್ನು, ನ್ಯಾಯಾಲಯದ ಅಥವಾ ಅಪೀಲು ನ್ಯಾಯಾಧಿಕರಣದ ಆದೇಶದಿಂದ ತಡೆಹಿಡಿಯಲಾಗಿದ್ದಲ್ಲಿ, ಹಾಗೆ ತಡೆಹಿಡಿದಿದ್ದ ಅವಧಿಯನ್ನು ಉಪಪ್ರಕರಣ (2)ರ ಖಂಡ (ಬಿ)ಯಲ್ಲಿ ಉಲ್ಲೇಖಿಸಿ ಅವಧಿಯನ್ನು ಲೆಕ್ಕಹಾಕುವಾಗ ಬಿಡತಕ್ಕದ್ದು.

(6) ಈ ಪ್ರಕರಣದ ಉದ್ದೇಶಗಳಿಗಾಗಿ,–

(i) 'ದಾಖಲೆ' ಎಂಬ ಪದವು, ಪುನರೀಕ್ಷಣಾ ಪ್ರಾಧಿಕಾರವು ಪರೀಕ್ಷಿಸುವ ಸಮಯದಲ್ಲಿ ಲಭ್ಯವಿರುವ, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ವ್ಯವಹರಣೆಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಒಳಗೊಳ್ಳತಕ್ಕದ್ದು.

(ii) 'ನಿರ್ಣಯ' ಎಂಬ ಪದವು, ಪುನರೀಕ್ಷಣಾ ಪ್ರಾಧಿಕಾರಿಗಿಂತ ದರ್ಜೆಯಲ್ಲಿ ಕಡಿಮೆಯಿರುವ, ಇತರ ಯಾರೇ ಅಧಿಕಾರಿಯು ನೀಡಿದ ಸೂಚನೆಯನ್ನು ಒಳಗೊಳ್ಳತಕ್ಕದ್ದು.

**109. ಅಪೀಲು ನ್ಯಾಯಾಧಿಕರಣ ಮತ್ತು ಅದರ ನ್ಯಾಯಪೀಠಗಳ ರಚನೆ.–** (1) ಸರ್ಕಾರವು, ಪರಿಷತ್ತಿನ ಶಿಫಾರಸುಗಳ ಮೇಲೆ ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಅಪೀಲು ಪ್ರಾಧಿಕಾರವು ಅಥವಾ ಪುನರೀಕ್ಷಣಾ ಪ್ರಾಧಿಕಾರವು ಹೊರಡಿಸಿದ ಆದೇಶಗಳ ವಿರುದ್ಧದ ಅಪೀಲುಗಳ ವಿಚಾರಣೆ ಮಾಡಲು "ಸರಕುಗಳು ಮತ್ತು ಸೇವೆಗಳ ತೆರಿಗೆ ಅಪೀಲು ನ್ಯಾಯಾಧಿಕರಣ" ಎಂಬ ಹೆಸರಿನ ಅಪೀಲು ನ್ಯಾಯಾಧಿಕರಣವನ್ನು ರಚಿಸತಕ್ಕದ್ದು.

(2) ಅಪೀಲು ನ್ಯಾಯಾಧಿಕರಣದ ಅಧಿಕಾರಗಳು ರಾಷ್ಟ್ರೀಯ ನ್ಯಾಯಪೀಠ ಮತ್ತು ಅದರ ನ್ಯಾಯಪೀಠಗಳು, (ಈ ಅಧ್ಯಾಯದಲ್ಲಿ ಇನ್ನು ಮುಂದೆ "ಪ್ರಾದೇಶಿಕ ನ್ಯಾಯಪೀಠಗಳು" ಎಂದು ಉಲ್ಲೇಖಿಸಲಾಗಿದೆ), ರಾಜ್ಯ ನ್ಯಾಯಪೀಠ ಮತ್ತು ಅದರ ನ್ಯಾಯಪೀಠಗಳು (ಈ ಅಧ್ಯಾಯದಲ್ಲಿ ಇನ್ನು ಮುಂದೆ "ಪ್ರದೇಶ ನ್ಯಾಯಪೀಠಗಳು" ಎಂದು ಉಲ್ಲೇಖಿಸಲಾಗಿದೆ) ಚಲಾಯಿಸಬಹುದಾದವುಗಳಾಗಿರತಕ್ಕದ್ದು.

(3) ಅಪೀಲು ನ್ಯಾಯಾಧಿಕರಣದ ರಾಷ್ಟ್ರೀಯ ನ್ಯಾಯಪೀಠವು ನವದೆಹಲಿಯಲ್ಲಿ ಇರತಕ್ಕದ್ದು ಮತ್ತು ಅಧ್ಯಕ್ಷರು, ಇದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಇದರಲ್ಲಿ ಒಬ್ಬರು ತಾಂತ್ರಿಕ ಸದಸ್ಯರನ್ನು (ಕೇಂದ್ರ) ಮತ್ತು ಒಬ್ಬರು ತಾಂತ್ರಿಕ ಸದಸ್ಯರನ್ನು (ರಾಜ್ಯ) ಒಳಗೊಂಡಿರತಕ್ಕದ್ದು.

(4) ಸರ್ಕಾರವು ಪರಿಷತ್ತಿನ ಶಿಫಾರಸ್ಸುಗಳ ಮೇಲೆ ಅಧಿಸೂಚನೆಯ ಮೂಲಕ ಅಗತ್ಯವಿರುವಷ್ಟು ಸಂಖ್ಯೆಯ ಪ್ರಾದೇಶಿಕ ನ್ಯಾಯಪೀಠಗಳನ್ನು ರಚಿಸತಕ್ಕದ್ದು ಮತ್ತು ಅಂಥ ಪ್ರಾದೇಶಿಕ ನ್ಯಾಯಪೀಠಗಳು ಒಬ್ಬರು ನ್ಯಾಯಿಕ ಸದಸ್ಯರನ್ನು, ಒಬ್ಬರು ತಾಂತ್ರಿಕ ಸದಸ್ಯರನ್ನು (ಕೇಂದ್ರ), ಒಬ್ಬರು ತಾಂತ್ರಿಕ ಸದಸ್ಯರನ್ನು (ರಾಜ್ಯ) ಒಳಗೊಂಡಿರತಕ್ಕದ್ದು.

(5) ಅಪೀಲು ನ್ಯಾಯಾಧಿಕರಣದ ರಾಷ್ಟ್ರೀಯ ನ್ಯಾಯಪೀಠವು ಅಥವಾ ಪ್ರಾದೇಶಿಕ ನ್ಯಾಯಪೀಠಗಳು, ಪ್ರಕರಣಗಳು ಒಳಗೊಂಡಿರುವ ವಿವಾದಾಂಶಗಳಲ್ಲಿ ಒಂದಂಶವು ಪೂರೈಕೆಯ ಸ್ಥಳಕ್ಕೆ ಸಂಬಂಧಪಟ್ಟ ಪ್ರಕರಣಗಳಲ್ಲಿ, ಅಪೀಲು ಪ್ರಾಧಿಕಾರವು ಅಥವಾ ಪುನರೀಕ್ಷಣಾ ಪ್ರಾಧಿಕಾರವು ಹೊರಡಿಸಿದ ಆದೇಶಗಳ ವಿರುದ್ಧದ ಅಪೀಲುಗಳ ವಿಚಾರಣೆ ಮಾಡುವ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು.

(6) ಸರ್ಕಾರವು, ಅಧಿಸೂಚನೆಯ ಮೂಲಕ ಪ್ರತಿಯೊಂದು ರಾಜ್ಯಕ್ಕೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರಕ್ಕೆ, ಸಂಬಂಧಪಟ್ಟ ರಾಜ್ಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ವ್ಯಾಪ್ತಿಯ ಅಪೀಲು ನ್ಯಾಯಾಧಿಕರಣದ ಅಧಿಕಾರಗಳನ್ನು ಚಲಾಯಿಸಲು ಅಪೀಲು ನ್ಯಾಯಾಧಿಕರಣ ನ್ಯಾಯಪೀಠವನ್ನು (ಈ ಅಧ್ಯಾಯದಲ್ಲಿ ಇನ್ನು ಮುಂದೆ ``ರಾಜ್ಯ ನ್ಯಾಯಪೀಠ" ಎಂದು ಉಲ್ಲೇಖಿಸಲಾಗಿದೆ) ನಿರ್ದಿಷ್ಟಪಡಿಸತಕ್ಕದ್ದು:

ಪರಂತು, ಸರ್ಕಾರವು, ಯಾವುದೇ ರಾಜ್ಯ ಸರ್ಕಾರದ ಕೋರಿಕೆಯನ್ನು ಸ್ವೀಕರಿಸಿದ ಮೇಲೆ ಆ ರಾಜ್ಯದಲ್ಲಿ, ಪರಿಷತ್ತು ಶಿಫಾರಸು ಮಾಡಬಹುದಾದಷ್ಟು ಸಂಖ್ಯೆಯ ಪ್ರದೇಶ ನ್ಯಾಯಪೀಠಗಳನ್ನು ರಚಿಸತಕ್ಕದ್ದು:

ಮತ್ತು ಪರಂತು, ಸರ್ಕಾರವು, ಯಾವುದೇ ರಾಜ್ಯದ ಕೋರಿಕೆಯನ್ನು ಸ್ವೀಕರಿಸಿದ ಮೇಲೆ ಅಥವಾ ತಾನಾಗಿಯೇ ಒಕ್ಕೂಟ ರಾಜ್ಯಕ್ಷೇತ್ರಕ್ಕೆ, ಪರಿಷತ್ತು ಶಿಫಾರಸು ಮಾಡಬಹುದಾದ, ಇತರ ಯಾವುದೇ ರಾಜ್ಯಕ್ಕೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಗೊತ್ತುಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಅಪೀಲು ನ್ಯಾಯಾಧಿಕರಣವಾಗಿ ಕಾರ್ಯನಿರ್ವಹಿಸಲು ರಾಜ್ಯದಲ್ಲಿ ಅಪೀಲು ನ್ಯಾಯಾಧಿಕರಣವನ್ನು ಅಧಿಸೂಚಿಸಬಹುದು.

(7) ರಾಜ್ಯ ನ್ಯಾಯಪೀಠವು ಅಥವಾ ಪ್ರದೇಶ ನ್ಯಾಯಪೀಠಗಳು, ಉಪಪ್ರಕರಣ (5)ರಲ್ಲಿ ಉಲ್ಲೇಖಿಸಲಾದ ವಿಷಯಗಳಿಗೆ ಹೊರತಾದ ವಿಷಯಗಳನ್ನು ಒಳಗೊಂಡಿರುವ ಪ್ರಕರಣಗಳಲ್ಲಿ ಅಪೀಲು ಪ್ರಾಧಿಕಾರವು ಅಥವಾ ಪುನರೀಕ್ಷಣಾ ಪ್ರಾಧಿಕಾರವು, ಹೊರಡಿಸಿದ ಆದೇಶಗಳ ವಿರುದ್ಧದ ಅಪೀಲುಗಳ ವಿಚಾರಣೆ ಮಾಡುವ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು.

(8) ಅಧ್ಯಕ್ಷರು ಮತ್ತು ರಾಜ್ಯಾಧ್ಯಕ್ಷರು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಪ್ರಾದೇಶಿಕ ನ್ಯಾಯಪೀಠಗಳು ಅಥವಾ ಸಂದರ್ಭಾನುಸಾರ ರಾಜ್ಯದಲ್ಲಿರುವ ಪ್ರದೇಶ ನ್ಯಾಯಪೀಠಗಳ ಪೈಕಿ ಕಾರ್ಯಕಲಾಪ ಅಥವಾ ಪ್ರಕರಣಗಳನ್ನು ವರ್ಗಾವಣೆ, ಹಂಚಿಕೆ ಮಾಡತಕ್ಕದ್ದು.

(9) ಅಪೀಲು ನ್ಯಾಯಾಧಿಕರಣದ ಪ್ರತಿಯೊಂದು ರಾಜ್ಯ ನ್ಯಾಯಪೀಠ ಮತ್ತು ಪ್ರದೇಶ ನ್ಯಾಯಪೀಠಗಳು, ಒಬ್ಬರು ನ್ಯಾಯಿಕ ಸದಸ್ಯರು, ಒಬ್ಬರು ತಾಂತ್ರಿಕ ಸದಸ್ಯರು (ಕೇಂದ್ರ) ಮತ್ತೊಬ್ಬರು ತಾಂತ್ರಿಕ ಸದಸ್ಯರನ್ನು (ರಾಜ್ಯ) ಒಳಗೊಂಡಿರತಕ್ಕದ್ದು ಮತ್ತು ರಾಜ್ಯ ಸರ್ಕಾರವು ರಾಜ್ಯದ ಅತ್ಯಂತ ಹಿರಿಯ ನ್ಯಾಯಿಕ ಸದಸ್ಯರನ್ನು ರಾಜ್ಯಾಧ್ಯಕ್ಷರಾಗಿ ನೇಮಕ ಮಾಡಬಹುದು.

(10) ಖಾಲಿ ಸ್ಥಾನ ಅಥವಾ ಅನ್ಯಥಾ ಕಾರಣದಿಂದಾಗಿ ಯಾವುದೇ ಸ್ಥಾನ ಖಾಲಿಯಿದ್ದಲ್ಲಿ ನ್ಯಾಯಪೀಠದ ಸದಸ್ಯರ ಗೈರುಹಾಜರಿಯಲ್ಲಿ ಯಾವುದೇ ಅಪೀಲನ್ನು, ಅಧ್ಯಕ್ಷರು ಅಥವಾ ಸಂದರ್ಭಾನುಸಾರ ರಾಜ್ಯಾಧ್ಯಕ್ಷರ ಅನುಮೋದನೆಯೊಂದಿಗೆ ಇಬ್ಬರು ಸದಸ್ಯರುಗಳ ನ್ಯಾಯಪೀಠವು ವಿಚಾರಣೆ ಮಾಡಬಹುದು:

ಪರಂತು, ತೆರಿಗೆ ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ಒಳಗೊಂಡಿರುವ ಅಥವಾ ತೆರಿಗೆ ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನಲ್ಲಿ ವ್ಯತ್ಯಾಸ ಇರುವ ಅಥವಾ ಅಪೀಲು ಮಾಡಲಾದ ಆದೇಶದಲ್ಲಿ ನಿರ್ಧರಿಸಿರುವ ಜುಲ್ಮಾನೆ, ಶುಲ್ಕ ಅಥವಾ ದಂಡ ಮೊಬಲಗು ಐದು ಲಕ್ಷ ರೂಪಾಯಿಗಳನ್ನು ಮೀರದಿರುವ ಮತ್ತು ಕಾನೂನಿನ ಯಾವುದೇ ಪ್ರಶ್ನೆಯನ್ನು ಒಳಗೊಂಡಿರದ ಯಾವುದೇ ಅಪೀಲನ್ನು ಅಧ್ಯಕ್ಷರ ಅನುಮೋದನೆಯೊಂದಿಗೆ ಮತ್ತು ಪರಿಷತ್ತಿನ ಶಿಫಾರಸ್ಸುಗಳ ಮೇಲೆ ಗೊತ್ತುಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಏಕ ಸದಸ್ಯರನ್ನು ಒಳಗೊಂಡಿರುವ ನ್ಯಾಯಪೀಠವು ವಿಚಾರಣೆ ಮಾಡಬಹುದು.

(11) ರಾಷ್ಟ್ರೀಯ ನ್ಯಾಯಪೀಠ, ಪ್ರಾದೇಶಿಕ ನ್ಯಾಯಪೀಠಗಳು, ರಾಜ್ಯ ನ್ಯಾಯಪೀಠ ಅಥವಾ ಪ್ರದೇಶ ನ್ಯಾಯಪೀಠಗಳ ಸದಸ್ಯರುಗಳು ಯಾವುದೇ ಅಂಶ ಅಥವಾ ಅಂಶಗಳ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದಲ್ಲಿ, ಬಹುಮತದ ಅಭಿಪ್ರಾಯಕ್ಕೆ ಅನುಸಾರವಾಗಿ ತೀರ್ಮಾನಿಸತಕ್ಕದ್ದು, ಬಹುಮತವಿದ್ದರೂ ಸದಸ್ಯರು ಸಮಾನವಾಗಿ ಅಭಿಪ್ರಾಯಭೇದ ಹೊಂದಿದ್ದಲ್ಲಿ ಅವರು ಯಾವ ಅಂಶ ಅಥವಾ ಅಂಶಗಳ ಬಗ್ಗೆ ಅಭಿಪ್ರಾಯಭೇದವನ್ನು ಹೊಂದಿರುವರೋ ಆ ಅಂಶ ಅಥವಾ ಅಂಶಗಳನ್ನು ತಿಳಿಸತಕ್ಕದ್ದು ಮತ್ತು ವ್ಯಕ್ತವಾಗಿರುವಂಥ ಅಂಶ ಅಥವಾ ಅಂಶಗಳ ಬಗ್ಗೆ ವಿಚಾರಣೆ ಮಾಡಲು ಅಧ್ಯಕ್ಷರು ಅಥವಾ ಸಂದರ್ಭಾನುಸಾರ ರಾಜ್ಯಾಧ್ಯಕ್ಷರು ಪ್ರಕರಣವನ್ನು ರಾಷ್ಟ್ರೀಯ ನ್ಯಾಯಪೀಠ, ಪ್ರಾದೇಶಿಕ ನ್ಯಾಯಪೀಠಗಳು, ರಾಜ್ಯ ನ್ಯಾಯಪೀಠ ಅಥವಾ ಪ್ರದೇಶ ನ್ಯಾಯಪೀಠಗಳ ಒಬ್ಬರು ಅಥವಾ ಅಧಿಕ ಸಂಖ್ಯೆಯ ಇತರ ಸದಸ್ಯರಿಗೆ ಕಳುಹಿಸಿಕೊಡತಕ್ಕದ್ದು ಮತ್ತು ಈ ಮೊದಲು ವಿಚಾರಣೆ ಮಾಡಿದವರೂ ಸೇರಿದಂತೆ ಪ್ರಕರಣವನ್ನು ವಿಚಾರಣೆ ಮಾಡಿದ ಸದಸ್ಯರ ಬಹುಮತದ ಅಭಿಪ್ರಾಯಕ್ಕೆ ಅನುಸಾರವಾಗಿ ಅಂಥ ಅಂಶ ಅಥವಾ ಅಂಶಗಳ ಬಗ್ಗೆ ತೀರ್ಮಾನಿಸತಕ್ಕದ್ದು.

(12) ಸರ್ಕಾರವು, ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಆಡಳಿತಾತ್ಮಕ ಅನುಕೂಲಕ್ಕಾಗಿ,–

(ಎ) ರಾಷ್ಟ್ರೀಯ ನ್ಯಾಯಪೀಠವಾಗಲಿ ಅಥವಾ ಪ್ರಾದೇಶಿಕ ನ್ಯಾಯಪೀಠವಾಗಲಿ ಒಂದು ಪೀಠದಿಂದ ಮತ್ತೊಂದು ಪೀಠಕ್ಕೆ ಯಾರೇ ನ್ಯಾಯಿಕ ಸದಸ್ಯರನ್ನು ಅಥವಾ ತಾಂತ್ರಿಕ ಸದಸ್ಯರನ್ನು (ರಾಜ್ಯ); ಅಥವಾ

(ಬಿ) ರಾಷ್ಟ್ರೀಯ ಪೀಠವಾಗಲಿ, ಪ್ರಾದೇಶಿಕ ನ್ಯಾಯಪೀಠವಾಗಲಿ, ರಾಜ್ಯ ನ್ಯಾಯಪೀಠವಾಗಲಿ ಅಥವಾ ಪ್ರದೇಶ ನ್ಯಾಯಪೀಠವಾಗಲಿ ಒಂದು ನ್ಯಾಯಪೀಠದಿಂದ ಮತ್ತೊಂದು ನ್ಯಾಯಪೀಠಕ್ಕೆ ಯಾರೇ ತಾಂತ್ರಿಕ ಸದಸ್ಯರನ್ನು (ಕೇಂದ್ರ)

– ವರ್ಗಾವಣೆ ಮಾಡಬಹುದು.

(13) ರಾಜ್ಯ ಸರ್ಕಾರವು, ರಾಜ್ಯಾಧ್ಯಕ್ಷರೊಂದಿಗೆ ಸಮಾಲೋಚಿಸಿ ಆಡಳಿತಾತ್ಮಕ ಅನುಕೂಲಕ್ಕಾಗಿ, ರಾಜ್ಯದ ಒಂದು ನ್ಯಾಯಪೀಠದಿಂದ ಮತ್ತೊಂದು ನ್ಯಾಯಪೀಠಕ್ಕೆ ಒಬ್ಬರು ನ್ಯಾಯಿಕ ಸದಸ್ಯರನ್ನು ಅಥವಾ ಒಬ್ಬರು ತಾಂತ್ರಿಕ ಸದಸ್ಯರನ್ನು (ರಾಜ್ಯ) ವರ್ಗಾವಣೆ ಮಾಡಬಹುದು.

(14) ಅಪೀಲು ನ್ಯಾಯಾಧಿಕರಣದ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಗಳನ್ನು ಪ್ರಶ್ನಿಸತಕ್ಕದ್ದಲ್ಲ. ಅಪೀಲು ನ್ಯಾಯಾಧಿಕರಣದ ರಚನೆಯಲ್ಲಿ ಇರುವ ಯಾವುದೇ ಖಾಲಿಸ್ಥಾನ ಅಥವಾ ನ್ಯೂನತೆಯ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ, ಅಸಿಂಧುವಾಗತಕ್ಕದ್ದಲ್ಲ.

**110. ಅಪೀಲು ನ್ಯಾಯಾಧಿಕರಣದ ಅಧ್ಯಕ್ಷರು ಮತ್ತು ಸದಸ್ಯರುಗಳು, ಅವರ ಅರ್ಹತೆ, ನೇಮಕಾತಿ ಸೇವಾ ಷರತ್ತುಗಳು, ಇತ್ಯಾದಿ.–** (1) ಅಧ್ಯಕ್ಷರಾಗಿ ನೇಮಕಗೊಳ್ಳುವ ವ್ಯಕ್ತಿಯು,–

(ಎ) ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿದ್ದ ಅಥವಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿರುವ ಅಥವಾ ಮುಖ್ಯ ನ್ಯಾಯಮೂರ್ತಿಯಾಗಿದ್ದ ಅಥವಾ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ನ್ಯಾಯಾಧೀಶರಾಗಿದ್ದ ಹೊರತು;

(ಬಿ) ನ್ಯಾಯಿಕ ಸದಸ್ಯರು,–

(i) ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಹೊರತು; ಅಥವಾ

(ii) ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಅರ್ಹರಾದ ಜಿಲ್ಲಾ ನ್ಯಾಯಾಧೀಶರಾಗಿರುವ ಅಥವಾ ಜಿಲ್ಲಾ ನ್ಯಾಯಾಧೀಶರಾಗಿದ್ದ ಹೊರತು; ಅಥವಾ

(iii) ಭಾರತೀಯ ಕಾನೂನು ಸೇವಾ ಸದಸ್ಯರಾಗಿರುವ ಅಥವಾ ಸದಸ್ಯರಾಗಿದ್ದ ಹೊರತು ಮತ್ತು ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಗೆ ಅಪರ ಕಾರ್ಯದರ್ಶಿ ಹುದ್ದೆಯನ್ನು ಧಾರಣ ಮಾಡಿದ್ದ ಹೊರತು;

(ಸಿ) ತಾಂತ್ರಿಕ ಸದಸ್ಯರಾಗಲು (ಕೇಂದ್ರ) ವೃಂದ–ಎ ಯ ಭಾರತೀಯ ಕಂದಾಯ (ಸೀಮಾಸುಂಕ ಮತ್ತು ಕೇಂದ್ರ ಅಬಕಾರಿ) ಸೇವೆಯ ಸದಸ್ಯರಾಗಿರುವ ಅಥವಾ ಸದಸ್ಯರಾಗಿದ್ದ ಮತ್ತು ಎ ವೃಂದದಲ್ಲಿ ಕನಿಷ್ಠಪಕ್ಷ ಹದಿನೈದು ವರ್ಷಗಳ ಸೇವಾವಾಧಿಯನ್ನು ಪೂರ್ಣಗೊಳಿಸಿದ್ದ ಹೊರತು;

(ಡಿ) ತಾಂತ್ರಿಕ ಸದಸ್ಯರಾಗಲು (ರಾಜ್ಯ), ಮೌಲ್ಯವರ್ಧಿತ ತೆರಿಗೆಯ ಅಥವಾ ರಾಜ್ಯ ಸರಕುಗಳು ಮತ್ತು ಸೇವೆಗಳ ತೆರಿಗೆಯ ಅಪರ ಆಯಕ್ತರ ದರ್ಜೆಯ ಅಥವಾ ಅಸ್ತಿತ್ವದಲ್ಲಿರುವ ಕಾನೂನಿನ ಅಥವಾ ರಾಜ್ಯ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಆಡಳಿತ ನಿರ್ವಹಣೆಯಲ್ಲಿ ಅಥವಾ ಹಣಕಾಸು ಮತ್ತು ತೆರಿಗೆ ನಿರ್ಧರಣೆ ಕ್ಷೇತ್ರದಲ್ಲಿ ಕನಿಷ್ಠಪಕ್ಷ ಮೂರು ವರ್ಷಗಳ ಅನುಭವವಿರುವ, ಪರಿಷತ್ತಿನ ಶಿಫಾರಸುಗಳ ಮೇಲೆ ಸಂಬಂಧಪಟ್ಟ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ದರ್ಜೆಗಿಂತ ಕಡಿಮೆ ಇರದ, ರಾಜ್ಯ ಸರ್ಕಾರದ ಅಧಿಕಾರಿಯಾಗಿರುವ ಅಥವಾ ಅಧಿಕಾರಿಯಾಗಿದ್ದ ಹೊರತು

– ನೇಮಕಕ್ಕೆ ಅರ್ಹರಾಗತಕ್ಕದ್ದಲ್ಲ.

(2) ರಾಷ್ಟ್ರೀಯ ನ್ಯಾಯಪೀಠದ ಮತ್ತು ಪ್ರಾದೇಶಿಕ ನ್ಯಾಯಪೀಠಗಳ ಅಧ್ಯಕ್ಷರನ್ನು ಮತ್ತು ನ್ಯಾಯಿಕ ಸದಸ್ಯರನ್ನು, ಭಾರತದ ಮುಖ್ಯ ನ್ಯಾಯಮೂರ್ತಿಗಳೊಂದಿಗೆ ಅಥವಾ ಅವರ ನಾಮನಿರ್ದೇಶಿತರೊಂದಿಗೆ ಸಮಾಲೋಚಿಸಿದ ತರುವಾಯ, ಸರ್ಕಾರವು ನೇಮಕ ಮಾಡತಕ್ಕದ್ದು:

ಪರಂತು, ಅಧ್ಯಕ್ಷರ ಮರಣ, ರಾಜೀನಾಮೆ ಅಥವಾ ಅನ್ಯಥಾ ಕಾರಣದಿಂದಾಗಿ ಅವರ ಹುದ್ದೆಯಲ್ಲಿ ಯಾವುದೇ ಖಾಲಿಸ್ಥಾನ ಉಂಟಾದ ಸಂದರ್ಭದಲ್ಲಿ, ರಾಷ್ಟ್ರೀಯ ನ್ಯಾಯಪೀಠದ ಅತ್ಯಂತ ಹಿರಿಯ ಸದಸ್ಯರು, ಅಂಥ ಖಾಲಿಸ್ಥಾನವನ್ನು ತುಂಬಲು, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ನೇಮಕಗೊಂಡ ಹೊಸ ಅಧ್ಯಕ್ಷರು ಪದಧಾರಣ ಮಾಡುವ ದಿನಾಂಕದವರೆಗೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸತಕ್ಕದ್ದು:

ಮತ್ತು ಪರಂತು, ಅಧ್ಯಕ್ಷರು, ಗೈರುಹಾಜರಿ, ಅನಾರೋಗ್ಯ ಅಥವಾ ಇತರ ಯಾವುದೇ ಕಾರಣದಿಂದ, ಅವರ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗದಿರುವಲ್ಲಿ, ರಾಷ್ಟ್ರೀಯ ನ್ಯಾಯಪೀಠದ ಅತ್ಯಂತ ಹಿರಿಯ ಸದಸ್ಯರು, ಅಧ್ಯಕ್ಷರು, ತಮ್ಮ ಕರ್ತವ್ಯಗಳನ್ನು ವಹಿಸಿಕೊಳ್ಳುವ ದಿನಾಂಕದವರೆಗೂ ಅಧ್ಯಕ್ಷರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ರಾಷ್ಟ್ರೀಯ ನ್ಯಾಯಪೀಠದ ಮತ್ತು ಪ್ರಾದೇಶಿಕ ನ್ಯಾಯಪೀಠಗಳ ತಾಂತ್ರಿಕ ಸದಸ್ಯರನ್ನು (ಕೇಂದ್ರ) ಮತ್ತು ತಾಂತ್ರಿಕ ಸದಸ್ಯರನ್ನು (ರಾಜ್ಯ), ಗೊತ್ತುಪಡಿಸಬಹುದಾದಂಥ ವ್ಯಕ್ತಿಗಳನ್ನು ಮತ್ತು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಒಳಗೊಂಡಿರುವ ಆಯ್ಕೆ ಸಮಿತಿಯ ಶಿಫಾರಸುಗಳ ಮೇಲೆ ಸರ್ಕಾರವು ನೇಮಕ ಮಾಡತಕ್ಕದ್ದು.

(4) ರಾಜ್ಯ ನ್ಯಾಯಪೀಠದ ಅಥವಾ ಪ್ರದೇಶ ನ್ಯಾಯಪೀಠಗಳ ನ್ಯಾಯಿಕ ಸದಸ್ಯರನ್ನು, ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳೊಂದಿಗೆ ಅಥವಾ ಅವರ ನಾಮನಿರ್ದೇಶಿತರೊಂದಿಗೆ ಸಮಾಲೋಚಿಸಿದ ತರುವಾಯ, ರಾಜ್ಯ ಸರ್ಕಾರವು ನೇಮಕ ಮಾಡತಕ್ಕದ್ದು.

(5) ಕೇಂದ್ರ ಸರ್ಕಾರವು, ರಾಜ್ಯ ನ್ಯಾಯಪೀಠದ ಅಥವಾ ಪ್ರದೇಶ ನ್ಯಾಯಪೀಠಗಳ ತಾಂತ್ರಿಕ ಸದಸ್ಯರನ್ನು (ಕೇಂದ್ರ) ಮತ್ತು ರಾಜ್ಯ ಸರ್ಕಾರವು ರಾಜ್ಯ ನ್ಯಾಯಪೀಠದ ಅಥವಾ ಪ್ರದೇಶ ನ್ಯಾಯಪೀಠಗಳ ತಾಂತ್ರಿಕ ಸದಸ್ಯರನ್ನು (ರಾಜ್ಯ), ನಿಯಮಿಸಬಹುದಾದಂಥ ರೀತಿಯಲ್ಲಿ ನೇಮಕ ಮಾಡತಕ್ಕದ್ದು.

(6) ಅಪೀಲು ನ್ಯಾಯಾಧಿಕರಣದ ಸದಸ್ಯರುಗಳ ಯಾವುದೇ ನೇಮಕವು, ಆಯ್ಕೆ ಸಮಿತಿಯ ರಚನೆಯಲ್ಲಿರುವ ಯಾವುದೇ ಖಾಲಿಸ್ಥಾನ ಅಥವಾ ನ್ಯೂನತೆಯ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

(7) ಅಪೀಲು ನ್ಯಾಯಾಧಿಕರಣದ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಯಾರೇ ವ್ಯಕ್ತಿಯನ್ನು ನೇಮಕ ಮಾಡುವ ಮೊದಲು, ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು, ಅಂಥ ವ್ಯಕ್ತಿಯು ಅಂಥ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ತಮ್ಮ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡುವ ಸಾಧ್ಯತೆಯಿರುವ ಯಾವುದೇ ಹಣಕಾಸು ಅಥವಾ ಇತರ ಹಿತಾಸಕ್ತಿಗಳನ್ನು ಹೊಂದಿರುವುದನ್ನು ಸ್ವತಃ ಮನವರಿಕೆ ಮಾಡಿಕೊಳ್ಳತಕ್ಕದ್ದು.

(8) ಅಪೀಲು ನ್ಯಾಯಾಧಿಕರಣದ ಅಧ್ಯಕ್ಷರ, ರಾಜ್ಯಾಧ್ಯಕ್ಷರ ಮತ್ತು ಸದಸ್ಯರ ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ನಿಯಮಿಸಬಹುದಾದಂಥ ರೀತಿಯಲ್ಲಿ ಇರತಕ್ಕದ್ದು:

ಪರಂತು, ಅಪೀಲು ಪ್ರಾಧಿಕಾರದ ಅಧ್ಯಕ್ಷರ, ರಾಜ್ಯಾಧ್ಯಕ್ಷರ ಅಥವಾ ಸದಸ್ಯರ ಸಂಬಳವಾಗಲಿ ಮತ್ತು ಭತ್ಯೆಗಳಾಗಲಿ ಅಥವಾ ಇತರ ಸೇವಾ ನಿಬಂಧನೆಗಳಾಗಲಿ ಮತ್ತು ಷರತ್ತುಗಳಾಗಲಿ ಅವರ ನೇಮಕದ ನಂತರ ಅವರಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

(9) ಅಪೀಲು ಪ್ರಾಧಿಕಾರದ ಅಧ್ಯಕ್ಷರು, ತಮ್ಮ ಪದವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಒಂದು ಅವಧಿಗೆ ಅಥವಾ ಅವರಿಗೆ ಎಪ್ಪತ್ತು ವರ್ಷಗಳ ವಯಸ್ಸು ತುಂಬುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮರುನೇಮಕಕ್ಕೆ ಅರ್ಹರಾಗತಕ್ಕದ್ದು.

(10) ಅಪೀಲು ನ್ಯಾಯಾಧಿಕರಣದ ನ್ಯಾಯಿಕ ಸದಸ್ಯರು ಮತ್ತು ರಾಜ್ಯಾಧ್ಯಕ್ಷರು ತಮ್ಮ ಪದವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಒಂದು ಅವಧಿಗೆ ಅಥವಾ ಅವರಿಗೆ ಅರವತ್ತೈದು ವರ್ಷಗಳು ತುಂಬುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮರುನೇಮಕಕ್ಕೆ ಅರ್ಹರಾಗತಕ್ಕದ್ದು.

(11) ಅಪೀಲು ನ್ಯಾಯಾಧಿಕರಣದ ತಾಂತ್ರಿಕ ಸದಸ್ಯರು (ಕೇಂದ್ರ) ಅಥವಾ ತಾಂತ್ರಿಕ ಸದಸ್ಯರು (ರಾಜ್ಯ) ಅವರು ತಮ್ಮ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಒಂದು ಅವಧಿಗೆ ಅಥವಾ ಅವರಿಗೆ ಅರವತ್ತೈದು ವರ್ಷಗಳ ವಯಸ್ಸು ತುಂಬುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮರುನೇಮಕಕ್ಕೆ ಅರ್ಹರಾಗತಕ್ಕದ್ದು.

(12) ಅಧ್ಯಕ್ಷರು, ರಾಜ್ಯಾಧ್ಯಕ್ಷರು ಅಥವಾ ಯಾರೇ ಸದಸ್ಯರು, ಕೇಂದ್ರ ಸರ್ಕಾರಕ್ಕೆ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರಕ್ಕೆ, ಸ್ವತಃ ಸಹಿ ಮಾಡಿದ ಲಿಖಿತ ನೋಟೀಸನ್ನು ನೀಡಿ ತಮ್ಮ ಪದಕ್ಕೆ ರಾಜೀನಾಮೆ ಸಲ್ಲಿಸಬಹುದು:

ಪರಂತು, ಅಧ್ಯಕ್ಷರು, ರಾಜ್ಯಾಧ್ಯಕ್ಷರು ಅಥವಾ ಸದಸ್ಯರು, ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು, ಅಂಥ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿ ಮುಕ್ತಾಯವಾಗುವವರೆಗೆ ಅಥವಾ ಅವರ ಉತ್ತರಾಧಿಕಾರಿಯಾಗಿ ಯಥೋಚಿತವಾಗಿ ನೇಮಕಗೊಂಡ ವ್ಯಕ್ತಿಯು ಪದವನ್ನು ವಹಿಸಿಕೊಳ್ಳುವವರೆಗೆ ಅಥವಾ ಅವರ ಪದಾವಧಿ ಮುಕ್ತಾಯವಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(13) ಕೇಂದ್ರ ಸರ್ಕಾರವು, ರಾಷ್ಟ್ರೀಯ ನ್ಯಾಯಪೀಠದ, ಪ್ರಾದೇಶಿಕ ನ್ಯಾಯಪೀಠಗಳ ಅಧ್ಯಕ್ಷರ, ನ್ಯಾಯಿಕ ಸದಸ್ಯರುಗಳ ಮತ್ತು ತಾಂತ್ರಿಕ ಸದಸ್ಯರುಗಳ ಅಥವಾ ರಾಜ್ಯ ನ್ಯಾಯಪೀಠದ ಅಥವಾ ಪ್ರದೇಶ ನ್ಯಾಯಪೀಠಗಳ ತಾಂತ್ರಿಕ ಸದಸ್ಯರುಗಳ (ಕೇಂದ್ರ) ಸಂದರ್ಭದಲ್ಲಿ, ಭಾರತದ ಮುಖ್ಯ ನ್ಯಾಯಮೂರ್ತಿಯೊಂದಿಗೆ ಸಮಾಲೋಚಿಸಿದ ನಂತರ ಮತ್ತು ರಾಜ್ಯ ಸರ್ಕಾರವು, ರಾಜ್ಯ ನ್ಯಾಯಪೀಠದ ಅಥವಾ ಪ್ರದೇಶ ನ್ಯಾಯಪೀಠಗಳ ರಾಜ್ಯಾಧ್ಯಕ್ಷರ, ನ್ಯಾಯಿಕ ಸದಸ್ಯರುಗಳ, ತಾಂತ್ರಿಕ ಸದಸ್ಯರುಗಳ (ರಾಜ್ಯ) ಸಂದರ್ಭದಲ್ಲಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯೊಂದಿಗೆ ಸಮಾಲೋಚಿಸಿದ ನಂತರ,–

(ಎ) ದಿವಾಳಿ ಎಂದು ನ್ಯಾಯ ನಿರ್ಣೀತನಾಗಿರುವ; ಅಥವಾ

(ಬಿ) ನೈತಿಕ ಅಧಃಪತನ ಒಳಗೊಳ್ಳುವ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವನೆಂದು ಅಂಥ ಸರ್ಕಾರ ಅಭಿಪ್ರಾಯಪಟ್ಟಿರುವ; ಅಥವಾ

(ಸಿ) ಅಂಥ ಅಧ್ಯಕ್ಷರಾಗಿ, ರಾಜ್ಯಾಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥರಾಗಿರುವ; ಅಥವಾ

(ಡಿ) ಅಂಥ ಅಧ್ಯಕ್ಷರಾಗಿ, ರಾಜ್ಯಾಧ್ಯಕ್ಷರಾಗಿ ಅಥವಾ ಸದಸ್ಯರಾಗಿ ತಮ್ಮ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡುವ ಸಂಭವವಿರುವಂಥ ಹಣಕಾಸಿನ ಅಥವಾ ಇತರೆ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(ಇ) ಅವರು ತಮ್ಮ ಪದದಲ್ಲಿ ಮುಂದುವರಿಕೆಯು, ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗುವಂಥ ರೀತಿಯಲ್ಲಿ ಅವರು ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವ

– ಅಧ್ಯಕ್ಷರನ್ನು ಅಥವಾ ಸದಸ್ಯರನ್ನು ಅವರ ಪದದಿಂದ ತೆಗೆದು ಹಾಕಬಹುದು:

ಪರಂತು, ಅಧ್ಯಕ್ಷರನ್ನು, ರಾಜ್ಯಾಧ್ಯಕ್ಷರನ್ನು ಅಥವಾ ಸದಸ್ಯರನ್ನು, ಅವರ ವಿರುದ್ಧ ಮಾಡಿದ ದೋಷಾರೋಪಗಳನ್ನು ಅವರಿಗೆ ತಿಳಿಸಿದ ಹೊರತು ಮತ್ತು ಅವರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ಹೊರತು, (ಡಿ) ಮತ್ತು (ಇ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಾರಣಗಳ ಮೇಲೆ ಅವರನ್ನು ಪದದಿಂದ ತೆಗೆದುಹಾಕತಕ್ಕದ್ದಲ್ಲ.

(14) ಉಪಪ್ರಕರಣ (13)ರ ಉಪಬಂಧಗಳಿಗೆ ಬಾಧಕವಾಗದಂತೆ,–

(ಎ) ರಾಷ್ಟ್ರೀಯ ನ್ಯಾಯಪೀಠದ ಅಥವಾ ಪ್ರಾದೇಶಿಕ ನ್ಯಾಯಪೀಠಗಳ ಅಧ್ಯಕ್ಷರನ್ನು ಅಥವಾ ನ್ಯಾಯಿಕ ಮತ್ತು ತಾಂತ್ರಿಕ ಸದಸ್ಯರನ್ನು, ರಾಜ್ಯ ನ್ಯಾಯಪೀಠದ ಅಥವಾ ಪ್ರದೇಶ ನ್ಯಾಯಪೀಠಗಳ ತಾಂತ್ರಿಕ ಸದಸ್ಯರನ್ನು (ಕೇಂದ್ರ), ಕೇಂದ್ರ ಸರ್ಕಾರವು ಭಾರತದ ಮುಖ್ಯ ನ್ಯಾಯಮೂರ್ತಿಗಳಿಗೆ ಮಾಡಿದ ಉಲ್ಲೇಖದ ಮೇಲೆ ಅವರು ನಾಮನಿರ್ದೇಶಿಸಿದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ವಿಚಾರಣೆ ನಡೆಸಿದ ತರುವಾಯ ಮತ್ತು ಅಧ್ಯಕ್ಷರಿಗೆ ಅಥವಾ ಸದರಿ ಸದಸ್ಯರಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ನಂತರ, ರುಜುವಾತಾದ ದುರ್ವರ್ತನೆ ಅಥವಾ ಅಸಮರ್ಥತೆಯ ಆಧಾರದ ಮೇಲೆ, ಕೇಂದ್ರ ಸರ್ಕಾರವು ಮಾಡಿದ ಆದೇಶದ ಹೊರತಾಗಿ ಅವರನ್ನು ಆ ಪದದಿಂದ ತೆಗೆದುಹಾಕತಕ್ಕದ್ದಲ್ಲ.

(ಬಿ) ರಾಜ್ಯ ನ್ಯಾಯಪೀಠದ ಅಥವಾ ಪ್ರದೇಶ ನ್ಯಾಯಪೀಠಗಳ ನ್ಯಾಯಿಕ ಸದಸ್ಯರನ್ನು ಅಥವಾ ತಾಂತ್ರಿಕ ಸದಸ್ಯರನ್ನು (ರಾಜ್ಯ) ರಾಜ್ಯ ಸರ್ಕಾರವು ಸಂಬಂಧಪಟ್ಟ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಿಗೆ ಮಾಡಿದ ಉಲ್ಲೇಖದ ಮೇಲೆ, ಅವರು ನಾಮನಿರ್ದೇಶಿಸಿದ ಸಂಬಂಧಪಟ್ಟ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ವಿಚಾರಣೆ ನಡೆಸಿದ ಮತ್ತು ಸದರಿ ಸದಸ್ಯರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ ರುಜುವಾತಾದ ದುರ್ವರ್ತನೆ ಮತ್ತು ಅಸಮರ್ಥತೆಯ ಆಧಾರದ ಮೇಲೆ, ರಾಜ್ಯ ಸರ್ಕಾರವು ಮಾಡಿದ ಆದೇಶದ ಹೊರತಾಗಿ ಅವರನ್ನು ಪದದಿಂದ ತೆಗೆದುಹಾಕತಕ್ಕದ್ದಲ್ಲ.

(15) ಕೇಂದ್ರ ಸರ್ಕಾರವು, ಭಾರತದ ಮುಖ್ಯ ನ್ಯಾಯಮೂರ್ತಿಗಳ ಸಹಮತಿ ಪಡೆದು ರಾಷ್ಟ್ರೀಯ ನ್ಯಾಯಪೀಠದ ಅಥವಾ ಪ್ರಾದೇಶಿಕ ನ್ಯಾಯಪೀಠಗಳ, ಯಾರಿಗೆ ಸಂಬಂಧಪಟ್ಟಂತೆ ಉಪಪ್ರಕರಣ (14)ರ ಮೇರೆಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಉಲ್ಲೇಖವನ್ನು ಮಾಡಲಾಗಿದೆಯೋ ಆ ಅಧ್ಯಕ್ಷರನ್ನು, ಆ ನ್ಯಾಯಿಕ ಅಥವಾ ತಾಂತ್ರಿಕ ಸದಸ್ಯರುಗಳನ್ನು ಅಥವಾ ಆ ರಾಜ್ಯನ್ಯಾಯಪೀಠದ ಅಥವಾ ಆ ಪ್ರದೇಶ ನ್ಯಾಯಪೀಠಗಳ ತಾಂತ್ರಿಕ ಸದಸ್ಯರನ್ನು (ಕೇಂದ್ರ) ಪದದಿಂದ ಅಮಾನತು ಮಾಡಬಹುದು.

(16) ಯಾರಿಗೆ ಸಂಬಂಧಪಟ್ಟಂತೆ ಉಪಪ್ರಕರಣ (14)ರ ಮೇರೆಗೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಉಲ್ಲೇಖವನ್ನು ಮಾಡಲಾಗಿದೆಯೋ ಆ ನ್ಯಾಯಿಕ ಸದಸ್ಯರನ್ನು ಅಥವಾ ತಾಂತ್ರಿಕ ಸದಸ್ಯರನ್ನು (ರಾಜ್ಯ) ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳ ಸಹಮತಿ ಪಡೆದು, ಪದದಿಂದ ಅಮಾನತು ಮಾಡಬಹುದು.

(17) ಸಂವಿಧಾನದ 220ನೇ ಅನುಚ್ಛೇದದ ಉಪಬಂಧಗಳಿಗೆ ಒಳಪಟ್ಟು, ಅಧ್ಯಕ್ಷರು, ರಾಜ್ಯಾಧ್ಯಕ್ಷರು ಅಥವಾ ಇತರೆ ಸದಸ್ಯರು, ಅವರು ಪದಧಾರಣ ಮಾಡಿರುವುದು ನಿಂತು ಹೋದ ಮೇಲೆ, ಅವರು, ಅಧ್ಯಕ್ಷರಾಗಿದ್ದ ಅಥವಾ ಸಂದರ್ಭಾನುಸಾರ ಸದಸ್ಯರಾಗಿದ್ದ ರಾಷ್ಟ್ರೀಯ ನ್ಯಾಯಪೀಠದ ಮತ್ತು ಪ್ರಾದೇಶಿಕ ನ್ಯಾಯಪೀಠಗಳ ಅಥವಾ ರಾಜ್ಯ ನ್ಯಾಯಪೀಠದ ಮತ್ತು ಅದರ ಪ್ರದೇಶ ನ್ಯಾಯಪೀಠಗಳ ಮುಂದೆ ಹಾಜರಾಗಲು, ಕಾರ್ಯನಿರ್ವಹಿಸಲು ಮತ್ತು ವಾದ ಮಂಡಿಸಲು ಅರ್ಹರಾಗಿರತಕ್ಕದ್ದಲ್ಲ.

**111. ಅಪೀಲು ನ್ಯಾಯಾಧಿಕರಣದ ಮುಂದಿರುವ ಕಾರ್ಯವಿಧಾನ.–** (1) ಅಪೀಲು ನ್ಯಾಯಾಧಿಕರಣವು, ಅದರ ಮುಂದಿರುವ ಯಾವುವೇ ವ್ಯವಹರಣೆಗಳನ್ನು ಅಥವಾ ಅದರ ಮುಂದಿರುವ ಅಪೀಲನ್ನು ವಿಲೇವಾರಿ ಮಾಡುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5) ರಲ್ಲಿ ವಿಧಿಸಲಾದ ಕಾರ್ಯವಿಧಾನಕ್ಕೆ ಬದ್ಧವಾಗಿರತಕ್ಕದ್ದಲ್ಲ, ಆದರೆ ಸ್ವಾಭಾವಿಕ ನ್ಯಾಯದ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ಈ ಅಧಿನಿಯಮದ ಇತರೆ ಉಪಬಂಧಗಳು ಮತ್ತು ಅವುಗಳ ಮೇರೆಗೆ ರಚಿಸಿದ ನಿಯಮಗಳಿಗೆ ಒಳಪಟ್ಟು, ಅಪೀಲು ನ್ಯಾಯಾಧಿಕರಣವು, ತನ್ನದೇ ಆದ ಕಾರ್ಯವಿಧಾನವನ್ನು ವಿನಿಯಮಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಅಪೀಲು ನ್ಯಾಯಾಧಿಕರಣವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದ ದಾವೆಯನ್ನು ಅಥವಾ ಅಪೀಲನ್ನು ಅಧಿವಿಚಾರಣೆಯನ್ನು ಮಾಡುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಯಾರೇ ವ್ಯಕ್ತಿಯ ಹಾಜರಾತಿಯನ್ನು ಸಮನು ಮಾಡುವುದು ಮತ್ತು ಅವನು ಹಾಜರಾಗುವಂತೆ ಒತ್ತಾಯಿಸುವುದು ಹಾಗೂ ಆತನಿಂದ ಪ್ರಮಾಣ ಮಾಡಿಸಿ ವಿಚಾರಣೆ ಮಾಡುವುದು;

(ಬಿ) ದಸ್ತಾವೇಜುಗಳ ಶೋಧನೆ ಮತ್ತು ಅವುಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್‌ಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ ಪ್ರಕರಣ 123 ಮತ್ತು 124ರ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಕಛೇರಿಯಿಂದ, ಯಾವುದೇ ಸರ್ಕಾರಿ ದಾಖಲೆ ಅಥವಾ ದಸ್ತಾವೇಜು ಅಥವಾ ಅಂಥ ದಾಖಲೆ ಅಥವಾ ದಸ್ತಾವೇಜಿನ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಾರ್ಯಾಜ್ಞೆಗಳನ್ನು ಹೊರಡಿಸುವುದು;

(ಎಫ್) ತಪ್ಪಿಗಾಗಿ ಸಲ್ಲಿಸಿರುವ ಮನವಿಯನ್ನು ವಜಾ ಮಾಡುವುದು ಅಥವಾ ಅದನ್ನು ಏಕಪಕ್ಷೀಯವಾಗಿ ನಿರ್ಣಯಿಸುವುದು;

(ಜಿ) ತಪ್ಪಿಗಾಗಿ ಸಲ್ಲಿಸಿರುವ ಮನವಿಯನ್ನು ವಜಾ ಮಾಡಿದ ಯಾವುದೇ ಆದೇಶವನ್ನು ಅಥವಾ ಏಕಪಕ್ಷೀಯವಾಗಿ ನಿರ್ಣಯಿಸಿರುವ ಯಾವುದೇ ಆದೇಶವನ್ನು ತಳ್ಳಿ ಹಾಕುವುದು; ಮತ್ತು

(ಹೆಚ್) ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ದಾವೆಗೆ ಸಂಬಂಧಿಸಿದಂತೆ ಡಿಕ್ರಿಯನ್ನು ನೀಡಿದ ಹಾಗೆಯೇ, ಅಪೀಲು ನ್ಯಾಯಾಧಿಕರಣವು ಮಾಡಿದ ಯಾವುದೇ ಆದೇಶವನ್ನು, ಅದೇ ರೀತಿಯಲ್ಲಿ ಜಾರಿಗೊಳಿಸಬಹುದು ಮತ್ತು ಯಾವ ನ್ಯಾಯಾಲಯದ ಅಧಿಕಾರವ್ಯಾಪ್ತಿಯ ಪರಿಮಿತಿಗಳೊಳಗೆ,–

(ಎ) ಕಂಪನಿಯ ವಿರುದ್ಧವಾಗಿ ಮಾಡಿರುವ ಆದೇಶದ ಸಂದರ್ಭದಲ್ಲಿ, ಕಂಪನಿಯ ನೋಂದಾಯಿತ ಕಛೇರಿ ಇರುವ ಸ್ಥಳವು ಇದೆಯೋ; ಅಥವಾ

(ಬಿ) ಯಾರೇ ಇತರ ವ್ಯಕ್ತಿಯ ವಿರುದ್ಧವಾಗಿ ಮಾಡಿರುವ ಆದೇಶದ ಸಂದರ್ಭದಲ್ಲಿ, ಸಂಬಂಧಪಟ್ಟ ವ್ಯಕ್ತಿಯು ಸ್ವಯಿಚ್ಛೆಯಿಂದ ವಾಸಿಸುತ್ತಿರುವ ಅಥವಾ ವ್ಯವಹಾರ ನಡೆಸುತ್ತಿರುವ ಅಥವಾ ಲಾಭಕ್ಕಾಗಿ ವೈಯಕ್ತಿಕವಾಗಿ ಕೆಲಸ ಮಾಡುತ್ತಿರುವ ಸ್ಥಳವು ಇದೆಯೋ

– ಆ ನ್ಯಾಯಾಲಯಕ್ಕೆ ತನ್ನ ಆದೇಶಗಳ ಅಮಲ್ಜಾರಿಗಾಗಿ ಕಳುಹಿಸುವುದು ಅಪೀಲು ನ್ಯಾಯಾಧಿಕರಣಕ್ಕೆ ನ್ಯಾಯಸಮ್ಮತವಾಗಿರತಕ್ಕದ್ದು.

(4) ಅಪೀಲು ನ್ಯಾಯಾಧಿಕರಣದ ಮುಂದಿರುವ ಯಾವುವೇ ವ್ಯವಹರಣೆಗಳನ್ನು, ಭಾರತ ದಂಡ ಸಂಹಿತೆ, 1860 (1860ರ 45)ರ ಪ್ರಕರಣ 193ರ ಮತ್ತು 228ರ ಅರ್ಥವ್ಯಾಪ್ತಿಯೊಳಗೆ ಮತ್ತು ಪ್ರಕರಣ 196ರ ಉದ್ದೇಶಗಳಿಗಾಗಿ, ನ್ಯಾಯಿಕ ವ್ಯವಹರಣೆಗಳು ಎಂದು ಪರಿಭಾವಿಸತಕ್ಕದ್ದು ಹಾಗೂ ಅಪೀಲು ನ್ಯಾಯಾಧಿಕರಣವನ್ನು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಪ್ರಕರಣ 195ರ ಮತ್ತು ಅಧ್ಯಾಯ XXVI ರ ಉದ್ದೇಶಕ್ಕಾಗಿ ಸಿವಿಲ್ ನ್ಯಾಯಾಲಯ ಎಂದು ಭಾವಿಸತಕ್ಕದ್ದು.

**112. ಅಪೀಲು ನ್ಯಾಯಾಧಿಕರಣಕ್ಕೆ ಅಪೀಲುಗಳು.–** (1) ಈ ಅಧಿನಿಯಮದ ಪ್ರಕರಣ 107ರ ಅಥವಾ ಪ್ರಕರಣ 108ರ ಅಡಿಯಲ್ಲಿ ಅಥವಾ ರಾಜ್ಯ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಮೇರೆಗೆ ಆತನ ವಿರುದ್ಧವಾಗಿ ಹೊರಡಿಸಲಾದ ಯಾವುದೇ ಆದೇಶದಿಂದ ಬಾಧಿತನಾದ

ಹಾಗೂ ವಿರುದ್ಧವಾಗಿ ಅಪೀಲು ಸಲ್ಲಿಸಬೇಕೆಂದಿರುವ ಯಾರೇ ವ್ಯಕ್ತಿಯು, ಆದೇಶವನ್ನು ಆತನಿಗೆ ತಿಳಿಸಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ, ಅಂಥ ಆದೇಶದ ವಿರುದ್ಧವಾಗಿ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು.

(2) ಅಪೀಲು ನ್ಯಾಯಾಧಿಕರಣವು, ತನ್ನ ವಿವೇಚನೆಯ ಮೇರೆಗೆ, ಅಂಥ ಯಾವುದೇ ಅಪೀಲನ್ನು, ಅದು ಒಳಗೊಂಡಿರುವ ತೆರಿಗೆ ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅಥವಾ ಒಳಗೊಂಡಿರುವ ತೆರಿಗೆ ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನಲ್ಲಿನ ವ್ಯತ್ಯಾಸ ಅಥವಾ ಅಂಥ ಆದೇಶದಲ್ಲಿ ನಿರ್ಧರಿಸಲಾದ ಜುಲ್ಮಾನೆಯ, ಶುಲ್ಕದ ಅಥವಾ ದಂಡದ ಮೊತ್ತವು ಐವತ್ತು ಸಾವಿರ ರೂಪಾಯಿಗಳನ್ನು ಮೀರಿರದಿದ್ದಲ್ಲಿ ಪುರಸ್ಕರಿಸಲು ನಿರಾಕರಿಸಬಹುದು.

(3) ಆಯುಕ್ತರು, ತಮ್ಮ ಸ್ವಪ್ರೇರಣೆಯಿಂದ ಅಥವಾ ರಾಜ್ಯ ತೆರಿಗೆಯ ಆಯುಕ್ತರ ಅಥವಾ ಒಕ್ಕೂಟ ರಾಜ್ಯಕ್ಷೇತ್ರಗಳ ತೆರಿಗೆ ಆಯುಕ್ತರ ಕೋರಿಕೆಯ ಮೇರೆಗೆ, ಈ ಅಧಿನಿಯಮದ ಅಡಿಯಲ್ಲಿ ಅಥವಾ ರಾಜ್ಯ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ, ಅಡಿಯಲ್ಲಿ ಅಪೀಲು ಪ್ರಾಧಿಕಾರವು ಅಥವಾ ಪುನರೀಕ್ಷಣಾ ಪ್ರಾಧಿಕಾರವು ಹೊರಡಿಸಿರುವ ಯಾವುದೇ ಆದೇಶದ ಯಾವುವೇ ವ್ಯವಹರಣೆಗಳ ದಾಖಲೆಗಳನ್ನು, ಸದರಿ ಆದೇಶದ ಕಾನೂನುಸಮ್ಮತತೆ ಹಾಗೂ ಔಚಿತ್ಯತೆಯನ್ನು ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಅವುಗಳನ್ನು ಪರೀಕ್ಷಿಸಬಹುದು ಮತ್ತು ಆಯುಕ್ತರು ತಮ್ಮ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ, ಸದರಿ ಆದೇಶದಿಂದ ಉದ್ಭವಿಸಿರುವ ಅಂಥ ಅಂಶಗಳನ್ನು ನಿರ್ಧರಿಸುವುದಕ್ಕಾಗಿ, ಸದರಿ ಆದೇಶವನ್ನು ತಿಳಿಸಿದ ದಿನಾಂಕದಿಂದ ಆರು ತಿಂಗಳುಗಳ ಒಳಗಾಗಿ ಅಪೀಲು ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸುವಂತೆ, ತನಗೆ ಅಧೀನನಾದ ಯಾರೇ ಅಧಿಕಾರಿಗೆ ಆದೇಶದ ಮೂಲಕ ನಿರ್ದೇಶಿಸಬಹುದು.

(4) ಉಪಪ್ರಕರಣ (3)ರ ಅಡಿಯಲ್ಲಿನ ಆದೇಶದ ಅನುಸರಣೆಯಲ್ಲಿ, ಪ್ರಾಧಿಕೃತ ಅಧಿಕಾರಿಯು, ಅಪೀಲು ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ, ಅಂಥ ಅರ್ಜಿಯನ್ನು ಅಪೀಲು ನ್ಯಾಯಾಧಿಕರಣವು, ಪ್ರಕರಣ 107ರ ಉಪಪ್ರಕರಣ (11)ರ ಅಡಿಯಲ್ಲಿ ಅಥವಾ ಪ್ರಕರಣ 108ರ ಉಪಪ್ರಕರಣ (1)ರ ಅಡಿಯಲ್ಲಿನ ಆದೇಶದ ವಿರುದ್ಧವಾಗಿ ಅಪೀಲು ಸಲ್ಲಿಸಿದ್ದರೆ ಹೇಗೆ ವ್ಯವಹರಿಸಲಾಗುತ್ತಿತ್ತೋ ಹಾಗೆಯೇ ವ್ಯವಹರಿಸತಕ್ಕದ್ದು ಮತ್ತು ಅಪೀಲಿಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು, ಅಂಥ ಅರ್ಜಿಗೆ, ಅವು ಉಪಪ್ರಕರಣ (1)ರ ಅಡಿಯಲ್ಲಿ ಸಲ್ಲಿಸಿದ ಅಪೀಲುಗಳಿಗೆ ಸಂಬಂಧಿಸಿದಂತೆ ಅನ್ವಯವಾಗುವ ರೀತಿಯಲ್ಲಿಯೇ ಅನ್ವಯಿಸತಕ್ಕದ್ದು.

(5) ಈ ಉಪಪ್ರಕರಣದ ಅಡಿಯಲ್ಲಿ ಅಪೀಲನ್ನು ಸಲ್ಲಿಸಲಾಗಿರುವುದರ ನೋಟೀಸನ್ನು ಸ್ವೀಕರಿಸಿದ ಮೇಲೆ, ಯಾರ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ, ಆತನು ಅಂಥ ಆದೇಶ ಅಥವಾ ಅದರ ಯಾವುದೇ ಭಾಗದ ವಿರುದ್ಧ ಅಪೀಲನ್ನು ಸಲ್ಲಿಸದಿರಬಹುದು ಎಂಬುದು ಏನೇ ಇದ್ದರೂ, ನೋಟೀಸನ್ನು ಸ್ವೀಕರಿಸಿದ ನಲವತ್ತೈದು ದಿನಗಳ ಒಳಗಾಗಿ, ಅದರ ವಿರುದ್ಧವಾಗಿ ಅಪೀಲು ಸಲ್ಲಿಸಿರುವ ಆದೇಶದ ಯಾವುದೇ ಭಾಗಕ್ಕೆ ಪ್ರತಿಯಾಗಿ, ನಿಯಮಿಸಲಾದ ವಿಧಾನದಲ್ಲಿ ಪರಿಶೀಲಿಸಲಾದ, ಎದುರು ಆಕ್ಷೇಪಣೆಗಳ ವಿವರಣಪತ್ರವನ್ನು ಸಲ್ಲಿಸಬಹುದು ಮತ್ತು ಅಂಥ ವಿವರಣಪತ್ರವನ್ನು ಅಪೀಲು ನ್ಯಾಯಾಧಿಕರಣವು, ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿರುವ ಸಮಯದ ಒಳಗಾಗಿ ಪ್ರಸ್ತುತಪಡಿಸಿದ ಅಪೀಲು ಎನ್ನುವ ಹಾಗೆಯೇ ವಿಲೆ ಮಾಡತಕ್ಕದ್ದು.

(6) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ಅವಧಿಯು ಮುಗಿದ ನಂತರದ ಮೂರು ತಿಂಗಳ ಒಳಗಾಗಿ ಅಪೀಲನ್ನು, ಆ ಅವಧಿಯೊಳಗೆ ಅದನ್ನು ಹಾಜರುಪಡಿಸಲು ಆಗದಿರುವುದಕ್ಕೆ ಸಾಕಷ್ಟು ಕಾರಣಗಳಿದ್ದವು ಎನ್ನುವುದು ಅಪೀಲು ನ್ಯಾಯಾಧಿಕರಣಕ್ಕೆ ಮನದಟ್ಟಾದರೆ, ಆ ನ್ಯಾಯಾಧಿಕರಣವು ಪುರಸ್ಕರಿಸಬಹುದು ಅಥವಾ ಉಪಪ್ರಕರಣ (5)ರಲ್ಲಿ ಉಲ್ಲೇಖಿಸಿದ ಅವಧಿಯು ಮುಗಿದ ನಂತರದ ನಲವತ್ತೈದು ದಿನಗಳ ಒಳಗಾಗಿ ಎದುರು–ಆಕ್ಷೇಪಣೆಗಳ ಪಾಟೀ ತಕರಾರುಗಳ ವಿವರಣಪತ್ರ ಸಲ್ಲಿಸುವುದಕ್ಕೆ ಅನುಮತಿ ನೀಡಬಹುದು.

(7) ಅಪೀಲು ನ್ಯಾಯಾಧಿಕರಣಕ್ಕೆ ಸಲ್ಲಿಸಲಾಗುವ ಅಪೀಲು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ವಿಧಾನದಲ್ಲಿ ಪರಿಶೀಲಿಸತಕ್ಕದ್ದು ಮತ್ತು ಅಂಥ ಶುಲ್ಕದ ಜೊತೆ ಇರತಕ್ಕದ್ದು.

(8) ಅಪೀಲುದಾರನು,–

(ಎ) ಆಕ್ಷೇಪಿತ ಆದೇಶದಿಂದ ಉದ್ಭವಿಸಿರುವ ತೆರಿಗೆ, ಬಡ್ಡಿ, ಜುಲ್ಮಾನೆ, ಶುಲ್ಕ ಮತ್ತು ದಂಡದ ಮೊತ್ತದಲ್ಲಿ ಆತನಿಂದ ಒಪ್ಪಿಕೊಂಡಿರುವ ಅಂಥ ಭಾಗವನ್ನು ಪೂರ್ಣವಾಗಿ; ಮತ್ತು

(ಬಿ) ಪ್ರಕರಣ 107ರ ಉಪಪ್ರಕರಣ (6)ರ ಅಡಿಯಲ್ಲಿ ಸಂದಾಯ ಮಾಡಿದ ಮೊಬಲಗಿಗೆ ಹೆಚ್ಚುವರಿಯಾಗಿ ಅಪೀಲು ಸಲ್ಲಿಸಲಾಗಿರುವುದಕ್ಕೆ ಸಂಬಂಧಿಸಿದಂಥ, ಗರಿಷ್ಠ ಐವತ್ತು ಕೋಟಿ ರೂಪಾಯಿಗಳಿಗೊಳಪಟ್ಟು ಸದರಿ ಆದೇಶದಿಂದ ಉದ್ಭವಿಸಿರುವ ವಿವಾದದಲ್ಲಿರುವ ತೆರಿಗೆಯ ಉಳಿದ ಮೊತ್ತದ ಶೇಕಡಾ ಇಪ್ಪತ್ತರಷ್ಟಕ್ಕೆ ಸಮನಾದ ಮೊಬಲಗನ್ನು

– ಸಂದಾಯ ಮಾಡಿದ ಹೊರತು ಉಪಪ್ರಕರಣ (1)ರ ಅಡಿಯಲ್ಲಿ ಅಪೀಲನ್ನು ಸಲ್ಲಿಸತಕ್ಕದ್ದಲ್ಲ.

(9) ಅಪೀಲುದಾರನು, ಉಪಪ್ರಕರಣ (8)ರ ಪ್ರಕಾರ ಮೊಬಲಗನ್ನು ಸಂದಾಯ ಮಾಡಿದ್ದಲ್ಲಿ, ಅಪೀಲು ವಿಲೇವಾರಿಯಾಗುವವರೆಗೂ ಬಾಕಿ ಮೊತ್ತಕ್ಕಾಗಿ ವಸೂಲಾತಿ ವ್ಯವಹರಣೆಗಳನ್ನು ತಡೆಹಿಡಿಯಲಾಗಿದೆ ಎಂದು ಪರಿಭಾವಿಸತಕ್ಕದ್ದು.

(10) ಅಪೀಲು ನ್ಯಾಯಾಧಿಕರಣದ ಮುಂದೆ,–

(ಎ) ಅಪೀಲಿನಲ್ಲಿಯ, ತಪ್ಪುಗಳನ್ನು ಸರಿಪಡಿಸುವುದಕ್ಕಾಗಿ ಅಥವಾ ಯಾವುದೇ ಇತರೆ ಉದ್ದೇಶಕ್ಕಾಗಿ; ಅಥವಾ

(ಬಿ) ಅಪೀಲನ್ನು ಅಥವಾ ಅರ್ಜಿಯನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ

– ಸಲ್ಲಿಸಿದ ಪ್ರತಿಯೊಂದು ಅರ್ಜಿಯ ಜೊತೆಗೆ, ನಿಯಮಿಸಬಹುದಾದಂಥ ಶುಲ್ಕ ಇರತಕ್ಕದ್ದು.

**113. ಅಪೀಲು ನ್ಯಾಯಾಧಿಕರಣದ ಆದೇಶಗಳು.–** (1) ಅಪೀಲು ನ್ಯಾಯಾಧಿಕರಣವು, ಅಪೀಲಿನ ಪಕ್ಷಕಾರರಿಗೆ ವೈಯಕ್ತಿಕ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ಸೂಕ್ತವೆಂದು ಅದು ಪರಿಗಣಿಸಬಹುದಾದಂತೆ, ಯಾವ ತೀರ್ಮಾನದ ಅಥವಾ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ತೀರ್ಮಾನ ಅಥವಾ ಆದೇಶವನ್ನು ಸ್ಥಿರೀಕರಿಸಿ, ಮಾರ್ಪಾಡು ಮಾಡಿ ಅಥವಾ ರದ್ದುಗೊಳಿಸಿ ಅಂಥ ಆದೇಶವನ್ನು ಹೊರಡಿಸಬಹುದು ಅಥವಾ ಅಪೀಲು

ಪ್ರಾಧಿಕಾರಕ್ಕೆ ಅಥವಾ ಪುನರೀಕ್ಷಣಾ ಪ್ರಾಧಿಕಾರಕ್ಕೆ ಅಥವಾ ಮೂಲ ನ್ಯಾಯನಿರ್ಣಯ ಪ್ರಾಧಿಕಾರಕ್ಕೆ, ಸೂಕ್ತವೆಂದು ಅದು ಭಾವಿಸಬಹುದಾದಂಥ ನಿರ್ದೇಶನಗಳೊಂದಿಗೆ ಪ್ರಕರಣವನ್ನು, ಅವಶ್ಯವಿದ್ದರೆ ಹೆಚ್ಚುವರಿ ಸಾಕ್ಷ್ಯವನ್ನು ತೆಗೆದುಕೊಂಡು ಹೊಸದಾಗಿ ನ್ಯಾಯ ನಿರ್ಣಯಕ್ಕಾಗಿ ಅಥವಾ ತೀರ್ಮಾನಕ್ಕಾಗಿ ಹಿಂದಕ್ಕೆ ಕಳುಹಿಸಬಹುದು.

(2) ಅಪೀಲು ನ್ಯಾಯಾಧಿಕರಣವು, ಅಪೀಲಿನ ವಿಚಾರಣೆಯ ಯಾವುದೇ ಹಂತದಲ್ಲಿ, ಸಾಕಷ್ಟು ಕಾರಣಗಳನ್ನು ತೋರಿಸಿದರೆ, ಪಕ್ಷಕಾರರಿಗೆ ಅಥವಾ ಅವರಲ್ಲಿ ಯಾರಿಗಾದರೂ, ಕಾಲಾವಕಾಶವನ್ನು ನೀಡಬಹುದು ಮತ್ತು ಅಪೀಲಿನ ವಿಚಾರಣೆಯನ್ನು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಮುಂದೂಡಬಹುದು:

ಪರಂತು, ಅಪೀಲಿನ ವಿಚಾರಣೆ ನಡೆಯುತ್ತಿರುವಾಗ ಪಕ್ಷಕಾರನಿಗೆ ಮೂರು ಬಾರಿಗಿಂತ ಹೆಚ್ಚಿಗೆ ಅಂಥ ಮುಂದೂಡಿಕೆಯನ್ನು ನೀಡತಕ್ಕದ್ದಲ್ಲ.

(3) ಅಪೀಲು ನ್ಯಾಯಾಧಿಕರಣವು, ಉಪಪ್ರಕರಣ (1)ರ ಅಡಿಯಲ್ಲಿ ಹೊರಡಿಸಿದ್ದ ಯಾವುದೇ ಆದೇಶವನ್ನು, ದಾಖಲೆಯ ಮೇಲ್ನೋಟಕ್ಕೆ ಕಾಣುವ ಯಾವುದೇ ತಪ್ಪನ್ನು ಸರಿಪಡಿಸುವುದಕ್ಕಾಗಿ, ಅಂಥ ತಪ್ಪನ್ನು ಆದೇಶದ ದಿನಾಂಕದಿಂದ ಮೂರು ತಿಂಗಳ ಅವಧಿಯ ಒಳಗಾಗಿ, ಅದೇ ಸ್ವತಃ ಅಪೀಲು ನ್ಯಾಯಾಧಿಕರಣವು ಗಮನಿಸಿದ್ದರೆ ಅಥವಾ ಆಯುಕ್ತರಾಗಲಿ ಅಥವಾ ರಾಜ್ಯ ತೆರಿಗೆ ಆಯುಕ್ತರಾಗಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ತೆರಿಗೆ ಆಯುಕ್ತರಾಗಲಿ ಅಥವಾ ಅಪೀಲಿನ ಇತರ ಪಕ್ಷಕಾರನಾಗಲಿ, ಅದರ ಗಮನಕ್ಕೆ ತಂದರೆ ತಿದ್ದುಪಡಿ ಮಾಡಬಹುದು:

ಪರಂತು, ತೆರಿಗೆ ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಮರುಪಾವತಿಯನ್ನು ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ಕಡಿಮೆ ಮಾಡುವ ಅಥವಾ ಅನ್ಯಥಾ ಇತರ ಪಕ್ಷಕಾರನ ಬಾಧ್ಯತೆಯನ್ನು ಹೆಚ್ಚಿಸುವ ಪರಿಣಾಮವನ್ನು ಹೊಂದಿರುವ ತಿದ್ದುಪಡಿಯನ್ನು, ಪಕ್ಷಕಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡದ ಹೊರತು, ಈ ಉಪಪ್ರಕರಣದ ಅಡಿಯಲ್ಲಿ ಮಾಡತಕ್ಕದ್ದಲ್ಲ.

(4) ಅಪೀಲು ನ್ಯಾಯಾಧಿಕರಣವು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಪ್ರತಿಯೊಂದು ಅಪೀಲನ್ನು ಅದನ್ನು ಸಲ್ಲಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯ ಒಳಗಾಗಿ ವಿಚಾರಣೆ ಮಾಡತಕ್ಕದ್ದು ಮತ್ತು ನಿರ್ಣಯಿಸತಕ್ಕದ್ದು.

(5) ಅಪೀಲು ನ್ಯಾಯಾಧಿಕರಣವು, ಈ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶದ ಪ್ರತಿಯನ್ನು, ಸಂದರ್ಭಾನುಸಾರವಾಗಿ ಅಪೀಲು ಪ್ರಾಧಿಕಾರಕ್ಕೆ ಅಥವಾ ಪುನರೀಕ್ಷಣಾ ಪ್ರಾಧಿಕಾರಕ್ಕೆ ಅಥವಾ ಮೂಲ ನ್ಯಾಯ ನಿರ್ಣಯ ಪ್ರಾಧಿಕಾರಕ್ಕೆ, ಅಪೀಲುದಾರನಿಗೆ ಮತ್ತು ಅಧಿಕಾರವ್ಯಾಪ್ತಿ ಹೊಂದಿದ ಆಯುಕ್ತರಿಗೆ ಅಥವಾ ರಾಜ್ಯ ತೆರಿಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರಗಳ ತೆರಿಗೆ ಆಯುಕ್ತರಿಗೆ ಕಳುಹಿಸತಕ್ಕದ್ದು.

(6) ಪ್ರಕರಣ 117 ಅಥವಾ ಪ್ರಕರಣ 118ರಲ್ಲಿ ಉಪಬಂಧಿಸಿದ್ದನ್ನುಳಿದು, ಅಪೀಲು ನ್ಯಾಯಾಧಿಕರಣವು, ಅಪೀಲಿನ ಮೇಲೆ ಹೊರಡಿಸಿದ ಆದೇಶವು ಅಂತಿಮವಾಗಿರತಕ್ಕದ್ದು ಹಾಗೂ ಪಕ್ಷಕಾರರು ಅದಕ್ಕೆ ಬದ್ಧರಾಗಿರತಕ್ಕದ್ದು.

**114. ಅಧ್ಯಕ್ಷರ ಹಣಕಾಸು ಮತ್ತು ಆಡಳಿತಾತ್ಮಕ ಅಧಿಕಾರಗಳು.–** ನಿಯಮಿಸಬಹುದಾದಂಥ ಹಣಕಾಸಿನ ಮತ್ತು ಆಡಳಿತಾತ್ಮಕ ಅಧಿಕಾರಗಳನ್ನು, ಅಧ್ಯಕ್ಷರು, ಅಪೀಲು ನ್ಯಾಯಾಧಿಕರಣದ, ರಾಷ್ಟ್ರೀಯ ನ್ಯಾಯಪೀಠದ ಮತ್ತು ಪ್ರಾದೇಶಿಕ ನ್ಯಾಯಪೀಠಗಳ ಮೇಲೆ ಚಲಾಯಿಸತಕ್ಕದ್ದು:

ಪರಂತು, ಅಧ್ಯಕ್ಷನು, ತನ್ನ ಅಂಥ ಹಣಕಾಸಿನ ಮತ್ತು ಆಡಳಿತಾತ್ಮಕ ಅಧಿಕಾರಗಳನ್ನು, ಸೂಕ್ತವೆಂದು ತಾನು ಪರಿಗಣಿಸಬಹುದಾದಂತೆ, ರಾಷ್ಟ್ರೀಯ ನ್ಯಾಯಪೀಠದ ಮತ್ತು ಪ್ರಾದೇಶಿಕ ನ್ಯಾಯಪೀಠಗಳ ಯಾರೇ ಇತರ ಸದಸ್ಯನಿಗೆ ಅಥವಾ ಯಾರೇ ಅಧಿಕಾರಿಗೆ, ಅಂಥ ಪ್ರತ್ಯಾಯೋಜಿಸಿದ ಅಧಿಕಾರಗಳನ್ನು ಚಲಾಯಿಸುವಾಗ, ಅಂಥ ಸದಸ್ಯರ ಅಥವಾ ಅಧಿಕಾರಿಯ, ಅಧ್ಯಕ್ಷರ ನಿರ್ದೇಶನ, ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸಲು ಮುಂದುವರಿಯತಕ್ಕದ್ದೆಂಬ ಷರತ್ತಿಗೆ ಒಳಪಟ್ಟು, ಪ್ರತ್ಯಾಯೋಜಿಸುವ ಪ್ರಾಧಿಕಾರವನ್ನು ಹೊಂದಿರತಕ್ಕದ್ದು.

**115. ಅಪೀಲಿನ ಅಂಗೀಕಾರಕ್ಕಾಗಿ ಸಂದಾಯ ಮಾಡಿದ ಮೊತ್ತದ ಮರುಪಾವತಿ ಮೇಲಿನ ಬಡ್ಡಿ.–** ಪ್ರಕರಣ 107ರ ಉಪಪ್ರಕರಣ (6)ರ ಅಡಿಯಲ್ಲಿ ಅಥವಾ ಪ್ರಕರಣ 112ರ ಉಪಪ್ರಕರಣ (8)ರ ಅಡಿಯಲ್ಲಿ ಅಪೀಲುದಾರನು ಸಂದಾಯ ಮಾಡಿದ ಮೊತ್ತವನ್ನು, ಅಪೀಲು ಪ್ರಾಧಿಕಾರದ ಅಥವಾ ಅಪೀಲು ನ್ಯಾಯಾಧಿಕರಣದ ಆದೇಶದ ಪರಿಣಾಮವಾಗಿ ಮರುಪಾವತಿ ಮಾಡಬೇಕಾದಲ್ಲಿ, ಅಂಥ ಮರುಪಾವತಿಗೆ ಸಂಬಂಧಿಸಿದಂತೆ, ಪ್ರಕರಣ 56ರಲ್ಲಿ ನಿರ್ದಿಷ್ಟಪಡಿಸಿರುವ ದರದಲ್ಲಿ ಬಡ್ಡಿಯನ್ನು, ಆ ಮೊತ್ತದ ಸಂದಾಯದ ದಿನಾಂಕದಿಂದ ಅಂಥ ಮರುಪಾವತಿಯ ದಿನಾಂಕದವರೆಗೆ ನೀಡತಕ್ಕದ್ದು.

**116. ಪ್ರಾಧಿಕೃತ ಪ್ರತಿನಿಧಿಯ ಮೂಲಕ ಹಾಜರಾಗುವುದು.–** (1) ಈ ಅಧಿನಿಯಮದ ಅಡಿಯಲ್ಲಿ ನೇಮಕವಾಗಿರುವ ಅಧಿಕಾರಿಯ ಅಥವಾ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣದ ಮುಂದೆ ಹಾಜರಾಗಲು ಹಕ್ಕುಳ್ಳ ಅಥವಾ ಅಗತ್ಯವಿರುವ ಅಂಥ ಯಾರೇ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ, ಪ್ರಮಾಣ ಮಾಡಿಸಿ ಪರೀಕ್ಷಿಸುವುದಕ್ಕಾಗಿ ಅಥವಾ ದೃಢೀಕರಣ ಮಾಡುವುದಕ್ಕಾಗಿ ವೈಯಕ್ತಿಕವಾಗಿ ಹಾಜರಾಗುವುದು ಅಗತ್ಯವಿರುವುದನ್ನು ಹೊರತುಪಡಿಸಿ, ಈ ಪ್ರಕರಣದ ಇತರ ಉಪಬಂಧಗಳಿಗೆ ಒಳಪಟ್ಟು, ಪ್ರಾಧಿಕೃತ ಪ್ರತಿನಿಧಿಯ ಮೂಲಕ ಹಾಜರಾಗಬಹುದು.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ, "ಪ್ರಾಧಿಕೃತ ಪ್ರತಿನಿಧಿ" ಎಂದರೆ, ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ವ್ಯಕ್ತಿಯು, ತನ್ನ ಪರವಾಗಿ ಹಾಜರಾಗಲು ಪ್ರಾಧಿಕರಿಸಿದ ಈ ಕೆಳಕಂಡ ವ್ಯಕ್ತಿ, ಎಂದರೆ:–

(ಎ) ಆತನ ಸಂಬಂಧಿ ಅಥವಾ ನಿಯತಕಾಲೀನ ಉದ್ಯೋಗಿ; ಅಥವಾ

(ಬಿ) ಭಾರತದ ಯಾವುದೇ ನ್ಯಾಯಾಲಯದಲ್ಲಿ ವೃತ್ತಿಯನ್ನು ನಡೆಸಲು ಹಕ್ಕುಳ್ಳ ಮತ್ತು ಭಾರತದ ಯಾವುದೇ ನ್ಯಾಯಾಲಯ ಮುಂದೆ ವೃತ್ತಿಯನ್ನು ನಡೆಸುವುದರಿಂದ ಅನರ್ಹಗೊಂಡಿಲ್ಲದ ನ್ಯಾಯವಾದಿ;

(ಸಿ) ವೃತ್ತಿ ನಡೆಸಲು ಪ್ರಮಾಣಪತ್ರವನ್ನು ಹೊಂದಿರುವ ಮತ್ತು ವೃತ್ತಿಯನ್ನು ನಡೆಸುವುದರಿಂದ ಅನರ್ಹಗೊಂಡಿಲ್ಲದ ಯಾರೇ ಚಾರ್ಟರ್ಡ್ ಅಕೌಂಟೆಂಟ್, ಕಾಸ್ಟ್ ಅಕೌಂಟೆಂಟ್ ಅಥವಾ ಕಂಪನಿ ಕಾರ್ಯದರ್ಶಿ; ಅಥವಾ

(ಡಿ) ಆತನು ಸರ್ಕಾರದ ಅಧೀನದಲ್ಲಿ ಸೇವಾವಧಿಯಲ್ಲಿ ಎರಡು ವರ್ಷಗಳಿಗಿಂತ ಕಡಿಮೆಯಿರದ ಅವಧಿಯವರೆಗೆ, ಸಮೂಹ–ಬಿ ದರ್ಜೆಯ ಗೆಜೆಟೆಡ್ ಅಧಿಕಾರಿಯ ಶ್ರೇಣಿಗಿಂತ ಕಡಿಮೆಯಿಲ್ಲದ ಹುದ್ದೆಯಲ್ಲಿ, ಕಾರ್ಯನಿರ್ವಹಿಸಿರುವ ಯಾವುದೇ ರಾಜ್ಯ ಸರ್ಕಾರದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ವಾಣಿಜ್ಯ ತೆರಿಗೆ ಇಲಾಖೆಯ ಅಥವಾ ಮಂಡಳಿಯ ಒಬ್ಬ ನಿವೃತ್ತ ಅಧಿಕಾರಿ:

ಪರಂತು, ಅಂಥ ಅಧಿಕಾರಿಯು, ತನ್ನ ನಿವೃತ್ತಿ ಅಥವಾ ರಾಜೀನಾಮೆ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ, ಈ ಅಧಿನಿಯಮದ ಯಾವುವೇ ವ್ಯವಹರಣೆಗಳಲ್ಲಿ, ಪ್ರಾಧಿಕೃತ ಪ್ರತಿನಿಧಿಯಾಗಿ ಹಾಜರಾಗಲು ಹಕ್ಕುಳ್ಳವನಾಗಿರತಕ್ಕದ್ದಲ್ಲ; ಅಥವಾ

(ಇ) ಸಂಬಂಧಪಟ್ಟ ನೋಂದಾಯಿತ ವ್ಯಕ್ತಿಯ ಪರವಾಗಿ, ಸರಕು ಮತ್ತು ಸೇವೆಗಳ ತೆರಿಗೆ ವೃತ್ತಿಗಾರನಾಗಿ ಕಾರ್ಯನಿರ್ವಹಿಸಲು ಪ್ರಾಧಿಕೃತನಾಗಿರುವ ಯಾರೇ ವ್ಯಕ್ತಿ.

(3) ಯಾರೇ ವ್ಯಕ್ತಿಯು,–

(ಎ) ಸರ್ಕಾರಿ ಸೇವೆಯಿಂದ ವಜಾಗೊಂಡಿದ್ದರೆ ಅಥವಾ ಆತನನ್ನು ತೆಗೆದುಹಾಕಲಾಗಿದ್ದರೆ; ಅಥವಾ

(ಬಿ) ಈ ಅಧಿನಿಯಮದ, ರಾಜ್ಯ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮದ, ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವ ಕಾನೂನಿನ ಅಥವಾ ಸರಕುಗಳ ಮಾರಾಟ ಅಥವಾ ಸರಕುಗಳು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೇಲಿನ ತೆರಿಗೆ ವಿಧಿಸುವುದಕ್ಕೆ ಸಂಬಂಧಿಸಿದಂತೆ ವ್ಯವಹರಿಸುವ ರಾಜ್ಯ ವಿಧಾನಮಂಡಲವು ಅನುಮೋದಿಸಿರುವ ಯಾವುವೇ ಅಧಿನಿಯಮಗಳ ಅಡಿಯಲ್ಲಿನ ಯಾವುದೇ ವ್ಯವಹರಣೆಗೆ ಸಂಬಂಧಿಸಿದ ಅಪರಾಧದ ಅಪರಾಧಿಯೆಂದು ನಿರ್ಣೀತನಾದರೆ; ಅಥವಾ

(ಸಿ) ದುರ್ನಡತೆಯ ತಪ್ಪಿತಸ್ಥನೆಂದು ನಿಯಮಿಸಲಾದ ಪ್ರಾಧಿಕಾರಕ್ಕೆ ಕಂಡುಬಂದರೆ; ಅಥವಾ

(ಡಿ) ದಿವಾಳಿ ಎಂದು ನಿರ್ಣೀತನಾದರೆ

– ಉಪಪ್ರಕರಣ (1)ರ ಅಡಿಯಲ್ಲಿ ಯಾರೇ ವ್ಯಕ್ತಿಯನ್ನು ಪ್ರತಿನಿಧಿಸಲು,

(i) ಖಂಡ (ಎ), (ಬಿ) ಮತ್ತು (ಸಿ)ಯಲ್ಲಿ ಉಲ್ಲೇಖಿಸಿದ ವ್ಯಕ್ತಿಗಳ ಸಂದರ್ಭದಲ್ಲಿ, ಎಲ್ಲಾ ಸಮಯದಲ್ಲಿ; ಮತ್ತು

(ii) ಖಂಡ (ಡಿ)ಯಲ್ಲಿ ಉಲ್ಲೇಖಿಸಿದ ವ್ಯಕ್ತಿಯ ಸಂದರ್ಭದಲ್ಲಿ, ದಿವಾಳಿತನ ಮುಂದುವರೆದ ಅವಧಿಯವರೆಗೆ

– ಅರ್ಹನಾಗಿರತಕ್ಕದ್ದಲ್ಲ.

(4) ರಾಜ್ಯ ಸರಕುಗಳು ಮತ್ತು ಸೇವಾ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಉಪಬಂಧಗಳ ಮೇರೆಗೆ ಅನರ್ಹಗೊಳಿಸಲಾಗಿರುವ ಯಾರೇ ವ್ಯಕ್ತಿಯನ್ನು, ಈ ಅಧಿನಿಯಮದ ಅಡಿಯಲ್ಲಿ ಅನರ್ಹಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದು.

**117. ಉಚ್ಚ ನ್ಯಾಯಾಲಯಕ್ಕೆ ಅಪೀಲು.–** (1) ಅಪೀಲು ನ್ಯಾಯಾಧಿಕರಣದ ರಾಜ್ಯ ನ್ಯಾಯಪೀಠವು ಅಥವಾ ಪ್ರದೇಶ ನ್ಯಾಯಪೀಠವು ಹೊರಡಿಸಿದ ಯಾವುದೇ ಆದೇಶದಿಂದ ಬಾಧಿತನಾಗಿರುವ ಯಾರೇ ವ್ಯಕ್ತಿಯು, ಉಚ್ಚ ನ್ಯಾಯಾಲಯಕ್ಕೆ

ಅಪೀಲು ಸಲ್ಲಿಸಬಹುದು ಮತ್ತು ಪ್ರಕರಣವು ಮುಖ್ಯವಾದ ಕಾನೂನಿನ ಪ್ರಶ್ನೆಯನ್ನು ಒಳಗೊಂಡಿದೆ ಎಂದು ಉಚ್ಚ ನ್ಯಾಯಾಲಯವು, ಮನವರಿಕೆಯಾದರೆ ಅಂಥ ಅಪೀಲನ್ನು ಅಂಗೀಕರಿಸಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ಅಪೀಲನ್ನು, ಯಾವ ಆದೇಶದ ವಿರುದ್ಧವಾಗಿ ಅಪೀಲು ಸಲ್ಲಿಸಲಾಗಿದೆಯೊ, ಆ ಆದೇಶದಿಂದ ಬಾಧಿತ ವ್ಯಕ್ತಿಯು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ನೂರ ಎಂಬತ್ತು ದಿನಗಳ ಅವಧಿಯ ಒಳಗಾಗಿ ಅಪೀಲು ಸಲ್ಲಿಸತಕ್ಕದ್ದು ಮತ್ತು ಅದು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ವಿಧಾನದಲ್ಲಿ ಅದನ್ನು ಪರಿಶೀಲಿಸಿರತಕ್ಕದ್ದು:

ಪರಂತು, ಉಚ್ಚ ನ್ಯಾಯಾಲಯವು ಸದರಿ ಅವಧಿ ಮುಗಿದ ನಂತರ ಅಪೀಲನ್ನು ಅಂಥ ಅವಧಿಯೊಳಗೆ ಅದನ್ನು ಸಲ್ಲಿಸದೇ ಇರುವುದಕ್ಕೆ ಸಾಕಷ್ಟು ಕಾರಣವಿತ್ತೆಂದು ಅದಕ್ಕೆ ಮನದಟ್ಟು ಮಾಡಿಕೊಂಡರೆ ಅದನ್ನು ಪುರಸ್ಕರಿಸಬಹುದು.

(3) ಉಚ್ಚ ನ್ಯಾಯಾಲಯವು ಯಾವುದೇ ಪ್ರಕರಣದಲ್ಲಿ ಮುಖ್ಯವಾದ ಕಾನೂನಿನ ಪ್ರಶ್ನೆಯು ಒಳಗೊಂಡಿದೆ ಎಂದು ಮನದಟ್ಟು ಮಾಡಿಕೊಂಡರೆ, ಅದು ಆ ಪ್ರಶ್ನೆಯನ್ನು ನಿರೂಪಿಸತಕ್ಕದ್ದು ಮತ್ತು ಅಪೀಲನ್ನು, ಹಾಗೆ ನಿರೂಪಿಸಿದ ಕಾನೂನಿನ ಪ್ರಶ್ನೆಯ ಮೇಲೆ ಮಾತ್ರ ವಿಚಾರಣೆ ಮಾಡತಕ್ಕದ್ದು ಮತ್ತು ಅಪೀಲಿನ ವಿಚಾರಣೆಯ ಸಮಯದಲ್ಲಿ, ಪ್ರಕರಣವು ಅಂಥ ಪ್ರಶ್ನೆಯನ್ನು ಒಳಗೊಂಡಿಲ್ಲ ಎಂದು ವಾದಿಸಲು ಪ್ರತಿವಾದಿಗಳಿಗೆ ಅವಕಾಶ ನೀಡತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ ನ್ಯಾಯಾಲಯವು ಯಾವುದೇ ಇತರ ಮುಖ್ಯವಾದ ಕಾನೂನಿನ ಪ್ರಶ್ನೆಯನ್ನು ನಿರೂಪಿಸಿಲ್ಲದುದರ ಮೇಲಿನ ಅಪೀಲಿನ ಆ ಪ್ರಕರಣವು, ಅಂಥ ಪ್ರಶ್ನೆಗಳನ್ನು ಒಳಗೊಂಡಿದೆ ಎಂದು ಅದಕ್ಕೆ ಮನದಟ್ಟಾದರೆ ಈ ಉಪಪ್ರಕರಣ ಅಪೀಲಿನ ವಿಚಾರಣೆ ಮಾಡುವ ನ್ಯಾಯಾಲಯದ ಅಧಿಕಾರವನ್ನು ಕಸಿದುಕೊಳ್ಳುತ್ತದೆ ಅಥವಾ ಮೊಟಕುಗೊಳಿಸುತ್ತದೆ ಎಂದು ಭಾವಿಸತಕ್ಕದ್ದಲ್ಲ.

(4) ಉಚ್ಚ ನ್ಯಾಯಾಲಯವು, ಹಾಗೆ ರೂಪಿಸಿದ ಕಾನೂನಿನ ಪ್ರಶ್ನೆಯನ್ನು ನಿರ್ಧರಿಸತಕ್ಕದ್ದು ಮತ್ತು ಅಂಥ ನಿರ್ಣಯಕ್ಕೆ ಆಧಾರವಾಗಿರುವ ಆಧಾರಗಳನ್ನು ಒಳಗೊಂಡ, ಅದರ ಮೇಲಿನ ಅಂಥ ತೀರ್ಪನ್ನು ನೀಡತಕ್ಕದ್ದು ಮತ್ತು ಅದು ಸೂಕ್ತ ಎಂದು ಭಾವಿಸಿದ ಅಂಥ ಖರ್ಚುಗಳಿಗಾಗಿ ಐತೀರ್ಪು ನೀಡಬಹುದು.

(5) ಉಚ್ಚ ನ್ಯಾಯಾಲಯವು,–

(ಎ) ರಾಜ್ಯ ನ್ಯಾಯಪೀಠವು ಅಥವಾ ಪ್ರದೇಶ ನ್ಯಾಯಪೀಠಗಳು ತೀರ್ಮಾನಿಸಿರದ; ಅಥವಾ

(ಬಿ) ಉಪಪ್ರಕರಣ (3)ರಲ್ಲಿ ಉಲ್ಲೇಖಿಸಿದಂತೆ ಅಂಥ ಕಾನೂನಿನ ಪ್ರಶ್ನೆಯ ಮೇಲಿನ ನಿರ್ಣಯದ ಕಾರಣದಿಂದಾಗಿ, ರಾಜ್ಯ ನ್ಯಾಯಪೀಠವು ಅಥವಾ ಪ್ರದೇಶ ನ್ಯಾಯಪೀಠಗಳು ತಪ್ಪಾಗಿ ನಿರ್ಧರಿಸಿರುವ

– ಯಾವುದೇ ವಿಷಯವನ್ನು ತೀರ್ಮಾನಿಸಬಹುದು.

(6) ಉಚ್ಚ ನ್ಯಾಯಾಲಯದ ಮುಂದೆ ಅಪೀಲನ್ನು ಸಲ್ಲಿಸಿದ್ದಲ್ಲಿ, ಅದನ್ನು ಉಚ್ಚ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರಿಗಿಂತ ಕಡಿಮೆ ಇಲ್ಲದ ನ್ಯಾಯಪೀಠವು ವಿಚಾರಣೆ ಮಾಡತಕ್ಕದ್ದು ಮತ್ತು ಅಂಥ ನ್ಯಾಯಾಧೀಶರ ಅಥವಾ ಅಂಥ ನ್ಯಾಯಾಧೀಶರ ಬಹುಮತದ ಅಭಿಪ್ರಾಯ ಯಾವುದಾದರೂ ಇದ್ದರೆ, ಅದಕ್ಕೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

(7) ಅಂಥ ಬಹುಮತವಿರದಿದ್ದಲ್ಲಿ, ನ್ಯಾಯಾಧೀಶರು ಯಾವ ಕಾನೂನು ಅಂಶದ ಬಗ್ಗೆ ಭಿನ್ನಾಭಿಪ್ರಾಯ ಹೊಂದಿರುವರೋ ಆ ಕಾನೂನಿನ ಅಂಶವನ್ನು ನಿರೂಪಿಸತಕ್ಕದ್ದು, ತದನಂತರ ಆ ಅಂಶದ ಮೇಲೆ ಮಾತ್ರ, ಉಚ್ಚ ನ್ಯಾಯಾಲಯದ ಒಬ್ಬರು ಅಥವಾ ಅದಕ್ಕಿಂತ ಹೆಚ್ಚು ಇತರೆ ನ್ಯಾಯಾಧೀಶರು ಆ ಪ್ರಕರಣದ ವಿಚಾರಣೆ ಮಾಡತಕ್ಕದ್ದು ಮತ್ತು ಅಂಥ ಅಂಶದ ಬಗ್ಗೆ ಮೊದಲ ಬಾರಿಗೆ ವಿಚಾರಣೆ ಮಾಡಿದ ನ್ಯಾಯಾಧೀಶರೂ ಒಳಗೊಂಡಂತೆ, ಪ್ರಕರಣದ ವಿಚಾರಣೆ ಮಾಡಿದ ನ್ಯಾಯಾಧೀಶರ ಬಹುಮತದ ಅಭಿಪ್ರಾಯಕ್ಕೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

(8) ಉಚ್ಚ ನ್ಯಾಯಾಲಯವು ಈ ಪ್ರಕರಣದ ಅಡಿಯಲ್ಲಿ ಅದರ ಮುಂದೆ ಸಲ್ಲಿಸಿದ ಅಪೀಲಿನ ಮೇಲೆ, ತೀರ್ಪನ್ನು ನೀಡಿದಲ್ಲಿ, ತೀರ್ಪಿನ ಪ್ರಮಾಣಿತ ಪ್ರತಿಯ ಆಧಾರದ ಮೇಲೆ, ಎರಡೂ ಕಡೆಯವರಿಂದ ಅಂಥ ತೀರ್ಪನ್ನು ಜಾರಿಗೆ ತರತಕ್ಕದ್ದು.

(9) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸುವ ಅಪೀಲುಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಉಪಬಂಧಗಳು, ಈ ಪ್ರಕರಣದ ಅಡಿಯಲ್ಲಿನ ಅಪೀಲುಗಳ ಪ್ರಕರಣದಲ್ಲಿ, ಸಾಧ್ಯವಾಗಬಹುದಷ್ಟರ ಮಟ್ಟಿಗೆ ಅನ್ವಯಿಸತಕ್ಕದ್ದು.

**118. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು.–** (1) ಅಪೀಲನ್ನು,–

(ಎ) ಅಪೀಲು ನ್ಯಾಯಾಧಿಕರಣದ ರಾಷ್ಟ್ರೀಯ ನ್ಯಾಯಪೀಠವು ಅಥವಾ ಪ್ರಾದೇಶಿಕ ನ್ಯಾಯಪೀಠಗಳು ಹೊರಡಿಸಿದ ಯಾವುದೇ ಆದೇಶದಿಂದ; ಅಥವಾ

(ಬಿ) ತೀರ್ಪು ಅಥವಾ ಆದೇಶ ಹೊರಡಿಸಿದ ಕೂಡಲೇ ಸ್ವತಃ ತಾನಾಗಿಯೇ ಆಗಲಿ ಅಥವಾ ಬಾಧಿತ ವ್ಯಕ್ತಿಯು ಅಥವಾ ಆತನ ಪರವಾಗಿ ಸಲ್ಲಿಸಿದ ಅರ್ಜಿಯ ಮೇಲಾಗಲಿ, ಪ್ರಕರಣ 117ರ ಅಡಿಯಲ್ಲಿ ಸಲ್ಲಿಸಿದ ಅಪೀಲಿನಲ್ಲಿ ಉಚ್ಚ ನ್ಯಾಯಾಲಯವು, ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸುವುದಕ್ಕೆ ಸೂಕ್ತವೆಂದು ಪ್ರಮಾಣೀಕರಿಸಿದಂಥ, ಉಚ್ಚ ನ್ಯಾಯಾಲಯವು ನೀಡಿದ ಯಾವುದೇ ತೀರ್ಪು ಅಥವಾ ಹೊರಡಿಸಿದ ಆದೇಶದಿಂದ

– ಸರ್ವೋಚ್ಚ ನ್ಯಾಯಾಲಯಕ್ಕೆ ಹೂಡಲು ಅವಕಾಶವಿರತಕ್ಕದ್ದು.

(2) ಸರ್ವೋಚ್ಚ ನ್ಯಾಯಾಲಯದ ಅಪೀಲುಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಉಪಬಂಧಗಳು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಉಚ್ಚ ನ್ಯಾಯಾಲಯದ ಡಿಕ್ರಿಗಳಿಂದಾದ ಅಪೀಲಿನ ಪ್ರಕರಣದಲ್ಲಿ ಅನ್ವಯವಾಗುವಂತೆ ಈ ಪ್ರಕರಣದ ಅಡಿಯಲ್ಲಿನ ಅಪೀಲುಗಳ ಪ್ರಕರಣದಲ್ಲಿಯೂ ಅನ್ವಯವಾಗತಕ್ಕದ್ದು.

(3) ಉಚ್ಚ ನ್ಯಾಯಾಲಯದ ತೀರ್ಪನ್ನು, ಅಪೀಲಿನಲ್ಲಿ ವ್ಯತ್ಯಾಸಗೊಳಿಸಿದಲ್ಲಿ ಅಥವಾ ವಿಪರ್ಯಯಗೊಳಿಸಿದಲ್ಲಿ, ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ, ಉಚ್ಚ ನ್ಯಾಯಾಲಯದ ತೀರ್ಪಿನ ಸಂದರ್ಭದಲ್ಲಿ ಪ್ರಕರಣ 117ರಲ್ಲಿ ಉಪಬಂಧಿಸಿದ ವಿಧಾನದಲ್ಲಿ ಪರಿಣಾಮವನ್ನು ನೀಡತಕ್ಕದ್ದು.

**119. ಅಪೀಲುಗಳು ಇತ್ಯಾದಿಗಳು ಏನೇ ಇದ್ದರೂ ಬಾಕಿಯಿರುವ ಮೊತ್ತಗಳನ್ನು ಸಂದಾಯ ಮಾಡುವುದು.–** ಉಚ್ಚ ನ್ಯಾಯಾಲಯದಲ್ಲಿ ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿ ಅಪೀಲನ್ನು ಸಲ್ಲಿಸಿರುವುದು ಏನೇ ಇದ್ದರೂ, ಪ್ರಕರಣ 113ರ ಉಪಪ್ರಕರಣ (1)ರ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣದ ರಾಷ್ಟ್ರೀಯ ನ್ಯಾಯಪೀಠವು ಅಥವಾ ಪ್ರಾದೇಶಿಕ ನ್ಯಾಯಪೀಠಗಳು

ಹೊರಡಿಸಿದ ಆದೇಶವು ಅಥವಾ ಪ್ರಕರಣ 113ರ ಉಪಪ್ರಕರಣ (1)ರ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣದ ರಾಜ್ಯ ನ್ಯಾಯಪೀಠದಿಂದ ಅಥವಾ ಕ್ಷೇತ್ರ ನ್ಯಾಯಪೀಠಗಳಿಂದ ಹೊರಡಿಸಿದ ಆದೇಶ ಅಥವಾ ಸಂದರ್ಭಾನುಸಾರವಾಗಿ ಪ್ರಕರಣ 117ರ ಅಡಿಯಲ್ಲಿ ಉಚ್ಚ ನ್ಯಾಯಾಲಯದಿಂದ ಹೊರಡಿಸಿದ ಆದೇಶದ ಪರಿಣಾಮವಾಗಿ, ಸರ್ಕಾರಕ್ಕೆ ಬಾಕಿಯಿರುವ ಮೊತ್ತವು, ಹಾಗೆ ಹೊರಡಿಸಿದ ಆದೇಶಕ್ಕನುಸಾರವಾಗಿ ಸಂದಾಯವಾಗತಕ್ಕದ್ದು.

**120. ಕೆಲವು ಪ್ರಕರಣಗಳಲ್ಲಿ ಅಪೀಲು ಸಲ್ಲಿಸದಿರುವುದು.–** (1) ಮಂಡಳಿಯು, ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ, ಕೇಂದ್ರ ತೆರಿಗೆಯ ಅಧಿಕಾರಿಯು ಅಪೀಲನ್ನು ಅಥವಾ ಅರ್ಜಿಯನ್ನು ಸಲ್ಲಿಸುವುದನ್ನು ವಿನಿಯಮಿಸುವ ಉದ್ದೇಶಗಳಿಗಾಗಿ, ಸೂಕ್ತವೆಂದು ಅದು ಭಾವಿಸಬಹುದಾದಂಥ ಹಣಕಾಸಿನ ಮಿತಿಗಳನ್ನು ನಿಗದಿಗೊಳಿಸಿ ಕಾಲಕಾಲಕ್ಕೆ, ಆದೇಶಗಳನ್ನು ಅಥವಾ ಸೂಚನೆಗಳನ್ನು ಅಥವಾ ನಿರ್ದೇಶನಗಳನ್ನು ನೀಡಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ನೀಡಿದ ಆದೇಶಗಳಿಗೆ ಅಥವಾ ಸೂಚನೆಗಳಿಗೆ ಅಥವಾ ನಿರ್ದೇಶನಗಳಿಗೆ ಅನುಸಾರವಾಗಿ, ಕೇಂದ್ರ ತೆರಿಗೆ ಅಧಿಕಾರಿಯು, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಹೊರಡಿಸಿದ ಯಾವುದೇ ನಿರ್ಣಯ ಅಥವಾ ಆದೇಶದ ವಿರುದ್ಧ ಅಪೀಲನ್ನು ಅಥವಾ ಅರ್ಜಿಯನ್ನು ಸಲ್ಲಿಸಿರದಿದ್ದಲ್ಲಿ, ಅದು, ಅಂಥದೇ ಅಥವಾ ಅದೇ ರೀತಿಯ ವಿಷಯಗಳು ಅಥವಾ ಕಾನೂನಿನ ಪ್ರಶ್ನೆಗಳನ್ನು ಒಳಗೊಂಡಿರುವ ಯಾವುದೇ ಇತರ ಪ್ರಕರಣಗಳಲ್ಲಿ, ಅಪೀಲನ್ನೂ ಅಥವಾ ಅರ್ಜಿಯನ್ನು ಸಲ್ಲಿಸುವುದರಿಂದ ಅಂಥ ಕೇಂದ್ರ ತೆರಿಗೆ ಅಧಿಕಾರಿಯನ್ನು ಅಡ್ಡಿಪಡಿಸತಕ್ಕದ್ದಲ್ಲ.

(3) ಉಪಪ್ರಕರಣ (1)ರ ಅಡಿಯಲ್ಲಿ, ನೀಡಿದ ಆದೇಶಗಳು ಅಥವಾ ಸೂಚನೆಗಳು ಅಥವಾ ನಿರ್ದೇಶನಗಳಿಗೆ ಅನುಸಾರವಾಗಿ ಕೇಂದ್ರ ತೆರಿಗೆಯ ಅಧಿಕಾರಿಯು, ಅಪೀಲನ್ನು ಅಥವಾ ಅರ್ಜಿಯನ್ನು ಸಲ್ಲಿಸಿಲ್ಲ ಎನ್ನುವ ಸಂಗತಿ ಏನೇ ಇದ್ದರೂ, ಅಪೀಲಿನಲ್ಲಿ ಅಥವಾ ಅರ್ಜಿಯಲ್ಲಿ ಪಕ್ಷಕಾರನಾಗಿರುವ ವ್ಯಕ್ತಿಯು, ಕೇಂದ್ರ ತೆರಿಗೆ ಅಧಿಕಾರಿಯು ಅಪೀಲನ್ನು ಅಥವಾ ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ವಿವಾದಿತ ವಿಷಯದ ಮೇಲಿನ ನಿರ್ಣಯಕ್ಕೆ ಮೌನ ಸಮ್ಮತಿ ನೀಡಿದ್ದಾನೆ ಎಂದು ವಾದಿಸತಕ್ಕದ್ದಲ್ಲ.

(4) ಅಂಥ ಅಪೀಲನ್ನು ಅಥವಾ ಅರ್ಜಿಯನ್ನು ವಿಚಾರಣೆ ಮಾಡುವ, ಅಪೀಲು ನ್ಯಾಯಾಧಿಕರಣವು ಅಥವಾ ನ್ಯಾಯಾಲಯವು, ಉಪಪ್ರಕರಣ (1)ರ ಅಡಿಯಲ್ಲಿ ನೀಡಿದ ಆದೇಶಗಳು ಅಥವಾ ಸೂಚನೆಗಳು ಅಥವಾ ನಿರ್ದೇಶನಗಳಿಗೆ ಅನುಸಾರವಾಗಿ ಕೇಂದ್ರ ತೆರಿಗೆಯ ಅಧಿಕಾರಿಯು, ಅಪೀಲನ್ನು ಅಥವಾ ಅರ್ಜಿಯನ್ನು ಯಾವ ಸನ್ನಿವೇಶಗಳಲ್ಲಿ ಸಲ್ಲಿಸಿಲ್ಲ ಎಂಬುದನ್ನು ಗಮನಿಸತಕ್ಕದ್ದು.

**121. ಅಪೀಲು ಮಾಡಲಾಗದಂಥ ನಿರ್ಣಯಗಳು ಮತ್ತು ಆದೇಶಗಳು.–** ಈ ಅಧಿನಿಯಮದ ಯಾವುವೇ ಉಪಬಂಧಗಳಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಸಹ, ಕೇಂದ್ರ ತೆರಿಗೆಯ ಅಧಿಕಾರಿಯು ತೆಗೆದುಕೊಂಡ ಯಾವುದೇ ನಿರ್ಣಯದ ಅಥವಾ ಹೊರಡಿಸಿದ ಆದೇಶದ ವಿರುದ್ಧ, ಹಾಗೆ ತೆಗೆದುಕೊಂಡ ನಿರ್ಣಯವು ಅಥವಾ ಹೊರಡಿಸಿದ ಆದೇಶವು, ಈ ಕೆಳಕಂಡ ಒಂದು ಅಥವಾ ಒಂದಕ್ಕಿಂತ ಹೆಚ್ಚು ವಿಷಯಗಳಿಗೆ ಸಂಬಂಧಿಸಿದ್ದರೆ, ಅಪೀಲನ್ನು ಹೂಡಲು ಅವಕಾಶವಿರತಕ್ಕದ್ದಲ್ಲ, ಅವುಗಳೆಂದರೆ:–

(ಎ) ಒಬ್ಬ ಅಧಿಕಾರಿಯಿಂದ ಮತ್ತೊಬ್ಬ ಅಧಿಕಾರಿಗೆ, ವ್ಯವಹರಣೆಗಳನ್ನು ವರ್ಗಾಯಿಸುವುದಕ್ಕಾಗಿ ನಿರ್ದೇಶನವನ್ನು ನೀಡಲು ಅಧಿಕಾರವನ್ನು ಪಡೆದ ಆಯುಕ್ತರ ಅಥವಾ ಇತರ ಪ್ರಾಧಿಕಾರದ ಆದೇಶ;

(ಬಿ) ಲೆಕ್ಕಪುಸ್ತಕಗಳು, ರಿಜಿಸ್ಟರ್ ಮತ್ತು ಇತರ ದಸ್ತಾವೇಜುಗಳನ್ನು ವಶಕ್ಕೆ ತೆಗೆದುಕೊಳ್ಳುವುದಕ್ಕೆ ಅಥವಾ ಉಳಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಆದೇಶ;

(ಸಿ) ಈ ಅಧಿನಿಯಮದ ಅಡಿಯಲ್ಲಿ ಪ್ರಾಸಿಕ್ಯೂಷನ್‌ಗಾಗಿ ಮಂಜೂರಾತಿ ನೀಡುವ ಆದೇಶ; ಅಥವಾ

(ಡಿ) ಪ್ರಕರಣ 80ರ ಅಡಿಯಲ್ಲಿ ಹೊರಡಿಸಿದ ಆದೇಶ.

## ಅಧ್ಯಾಯ XIX

## ಅಪರಾಧಗಳು ಮತ್ತು ದಂಡಗಳು

**122. ಕೆಲವು ಅಪರಾಧಗಳಿಗಾಗಿ ದಂಡ.–** (1) ಒಬ್ಬ ತೆರಿಗೆದಾಯಕ ವ್ಯಕ್ತಿಯು,–

(i) ಯಾವುದೇ ದರಪಟ್ಟಿಯನ್ನು ನೀಡದೆ ಯಾವುದೇ ಸರಕನ್ನು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಪೂರೈಸುತ್ತಿದ್ದಲ್ಲಿ ಅಥವಾ ಯಾವುದೇ ಅಂಥ ಪೂರೈಕೆಗೆ ಸಂಬಂಧಿಸಿದಂತೆ, ಸರಿಯಿಲ್ಲದ ಅಥವಾ ಸುಳ್ಳಾದ ದರಪಟ್ಟಿಯನ್ನು ನೀಡಿದ್ದಲ್ಲಿ;

(ii) ಈ ಅಧಿನಿಯಮದ ಉಪಬಂಧಗಳು ಅಥವಾ ಇದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸಿ ಸರಕನ್ನು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಪೂರೈಕೆ ಮಾಡದೇ ಯಾವುದೇ ದರಪಟ್ಟಿಯನ್ನು ಅಥವಾ ಬಿಲ್ಲನ್ನು ನೀಡಿದಲ್ಲಿ;

(iii) ತೆರಿಗೆಯಾಗಿ ಯಾವುದೇ ಮೊತ್ತವನ್ನು ಸಂಗ್ರಹಿಸಿರುವ, ಆದರೆ ಅದು ಯಾವ ದಿನಾಂಕದಂದು ಸರ್ಕಾರಕ್ಕೆ ಸಂದಾಯ ಮಾಡಬೇಕಾಗಿತ್ತೋ ಆ ದಿನಾಂಕದಿಂದ ಅಂಥ ಸಂದಾಯವು ಬಾಕಿಯಾಗಿರುವ ದಿನಾಂಕದಿಂದ ಮೂರು ತಿಂಗಳ ಅವಧಿಯನ್ನು ಮೀರಿದ ನಂತರವೂ ಅದನ್ನು ಸಂದಾಯ ಮಾಡಲು ವಿಫಲನಾದಲ್ಲಿ;

(iv) ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ತೆರಿಗೆಯನ್ನು ಸಂಗ್ರಹಿಸಿರುವ, ಆದರೆ ಅದನ್ನು ಯಾವ ದಿನಾಂಕದಂದು ಸರ್ಕಾರಕ್ಕೆ ಸಂದಾಯ ಮಾಡಬೇಕಾಗಿತ್ತೋ ಆ ದಿನಾಂಕದಿಂದ ಅಂಥ ಸಂದಾಯವು ಬಾಕಿಯಾದ ದಿನಾಂಕದಿಂದ ಮೂರು ತಿಂಗಳ ಅವಧಿಯನ್ನು ಮೀರಿದ ನಂತರವೂ ಅದನ್ನು ಸಂದಾಯ ಮಾಡಲು ವಿಫಲನಾದಲ್ಲಿ;

(v) ಪ್ರಕರಣ 51ರ ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆಯನ್ನು ಮುರುಗಡೆ ಮಾಡಲು ವಿಫಲನಾದಲ್ಲಿ ಅಥವಾ ಸದರಿ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವುದು ಅಗತ್ಯವಾಗಿರುವ ಮೊತ್ತಕ್ಕಿಂತ ಕಡಿಮೆಯಾದ ಮೊತ್ತವನ್ನು ಮುರುಗಡೆ ಮಾಡಿದಲ್ಲಿ ಅಥವಾ ತೆರಿಗೆಯಾಗಿ ಮುರುಗಡೆ ಮಾಡಿದ ಮೊತ್ತವನ್ನು ಅದೇ ಉಪಪ್ರಕರಣ (2)ರ ಅಡಿಯಲ್ಲಿ ಸರ್ಕಾರಕ್ಕೆ ಸಂದಾಯ ಮಾಡಲು ವಿಫಲನಾದಲ್ಲಿ;

(vi) ಪ್ರಕರಣ 52ರ ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆಯನ್ನು ಸಂಗ್ರಹಿಸಲು ವಿಫಲನಾದಲ್ಲಿ ಅಥವಾ ಸದರಿ ಉಪಪ್ರಕರಣದ ಅಡಿಯಲ್ಲಿ ಸಂಗ್ರಹಿಸಬೇಕಾಗಿದ್ದ ಮೊತ್ತಕ್ಕಿಂತ ಕಡಿಮೆ ಮೊತ್ತವನ್ನು ಸಂಗ್ರಹ ಮಾಡಿದ್ದಲ್ಲಿ ಅಥವಾ ಪ್ರಕರಣ 52ರ ಉಪಪ್ರಕರಣ (3)ರ ಅಡಿಯಲ್ಲಿ ತೆರಿಗೆಯಾಗಿ ಸಂಗ್ರಹಿಸಿದ ಮೊತ್ತವನ್ನು ಸರ್ಕಾರಕ್ಕೆ ಸಂದಾಯ ಮಾಡಲು ವಿಫಲನಾದಲ್ಲಿ;

(vii) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಇದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸಿ ಸರಕನ್ನು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ವಾಸ್ತವಿಕವಾಗಿ ಸ್ವೀಕರಿಸದೇ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ತೆಗೆದುಕೊಂಡಿದ್ದಲ್ಲಿ ಅಥವಾ ಉಪಯೋಗಿಸಿಕೊಂಡಿದ್ದಲ್ಲಿ;

(viii) ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯ ಮರುಪಾವತಿಯನ್ನು ಮೋಸದಿಂದ ಪಡೆದುಕೊಂಡಲ್ಲಿ;

(ix) ಪ್ರಕರಣ 20ರ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸಿ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತೆಗೆದುಕೊಂಡಿದ್ದಲ್ಲಿ ಅಥವಾ ಹಂಚಿಕೆ ಮಾಡಿದ್ದಲ್ಲಿ;

(x) ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ತೆರಿಗೆಯ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ ಹಣಕಾಸಿನ ದಾಖಲೆಗಳನ್ನು, ಸುಳ್ಳು ಮಾಡಿದಲ್ಲಿ ಅಥವಾ ಬದಲಿಸಿದಲ್ಲಿ ಅಥವಾ ನಕಲಿ ಲೆಕ್ಕಪತ್ರಗಳನ್ನು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಿದಲ್ಲಿ ಅಥವಾ ಯಾವುದೇ ಸುಳ್ಳು ಮಾಹಿತಿಯನ್ನು ಅಥವಾ ರಿಟರ್ನ್‌ನನ್ನು ಒದಗಿಸಿದಲ್ಲಿ;

(xi) ಈ ಅಧಿನಿಯಮದ ಅಡಿಯಲ್ಲಿ ನೋಂದಣಿ ಮಾಡಿಸುವುದಕ್ಕೆ ಬದ್ಧನಾಗಿದ್ದ ಆದರೆ ನೋಂದಣಿಯನ್ನು ಪಡೆಯಲು ವಿಫಲನಾದಲ್ಲಿ;

(xii) ನೋಂದಣಿ ವಿವರಗಳಿಗೆ ಸಂಬಂಧಿಸಿದಂತೆ, ನೋಂದಣಿಗೆ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಾಗಲಿ ಅಥವಾ ತರುವಾಯವಾಗಲಿ, ಯಾವುದೇ ಸುಳ್ಳು ಮಾಹಿತಿಯನ್ನು ಒದಗಿಸಿದಲ್ಲಿ;

(xiii) ಈ ಅಧಿನಿಯಮದ ಅಡಿಯಲ್ಲಿ ತನ್ನ ಕರ್ತವ್ಯಗಳ ನಿರ್ವಹಣೆಯಲ್ಲಿರುವ ಯಾರೇ ಅಧಿಕಾರಿಯನ್ನು ಅಡ್ಡಿಪಡಿಸಿದಲ್ಲಿ ಅಥವಾ ಪ್ರತಿಬಂಧಿಸಿದಲ್ಲಿ;

(xiv) ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದ ದಸ್ತಾವೇಜುಗಳಿಂದ ಕೂಡಿರದ ಯಾವುದೇ ತೆರಿಗೆದಾಯಕ ಸರಕುಗಳನ್ನು ಸಾಗಾಣಿಕೆ ಮಾಡಿದಲ್ಲಿ;

(xv) ತನ್ನ ವಹಿವಾಟನ್ನು, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ತಪ್ಪಿಸುವುದಕ್ಕೆ ಕಾರಣವಾಗುವ ಹಾಗೆ ಬಚ್ಚಿಟ್ಟಲ್ಲಿ;

(xvi) ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಅನುಸಾರವಾಗಿ, ಲೆಕ್ಕಪುಸ್ತಕಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಇಡಲು, ನಿರ್ವಹಿಸಲು ಅಥವಾ ಉಳಿಸಿಕೊಳ್ಳಲು ವಿಫಲನಾದಲ್ಲಿ;

(xvii) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಅನುಸಾರವಾಗಿ, ಯಾರೇ ಅಧಿಕಾರಿಯು ಆದೇಶಿಸುವ ಮಾಹಿತಿಯನ್ನು ಅಥವಾ ದಸ್ತಾವೇಜುಗಳನ್ನು ಒದಗಿಸಲು ವಿಫಲವಾದಲ್ಲಿ ಅಥವಾ ಈ ಅಧಿನಿಯಮದ ಅಡಿಯಲ್ಲಿನ ಯಾವುವೇ ವ್ಯವಹರಣೆಗಳಲ್ಲಿ ಸುಳ್ಳು ಮಾಹಿತಿಯನ್ನು ಅಥವಾ ದಸ್ತಾವೇಜುಗಳನ್ನು ಒದಗಿಸಿದ್ದಲ್ಲಿ;

(xviii) ಅವನು ಈ ಅಧಿನಿಯಮದ ಅಡಿಯಲ್ಲಿ ಮುಟ್ಟುಗೋಲಿಗೆ ಬದ್ಧವಾಗಬಹುದೆಂದು ನಂಬಲು ಕಾರಣಗಳಿರುವಂಥ ಯಾವುವೇ ಸರಕುಗಳನ್ನು ಪೂರೈಸಿದಲ್ಲಿ, ಸಾಗಿಸಿದಲ್ಲಿ ಅಥವಾ ದಾಸ್ತಾನು ಮಾಡಿದಲ್ಲಿ;

(xix) ಮತ್ತೊಬ್ಬ ನೋಂದಾಯಿತ ವ್ಯಕ್ತಿಯ ನೋಂದಣಿ ಸಂಖ್ಯೆಯನ್ನು ಉಪಯೋಗಿಸಿಕೊಂಡು ಯಾವುದೇ ದರಪಟ್ಟಿಯನ್ನು ಅಥವಾ ದಸ್ತಾವೇಜನ್ನು ನೀಡಿದಲ್ಲಿ;

(xx) ಯಾವುದೇ ಮುಖ್ಯ ಪುರಾವೆಯನ್ನು ಅಥವಾ ದಸ್ತಾವೇಜುಗಳನ್ನು ಅಕ್ರಮವಾಗಿ ತಿದ್ದಿದಲ್ಲಿ ಅಥವಾ ನಾಶಮಾಡಿದಲ್ಲಿ;

(xxi) ಈ ಅಧಿನಿಯಮದ ಅಡಿಯಲ್ಲಿ ತಡೆಹಿಡಿಯಲಾದ, ವಶಕ್ಕೆ ತೆಗೆದುಕೊಳ್ಳಲಾದ, ಜಫ್ತಿ ಮಾಡಲಾದ ಯಾವುದೇ ಸರಕುಗಳನ್ನು ವಿಲೇವಾರಿ ಮಾಡಿದಲ್ಲಿ ಅಥವಾ ವ್ಯತ್ಯಸ್ತಗೊಳಿಸಿದಲ್ಲಿ

– ಅಥವಾ ತಪ್ಪಿಸಲಾದ ತೆರಿಗೆ ಅಥವಾ ಪ್ರಕರಣ 51ರ ಅಡಿಯಲ್ಲಿ ಮುರುಗಡೆ ಮಾಡದ ಅಥವಾ ಕಡಿಮೆ ಮುರುಗಡೆ ಮಾಡಿದ ಅಥವಾ ಮುರುಗಡೆ ಮಾಡಿದ ಆದರೆ ಸರ್ಕಾರಕ್ಕೆ ಸಂದಾಯ ಮಾಡದ ತೆರಿಗೆಗೆ ಅಥವಾ ಪ್ರಕರಣ 52ರ ಅಡಿಯಲ್ಲಿ ಸಂಗ್ರಹಿಸಿರದ ಅಥವಾ ಕಡಿಮೆ ಸಂಗ್ರಹಿಸಿದ ಅಥವಾ ಸಂಗ್ರಹ ಮಾಡಿರುವ ಆದರೆ ಸರ್ಕಾರಕ್ಕೆ ಸಂದಾಯ ಮಾಡದ ತೆರಿಗೆ ಅಥವಾ ಅಕ್ರಮವಾಗಿ ತೆಗೆದುಕೊಂಡ ಅಥವಾ ವರ್ಗಾಯಿಸಿದ ಅಥವಾ ಹಂಚಿಕೆ ಮಾಡಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅಥವಾ ಮೋಸದಿಂದ ಕ್ಲೇಮು ಮಾಡಲಾದ ಮರುಪಾವತಿ, ಇವುಗಳಿಗೆ ಸಮನಾದ ಮೊತ್ತ ಅಥವಾ ಹತ್ತು ಸಾವಿರ ರೂಪಾಯಿಗಳು, ಇವುಗಳಲ್ಲಿ ಯಾವುದು ಹೆಚ್ಚೋ ಆ ದಂಡಕ್ಕೆ ಅವನು ಬದ್ಧನಾಗಿರತಕ್ಕದ್ದು.

(1ಎ) ಉಪಪ್ರಕರಣ (1)ರ ಖಂಡಗಳು (i), (ii), (vii) ಅಥವಾ ಖಂಡ (ix)ರ ಅಡಿಯಲ್ಲಿ ಬರುವ ವ್ಯವಹಾರದಿಂದ ಬಂದ ಲಾಭವನ್ನು ಇಟ್ಟುಕೊಂಡಿರುವ ಮತ್ತು ಅಂಥ ವ್ಯವಹರಣೆ ನಡೆಸಲು ಪ್ರೇರಣೆ ನೀಡಿರುವ ಯಾರೇ ವ್ಯಕ್ತಿಯು, ತಪ್ಪಿಸಲಾದ ತೆರಿಗೆಗೆ ಅಥವಾ ತೆಗೆದುಕೊಂಡ ಅಥವಾ ವರ್ಗಾಯಿಸಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗೆ ಸಮನಾದ ಮೊಬಲಗಿನ ದಂಡಕ್ಕೆ ಗುರಿಯಾಗತಕ್ಕದ್ದು.

(2) ಅವುಗಳ ಮೇಲೆ ಯಾವುದೇ ತೆರಿಗೆಯನ್ನು ಸಂದಾಯ ಮಾಡದಿರುವ ಅಥವಾ ಕಡಿಮೆ ಸಂದಾಯ ಮಾಡಿರುವ ಅಥವಾ ತಪ್ಪಾಗಿ ಮರುಪಾವತಿಯನ್ನು ಮಾಡಿರುವ ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತಪ್ಪಾಗಿ ತೆಗೆದುಕೊಂಡಿರುವ ಅಥವಾ ಬಳಸಿರುವ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆ ಮಾಡುವ ಯಾರೇ ನೋಂದಾಯಿತ ವ್ಯಕ್ತಿಯು,–

(ಎ) ತೆರಿಗೆಯನ್ನು ತಪ್ಪಿಸುವುದಕ್ಕಾಗಿ ಮೋಸದಿಂದ ಅಥವಾ ಉದ್ದೇಶಪೂರ್ವಕವಾಗಿ ಯಾವುವೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವುದನ್ನು ಹೊರತುಪಡಿಸಿ, ಯಾವುವೇ ಕಾರಣಗಳಿಗೆ ಹತ್ತು ಸಾವಿರ ರೂಪಾಯಿಗಳ ಅಥವಾ ಅಂಥ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆಯ ಶೇಕಡಾ ಹತ್ತರಷ್ಟು, ಇವುಗಳಲ್ಲಿ ಯಾವುದು ಹೆಚ್ಚೋ ಆ ದಂಡಕ್ಕೆ ಬದ್ಧನಾಗಿರತಕ್ಕದ್ದು;

(ಬಿ) ತೆರಿಗೆಯನ್ನು ತಪ್ಪಿಸುವುದಕ್ಕಾಗಿ ಮೋಸದಿಂದ ಅಥವಾ ಉದ್ದೇಶಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು ಅಥವಾ ಬಚ್ಚಿಡುವ ಕಾರಣಗಳಿಗೆ, ಹತ್ತು ಸಾವಿರ ರೂಪಾಯಿಗಳ ಅಥವಾ ಅಂಥ ವ್ಯಕ್ತಿಯಿಂದ ಬಾಕಿಯಿರುವ ತೆರಿಗೆ, ಇವುಗಳಲ್ಲಿ ಯಾವುದು ಹೆಚ್ಚೋ ಆ ದಂಡಕ್ಕೆ ಬದ್ಧನಾಗಿರತಕ್ಕದ್ದು.

(3) ಯಾರೇ ವ್ಯಕ್ತಿಯು,–

(ಎ) ಮೇಲಿನ ಉಪಪ್ರಕರಣ (1)ರ ಖಂಡ (i) ರಿಂದ (xxi)ಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುವೇ ಅಪರಾಧಗಳಿಗೆ ನೆರವು ನೀಡಿದಲ್ಲಿ ಅಥವಾ ದುಷ್ಪ್ರೇರಿಸಿದಲ್ಲಿ;

(ಬಿ) ಈ ಅಧಿನಿಯಮದ ಮೇರೆಗೆ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಮುಟ್ಟುಗೋಲಿಗೆ ಗುರಿಯಾಗಬಹುದೆಂದು ಅವನಿಗೆ ತಿಳಿದಿರುವ ಅಥವಾ ನಂಬಲು ಕಾರಣಗಳಿರುವ ಯಾವುವೇ ಸರಕುಗಳ ಸ್ವಾಧೀನತೆಯನ್ನು ಆರ್ಜಿಸಿದಲ್ಲಿ ಅಥವಾ ಅವುಗಳ ಸಾಗಾಣಿಕೆಯಲ್ಲಿ, ತೆಗೆಯುವಿಕೆಯಲ್ಲಿ, ರಕ್ಷಣೆಯಾಗಿ ಇಟ್ಟಲ್ಲಿ, ಇಟ್ಟುಕೊಂಡಲ್ಲಿ, ಬಚ್ಚಿಟ್ಟುಕೊಂಡಲ್ಲಿ ಅಥವಾ ಪೂರೈಕೆ ಮಾಡಿದ್ದಲ್ಲಿ ಅಥವಾ ಖರೀದಿಸಿದಲ್ಲಿ ಅಥವಾ ಯಾವುದೇ ಇತರೆ ವಿಧಾನದಲ್ಲಿ ಸ್ವತಃ ವ್ಯವಹರಿಸಿದಲ್ಲಿ;

(ಸಿ) ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಅವನಿಗೆ ತಿಳಿದಿರುವ ಅಥವಾ ನಂಬಲು ಕಾರಣಗಳಿರುವ ಸೇವೆಗಳನ್ನು ಸ್ವೀಕರಿಸಿರುವಲ್ಲಿ ಅಥವಾ ಯಾವುದೇ ವಿಧಾನದಲ್ಲಿ ಪೂರೈಕೆಗೆ ಸ್ವತಃ ಆತನು ಸಂಬಂಧಪಟ್ಟಿರುವಲ್ಲಿ ಅಥವಾ ಯಾವುದೇ ಇತರೆ ವಿಧಾನದಲ್ಲಿ ವ್ಯವಹರಿಸಿದಲ್ಲಿ;

(ಡಿ) ವಿಚಾರಣೆಯಲ್ಲಿ ಸಾಕ್ಷಿಯನ್ನು ನೀಡುವುದಕ್ಕಾಗಿ ಅಥವಾ ದಸ್ತಾವೇಜನ್ನು ಹಾಜರುಪಡಿಸುವುದಕ್ಕಾಗಿ ಸಮನ್ ನೀಡಿದ್ದಾಗ, ಕೇಂದ್ರ ತೆರಿಗೆಯ ಅಧಿಕಾರಿಯ ಮುಂದೆ ಹಾಜರಾಗಲು ವಿಫಲನಾಗಿರುವಲ್ಲಿ;

(ಇ) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಅನುಸಾರವಾಗಿ ದರಪಟ್ಟಿಯನ್ನು ನೀಡಲು ಅಥವಾ ತನ್ನ ಲೆಕ್ಕಪುಸ್ತಕದಲ್ಲಿ ದರಪಟ್ಟಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಲು ವಿಫಲನಾಗಿರುವಲ್ಲಿ

– ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಗುರಿಯಾಗತಕ್ಕದ್ದು.

**123. ಮಾಹಿತಿ ರಿಟರ್ನ್‌ನನ್ನು ಒದಗಿಸುವಲ್ಲಿನ ವಿಫಲತೆಗಾಗಿ ದಂಡ.–** ಪ್ರಕರಣ 150ರ ಅಡಿಯಲ್ಲಿ ಮಾಹಿತಿ ರಿಟರ್ನ್‌ನನ್ನು ಒದಗಿಸುವುದು ಅಗತ್ಯವಾಗಿರುವ ಒಬ್ಬ ವ್ಯಕ್ತಿಯು, ಅದರ ಉಪಪ್ರಕರಣ (3)ರ ಅಡಿಯಲ್ಲಿ ನೀಡಿದ

ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಒಳಗಾಗಿ ಹಾಗೆ ಮಾಡಲು ವಿಫಲನಾದರೆ, ಯುಕ್ತ ಅಧಿಕಾರಿಯು, ಅಂಥ ವ್ಯಕ್ತಿಯು, ಅಂಥ ರಿಟರ್ನ್‌ನನ್ನು ಒದಗಿಸುವುದಕ್ಕೆ ವಿಫಲನಾಗಿರುವುದು ಮುಂದುವರೆಯುವ ಅವಧಿಯಲ್ಲಿನ ಪ್ರತಿಯೊಂದು ದಿನಕ್ಕೆ ಒಂದು ನೂರು ರೂಪಾಯಿಗಳಂತೆ ದಂಡವನ್ನು ಸಂದಾಯ ಮಾಡುವುದಕ್ಕೆ ಗುರಿಯಾಗತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ವಿಧಿಸಿದ ದಂಡವು ಐದು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ.

**124. ಅಂಕಿಅಂಶಗಳನ್ನು ಒದಗಿಸಲು ವಿಫಲವಾದುದಕ್ಕಾಗಿ ಜುಲ್ಮಾನೆ.–** ಪ್ರಕರಣ 151ರ ಅಡಿಯಲ್ಲಿ ಯಾವುದೇ ಮಾಹಿತಿ ಅಥವಾ ರಿಟರ್ನ್‌ನನ್ನು ಒದಗಿಸುವುದು ಅಗತ್ಯವಾಗಿರುವ ಯಾರೇ ವ್ಯಕ್ತಿಯು,–

(ಎ) ಯುಕ್ತ ಕಾರಣಗಳಿಲ್ಲದೆ ಆ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಅಥವಾ ರಿಟರ್ನ್‌ನನ್ನು ಒದಗಿಸಲು ವಿಫಲನಾದರೆ; ಅಥವಾ

(ಬಿ) ಅವನಿಗೆ ಸುಳ್ಳೆಂದು ಗೊತ್ತಿರುವ ಯಾವುದೇ ಮಾಹಿತಿಯನ್ನು ಅಥವಾ ರಿಟರ್ನ್‌ನನ್ನು ಉದ್ದೇಶಪೂರ್ವಕವಾಗಿ ಒದಗಿಸಿದರೆ ಅಥವಾ ಒದಗಿಸಲು ಕಾರಣನಾದರೆ

– ಅವನು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಮುಂದುವರೆದ ಅಪರಾಧದ ಸಂದರ್ಭದಲ್ಲಿ, ಇಪ್ಪತ್ತೈದು ಸಾವಿರ ರೂಪಾಯಿಗಳ ಗರಿಷ್ಠ ಮಿತಿಗೆ ಒಳಪಟ್ಟು, ಅಪರಾಧ ಮುಂದುವರಿದ ಸಮಯದಲ್ಲಿನ ಮೊದಲ ದಿನದ ನಂತರದ ಪ್ರತಿಯೊಂದು ದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**125. ಸಾಮಾನ್ಯ ದಂಡ.–** ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಯಾವುದಕ್ಕೆ ಈ ಅಧಿನಿಯಮದಲ್ಲಿ ದಂಡವನ್ನು ಪ್ರತ್ಯೇಕವಾಗಿ ಉಪಬಂಧಿಸಿಲ್ಲವೋ, ಅದಕ್ಕಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಗುರಿಯಾಗತಕ್ಕದ್ದು.

**126. ದಂಡಕ್ಕೆ ಸಂಬಂಧಿಸಿದ ಸಾಮಾನ್ಯ ಕಾರ್ಯವಿಧಾನಗಳು.–** (1) ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಿಯು, ತೆರಿಗೆ ವಿನಿಯಮಗಳ ಅಥವಾ ಪ್ರಕ್ರಿಯಾ ಅಗತ್ಯತೆಗಳ ಲಘು ಉಲ್ಲಂಘನೆಗಳಿಗಾಗಿ ಮತ್ತು ನಿರ್ದಿಷ್ಟವಾಗಿ ಸುಲಭವಾಗಿ ಸರಿಪಡಿಸಬಹುದಾದ ಮತ್ತು ಮೋಸಮಾಡುವ ಉದ್ದೇಶ ಇಲ್ಲದೇ ಅಥವಾ ಅತೀವ ನಿರ್ಲಕ್ಷತೆಯಿಲ್ಲದೇ ದಸ್ತಾವೇಜುಗಳನ್ನು ಸಿದ್ಧಪಡಿಸುವಾಗ ಆದ ಯಾವುವೇ ಲೋಪಗಳಿಗೆ ಅಥವಾ ತಪ್ಪಿಗೆ ಸಂಬಂಧಿಸಿದಂತೆ, ಯಾವುದೇ ದಂಡವನ್ನು ವಿಧಿಸತಕ್ಕದ್ದಲ್ಲ.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಕ್ಕಾಗಿ,–

(ಎ) ಯಾವ ಉಲ್ಲಂಘನೆಗೆ ಒಳಪಡುವ ತೆರಿಗೆಯ ಮೊತ್ತವು, ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿದೆಯೋ ಆ ಉಲ್ಲಂಘನೆಯನ್ನು 'ಲಘು ಉಲ್ಲಂಘನೆ' ಎಂದು ಪರಿಗಣಿಸತಕ್ಕದ್ದು;

(ಬಿ) ದಾಖಲೆಯನ್ನು ಸಿದ್ಧಪಡಿಸುವಾಗ ಆದ ಲೋಪ ಅಥವಾ ತಪ್ಪು, ದಾಖಲೆಯಲ್ಲಿ ಮೇಲ್ನೋಟಕ್ಕೆ ಕಂಡುಬರುತ್ತಿದ್ದರೆ, ಅದನ್ನು ಸುಲಭವಾಗಿ ಸರಿಪಡಿಸಬಹುದೆಂದು ಪರಿಗಣಿಸತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ವಿಧಿಸಿದ ದಂಡವು, ಪ್ರತಿಯೊಂದು ಪ್ರಕರಣದ ಸಂಗತಿಗಳನ್ನು ಹಾಗೂ ಸನ್ನಿವೇಶಗಳನ್ನು ಅವಲಂಬಿಸಿರತಕ್ಕದ್ದು ಮತ್ತು ಉಲ್ಲಂಘನೆಯ ಮಟ್ಟ ಮತ್ತು ತೀವ್ರತೆಗೆ ಅನುಗುಣವಾಗಿರತಕ್ಕದ್ದು.

(3) ಯಾರೇ ವ್ಯಕ್ತಿಯ ಮೇಲೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಅವನಿಗೆ ಅವಕಾಶವನ್ನು ನೀಡಿದ ಹೊರತು ದಂಡವನ್ನು ವಿಧಿಸತಕ್ಕದ್ದಲ್ಲ.

(4) ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಿಯು, ಯಾವುದೇ ಕಾನೂನಿನ, ವಿನಿಯಮದ ಅಥವಾ ಪ್ರಕ್ರಿಯಾ ಅಗತ್ಯತೆಯ ಉಲ್ಲಂಘನೆಗಾಗಿ ದಂಡವನ್ನು ವಿಧಿಸುವಾಗ ಉಲ್ಲಂಘನೆಯ ಸ್ವರೂಪ ಮತ್ತು ಯಾವುದರ ಉಲ್ಲಂಘನೆಗಾಗಿ ದಂಡದ ಮೊತ್ತವನ್ನು ನಿರ್ದಿಷ್ಟಪಡಿಸಲಾಗಿದೆಯೋ ಅನ್ವಯವಾಗುವ ಆ ಕಾನೂನನ್ನು, ವಿನಿಯಮವನ್ನು ಅಥವಾ ಪ್ರಕ್ರಿಯಾ ವಿಧಾನವನ್ನು ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(5) ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಿಯು ಉಲ್ಲಂಘನೆಯಾಗಿರುವುದನ್ನು ಕಂಡುಹಿಡಿಯುವ ಮುನ್ನವೇ, ಸ್ವಇಚ್ಛೆಯಿರುವ ಒಬ್ಬ ವ್ಯಕ್ತಿಯು, ತೆರಿಗೆ ಕಾನೂನಿನ, ವಿನಿಯಮದ ಅಥವಾ ಪ್ರಕ್ರಿಯಾ ವಿಧಾನದ ಅಗತ್ಯತೆಗಳ ಉಲ್ಲಂಘನೆಯ ಸನ್ನಿವೇಶವನ್ನು ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಿಗೆ ಬಹಿರಂಗಪಡಿಸಿದಾಗ, ಯುಕ್ತ ಅಧಿಕಾರಿಯು, ಈ ಸಂಗತಿಯನ್ನು ಆ ವ್ಯಕ್ತಿಯ ದಂಡದ ಪ್ರಮಾಣವನ್ನು ನಿರ್ಧರಿಸುವಾಗ ಅದನ್ನು ಉಪಶಮನಗೊಳಿಸುವ ಸಂಗತಿಯನ್ನಾಗಿ ಪರಿಗಣಿಸಬಹುದು.

(6) ಈ ಪ್ರಕರಣದ ಉಪಬಂಧಗಳು, ಈ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ದಂಡವು ನಿಗದಿತ ಮೊತ್ತವಾಗಿದ್ದರೆ ಅಥವಾ ನಿಗದಿತ ಶೇಕಡಾವಾರು ಎಂಬುದು ಸ್ಪಷ್ಟವಾಗಿರುವ ಅಂಥ ಪ್ರಕರಣಗಳಲ್ಲಿ ಅನ್ವಯವಾಗತಕ್ಕದ್ದಲ್ಲ.

**127. ಕೆಲವೊಂದು ಪ್ರಕರಣಗಳಲ್ಲಿ ದಂಡವನ್ನು ವಿಧಿಸುವ ಅಧಿಕಾರ.–** ಯುಕ್ತ ಅಧಿಕಾರಿಯು, ಒಬ್ಬ ವ್ಯಕ್ತಿಯು ದಂಡಕ್ಕೆ ಗುರಿಯಾಗಿದ್ದಾನೆಂದು ಮತ್ತು ಅದು ಪ್ರಕರಣ 62 ಅಥವಾ ಪ್ರಕರಣ 63 ಅಥವಾ ಪ್ರಕರಣ 64 ಅಥವಾ ಪ್ರಕರಣ 73 ಅಥವಾ ಪ್ರಕರಣ 74 ಅಥವಾ ಪ್ರಕರಣ 129 ಅಥವಾ ಪ್ರಕರಣ 130ರ ಅಡಿಯಲ್ಲಿನ ಯಾವುವೇ ವ್ಯವಹರಣೆಗಳಿಗೆ ಒಳಪಡುವುದಿಲ್ಲವೆಂದು ಅಭಿಪ್ರಾಯಪಟ್ಟರೆ, ಅವನು ಅಂಥ ವ್ಯಕ್ತಿಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ನಂತರ ಅಂಥ ದಂಡವನ್ನು ವಿಧಿಸುವ ಆದೇಶವನ್ನು ನೀಡಬಹುದು.

**128. ದಂಡ ಅಥವಾ ಶುಲ್ಕ ಅಥವಾ ಅವುಗಳೆರಡನ್ನು ಮನ್ನಾ ಮಾಡುವ ಅಧಿಕಾರ.–** ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ಅದರಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ತೆರಿಗೆ ಸಂದಾಯದಾರರ ವರ್ಗಕ್ಕೆ ಮತ್ತು ಅಂಥ ಉಪಶಮನಗೊಳಿಸುವ ಸನ್ನಿವೇಶಗಳಲ್ಲಿ, ಪ್ರಕರಣ 122 ಅಥವಾ ಪ್ರಕರಣ 123 ಅಥವಾ ಪ್ರಕರಣ 125ರ ಅಡಿಯಲ್ಲಿ ಉಲ್ಲೇಖಿಸಿದ ಯಾವುದೇ ದಂಡವನ್ನು ಅಥವಾ ಪ್ರಕರಣ 47ರಲ್ಲಿ ಉಲ್ಲೇಖಿಸಿದ ವಿಳಂಬ ಶುಲ್ಕವನ್ನು ಭಾಗಶಃ ಅಥವಾ ಪೂರ್ಣವಾಗಿ ಅಧಿಸೂಚನೆಯ ಮೂಲಕ ಮನ್ನಾ ಮಾಡಬಹುದು.

**129. ಸಾಗಾಣಿಕೆಯಲ್ಲಿರುವ ಸರಕುಗಳನ್ನು ಮತ್ತು ಸಾಗಾಣಿಕೆಯ ವಾಹನಗಳನ್ನು ತಡೆಹಿಡಿಯುವುದು, ವಶಕ್ಕೆ ತೆಗೆದುಕೊಳ್ಳುವುದು ಹಾಗೂ ಬಿಡುಗಡೆ ಮಾಡುವುದು.–** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ವ್ಯಕ್ತಿ, ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಇದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸಿ, ಯಾವುವೇ ಸರಕುಗಳನ್ನು ಸಾಗಾಣಿಕೆ ಮಾಡಿದಲ್ಲಿ ಅಥವಾ ಯಾವುವೇ ಸರಕುಗಳು ಸಾಗಣೆಯಲ್ಲಿರುವಾಗ ದಾಸ್ತಾನು ಮಾಡಿದಲ್ಲಿ, ಅಂಥ

ಎಲ್ಲಾ ಸರಕುಗಳು ಮತ್ತು ಸದರಿ ಸರಕುಗಳನ್ನು ಸಾಗಿಸಲು ಸಂಚಾರದ ಸಾಧನವಾಗಿ ಬಳಸಿದ ಸಾಗಾಣಿಕೆಯ ವಾಹನಗಳು ಮತ್ತು ಅಂಥ ಸರಕುಗಳು ಹಾಗೂ ಸಾಗಾಣಿಕೆಯ ವಾಹನಕ್ಕೆ ಸಂಬಂಧಿಸಿದ ದಸ್ತಾವೇಜುಗಳನ್ನು ತಡೆಹಿಡಿಯುವುದಕ್ಕೆ ಅಥವಾ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಗುರಿಯಾಗತಕ್ಕದ್ದು ಮತ್ತು ತಡೆಹಿಡಿದ ಅಥವಾ ವಶಕ್ಕೆ ತೆಗೆದುಕೊಂಡ ನಂತರ,–

(ಎ) ಸರಕುಗಳ ಮಾಲೀಕನು, ಅಂಥ ತೆರಿಗೆಯನ್ನು ಮತ್ತು ದಂಡವನ್ನು ಸಂದಾಯ ಮಾಡಲು ಮುಂದೆ ಬಂದಲ್ಲಿ, ಅಂಥ ಸರಕುಗಳ ಮೇಲೆ ಅನ್ವಯವಾಗುವ ತೆರಿಗೆ ಮತ್ತು ಸಂದಾಯ ಮಾಡಬೇಕಾದ ತೆರಿಗೆಯ ಶೇಕಡ ನೂರರಷ್ಟಕ್ಕೆ ಸಮನಾದ ದಂಡವನ್ನು ಸಂದಾಯ ಮಾಡಿದ ಮೇಲೆ ಮತ್ತು ವಿನಾಯತಿ ಸರಕುಗಳ ಸಂದರ್ಭದಲ್ಲಿ, ಸರಕುಗಳ ಮೌಲ್ಯದ ಶೇಕಡ ಎರಡರಷ್ಟಕ್ಕೆ ಸಮನಾದ ಮೊತ್ತವನ್ನು ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಸಂದಾಯ ಮಾಡಿದ ಮೇಲೆ;

(ಬಿ) ಸರಕುಗಳ ಮಾಲೀಕನು, ಅಂಥ ತೆರಿಗೆ ಮತ್ತು ದಂಡವನ್ನು ಸಂದಾಯ ಮಾಡಲು ಮುಂದೆ ಬರದಿದ್ದಲ್ಲಿ, ಅನ್ವಯವಾಗುವ ತೆರಿಗೆ ಮತ್ತು ಅದರ ಮೇಲೆ ಸಂದಾಯ ಮಾಡಿದ ತೆರಿಗೆಯ ಮೊತ್ತವನ್ನು, ಇಳಿಕೆ ಮಾಡಿದ ಸರಕುಗಳ ಮೌಲ್ಯದ ಶೇಕಡಾ ಐವತ್ತರಷ್ಟಕ್ಕೆ ಸಮನಾದ ದಂಡವನ್ನು ಸಂದಾಯ ಮಾಡಿದ ಮೇಲೆ ಮತ್ತು ವಿನಾಯತಿ ಸರಕುಗಳ ಸಂದರ್ಭದಲ್ಲಿ ಸರಕುಗಳ ಮೌಲ್ಯದ ಶೇಕಡ ಐದರಷ್ಟಕ್ಕೆ ಸಮನಾದ ಮೊತ್ತವನ್ನು ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಸಂದಾಯ ಮಾಡಿದ ಮೇಲೆ;

(ಸಿ) ಖಂಡ (ಎ) ಅಥವಾ ಖಂಡ (ಬಿ) ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊತ್ತಕ್ಕೆ ಸಮನಾದ ಭದ್ರತೆಯನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಒದಗಿಸಿದ ಮೇಲೆ

– ಬಿಡುಗಡೆ ಮಾಡತಕ್ಕದ್ದು:

ಪರಂತು, ಸರಕುಗಳನ್ನು, ಸಾಗಾಣಿಕೆ ಮಾಡುತ್ತಿರುವ ವ್ಯಕ್ತಿಗೆ, ತಡೆಹಿಡಿದಿಡುವ ಅಥವಾ ವಶಕ್ಕೆ ತೆಗೆದುಕೊಳ್ಳುವ ಆದೇಶವನ್ನು ಜಾರಿಗೊಳಿಸದೆ, ಅಂಥ ಸರಕುಗಳನ್ನು ಅಥವಾ ಸಾಗಾಣಿಕೆ ವಾಹನವನ್ನು ತಡೆಹಿಡಿಯುವುದು ಅಥವಾ ವಶಕ್ಕೆ ತೆಗೆದುಕೊಳ್ಳುವುದನ್ನು ಮಾಡತಕ್ಕದ್ದಲ್ಲ.

(2) ಸರಕುಗಳ ಅಥವಾ ಸಾಗಾಣಿಕೆ ವಾಹನದ ತಡೆಹಿಡಿದಿಡುವುದಕ್ಕಾಗಿ ಮತ್ತು ವಶಕ್ಕೆ ತೆಗೆದುಕೊಳ್ಳುವುದಕ್ಕಾಗಿ, ಪ್ರಕರಣ 67ರ ಉಪಪ್ರಕರಣ (6)ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

(3) ಸರಕುಗಳು ಅಥವಾ ಸಾಗಾಣಿಕೆ ವಾಹನಗಳನ್ನು ತಡೆಹಿಡಿದಿರುವ ಅಥವಾ ವಶಕ್ಕೆ ತೆಗೆದುಕೊಂಡಿರುವ ಯುಕ್ತ ಅಧಿಕಾರಿಯು, ಸಂದಾಯವಾಗಬೇಕಾಗಿದ್ದ ತೆರಿಗೆಯನ್ನು ಮತ್ತು ದಂಡವನ್ನು ನಿರ್ದಿಷ್ಟಪಡಿಸಿ ನೋಟೀಸನ್ನು ನೀಡತಕ್ಕದ್ದು, ತದನಂತರ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಅಡಿಯಲ್ಲಿ ತೆರಿಗೆಯನ್ನು ಮತ್ತು ದಂಡವನ್ನು ಸಂದಾಯ ಮಾಡುವುದಕ್ಕಾಗಿ ಆದೇಶವನ್ನು ಹೊರಡಿಸತಕ್ಕದ್ದು.

(4) ಸಂಬಂಧಿಸಿದ ವ್ಯಕ್ತಿಗೆ, ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು, ಉಪಪ್ರಕರಣ (3)ರ ಅಡಿಯಲ್ಲಿ ತೆರಿಗೆಯನ್ನು, ಬಡ್ಡಿಯನ್ನು ಅಥವಾ ದಂಡವನ್ನು ನಿರ್ಧರಿಸತಕ್ಕದ್ದಲ್ಲ.

(5) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ಮೊತ್ತವು ಸಂದಾಯವಾದ ಮೇಲೆ, ಉಪಪ್ರಕರಣ (3)ರಲ್ಲಿ ನಿರ್ದಿಷ್ಟಪಡಿಸಿದ ಸೂಚನಾ ಪತ್ರಕ್ಕೆ ಸಂಬಂಧಿಸಿದಂತೆ ಎಲ್ಲಾ ನಡಾವಳಿಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.

(6) ಯಾವುವೇ ಸರಕುಗಳನ್ನು ಸಾಗಾಣಿಕೆ ಮಾಡುತ್ತಿರುವ ವ್ಯಕ್ತಿಯು ಅಥವಾ ಸರಕುಗಳ ಮಾಲೀಕನು, ಉಪಪ್ರಕರಣ (1)ರಲ್ಲಿ ಉಪಬಂಧಿಸಿದಂತೆ ತೆರಿಗೆಯನ್ನು ಮತ್ತು ದಂಡದ ಮೊತ್ತವನ್ನು, ಅಂಥ ತಡೆಹಿಡಿದಿಟ್ಟ ಅಥವಾ ವಶಕ್ಕೆ ತೆಗೆದುಕೊಂಡ ಹದಿನಾಲ್ಕು ದಿನಗಳ ಒಳಗಾಗಿ ಸಂದಾಯ ಮಾಡಲು ವಿಫಲನಾದಲ್ಲಿ, ಪ್ರಕರಣ 130ರ ಉಪಬಂಧಗಳಿಗೆ ಅನುಸಾರವಾಗಿ ಮುಂದಿನ ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದು:

ಪರಂತು, ತಡೆಹಿಡಿದಿಟ್ಟ ಅಥವಾ ವಶಕ್ಕೆ ತೆಗೆದುಕೊಂಡ ಸರಕುಗಳು, ಹಾಳಾಗಿ ಹೋಗುವ ಅಥವಾ ಅಪಾಯಕಾರಿ ಸ್ವರೂಪದಲ್ಲಿದ್ದಲ್ಲಿ ಅಥವಾ ಕಾಲಾಂತರದಲ್ಲಿ ಮೌಲ್ಯದಲ್ಲಿ ಸವಕಳಿಯಾಗುವ ಸಂಭವವಿದ್ದಲ್ಲಿ, ಸದರಿ ಏಳು ದಿನಗಳ ಅವಧಿಯನ್ನು ಯುಕ್ತ ಅಧಿಕಾರಿಯು ಇಳಿಕೆ ಮಾಡಬಹುದು.

**130. ಸರಕುಗಳನ್ನು ಅಥವಾ ಸಾಗಾಣಿಕೆ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ದಂಡ ವಿಧಿಸುವುದು.–** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ವ್ಯಕ್ತಿಯು–

(i) ತೆರಿಗೆಯ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ, ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸಿ ಯಾವುವೇ ಸರಕುಗಳನ್ನು ಪೂರೈಕೆ ಮಾಡಿದರೆ ಅಥವಾ ಸ್ವೀಕರಿಸಿದರೆ; ಅಥವಾ

(ii) ಈ ಅಧಿನಿಯಮದ ಅಡಿಯಲ್ಲಿ, ಅವನು ತೆರಿಗೆ ಸಂದಾಯಕ್ಕೆ ಗುರಿಯಾಗಿರುವ ಯಾವುವೇ ಸರಕುಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲದಿದ್ದರೆ; ಅಥವಾ

(iii) ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾಗಿರುವ ಯಾವುವೇ ಸರಕುಗಳನ್ನು ನೋಂದಣಿಗೆ ಅರ್ಜಿ ಸಲ್ಲಿಸದೇ ಪೂರೈಕೆ ಮಾಡಿದರೆ; ಅಥವಾ

(iv) ತೆರಿಗೆಯ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ, ಈ ಅಧಿನಿಯಮದ ಯಾವುವೇ ಉಪಬಂಧಗಳು ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸಿದರೆ; ಅಥವಾ

(v) ಸ್ವತಃ ಸಾಗಾಣಿಕೆ ವಾಹನದ ಮಾಲೀಕನ, ಅವನ ಏಜೆಂಟು ಯಾರಾದರೂ ಇದ್ದರೆ, ಆತನ ಮತ್ತು ಆ ಸಾಗಾಣಿಕೆ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯ ಗಮನಕ್ಕೆ ತರದೇ ಅಥವಾ ಪರೋಕ್ಷ ಸಮ್ಮತಿಯಿಲ್ಲದೆ, ಅದನ್ನು ಉಪಯೋಗಿಸಲಾಗಿದೆ ಎಂದು ಸಾಗಾಣಿಕೆ ವಾಹನದ ಮಾಲೀಕನು ರುಜುವಾತುಪಡಿಸಿದ ಹೊರತು, ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅಥವಾ ಇದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸಿ, ಸಂಚಾರದ ಸಾಧನವಾಗಿ ಯಾವುದೇ ಸಾಗಾಣಿಕೆ ವಾಹನವನ್ನು ತೆರಿಗೆದಾಯಕ ಸರಕುಗಳನ್ನು ಸಾಗಿಸಲು ಉಪಯೋಗಿಸಿದರೆ

– ಆಗ, ಎಲ್ಲಾ ಅಂಥ ಸರಕುಗಳು ಅಥವಾ ಸಾಗಾಣಿಕೆ ವಾಹನಗಳು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು ಮತ್ತು ಆ ವ್ಯಕ್ತಿಯು ಪ್ರಕರಣ 122ರ ಅಡಿಯಲ್ಲಿ ದಂಡಕ್ಕೆ ಗುರಿಯಾಗತಕ್ಕದ್ದು.

(2) ಯಾವುವೇ ಸರಕುಗಳನ್ನು ಅಥವಾ ಸಾಗಾಣಿಕೆ ವಾಹನದ ಮುಟ್ಟುಗೋಲನ್ನು ಹಾಕಿಕೊಂಡಾಗಲೆಲ್ಲ ಈ ಅಧಿನಿಯಮದ ಮೂಲಕ ಪ್ರಾಧಿಕೃತಗೊಳಿಸಿದ್ದರೆ, ಇದರ ನ್ಯಾಯ ನಿರ್ಣಯ ಮಾಡುವ ಅಧಿಕಾರಿಯು, ಮುಟ್ಟುಗೋಲಿಗೆ ಬದಲಾಗಿ, ಸದರಿ ಅಧಿಕಾರಿಯು ಸೂಕ್ತವೆಂದು ಯೋಚಿಸುವ ಅಂಥ ಜುಲ್ಮಾನೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ಸರಕುಗಳ ಮಾಲೀಕನಿಗೆ ನೀಡತಕ್ಕದ್ದು:

ಪರಂತು, ಆ ಸರಕುಗಳ ಮೇಲೆ ವಿಧಿಸಬಹುದಾದ ತೆರಿಗೆಯನ್ನು ಕಳೆದ ಮೇಲೆ ವಿಧಿಸತಕ್ಕ ಅಂಥ ಜುಲ್ಮಾನೆಯು, ಮುಟ್ಟುಗೋಲು ಹಾಕಿಕೊಳ್ಳಲಾದ ಸರಕುಗಳ ಮಾರುಕಟ್ಟೆಯ ಮೌಲ್ಯವನ್ನು ಮೀರತಕ್ಕದ್ದಲ್ಲ:

ಮತ್ತು ಪರಂತು, ವಿಧಿಸಬಹುದಾದ ಅಂಥ ಜುಲ್ಮಾನೆ ಮತ್ತು ದಂಡದ ಒಟ್ಟು ಮೊತ್ತವು, ಪ್ರಕರಣ 129ರ ಉಪಪ್ರಕರಣ (1)ರ ಅಡಿಯಲ್ಲಿ ವಿಧಿಸಬಹುದಾದ ದಂಡದ ಮೊತ್ತಕ್ಕಿಂತ ಕಡಿಮೆಯಿರತಕ್ಕದ್ದಲ್ಲ:

ಮತ್ತೂ ಪರಂತು, ಯಾವುದೇ ಅಂಥ ಸಾಗಾಣಿಕೆ ವಾಹನವನ್ನು, ಬಾಡಿಗೆ ಮೇಲೆ ಸರಕುಗಳ ಅಥವಾ ಪ್ರಯಾಣಿಕರ ಸಾಗಾಣಿಕೆಗಾಗಿ ಉಪಯೋಗಿಸಿದ್ದಲ್ಲಿ, ಸಾಗಾಣಿಕೆ ವಾಹನದ ಮುಟ್ಟುಗೋಲಿಗೆ ಬದಲಾಗಿ, ಅದರಲ್ಲಿ ಸಾಗಾಣಿಕೆ ಮಾಡುತ್ತಿರುವ ಸರಕುಗಳ ಮೇಲೆ ಸಂದಾಯ ಮಾಡಬೇಕಾದ ತೆರಿಗೆಗೆ ಸಮನಾಂತರವಾದ ಶುಲ್ಕವನ್ನು ಸಂದಾಯ ಮಾಡುವ ಆಯ್ಕೆಯನ್ನು ಸಾಗಾಣಿಕೆ ವಾಹನದ ಮಾಲೀಕನಿಗೆ ನೀಡತಕ್ಕದ್ದು.

(3) ಉಪಪ್ರಕರಣ (2)ರ ಅಡಿಯಲ್ಲಿ ಸರಕುಗಳ ಅಥವಾ ಸಾಗಾಣಿಕೆ ವಾಹನದ ಮುಟ್ಟುಗೋಲಿಗೆ ಬದಲಾಗಿ ಯಾವುದೇ ಜುಲ್ಮಾನೆಯನ್ನು ವಿಧಿಸಿದ್ದಲ್ಲಿ, ಅದರ ಜೊತೆಗೆ, ಅಂಥ ಸರಕುಗಳ ಅಥವಾ ಸಾಗಾಣಿಕೆ ವಾಹನದ ಮಾಲೀಕ ಅಥವಾ ಉಪಪ್ರಕರಣ (1)ರ ಅಡಿಯಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು, ಅಂಥ ಸರಕುಗಳಿಗೆ ಅಥವಾ ಸಾಗಾಣಿಕೆ ವಾಹನಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಯಾವುದೇ ತೆರಿಗೆ, ದಂಡ ಮತ್ತು ವೆಚ್ಚಗಳಿಗೆ ಗುರಿಯಾಗತಕ್ಕದ್ದು.

(4) ಆ ವ್ಯಕ್ತಿಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡದೆ, ಸರಕುಗಳ ಅಥವಾ ಸಾಗಾಣಿಕೆ ವಾಹನದ ಮುಟ್ಟುಗೋಲಿಗಾಗಿ ಅಥವಾ ದಂಡ ವಿಧಿಸುವುದಕ್ಕಾಗಿ ಆದೇಶವನ್ನು ಜಾರಿಗೊಳಿಸತಕ್ಕದ್ದಲ್ಲ.

(5) ಈ ಅಧಿನಿಯಮದ ಅಡಿಯಲ್ಲಿ ಯಾವುವೇ ಸರಕುಗಳನ್ನು ಅಥವಾ ಸಾಗಾಣಿಕೆ ವಾಹನವನ್ನು ಮುಟ್ಟುಗೋಲು ಹಾಕಿಕೊಂಡಿದ್ದಲ್ಲಿ, ಅದಾದ ಕೂಡಲೇ ಅಂಥ ಸರಕುಗಳ ಅಥವಾ ಸಾಗಾಣಿಕೆ ವಾಹನದ ಹಕ್ಕು ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(6) ಮುಟ್ಟುಗೋಲಿನ ಬಗ್ಗೆ ನ್ಯಾಯ ನಿರ್ಣಯ ಮಾಡುವ ಯುಕ್ತ ಅಧಿಕಾರಿಯು, ಮುಟ್ಟುಗೋಲು ಹಾಕಿಕೊಂಡಿರುವ ವಸ್ತುಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಅವುಗಳ ಸ್ವಾಧೀನತೆಯನ್ನು ಹೊಂದಿರತಕ್ಕದ್ದು ಹಾಗೂ ಅಂಥ ಯುಕ್ತ ಅಧಿಕಾರಿಯ ಕೋರಿಕೆಯ ಮೇರೆಗೆ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ಅಂಥ ಸ್ವಾಧೀನತೆಯನ್ನು ತೆಗೆದುಕೊಳ್ಳಲು ಮತ್ತು ಹೊಂದಲು ನೆರವು ನೀಡತಕ್ಕದ್ದು.

(7) ಯುಕ್ತ ಅಧಿಕಾರಿಯು, ಮುಟ್ಟುಗೋಲು ಹಾಕಿಕೊಂಡಿರುವ ಸರಕುಗಳು ಅಥವಾ ಸಾಗಾಣಿಕೆ ವಾಹನವು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಇತರ ವ್ಯವಹರಣೆಗಳಿಗೆ ಅಗತ್ಯವಿರುವುದಿಲ್ಲ ಎಂದು ಸ್ವತಃ ಮನದಟ್ಟು ಮಾಡಿಕೊಂಡ ನಂತರ ಮತ್ತು ಮುಟ್ಟುಗೋಲಿಗೆ ಬದಲಾಗಿ ಜುಲ್ಮಾನೆಯನ್ನು ಸಂದಾಯ ಮಾಡಲು ಮೂರು ತಿಂಗಳುಗಳು ಮೀರದ ಸಮಂಜಸ ಕಾಲಾವಕಾಶವನ್ನು ನೀಡಿದ ನಂತರ, ಅಂಥ ಸರಕುಗಳನ್ನು ಅಥವಾ ಸಾಗಾಣಿಕೆ ವಾಹನವನ್ನು ವಿಲೆ ಮಾಡಬಹುದು ಮತ್ತು ಅದರ ಮಾರಾಟದ ಉತ್ಪತ್ತಿಯನ್ನು ಸರ್ಕಾರದಲ್ಲಿ ಠೇವಣಿ ಇಡತಕ್ಕದ್ದು.

**131. ಇತರ ದಂಡನೆಗಳಲ್ಲಿ ಹಸ್ತಕ್ಷೇಪ ಮಾಡದಂತೆ ಮುಟ್ಟುಗೋಲು ಹಾಕಿಕೊಳ್ಳುವುದು ಅಥವಾ ದಂಡ ವಿಧಿಸುವುದು.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಅಧಿನಿಯಮದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಬಾಧಕವಾಗದಂತೆ, ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಮಾಡಿದ ಮುಟ್ಟುಗೋಲು ಅಥವಾ ವಿಧಿಸಿದ ದಂಡವು, ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ, ಅದರಿಂದ ಬಾಧಿತನಾದ ವ್ಯಕ್ತಿಯ ಮೇಲೆ ಯಾವುದೇ ಇತರ ದಂಡನೆಗಳನ್ನು ವಿಧಿಸುವುದಕ್ಕೆ ಪ್ರತಿಬಂಧಿತವಾಗಕ್ಕದ್ದಲ್ಲ.

**132. ಕೆಲವೊಂದು ಅಪರಾಧಗಳಿಗೆ ದಂಡನೆಗಳು.–** (1) ಈ ಮುಂದಿನ ಯಾವುದೇ ಅಪರಾಧಗಳನ್ನು, ಎಸಗುವ ಅಥವಾ ಎಸಗಲು ಕಾರಣವಾಗುವ ಮತ್ತು ಅದರಿಂದ ಉಂಟಾಗುವ ಪ್ರಯೋಜನಗಳನ್ನು ಉಳಿಸಿಕೊಳ್ಳುವ ಯಾರೇ ವ್ಯಕ್ತಿಯು, ಎಂದರೆ:–

(ಎ) ತೆರಿಗೆಯನ್ನು ತಪ್ಪಿಸುವ ಉದ್ದೇಶದಿಂದ, ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸಿ, ಯಾವುದೇ ದರಪಟ್ಟಿಯನ್ನು ನೀಡದೆ ಯಾವುದೇ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಪೂರೈಕೆ ಮಾಡುವುದು;

(ಬಿ) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸಿ ಸರಕು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಪೂರೈಕೆ ಮಾಡದೆ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ಅಕ್ರಮವಾಗಿ ತೆಗೆದುಕೊಳ್ಳುವುದು ಅಥವಾ ಉಪಯೋಗಿಸುವುದು ಅಥವಾ ತೆರಿಗೆಯ ಮರುಪಾವತಿಗೆ ಕಾರಣವಾಗುವ ಯಾವುದೇ ದರಪಟ್ಟಿ ಅಥವಾ ಬಿಲ್ಲನ್ನು ನೀಡುವುದು;

(ಸಿ) ಖಂಡ (ಬಿ)ಯಲ್ಲಿ ಉಲ್ಲೇಖಿಸಿದ ದರಪಟ್ಟಿ ಅಥವಾ ಬಿಲ್ಲನ್ನು ಬಳಸಿ ಲಭ್ಯವಾದ ಹೂಡುವಳಿ ತೆರಿಗೆ ಸಂದಾಯ ಅಥವಾ ಯಾವುದೇ ದರಪಟ್ಟಿ ಅಥವಾ ಬಿಲ್ಲು ಇಲ್ಲದೆ ಮೋಸದಿಂದ ದೊರೆಯುವ ಹೂಡುವಳಿ ತೆರಿಗೆ ಸಂದಾಯ ಮಾಡುವುದು;

(ಡಿ) ತೆರಿಗೆ ಎಂದು ಯಾವುದೇ ಮೊತ್ತವನ್ನು ಸಂಗ್ರಹಿಸಿರುವ, ಆದರೆ ಅದನ್ನು ಯಾವ ದಿನಾಂಕದಂದು ಸರ್ಕಾರಕ್ಕೆ ಸಂದಾಯ ಮಾಡಬೇಕಾಗಿತ್ತೋ ಆ ದಿನಾಂಕದಿಂದ ಅಂಥ ಸಂದಾಯವು ಬಾಕಿಯಾಗಿರುವ ದಿನಾಂಕದಿಂದ ಮೂರು ತಿಂಗಳು ಅವಧಿಯನ್ನು ಮೀರಿದ ನಂತರವೂ ಸಂದಾಯ ಮಾಡಲು ವಿಫಲನಾಗುವುದು;

(ಇ) ತೆರಿಗೆಯನ್ನು ತಪ್ಪಿಸುವುದು ಅಥವಾ ಮೋಸದಿಂದ ಮರುಪಾವತಿಯನ್ನು ಪಡೆದುಕೊಳ್ಳುವುದು ಮತ್ತು ಅಂಥ ಅಪರಾಧವು (ಎ) ಯಿಂದ (ಡಿ) ವರೆಗಿನ ಖಂಡಗಳಲ್ಲಿ ಒಳಗೊಂಡಿಲ್ಲದಿರುವುದು;

(ಎಫ್) ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ತೆರಿಗೆಯ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ, ಹಣಕಾಸಿನ ದಾಖಲೆಗಳನ್ನು ಸುಳ್ಳು ಮಾಡಿದಲ್ಲಿ ಅಥವಾ ಬದಲಿಸುವುದು ಅಥವಾ ನಕಲಿ ಲೆಕ್ಕಪತ್ರಗಳನ್ನು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸುವುದು ಅಥವಾ ಯಾವುದೇ ಸುಳ್ಳು ಮಾಹಿತಿಯನ್ನು ಒದಗಿಸುವುದು;

(ಜಿ) ಈ ಅಧಿನಿಯಮದ ಅಡಿಯಲ್ಲಿ ತನ್ನ ಕರ್ತವ್ಯ ನೆರವೇರಿಸುತ್ತಿರುವ ಯಾರೇ ಅಧಿಕಾರಿಯನ್ನು ಅಡ್ಡಿಪಡಿಸುವುದು ಅಥವಾ ಪ್ರತಿಬಂಧಿಸುವುದು;

(ಹೆಚ್) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಮುಟ್ಟುಗೋಲಿಗೆ ಗುರಿಯಾಗತಕ್ಕವುಗಳೆಂದು ತಾನು ತಿಳಿದಿರುವ ಅಥವಾ ನಂಬಲು ಕಾರಣಗಳಿರುವ ಯಾವುವೇ ಸರಕುಗಳ ಸ್ವಾಧೀನತೆಯನ್ನು ಆರ್ಜಿಸುವುದು ಅಥವಾ ಅವುಗಳ ಸಾಗಾಣಿಕೆ, ತೆಗೆಯುವುದು, ನಿಕ್ಷೇಪಿಸುವುದು, ಇಟ್ಟುಕೊಳ್ಳುವುದು, ಬಚ್ಚಿಟ್ಟುಕೊಳ್ಳುವುದು, ಪೂರೈಸುವುದು ಅಥವಾ ಖರೀದಿಸುವುದು ಅಥವಾ ಯಾವುದೇ ಇತರೆ ವಿಧಾನದಲ್ಲಿ ಸ್ವತಃ ವ್ಯವಹರಿಸಿರುವುದು;

(ಐ) ಈ ಅಧಿನಿಯಮದ ಯಾವುವೇ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಲ್ಲಂಘನೆಯಾಗುತ್ತದೆ ಎಂದು ಅವನಿಗೆ ತಿಳಿದಿರುವ ಅಥವಾ ನಂಬಲು ಕಾರಣಗಳಿರುವ ಸೇವೆಗಳ ಪೂರೈಕೆಯನ್ನು ಸ್ವೀಕರಿಸುವುದು ಅಥವಾ ಯಾವುದೇ ವಿಧಾನದಲ್ಲಿ ಪೂರೈಕೆಗೆ ಸ್ವತಃ ತಾನು ಸಂಬಂಧ ಇಟ್ಟುಕೊಳ್ಳುವುದು ಅಥವಾ ಯಾವುದೇ ಇತರೆ ವಿಧಾನದಲ್ಲಿ ವ್ಯವಹರಿಸಿರುವುದು;

(ಜೆ) ಯಾವುದೇ ಮುಖ್ಯ ಪುರಾವೆಯನ್ನು ಅಥವಾ ದಸ್ತಾವೇಜುಗಳನ್ನು ಅಕ್ರಮವಾಗಿ ತಿದ್ದುವುದು ಅಥವಾ ನಾಶಪಡಿಸುವುದು;

(ಕೆ) ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಅವನು ಪೂರೈಸಬೇಕಾಗಿರುವ ಯಾವುದೇ ಮಾಹಿತಿಯನ್ನು ಪೂರೈಸುವಲ್ಲಿ ವಿಫಲನಾಗುವುದು (ಯುಕ್ತವಾದ ನಂಬಿಕೆ ಇಟ್ಟಿದ್ದ ಹೊರತು, ಆತನು ಒದಗಿಸಿದ ಮಾಹಿತಿಯು ಸತ್ಯವೆಂದು ರುಜುವಾತುಪಡಿಸುವ ಹೊಣೆಗಾರಿಕೆಯು ಅವನ ಮೇಲಿರತಕ್ಕದ್ದು ಎಂಬುದರ ಹೊರತು) ಅಥವಾ ಸುಳ್ಳು ಮಾಹಿತಿಯನ್ನು ಒದಗಿಸುವುದು;

(ಎಲ್) ಈ ಪ್ರಕರಣದ (ಎ) ಯಿಂದ (ಕೆ) ವರೆಗಿನ ಖಂಡಗಳಲ್ಲಿ ನಮೂದಿಸಿದ ಯಾವುವೇ ಅಪರಾಧಗಳನ್ನು ಮಾಡಲು ಪ್ರಯತ್ನಿಸುವುದು ಮತ್ತು ದುಷ್ಪ್ರೇರಿಸುವುದು ಈ ಕೆಳಕಂಡಂತೆ ಎಂದರೆ:–

(i) ತಪ್ಪಿಸಲಾದ ತೆರಿಗೆಯ ಮೊತ್ತವು ಅಥವಾ ಅಕ್ರಮವಾಗಿ ತೆಗೆದುಕೊಂಡ ಅಥವಾ ಬಳಸಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮೊತ್ತವು ಅಥವಾ ಅಕ್ರಮವಾಗಿ ತೆಗೆದುಕೊಂಡ ಮರುಪಾವತಿಯ ಮೊತ್ತವು, ಐದು ನೂರು ಲಕ್ಷ ರೂಪಾಯಿಗಳನ್ನು ಮೀರಿದ ಸಂದರ್ಭಗಳಲ್ಲಿ, ಐದು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ;

(ii) ತಪ್ಪಿಸಲಾದ ತೆರಿಗೆಯ ಮೊತ್ತವು ಅಥವಾ ಅಕ್ರಮವಾಗಿ ತೆಗೆದುಕೊಂಡ ಅಥವಾ ಬಳಸಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮೊತ್ತವು ಅಥವಾ ಅಕ್ರಮವಾಗಿ ತೆಗೆದುಕೊಂಡ ಮರುಪಾವತಿಯ ಮೊತ್ತವು, ಎರಡು ನೂರು ಲಕ್ಷ ರೂಪಾಯಿಗಳನ್ನು ಮೀರಿದ, ಆದರೆ ಐದು ನೂರು ಲಕ್ಷ ರೂಪಾಯಿಗಳನ್ನು ಮೀರಿರದ ಸಂದರ್ಭಗಳಲ್ಲಿ, ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಜೊತೆಗೆ ಜುಲ್ಮಾನೆಯಿಂದ;

(iii) ತಪ್ಪಿಸಲಾದ ತೆರಿಗೆಯ ಮೊತ್ತವು ಅಥವಾ ಅಕ್ರಮವಾಗಿ ತೆಗೆದುಕೊಂಡ ಅಥವಾ ಬಳಸಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮೊತ್ತವು ಅಥವಾ ಅಕ್ರಮವಾಗಿ ತೆಗೆದುಕೊಂಡ ಮರುಪಾವತಿಯ ಮೊತ್ತವು, ಒಂದು ನೂರು ಲಕ್ಷ ರೂಪಾಯಿಗಳನ್ನು ಮೀರಿದ್ದು, ಆದರೆ ಎರಡು ನೂರು ಲಕ್ಷ ರೂಪಾಯಿಗಳನ್ನು ಮೀರಿದ್ದ ಯಾವುದೇ ಇತರ ಅಪರಾಧದ ಸಂದರ್ಭದಲ್ಲಿ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ;

(iv) ಅವನು, ಖಂಡ (ಎಫ್) ಅಥವಾ ಖಂಡ (ಜಿ) ಅಥವಾ ಖಂಡ (ಜೆ)ಯಲ್ಲಿ ನಿರ್ದಿಷ್ಟಪಡಿಸಿದ ಒಂದು ಅಪರಾಧವನ್ನು ಮಾಡಿದ ಮತ್ತು ಮಾಡಲು ದುಷ್ಪ್ರೇರಿಸಿದ ಸಂದರ್ಭಗಳಲ್ಲಿ ಅವನು ಆರು ತಿಂಗಳ ಅವಧಿಯವರಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಜುಲ್ಮಾನೆಯಿಂದ ಅಥವಾ ಅವುಗಳೆರಡರಿಂದ

– ದಂಡನೆಗೆ ಗುರಿಯಾಗತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿನ ಅಪರಾಧದ ನಿರ್ಣೀತ ಅಪರಾಧಿಯಾಗಿರುವ ಯಾರೇ ವ್ಯಕ್ತಿಯು, ಪುನಃ ಈ ಪ್ರಕರಣದ ಅಡಿಯಲ್ಲಿನ ಅಪರಾಧದ ನಿರ್ಣೀತ ಅಪರಾಧಿ ಎಂದು ನಿರ್ಣಯಿತನಾದಲ್ಲಿ, ಆಗ, ಅವನು ಎರಡನೇ ಮತ್ತು ತರುವಾಯದ ಪ್ರತಿಯೊಂದು ಅಪರಾಧಕ್ಕಾಗಿ ಐದು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗಿರತಕ್ಕದ್ದು;

(3) ಉಪಪ್ರಕರಣ (1)ರ ಖಂಡಗಳಾದ (i), (ii) ಮತ್ತು (iii)ರಲ್ಲಿ ಹಾಗೂ ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ಕಾರಾವಾಸವು, ನ್ಯಾಯಾಲಯದ ತೀರ್ಪಿನಲ್ಲಿ ದಾಖಲಿಸಬೇಕಾದ, ತದ್ವಿರುದ್ಧವಾದ ವಿಶೇಷ ಮತ್ತು ಸಾಕಷ್ಟು ಕಾರಣಗಳಿಲ್ಲದಿದ್ದಾಗ ಆರು ತಿಂಗಳುಗಳಿಗಿಂತ ಕಡಿಮೆ ಅವಧಿಯದ್ದಾಗಿರತಕ್ಕದ್ದಲ್ಲ.

(4) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಒಳಗೊಂಡಿದ್ದರೂ, ಉಪಪ್ರಕರಣ (5)ರಲ್ಲಿ ಉಲ್ಲೇಖಿಸಲಾಗಿರುವ ಅಪರಾಧಗಳನ್ನು ಹೊರತುಪಡಿಸಿ ಈ ಅಧಿನಿಯಮದ ಅಡಿಯಲ್ಲಿನ ಎಲ್ಲಾ ಅಪರಾಧಗಳು ಅಸಂಜ್ಞೇಯವಾಗಿರತಕ್ಕದ್ದು ಮತ್ತು ಜಾಮೀನೀಯವಾಗಿರತಕ್ಕದ್ದು.

(5) ಉಪಪ್ರಕರಣ (1)ರ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಅಥವಾ ಖಂಡ (ಡಿ)ಗಳಲ್ಲಿ ನಿರ್ದಿಷ್ಟಪಡಿಸಿದ ಮತ್ತು ಆ ಉಪಪ್ರಕರಣದ ಖಂಡ (i)ರ ಅಡಿಯಲ್ಲಿ ದಂಡನೀಯವಾದ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು ಮತ್ತು ಜಾಮೀನುರಹಿತವಾಗಿರತಕ್ಕದ್ದು.

(6) ಆಯುಕ್ತರ ಪೂರ್ವ ಮಂಜೂರಾತಿಯ ಹೊರತಾಗಿ, ಈ ಪ್ರಕರಣದ ಅಡಿಯಲ್ಲಿನ ಯಾವುದೇ ಅಪರಾಧಕ್ಕಾಗಿ ಯಾರೇ ವ್ಯಕ್ತಿಯನ್ನು ಪ್ರಾಸಿಕ್ಯೂಟ್ ಮಾಡತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ತೆರಿಗೆ" ಪದವು, ಈ ಅಧಿನಿಯಮದ, ರಾಜ್ಯ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮದ, ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ತಪ್ಪಿಸಲಾದ ತೆರಿಗೆಯ ಮೊತ್ತ ಅಥವಾ ಅಕ್ರಮವಾಗಿ ತೆಗೆದುಕೊಂಡ ಅಥವಾ ಬಳಸಿದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಮೊತ್ತ ಅಥವಾ ಅಕ್ರಮವಾಗಿ ತೆಗೆದುಕೊಂಡ ಮರುಪಾವತಿ ಮತ್ತು ಸರಕುಗಳ ಅಥವಾ ಸೇವೆಗಳ ತೆರಿಗೆ (ರಾಜ್ಯಗಳಿಗೆ ನಷ್ಟಪರಿಹಾರ) ಅಧಿನಿಯಮದ ಅಡಿಯಲ್ಲಿ ವಿಧಿಸಿದ ಉಪಕರವನ್ನು ಒಳಗೊಳ್ಳತಕ್ಕದ್ದು.

**133. ಅಧಿಕಾರಿಗಳ ಮತ್ತು ಕೆಲವು ಇತರ ವ್ಯಕ್ತಿಗಳ ಹೊಣೆ.–** (1) ಪ್ರಕರಣ 151ರ ಅಡಿಯಲ್ಲಿ ಅಂಕಿಅಂಶಗಳ ಸಂಗ್ರಹಣೆ ಅಥವಾ ಅವುಗಳ ಕ್ರೋಡೀಕರಣ ಅಥವಾ ಗಣಕೀಕರಣದ ಸಂಬಂಧದಲ್ಲಿ ತೊಡಗಿರುವ ಯಾರೇ ವ್ಯಕ್ತಿಯು ಅಥವಾ ಪ್ರಕರಣ 150ರ ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮಾಹಿತಿ ಪಡೆಯಲು ಅವಕಾಶವನ್ನು ಹೊಂದಿರುವ ರಾಜ್ಯ ತೆರಿಗೆಯ ಯಾರೇ ಅಧಿಕಾರಿ ಅಥವಾ ಸಾಮಾನ್ಯ ಪೋರ್ಟಲ್ ಮೇಲೆ ಸೇವೆ ಒದಗಿಸುತ್ತಿರುವ ಯಾರೇ ವ್ಯಕ್ತಿಯು ಅಥವಾ ಸಾಮಾನ್ಯ ಪೋರ್ಟಲ್‌ನ ಏಜೆಂಟು, ಸದರಿ ಪ್ರಕರಣಗಳ ಅಡಿಯಲ್ಲಿ ಆತನ ಕರ್ತವ್ಯ ನಿರ್ವಹಣೆಯಲ್ಲಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದ ಅಡಿಯಲ್ಲಿ ಅಪರಾಧಕ್ಕಾಗಿ ಪ್ರಾಸಿಕ್ಯೂಟ್ ಮಾಡುವ ಉದ್ದೇಶಗಳಿಗಾಗಿಯಲ್ಲದೆ ಅನ್ಯಥಾ ಯಾವುದೇ ಮಾಹಿತಿಯನ್ನು ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ಇದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಒದಗಿಸಿದ ಯಾವುದೇ ರಿಟರ್ನ್‌ನ ಒಳಾಂಶಗಳನ್ನು, ಉದ್ದೇಶಪೂರ್ವಕವಾಗಿ ಬಹಿರಂಗಪಡಿಸಿದರೆ, ಅವನು ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವುಗಳೆರಡರಿಂದ ದಂಡಿತನಾಗಿರತಕ್ಕದ್ದು;

(2) ಯಾರೇ ವ್ಯಕ್ತಿಯು,–

(ಎ) ಅವನು ಸರ್ಕಾರಿ ನೌಕರನಾಗಿದ್ದರೆ, ಈ ಪ್ರಕರಣದ ಮೇರೆಗೆ ಯಾವುದೇ ಅಪರಾಧಕ್ಕಾಗಿ ಸರ್ಕಾರದ ಪೂರ್ವ ಮಂಜೂರಾತಿಯ ಹೊರತಾಗಿ ಪ್ರಾಸಿಕ್ಯೂಟ್ ಮಾಡತಕ್ಕದ್ದಲ್ಲ;

(ಬಿ) ಸರ್ಕಾರಿ ನೌಕರನಾಗಿಲ್ಲದಿರುವ, ಈ ಪ್ರಕರಣದ ಮೇರೆಗೆ ಯಾವುದೇ ಅಪರಾಧಕ್ಕಾಗಿ ಆಯುಕ್ತರ ಪೂರ್ವ ಮಂಜೂರಾತಿಯ ಹೊರತಾಗಿ ಪ್ರಾಸಿಕ್ಯೂಟ್ ಮಾಡತಕ್ಕದ್ದಲ್ಲ.

**134. ಅಪರಾಧಗಳ ಸಂಜ್ಞೇಯತೆ.–** ಯಾವುದೇ ನ್ಯಾಯಾಲಯವು ಆಯುಕ್ತರ ಪೂರ್ವ ಮಂಜೂರಾತಿಯ ಹೊರತಾಗಿ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ದಂಡನೀಯವಾದ ಯಾವುವೇ ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟ್‌ಗಿಂತ ಕೆಳದರ್ಜೆಯ ಯಾವುದೇ ನ್ಯಾಯಾಲಯವು ಅಂಥ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

**135. ಆಪರಾಧಿಕ ಮನಸ್ಥಿತಿಯ ಬಗ್ಗೆ ಪೂರ್ವಭಾವನೆ.–** ಆಪಾದಿತನ ಆಪರಾಧಿಕ ಮನಸ್ಥಿತಿಯ ಬಗ್ಗೆ ಅಗತ್ಯಪಡಿಸುವಂಥ ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ಯಾವುದೇ ಪ್ರಾಸಿಕ್ಯೂಷನ್‌ನಲ್ಲಿ ನ್ಯಾಯಾಲಯವು ಅಂಥ ಮನಸ್ಥಿತಿ ಇರುವುದನ್ನು ಪೂರ್ವಭಾವಿಸತಕ್ಕದ್ದು, ಆದರೆ ಇದು ಆಪಾದಿತನಿಗೆ, ಅವನು ಆ ಪ್ರಾಸಿಕ್ಯೂಷನ್‌ನಲ್ಲಿ ಅಪರಾಧವೆಂದು ಆಪಾದಿಸಿದ ಕೃತ್ಯಕ್ಕೆ ಸಂಬಂಧಿಸಿದಂತೆ ಅಂಥ ಮನಸ್ಥಿತಿಯನ್ನು ಹೊಂದಿರಲಿಲ್ಲ ಎನ್ನುವ ಸಂಗತಿಯನ್ನು ರುಜುವಾತುಪಡಿಸುವುದಕ್ಕಾಗಿ ಪ್ರತಿರಕ್ಷೆಯಾಗಿರತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(i) "ಆಪರಾಧಿಕ ಮನಸ್ಥಿತಿ" ಪದಾವಳಿಯು ಸಂಗತಿಯ, ಉದ್ದೇಶ, ಪ್ರೇರಣೆ, ತಿಳುವಳಿಕೆ ಮತ್ತು ಸಂಗತಿಯಲ್ಲಿ ನಂಬಿಕೆ ಅಥವಾ ನಂಬುವುದಕ್ಕೆ ಕಾರಣವನ್ನು ಒಳಗೊಳ್ಳುತ್ತದೆ;

(ii) ಸಂಗತಿಯು, ಅದನ್ನು ಸಂದೇಹಾತೀತವಾಗಿ ಅಸ್ತಿತ್ವದಲ್ಲಿದೆ ಎಂದು ನ್ಯಾಯಾಲಯವು ನಂಬಿದಾಗ ಮತ್ತು ಅದರ ಅಸ್ತಿತ್ವವು ಕೇವಲ ಸಂಭಾವ್ಯತೆಯ ಪ್ರಭಾವದಿಂದ ಸ್ಥಾಪಿತವಾಗಿಲ್ಲ ಎಂದಾಗ ಮಾತ್ರ ರುಜುವಾತಾಗಿದೆ ಎಂದು ಹೇಳಲಾಗುತ್ತದೆ.

**136. ಕೆಲವು ಸನ್ನಿವೇಶಗಳಲ್ಲಿ ಹೇಳಿಕೆಗಳ ಸುಸಂಬದ್ಧತೆ.–** ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ವಿಚಾರಣೆಯಲ್ಲಿ ಅಥವಾ ವ್ಯವಹರಣೆ ನಡೆಯುತ್ತಿರುವಾಗ ಪ್ರಕರಣ 70ರ ಅಡಿಯಲ್ಲಿ ನೀಡಿದ ಸಮನ್‌ಗೆ ಪ್ರತಿಕ್ರಿಯೆಯಾಗಿ ಹಾಜರಾದ ವ್ಯಕ್ತಿಯು ನೀಡಿದ ಮತ್ತು ಸಹಿ ಮಾಡಿದ ಹೇಳಿಕೆಯು, ಈ ಅಧಿನಿಯಮದ ಅಡಿಯಲ್ಲಿನ ಅಪರಾಧಕ್ಕಾಗಿ ಯಾವುದೇ ಪ್ರಾಸಿಕ್ಯೂಷನಿನಲ್ಲಿ ಒಳಗೊಂಡಿರುವ ಸಂಗತಿಗಳ ಸತ್ಯತೆಯನ್ನು ರುಜುವಾತುಪಡಿಸುವ ಉದ್ದೇಶಕ್ಕಾಗಿ,–

(ಎ) ಹೇಳಿಕೆಯನ್ನು ನೀಡಿದ ವ್ಯಕ್ತಿಯು ಮರಣ ಹೊಂದಿದಾಗ ಅಥವಾ ಕಾಣೆಯಾಗಿದ್ದಾಗ ಅಥವಾ ಪುರಾವೆಯನ್ನು ನೀಡಲು ಅಸಮರ್ಥನಿರುವಾಗ ಅಥವಾ ಪ್ರತಿಕೂಲ ವ್ಯಕ್ತಿಯಿಂದ ಹೊರಗಿಡಲ್ಪಟ್ಟಾಗ ಅಥವಾ ಯಾರ ಹಾಜರಾತಿಯನ್ನು ಪ್ರಕರಣದ ಸನ್ನಿವೇಶಗಳಲ್ಲಿ, ನ್ಯಾಯಾಲಯವು ಅನುಚಿತ ಎಂದು ಪರಿಗಣಿಸುವಷ್ಟು ವಿಳಂಬವಿಲ್ಲದೇ ಅಥವಾ ವೆಚ್ಚವಿಲ್ಲದೆ ಪಡೆಯಲು ಸಾಧ್ಯವಿರದಿದ್ದಾಗ; ಅಥವಾ

(ಬಿ) ಹೇಳಿಕೆಯನ್ನು ನೀಡಿದ ವ್ಯಕ್ತಿಯನ್ನು, ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಸಾಕ್ಷಿದಾರನಂತೆ ವಿಚಾರಣೆ ಮಾಡಿದಾಗ ಮತ್ತು ನ್ಯಾಯಾಲಯವು ಪ್ರಕರಣದ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು, ನ್ಯಾಯದ ಹಿತಾಸಕ್ತಿಯಿಂದ ಹೇಳಿಕೆಯನ್ನು ಸಾಕ್ಷ್ಯದಲ್ಲಿ ಅಂಗೀಕರಿಸತಕ್ಕದ್ದೆಂದು ಅಭಿಪ್ರಾಯಪಟ್ಟಾಗ

– ಸುಸಂಗತವಾಗತಕ್ಕದ್ದು.

**137. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗೆ ಅಪರಾಧ ಮಾಡಿರುವ ವ್ಯಕ್ತಿಯು, ಕಂಪನಿಯಾಗಿದ್ದಲ್ಲಿ, ಅಪರಾಧ ಎಸಗಿದ ಸಮಯದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸುವುದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ಹಾಗೆಯೇ ಕಂಪನಿಯು, ಅಪರಾಧದ ತಪ್ಪಿತಸ್ಥರು ಎಂದು ಭಾವಿಸತಕ್ಕದ್ದು ಹಾಗೂ ಅವರ ವಿರುದ್ಧ ಕ್ರಮಕೈಗೊಳ್ಳುವುದಕ್ಕೆ ಅವರು ಬದ್ಧರಾಗತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡನೆಗೆ ಗುರಿಯಾಗತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಕಂಪನಿಯು ಈ ಅಧಿನಿಯಮದ ಮೇರೆಗೆ ಅಪರಾಧ ಮಾಡಿದ್ದಲ್ಲಿ ಮತ್ತು ಆ ಅಪರಾಧವು, ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಯಾವುದೇ ನಿರ್ಲಕ್ಷ್ಯದಿಂದ ನಡೆದಿದೆ ಎಂಬುದು ರುಜುವಾತಾದಾಗ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಹಾಗೂ ಅವರ ವಿರುದ್ಧ ಕ್ರಮಕೈಗೊಳ್ಳುವುದಕ್ಕೆ ಅವರು ಬದ್ಧರಾಗತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡಿತರಾಗತಕ್ಕದ್ದು.

(3) ಪಾಲುದಾರಿಕೆ ಸಂಸ್ಥೆಯಾಗಿರುವ ಅಥವಾ ನಿಯಮಿತ ಹೊಣೆಗಾರಿಕೆಯ ಪಾಲುದಾರಿಕೆಯಾಗಿರುವ ಅಥವಾ ಹಿಂದೂ ಅವಿಭಾಜ್ಯ ಕುಟುಂಬವಾಗಿರುವ ಅಥವಾ ಟ್ರಸ್ಟಾಗಿರುವ ಅಥವಾ ಪಾಲುದಾರನಾಗಿರುವ ಅಥವಾ ಕರ್ತನಾಗಿರುವ ಅಥವಾ ವ್ಯವಸ್ಥಾಪಕ ಟ್ರಸ್ಟಿಯಾಗಿರುವ ಒಬ್ಬ ತೆರಿಗೆದಾಯಕ ವ್ಯಕ್ತಿಯಿಂದ, ಈ ಅಧಿನಿಯಮದ ಅಡಿಯಲ್ಲಿ ಅಪರಾಧ ನಡೆದಿದೆ ಎನ್ನಲಾಗಿದ್ದಲ್ಲಿ, ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಹಾಗೂ ಅವರ ವಿರುದ್ಧ ಕ್ರಮಕೈಗೊಳ್ಳುವುದಕ್ಕೆ ಅವರು ಬದ್ಧರಾಗಿರತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡಿತರಾಗತಕ್ಕದ್ದು ಹಾಗೂ ಉಪಪ್ರಕರಣ (2)ರ ಉಪಬಂಧಗಳು ಅಂಥ ವ್ಯಕ್ತಿಗಳಿಗೆ ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

(4) ಆ ಅಪರಾಧವನ್ನು ತನ್ನ ಗಮನಕ್ಕೆ ಬಾರದೇ ಮಾಡಲಾಗಿತ್ತೆಂದು ಅಥವಾ ಅಂಥ ಅಪರಾಧ ನಡೆಯುವಾಗ ಅದನ್ನು ನಿಯಂತ್ರಿಸಲು ತಾನು ಎಲ್ಲಾ ಸೂಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ಅವನು ರುಜುವಾತುಪಡಿಸಿದರೆ, ಯಾರೇ ಅಂಥ ವ್ಯಕ್ತಿಯನ್ನು ಈ ಪ್ರಕರಣದಲ್ಲಿ ಒಳಗೊಂಡಿರುವುದಾವುದೂ ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(i) "ಕಂಪನಿ" ಎಂದರೆ, ನಿಗಮಿತ ನಿಕಾಯ ಮತ್ತು ಪಾಲುದಾರಿಕೆ ಸಂಸ್ಥೆ ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ii) ಪಾಲುದಾರಿಕೆ ಸಂಸ್ಥೆಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ, ಪಾಲುದಾರಿಕೆ ಸಂಸ್ಥೆಯ ಪಾಲುದಾರ.

**138. ಅಪರಾಧಗಳ ರಾಜಿ.–** (1) ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವು, ಪ್ರಾಸಿಕ್ಯೂಷನ್ ಹೂಡುವುದಕ್ಕೆ ಮೊದಲಾಗಿರಲಿ ಅಥವಾ ನಂತರವಾಗಿರಲಿ, ನಿಯಮಿಸಬಹುದಾದಂಥ ವಿಧಾನದಲ್ಲಿ ಅಂಥ ರಾಜಿ ಮೊತ್ತವನ್ನು, ಅಪರಾಧದ ಆಪಾದಿತ ವ್ಯಕ್ತಿಯು, ಸಂದರ್ಭಾನುಸಾರ ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡಿದ ಮೇಲೆ ಆಯುಕ್ತರು ರಾಜಿಮಾಡಿಕೊಳ್ಳಬಹುದು:

ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವ ಯಾವುದೂ ಈ ಕೆಳಕಂಡವುಗಳಿಗೆ ಎಂದರೆ:–

(ಎ) ಪ್ರಕರಣ 132ರ ಉಪಪ್ರಕರಣ (1)ರ (ಎ)ಯಿಂದ (ಎಫ್) ವರೆಗಿನ ಖಂಡಗಳಲ್ಲಿ ಯಾವುವೇ ಅಪರಾಧಗಳಿಗೆ ಸಂಬಂಧಿಸಿದಂತೆ, ಒಂದು ಬಾರಿ ರಾಜಿ ಮಾಡಿಕೊಳ್ಳಲು ಅನುಮತಿಸಲಾಗಿರುವ ಒಬ್ಬ ವ್ಯಕ್ತಿಗೆ ಮತ್ತು

ಸದರಿ ಉಪಪ್ರಕರಣದ (ಎ)ಯಿಂದ (ಎಫ್) ವರೆಗಿನ ಖಂಡಗಳಲ್ಲಿ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಅಪರಾಧಗಳಿಗೆ ಸಂಬಂಧಿಸಿದ ಖಂಡ (ಎಲ್)ರಲ್ಲಿ ನಿರ್ದಿಷ್ಟಪಡಿಸಿರುವ ಅಪರಾಧಗಳಿಗೆ;

(ಬಿ) ಒಂದು ಕೋಟಿ ರೂಪಾಯಿಗಳನ್ನು ಮೀರಿದ ಪೂರೈಕೆಗಳ ಮೌಲ್ಯಕ್ಕೆ ಸಂಬಂಧಿಸಿರುವ, ಈ ಅಧಿನಿಯಮದ ಅಡಿಯಲ್ಲಿನ ಅಥವಾ ಯಾವುದೇ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ, ಖಂಡ (ಎ)ಯಲ್ಲಿ ಇರುವಂಥವುಗಳನ್ನು ಹೊರತುಪಡಿಸಿ, ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಒಂದು ಬಾರಿ ರಾಜಿ ಮಾಡಿಕೊಳ್ಳಲು ಅನುಮತಿಸಲಾಗಿರುವ ಒಬ್ಬ ವ್ಯಕ್ತಿಗೆ;

(ಸಿ) ಯಾವುವೇ ಇತರ ಅಧಿನಿಯಮಗಳ ಅಡಿಯಲ್ಲಿ ಸಹ ಅಪರಾಧವಾಗಿರುವ, ಅಪರಾಧವನ್ನು ಮಾಡಿರುವುದಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಆಪಾದಿತನಾಗಿರುವ ವ್ಯಕ್ತಿಗೆ;

(ಡಿ) ಈ ಅಧಿನಿಯಮದ ಅಡಿಯಲ್ಲಿಯ ಅಪರಾಧಕ್ಕಾಗಿ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣಯಿತನಾಗಿರುವ ವ್ಯಕ್ತಿಗೆ;

(ಇ) ಪ್ರಕರಣ 132ರ ಉಪಪ್ರಕರಣ (1)ರ ಖಂಡ (ಜಿ) ಅಥವಾ ಖಂಡ (ಜೆ) ಅಥವಾ ಖಂಡ (ಕೆ)ಗಳಲ್ಲಿ ನಿರ್ದಿಷ್ಟಪಡಿಸಿರುವ ಅಪರಾಧ ಮಾಡಿರುವುದಕ್ಕಾಗಿ ಅಪರಾಧಿಯೆಂದು ನಿರ್ಣಯಿತನಾಗಿರುವ ಒಬ್ಬ ವ್ಯಕ್ತಿಗೆ;

(ಎಫ್) ನಿಯಮಿಸಬಹುದಾದ ಯಾರೇ ಇತರ ವ್ಯಕ್ತಿಗಳ ಅಥವಾ ಅಪರಾಧಗಳ ವರ್ಗಕ್ಕೆ

– ಅನ್ವಯಿಸತಕ್ಕದ್ದಲ್ಲ:

ಮತ್ತು ಪರಂತು, ಈ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಅವಕಾಶ ನೀಡಿದ ಯಾವುದೇ ರಾಜಿಯು, ಯಾವುದೇ ಇತರ ಕಾನೂನಿನ ಅಡಿಯಲ್ಲಿ ಹೂಡಲಾದ ವ್ಯವಹರಣೆಗಳು ಯಾವುದಾದರೂ ಇದ್ದರೆ ಅವುಗಳಿಗೆ ಬಾಧಕವಾಗತಕ್ಕದ್ದಲ್ಲ:

ಮತ್ತೂ ಪರಂತು, ಅಂಥ ಅಪರಾಧಗಳಲ್ಲಿ ಒಳಗೊಂಡಿರುವ ತೆರಿಗೆ, ಬಡ್ಡಿ ಮತ್ತು ದಂಡವನ್ನು ಸಂದಾಯ ಮಾಡಿದ ಮೇಲೆ ರಾಜಿಗೆ ಅವಕಾಶ ನೀಡತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿನ ಅಪರಾಧಗಳ ರಾಜಿ ಮಾಡಿಕೊಳ್ಳುವುದಕ್ಕಾಗಿ ಮೊತ್ತವು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇರದ ಅಥವಾ ಒಳಗೊಂಡಿರುವ ತೆರಿಗೆಯ ಶೇಕಡಾ ಐವತ್ತರಷ್ಟು, ಇವುಗಳಲ್ಲಿ ಯಾವುದು ಹೆಚ್ಚೋ ಅದಕ್ಕಿಂತ ಕಡಿಮೆಯಲ್ಲದ ಕನಿಷ್ಠ ಮೊತ್ತವಾಗಿರತಕ್ಕದ್ದು ಮತ್ತು ಮೂವತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇರದ ಅಥವಾ ಒಳಗೊಂಡಿರುವ ತೆರಿಗೆಯ ಶೇಕಡ ನೂರಾ ಐವತ್ತರಷ್ಟು, ಇವುಗಳಲ್ಲಿ ಯಾವುದು ಹೆಚ್ಚೋ ಅದಕ್ಕಿಂತ ಹೆಚ್ಚಿರದ ಗರಿಷ್ಠ ಮೊತ್ತಕ್ಕೆ ಒಳಪಟ್ಟು ನಿಯಮಿಸಬಹುದಾದಷ್ಟು ಆಗಿರತಕ್ಕದ್ದು.

(3) ಆಯುಕ್ತರು ನಿರ್ಧರಿಸಬಹುದಾದಂಥ ರಾಜಿ ಮೊತ್ತವನ್ನು ಸಂದಾಯ ಮಾಡಿದ ಮೇಲೆ, ಅದೇ ಅಪರಾಧಕ್ಕೆ ಸಂಬಂಧಿಸಿದಂತೆ ಆಪಾದಿತ ವ್ಯಕ್ತಿಯ ವಿರುದ್ಧ ಮತ್ತಷ್ಟು ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದಲ್ಲ ಮತ್ತು ಸದರಿ ಅಪರಾಧಕ್ಕೆ ಸಂಬಂಧಿಸಿದಂತೆ ಈಗಾಗಲೇ ಯಾವುದೇ ಕ್ರಿಮಿನಲ್ ವ್ಯವಹರಣೆಗಳನ್ನು ಪ್ರಾರಂಭಿಸಿದ್ದರೆ ಕೊನೆಗೊಳ್ಳತಕ್ಕದ್ದು.

## ಅಧ್ಯಾಯ XX

## ಮಧ್ಯಕಾಲೀನ ಉಪಬಂಧಗಳು

**139. ಈಗ ಇರುವ ತೆರಿಗೆದಾರರ ವಲಸೆ.–** (1) ಗೊತ್ತುಪಡಿಸಲಾದ ದಿನದಂದು ಮತ್ತು ದಿನದಿಂದ, ಅಸ್ತಿತ್ವದಲ್ಲಿರುವ ಯಾವುದೇ ಕಾನೂನುಗಳ ಅಡಿಯಲ್ಲಿ ನೋಂದಾಯಿತನಾಗಿರುವ ಮತ್ತು ಸಿಂಧುವಾದ, ಶಾಶ್ವತ ಖಾತೆ ಸಂಖ್ಯೆಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಗೆ, ಅಂಥ ಷರತ್ತುಗಳಿಗೆ ಒಳಪಟ್ಟು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ನೋಂದಣಿ ಪ್ರಮಾಣಪತ್ರವನ್ನು ತಾತ್ಕಾಲಿಕ ಆಧಾರದಲ್ಲಿ ನೀಡತಕ್ಕದ್ದು ಮತ್ತು ಅದು ಉಪಪ್ರಕರಣ (2)ರ ಅಡಿಯಲ್ಲಿ ಅಂತಿಮ ನೋಂದಣಿ ಪ್ರಮಾಣಪತ್ರದಿಂದ ಬದಲಾಯಿಸಿದ ಹೊರತು, ಹಾಗೆ ನಿಯಮಿಸಲಾದ ಷರತ್ತುಗಳನ್ನು ಪರಿಪಾಲಿಸದಿದ್ದರೆ, ರದ್ದು ಮಾಡುವುದಕ್ಕೆ ಗುರಿಯಾಗತಕ್ಕದ್ದು.

(2) ಅಂತಿಮ ನೋಂದಣಿ ಪ್ರಮಾಣಪತ್ರವನ್ನು, ಅಂಥ ಷರತ್ತುಗಳಿಗೆ ಒಳಪಟ್ಟು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ನೀಡತಕ್ಕದ್ದು.

(3) ಪ್ರಕರಣ 22ರ ಅಥವಾ ಪ್ರಕರಣ 24ರ ಅಡಿಯಲ್ಲಿ ಆತನು ನೋಂದಣಿಗೆ ಬದ್ಧನಾಗಿಲ್ಲವೆಂದು ಒಬ್ಬ ವ್ಯಕ್ತಿಯು ಸಲ್ಲಿಸಿರುವ ಅರ್ಜಿಗನುಸಾರವಾಗಿ, ಸದರಿ ನೋಂದಣಿಯನ್ನು ರದ್ದುಗೊಳಿಸಿದ್ದರೆ, ಅಂಥ ವ್ಯಕ್ತಿಗೆ ಉಪಪ್ರಕರಣ (1)ರ ಅಡಿಯಲ್ಲಿ ನೀಡಿದ ನೋಂದಣಿ ಪ್ರಮಾಣಪತ್ರವನ್ನು ನೀಡಿರುವುದಿಲ್ಲ ಎಂದು ಭಾವಿಸತಕ್ಕದ್ದು.

**140. ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗಾಗಿ ಮಧ್ಯಕಾಲೀನ ವ್ಯವಸ್ಥೆಗಳು.–** (1) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡಿರುವ ವ್ಯಕ್ತಿಯನ್ನು ಹೊರತುಪಡಿಸಿ ನೋಂದಾಯಿತ ವ್ಯಕ್ತಿಯು, ಗೊತ್ತುಪಡಿಸಲಾದ ದಿನದ ನಿಕಟಪೂರ್ವ ದಿನದಂದು ಕೊನೆಗೊಳ್ಳುವ ಅವಧಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಆತನು ಒದಗಿಸಿದ ರಿಟರ್ನ್‌ನಲ್ಲಿ ಮುಂದಕ್ಕೆ ಅರ್ಹ ಸುಂಕಗಳನ್ನು ಹಾಕಿದ ಕೇಂದ್ರ ಮೌಲ್ಯವರ್ಧಿತ ತೆರಿಗೆಯ ಮೊತ್ತದ ಜಮೆ ಏನಾದರೂ ಇದ್ದರೆ, ಅದನ್ನು ವಿದ್ಯುನ್ಮಾನ ರಿಯಾಯಿತಿ ಖಾತೆಯಲ್ಲಿ ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ವಿಧಾನದಲ್ಲಿ ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಕೆಳಕಂಡ ಸನ್ನಿವೇಶಗಳಲ್ಲಿ, ಎಂದರೆ:–

(i) ಸದರಿ ರಿಯಾಯಿತಿ ಮೊತ್ತವು ಈ ಅಧಿನಿಯಮದ ಅಡಿಯಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಆಗಿ ಅಂಗೀಕಾರಾರ್ಹವಾಗಿರದಿದ್ದಲ್ಲಿ; ಅಥವಾ

(ii) ಆತನು, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಗೊತ್ತುಪಡಿಸಲಾದ ದಿನದ ನಿಕಟಪೂರ್ವ ದಿನದಿಂದ ಆರು ತಿಂಗಳ ಅವಧಿಗೆ ಅಗತ್ಯವಿರುವ ಎಲ್ಲಾ ರಿಟರ್ನ್‌ಗಳನ್ನು ಒದಗಿಸಿರದಿದ್ದಲ್ಲಿ:

(iii) ಅಂಥ ರಿಯಾಯಿತಿ ಮೊತ್ತವು, ಸರ್ಕಾರವು ಅಧಿಸೂಚಿಸಿದಂಥ ಅಂಥ ವಿನಾಯಿತಿ ಅಧಿಸೂಚನೆಗಳ ಮೇರೆಗೆ ತಯಾರಿಸಿದ ಮತ್ತು ತೀರುವಳಿ ಮಾಡಿದ ಸರಕುಗಳಿಗೆ ಸಂಬಂಧಿಸಿದ್ದಲ್ಲಿ

– ರಿಯಾಯಿತಿಯನ್ನು ತೆಗೆದುಕೊಳ್ಳಲು ನೋಂದಾಯಿತ ವ್ಯಕ್ತಿಗೆ ಅವಕಾಶ ನೀಡತಕ್ಕದ್ದಲ್ಲ.

(2) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡಿರುವ ವ್ಯಕ್ತಿಯನ್ನು ಹೊರತುಪಡಿಸಿ, ನೋಂದಾಯಿತ ವ್ಯಕ್ತಿಯು, ಗೊತ್ತುಪಡಿಸಿದ ದಿನದ ನಿಕಟಪೂರ್ವ ದಿನದಂದು ಕೊನೆಗೊಳ್ಳುವ ಅವಧಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಆತನು ಒದಗಿಸಿರುವ ರಿಟರ್ನ್‌ನಲ್ಲಿ, ಮುಂದಕ್ಕೆ ಹಾಕಿಲ್ಲದ ಮೂಲ ಸರಕುಗಳಿಗೆ ಸಂಬಂಧಿಸಿದ, ತೆಗೆದುಕೊಂಡಿರದ ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿಯನ್ನು ಆತನ ವಿದ್ಯುನ್ಮಾನ ರಿಯಾಯಿತಿ ಖಾತೆಯಲ್ಲಿ ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ವಿಧಾನದಲ್ಲಿ ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಸದರಿ ರಿಯಾಯಿತಿಯು ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿ ಎಂದು ಅಂಗೀಕಾರಾರ್ಹವಾಗಿದ್ದ ಮತ್ತು ಈ ಅಧಿನಿಯಮದ ಅಡಿಯಲ್ಲಿಯೂ ಸಹ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಎಂದು ಅಂಗೀಕಾರಾರ್ಹವಾಗಿರುವ ಹೊರತು, ಸದರಿ ನೋಂದಾಯಿತ ವ್ಯಕ್ತಿಗೆ ರಿಯಾಯಿತಿಯನ್ನು ಪಡೆದುಕೊಳ್ಳಲು ಅವಕಾಶ ನೀಡತಕ್ಕದ್ದಲ್ಲ.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಪದಾವಳಿಯಾದ "ತೆಗೆದುಕೊಂಡಿರದ ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿ" ಎಂದರೆ, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸದರಿ ಮೂಲ ಸರಕುಗಳಿಗೆ ಸಂಬಂಧಿಸಿದಂತೆ ತೆರಿಗೆದಾಯಕ ವ್ಯಕ್ತಿಯು ಹಕ್ಕುಳ್ಳ ಸಮಗ್ರ ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿ ಮೊತ್ತದಿಂದ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಮೂಲ ಸರಕುಗಳಿಗೆ ಸಂಬಂಧಿಸಿದಂತೆ ಸದರಿ ವ್ಯಕ್ತಿಯಿಂದ ಈಗಾಗಲೇ ತೆಗೆದುಕೊಂಡ ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿ ಮೊತ್ತವನ್ನು ಕಳೆದ ನಂತರ ಉಳಿಯುವ ಮೊತ್ತವಾಗಿದೆ.

(3) ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ನೋಂದಣಿಗೆ ಬದ್ಧನಾಗಿಲ್ಲದ ವ್ಯಕ್ತಿಯು ಅಥವಾ ವಿನಾಯಿತಿಗೊಳಿಸಿರುವ ಸರಕುಗಳ ತಯಾರಿಕೆಯಲ್ಲಿ ಅಥವಾ ವಿನಾಯಿತಿಗೊಳಿಸಿದ ಸೇವೆಗಳನ್ನು ಒದಗಿಸುವಲ್ಲಿ ತೊಡಗಿರುವ ಅಥವಾ ಕಾಮಗಾರಿಗಳ ಗುತ್ತಿಗೆ ಸೇವೆಯನ್ನು ಒದಗಿಸುವ ಮತ್ತು ಸೇವಾ ತೆರಿಗೆ ಅಧಿಸೂಚನೆ ಸಂಖ್ಯೆ 26/2012, ದಿನಾಂಕ 20ನೇ ಜೂನ್ 2012ರ ಸೌಲಭ್ಯವನ್ನು ಬಳಸಿಕೊಂಡಿರುವ ಅಥವಾ ಮೊದಲ ಹಂತದ ಡೀಲರ್ ಅಥವಾ ಒಬ್ಬ 2ನೇ ಹಂತದ ಡೀಲರ್ ಅಥವಾ ನೋಂದಾಯಿತ ಆಮದುದಾರ ಅಥವಾ ತಯಾರಕರ ಮಳಿಗೆದಾರನಾಗಿರುವ ನೋಂದಾಯಿತ ವ್ಯಕ್ತಿಯು, ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ವಿಧಾನದಲ್ಲಿ ನೇಮಕವಾದ ದಿನದಂದು ದಾಸ್ತಾನಿನಲ್ಲಿರುವ ಇನ್‌ಪುಟ್ಸ್‌ಗಳು ಮತ್ತು ದಾಸ್ತಾನಿನಲ್ಲಿರುವ ಅರೆ ಸಿದ್ಧ ಅಥವಾ ಸಿದ್ಧ ಸರಕುಗಳು ಒಳಗೊಂಡಿರುವ ಇನ್‌ಪುಟ್ಸ್‌ಗಳಿಗೆ ಸಂಬಂಧಿಸಿದಂತೆ ಅರ್ಹ ಸುಂಕಗಳ ರಿಯಾಯಿತಿಯನ್ನು, ಆತನ ವಿದ್ಯುನ್ಮಾನ ರಿಯಾಯಿತಿ ಖಾತೆಯಿಂದ ಪಡೆದುಕೊಳ್ಳಲು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಹಕ್ಕುಳ್ಳವನಾಗಿರತಕ್ಕದ್ದು, ಎಂದರೆ:–

(i) ಈ ಅಧಿನಿಯಮದ ಅಡಿಯಲ್ಲಿ ತೆರಿಗೆದಾಯಕ ಪೂರೈಕೆಗಳಾಗುವಂತೆ ಮಾಡುವುದಕ್ಕೆ ಉಪಯೋಗಿಸಿರುವ ಅಥವಾ ಉಪಯೋಗಿಸಲು ಉದ್ದೇಶಿಸಿರುವ ಅಂಥ ಇನ್‌ಪುಟ್ಸ್‌ಗಳು ಅಥವಾ ಸರಕುಗಳು ಆಗಿರಬೇಕು;

(ii) ಸದರಿ ನೋಂದಾಯಿತ ವ್ಯಕ್ತಿಯು, ಅಂಥ ಉತ್ಪಾದಿತ ಸರಕುಗಳ ಮೇಲಿನ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗೆ ಈ ಅಧಿನಿಯಮದ ಅಡಿಯಲ್ಲಿ ಅರ್ಹನಿರತಕ್ಕದ್ದು;

(iii) ಸದರಿ ನೋಂದಾಯಿತ ವ್ಯಕ್ತಿಯು, ಅಂಥ ಇನ್‌ಪುಟ್ಸ್‌ಗಳಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸುಂಕವನ್ನು ಸಂದಾಯ ಮಾಡಿರುವುದರ ಪುರಾವೆಯಾಗಿ ದರಪಟ್ಟಿ ಅಥವಾ ನಿಯಮಿಸಲಾದ ಇತರೆ ದಸ್ತಾವೇಜುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರತಕ್ಕದ್ದು; ಮತ್ತು

(iv) ಅಂಥ ದರಪಟ್ಟಿಗಳನ್ನು ಅಥವಾ ನಿಯಮಿಸಲಾದ ಇತರೆ ದಸ್ತಾವೇಜುಗಳನ್ನು ಗೊತ್ತುಪಡಿಸಲಾದ ದಿನದ ನಿಕಟಪೂರ್ವದ ಹನ್ನೆರಡು ತಿಂಗಳುಗಳಿಗೆ ಮುಂಚಿತವಾಗಿ ನೀಡತಕ್ಕದ್ದಲ್ಲ;

(v) ಸೇವೆಗಳ ಪೂರೈಕೆದಾರನು, ಈ ಅಧಿನಿಯಮದ ಮೇರೆಗೆ ಯಾವುದೇ ರಿಯಾಯಿತಿಗೆ ಕಡಿಮೆ ಮಾಡುವುದಕ್ಕೆ ಅರ್ಹನಾಗತಕ್ಕದ್ದಲ್ಲ:

ಪರಂತು, ಉತ್ಪಾದಕನನ್ನು ಅಥವಾ ಸೇವೆಗಳ ಪೂರೈಕೆದಾರನನ್ನು ಹೊರತುಪಡಿಸಿ, ನೋಂದಾಯಿತ ವ್ಯಕ್ತಿಯು ಇನ್‌ಪುಟ್ಸ್‌ಗಳಿಗೆ ಸಂಬಂಧಿಸಿದಂತೆ ಸುಂಕವನ್ನು ಸಂದಾಯ ಮಾಡಿರುವುದರ ಪುರಾವೆಯಾಗಿ ದರಪಟ್ಟಿ ಅಥವಾ ನಿಯಮಿಸಲಾದ ಇತರೆ ದಸ್ತಾವೇಜುಗಳ ಸ್ವಾಧೀನತೆಯನ್ನು ಹೊಂದಿರದಿದ್ದಲ್ಲಿ, ಸದರಿ ತೆರಿಗೆದಾಯಕ ವ್ಯಕ್ತಿಯು, ಅಂಥ ಅನುಕೂಲವನ್ನು ಸ್ವೀಕರಿಸುವವನಿಗೆ ಬೆಲೆಯಲ್ಲಿನ ಇಳಿಕೆಯ ರೂಪದಲ್ಲಿ ವರ್ಗಾಯಿಸತಕ್ಕದ್ದೆಂಬುದನ್ನು ಒಳಗೊಂಡಂತೆ ನಿಯಮಿಸಬಹುದಾದ ಅಂಥ ಷರತ್ತುಗಳು, ಮಿತಿಗಳು ಮತ್ತು ರಕ್ಷಣಾ ಕ್ರಮಗಳಿಗೆ ಒಳಪಟ್ಟು ಅಂಥ ನೋಂದಾಯಿತ ವ್ಯಕ್ತಿಗೆ ನಿಯಮಿಸಬಹುದಾದಂಥ ದರದಲ್ಲಿ ಮತ್ತು ಅಂಥ ವಿಧಾನದಲ್ಲಿ ರಿಯಾಯಿತಿಯನ್ನು ಪಡೆದುಕೊಳ್ಳಲು ಅವಕಾಶ ನೀಡತಕ್ಕದ್ದು.

(4) ಕೇಂದ್ರ ಉತ್ಪಾದನಾ ಅಧಿನಿಯಮ, 1944 (1944ರ 1)ರ ಅಥವಾ ಆರ್ಥಿಕ ಅಧಿನಿಯಮ, 1994 (1994ರ 32)ರ ಅಧ್ಯಾಯ–V ರ ಅಡಿಯಲ್ಲಿ, ತೆರಿಗೆದಾಯಕ ಸರಕುಗಳ ಜೊತೆಗೆ ಯಾವುದಾದರೂ ಹೆಸರಿನಿಂದ ಕರೆಯುವ ವಿನಾಯಿತಿ ಸರಕುಗಳು ಅಥವಾ ತೆರಿಗೆ ಮುಕ್ತ ಸರಕುಗಳು, ಆದರೆ ಅವುಗಳು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾಗುವ ಸರಕುಗಳ ಮಾರಾಟದಲ್ಲಿ ತೊಡಗಿರುವ ನೋಂದಾಯಿತ ವ್ಯಕ್ತಿಯು, ಆತನ ವಿದ್ಯುನ್ಮಾನ ರಿಯಾಯಿತಿ ಖಾತೆಯಲ್ಲಿ ಈ ಕೆಳಕಂಡ ರಿಯಾಯಿತಿಯನ್ನು ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು,–

(ಎ) ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಆತನು ಸಲ್ಲಿಸಿದ ರಿಟರ್ನ್‌ನಲ್ಲಿ ಮುಂದಕ್ಕೆ ಹಾಕಲಾದ ಕೇಂದ್ರ ಮೌಲ್ಯವರ್ಧಿತ ತೆರಿಗೆಯ ರಿಯಾಯಿತಿಯ ಮೊತ್ತ ಏನಾದರೂ ಇದ್ದರೆ; ಮತ್ತು

(ಬಿ) ಯಾವುದಾದರೂ ಹೆಸರಿನಿಂದ ಕರೆಯುವ ಅಂಥ ವಿನಾಯಿತಿ ಸರಕುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಪಟ್ಟಂತೆ, ಉಪಪ್ರಕರಣ (3)ರ ಉಪಬಂಧಗಳಿಗೆ ಅನುಸಾರವಾಗಿ ಗೊತ್ತುಪಡಿಸಿದ ದಿನದಂದು ದಾಸ್ತಾನಿನಲ್ಲಿರುವ ಇನ್‌ಪುಟ್ಸ್‌ಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧ ಅಥವಾ ಸಿದ್ಧ ಸರಕುಗಳು ಒಳಗೊಂಡಿರುವ ಇನ್‌ಪುಟ್ಸ್‌ಗಳಿಗೆ ಸಂಬಂಧಿಸಿದ ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿ ಮೊತ್ತ ಏನಾದರೂ ಇದ್ದರೆ.

(5) ನೋಂದಾಯಿತ ವ್ಯಕ್ತಿಯು, ಗೊತ್ತುಪಡಿಸಿದ ದಿನದಂದು ಅಥವಾ ಅದರ ನಂತರ ಸ್ವೀಕರಿಸಿದ, ಆದರೆ ಅವುಗಳಿಗೆ ಸಂಬಂಧಿಸಿದ ಸುಂಕ ಅಥವಾ ತೆರಿಗೆಯು ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಪೂರೈಕೆದಾರನು ಸಂದಾಯ ಮಾಡಿರುವ ಇನ್‌ಪುಟ್ಸ್‌ಗಳಿಗೆ ಅಥವಾ ಇನ್‌ಪುಟ್ ಸೇವೆಗಳಿಗೆ ಸಂಬಂಧಿಸಿದ ಅರ್ಹ ಸುಂಕಗಳ ಅಥವಾ ತೆರಿಗೆಗಳ ರಿಯಾಯಿತಿ

ಏನಾದರೂ ಇದ್ದರೆ ಅದನ್ನು ಅದರ ದರಪಟ್ಟಿ ಅಥವಾ ಯಾವುದೇ ಇತರೆ ಸುಂಕ ಅಥವಾ ತೆರಿಗೆ ಸಂದಾಯದ ಇತರ ದಸ್ತಾವೇಜುಗಳನ್ನು ಗೊತ್ತುಪಡಿಸಿದ ದಿನದಿಂದ ಮೂವತ್ತು ದಿನಗಳ ಒಳಗಾಗಿ ಅಂಥ ವ್ಯಕ್ತಿಯು ತನ್ನ ಲೆಕ್ಕಪುಸ್ತಕಗಳಲ್ಲಿ ನಮೂದಿಸಬೇಕೆಂಬ ಷರತ್ತಿಗೆ ಒಳಪಟ್ಟು ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ವಿಧಾನದಲ್ಲಿ ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಆತನ ವಿದ್ಯುನ್ಮಾನ ರಿಯಾಯಿತಿ ಖಾತೆಗೆ ತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಮೂವತ್ತು ದಿನಗಳ ಅವಧಿಯನ್ನು, ಸಾಕಷ್ಟು ಕಾರಣಗಳನ್ನು ತೋರಿಸಲಾಗಿದ್ದರೆ, ಮೂವತ್ತು ದಿನಗಳಿಗೆ ಮೀರದ ಹೆಚ್ಚಿನ ಅವಧಿಗೆ ಆಯುಕ್ತರು ವಿಸ್ತರಿಸಬಹುದು:

ಮತ್ತು ಪರಂತು, ಸದರಿ ನೋಂದಾಯಿತ ವ್ಯಕ್ತಿಯು, ಈ ಉಪಪ್ರಕರಣದ ಅಡಿಯಲ್ಲಿ ಪಡೆದುಕೊಂಡ ರಿಯಾಯಿತಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ವಿಧಾನದಲ್ಲಿ ವಿವರಣಾಪತ್ರವನ್ನು ಒದಗಿಸತಕ್ಕದ್ದು.

(6) ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ, ತೆರಿಗೆಯನ್ನು ಸ್ಥಿರ ದರದಲ್ಲಿ ಸಂದಾಯ ಮಾಡುತ್ತಿದ್ದ ಅಥವಾ ಸಂದಾಯ ಮಾಡಬೇಕಾದ ತೆರಿಗೆಗೆ ಬದಲಾಗಿ ಸ್ಥಿರ ಮೊತ್ತವನ್ನು ಸಂದಾಯ ಮಾಡುತ್ತಿದ್ದ, ಒಬ್ಬ ನೋಂದಾಯಿತ ವ್ಯಕ್ತಿಯು, ಗೊತ್ತುಪಡಿಸಿದ ದಿನದಂದು ದಾಸ್ತಾನಿನಲ್ಲಿರುವ ಇನ್‌ಪುಟ್ಸ್‌ಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧವಾದ ಅಥವಾ ಸಿದ್ಧರೂಪದ ಸರಕುಗಳು ಒಳಗೊಂಡಿರುವ ಇನ್‌ಪುಟ್ಸ್‌ಗಳಿಗೆ ಸಂಬಂಧಿಸಿದಂತೆ ಅರ್ಹ ಸುಂಕಗಳ ರಿಯಾಯಿತಿಯನ್ನು ಆತನ ವಿದ್ಯುನ್ಮಾನ ರಿಯಾಯಿತಿ ಖಾತೆಯಲ್ಲಿ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ವಿಧಾನದಲ್ಲಿ ಗೊತ್ತುಪಡಿಸಿದ ದಿನದಂದು ದಾಸ್ತಾನಿನಲ್ಲಿರುವ ಸರಕುಗಳನ್ನು ಪಡೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು, ಎಂದರೆ:–

(i) ಈ ಅಧಿನಿಯಮದ ಅಡಿಯಲ್ಲಿ ತೆರಿಗೆದಾಯಕ ಪೂರೈಕೆಗಳಿಗಾಗಿ ಉಪಯೋಗಿಸಿರುವ ಅಥವಾ ಉಪಯೋಗಿಸಲು ಉದ್ದೇಶಿಸಿರುವ ಅಂಥ ಇನ್‌ಪುಟ್ಸ್‌ಗಳು ಅಥವಾ ಸರಕುಗಳು;

(ii) ಸದರಿ ವ್ಯಕ್ತಿಯು, ಪ್ರಕರಣ 10ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುತ್ತಿರಬಾರದು;

(iii) ಸದರಿ ತೆರಿಗೆದಾಯಕ ವ್ಯಕ್ತಿಯು, ಅಂಥ ಇನ್‌ಪುಟ್ಸ್ ಮೇಲಿನ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗೆ ಈ ಅಧಿನಿಯಮದ ಅಡಿಯಲ್ಲಿ ಅರ್ಹನಿರಬೇಕು;

(iv) ಸದರಿ ತೆರಿಗೆದಾಯಕ ವ್ಯಕ್ತಿಯು, ಅಂಥ ಇನ್‌ಪುಟ್ಸ್‌ಗಳಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸುಂಕವನ್ನು ಸಂದಾಯ ಮಾಡಿರುವುದರ ಪುರಾವೆಯಾಗಿ ದರಪಟ್ಟಿ ಅಥವಾ ನಿಯಮಿಸಲಾದ ಇತರೆ ದಸ್ತಾವೇಜುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರಬೇಕು; ಮತ್ತು

(v) ಅಂಥ ದರಪಟ್ಟಿಗಳು ಅಥವಾ ನಿಯಮಿಸಲಾದ ಇತರೆ ದಸ್ತಾವೇಜುಗಳನ್ನು ಗೊತ್ತುಪಡಿಸಲಾದ ದಿನದ ನಿಕಟಪೂರ್ವದ ಹನ್ನೆರಡು ತಿಂಗಳುಗಳಿಗಿಂತ ಮುಂಚಿತವಾಗಿ ನೀಡಿರಬಾರದು.

(7) ಈ ಅಧಿನಿಯಮದಲ್ಲಿ ತದ್ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಇನ್‌ಪುಟ್ ಸೇವಾ ವಿತರಕನು ಗೊತ್ತುಪಡಿಸಿದ ದಿನಕ್ಕಿಂತ ಮುಂಚಿತವಾಗಿ ಸ್ವೀಕರಿಸಿದ ಯಾವುವೇ ಸೇವೆಗಳ ನಿಮಿತ್ತ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ಗೊತ್ತುಪಡಿಸಲಾದ

ದಿನದಂದು ಅಥವಾ ತರುವಾಯ ಸ್ವೀಕರಿಸಲಾಗಿದ್ದರೂ ಸಹ ದರಪಟ್ಟಿಗಳು ಅಂಥ ಸೇವೆಗಳಿಗೆ ಸಂಬಂಧಪಟ್ಟಿದ್ದರೆ ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ವಿಧಾನದಲ್ಲಿ ಈ ಅಧಿನಿಯಮದ ಮೇರೆಗೆ ಕ್ರೆಡಿಟ್ ಆಗಿ ವಿತರಿಸುವುದಕ್ಕೆ ಅರ್ಹನಿರತಕ್ಕದ್ದು.

(8) ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ, ಕೇಂದ್ರೀಕೃತ ನೋಂದಣಿ ಹೊಂದಿರುವ ನೋಂದಾಯಿತ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ನೋಂದಣಿ ಪಡೆದಿರುವಲ್ಲಿ, ಅಂಥ ವ್ಯಕ್ತಿಯು, ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ವಿಧಾನದಲ್ಲಿ ಗೊತ್ತುಪಡಿಸಲಾದ ದಿನದ ನಿಕಟಪೂರ್ವದ ದಿನಕ್ಕೆ ಮುಕ್ತಾಯವಾಗುವ ಅವಧಿಯ ಸಂಬಂಧದಲ್ಲಿ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಅವನು ಒದಗಿಸಿದ ರಿಟರ್ನ್‌ನಲ್ಲಿ (ವಿವರಪಟ್ಟಿಕೆಯಲ್ಲಿ) ಮುಂದಕ್ಕೆ ಒಯ್ಯಲಾದ ರಿಯಾಯಿತಿಯನ್ನು ಕೇಂದ್ರ ಮೌಲ್ಯವರ್ಧಿತ ತೆರಿಗೆ ಮೊತ್ತದ ಜಮೆಯನ್ನು ಅವನ ವಿದ್ಯುನ್ಮಾನ ಜಮಾ ಖಾತೆಯಲ್ಲಿ ತೆಗೆದುಕೊಳ್ಳುವುದಕ್ಕೆ ಅನುಮತಿಸತಕ್ಕದ್ದು:

ಪರಂತು, ನೋಂದಾಯಿತ ವ್ಯಕ್ತಿಯು, ಗೊತ್ತುಪಡಿಸಿದ ದಿನದಿಂದ ಮೂರು ತಿಂಗಳ ಅವಧಿಯೊಳಗಾಗಿ ಗೊತ್ತುಪಡಿಸಿದ ದಿನದ ನಿಕಟಪೂರ್ವ ದಿನಕ್ಕೆ ಮುಕ್ತಾಯವಾದ ಅವಧಿಗಾಗಿ ಆತನು ವಿವರಪಟ್ಟಿಕೆಗಳನ್ನು (ರಿಟರ್ನ್) ಒದಗಿಸಿದ್ದರೆ, ಅಂಥ ರಿಯಾಯಿತಿಯನ್ನು ಮುಂಚಿತವಾಗಿ ಕ್ಲೇಮು ಮಾಡಿರುವುದರಿಂದ, ರಿಯಾಯಿತಿಯನ್ನು ಕಡಿತಗೊಳಿಸಿದಲ್ಲಿ, ಮೂಲ ವಿವರಪಟ್ಟಿಕೆಯಲ್ಲಾಗಲಿ ಅಥವಾ ಪರಿಷ್ಕೃತ ವಿವರ ಪಟ್ಟಿಕೆಯಲ್ಲಾಗಲಿ, ಆ ಸದರಿ ವಿವರ ಪಟ್ಟಿಕೆಯ ಷರತ್ತಿಗೆ ಒಳಪಟ್ಟು ಅನುಮತಿಸತಕ್ಕದ್ದು:

ಮತ್ತು ಪರಂತು, ನೋಂದಾಯಿತ ವ್ಯಕ್ತಿಗೆ ಸದರಿ ಮೊಬಲಗನ್ನು ಈ ಅಧಿನಿಯಮದ ಅಡಿಯಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಆಗಿ ಅಂಗೀಕರಿಸಿದ ಹೊರತು, ರಿಯಾಯಿತಿ ಪಡೆದುಕೊಳ್ಳುವುದಕ್ಕೆ ಅನುಮತಿಸತಕ್ಕದ್ದಲ್ಲ:

ಮತ್ತೂ ಪರಂತು, ಅಂಥ ರಿಯಾಯಿತಿಯನ್ನು ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಕೇಂದ್ರೀಕೃತ ನೋಂದಣಿ ಪಡೆದಿರುವ ಅದೇ ಖಾಯಂ ಖಾತೆ ಸಂಖ್ಯೆಯನ್ನು ಹೊಂದಿರುವ ಯಾರೇ ನೋಂದಾಯಿತ ವ್ಯಕ್ತಿಗಳಿಗೆ ವರ್ಗಾಯಿಸಬಹುದು.

(9) ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಒದಗಿಸಿದ ಇನ್‌ಪುಟ್ ಸೇವೆಗಳಿಗಾಗಿ ಲಭ್ಯವಾದ ಯಾವುದೇ ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿಯನ್ನು ಮೂರು ತಿಂಗಳುಗಳ ಅವಧಿಯೊಳಗೆ, ಪ್ರತಿಫಲವನ್ನು ಸಂದಾಯ ಮಾಡದಿರುವ ಕಾರಣದಿಂದಾಗಿ ವ್ಯತಿರಿಕ್ತಗೊಳಿಸಿದ್ದರೆ, ಅಂಥ ರಿಯಾಯಿತಿಯನ್ನು, ಷರತ್ತಿಗೆ ಒಳಪಟ್ಟು ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ವಿಧಾನದಲ್ಲಿ ಕ್ರೆಡಿಟನ್ನು ಪುನಃ ಕ್ಲೇಮು ಮಾಡಬಹುದಾದಂಥ ಗೊತ್ತುಪಡಿಸಿದ ದಿನದಿಂದ ಮೂರು ತಿಂಗಳುಗಳ ಅವಧಿಯೊಳಗಾಗಿ, ಆ ಸೇವೆಗಳ ಪೂರೈಕೆಗಾಗಿ ಪ್ರತಿಫಲದ ಹಣವನ್ನು ನೋಂದಾಯಿತ ವ್ಯಕ್ತಿಯು ಸಂದಾಯ ಮಾಡುವ ಷರತ್ತಿಗೆ ಒಳಪಟ್ಟು ಪುನಃ ಕ್ಲೇಮು ಮಾಡಬಹುದು.

(10) ಉಪಪ್ರಕರಣ (3), (4) ಮತ್ತು (6)ರ ಅಡಿಯಲ್ಲಿನ ರಿಯಾಯಿತಿಯ ಮೊಬಲಗನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಲೆಕ್ಕಹಾಕತಕ್ಕದ್ದು.

**ವಿವರಣೆ 1.–** ಉಪಪ್ರಕರಣ (3), (4) ಮತ್ತು (6)ರ ಉದ್ದೇಶಗಳಿಗಾಗಿ ``ಅರ್ಹ ಸುಂಕಗಳು'' ಎಂದರೆ:–

(i) ಅಧಿಕ ಉತ್ಪಾದನಾ ಶುಲ್ಕಗಳ (ವಿಶೇಷ ಮಹತ್ವದ ಸರಕುಗಳ) ಅಧಿನಿಯಮ, 1957 (1957 ರ 58)ರ ಪ್ರಕರಣ 3ರ ಅಡಿಯಲ್ಲಿ ವಿಧಿಸಬಹುದಾದ ಅಧಿಕ ಉತ್ಪಾದನಾ ಶುಲ್ಕ;

(ii) ಸೀಮಾ ಸುಂಕಗಳ ಟ್ಯಾರಿಫ್ ಅಧಿನಿಯಮ, 1975 (1975 ರ 51)ರ ಪ್ರಕರಣ 3ರ ಉಪಪ್ರಕರಣ (1)ರ ಅಡಿಯಲ್ಲಿ ವಿಧಿಸಬಹುದಾದ ಹೆಚ್ಚುವರಿ ಸುಂಕ;

(iii) ಸೀಮಾ ಸುಂಕಗಳ ಟ್ಯಾರಿಫ್ ಅಧಿನಿಯಮ, 1975 (1975ರ 51)ರ ಪ್ರಕರಣ 3ರ ಉಪಪ್ರಕರಣ (5)ರ ಅಡಿಯಲ್ಲಿ ವಿಧಿಸಬಹುದಾದ ಹೆಚ್ಚುವರಿ ಸುಂಕ;

(iv) ****;

(v) ಕೇಂದ್ರ ಉತ್ಪಾದನಾ ಶುಲ್ಕ ಟ್ಯಾರಿಫ್ ಅಧಿನಿಯಮ, 1985 (1986 ರ 5)ರ ಮೊದಲ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಉತ್ಪಾದನಾ ಶುಲ್ಕ;

(vi) ಕೇಂದ್ರ ಉತ್ಪಾದನಾ ಶುಲ್ಕ ಟ್ಯಾರಿಫ್ ಅಧಿನಿಯಮ, 1985 (1986 ರ 5)ರ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಉತ್ಪಾದನಾ ಶುಲ್ಕ; ಮತ್ತು

(vii) ಹಣಕಾಸು ಅಧಿನಿಯಮ, 2001 (2001 ರ 14)ರ ಪ್ರಕರಣ 136ರ ಅಡಿಯಲ್ಲಿ ವಿಧಿಸಬಹುದಾದ ರಾಷ್ಟ್ರೀಯ ವಿಪತ್ತು ಸಾದಿಲ್ವಾರು ಸುಂಕ

– ಗೊತ್ತುಪಡಿಸಿದ ದಿನದಂದು ದಾಸ್ತಾನಿನಲ್ಲಿರುವ ಇನ್‌ಪುಟ್ಸ್‌ಗಳ ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧ ಅಥವಾ ಸಿದ್ಧ ಸರಕುಗಳು ಒಳಗೊಂಡಿರುವ ಇನ್‌ಪುಟ್ಸ್‌ಗಳ ಸಂಬಂಧದಲ್ಲಿ.

**ವಿವರಣೆ 2.–** ಉಪಪ್ರಕರಣ (5)ರ ಉದ್ದೇಶಗಳಿಗಾಗಿ, "ಅರ್ಹ ಸುಂಕಗಳು ಮತ್ತು ತೆರಿಗೆಗಳು" ಎಂದರೆ:–

(i) ಅಧಿಕ ಉತ್ಪಾದನಾ ಶುಲ್ಕಗಳ (ವಿಶೇಷ ಮಹತ್ವದ ಸರಕುಗಳ) ಅಧಿನಿಯಮ, 1957 (1957 ರ 58)ರ ಪ್ರಕರಣ 3ರ ಅಡಿಯಲ್ಲಿ ವಿಧಿಸಬಹುದಾದ ಅಧಿಕ ಉತ್ಪಾದನಾ ಶುಲ್ಕ;

(ii) ಸೀಮಾ ಸುಂಕಗಳ ಟ್ಯಾರಿಫ್ ಅಧಿನಿಯಮ, 1975 (1975 ರ 51)ರ ಪ್ರಕರಣ 3ರ ಉಪಪ್ರಕರಣ (1)ರ ಅಡಿಯಲ್ಲಿ ವಿಧಿಸಬಹುದಾದ ಹೆಚ್ಚುವರಿ ಸುಂಕ;

(iii) ಸೀಮಾ ಸುಂಕಗಳ ಟ್ಯಾರಿಫ್ ಅಧಿನಿಯಮ, 1975 (1975 ರ 51)ರ ಪ್ರಕರಣ 3ರ ಉಪಪ್ರಕರಣ (5)ರ ಅಡಿಯಲ್ಲಿ ವಿಧಿಸಬಹುದಾದ ಹೆಚ್ಚುವರಿ ಸುಂಕ;

(iv) ****;

(v) ಕೇಂದ್ರ ಉತ್ಪಾದನಾ ಶುಲ್ಕ ಟ್ಯಾರಿಫ್ ಅಧಿನಿಯಮ, 1985 (1986 ರ 5)ಕ್ಕೆ ಮೊದಲ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಉತ್ಪಾದನಾ ಶುಲ್ಕ;

(vi) ಕೇಂದ್ರ ಉತ್ಪಾದನಾ ಶುಲ್ಕ ಟ್ಯಾರಿಫ್ ಅಧಿನಿಯಮ, 1985 (1986 ರ 5)ಕ್ಕೆ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಉತ್ಪಾದನಾ ಶುಲ್ಕ; ಮತ್ತು

(vii) ಹಣಕಾಸು ಅಧಿನಿಯಮ, 2001 (2001 ರ 14)ರ ಪ್ರಕರಣ 136ರ ಅಡಿಯಲ್ಲಿ ವಿಧಿಸಬಹುದಾದ ರಾಷ್ಟ್ರೀಯ ವಿಪತ್ತು ಸಾದಿಲ್ವಾರು ಸುಂಕ; ಮತ್ತು

(viii) ಹಣಕಾಸು ಅಧಿನಿಯಮ, 1994 (1994 ರ 32)ರ ಪ್ರಕರಣ 66ಬಿ ಯ ಅಡಿಯಲ್ಲಿ ವಿಧಿಸಬಹುದಾದ ಸೇವಾ ತೆರಿಗೆ

– ಗೊತ್ತುಪಡಿಸಲಾದ ದಿನದಂದು ಅಥವಾ ಆ ತರುವಾಯ ಸ್ವೀಕರಿಸಿದ ಇನ್‌ಪುಟ್ಸ್‌ಗಳು ಮತ್ತು ಇನ್‌ಪುಟ್ ಸೇವೆಗಳ ಸಂಬಂಧದಲ್ಲಿ.

**ವಿವರಣೆ 3.–** ಸಂದೇಹಗಳ ನಿವಾರಣೆಗಾಗಿ, "ಅರ್ಹ ಸುಂಕಗಳು ಮತ್ತು ತೆರಿಗೆಗಳು" ಎಂಬ ಅಭಿವ್ಯಕ್ತಿಯು ವಿವರಣೆ 1 ಅಥವಾ ವಿವರಣೆ 2 ರಲ್ಲಿ ನಿರ್ದಿಷ್ಟಪಡಿಸದೇ ಇರುವ ಯಾವುದೇ ಕರವನ್ನು ಸೀಮಾ ಸುಂಕಗಳ ಟ್ಯಾರಿಫ್ ಅಧಿನಿಯಮ, 1978 (1975 ರ 51)ರ ಪ್ರಕರಣ 3ರ ಉಪಪ್ರಕರಣ (1)ರ ಮೇರೆಗೆ ಹೆಚ್ಚುವರಿ ಸೀಮಾ ಸುಂಕಗಳಾಗಿ ಸಂಗ್ರಹಿಸಲಾಗುವ ಯಾವುದೇ ಕರವನ್ನು ಹೊರತುಪಡಿಸುತ್ತದೆ ಎಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

**141. ಮಜೂರಿ ಕೆಲಸಕ್ಕೆ ಸಂಬಂಧಿಸಿದಂತೆ ಮಧ್ಯಕಾಲೀನ ಉಪಬಂಧಗಳು.–** (1) ವ್ಯವಹಾರ ಸ್ಥಳದಲ್ಲಿ, ಸ್ವೀಕರಿಸಿರುವ ಯಾವುದೇ ಇನ್‌ಪುಟ್ಸ್‌ಗಳನ್ನು ವರ್ಗಾಯಿಸಲಾಗಿದ್ದಲ್ಲಿ ಅಥವಾ ಭಾಗಶಃ ಸಂಸ್ಕರಿಸಿದ ನಂತರ ಮುಂದಿನ ಸಂಸ್ಕರಣೆಗಾಗಿ, ಪರೀಕ್ಷೆಗಾಗಿ, ದುರಸ್ತಿಗಾಗಿ, ಪೂರ್ವಸ್ಥಿತಿಗೆ ತರುವುದಕ್ಕಾಗಿ ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ನಿರ್ದಿಷ್ಟ ಕೆಲಸಗಾರನಿಗೆ ಗೊತ್ತುಪಡಿಸಿದ ದಿನಕ್ಕಿಂತ ಮುಂಚೆ ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ಹಾಗೆ ವರ್ಗಾಯಿಸಿದ್ದಲ್ಲಿ ಮತ್ತು ಅಂಥ ಇನ್‌ಪುಟ್ಸ್‌ಗಳು ಸದರಿ ಸ್ಥಳಕ್ಕೆ ಗೊತ್ತುಪಡಿಸಿದ ದಿನದಂದು ಅಥವಾ ನಂತರ ವಾಪಸ್ಸಾಗಿದ್ದಾಗ ಅಂಥ ಇನ್‌ಪುಟ್ಸ್‌ಗಳು ನಿರ್ದಿಷ್ಟ ಕೆಲಸ ಪೂರ್ಣಗೊಂಡ ನಂತರ ಅಥವಾ ಅನ್ಯಥಾ ಆರು ತಿಂಗಳುಗಳ ಒಳಗಾಗಿ ಸದರಿ ಸ್ಥಳಕ್ಕೆ ವಾಪಸ್ಸಾಗಿದ್ದರೆ, ಯಾವುದೇ ತೆರಿಗೆಯು ಸಂದಾಯವಾಗತಕ್ಕದ್ದಲ್ಲ:

ಪರಂತು, ಆರು ತಿಂಗಳುಗಳ ಅವಧಿಯನ್ನು, ಸಾಕಷ್ಟು ಕಾರಣಗಳನ್ನು, ತೋರಿಸಿದ್ದರೆ ಎರಡು ತಿಂಗಳುಗಳಿಗೆ ಮೀರದ ಹೆಚ್ಚಿನ ಅವಧಿಗೆ ಆಯುಕ್ತರು ವಿಸ್ತರಿಸಬಹುದು:

ಮತ್ತು ಪರಂತು, ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಒಳಗಾಗಿ ಅಂಥ ಇನ್‌ಪುಟ್ಸ್‌ಗಳ ವಾಪಸ್ಸಾಗದಿದ್ದರೆ, ಪ್ರಕರಣ 142ರ ಉಪಪ್ರಕರಣ (8)ರ ಖಂಡ (ಎ)ಯ ಉಪಬಂಧಗಳಿಗೆ ಅನುಸಾರವಾಗಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ವಸೂಲ್ಮಾಡುವುದಕ್ಕೆ ಗುರಿಯಾಗತಕ್ಕದ್ದು.

(2) ಯಾವುದೇ ಅರೆ–ಸಿದ್ಧ ಸರಕುಗಳನ್ನು ವ್ಯವಹಾರ ಸ್ಥಳದಿಂದ ಯಾವುದೇ ಇತರ ವ್ಯವಹಾರ ಸ್ಥಳಗಳಿಗೆ, ಕೆಲವು ಉತ್ಪಾದನಾ ಸಂಸ್ಕರಣೆಗಳನ್ನು ಮಾಡುವುದಕ್ಕಾಗಿ ಗೊತ್ತುಪಡಿಸಿದ ದಿನಕ್ಕಿಂತ ಮುಂಚೆ ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ವರ್ಗಾಯಿಸಲಾಗಿದ್ದಲ್ಲಿ ಮತ್ತು ಅಂಥ ಸರಕುಗಳು (ಈ ಪ್ರಕರಣದಲ್ಲಿ ಇನ್ನು ಮುಂದೆ "ಸದರಿ ಸರಕುಗಳು" ಎಂದು ಉಲ್ಲೇಖಿಸಲಾಗಿದೆ) ಸದರಿ ಸ್ಥಳಕ್ಕೆ, ಗೊತ್ತುಪಡಿಸಿದ ದಿನದಂದು ಅಥವಾ ನಂತರ ವಾಪಸ್ಸಾಗಿದ್ದಾಗ ಸದರಿ

ಸರಕುಗಳು ಉತ್ಪಾದನಾ ಸಂಸ್ಕರಣೆಗೆ ಒಳಗಾದ ನಂತರ ಅಥವಾ ಅನ್ಯಥಾ ಆರು ತಿಂಗಳುಗಳ ಒಳಗಾಗಿ ಸದರಿ ಸ್ಥಳಕ್ಕೆ ವಾಪಸ್ಸಾಗಿದ್ದರೆ, ಯಾವುದೇ ತೆರಿಗೆಯು ಸಂದಾಯವಾಗತಕ್ಕದ್ದಲ್ಲ:

ಪರಂತು, ಆರು ತಿಂಗಳುಗಳ ಅವಧಿಯನ್ನು, ಸಾಕಷ್ಟು ಕಾರಣಗಳನ್ನು ತೋರಿಸಿದ್ದರೆ, ಎರಡು ತಿಂಗಳುಗಳಿಗೆ ಮೀರದ ಹೆಚ್ಚಿನ ಅವಧಿಗೆ ಆಯುಕ್ತರು ವಿಸ್ತರಿಸಬಹುದು:

ಮತ್ತು ಪರಂತು, ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಒಳಗಾಗಿ ಅಂಥ ಸದರಿ ಸರಕುಗಳು ವಾಪಸ್ಸಾಗದಿದ್ದರೆ, ಪ್ರಕರಣ 142ರ ಉಪಪ್ರಕರಣ (8)ರ ಖಂಡ (ಎ)ಯ ಉಪಬಂಧಗಳಿಗೆ ಅನುಸಾರವಾಗಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ವಸೂಲ್ಮಾಡುವುದಕ್ಕೆ ಗುರಿಯಾಗತಕ್ಕದ್ದು:

ಮತ್ತೂ ಪರಂತು, ಸರಕುಗಳ ತಯಾರಕನು ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ, ಸದರಿ ಸರಕುಗಳನ್ನು ನೋಂದಾಯಿತ ಯಾರೇ ವ್ಯಕ್ತಿಯ ಆವರಣಗಳಿಗೆ ಅಲ್ಲಿಂದ ಪೂರೈಕೆ ಮಾಡುವ ಉದ್ದೇಶಕ್ಕಾಗಿ ಭಾರತದಲ್ಲಿ ತೆರಿಗೆಯನ್ನು ಸಂದಾಯ ಮಾಡಿ ಅಥವಾ ರಫ್ತುಗಳಿಗಾಗಿ ತೆರಿಗೆಯನ್ನು ಸಂದಾಯ ಮಾಡದೆ ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಒಳಗಾಗಿ ವರ್ಗಾಯಿಸಬಹುದು.

(3) ವ್ಯವಹಾರ ಸ್ಥಳದಲ್ಲಿ ತಯಾರಿಸಿದ, ಯಾವುದೇ ತೆರಿಗೆಗೆ ಗುರಿಯಾಗತಕ್ಕ ಸರಕುಗಳನ್ನು, ಸುಂಕವನ್ನು ಸಂದಾಯ ಮಾಡದೆ ಕೆಲವು ಪರೀಕ್ಷೆಗಳನ್ನು ಅಥವಾ ಯಾವುದೇ ಇತರ ಸಂಸ್ಕರಣೆಯನ್ನು ಮಾಡುವುದಕ್ಕಾಗಿ, ಯಾವುದೇ ಇತರ ವ್ಯವಹಾರ ಸ್ಥಳಗಳಿಗೆ, ನೋಂದಣಿಯಾಗಿರಲಿ ಅಥವಾ ಇಲ್ಲದಿರಲಿ, ಗೊತ್ತುಪಡಿಸಿದ ದಿನಕ್ಕಿಂತ ಮುಂಚೆ ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ರವಾನಿಸಲಾಗಿದ್ದಲ್ಲಿ ಮತ್ತು ಅಂಥ ಸರಕುಗಳು ಸದರಿ ವ್ಯವಹಾರದ ಸ್ಥಳಕ್ಕೆ ಗೊತ್ತುಪಡಿಸಿದ ದಿನದಂದು ಅಥವಾ ನಂತರ ವಾಪಸ್ಸಾಗಿದ್ದಾಗ, ಸದರಿ ಸರಕುಗಳು, ಪರೀಕ್ಷೆ ಅಥವಾ ಯಾವುದೇ ಇತರ ಸಂಸ್ಕರಣೆಗೆ ಒಳಗಾದ ನಂತರ ಆರು ತಿಂಗಳುಗಳ ಒಳಗಾಗಿ ಸದರಿ ಸ್ಥಳಕ್ಕೆ ವಾಪಸ್ಸಾಗಿದ್ದರೆ, ಯಾವುದೇ ತೆರಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ:

ಪರಂತು, ಆರು ತಿಂಗಳುಗಳ ಅವಧಿಯನ್ನು, ಸಾಕಷ್ಟು ಕಾರಣಗಳನ್ನು ತೋರಿಸಿದ್ದರೆ, ಎರಡು ತಿಂಗಳುಗಳಿಗೆ ಮೀರದ ಹೆಚ್ಚಿನ ಅವಧಿಗೆ ಆಯುಕ್ತರು ವಿಸ್ತರಿಸಬಹುದು:

ಮತ್ತು ಪರಂತು, ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಒಳಗಾಗಿ ಅಂಥ ಸದರಿ ಸರಕುಗಳು ವಾಪಸ್ಸಾಗದಿದ್ದರೆ, ಪ್ರಕರಣ 142ರ ಉಪಪ್ರಕರಣ (8)ರ ಖಂಡ (ಎ)ಯ ಉಪಬಂಧಗಳಿಗೆ ಅನುಸಾರವಾಗಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ವಸೂಲ್ಮಾಡುವುದಕ್ಕೆ ಗುರಿಯಾಗತಕ್ಕದ್ದು:

ಮತ್ತೂ ಪರಂತು, ಸರಕುಗಳ ತಯಾರಕನು, ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ, ಸದರಿ ಸರಕುಗಳನ್ನು, ಸದರಿ ಇತರ ಆವರಣಗಳಿಂದ, ಭಾರತದಲ್ಲಿ ತೆರಿಗೆಯನ್ನು ಸಂದಾಯ ಮಾಡಿ ಅಥವಾ ರಫ್ತುಗಳಿಗಾಗಿ ತೆರಿಗೆಯನ್ನು ಸಂದಾಯ ಮಾಡದೆ, ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ಒಳಗಾಗಿ ವರ್ಗಾಯಿಸಬಹುದು.

(4) ಸರಕುಗಳ ತಯಾರಕನು ಮತ್ತು ನಿರ್ದಿಷ್ಟ ಕೆಲಸಗಾರನು, ಗೊತ್ತುಪಡಿಸಿದ ದಿನದಂದು ಸದರಿ ವ್ಯಕ್ತಿಯ ಪರವಾಗಿ ನಿರ್ದಿಷ್ಟ ಕೆಲಸಗಾರನಿಂದ ದಾಸ್ತಾನಿನಲ್ಲಿ ಇಟ್ಟುಕೊಂಡಿರುವ ಇನ್‌ಪುಟ್ಸ್‌ಗಳ ಅಥವಾ ಸರಕುಗಳ ವಿವರಗಳನ್ನು

ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಮತ್ತು ಅಂಥ ಸಮಯದ ಒಳಗಾಗಿ, ಘೋಷಿಸಿದ್ದರೆ ಮಾತ್ರ, ಉಪಪ್ರಕರಣಗಳಾದ (1), (2) ಮತ್ತು (3)ರ ಅಡಿಯಲ್ಲಿ ತೆರಿಗೆಯು ಸಂದಾಯವಾಗತಕ್ಕದ್ದಲ್ಲ.

**142. ಮಧ್ಯಕಾಲೀನ ಸಂಕೀರ್ಣ ಉಪಬಂಧಗಳು.–** (1) ಯಾವ ಸರಕುಗಳ ಮೇಲೆ ಗೊತ್ತುಪಡಿಸಿದ ದಿನಕ್ಕಿಂತ ಆರು ತಿಂಗಳುಗಳಿಗಿಂತ ಮುಂಚೆ ಅಲ್ಲದೆ ಅವುಗಳ ಸ್ಥಳಾಂತರದ ಸಮಯದಲ್ಲಿ ಅವುಗಳ ಮೇಲೆ ಸುಂಕ ಏನಾದರೂ ಇದ್ದರೆ, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ, ಅದನ್ನು ಸಂದಾಯ ಮಾಡಲಾಗಿದ್ದರೆ ಆ ಯಾವುವೇ ಸರಕುಗಳು, ಯಾವುದೇ ವ್ಯವಹಾರ ಸ್ಥಳಕ್ಕೆ ಗೊತ್ತುಪಡಿಸಲಾದ ದಿನದಂದು ಅಥವಾ ನಂತರ ವಾಪಸ್ಸಾಗಿದ್ದಲ್ಲಿ, ಸದರಿ ಸರಕುಗಳು ನೋಂದಾಯಿತ ವ್ಯಕ್ತಿಯನ್ನು ಹೊರತುಪಡಿಸಿ, ಇತರ ವ್ಯಕ್ತಿಯು ಗೊತ್ತುಪಡಿಸಿದ ದಿನದಿಂದ ಆರು ತಿಂಗಳುಗಳ ಅವಧಿಯ ಒಳಗಾಗಿ, ಸದರಿ ವ್ಯವಹಾರ ಸ್ಥಳಕ್ಕೆ ವಾಪಸ್ಸಾಗಿದ್ದಲ್ಲಿ ಮತ್ತು ಯುಕ್ತ ಅಧಿಕಾರಿಗೆ ಮನದಟ್ಟಾಗುವಂತೆ ಅಂಥ ಸರಕುಗಳನ್ನು ಗುರುತಿಸಬಹುದಾಗಿದ್ದಲ್ಲಿ, ನೋಂದಾಯಿತ ವ್ಯಕ್ತಿಯು ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಂದಾಯ ಮಾಡಿದ ಸುಂಕದ ಮರುಪಾವತಿಗೆ ಅರ್ಹನಿರತಕ್ಕದ್ದು:

ಪರಂತು, ಸದರಿ ಸರಕುಗಳನ್ನು ಒಬ್ಬ ನೋಂದಾಯಿತ ವ್ಯಕ್ತಿಯು ವಾಪಸ್ಸು ಮಾಡಿದ್ದರೆ, ಅಂಥ ಸರಕುಗಳ ವಾಪಸ್ಸಾತಿಯನ್ನು ಪೂರೈಕೆ ಎಂದು ಪರಿಭಾವಿಸತಕ್ಕದ್ದು.

(2) (ಎ) ಗೊತ್ತುಪಡಿಸಿದ ದಿನಾಂಕಕ್ಕಿಂತ ಮುಂಚೆ ಮಾಡಿಕೊಂಡ ಕರಾರಿಗೆ ಅನುಸಾರವಾಗಿ, ಗೊತ್ತುಪಡಿಸಿದ ದಿನಾಂಕದಂದು ಅಥವಾ ನಂತರ ಯಾವುದೇ ಸರಕುಗಳ ಅಥವಾ ಸೇವೆಗಳ ಅಥವಾ ಇವೆರಡರ ಬೆಲೆಯು, ಮೇಲ್ಮುಖವಾಗಿ ಪರಿಷ್ಕರಣೆಯಾಗಿದ್ದಲ್ಲಿ, ಅಂಥ ಸರಕುಗಳನ್ನು ಅಥವಾ ಸೇವೆಗಳನ್ನು ಅಥವಾ ಇವೆರಡನ್ನೂ ಸ್ಥಳಾಂತರಿಸಿದ ಅಥವಾ ಒದಗಿಸಿದ ನೋಂದಾಯಿತ ವ್ಯಕ್ತಿಯು ಸ್ವೀಕರಿಸುವವನಿಗೆ, ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡ ಪೂರಕ – ದರಪಟ್ಟಿ ಅಥವಾ ಖರ್ಚಿನ ಚೀಟಿಯನ್ನು, ಅಂಥ ಬೆಲೆ ಪರಿಷ್ಕರಣೆಯ ಮೂವತ್ತು ದಿನಗಳ ಒಳಗಾಗಿ ನೀಡತಕ್ಕದ್ದು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ಪೂರಕ ದರಪಟ್ಟಿ ಅಥವಾ ಖರ್ಚಿನ ಚೀಟಿಯನ್ನು, ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಹೊರಮುಖ ಪೂರೈಕೆಗಳಿಗೆ ಸಂಬಂಧಿಸಿದಂತೆ ನೀಡಲಾದುದು ಎಂದು ಪರಿಭಾವಿಸತಕ್ಕದ್ದು.

(ಬಿ) ಗೊತ್ತುಪಡಿಸಿದ ದಿನಕ್ಕಿಂತ ಮೊದಲು ಮಾಡಿದ ಕರಾರಿಗೆ ಅನುಸಾರವಾಗಿ, ಗೊತ್ತುಪಡಿಸಿದ ದಿನದಂದು ಅಥವಾ ನಂತರ, ಯಾವುದೇ ಸರಕುಗಳ ಅಥವಾ ಸೇವೆಗಳ ಅಥವಾ ಇವೆರಡರ ಬೆಲೆಯು, ಕೆಳಮುಖವಾಗಿ ಪರಿಷ್ಕರಣೆಯಾಗಿದ್ದಲ್ಲಿ, ಅಂಥ ಸರಕುಗಳನ್ನು ಅಥವಾ ಸೇವೆಗಳನ್ನು ಅಥವಾ ಇವೆರಡನ್ನು ಸ್ಥಳಾಂತರಿಸಿದ ಅಥವಾ ಒದಗಿಸಿದ ನೋಂದಾಯಿತ ವ್ಯಕ್ತಿಯು ಸ್ವೀಕರಿಸುವವನಿಗೆ, ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡ, ಜಮಾ ಚೀಟಿಯನ್ನು, ಅಂಥ ಬೆಲೆ ಪರಿಷ್ಕರಣೆಯ ಮೂವತ್ತು ದಿನಗಳ ಒಳಗಾಗಿ ನೀಡಬಹುದು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ಜಮಾ ಚೀಟಿಯನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಹೊರಮುಖ ಪೂರೈಕೆಗಳಿಗೆ ಸಂಬಂಧಿಸಿದಂತೆ ನೀಡಲಾದುದು ಎಂದು ಭಾವಿಸತಕ್ಕದ್ದು:

ಪರಂತು, ನೋಂದಾಯಿತ ವ್ಯಕ್ತಿಯು, ಜಮಾ ಚೀಟಿಯನ್ನು ನೀಡಿದ ಪ್ರಯುಕ್ತ ತನ್ನ ತೆರಿಗೆ ಬಾಧ್ಯತೆಯನ್ನು ಇಳಿಕೆ ಮಾಡಲು, ಅಂಥ ತೆರಿಗೆ ಬಾಧ್ಯತೆ ಇಳಿಕೆಗೆ ಸಂವಾದಿಯಾಗಿ ಆ ಜಮಾ ಚೀಟಿಯನ್ನು ಸ್ವೀಕರಿಸುವವನು ತನ್ನ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಇಳಿಕೆ ಮಾಡಿದ್ದಾಗ ಮಾತ್ರ ಅವಕಾಶ ನೀಡತಕ್ಕದ್ದು.

(3) ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಂದಾಯ ಮಾಡಿದ ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿ, ಸುಂಕ, ಬಡ್ಡಿ ಅಥವಾ ಯಾವುದೇ ಇತರ ಮೊತ್ತದ ಮರುಪಾವತಿಗಾಗಿ ಯಾವುದೇ ವ್ಯಕ್ತಿಯು, ಗೊತ್ತುಪಡಿಸಿದ ದಿನಾಂಕಕ್ಕಿಂತ ಮೊದಲು, ಆ ದಿನಾಂಕದಂದು ಅಥವಾ ಅದರ ನಂತರ ಸಲ್ಲಿಕೆಯಾಗಿರುವ ಪ್ರತಿಯೊಂದು ಮರುಪಾವತಿಯ ಕ್ಲೇಮನ್ನು, ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗನುಸಾರವಾಗಿ ವಿಲೆ ಮಾಡತಕ್ಕದ್ದು ಮತ್ತು ಆತನಿಗೆ ಅಂತಿಮವಾಗಿ ಸಲ್ಲುವಂಥ ಯಾವುದೇ ಮೊತ್ತವನ್ನು ಕೇಂದ್ರ ಉತ್ಪಾದನಾ ಶುಲ್ಕ ಅಧಿನಿಯಮ, 1944 (1944ರ 1)ರ ಪ್ರಕರಣ 11ಬಿ ಯ ಉಪಪ್ರಕರಣ (2)ರ ಉಪಬಂಧಗಳ ಹೊರತಾಗಿ ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ನಗದಾಗಿ ಮರುಪಾವತಿ ಮಾಡತಕ್ಕದ್ದು:

ಪರಂತು, ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿ ಮೊತ್ತದ ಮರುಪಾವತಿಯ ಯಾವುದೇ ಕ್ಲೇಮನ್ನು ಪೂರ್ಣವಾಗಿ ಅಥವಾ ಭಾಗಶಃ ನಿರಾಕರಿಸಿದ್ದಲ್ಲಿ, ಹಾಗೆ ನಿರಾಕರಿಸಿರುವ ಮೊತ್ತವು ರದ್ದುಗೊಳ್ಳತಕ್ಕದ್ದು:

ಮತ್ತು ಪರಂತು, ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿಯ ಯಾವುದೇ ಮೊತ್ತದ ಮರುಪಾವತಿಗೆ, ಸದರಿ ಮೊತ್ತದ ಬಾಕಿಯು, ಗೊತ್ತುಪಡಿಸಿದ ದಿನಾಂಕದಂದು ಈ ಅಧಿನಿಯಮದ ಅಡಿಯಲ್ಲಿ ಮುಂದಕ್ಕೆ ಹಾಕಿದ್ದಲ್ಲಿ ಅವಕಾಶ ನೀಡತಕ್ಕದ್ದಲ್ಲ.

(4) ಗೊತ್ತುಪಡಿಸಿದ ದಿನಕ್ಕಿಂತ ಮೊದಲು ಅಥವಾ ನಂತರ ರಫ್ತು ಮಾಡಿರುವ ಸರಕು ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಂದಾಯ ಮಾಡಿದ ಯಾವುದೇ ಸುಂಕ ಅಥವಾ ತೆರಿಗೆಯ ಮರುಪಾವತಿಗಾಗಿ ಗೊತ್ತುಪಡಿಸಿದ ದಿನದ ನಂತರ ಸಲ್ಲಿಸಿರುವ ಪ್ರತಿಯೊಂದು ಮರುಪಾವತಿಯ ಕ್ಲೇಮನ್ನು, ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ವಿಲೇವಾರಿ ಮಾಡತಕ್ಕದ್ದು:

ಪರಂತು, ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿ ಮೊತ್ತದ ಮರುಪಾವತಿಯ ಯಾವುದೇ ಕ್ಲೇಮನ್ನು, ಪೂರ್ಣವಾಗಿ ಅಥವಾ ಭಾಗಶಃ ನಿರಾಕರಿಸಿದ್ದಲ್ಲಿ, ಹಾಗೆ ನಿರಾಕರಿಸಿರುವ ಮೊತ್ತವು ರದ್ದುಗೊಳ್ಳತಕ್ಕದ್ದು:

ಮತ್ತು ಪರಂತು, ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿಯ ಯಾವುದೇ ಮೊತ್ತದ ಮರುಪಾವತಿಗೆ, ಸದರಿ ಮೊತ್ತದ ಬಾಕಿಯನ್ನು, ಗೊತ್ತುಪಡಿಸಿದ ದಿನದಂದು, ಈ ಅಧಿನಿಯಮದ ಅಡಿಯಲ್ಲಿ ಮುಂದಕ್ಕೆ ಹಾಕಲಾಗಿದ್ದಲ್ಲಿ ಅವಕಾಶ ನೀಡತಕ್ಕದ್ದಲ್ಲ.

(5) ಸೇವೆಗಳನ್ನು ಒದಗಿಸಿಲ್ಲದಿರುವುದಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಪಾವತಿ ಮಾಡಿದ ತೆರಿಗೆಯನ್ನು ಮರುಪಾವತಿಸುವುದಕ್ಕಾಗಿ, ಗೊತ್ತುಪಡಿಸಿದ ದಿನಾಂಕದ ನಂತರ ಅರ್ಜಿ ಸಲ್ಲಿಸಿದ ವ್ಯಕ್ತಿಯು, ಪ್ರತಿಯೊಂದು ಕ್ಲೇಮನ್ನು ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳ ಅನುಸಾರವಾಗಿ ವಿಲೆ ಮಾಡತಕ್ಕದ್ದು ಮತ್ತು ಕೇಂದ್ರ ಉತ್ಪಾದನಾ ಶುಲ್ಕ ಅಧಿನಿಯಮ, 1944 (1944ರ 1)ರ ಪ್ರಕರಣ 11ಬಿ ಯ ಉಪಪ್ರಕರಣ (2)ರ ಉಪಬಂಧಗಳ ಹೊರತಾಗಿ ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಸಹ ಸಾಂದರ್ಭಿಕವಾಗಿ ಸಂಗ್ರಹವಾಗುವ ಯಾವುದೇ ಮೊತ್ತವನ್ನು ಅವನಿಗೆ ನಗದು ರೂಪದಲ್ಲಿ ಸಂದಾಯ ಮಾಡತಕ್ಕದ್ದು.

(6) (ಎ) ಗೊತ್ತುಪಡಿಸಿದ ದಿನಾಂಕಕ್ಕೆ ಮೊದಲ ದಿನಾಂಕದಂದು ಅಥವಾ ನಂತರ ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿಯ ಕ್ಲೇಮಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಪ್ರಾರಂಭಿಸಲಾಗಿರುವ ಪ್ರತಿಯೊಂದು ಅಪೀಲಿನ, ಪುನರೀಕ್ಷಣೆಯ ವ್ಯವಹರಣೆಗಳನ್ನು ಅಥವಾ ಉಲ್ಲೇಖಗಳನ್ನು, ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ

ಅನುಸಾರವಾಗಿ ವಿಲೆ ಮಾಡತಕ್ಕದ್ದು ಮತ್ತು ಕ್ಲೇಮುದಾರನಿಗೆ ನೀಡಬಹುದೆಂದು ಕಂಡುಬರುವ ರಿಯಾಯಿತಿಯ ಯಾವುದೇ ಮೊತ್ತವನ್ನು ಕೇಂದ್ರ ಉತ್ಪಾದನಾ ಶುಲ್ಕ ಅಧಿನಿಯಮ, 1944 (1944ರ 1)ರ ಪ್ರಕರಣ 11ಬಿ ಯ ಉಪಪ್ರಕರಣ (2)ರ ಉಪಬಂಧಗಳ ಹೊರತಾಗಿ ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ, ಆತನಿಗೆ ನಗದಾಗಿ ಮರುಪಾವತಿ ಮಾಡತಕ್ಕದ್ದು ಮತ್ತು ನಿರಾಕರಿಸಿದ ಮೊತ್ತ, ಏನಾದರೂ ಇದ್ದಲ್ಲಿ, ಅದನ್ನು ಈ ಅಧಿನಿಯಮದ ಅಡಿಯಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಎಂದು ಅಂಗೀಕರಿಸತಕ್ಕದ್ದಲ್ಲ:

ಪರಂತು, ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿಯ ಯಾವುದೇ ಮೊತ್ತದ ಮರುಪಾವತಿಗೆ, ಸದರಿ ಮೊತ್ತದ ಬಾಕಿಯನ್ನು ಗೊತ್ತುಪಡಿಸಿದ ದಿನದಂದು, ಈ ಅಧಿನಿಯಮದ ಅಡಿಯಲ್ಲಿ ಮುಂದಕ್ಕೆ ಹಾಕಿದ್ದಲ್ಲಿ, ಅವಕಾಶ ನೀಡತಕ್ಕದ್ದಲ್ಲ.

(ಬಿ) ಗೊತ್ತುಪಡಿಸಿದ ದಿನಕ್ಕಿಂತ ಮೊದಲು, ಆ ದಿನದಂದು ಅಥವಾ ನಂತರ, ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿಯನ್ನು ವಸೂಲ್ಮಾಡುವುದಕ್ಕೆ ಸಂಬಂಧಿಸಿದಂತೆ, ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಪ್ರಾರಂಭಿಸಲಾಗಿರುವ ಪ್ರತಿಯೊಂದು ಅಪೀಲಿನ ವ್ಯವಹರಣೆಗಳು, ಪುನರೀಕ್ಷಣೆ ಅಥವಾ ಉಲ್ಲೇಖಗಳನ್ನು, ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗನುಸಾರವಾಗಿ ವಿಲೆ ಮಾಡತಕ್ಕದ್ದು ಮತ್ತು ಅಂಥ ಅಪೀಲು, ಪುನರೀಕ್ಷಣೆ ಅಥವಾ ಉಲ್ಲೇಖಗಳ ಪರಿಣಾಮವಾಗಿ ರಿಯಾಯಿತಿಯ ಯಾವುದೇ ಮೊತ್ತವನ್ನು ವಸೂಲ್ಮಾಡಬೇಕಾಗಿ ಬಂದಲ್ಲಿ, ಅದನ್ನು ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ವಸೂಲ್ಮಾಡಿರದ ಹೊರತು, ಈ ಅಧಿನಿಯಮದ ಅಡಿಯಲ್ಲಿನ ಬಾಕಿ ಎಂಬಂತೆ ವಸೂಲ್ಮಾಡತಕ್ಕದ್ದು ಮತ್ತು ಹಾಗೆ ವಸೂಲ್ಮಾಡಿದ ಮೊತ್ತವನ್ನು ಈ ಅಧಿನಿಯಮದ ಅಡಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಆಗಿ ಅಂಗೀಕರಿಸತಕ್ಕದ್ದಲ್ಲ.

(7) (ಎ) ಗೊತ್ತುಪಡಿಸಿದ ದಿನಾಂಕಕ್ಕೆ ಮೊದಲು, ಆ ದಿನದಂದು ಅಥವಾ ನಂತರ ಯಾವುದೇ ಉತ್ಪಾದಕ ಸರಕು ಸುಂಕಕ್ಕೆ ಅಥವಾ ತೆರಿಗೆ ಹೊಣೆಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಪ್ರಾರಂಭಿಸಲಾಗಿರುವ ಪ್ರತಿಯೊಂದು ಅಪೀಲಿನ ವ್ಯವಹರಣೆಗಳನ್ನು, ಪುನರೀಕ್ಷಣೆಯನ್ನು ಅಥವಾ ಉಲ್ಲೇಖಗಳನ್ನು ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗನುಸಾರವಾಗಿ ವಿಲೆ ಮಾಡತಕ್ಕದ್ದು ಮತ್ತು ಅಂಥ ಅಪೀಲು ಪುನರೀಕ್ಷಣೆ ಅಥವಾ ಉಲ್ಲೇಖಗಳ ಪರಿಣಾಮವಾಗಿ ಯಾವುದೇ ಮೊತ್ತವನ್ನು ವಸೂಲ್ಮಾಡಬೇಕಾಗಿ ಬಂದಲ್ಲಿ, ಅದನ್ನು ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ವಸೂಲ್ಮಾಡಿದ ಹೊರತು, ಈ ಅಧಿನಿಯಮದ ಅಡಿಯಲ್ಲಿಯ ಬಾಕಿ ಎಂಬಂತೆ ವಸೂಲ್ಮಾಡತಕ್ಕದ್ದು ಮತ್ತು ಹಾಗೆ ವಸೂಲ್ಮಾಡಿದ ಮೊತ್ತವನ್ನು ಈ ಅಧಿನಿಯಮದ ಅಡಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಆಗಿ ಅಂಗೀಕರಿಸತಕ್ಕದ್ದಲ್ಲ.

(ಬಿ) ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಗೊತ್ತುಪಡಿಸಿದ ದಿನಕ್ಕೆ ಮೊದಲು, ಆ ದಿನದಂದು ಅಥವಾ ನಂತರ, ಉತ್ಪಾದಕ ಸರಕು ಸುಂಕಕ್ಕೆ ಅಥವಾ ತೆರಿಗೆ ಹೊಣೆಗೆ ಸಂಬಂಧಿಸಿದಂತೆ ಪ್ರಾರಂಭಿಸಲಾಗಿರುವ ಪ್ರತಿಯೊಂದು ಅಪೀಲಿನ ವ್ಯವಹರಣೆಗಳನ್ನು, ಪುನರೀಕ್ಷಣೆಯನ್ನು ಅಥವಾ ಉಲ್ಲೇಖಗಳನ್ನು, ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗನುಸಾರವಾಗಿ ವಿಲೆ ಮಾಡತಕ್ಕದ್ದು ಮತ್ತು ಕ್ಲೇಮುದಾರನಿಗೆ, ನೀಡತಕ್ಕ ಯಾವುದೇ ಮೊತ್ತವನ್ನು, ಕೇಂದ್ರ ಉತ್ಪಾದನಾ ಶುಲ್ಕ ಅಧಿನಿಯಮ, 1944 (1944ರ 1)ರ ಪ್ರಕರಣ 11ಬಿ ಯ ಉಪಪ್ರಕರಣ (2)ರ ಉಪಬಂಧಗಳ ಹೊರತಾಗಿ, ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ,

ಆತನಿಗೆ ನಗದಾಗಿ ಮರುಪಾವತಿ ಮಾಡತಕ್ಕದ್ದು ಮತ್ತು ನಿರಾಕರಿಸಿದ ಮೊತ್ತ ಏನಾದರೂ ಇದ್ದಲ್ಲಿ ಅದನ್ನು ಈ ಅಧಿನಿಯಮದ ಅಡಿಯಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಆಗಿ ಅಂಗೀಕರಿಸತಕ್ಕದ್ದಲ್ಲ.

(8) (ಎ) ಗೊತ್ತುಪಡಿಸಿದ ದಿನಕ್ಕೆ ಮೊದಲು ಆ ದಿನದಂದು ಅಥವಾ ನಂತರ ಹೂಡಿದ ಕರನಿರ್ಧರಣೆಯ ಅಥವಾ ನ್ಯಾಯನಿರ್ಣಯ ವ್ಯವಹರಣೆಗಳಿಗೆ ಅನುಸಾರವಾಗಿ ತೆರಿಗೆ, ಬಡ್ಡಿ, ಜುಲ್ಮಾನೆ ಅಥವಾ ದಂಡದ ಯಾವುದೇ ಮೊತ್ತವು ವಸೂಲಾಗಬೇಕಾಗಿದ್ದರೆ, ಅದನ್ನು ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ವಸೂಲ್ಮಾಡಿರದ ಹೊರತು, ಈ ಅಧಿನಿಯಮದ ಅಡಿಯಲ್ಲಿನ ಬಾಕಿಯಂತೆ ವಸೂಲ್ಮಾಡತಕ್ಕದ್ದು ಮತ್ತು ಹಾಗೆ ವಸೂಲ್ಮಾಡಿದ ಮೊತ್ತವನ್ನು ಈ ಅಧಿನಿಯಮದ ಮೇರೆಗೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಆಗಿ ಅಂಗೀಕರಿಸತಕ್ಕದ್ದಲ್ಲ.

(ಬಿ) ಗೊತ್ತುಪಡಿಸಿದ ದಿನಕ್ಕೆ ಮೊದಲು, ಆ ದಿನದಂದು ಅಥವಾ ನಂತರ ಹೂಡಿದ ಕರನಿರ್ಧರಣೆಯ ಅಥವಾ ನ್ಯಾಯನಿರ್ಣಯ ವ್ಯವಹರಣೆಗಳಿಗೆ ಅನುಸಾರವಾಗಿ ತೆರಿಗೆ, ಬಡ್ಡಿ, ಜುಲ್ಮಾನೆ ಅಥವಾ ದಂಡದ ಯಾವುದೇ ಮೊತ್ತವು ತೆರಿಗೆದಾಯಕ ವ್ಯಕ್ತಿಗೆ ಮರುಪಾವತಿಯಾಗಬೇಕಾಗಿದ್ದರೆ ಅದನ್ನು ಕೇಂದ್ರ ಉತ್ಪಾದನಾ ಶುಲ್ಕ ಅಧಿನಿಯಮ, 1944 (1944ರ 1)ರ ಪ್ರಕರಣ 11ಬಿ ಯ ಉಪಪ್ರಕರಣ (2)ರ ಉಪಬಂಧಗಳ ಹೊರತು ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಆತನಿಗೆ ಸದರಿ ಕಾನೂನಿನ ಅಡಿಯಲ್ಲಿ ನಗದಾಗಿ ಮರುಪಾವತಿ ಮಾಡತಕ್ಕದ್ದು ಮತ್ತು ನಿರಾಕರಿಸಿದ ಮೊತ್ತ ಏನಾದರೂ ಇದ್ದಲ್ಲಿ, ಅದನ್ನು ಈ ಅಧಿನಿಯಮದ ಅಡಿಯಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಆಗಿ ಅಂಗೀಕರಿಸತಕ್ಕದ್ದಲ್ಲ.

(9) (ಎ) ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಒದಗಿಸಿದ್ದ ಯಾವುದೇ ರಿಟರ್ನ್‌ನನ್ನು, ಗೊತ್ತುಪಡಿಸಿದ ದಿನದ ನಂತರ ಪರಿಷ್ಕರಿಸಿದ್ದಲ್ಲಿ, ಅಂಥ ಪರಿಷ್ಕರಣೆಗೆ ಅನುಸಾರವಾಗಿ ಯಾವುದೇ ಮೊತ್ತವನ್ನು ವಸೂಲ್ಮಾಡಬೇಕಾಗಿದೆ ಎಂದು ಕಂಡುಬಂದಲ್ಲಿ ಅಥವಾ ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿಯ ಯಾವುದೇ ಮೊತ್ತವನ್ನು ಅಂಗೀಕಾರಾರ್ಹವಲ್ಲವೆಂದು ಕಂಡುಬಂದಲ್ಲಿ, ಅದನ್ನು ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ವಸೂಲಿ ಮಾಡಿರದ ಹೊರತು, ಈ ಅಧಿನಿಯಮದ ಅಡಿಯಲ್ಲಿನ ಬಾಕಿಯಂತೆ ವಸೂಲ್ಮಾಡತಕ್ಕದ್ದು ಮತ್ತು ಹಾಗೆ ವಸೂಲ್ಮಾಡಿದ ಮೊತ್ತವನ್ನು ಈ ಅಧಿನಿಯಮದ ಮೇರೆಗೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಆಗಿ ಅಂಗೀಕರಿಸತಕ್ಕದ್ದಲ್ಲ.

(ಬಿ) ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಒದಗಿಸಿದ್ದ ಯಾವುದೇ ರಿಟರ್ನ್‌ನನ್ನು ಗೊತ್ತುಪಡಿಸಿದ ದಿನದ ನಂತರ ಆದರೆ, ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಅಂಥ ಪರಿಷ್ಕರಣೆಗೆ ನಿರ್ದಿಷ್ಟಪಡಿಸಿದ ಕಾಲಮಿತಿಯ ಒಳಗಾಗಿ ಪರಿಷ್ಕರಿಸಿದ್ದಲ್ಲಿ, ಅಂಥ ಪರಿಷ್ಕರಣೆಗೆ ಅನುಸಾರವಾಗಿ ಯಾವುದೇ ಮೊತ್ತವನ್ನು ಯಾವುದೇ ತೆರಿಗೆದಾಯಕ ವ್ಯಕ್ತಿಗೆ ಮರುಪಾವತಿ ಮಾಡಬೇಕಾಗಿದ್ದರೆ ಅಥವಾ ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿಯ ಯಾವುದೇ ಮೊತ್ತವು ಅಂಗೀಕಾರಾರ್ಹವೆಂದು ಕಂಡುಬಂದಲ್ಲಿ, ಅದನ್ನು ಕೇಂದ್ರ ಉತ್ಪಾದನಾ ಶುಲ್ಕ ಅಧಿನಿಯಮ, 1944 (1944ರ 1)ರ ಪ್ರಕರಣ 11ಬಿ ಯ ಉಪಪ್ರಕರಣ (2)ರ ಉಪಬಂಧಗಳ ಹೊರತು, ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳಿಗೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಆತನಿಗೆ ನಗದಾಗಿ ಮರುಪಾವತಿ ಮಾಡತಕ್ಕದ್ದು ಮತ್ತು ನಿರಾಕರಿಸಿದ್ದ ಮೊತ್ತ ಏನಾದರೂ ಇದ್ದಲ್ಲಿ, ಅದನ್ನು ಈ ಅಧಿನಿಯಮದ ಅಡಿಯಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಆಗಿ ಅಂಗೀಕರಿಸತಕ್ಕದ್ದಲ್ಲ.

(10) ಈ ಅಧ್ಯಾಯದಲ್ಲಿ ಉಪಬಂಧಿಸಿದುದನ್ನುಳಿದು, ಗೊತ್ತುಪಡಿಸಿದ ದಿನಕ್ಕೆ ಮೊದಲು ಮಾಡಿಕೊಂಡಿದ್ದ ಕರಾರಿಗೆ ಅನುಸಾರವಾಗಿ, ಗೊತ್ತುಪಡಿಸಿದ ದಿನದಂದು ಅಥವಾ ನಂತರ, ಪೂರೈಕೆ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡು ಈ ಅಧಿನಿಯಮದ ಉಪಬಂಧಗಳ ಮೇರೆಗೆ ತೆರಿಗೆಗೆ ಗುರಿಯಾಗತಕ್ಕದ್ದು.

(11) (ಎ) ಪ್ರಕರಣ 12ರಲ್ಲಿ ಏನೇ ಒಳಗೊಂಡಿದ್ದರೂ ಸಹ, ಈ ಅಧಿನಿಯಮದ ಮೇರೆಗೆ ಸರಕುಗಳ ಮೇಲೆ ಯಾವುದೇ ತೆರಿಗೆಯನ್ನು, ರಾಜ್ಯದ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಮೇರೆಗೆ ಸದರಿ ಸರಕುಗಳ ಮೇಲೆ ವಿಧಿಸಬಹುದಾಗಿದ್ದ ತೆರಿಗೆಯಷ್ಟರ ಮಟ್ಟಿಗೆ ಸಂದಾಯ ಮಾಡತಕ್ಕದ್ದಲ್ಲ.

(ಬಿ) ಪ್ರಕರಣ 13ರಲ್ಲಿ ಏನೇ ಒಳಗೊಂಡಿದ್ದರೂ ಸಹ, ಈ ಅಧಿನಿಯಮದ ಮೇರೆಗೆ ಸೇವೆಗಳ ಮೇಲೆ ಯಾವುದೇ ತೆರಿಗೆಯನ್ನು, ಹಣಕಾಸು ಅಧಿನಿಯಮ, 1994 (1994ರ 32)ರ ಅಧ್ಯಾಯ Vರ ಅಡಿಯಲ್ಲಿ, ಸದರಿ ಸೇವೆಗಳ ಮೇಲೆ ವಿಧಿಸಬಹುದಾಗಿದ್ದ ತೆರಿಗೆಯಷ್ಟರ ಮಟ್ಟಿಗೆ ಸಂದಾಯ ಮಾಡತಕ್ಕದ್ದಲ್ಲ.

(ಸಿ) ಮೌಲ್ಯವರ್ಧಿತ ತೆರಿಗೆ ಅಧಿನಿಯಮ ಮತ್ತು ಹಣಕಾಸು ಅಧಿನಿಯಮ, 1994 (1994ರ 32)ರ ಅಧ್ಯಾಯ–V ಇವುಗಳೆರಡರ ಮೇರೆಗೆ ಯಾವುದೇ ಪೂರೈಕೆಯ ಮೇಲೆ ತೆರಿಗೆಯನ್ನು ಸಂದಾಯ ಮಾಡಿದ್ದಲ್ಲಿ, ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ವಿಧಿಸಬಹುದಾಗಿರತಕ್ಕದ್ದು ಮತ್ತು ತೆರಿಗೆದಾಯಕ ವ್ಯಕ್ತಿಯು, ಗೊತ್ತುಪಡಿಸಿದ ದಿನದ ನಂತರ ಮಾಡಿದ ಪೂರೈಕೆಗಳಷ್ಟರ ಮಟ್ಟಿಗೆ, ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಸಂದಾಯ ಮಾಡಿದ ಮೌಲ್ಯವರ್ಧಿತ ತೆರಿಗೆಯ ಅಥವಾ ಸೇವಾ ತೆರಿಗೆಯ ರಿಯಾಯಿತಿಯನ್ನು ತೆಗೆದುಕೊಳ್ಳಲು ಅರ್ಹನಿರತಕ್ಕದ್ದು ಮತ್ತು ಅಂಥ ರಿಯಾಯಿತಿಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಲೆಕ್ಕಹಾಕತಕ್ಕದ್ದು.

(12) ಗೊತ್ತುಪಡಿಸಿದ ದಿನಕ್ಕೆ ಆರು ತಿಂಗಳುಗಳಿಗಿಂತ ಮೊದಲಿಗೆ ಅಲ್ಲದೆ, ಅನುಮೋದನೆಯ ಆಧಾರದಲ್ಲಿ ಕಳುಹಿಸಲಾಗಿರುವ ಸರಕುಗಳನ್ನು ಕೊಳ್ಳುವವನು ತಿರಸ್ಕರಿಸಿದ್ದಲ್ಲಿ ಅಥವಾ ಸ್ವೀಕರಿಸದಿದ್ದಲ್ಲಿ ಮತ್ತು ಗೊತ್ತುಪಡಿಸಿದ ದಿನದಂದು ಅಥವಾ ಅದರ ನಂತರ ಮಾರಾಟಗಾರನಿಗೆ ವಾಪಸ್ಸಾಗಿದ್ದಲ್ಲಿ, ಅಂಥ ಸರಕುಗಳು, ಗೊತ್ತುಪಡಿಸಿದ ದಿನದಿಂದ ಆರು ತಿಂಗಳುಗಳ ಅವಧಿಯ ಒಳಗಾಗಿ ವಾಪಸ್ಸಾಗಿದ್ದರೆ, ಯಾವುದೇ ತೆರಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ:

ಪರಂತು, ಆರು ತಿಂಗಳುಗಳ ಅವಧಿಯನ್ನು, ಸಾಕಷ್ಟು ಕಾರಣಗಳನ್ನು, ತೋರಿಸಿದ ಮೇಲೆ ಎರಡು ತಿಂಗಳುಗಳಿಗೆ ಮೀರದ ಹೆಚ್ಚಿನ ಅವಧಿಯವರೆಗೆ ಆಯುಕ್ತರು ವಿಸ್ತರಿಸಬಹುದು:

ಮತ್ತು ಪರಂತು, ಅಂಥ ಸರಕುಗಳು ಈ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗಿದ್ದು ಮತ್ತು ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ನಂತರ ವಾಪಸ್ಸಾಗಿದ್ದರೆ, ಸರಕುಗಳನ್ನು ವಾಪಸ್ಸು ಮಾಡುವ ವ್ಯಕ್ತಿಯ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು:

ಮತ್ತೂ ಪರಂತು, ಅಂಥ ಸರಕುಗಳು ಈ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗಿದ್ದು ಮತ್ತು ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯ ನಂತರ ವಾಪಸ್ಸಾಗಿದ್ದರೆ, ಸರಕುಗಳನ್ನು ಅನುಮೋದನೆಯ ಆಧಾರದ ಮೇಲೆ ಕಳುಹಿಸಿರುವ ವ್ಯಕ್ತಿಯು ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

(13) ಯಾವ ಸರಕುಗಳಿಗೆ ಸಂಬಂಧಿಸಿದಂತೆ, ಪೂರೈಕೆದಾರನು ಆ ಯಾವುವೇ ಸರಕುಗಳನ್ನು ಮಾರಾಟ ಮಾಡಿದ್ದರೆ, ಮೌಲ್ಯವರ್ಧಿತ ತೆರಿಗೆಯ ಸಂಬಂಧದಲ್ಲಿ, ರಾಜ್ಯದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಯಾವುದೇ ಕಾನೂನಿನ ಮೇರೆಗೆ ಮೂಲದಲ್ಲಿಯೇ ತೆರಿಗೆಯನ್ನು ಮುರುಗಡೆ ಮಾಡುವುದು ಅಗತ್ಯವಿದ್ದಾಗ ಮತ್ತು ಅದಕ್ಕಾಗಿ ಗೊತ್ತುಪಡಿಸಿದ ದಿನಕ್ಕೆ ಮೊದಲು ದರಪಟ್ಟಿಯನ್ನು ಸಹ ನೀಡಿದ್ದಲ್ಲಿ, ಗೊತ್ತುಪಡಿಸಿದ ದಿನದಂದು ಅಥವಾ ನಂತರ ಸದರಿ ಪೂರೈಕೆದಾರನಿಗೆ ಸಂದಾಯವನ್ನು ಮಾಡಿದ್ದಲ್ಲಿ, ಪ್ರಕರಣ 51ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯ ಮುರುಗಡೆಯನ್ನು, ಸದರಿ ಪ್ರಕರಣದ ಅಡಿಯಲ್ಲಿ ಮುರುಗಡೆದಾರನಿಂದ ಮಾಡತಕ್ಕದ್ದಲ್ಲ.

**ವಿವರಣೆ.–** ಈ ಅಧ್ಯಾಯದ ಉದ್ದೇಶಗಳಿಗಾಗಿ, "ಮೂಲ ಸರಕುಗಳು", "ಕೇಂದ್ರ ಮೌಲ್ಯವರ್ಧಿತ ತೆರಿಗೆ ರಿಯಾಯಿತಿ", "ಮೊದಲ ಹಂತದ ವ್ಯಾಪಾರಿ", "2ನೇ ಹಂತದ ವ್ಯಾಪಾರಿ" ಅಥವಾ "ತಯಾರಿಕೆ" ಎಂಬ ಪದಾವಳಿಗಳು, ಕೇಂದ್ರ ಉತ್ಪಾದನಾ ಶುಲ್ಕ ಅಧಿನಿಯಮ, 1944 (1944ರ 1)ರಲ್ಲಿ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

## ಅಧ್ಯಾಯ XXI

### ಸಂಕೀರ್ಣ ಉಪಬಂಧಗಳು

**143. ಜಾಬ್ ವರ್ಕ್‌ನ ಕಾರ್ಯವಿಧಾನ.–** (1) ಒಬ್ಬ ನೋಂದಾಯಿತ ವ್ಯಕ್ತಿಯು, (ಈ ಪ್ರಕರಣದಲ್ಲಿ ಇನ್ನು ಮುಂದೆ "ಪ್ರಧಾನಕರ್ತ" ಎಂದು ಉಲ್ಲೇಖಿಸಲಾಗಿದೆ) ತಿಳುವಳಿಕೆ ನೀಡುವುದು ಮತ್ತು ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟಂತೆ ಜಾಬ್ ವರ್ಕರ್‌ಗೆ ಜಾಬ್ ವರ್ಕ್‌ಗಾಗಿ ಇನ್‌ಪುಟ್ಸ್‌ಗಳು ಅಥವಾ ಮೂಲ ಸರಕುಗಳನ್ನು ತೆರಿಗೆಯನ್ನು ಸಂದಾಯ ಮಾಡದೆ ಕಳುಹಿಸಬಹುದು ಮತ್ತು ತರುವಾಯ ಅಲ್ಲಿಂದ ಮತ್ತೊಬ್ಬ ಜಾಬ್ ವರ್ಕರ್‌ಗೆ ಕಳುಹಿಸಬಹುದು ಮತ್ತು ಅದೇ ರೀತಿ ಮತ್ತು,–

(ಎ) ಜಾಬ್ ವರ್ಕ್ ಪೂರ್ಣಗೊಂಡ ನಂತರ ಅಥವಾ ಅನ್ಯಥಾ, ಮೂಲ ಸರಕುಗಳನ್ನು ಅಥವಾ ಎರಕಗಳು ಮತ್ತು ಅಚ್ಚುಗಳು, ಜಿಗ್ಸ್ ಮತ್ತು ಜೋಡಣೆಗಳು ಅಥವಾ ಉಪಕರಣಗಳನ್ನು ಹೊರತುಪಡಿಸಿ, ಇನ್‌ಪುಟ್ಸ್‌ಗಳನ್ನು, ಆತನ ಯಾವುದೇ ವ್ಯವಹಾರ ಸ್ಥಳಕ್ಕೆ, ತೆರಿಗೆಯನ್ನು ಸಂದಾಯ ಮಾಡದೆ ಹೊರ ಕಳುಹಿಸಿರುವುದನ್ನು, ಅನುಕ್ರಮವಾಗಿ ಒಂದು ವರ್ಷ ಮತ್ತು ಮೂರು ವರ್ಷಗಳ ಒಳಗಾಗಿ ವಾಪಸ್ಸು ತರತಕ್ಕದ್ದು;

(ಬಿ) ಜಾಬ್ ವರ್ಕ್ ಪೂರ್ಣಗೊಂಡ ನಂತರ ಅಥವಾ ಅನ್ಯಥಾ, ಹೊರ ಕಳುಹಿಸಿರುವ ಅಂಥ ಮೂಲ ಸರಕುಗಳನ್ನು ಅಥವಾ ಎರಕಗಳು ಮತ್ತು ಅಚ್ಚುಗಳು, ಜಿಗ್ಸ್ ಮತ್ತು ಜೋಡಣೆಗಳು, ಉಪಕರಣಗಳನ್ನು ಹೊರತುಪಡಿಸಿ, ಇನ್‌ಪುಟ್ಸ್‌ಗಳನ್ನು ಜಾಬ್ ವರ್ಕರ್‌ನ ವ್ಯವಹಾರ ಸ್ಥಳದಿಂದ ಭಾರತದ ಒಳಗೆ, ತೆರಿಗೆಯನ್ನು ಸಂದಾಯ ಮಾಡಿ ಅಥವಾ ಸಂದರ್ಭಾನುಸಾರವಾಗಿ ರಫ್ತಿಗಾಗಿ ತೆರಿಗೆ ಸಂದಾಯ ಮಾಡಿ ಅಥವಾ ಸಂದಾಯ ಮಾಡದೇ ಅನುಕ್ರಮವಾಗಿ, ಒಂದು ವರ್ಷ ಮತ್ತು ಮೂರು ವರ್ಷಗಳ ಒಳಗಾಗಿ ಪೂರೈಕೆ ಮಾಡತಕ್ಕದ್ದು:

ಪರಂತು, ಸದರಿ ಪ್ರಧಾನಕರ್ತನು ಜಾಬ್ ವರ್ಕರ್‌ನ ವ್ಯವಹಾರ ಸ್ಥಳವನ್ನು ತನ್ನ ಹೆಚ್ಚುವರಿ ವ್ಯವಹಾರ ಸ್ಥಳ ಎಂದು ಘೋಷಿಸಿಕೊಳ್ಳದ ಹೊರತು, ಪ್ರಧಾನಕರ್ತನು ಈ ಖಂಡದ ಉಪಬಂಧಗಳಿಗೆ ಅನುಸಾರವಾಗಿ ಜಾಬ್ ವರ್ಕರ್‌ನ ವ್ಯವಹಾರ ಸ್ಥಳದಿಂದ, ಸರಕುಗಳನ್ನು ಪೂರೈಕೆ ಮಾಡತಕ್ಕದ್ದಲ್ಲ, ಈ ಸಂದರ್ಭವನ್ನು ಹೊರತುಪಡಿಸಿದಂತೆ–

(i) ಪ್ರಕರಣ 25ರ ಅಡಿಯಲ್ಲಿ ಜಾಬ್ ವರ್ಕರ್ ನೋಂದಾಯಿತನಾಗಿದ್ದಲ್ಲಿ; ಅಥವಾ

(ii) ಪ್ರಧಾನಕರ್ತನು ಆಯುಕ್ತರು ಅಧಿಸೂಚಿಸಬಹುದಾದ ಅಂಥ ಸರಕುಗಳ ಪೂರೈಕೆಯಲ್ಲಿ ತೊಡಗಿದ್ದಲ್ಲಿ:

ಮತ್ತು ಪರಂತು, ಒಂದು ವರ್ಷ ಮತ್ತು ಮೂರು ವರ್ಷಗಳ ಅವಧಿಯನ್ನು ಸಾಕಷ್ಟು ಕಾರಣಗಳನ್ನು ತೋರಿಸಿದ ಮೇಲೆ ಆಯುಕ್ತರು ಅನುಕ್ರಮವಾಗಿ ಒಂದು ವರ್ಷ ಮತ್ತು ಎರಡು ವರ್ಷಗಳನ್ನು ಮೀರದ ಮತ್ತಷ್ಟು ಅವಧಿಗೆ ವಿಸ್ತರಿಸಬಹುದು.

(2) ಇನ್‌ಪುಟ್ಸ್‌ಗಳಿಗೆ ಅಥವಾ ಮೂಲ ಸರಕುಗಳಿಗೆ ಸರಿಯಾದ ಲೆಕ್ಕಪತ್ರಗಳನ್ನು ಇಡುವುದು ಮುಖ್ಯಸ್ಥನ ಜವಾಬ್ದಾರಿ.

(3) ಜಾಬ್ ವರ್ಕ್‌ಗಾಗಿ ಕಳುಹಿಸಿರುವ ಇನ್‌ಪುಟ್ಸ್‌ಗಳನ್ನು ಅವುಗಳನ್ನು ಹೊರ ಕಳುಹಿಸಿದ ಒಂದು ವರ್ಷದ ಅವಧಿಯ ಒಳಗಾಗಿ ಜಾಬ್ ವರ್ಕ್ ಪೂರ್ಣಗೊಂಡ ನಂತರ ಅಥವಾ ಅನ್ಯಥಾ ಉಪಪ್ರಕರಣ (1)ರ ಖಂಡ (ಎ)ಗೆ ಅನುಸಾರವಾಗಿ ಪ್ರಧಾನಕರ್ತನು ಹಿಂದಕ್ಕೆ ಪಡೆಯದಿದ್ದಲ್ಲಿ ಅಥವಾ ಉಪಪ್ರಕರಣ (1)ರ ಖಂಡ (ಬಿ)ಗೆ ಅನುಸಾರವಾಗಿ ಜಾಬ್ ವರ್ಕರ್‌ನ ವ್ಯವಹಾರ ಸ್ಥಳದಿಂದ ಪೂರೈಕೆಯಾಗದಿದ್ದಲ್ಲಿ ಸದರಿ ಇನ್‌ಪುಟ್ಸ್‌ಗಳನ್ನು ಹೊರ ಕಳುಹಿಸಿದ್ದ ದಿನದಂದೇ ಪ್ರಧಾನಕರ್ತನಿಂದ ಜಾಬ್ ವರ್ಕರ್‌ಗೆ ಅಂಥ ಇನ್‌ಪುಟ್ಸ್‌ಗಳನ್ನು ಪೂರೈಕೆ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(4) ಎರಕಗಳು ಮತ್ತು ಅಚ್ಚುಗಳು, ಜಿಗ್ಸ್ ಮತ್ತು ಜೋಡಣೆಗಳು ಅಥವಾ ಉಪಕರಣಗಳನ್ನು ಹೊರತುಪಡಿಸಿ, ಜಾಬ್ ವರ್ಕ್‌ಗಾಗಿ ಕಳುಹಿಸಿರುವ ಮೂಲ ಸರಕುಗಳನ್ನು ಹೊರಕಳುಹಿಸಿದ ಮೂರು ವರ್ಷದ ಅವಧಿಯ ಒಳಗಾಗಿ, ಜಾಬ್ ವರ್ಕ್ ಪೂರ್ಣಗೊಂಡ ನಂತರ ಅಥವಾ ಅನ್ಯಥಾ ಉಪಪ್ರಕರಣ (1)ರ ಖಂಡ (ಎ)ಗೆ ಅನುಸಾರವಾಗಿ ಪ್ರಧಾನಕರ್ತನಿಂದ ಹಿಂದಕ್ಕೆ ಪಡೆಯದಿದ್ದಲ್ಲಿ ಅಥವಾ ಉಪಪ್ರಕರಣ (1)ರ ಖಂಡ (ಬಿ) ಗೆ ಅನುಸಾರವಾಗಿ ಜಾಬ್ ವರ್ಕರ್‌ನ ವ್ಯವಹಾರ ಸ್ಥಳದಿಂದ ಪೂರೈಕೆಯಾಗದಿದ್ದಲ್ಲಿ, ಅಂಥ ಮೂಲ ಸರಕುಗಳನ್ನು ಹೊರಕಳುಹಿಸಿದ ದಿನದಂದೇ ಪ್ರಧಾನಕರ್ತನಿಂದ ಜಾಬ್ ವರ್ಕರ್‌ಗೆ ಅಂಥ ಮೂಲ ಸರಕುಗಳನ್ನು ಪೂರೈಕೆ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(5) ಉಪಪ್ರಕರಣ (1) ಮತ್ತು (2)ರಲ್ಲಿ ಏನೇ ಒಳಗೊಂಡಿದ್ದರೂ, ಜಾಬ್ ವರ್ಕ್‌ನ ಸಮಯದಲ್ಲಿ ಉತ್ಪತ್ತಿಯಾದ ಯಾವುದೇ ನಿರುಪಯುಕ್ತ ಮತ್ತು ರದ್ದಿ ವಸ್ತುಗಳನ್ನು, ಅಂಥ ಜಾಬ್ ವರ್ಕರ್‌ನು ನೋಂದಾಯಿತನಾಗಿದ್ದರೆ, ತನ್ನ ವ್ಯವಹಾರ ಸ್ಥಳದಿಂದ ನೇರವಾಗಿ ಜಾಬ್ ವರ್ಕರ್‌ನಿಂದ ಅಥವಾ ಜಾಬ್ ವರ್ಕರ್‌ನು, ನೋಂದಾಯಿತನಾಗಿಲ್ಲದಿದ್ದರೆ, ಪ್ರಧಾನಕರ್ತನು, ತೆರಿಗೆ ಸಂದಾಯ ಮಾಡಿ ಪೂರೈಕೆ ಮಾಡಬಹುದು.

**ವಿವರಣೆ.**– ಜಾಬ್ ವರ್ಕ್‌ನ ಉದ್ದೇಶಗಳಿಗಾಗಿ, ಇನ್‌ಪುಟ್ಸ್‌ಗಳು ಪ್ರಧಾನಕರ್ತ ಅಥವಾ ಜಾಬ್ ವರ್ಕರ್‌ನಿಂದ ನಡೆಸಲಾದ ಯಾವುದೇ ಉಪಚಾರದಿಂದ ಅಥವಾ ಸಂಸ್ಕರಣೆಯಿಂದ ಉದ್ಭವಿಸಿದ ಮಧ್ಯಂತರ ಸರಕುಗಳನ್ನು ಒಳಗೊಳ್ಳುತ್ತದೆ.

**144. ಕೆಲವೊಂದು ಸಂದರ್ಭಗಳಲ್ಲಿ, ದಸ್ತಾವೇಜುಗಳಿಗಾಗಿ ಪೂರ್ವಭಾವನೆ ಮಾಡುವುದು.–** ಯಾವುದೇ ದಸ್ತಾವೇಜನ್ನು,–

(i) ಯಾರೇ ವ್ಯಕ್ತಿಯು ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಹಾಜುರುಪಡಿಸಿದ್ದಲ್ಲಿ; ಅಥವಾ

(ii) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ, ಯಾರೇ ವ್ಯಕ್ತಿಯ ಸುಪರ್ದಿನಿಂದ ಮತ್ತು ನಿಯಂತ್ರಣದಿಂದ ವಶಪಡಿಸಿಕೊಳ್ಳಲಾಗಿದ್ದಲ್ಲಿ; ಅಥವಾ

(iii) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ, ಯಾವುದೇ ವ್ಯವಹರಣೆಗಳಲ್ಲಿ ಭಾರತದ ಹೊರಗಿನ ಯಾವುದೇ ಸ್ಥಳದಿಂದ ಸ್ವೀಕರಿಸಲಾಗಿದ್ದಲ್ಲಿ

– ಮತ್ತು ಅಂಥ ದಸ್ತಾವೇಜನ್ನು, ಆತನ ಅಥವಾ ಆತನೊಂದಿಗೆ, ಜಂಟಿಯಾಗಿ ಅಧಿವಿಚಾರಣೆಗೆ ಒಳಪಟ್ಟಿರುವ ಯಾರೇ ಇತರ ವ್ಯಕ್ತಿಯ ವಿರುದ್ಧವಾದ ಪುರಾವೆಯಾಗಿ ಪ್ರಾಸಿಕ್ಯೂಷನ್‌ದಿಂದ ನೀಡಲಾಗಿದಲ್ಲಿ, ನ್ಯಾಯಾಲಯವು,–

(ಎ) ಅಂಥ ವ್ಯಕ್ತಿಯು ತದ್ವಿರುದ್ಧವಾದುದನ್ನು ರುಜುವಾತುಪಡಿಸಿದ ಹೊರತು,–

(i) ಅಂಥ ದಸ್ತಾವೇಜಿನ ಒಳಾಂಶಗಳ ಸತ್ಯತೆಯನ್ನು;

(ii) ಯಾವ ಅಂಥ ದಸ್ತಾವೇಜಿನಲ್ಲಿರುವ ಸಹಿ ಮತ್ತು ದಸ್ತಾವೇಜಿನ ಪ್ರತಿಯೊಂದು ಭಾಗವು ಯಾರೇ ಇತರ ನಿರ್ದಿಷ್ಟ ವ್ಯಕ್ತಿಯ ಕೈಬರಹದಲ್ಲಿದೆ ಎಂದು ತಾತ್ಪರ್ಯವಾಗಬಹುದಾದ ಅಥವಾ ನ್ಯಾಯಾಲಯವು ಯಾರೇ ನಿರ್ದಿಷ್ಟ ವ್ಯಕ್ತಿಯು ಸಹಿ ಮಾಡಿದ್ದಾನೆಂದು ಅಥವಾ ಆತನ ಕೈಬರಹದಲ್ಲಿದೆ ಎಂದು ಯುಕ್ತವಾಗಿ ಭಾವಿಸಬಹುದಾದ ಆ ದಸ್ತಾವೇಜಿನಲ್ಲಿರುವ ಸಹಿ ಮತ್ತು ಪ್ರತಿಯೊಂದು ಇತರ ಭಾಗವು ಆ ವ್ಯಕ್ತಿಯ ಕೈಬರಹದಲ್ಲಿದೆ ಮತ್ತು ಬರೆಯಲಾಗಿರುವ ಅಥವಾ ದೃಢೀಕರಿಸಲಾಗಿರುವ ದಸ್ತಾವೇಜಿನ ಸಂದರ್ಭದಲ್ಲಿ, ಹಾಗೆ ಯಾರು ಬರೆದಿದ್ದಾರೆ ಅಥವಾ ದೃಢೀಕರಿಸಿದ್ದಾರೆ ಎಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಯೇ ಬರೆದಿದ್ದಾನೆಂದು ಅಥವಾ ದೃಢೀಕರಿಸಿದ್ದಾನೆಂದು

– ಪೂರ್ವಭಾವನೆಯನ್ನು ಮಾಡತಕ್ಕದ್ದು.

(ಬಿ) ಅಂಥ ದಸ್ತಾವೇಜನ್ನು ಪುರಾವೆಯಾಗಿ ಅನ್ಯಥಾ ಅಂಗೀಕರಿಸಬಹುದಾಗಿದ್ದರೆ, ಅದಕ್ಕೆ ಕ್ರಮಬದ್ಧವಾಗಿ ಮುದ್ರೆ ಹಾಕಲಾಗಿಲ್ಲ ಎಂದು ಏನೇ ಇದ್ದರೂ, ಪುರಾವೆಯಾಗಿ ದಸ್ತಾವೇಜನ್ನು ಅಂಗೀಕರಿಸತಕ್ಕದ್ದು.

**145. ಮೈಕ್ರೊ ಫಿಲಂಗಳನ್ನು, ದಸ್ತಾವೇಜುಗಳ ಪಡಿಯಚ್ಚು ಪ್ರತಿಗಳನ್ನು ಮತ್ತು ಗಣಕಯಂತ್ರದ ಮುದ್ರಿತ ಪಠ್ಯಗಳನ್ನು ದಸ್ತಾವೇಜುಗಳನ್ನಾಗಿ ಮತ್ತು ಸಾಕ್ಷಿಗಳನ್ನಾಗಿ ಅಂಗೀಕರಿಸುವುದು.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ,–

(ಎ) ದಸ್ತಾವೇಜಿನ ಮೈಕ್ರೊ ಫಿಲಂ ಅಥವಾ ಚಿತ್ರದ ಪುನರ್‌ಸೃಷ್ಟಿ ಅಥವಾ ಅಂಥ ಮೈಕ್ರೊ ಫಿಲಂನಲ್ಲಿ ಒಳಗಿರುವ ಚಿತ್ರಗಳನ್ನು (ಎನ್‌ಲಾರ್ಜ್ ಮಾಡಿರಲಿ ಅಥವಾ ಇಲ್ಲದಿರಲಿ); ಅಥವಾ

(ಬಿ) ದಸ್ತಾವೇಜಿನ ಪಡಿಯಚ್ಚು ಪ್ರತಿಯನ್ನು; ಅಥವಾ

(ಸಿ) ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ದಸ್ತಾವೇಜಿನಲ್ಲಿ ಅಡಕವಾದ ಮತ್ತು ಗಣಕಯಂತ್ರದಿಂದ ಸೃಷ್ಟಿಯಾದ, ಮುದ್ರಿತ ಪತ್ಯದಲ್ಲಿ ಒಳಗೊಂಡಿರುವ ವಿವರಪತ್ರವನ್ನು; ಅಥವಾ

(ಡಿ) ಯಾವುದೇ ಸಾಧನ ಅಥವಾ ಮಾದ್ಯಮದಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಸಂಗ್ರಹಿಸಿದ ಯಾವುದೇ ಮಾಹಿತಿಯನ್ನು, ಅಂಥ ಮಾಹಿತಿಯಿಂದ ಇರುವ ಯಾವುದೇ ಮುದ್ರಿತ ಪ್ರತಿಯನ್ನು ಒಳಗೊಂಡಂತೆ

– ಈ ಅಧಿನಿಯಮದ ಮತ್ತು ಇದರ ಮೇರೆಗೆ ರಚಿಸಿದ ನಿಯಮಗಳ ಉದ್ದೇಶಗಳಿಗಾಗಿ ದಸ್ತಾವೇಜು ಎಂದು ಪರಿಭಾವಿಸತಕ್ಕದ್ದು ಮತ್ತು ಇದರ ಮೇರೆಗೆ ಯಾವುದೇ ವ್ಯವಹರಣೆಗಳಲ್ಲಿ, ಹೆಚ್ಚಿನ ಪುರಾವೆ ಅಥವಾ ಮೂಲಪ್ರತಿಯನ್ನು ಹಾಜರುಪಡಿಸದೇ ಅವುಗಳನ್ನು ನೇರವಾಗಿ ಪುರಾವೆಯಾಗಿ ಅಂಗೀಕರಿಸಬಹುದಾದ ಯಾವುದೇ ಮೂಲಪ್ರತಿಯ ಒಳಾಂಶಗಳ ಅಥವಾ ಅದರಲ್ಲಿ ನಿರೂಪಿಸಿರುವ ಯಾವುವೇ ಸಂಗತಿಗಳ ಪುರಾವೆಯಾಗಿ ಅಂಗೀಕರಿಸತಕ್ಕದ್ದು.

(2) ಈ ಅಧಿನಿಯಮದ ಮತ್ತು ಇದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ, ಈ ಪ್ರಕರಣದ ಕಾರಣದಿಂದಾಗಿ, ಪುರಾವೆಯಾಗಿ ಹೇಳಿಕೆಯನ್ನು, ನೀಡಲು ಇಚ್ಛಿಸಿದಲ್ಲಿ,–

(ಎ) ಹೇಳಿಕೆಯನ್ನು ಒಳಗೊಂಡಿರುವ ದಸ್ತಾವೇಜನ್ನು ಗುರುತಿಸುವ ಮತ್ತು ಅದನ್ನು ತಯಾರಿಸಿದ ವಿಧಾನವನ್ನು ವಿವರಿಸುವ;

(ಬಿ) ಆ ದಸ್ತಾವೇಜನ್ನು ಗಣಕಯಂತ್ರದಿಂದ ತಯಾರಿಸಲಾಗಿದೆ ಎಂದು ತೋರಿಸುವ ಉದ್ದೇಶಕ್ಕಾಗಿ ಸೂಕ್ತವೆನ್ನಬಹುದಾದ ಅಂಥ ದಸ್ತಾವೇಜಿನ ತಯಾರಿಕೆಯಲ್ಲಿ ಒಳಗೊಂಡಿರುವ ಯಾವುದೇ ಸಾಧನದ ಅಂಥ ವಿವರಗಳನ್ನು ನೀಡುವ

– ಪ್ರಮಾಣಪತ್ರವು, ಆ ಪ್ರಮಾಣಪತ್ರದಲ್ಲಿ ಹೇಳಲಾದ ಯಾವುದೇ ವಿಷಯದ ಪುರಾವೆಯಾಗಿರತಕ್ಕದ್ದು ಮತ್ತು ಈ ಉಪಪ್ರಕರಣದ ಉದ್ದೇಶಗಳಿಗಾಗಿ ಅದನ್ನು ಹೇಳುವ ವ್ಯಕ್ತಿಯು ತಿಳಿದಿರುವಷ್ಟರ ಮತ್ತು ನಂಬಿರುವಷ್ಟರ ಮಟ್ಟಿಗೆ ಎಂದು ಹೇಳಬೇಕಿರುವ ವಿಷಯಕ್ಕಾಗಿ ಸಾಕಷ್ಟಾಗಿರತಕ್ಕದ್ದು.

**146. ಸಾಮಾನ್ಯ ಪೋರ್ಟಲ್.–** ಸರ್ಕಾರವು, ಪರಿಷತ್‌ನ ಶಿಫಾರಸ್ಸುಗಳ ಅನ್ವಯ, ನೋಂದಣಿ, ತೆರಿಗೆ ಸಂದಾಯ, ರಿಟರ್ನ್‌ಗಳನ್ನು ಒದಗಿಸುವ, ಏಕೀಕೃತ ತೆರಿಗೆಯ ಲೆಕ್ಕಾಚಾರ ಮತ್ತು ಇತ್ಯರ್ಥ, ವಿದ್ಯುನ್ಮಾನ ವೇ ಬಿಲ್ಲಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ಮತ್ತು ನಿಯಮಿಸಬಹುದಾದ ಅಂಥ ಇತರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಮತ್ತು ಅಂಥ ಉದ್ದೇಶಗಳಿಗಾಗಿ ಸಾಮಾನ್ಯ ಸರಕು ಮತ್ತು ಸೇವೆಗಳ ತೆರಿಗೆಯ ವಿದ್ಯುನ್ಮಾನ ಪೋರ್ಟಲನ್ನು ಅಧಿಸೂಚಿಸಬಹುದು.

**147. ಭಾವಿತ ರಫ್ತುಗಳು.–** ಸರ್ಕಾರವು, ಪರಿಷತ್‌ನ ಶಿಫಾರಸ್ಸುಗಳ ಮೇಲೆ, ಕೆಲವು ಸರಕುಗಳ ಪೂರೈಕೆಯನ್ನು, ಅಂಥ ಸರಕುಗಳು ಭಾರತದಲ್ಲಿ ಉತ್ಪಾದನೆಯಾಗಿದ್ದರೆ, ಪೂರೈಕೆ ಮಾಡಿದ ಸರಕುಗಳು ಭಾರತವನ್ನು ಬಿಟ್ಟು ಹೋಗಿರದಿದ್ದಲ್ಲಿ ಮತ್ತು

ಅಂಥ ಪೂರೈಕೆಗಳಿಗಾಗಿ ಸಂದಾಯವನ್ನು ಭಾರತದ ರೂಪಾಯಿಗಳಲ್ಲಾಗಲಿ ಅಥವಾ ಪರಿವರ್ತಿಸಬಹುದಾದ ವಿದೇಶಿ ವಿನಿಮಯದಲ್ಲಾಗಲಿ ಸ್ವೀಕರಿಸಿದ್ದಲ್ಲಿ "ಭಾವಿತ ರಫ್ತುಗಳು", ಎಂದು ಅಧಿಸೂಚಿಸಬಹುದು.

**148. ಕೆಲವೊಂದು ಪ್ರಕ್ರಿಯೆಗಳಿಗಾಗಿ ವಿಶೇಷ ಕಾರ್ಯವಿಧಾನ.–** ಸರ್ಕಾರವು, ಪರಿಷತ್‌ನ ಶಿಫಾರಸ್ಸುಗಳ ಮೇಲೆ ಮತ್ತು ನಿಯಮಿಸಬಹುದಾದ ಅಂಥ ಷರತ್ತುಗಳ ಮತ್ತು ರಕ್ಷಣಾ ಕ್ರಮಗಳಿಗೆ ಒಳಪಟ್ಟಂತೆ, ಕೆಲವೊಂದು ನೋಂದಾಯಿತ ವ್ಯಕ್ತಿಗಳ ವರ್ಗಗಳನ್ನು ಮತ್ತು ಅಂಥ ವ್ಯಕ್ತಿಗಳ ನೋಂದಣಿ ರಿಟರ್ನ್‌ಗಳನ್ನು ಒದಗಿಸುವುದು, ತೆರಿಗೆಯ ಸಂದಾಯ ಮತ್ತು ಆಡಳಿತ ಸಂಬಂಧಿಸಿದವರು ಒಳಗೊಂಡಂತೆ ಅಂಥ ವ್ಯಕ್ತಿಗಳು ಅನುಸರಿಸಬೇಕಾದ ವಿಶೇಷ ಕಾರ್ಯವಿಧಾನಗಳನ್ನು ಅಧಿಸೂಚಿಸಬಹುದು.

**149. ಸರಕು ಮತ್ತು ಸೇವೆಗಳ ತೆರಿಗೆ ಪರಿಪಾಲನಾ ಶ್ರೇಣಿ ನೀಡಿಕೆ.–** (1) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಗೆ, ಈ ಅಧಿನಿಯಮದ ಉಪಬಂಧಗಳನ್ನು ಆತನು ಪರಿಪಾಲನೆ ಮಾಡುವ ದಾಖಲೆಯ ಆಧಾರದ ಮೇಲೆ ಸರಕು ಮತ್ತು ಸೇವೆಗಳ ತೆರಿಗೆ ಪರಿಪಾಲನಾ ಶ್ರೇಣಿಯ ಅಂಕವನ್ನು ಸರ್ಕಾರವು ಗೊತ್ತುಪಡಿಸಬಹುದು.

(2) ಸರಕು ಮತ್ತು ಸೇವೆಗಳ ತೆರಿಗೆ ಪರಿಪಾಲನಾ ಶ್ರೇಣಿಯ ಅಂಕವನ್ನು, ನಿಯಮಿಸಬಹುದಾದಂಥ ಮಾನದಂಡಗಳ ಆಧಾರದ ಮೇಲೆ ನಿರ್ಧರಿಸಬಹುದು.

(3) ಸರಕುಗಳು ಮತ್ತು ಸೇವೆಗಳ ತೆರಿಗೆ ಪರಿಪಾಲನಾ ಶ್ರೇಣಿಯ ಅಂಕವನ್ನು ನಿಯತಕಾಲಿಕ ಅಂತರಗಳಲ್ಲಿ ನವೀಕರಿಸಬಹುದು ಮತ್ತು ನೋಂದಾಯಿತ ವ್ಯಕ್ತಿಗೆ ತಿಳಿಸಬಹುದು ಮತ್ತು ನಿಯಮಿಸಬಹುದಾದಂಥ ವಿಧಾನದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿಯೂ ಸಹ ಇರಿಸಬಹುದು.

**150. ಮಾಹಿತಿ ರಿಟರ್ನನ್ನು ಒದಗಿಸುವ ಹೊಣೆ.–** (1) ಯಾರೇ,–

(ಎ) ತೆರಿಗೆದಾಯಕ ವ್ಯಕ್ತಿಯು; ಅಥವಾ

(ಬಿ) ಸ್ಥಳೀಯ ಪ್ರಾಧಿಕಾರವು ಅಥವಾ ಇತರ ಸಾರ್ವಜನಿಕ ಸಂಸ್ಥೆಯು ಅಥವಾ ಸಂಘವು; ಅಥವಾ

(ಸಿ) ಮೌಲ್ಯವರ್ಧಿತ ತೆರಿಗೆ ಅಥವಾ ಮಾರಾಟ ತೆರಿಗೆ ಅಥವಾ ರಾಜ್ಯ ಅಬಕಾರಿ ಸುಂಕವನ್ನು ಸಂಗ್ರಹಿಸಲು ಜವಾಬ್ದಾರಿಯಾಗಿರುವ ರಾಜ್ಯ ಸರ್ಕಾರದ ಯಾವುದೇ ಪ್ರಾಧಿಕಾರವು ಅಥವಾ ಉತ್ಪಾದನಾ ಶುಲ್ಕ ಅಥವಾ ಸೀಮಾ ಸುಂಕವನ್ನು ಸಂಗ್ರಹಿಸಲು ಜವಾಬ್ದಾರಿಯಾಗಿರುವ ಕೇಂದ್ರ ಸರ್ಕಾರದ ಪ್ರಾಧಿಕಾರವು; ಅಥವಾ

(ಡಿ) ಆದಾಯ ತೆರಿಗೆ ಅಧಿನಿಯಮ, 1961 (1961ರ 43) ರ ಉಪಬಂಧಗಳ ಅಡಿಯಲ್ಲಿ ನೇಮಕಗೊಂಡಿರುವ ಆದಾಯ ತೆರಿಗೆ ಪ್ರಾಧಿಕಾರವು; ಅಥವಾ

(ಇ) ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2) ರ ಪ್ರಕರಣ 45ಎ ನ ಖಂಡ (ಎ)ನ ಅರ್ಥವ್ಯಾಪ್ತಿಯೊಳಗೆ ಬರುವ ಒಂದು ಬ್ಯಾಂಕಿಂಗ್ ಕಂಪನಿಯು; ಅಥವಾ

(ಎಫ್) ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ 36) ರ ಅಡಿಯಲ್ಲಿನ ರಾಜ್ಯ ವಿದ್ಯುಚ್ಛಕ್ತಿ ಮಂಡಳಿ ಅಥವಾ ಒಂದು ವಿದ್ಯುಚ್ಛಕ್ತಿ ವಿತರಣೆಯ ಅಥವಾ ಪ್ರಸರಣದ ಲೈಸೆನ್ಸ್ದಾರಕನು ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಂಥ ಪ್ರಕಾರ್ಯಗಳನ್ನು ವಹಿಸಿಕೊಟ್ಟಿರುವ ಯಾವುದೇ ಇತರ ಸಂಸ್ಥೆಯು; ಅಥವಾ

(ಜಿ) ನೋಂದಣಿ ಅಧಿನಿಯಮ, 1908 (1908ರ 16)ರ ಪ್ರಕರಣ 6ರ ಮೇರೆಗೆ ನೇಮಕಗೊಂಡಿರುವ ನೋಂದಣಿ ಅಧಿಕಾರಿಯು ಅಥವಾ ಉಪನೋಂದಣಿ ಅಧಿಕಾರಿಯು; ಅಥವಾ

(ಹೆಚ್) ಕಂಪನಿಗಳ ಅಧಿನಿಯಮ, 2013 (2013ರ 18)ರ ಅರ್ಥವ್ಯಾಪ್ತಿಯೊಳಗೆ ಬರುವ ನೋಂದಣಿ ಅಧಿಕಾರಿಯಾಗಿರುವ; ಅಥವಾ

(ಐ) ಮೋಟಾರು ವಾಹನಗಳ ಅಧಿನಿಯಮ, 1988 (1988ರ 59)ರ ಅಡಿಯಲ್ಲಿ ಮೋಟಾರು ವಾಹನಗಳನ್ನು ನೋಂದಾಯಿಸಲು ಅಧಿಕಾರವನ್ನು ಪಡೆದ ನೋಂದಣಿ ಪ್ರಾಧಿಕಾರವು; ಅಥವಾ

(ಜೆ) ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್ ವಸತಿ ಮತ್ತು ಪುನರ್ವ್ಯವಸ್ಥೆ ಅಧಿನಿಯಮ, 2013 (2013ರ 30)ರ ಪ್ರಕರಣ 3ರ ಖಂಡ (ಸಿ)ಯಲ್ಲಿ ಉಲ್ಲೇಖಿಸಲಾದ ಕಲೆಕ್ಟರ್‌ನು; ಅಥವಾ

(ಕೆ) ಭದ್ರತಾ ಪತ್ರಗಳ ಕರಾರು (ನಿಯಂತ್ರಣ) ಅಧಿನಿಯಮ, 1956 (1956ರ 42)ರ ಪ್ರಕರಣ 2ರ ಖಂಡ (ಎಫ್)ನಲ್ಲಿ ಉಲ್ಲೇಖಿಸಲಾದ ಮಾನ್ಯತೆ ಪಡೆದ ಸ್ಟಾಕ್ ವಿನಿಮಯ ಕೇಂದ್ರವು; ಅಥವಾ

(ಎಲ್) ಉಗ್ರಾಣ ಅಧಿನಿಯಮ, 1996 (1996ರ 22) ರ ಪ್ರಕರಣ 2ರ ಉಪಪ್ರಕರಣ (1)ರ ಖಂಡ (ಇ)ಯಲ್ಲಿ ಉಲ್ಲೇಖಿಸಿದ ಉಗ್ರಾಣ; ಅಥವಾ

(ಎಮ್) ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2) ರ ಪ್ರಕರಣ 3ರ ಅಡಿಯಲ್ಲಿ ರಚಿಸಿದ ರಿಸರ್ವ್ ಬ್ಯಾಂಕಿನ ಅಧಿಕಾರಿಯು; ಅಥವಾ

(ಎನ್) ಕಂಪನಿಗಳ ಅಧಿನಿಯಮ, 2013 (2013ರ 18) ರ ಅಡಿಯಲ್ಲಿ ನೋಂದಾಯಿತವಾಗಿರುವ ಸರಕು ಮತ್ತು ಸೇವೆಗಳ ತೆರಿಗೆ ಜಾಲದ ಕಂಪನಿಯು; ಅಥವಾ

(ಓ) ಪ್ರಕರಣ 25ರ ಉಪಪ್ರಕರಣ (9)ರ ಅಡಿಯಲ್ಲಿ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಮಂಜೂರು ನೀಡಲಾಗಿರುವ ವ್ಯಕ್ತಿಯು; ಅಥವಾ

(ಪಿ) ಪರಿಷತ್‌ನ ಶಿಫಾರಸ್ಸುಗಳ ಪ್ರಕಾರ, ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಯಾರೇ ಇತರ ವ್ಯಕ್ತಿಯು

– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ವ್ಯವಹಾರದ ತೆರಿಗೆ ಸಂದಾಯದ ವಿವರಗಳು ಮತ್ತು ಇತರ ವಿವರಗಳು ಅಥವಾ ಬ್ಯಾಂಕ್ ಖಾತೆಗೆ ಅಥವಾ ವಿದ್ಯುಚ್ಛಕ್ತಿಯ ಬಳಕೆಗೆ ಸಂಬಂಧಿಸಿದ ವ್ಯವಹಾರಗಳು, ಸರಕುಗಳ ಅಥವಾ ಸ್ವತ್ತಿನ ಅಥವಾ ಸ್ವತ್ತಿನಲ್ಲಿನ ಹಕ್ಕು ಅಥವಾ ಹಿತಾಸಕ್ತಿಯ ಖರೀದಿ,

ಮಾರಾಟ ಅಥವಾ ವಿನಿಮಯದ ವ್ಯವಹಾರವನ್ನು ಒಳಗೊಂಡಿರುವ ನೋಂದಣಿ ದಾಖಲೆಯನ್ನು ಅಥವಾ ಲೆಕ್ಕಪತ್ರಗಳ ವಿವರಗಳನ್ನು ಅಥವಾ ಯಾವುದೇ ನಿಯತಕಾಲಿಕ ರಿಟರ್ನ್‌ನನ್ನು ಅಥವಾ ದಸ್ತಾವೇಜನ್ನು ನಿರ್ವಹಿಸಲು ಜವಾಬ್ದಾರನಾಗಿರುವ ಯಾರೇ ವ್ಯಕ್ತಿಯು, ಅವುಗಳ ಮಾಹಿತಿ–ರಿಟರ್ನ್‌ನನ್ನು ಅಂಥ ಅವಧಿಗಳಿಗೆ ಸಂಬಂಧಿಸಿದಂತೆ, ನಿಯಮಿಸಬಹುದಾದಂಥ ಸಮಯದೊಳಗೆ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಮತ್ತು ಅಂಥ ಪ್ರಾಧಿಕಾರಕ್ಕೆ ಅಥವಾ ಏಜೆನ್ಸಿಗೆ ಒದಗಿಸತಕ್ಕದ್ದು.

(2) ಕಮಿಷನರ್ ಅಥವಾ ಈ ಸಂಬಂಧದಲ್ಲಿ ಅವರಿಂದ ಪ್ರಾಧಿಕೃತನಾದ ಅಧಿಕಾರಿಯು, ಮಾಹಿತಿ–ರಿಟರ್ನ್‌ನಲ್ಲಿ ಒದಗಿಸಲಾಗಿದ್ದ ಮಾಹಿತಿಯು ದೋಷಪೂರಿತವಾಗಿದೆ ಎಂದು ಪರಿಗಣಿಸಿದ್ದಲ್ಲಿ, ಅಂಥ ಮಾಹಿತಿ–ರಿಟರ್ನ್‌ನನ್ನು ಒದಗಿಸಿದ್ದ ವ್ಯಕ್ತಿಗೆ ದೋಷದ ಬಗ್ಗೆ ತಿಳಿಸಬಹುದು ಮತ್ತು ಆತನಿಗೆ ಅಂಥ ಮಾಹಿತಿ ನೀಡಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಅಥವಾ ಈ ಸಂಬಂಧದಲ್ಲಿ ಸಲ್ಲಿಸಲಾಗಿದ್ದ ಅರ್ಜಿಯ ಮೇಲೆ ಅನುಮತಿಸಬಹುದಾದ ಅಂಥ ಹೆಚ್ಚಿನ ಅವಧಿಯೊಳಗೆ ದೋಷವನ್ನು ಸರಿಪಡಿಸಿಕೊಳ್ಳುವ ಅವಕಾಶವನ್ನು ಸದರಿ ಅಧಿಕಾರಿಯು ನೀಡಬಹುದು ಮತ್ತು ಸದರಿ ಮೂವತ್ತು ದಿನಗಳ ಒಳಗಾಗಿ ಅಥವಾ ಹಾಗೆ ಅನುಮತಿಸಿದ ಹೆಚ್ಚಿನ ಅವಧಿಯೊಳಗೆ ದೋಷವನ್ನು ಸರಿಪಡಿಸದಿದ್ದರೆ ಆಗ ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಮಾಹಿತಿ ರಿಟರ್ನ್ ಒದಗಿಸಿಲ್ಲ ಎಂದು ಪರಿಗಣಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ಅನ್ವಯಿಸತಕ್ಕದ್ದು.

(3) ಮಾಹಿತಿ ರಿಟರ್ನ್‌ನನ್ನು ಒದಗಿಸುವುದು ಅಗತ್ಯವಿರುವಂಥ ವ್ಯಕ್ತಿಯು, ಅದನ್ನು ಉಪಪ್ರಕರಣ (1) ಅಥವಾ ಉಪಪ್ರಕರಣ (2)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಒದಗಿಸದಿದ್ದಲ್ಲಿ ಸದರಿ ಪ್ರಾಧಿಕಾರವು ಆತನಿಗೆ ನೋಟೀಸನ್ನು ನೀಡಿ ಅಂಥ ಮಾಹಿತಿ ರಿಟರ್ನ್‌ನನ್ನು ಅಂಥ ನೋಟೀಸನ್ನು ನೀಡಿದ ದಿನಾಂಕದಿಂದ ತೊಂಬತ್ತು ದಿನಗಳಿಗೆ ಮೀರದ ಅವಧಿಯೊಳಗೆ ಒದಗಿಸುವಂತೆ ಅಗತ್ಯಪಡಿಸಬಹುದು ಮತ್ತು ಅಂಥ ವ್ಯಕ್ತಿಯು ಮಾಹಿತಿ ರಿಟರ್ನ್‌ನನ್ನು ಒದಗಿಸತಕ್ಕದ್ದು.

**151. ಅಂಕಿಅಂಶಗಳನ್ನು ಸಂಗ್ರಹಿಸಲು ಅಧಿಕಾರ.–** (1) ಈ ಅಧಿನಿಯಮದ ಮೇರೆಗೆ ಅಥವಾ ಅದಕ್ಕೆ ಸಂಬಂಧಿಸಿದಂತೆ ವ್ಯವಹರಿಸುವ ಯಾವುದೇ ವಿಷಯಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸುವುದು ಕಮೀಷನರ್‌ನು ಅವಶ್ಯಕವೆಂದು ಪರಿಗಣಿಸಿದಲ್ಲಿ ಹಾಗೆ ಅಂಕಿಅಂಶಗಳನ್ನು ಸಂಗ್ರಹಿಸುವುದಕ್ಕೆ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.

(2) ಹಾಗೆ ನೀಡಲಾಗಿರುವ ಅಂಥ ಅಧಿಸೂಚನೆಯ ಮೇರೆಗೆ, ಕಮೀಷನರ್‌ನು ಅಥವಾ ಅವರಿಂದ ಈ ಸಂಬಂಧದಲ್ಲಿ ಪ್ರಾಧಿಕೃತಗೊಂಡ ಯಾರೇ ವ್ಯಕ್ತಿಯು, ಸಂಬಂಧಪಟ್ಟ ಅಂಕಿಅಂಶಗಳನ್ನು ಸಂಗ್ರಹಿಸಬೇಕಾಗಿರುವ ಯಾವುದೇ ವಿಷಯಗಳಿಗೆ ಸಂಬಂಧಿಸಿದ ಅಂಥ ಮಾಹಿತಿ ಅಥವಾ ರಿಟರ್ನ್‌ಗಳನ್ನು ನಿಯಮಿಸಬಹುದಾದಂಥ ನಮೂನೆ ಮತ್ತು ವಿಧಾನದಲ್ಲಿ ಒದಗಿಸುವಂತೆ ಸಂಬಂಧಿತ ವ್ಯಕ್ತಿಗಳನ್ನು ಕರೆಯಬಹುದು.

**152. ಮಾಹಿತಿ ಬಹಿರಂಗಪಡಿಸುವಿಕೆಯ ಪ್ರತಿಷೇಧ.–** (1) ಪ್ರಕರಣ 150 ಅಥವಾ ಪ್ರಕರಣ 151ರ ಉದ್ದೇಶಗಳಿಗಾಗಿ ಯಾವುವೇ ವಿಷಯಗಳಿಗೆ ಸಂಬಂಧಿಸಿದಂತೆ ನೀಡಲಾಗುವ ಯಾವುದೇ ವೈಯಕ್ತಿಕ ರಿಟರ್ನ್ ಅಥವಾ ಅದರ ಭಾಗದ ಮಾಹಿತಿಯನ್ನು ಸಂಬಂಧಿತ ವ್ಯಕ್ತಿಯ ಅಥವಾ ಆತನ ಪ್ರಾಧಿಕೃತ ಪ್ರತಿನಿಧಿಯ ಲಿಖಿತ ಪೂರ್ವಸಮ್ಮತಿಯಿಲ್ಲದೆ ಯಾವುದೇ ವಿವರಗಳನ್ನು ನಿರ್ದಿಷ್ಟ ವ್ಯಕ್ತಿಗೆ ಉಲ್ಲೇಖಿಸಲಾಗಿದೆ ಎಂದು ಗುರುತಿಸಲು ಸಾಧ್ಯಗೊಳಿಸಬಹುದಾದಂಥ ವಿಧಾನದಲ್ಲಿ

ಪ್ರಕಟಿಸತಕ್ಕದ್ದಲ್ಲ ಮತ್ತು ಅಂಥ ಮಾಹಿತಿಯನ್ನು ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ವ್ಯವಹರಣೆಗಳ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

(2) ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದ ಮೇರೆಗೆ ಪ್ರಾಸಿಕ್ಯೂಷನ್ ಉದ್ದೇಶಗಳಿಗಲ್ಲದೆ ಈ ಅಧಿನಿಯಮದ ಅಡಿಯಲ್ಲಿ ಅಂಕಿಅಂಶಗಳ ಸಂಗ್ರಹಣೆಯಲ್ಲಿ ಅಥವಾ ಈ ಅಧಿನಿಯಮದ ಉದ್ದೇಶಗಳಿಗಾಗಿ ಅವುಗಳ ಕ್ರೋಢೀಕರಣ ಅಥವಾ ಗಣಕೀಕರಣದಲ್ಲಿ ತೊಡಗಿರದ ಯಾರೇ ವ್ಯಕ್ತಿಯನ್ನು, ಪ್ರಕರಣ 151ರಲ್ಲಿ ಉಲ್ಲೇಖಿಸಲಾದ ಯಾವುದೇ ಮಾಹಿತಿಯನ್ನು ಅಥವಾ ವೈಯಕ್ತಿಕ ರಿಟರ್ನ್‌ನನ್ನು ನೋಡಲು ಅಥವಾ ಸಂಪರ್ಕಿಸಲು ಅನುಮತಿಸತಕ್ಕದ್ದಲ್ಲ.

(3) ಅಂಥ ಮಾಹಿತಿಯನ್ನು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಪ್ರಕಟಿಸುವುದು ಅಪೇಕ್ಷಣೀಯವೆಂದು ಕಮಿಷನರ್ ಅಭಿಪ್ರಾಯಪಟ್ಟರೆ, ತೆರಿಗೆದಾಯಕ ವ್ಯಕ್ತಿಗಳ ವರ್ಗಕ್ಕೆ ಅಥವಾ ವ್ಯವಹಾರಗಳ ವರ್ಗಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ಪ್ರಕಟಿಸಲು, ಈ ಪ್ರಕರಣದಲ್ಲಿನ ಯಾವುದೂ ಅನ್ವಯಿಸತಕ್ಕದ್ದಲ್ಲ.

**153. ತಜ್ಞನಿಂದ ನೆರವನ್ನು ತೆಗೆದುಕೊಳ್ಳುವುದು.–** ಸಹಾಯಕ ಆಯುಕ್ತರ ಶ್ರೇಣಿಗಿಂತ ಕಡಿಮೆಯಿಲ್ಲದ ಯಾರೇ ಅಧಿಕಾರಿಯು, ಪ್ರಕರಣದ ಸ್ವರೂಪ ಮತ್ತು ಸಂಕೀರ್ಣತೆ ಹಾಗೂ ರಾಜಸ್ವದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಸೂಕ್ಷ್ಮ ಪರಿಶೀಲನೆ, ವಿಚಾರಣೆ, ತನಿಖೆ ಅಥವಾ ಆತನ ಮುಂದಿರುವ ಯಾವುದೇ ಇತರ ವ್ಯವಹರಣೆಗಳ ಯಾವುದೇ ಹಂತದಲ್ಲಿ ಯಾರೇ ತಜ್ಞರ ನೆರವನ್ನು ತೆಗೆದುಕೊಳ್ಳಬಹುದು.

**154. ಮಾದರಿಗಳನ್ನು ತೆಗೆದುಕೊಳ್ಳುವ ಅಧಿಕಾರ.–** ಆಯುಕ್ತರು ಅಥವಾ ಆತನಿಂದ ಪ್ರಾಧಿಕೃತನಾದ ಅಧಿಕಾರಿಯು, ಯಾರೇ ತೆರಿಗೆದಾಯಕ ವ್ಯಕ್ತಿಯ ಸ್ವಾಧೀನದಿಂದ ಸರಕುಗಳ ಮಾದರಿಗಳನ್ನು ತೆಗೆದುಕೊಳ್ಳುವುದು ಅವಶ್ಯಕ ಎಂದು ಪರಿಗಣಿಸಿದಲ್ಲಿ, ಅಂಥ ಮಾದರಿಗಳನ್ನು ತೆಗೆದುಕೊಳ್ಳಬಹುದು ಮತ್ತು ಹಾಗೆ ತೆಗೆದುಕೊಂಡ ಯಾವುವೇ ಮಾದರಿಗಳಿಗೆ ಒಂದು ರಶೀದಿಯನ್ನು ಒದಗಿಸುವುದು.

**155. ರುಜುವಾತಿನ ಹೊಣೆ.–** ಯಾರೇ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗಾಗಿ ಆತನು ಅರ್ಹನೆಂದು ಕ್ಲೇಮು ಮಾಡಿದ್ದಲ್ಲಿ, ಅಂಥ ಕ್ಲೇಮಿನ ರುಜುವಾತಿನ ಹೊಣೆಗಾರಿಕೆಯು ಅಂಥ ವ್ಯಕ್ತಿಯ ಮೇಲಿರತಕ್ಕದ್ದು.

**156. ಲೋಕ ನೌಕರರು ಎಂದು ಭಾವಿಸಬೇಕಾದ ವ್ಯಕ್ತಿಗಳು.–** ಈ ಅಧಿನಿಯಮದ ಅಡಿಯಲ್ಲಿ ಪ್ರಕಾರ್ಯಗಳನ್ನು ನಿರ್ವಹಿಸುವ ಎಲ್ಲಾ ವ್ಯಕ್ತಿಗಳನ್ನು, ಭಾರತ ದಂಡ ಸಂಹಿತೆ, 1860 (1860ರ 45)ರ ಪ್ರಕರಣ 21ರ ಅರ್ಥವ್ಯಾಪ್ತಿಯೊಳಗೆ ಬರುವ ಲೋಕ ನೌಕರ ಎಂದು ಭಾವಿಸತಕ್ಕದ್ದು.

**157. ಈ ಅಧಿನಿಯಮದ ಅಡಿಯಲ್ಲಿ ತೆಗೆದುಕೊಂಡ ಕ್ರಮದ ರಕ್ಷಣೆ.–** (1) ಈ ಅಧಿನಿಯಮದ ಅಥವಾ ಇದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಯಾವುದನ್ನಾದರೂ ಸದ್ಭಾವನೆಯಿಂದ ಮಾಡಿರುವುದಕ್ಕಾಗಿ ಅಥವಾ ಹಾಗೆ ಮಾಡಲು ಉದ್ದೇಶಿಸಿರುವ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷ, ರಾಜ್ಯಾಧ್ಯಕ್ಷ, ಸದಸ್ಯರು, ಅಧಿಕಾರಿಗಳು ಅಥವಾ ಇತರ ನೌಕರರು ಅಥವಾ ಸದರಿ ಅಪೀಲು ನ್ಯಾಯಾಧಿಕರಣದಿಂದ ಪ್ರಾಧಿಕೃತನಾದ ಇತರ ವ್ಯಕ್ತಿಯ ವಿರುದ್ಧವಾಗಿ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಇದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಯಾವುದನ್ನಾದರೂ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವ, ಈ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಅಥವಾ ಪ್ರಾಧಿಕೃತನಾದ ಯಾರೇ ಅಧಿಕಾರಿಯ ವಿರುದ್ಧವಾಗಿ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**158. ಲೋಕ ನೌಕರನು ಮಾಹಿತಿಯನ್ನು ಬಹಿರಂಗಪಡಿಸುವುದು.–** (1) ಈ ಅಧಿನಿಯಮಕ್ಕೆ ಅನುಸಾರವಾಗಿ ನೀಡಿದ ಯಾವುದೇ ಹೇಳಿಕೆ, ಒದಗಿಸಿದ ರಿಟರ್ನ್ ಅಥವಾ ಹಾಜರುಪಡಿಸಿದ ಲೆಕ್ಕಪತ್ರಗಳು ಅಥವಾ ದಸ್ತಾವೇಜುಗಳಲ್ಲಿ ಅಥವಾ ಈ ಅಧಿನಿಯಮದ ಅಡಿಯಲ್ಲಿನ ವ್ಯವಹರಣೆಗಳು ನಡೆಯುತ್ತಿರುವಾಗ (ಕ್ರಿಮಿನಲ್ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳನ್ನು ಹೊರತುಪಡಿಸಿ) ನೀಡಿದ ಯಾವುದೇ ಸಾಕ್ಷ್ಯದ ದಾಖಲೆಯಲ್ಲಿ, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ವ್ಯವಹರಣೆಯ ಯಾವುದೇ ದಾಖಲೆಗಳಲ್ಲಿ ಒಳಗೊಂಡಿರುವ ಎಲ್ಲಾ ವಿವರಗಳನ್ನು ಉಪಪ್ರಕರಣ (3)ರಲ್ಲಿ ಉಪಬಂಧಿಸಿದುದನ್ನುಳಿದು ಬಹಿರಂಗಪಡಿಸತಕ್ಕದ್ದಲ್ಲ.

(2) ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರಲ್ಲಿ ಒಳಗೊಂಡಿರುವುದು ಏನೇ ಇದ್ದರೂ, ಯಾವುದೇ ನ್ಯಾಯಾಲಯವು ಉಪಪ್ರಕರಣ (3)ರಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿರುವ ವಿವರಗಳಿಗೆ ಸಂಬಂಧಿಸಿದಂತೆ ಅದರ ಸಮ್ಮುಖದಲ್ಲಿ ಹಾಜರುಪಡಿಸುವಂತೆ ಅಥವಾ ಅದರ ಸಮ್ಮುಖದಲ್ಲಿ ಸಾಕ್ಷ್ಯ ನೀಡುವಂತೆ ಈ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಅಥವಾ ಪ್ರಾಧಿಕೃತನಾದ ಯಾರೇ ಅಧಿಕಾರಿಯನ್ನು ಅಗತ್ಯಪಡಿಸತಕ್ಕದ್ದಲ್ಲ.

(3) ಈ ಪ್ರಕರಣದಲ್ಲಿ ಒಳಗೊಂಡಿರುವ ಯಾವುದೂ ಈ ಕೆಳಕಂಡವುಗಳನ್ನು ಎಂದರೆ:–

(ಎ) ಭಾರತ ದಂಡ ಸಂಹಿತೆ, 1860 (1860ರ 45)ರ ಅಥವಾ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 (1988ರ 49) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದ ಅಡಿಯಲ್ಲಿನ ಯಾವುದೇ ಪ್ರಾಸಿಕ್ಯೂಷನ್ ಉದ್ದೇಶಕ್ಕಾಗಿ ಅಂಥ ಯಾವುದೇ ವಿವರಪತ್ರ, ರಿಟರ್ನ್, ಲೆಕ್ಕಪತ್ರಗಳು, ದಸ್ತಾವೇಜುಗಳು, ಸಾಕ್ಷ್ಯ, ಅಫಿಡಾವಿಟ್ ಅಥವಾ ಪ್ರಮಾಣಪೂರ್ವಕ ಲಿಖಿತ ಹೇಳಿಕೆಗೆ ಸಂಬಂಧಿಸಿದ ಅಂಥ ವಿವರಗಳನ್ನು; ಅಥವಾ

(ಬಿ) ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಅಥವಾ ಈ ಅಧಿನಿಯಮವನ್ನು ಕಾರ್ಯಗತಗೊಳಿಸುವಲ್ಲಿ, ಕಾರ್ಯನಿರ್ವಹಿಸುತ್ತಿರುವ ಯಾರೇ ಇತರ ವ್ಯಕ್ತಿಗೆ, ಅಂಥ ವಿವರಗಳನ್ನು ಪರಿಶೀಲಿಸುವುದಕ್ಕಾಗಿ ಅಥವಾ ಈ ಅಧಿನಿಯಮದ ಧ್ಯೇಯಗಳನ್ನು ನೆರವೇರಿಸುವ ಉದ್ದೇಶಗಳಿಗಾಗಿ ಅಂಥ ವಿವರಗಳನ್ನು; ಅಥವಾ

(ಸಿ) ಯಾವುದೇ ನೋಟೀಸ್‌ಗಳನ್ನು ಜಾರಿಗೊಳಿಸುವುದು ಅಥವಾ ಯಾವುದೇ ತಗಾದೆಯನ್ನು ವಸೂಲ್ಮಾಡುವುದು ಈ ಅಧಿನಿಯಮದ ಅಡಿಯಲ್ಲಿ ಕಾನೂನುಬದ್ಧವಾಗಿ ಚಲಾಯಿಸುವಿಕೆಯ ಅಂಥ ಬಹಿರಂಗಪಡಿಸುವಿಕೆಯ ಯಾವುದೇ ಪ್ರಕ್ರಿಯೆಯಾಗಿದ್ದಾಗ ಅದರ ಯಾವುವೇ ವಿವರಗಳನ್ನು; ಅಥವಾ

(ಡಿ) ಸಿವಿಲ್ ನ್ಯಾಯಾಲಯದ ಯಾವ ದಾವೆ ಅಥವಾ ವ್ಯವಹರಣೆಗಳಲ್ಲಿ ಆ ಯಾವುದೇ ದಾವೆಯಲ್ಲಿ ಅಥವಾ ವ್ಯವಹರಣೆಗಳಲ್ಲಿ, ಸರ್ಕಾರವು ಅಥವಾ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಪ್ರಾಧಿಕಾರವು, ಪಕ್ಷಕಾರವಾಗಿದೆಯೋ ಅಂಥ ಯಾವುದೇ ಪ್ರಾಧಿಕಾರವನ್ನು, ಇದರ ಅಡಿಯಲ್ಲಿನ ಯಾವುದೇ ಅಧಿಕಾರಗಳನ್ನು

ಚಲಾಯಿಸಲು ಪ್ರಾಧಿಕೃತಗೊಳಿಸುವ, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿನ ಯಾವುದೇ ವ್ಯವಹರಣೆಯಿಂದ ಉದ್ಭವಿಸಿದ ಯಾವುದೇ ವಿಷಯಗಳಿಗೆ ಸಂಬಂಧಿಸಿದ ಅಂಥ ಯಾವುದೇ ವಿವರಗಳನ್ನು; ಅಥವಾ

(ಇ) ಈ ಅಧಿನಿಯಮದ ಮೂಲಕ ವಿಧಿಸಿದ ತೆರಿಗೆಯ ಸ್ವೀಕೃತಿ ಅಥವಾ ತೆರಿಗೆಯ ಮರುಪಾವತಿಯ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ನೇಮಕಗೊಂಡಿರುವ ಯಾರೇ ಅಧಿಕಾರಿಗೆ ಅಂಥ ಯಾವುದೇ ವಿವರಗಳನ್ನು; ಅಥವಾ

(ಎಫ್) ಅಂಥ ವಿವರಗಳು, ಈ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಅಥವಾ ಪ್ರಾಧಿಕೃತನಾದ ಯಾರೇ ಅಧಿಕಾರಿಯ ನಡತೆಯ ಬಗ್ಗೆ ಯಾವುದೇ ವಿಚಾರಣೆಯ ಉದ್ದೇಶಕ್ಕಾಗಿ ಸಂಬಂಧಪಟ್ಟದ್ದಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ವಿಚಾರಣಾ ಅಧಿಕಾರಿಯಾಗಿ ನೇಮಕಗೊಂಡ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಅಂಥ ಯಾವುದೇ ವಿವರಗಳನ್ನು; ಅಥವಾ

(ಜಿ) ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿಗೆ, ಯಾವುದೇ ತೆರಿಗೆಯನ್ನು ಅಥವಾ ಸುಂಕವನ್ನು ವಿಧಿಸಲು ಮತ್ತು ವಸೂಲು ಮಾಡಲು ಆ ಸರ್ಕಾರಕ್ಕೆ ಸಾಧ್ಯವಾಗುವಂತೆ ಮಾಡುವ ಉದ್ದೇಶಕ್ಕಾಗಿ ಅವಶ್ಯಕವಾಗಬಹುದಾದ ಅಂಥ ಯಾವುವೇ ವಿವರಗಳನ್ನು; ಅಥವಾ

(ಹೆಚ್) ಲೋಕ ನೌಕರ ಅಥವಾ ಯಾವುದೇ ಇತರ ಶಾಸನಬದ್ಧ ಪ್ರಾಧಿಕಾರವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಅವನ ಅಥವಾ ಅದರ ಅಧಿಕಾರಗಳನ್ನು ಕಾನೂನುಬದ್ಧವಾಗಿ ಚಲಾಯಿಸಿ ಹಾಗೆ ಬಹಿರಂಗಪಡಿಸಬೇಕಾದ ಸಂದರ್ಭಗಳಲ್ಲಿಯ ಯಾವುದೇ ವಿವರಗಳನ್ನು; ಅಥವಾ

(ಐ) ಸಂದರ್ಭಾನುಸಾರವಾಗಿ, ಕಾನೂನು ಸಲಹೆಗಾರ, ಕಾಸ್ಟ್ ಅಕೌಂಟೆಂಟ್, ಚಾರ್ಟರ್ಡ್ ಅಕೌಂಟೆಂಟ್, ಕಂಪನಿ ಕಾರ್ಯದರ್ಶಿ ವೃತ್ತಿಯನ್ನು ನಡೆಸುತ್ತಿರುವ ಸದಸ್ಯರುಗಳ ವಿರುದ್ಧ ಶಿಸ್ತುಕ್ರಮವನ್ನು ತೆಗೆದುಕೊಳ್ಳಲು ಅಧಿಕಾರವನ್ನು ಪಡೆದ ಪ್ರಾಧಿಕಾರಕ್ಕೆ, ಕಾರ್ಯನಿರತ ನ್ಯಾಯವಾದಿ, ತೆರಿಗೆ ವೃತ್ತಿಗಾರ, ಕಾರ್ಯನಿರತ ಕಾಸ್ಟ್ ಅಕೌಂಟೆಂಟ್, ಕಾರ್ಯನಿರತ ಚಾರ್ಟರ್ಡ್ ಅಕೌಂಟೆಂಟ್, ಕಾರ್ಯನಿರತ ಕಂಪನಿ ಕಾರ್ಯದರ್ಶಿಯ ವಿರುದ್ಧವಾಗಿ, ಈ ಅಧಿನಿಯಮದ ಅಡಿಯಲ್ಲಿನ ಯಾವುವೇ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ದುರ್ನಡತೆಯ ಆರೋಪದ ಯಾವುದೇ ವಿಚಾರಣೆಗೆ ಸಂಬಂದಿಸಿರುವ ಯಾವುದೇ ವಿವರಗಳನ್ನು; ಅಥವಾ

(ಜೆ) ಯಾವುದೇ ಸ್ವಯಂಚಾಲಿತ ವ್ಯವಸ್ಥೆಯಲ್ಲಿ ದತ್ತಾಂಶ ನಮೂದಿಸುವ ಉದ್ದೇಶಕ್ಕಾಗಿ ಅಥವಾ ಯಾವುದೇ ಸ್ವಯಂಚಾಲಿತ ವ್ಯವಸ್ಥೆಯ ಕಾರ್ಯಚರಣೆಯ, ಉನ್ನತೀಕರಣದ ಅಥವಾ ನಿರ್ವಹಣೆಯ ಉದ್ದೇಶಕ್ಕಾಗಿ ನೇಮಕಗೊಂಡಿರುವ ಯಾವುದೇ ಏಜೆನ್ಸಿಗೆ, ಅಂಥ ಏಜೆನ್ಸಿಯು ಅಂಥ ವಿವರಗಳನ್ನು ಮೇಲೆ ಹೇಳಲಾದ ಉದ್ದೇಶಗಳಿಗಾಗಿ ಅಲ್ಲದೆ ಉಪಯೋಗಿಸುವಂತಿಲ್ಲ ಅಥವಾ ಪ್ರಕಟಿಸುವಂತಿಲ್ಲ ಎಂಬ ಕರಾರಿನ ಪ್ರಕಾರ ಬದ್ಧನಾಗಿದ್ದಲ್ಲಿ, ಯಾವುದೇ ವಿವರಗಳನ್ನು; ಅಥವಾ

(ಕೆ) ಸರ್ಕಾರದ ಅಧಿಕಾರಿಗೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉದ್ದೇಶಗಳಿಗಾಗಿ ಅವಶ್ಯಕವಾಗಬಹುದಾದ ಯಾವುದೇ ವಿವರಗಳನ್ನು; ಮತ್ತು

(ಎಲ್) ಅಂಥ ಮಾಹಿತಿಯನ್ನು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಪ್ರಕಟಿಸುವುದು ಅಪೇಕ್ಷಣೀಯವಾದುದೆಂದು ಕಮೀಷನರ್ ಅಭಿಪ್ರಾಯಪಟ್ಟರೆ, ಯಾವುದೇ ತೆರಿಗೆದಾಯಕ ವ್ಯಕ್ತಿಗಳ ವರ್ಗಕ್ಕೆ ಅಥವಾ ವ್ಯವಹಾರಗಳ ವರ್ಗಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು

– ಬಹಿರಂಗಪಡಿಸುವುದಕ್ಕೆ ಅನ್ವಯವಾಗತಕ್ಕದ್ದಲ್ಲ.

**159. ಕೆಲವು ಪ್ರಕರಣಗಳಲ್ಲಿ ವ್ಯಕ್ತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಕಟಿಸುವುದು.–** (1) ಕಮೀಷನರ್ ಅಥವಾ ಈ ಸಂಬಂಧದಲ್ಲಿ ಅವರಿಂದ ಪ್ರಾಧಿಕೃತಗೊಂಡ ಯಾರೇ ಇತರ ಅಧಿಕಾರಿಯು, ಯಾರೇ ವ್ಯಕ್ತಿಯ ಹೆಸರನ್ನು ಅಥವಾ ಅಂಥ ವ್ಯಕ್ತಿಗೆ ಸಂಬಂಧಪಟ್ಟಂತೆ, ಈ ಅಧಿನಿಯಮದ ಅಡಿಯಲ್ಲಿನ ಯಾವುವೇ ವ್ಯವಹರಣೆಗಳಿಗೆ ಅಥವಾ ಪ್ರಾಸಿಕ್ಯೂಷನ್‌ಗೆ ಸಂಬಂಧಿಸಿದ ಯಾವುದೇ ಇತರ ವಿವರಗಳನ್ನು ಪ್ರಕಟಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವಾದುದು ಅಥವಾ ಸಮಯೋಚಿತವಾದುದೆಂದು ಅಭಿಪ್ರಾಯಪಟ್ಟಿದಲ್ಲಿ, ಅವರು ಸೂಕ್ತವೆಂದು ಭಾವಿಸಿದಂತೆ, ಅಂಥ ವಿಧಾನದಲ್ಲಿ ಅಂಥ ಹೆಸರುಗಳನ್ನು ಮತ್ತು ವಿವರಗಳನ್ನು ಪ್ರಕಟಿಸುವಂತೆ ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ವಿಧಿಸಿದ ಯಾವುದೇ ದಂಡಗಳಿಗೆ ಸಂಬಂಧಿಸಿದ ಮಾಹಿತಿಯನ್ನು, ಅಪೀಲನ್ನು ಸಲ್ಲಿಸಲಾಗಿಲ್ಲದಿದ್ದಲ್ಲಿ, ಅಪೀಲು ಪ್ರಾಧಿಕಾರಕ್ಕೆ ಪ್ರಕರಣ 107ರ ಅಡಿಯಲ್ಲಿ ಅಪೀಲು ಸಲ್ಲಿಸುವುದಕ್ಕಾಗಿ ಇರುವ ಸಮಯವು ಮುಗಿಯುವವರೆಗೆ ಅಥವಾ ಅಪೀಲು ಸಲ್ಲಿಸಿದ್ದರೆ, ಅದು ವಿಲೇ ಆಗುವವರೆಗೆ ಪ್ರಕಟಿಸತಕ್ಕದ್ದಲ್ಲ.

**ವಿವರಣೆ.–** ಕಮೀಷನರ್ ಅಥವಾ ಈ ಸಂಬಂಧದಲ್ಲಿ, ಅವನಿಂದ ಪ್ರಾಧಿಕೃತಗೊಂಡ ಯಾರೇ ಇತರ ಅಧಿಕಾರಿಯು ಪ್ರಕರಣದ ಸನ್ನಿವೇಶಗಳು ಸಮರ್ಥಿಸುತ್ತವೆ ಎಂದು ಅಭಿಪ್ರಾಯಪಟ್ಟರೆ, ಪಾಲುದಾರಿಕಾ ಸಂಸ್ಥೆ, ಕಂಪನಿ ಅಥವಾ ವ್ಯಕ್ತಿಗಳ ಇತರ ಸಂಘದ ಸಂದರ್ಭದಲ್ಲಿ, ಸಂದರ್ಭಾನುಸಾರವಾಗಿ, ಪಾಲುದಾರಿಕಾ ಸಂಸ್ಥೆಯ ಪಾಲುದಾರರ, ನಿರ್ದೇಶಕರುಗಳ, ವ್ಯವಸ್ಥಾಪಕ ಏಜೆಂಟುಗಳ, ಕಂಪನಿಯ ಕಾರ್ಯದರ್ಶಿಗಳ ಮತ್ತು ಖಜಾಂಚಿಗಳ ಅಥವಾ ವ್ಯವಸ್ಥಾಪಕರುಗಳ ಅಥವಾ ಸಂಘದ ಸದಸ್ಯರುಗಳ ಹೆಸರುಗಳನ್ನು ಸಹ ಪ್ರಕಟಿಸಬಹುದು.

**160. ತೆರಿಗೆನಿರ್ಧರಣೆ ವ್ಯವಹರಣೆಗಳು, ಇತ್ಯಾದಿಗಳು ನಿರ್ದಿಷ್ಟ ಆಧಾರಗಳ ಮೇಲೆ ಅಸಿಂಧುವಾಗುವಂತಿಲ್ಲ.–** (1) ಈ ಅಧಿನಿಯಮದ ಯಾವುದೇ ಉಪಬಂಧಗಳಿಗೆ ಅನುಸಾರವಾಗಿ, ಮಾಡಿದ, ಒಪ್ಪಿಕೊಂಡ, ಮಾಡಿದ, ನೀಡಿದ, ಪ್ರಾರಂಭಿಸಿದ ಅಥವಾ ಮಾಡಿದೆ, ಒಪ್ಪಿಕೊಳ್ಳಲಾಗಿದೆ, ಮಾಡಲಾಗಿದೆ, ನೀಡಲಾಗಿದೆ, ಪ್ರಾರಂಭಿಸಲಾಗಿದೆ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ, ತೆರಿಗೆನಿರ್ಧರಣೆ, ಮರು–ತೆರಿಗೆನಿರ್ಧರಣೆ, ನ್ಯಾಯನಿರ್ಣಯ, ಪುನರ್ ಪರಿಶೀಲನೆ, ಪುನರೀಕ್ಷಣೆ, ಅಪೀಲು, ಸರಿಪಡಿಸುವಿಕೆ, ನೋಟೀಸ್, ಸಮನ್ಸ್ ಅಥವಾ ಇತರ ವ್ಯವಹರಣೆಗಳು, ಕೇವಲ ಅದರಲ್ಲಿನ ಯಾವುದೇ ತಪ್ಪು, ದೋಷ ಅಥವಾ ಲೋಪದ ಕಾರಣಕ್ಕಾಗಿ, ಅಂಥ ತೆರಿಗೆನಿರ್ಧರಣೆ, ಮರು–ತೆರಿಗೆನಿರ್ಧರಣೆ, ನ್ಯಾಯನಿರ್ಣಯ, ಪುನರ್ ಪರಿಶೀಲನೆ, ಪುನರೀಕ್ಷಣೆ, ಅಪೀಲು, ಸರಿಪಡಿಸುವಿಕೆ, ನೋಟೀಸ್, ಸಮನ್ಸ್ ಅಥವಾ ಇತರ ವ್ಯವಹರಣೆಗಳು, ಈ ಅಧಿನಿಯಮದ ಅಥವಾ ಯಾವುದೇ ಅಸ್ತಿತ್ವದಲ್ಲಿನ ಕಾನೂನಿನ ಆಶಯಗಳು, ಉದ್ದೇಶಗಳು ಮತ್ತು ಅಗತ್ಯತೆಗಳ

ಖಚಿತತೆಯೊಂದಿಗೆ ಅಥವಾ ಅದಕ್ಕನುಸಾರವಾಗಿ ಸಾರ ಮತ್ತು ಪರಿಣಾಮವನ್ನು ಹೊಂದಿದ್ದರೆ ಅಸಿಂಧುವಾಗತಕ್ಕದ್ದಲ್ಲ ಅಥವಾ ಅಸಿಂಧು ಎಂದು ಭಾವಿಸತಕ್ಕದ್ದಲ್ಲ.

(2) ಯಾವ ನೋಟೀಸ್‌ನ, ಆದೇಶದ ಜಾರಿಗೊಳಿಸುವಿಕೆಯನ್ನು ಅಥವಾ ಪತ್ರ ವ್ಯವಹಾರವನ್ನು ಯಾರಿಗೆ ಅದನ್ನು ಜಾರಿಗೊಳಿಸಲಾಗಿದೆಯೋ ಅಂಥ ವ್ಯಕ್ತಿಯು, ಸಂದರ್ಭಾನುಸಾರವಾಗಿ ಆ ನೋಟೀಸ್‌ನ, ಆದೇಶದ ಅಥವಾ ಪತ್ರ ವ್ಯವಹಾರ ಮೇರೆಗೆ, ಈಗಾಗಲೇ ಕಾರ್ಯನಿರ್ವಹಿಸಿದ್ದರೆ ಅಥವಾ ಅಂಥ ನೋಟೀಸ್‌ಗೆ, ಆದೇಶಕ್ಕೆ ಅಥವಾ ಪತ್ರ ವ್ಯವಹಾರಕ್ಕೆ ಅನುಸಾರವಾಗಿ ಪ್ರಾರಂಭಗೊಳಿಸಿದ, ಮುಂದುವರಿಸಿದ, ಅಂತಿಮಗೊಳಿಸಿದ ಈ ಮುಂಚಿನ ವ್ಯವಹರಣೆಗಳಲ್ಲಿ ಅಥವಾ ಆ ಸಮಯದಲ್ಲಿ ಅಂಥ ಜಾರಿಗೊಳಿಸುವಿಕೆಯನ್ನು ಪ್ರಶ್ನಿಸಲಾಗಿರದಿದ್ದಲ್ಲಿ ಪ್ರಶ್ನಿಸತಕ್ಕದ್ದಲ್ಲ.

**161. ದಾಖಲೆಯಲ್ಲಿ ಮೇಲ್ನೋಟಕ್ಕೆ ಕಂಡುಬರುವ ತಪ್ಪುಗಳನ್ನು ಸರಿಪಡಿಸುವುದು.–** ಪ್ರಕರಣ 160ರ ಉಪಬಂಧಗಳಿಗೆ ಬಾಧಕವಾಗದಂತೆ ಮತ್ತು ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ನಿರ್ಣಯವನ್ನು ಅಥವಾ ಆದೇಶವನ್ನು ಅಥವಾ ನೋಟೀಸನ್ನು ಅಥವಾ ಪ್ರಮಾಣಪತ್ರವನ್ನು ಅಥವಾ ಯಾವುವೇ ಇತರ ದಸ್ತಾವೇಜುಗಳನ್ನು, ಹೊರಡಿಸಿರುವ ಅಥವಾ ನೀಡಿರುವ ಯಾವುದೇ ಪ್ರಾಧಿಕಾರವು, ಅಂಥ ನಿರ್ಣಯದ ಅಥವಾ ಆದೇಶದ ಅಥವಾ ನೋಟೀಸಿನ ಅಥವಾ ಪ್ರಮಾಣಪತ್ರದ ಅಥವಾ ಯಾವುದೇ ಇತರ ದಸ್ತಾವೇಜುಗಳ ದಾಖಲೆಯಲ್ಲಿ, ಮೇಲ್ನೋಟಕ್ಕೆ ಕಂಡುಬರುವ ತಪ್ಪುಗಳನ್ನು, ಸ್ವತಃ ತಾನೇ ಆಗಲಿ ಅಥವಾ ಅಂಥ ತಪ್ಪುಗಳನ್ನು ಈ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಯಾರೇ ಅಧಿಕಾರಿ ಅಥವಾ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಅಧಿಕಾರಿಯು ಅಥವಾ ಒಕ್ಕೂಟ ರಾಜ್ಯಕ್ಷೇತ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಅಧಿಕಾರಿಯು ಅಥವಾ ಬಾಧಿತ ವ್ಯಕ್ತಿಯು ಅದರ ಗಮನಕ್ಕೆ ತಂದರೆ, ಸಂದರ್ಭಾನುಸಾರವಾಗಿ ಅಂಥ ನಿರ್ಣಯವನ್ನು ಅಥವಾ ಆದೇಶವನ್ನು ಅಥವಾ ಪ್ರಮಾಣಪತ್ರವನ್ನು ಅಥವಾ ನೋಟೀಸನ್ನು ಅಥವಾ ಯಾವುದೇ ಇತರ ದಸ್ತಾವೇಜುಗಳನ್ನು ಜಾರಿಗೊಳಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯ ಒಳಗಾಗಿ ಸರಿಪಡಿಸಬಹುದು:

ಪರಂತು, ಅಂಥ ನಿರ್ಣಯವನ್ನು ಅಥವಾ ಆದೇಶವನ್ನು ಅಥವಾ ಪ್ರಮಾಣಪತ್ರವನ್ನು ಅಥವಾ ನೋಟೀಸನ್ನು ಅಥವಾ ಯಾವುದೇ ಇತರ ದಸ್ತಾವೇಜುಗಳನ್ನು ಜಾರಿಗೊಳಿಸಿದ ದಿನಾಂಕದಿಂದ ಆರು ತಿಂಗಳುಗಳ ಅವಧಿಯ ನಂತರ ಅಂಥ ಯಾವುದೇ ಸರಿಪಡಿಸುವಿಕೆಯನ್ನು ಮಾಡತಕ್ಕದ್ದಲ್ಲ:

ಮತ್ತು ಪರಂತು, ಸರಿಪಡಿಸುವಿಕೆಯು ಕೇವಲ, ಯಾವುದೇ ಆಕಸ್ಮಿಕ ಕೈತಪ್ಪಿನಿಂದ ಅಥವಾ ಲೋಪದಿಂದ ಉದ್ಭವಿಸುವ ಲಿಪಿಕ ಅಥವಾ ಗಣಿತ ದೋಷದ ಸ್ವರೂಪದಲ್ಲಿರುವ ಅಂಥ ಪ್ರಕರಣಗಳ ಸಂದರ್ಭದಲ್ಲಿ ಸದರಿ ಆರು ತಿಂಗಳುಗಳ ಅವಧಿಯು ಅನ್ವಯಿಸತಕ್ಕದ್ದಲ್ಲ:

ಮತ್ತೂ ಪರಂತು, ಅಂಥ ಸರಿಪಡಿಸುವಿಕೆಯು ಯಾವುದೇ ವ್ಯಕ್ತಿಗೆ ಪ್ರತಿಕೂಲ ಪರಿಣಾಮ ಬೀರುವಂತಿದ್ದಲ್ಲಿ, ಅಂಥ ಸರಿಪಡಿಸುವಿಕೆಯನ್ನು ಕಾರ್ಯಗತಗೊಳಿಸುವಾಗ, ಪ್ರಾಧಿಕಾರವು ಸ್ವಾಭಾವಿಕ ನ್ಯಾಯತತ್ವಗಳನ್ನು ಅನುಸರಿಸತಕ್ಕದ್ದು.

**162. ಸಿವಿಲ್ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯ ಪ್ರತಿಷೇಧ.–** ಪ್ರಕರಣ 117 ಮತ್ತು ಪ್ರಕರಣ 118ರಲ್ಲಿ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ

ಅಥವಾ ಅದಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ಯಾವುವೇ ಪ್ರಶ್ನೆಗಳನ್ನು ವ್ಯವಹರಿಸುವ ಅಥವಾ ನಿರ್ಧರಿಸುವ ಅಧಿಕಾರವ್ಯಾಪ್ತಿಯನ್ನು ಸಿವಿಲ್ ನ್ಯಾಯಾಲಯ ಹೊಂದಿರತಕ್ಕದ್ದಲ್ಲ.

**163. ಶುಲ್ಕ ವಿಧಿಸುವುದು.–** ಯಾರೇ ವ್ಯಕ್ತಿಗೆ, ಆತನು ಆ ಉದ್ದೇಶಕ್ಕಾಗಿ ಸಲ್ಲಿಸಿದ ಅರ್ಜಿಯ ಮೇಲೆ ಯಾವುದೇ ಆದೇಶ ಅಥವಾ ದಸ್ತಾವೇಜಿನ ಪ್ರತಿಯನ್ನು, ಎಲ್ಲೆಲ್ಲಿ ಒದಗಿಸಬೇಕಾಗಿರುವುದೋ, ಅದಕ್ಕಾಗಿ ನಿಯಮಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

**164. ನಿಯಮಗಳನ್ನು ರಚಿಸಲು ಸರ್ಕಾರದ ಅಧಿಕಾರ.–** (1) ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಸರ್ಕಾರವು ಉಪಪ್ರಕರಣ (1)ರ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಯಾವ ವಿಷಯಗಳಿಗಾಗಿ ಈ ಅಧಿನಿಯಮದ ಮೂಲಕ ಅಗತ್ಯಪಡಿಸಿದ ಅಥವಾ ನಿಯಮಿಸಬಹುದಾದ, ಆ ಎಲ್ಲಾ ಅಥವಾ ಆ ಯಾವುವೇ ವಿಷಯಗಳಿಗಾಗಿ ನಿಯಮಗಳನ್ನು ಅಥವಾ ಯಾವ ಉಪಬಂಧಗಳ ಸಂಬಂಧದಲ್ಲಿ ನಿಯಮಗಳ ಮೂಲಕ ರಚಿಸಬಹುದೋ ಆ ಉಪಬಂಧ.

(3) ಈ ಅಧಿನಿಯಮದ ಉಪಬಂಧಗಳು ಜಾರಿಗೆ ಬಂದ ದಿನಾಂಕಕ್ಕಿಂತ ಮೊದಲಿನ ದಿನಾಂಕದಿಂದ, ನಿಯಮಗಳಿಗೆ ಅಥವಾ ಅವುಗಳಲ್ಲಿ ಯಾವುದಕ್ಕಾದರೂ ಪೂರ್ವಾನ್ವಯ ಪರಿಣಾಮವನ್ನು ನೀಡುವ ಅಧಿಕಾರವನ್ನು, ಈ ಪ್ರಕರಣದ ಮೂಲಕ ಪ್ರದತ್ತವಾಗಿರುವ ನಿಯಮಗಳನ್ನು ರಚಿಸುವ ಅಧಿಕಾರವು ಒಳಗೊಳ್ಳತಕ್ಕದ್ದು.

(4) ಉಪಪ್ರಕರಣ (1) ಅಥವಾ ಉಪಪ್ರಕರಣ (2)ರ ಅಡಿಯಲ್ಲಿ ರಚಿಸಿದ ಯಾವುವೇ ನಿಯಮಗಳನ್ನು ಉಲ್ಲಂಘಿಸಿದರೆ, ಹತ್ತು ಸಾವಿರ ರೂಪಾಯಿಗಳನ್ನು ಮೀರದ ದಂಡಕ್ಕೆ ಗುರಿಯಾಗತಕ್ಕದ್ದು ಎಂದು ಉಪಬಂಧಿಸಬಹುದು.

**165. ವಿನಿಯಮಗಳನ್ನು ರಚಿಸಲು ಅಧಿಕಾರ.–** ಮಂಡಳಿಯು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ಈ ಅಧಿನಿಯಮದ ಅಥವಾ ಇದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಅಧಿಸೂಚನೆಯ ಅನುಗುಣವಾಗಿ ವಿನಿಯಮಗಳನ್ನು ರಚಿಸಬಹುದು.

**166. ನಿಯಮಗಳು, ವಿನಿಯಮಗಳು ಮತ್ತು ಅಧಿಸೂಚನೆಗಳನ್ನು ಮಂಡಿಸುವುದು.–** ಈ ಅಧಿನಿಯಮದ ಅಡಿಯಲ್ಲಿ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಮಂಡಳಿಯು ರಚಿಸಿದ ಪ್ರತಿಯೊಂದು ವಿನಿಯಮವನ್ನು ಮತ್ತು ಸರ್ಕಾರವು ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅವನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್‍ನ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನದಲ್ಲಿ ಅಥವಾ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಗಾಗಿ, ಅದು ಅಧಿವೇಶನದಲ್ಲಿರುವಾಗ, ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನವು ಅಥವಾ ಅನುಕ್ರಮ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯಗೊಳ್ಳುವ ಮುನ್ನ, ಉಭಯ ಸದನಗಳು ಸಂದರ್ಭಾನುಸಾರ ಆ ನಿಯಮದಲ್ಲಿ, ವಿನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟು ಮಾಡಲು

ಒಪ್ಪಿದರೆ ಅಥವಾ ಉಭಯ ಸದನಗಳು, ಆ ನಿಯಮವನ್ನು, ವಿನಿಯಮವನ್ನು ಅಥವಾ ಅಧಿಸೂಚನೆಯನ್ನು ರಚಿಸತಕ್ಕದ್ದಲ್ಲವೆಂದು ಒಪ್ಪಿದರೆ, ಆ ನಿಯಮ, ವಿನಿಯಮ ಅಥವಾ ಅಧಿಸೂಚನೆಯು ಆ ತರುವಾಯ, ಸಂದರ್ಭಾನುಸಾರವಾಗಿ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ, ಆದಾಗ್ಯೂ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಸಂದರ್ಭಾನುಸಾರವಾಗಿ ಆ ನಿಯಮದ, ವಿನಿಯಮದ ಮತ್ತು ಅಧಿಸೂಚನೆಯ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**167. ಅಧಿಕಾರಗಳ ಪ್ರತ್ಯಾಯೋಜನೆ.–** ಕಮಿಷನರ್ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳು, ಯಾವುದಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರವು ಅಥವಾ ಅಧಿಕಾರಿಯು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಪ್ರಾಧಿಕಾರ ಅಥವಾ ಅಧಿಕಾರಿಯು ಸಹ ಚಲಾಯಿಸಬಹುದು ಎಂದು ನಿರ್ದೇಶಿಸಬಹುದು.

**168. ಸೂಚನೆಗಳನ್ನು ಅಥವಾ ನಿರ್ದೇಶನಗಳನ್ನು ನೀಡುವ ಅಧಿಕಾರ.–** (1) ಮಂಡಳಿಯು, ಈ ಅಧಿನಿಯಮದ ಅನುಷ್ಠಾನದಲ್ಲಿ ಏಕರೂಪತೆ ತರುವ ಉದ್ದೇಶಕ್ಕಾಗಿ, ಅದು ಸೂಕ್ತ ಎಂದು ಭಾವಿಸಿದಂತೆ, ಕೇಂದ್ರ ತೆರಿಗೆ ಅಧಿಕಾರಿಗಳಿಗೆ ಅಂಥ ಆದೇಶಗಳನ್ನು, ಸೂಚನೆಗಳನ್ನು ಅಥವಾ ನಿರ್ದೇಶನಗಳನ್ನು ನೀಡುವುದು ಅವಶ್ಯಕ ಅಥವಾ ಸಮಯೋಚಿತ ಎಂದು ಅದು ಪರಿಗಣಿಸಿದ್ದಲ್ಲಿ, ಅದು ಹಾಗೆ ಮಾಡಬಹುದು ಮತ್ತು ಈ ಅಧಿನಿಯಮದ ಅನುಷ್ಠಾನದಲ್ಲಿ ನಿಯೋಜಿತರಾದ ಅಂಥ ಎಲ್ಲಾ ಅಧಿಕಾರಿಗಳು ಮತ್ತು ಎಲ್ಲಾ ಇತರ ವ್ಯಕ್ತಿಗಳು, ಆ ತರುವಾಯ ಅಂಥ ಆದೇಶಗಳನ್ನು, ಸೂಚನೆಗಳನ್ನು ಅಥವಾ ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ಅನುಸರಿಸತಕ್ಕದ್ದು.

(2) ಪ್ರಕರಣ 2ರ ಖಂಡ (91)ರಲ್ಲಿ, ಪ್ರಕರಣ 5ರ ಉಪಪ್ರಕರಣ (3)ರಲ್ಲಿ, ಪ್ರಕರಣ 25ರ ಉಪಪ್ರಕರಣ (9)ರ ಖಂಡ (ಬಿ)ನಲ್ಲಿ, ಪ್ರಕರಣ 35ರ ಉಪಪ್ರಕರಣಗಳಾದ (3) ಮತ್ತು (4)ರಲ್ಲಿ, ಪ್ರಕರಣ 37ರ ಉಪಪ್ರಕರಣ (1)ರಲ್ಲಿ, ಪ್ರಕರಣ 39ರ ಉಪಪ್ರಕರಣ (6)ರಲ್ಲಿ, ಅದರ ಎರಡನೇ ಪರಂತುಕವನ್ನು ಹೊರತುಪಡಿಸಡಿಸಿ ಪ್ರಕರಣ 143ರ ಉಪಪ್ರಕರಣ (1)ರಲ್ಲಿ, ಪ್ರಕರಣ 66ರ ಉಪಪ್ರಕರಣ (5)ರಲ್ಲಿ, ಪ್ರಕರಣ 143ರ ಉಪಪ್ರಕರಣ (1)ರಲ್ಲಿ, ಪ್ರಕರಣ 151ರ ಉಪಪ್ರಕರಣ (1)ರಲ್ಲಿ, ಪ್ರಕರಣ 158ರ ಉಪಪ್ರಕರಣ (3)ರ ಖಂಡ (1)ರಲ್ಲಿ ಮತ್ತು ಪ್ರಕರಣ 167ರಲ್ಲಿ, ನಿರ್ದಿಷ್ಟಪಡಿಸಿದಂತೆ ಕಮಿಷನರ್ ಎಂದರೆ, ಮಂಡಳಿಯಲ್ಲಿ ನಿಯುಕ್ತರಾದ ಕಮಿಷನರ್ ಅಥವಾ ಜಂಟಿ ಕಾರ್ಯದರ್ಶಿ ಎಂದು ಅರ್ಥೈಸತಕ್ಕದ್ದು ಮತ್ತು ಅಂಥ ಕಮಿಷನರ್ ಅಥವಾ ಜಂಟಿ ಕಾರ್ಯದರ್ಶಿಯು ಮಂಡಳಿಯ ಅನುಮೋದನೆಯೊಂದಿಗೆ ಸದರಿ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**168ಎ. ವಿಶೇಷ ಸಂದರ್ಭಗಳಲ್ಲಿ ಕಾಲಮಿತಿಯನ್ನು ವಿಸ್ತರಿಸುವ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ, ಅಧಿಸೂಚನೆಯ ಮೂಲಕ, ಕಾರ್ಯಗಳ ಸಂಬಂಧದಲ್ಲಿ ದೈವಕೃತದ ಕಾರಣದಿಂದ ಪೂರ್ಣಗೊಳಿಸಲಾಗದ ಅಥವಾ ಪಾಲಿಸಲಾಗದ ಕಾರ್ಯಗಳ ಸಂಬಂಧದಲ್ಲಿ ಈ

ಅಧಿನಿಯಮದ ಅಡಿಯಲ್ಲಿ, ನಿರ್ದಿಷ್ಟಪಡಿಸಿದ ಅಥವಾ ಗೊತ್ತುಪಡಿಸಿದ ಅಥವಾ ಅಧಿಸೂಚಿಸಿದ ಕಾಲಮಿತಿಯನ್ನು ವಿಸ್ತರಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವ ಅಧಿಕಾರವು, ಅಂಥ ಅಧಿಸೂಚನೆಗಳಿಗೆ ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕಿಂತ ಮುಂಚಿನ ದಿನಾಂಕವಲ್ಲದ ದಿನಾಂಕದಿಂದ ಪೂರ್ವಾನ್ವಯ ಪರಿಣಾಮ ನೀಡುವ ಅಧಿಕಾರವನ್ನು ಒಳಗೊಂಡಿರತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ "ದೈವಕೃತ" ಎಂಬ ಪದಾವಳಿಗೆ, ಯುದ್ಧ, ಸಾಂಕ್ರಾಮಿಕ ರೋಗ, ಪ್ರವಾಹ, ಬರ, ಬೆಂಕಿ, ಚಂಡಮಾರುತ, ಭೂಕಂಪ ಸಂದರ್ಭಗಳು ಅಥವಾ ಈ ಅಧಿನಿಯಮದ ಯಾವುದೇ ಉಪಬಂಧಗಳ ಅನುಷ್ಠಾನಕ್ಕೆ ಬಾಧಕ ಉಂಟುಮಾಡುವ ನೈಸರ್ಗಿಕವಾಗಿ ಅಥವಾ ಅನ್ಯಥಾ ಬಾಧಕ ಉಂಟುಮಾಡುವ ಇತರ ಯಾವುದೇ ವಿಪತ್ತು ಸಂದರ್ಭ.

**169. ಕೆಲವು ಸನ್ನಿವೇಶಗಳಲ್ಲಿ ನೋಟೀಸನ್ನು ಜಾರಿಗೊಳಿಸುವುದು.–** (1) ಈ ಅಧಿನಿಯಮ ಅಥವಾ ಇದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿನ ಯಾವುದೇ ನಿರ್ಣಯ, ಆದೇಶ, ಸಮನ್ಸ್, ನೋಟೀಸ್ ಅಥವಾ ಇತರ ಮಾಹಿತಿಯನ್ನು ಈ ಕೆಳಕಂಡ ಯಾವುದಾದರೂ ಒಂದು ವಿಧಾನದಲ್ಲಿ ಎಂದರೆ:–

(ಎ) ವಿಳಾಸದಾರನಿಗೆ ಅಥವಾ ತೆರಿಗೆದಾಯಕ ವ್ಯಕ್ತಿಗೆ ಅಥವಾ ತೆರಿಗೆದಾಯಕ ವ್ಯಕ್ತಿಯ ಪರವಾಗಿ ವ್ಯವಹರಣೆಗಳಲ್ಲಿ ಹಾಜರಾಗಲು ಪ್ರಾಧಿಕಾರ ಹೊಂದಿರುವ, ಆತನ ವ್ಯವಸ್ಥಾಪಕ ಅಥವಾ ಪ್ರಾಧಿಕೃತ ಪ್ರತಿನಿಧಿಗೆ ಅಥವಾ ನ್ಯಾಯವಾದಿಗೆ ಅಥವಾ ತೆರಿಗೆ ವೃತ್ತಿಗಾರನಿಗೆ ಅಥವಾ ನಿಯೋಜನೆ ಮಾಡಿದ ವ್ಯವಹಾರಕ್ಕೆ ಸಂಬಂಧಿಸಿದಂತೆ ಆತನು ನಿಯಮಿತವಾಗಿ ವ್ಯಕ್ತಿಗೆ ಅಥವಾ ತೆರಿಗೆದಾಯಕ ವ್ಯಕ್ತಿಯೊಂದಿಗೆ ವಾಸಿಸುತ್ತಿರುವ ಕುಟುಂಬದ ಯಾರೇ ವಯಸ್ಕ ಸದಸ್ಯನಿಗೆ ಅದನ್ನು ನೇರವಾಗಿ ಅಥವಾ ಕೊರಿಯರ್ ಒಳಗೊಂಡಂತೆ ಸಂದೇಶವಾಹಕನ ಮೂಲಕ ಕೊಡುವುದರ ಅಥವಾ ನೀಡುವುದರ ಮೂಲಕ; ಅಥವಾ

(ಬಿ) ಯಾರಿಗೆ ಅದನ್ನು ಉದ್ದೇಶಿಸಲಾಗಿದೆಯೋ ಆ ವ್ಯಕ್ತಿಗೆ ಅಥವಾ ಕೊನೆಯದಾಗಿ ತಿಳಿದು ಬಂದ ಆತನ ವ್ಯವಹಾರದ ಅಥವಾ ವಾಸಸ್ಥಳದಲ್ಲಿ ಯಾರಾದರೂ ಆತನ ಪ್ರಾಧಿಕೃತ ಪ್ರತಿನಿಧಿ ಇದ್ದರೆ, ಆತನಿಗೆ, ಸ್ವೀಕೃತಿಯ ಪತ್ರ ಸಹಿತ ನೋಂದಾಯಿತ ಅಂಚೆ ಅಥವಾ ಸ್ಪೀಡ್ ಪೋಸ್ಟ್ ಅಥವಾ ಕೊರಿಯರ್ ಮೂಲಕ; ಅಥವಾ

(ಸಿ) ನೋಂದಣಿಯ ಸಮಯದಲ್ಲಿ ಅಥವಾ ಕಾಲ ಕಾಲಕ್ಕೆ ತಿದ್ದುಪಡಿ ಮಾಡಿದಂತೆ ಒದಗಿಸಿರುವ ಆತನ ಇ–ಮೇಲ್ ವಿಳಾಸಕ್ಕೆ ಪತ್ರವನ್ನು ಕಳುಹಿಸುವುದರ ಮೂಲಕ; ಅಥವಾ

(ಡಿ) ಸಾಮಾನ್ಯ ಪೋರ್ಟಲ್‌ನಲ್ಲಿ ಅದು ಲಭ್ಯವಾಗುವಂತೆ ಮಾಡುವ ಮೂಲಕ; ಅಥವಾ

(ಇ) ತೆರಿಗೆದಾಯಕ ವ್ಯಕ್ತಿಯು ಅಥವಾ ಅದನ್ನು ಯಾರಿಗೆ ನೀಡಲಾಗಿದೆಯೊ ಆ ವ್ಯಕ್ತಿಯು ವಾಸಿಸುತ್ತಿದ್ದಾನೆಂದು, ವ್ಯವಹಾರವನ್ನು ನಡೆಸುತ್ತಿದ್ದನೆಂದು ಅಥವಾ ಲಾಭಕ್ಕಾಗಿ ವೈಯಕ್ತಿಕವಾಗಿ ಕೆಲಸ ಮಾಡುತ್ತಿದ್ದನೆಂದು ಕೊನೆಯದಾಗಿ ತಿಳಿದು ಬಂದ ಸ್ಥಳದಲ್ಲಿ ಪ್ರಸಾರದಲ್ಲಿ ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸುವುದರ ಮೂಲಕ; ಅಥವಾ

(ಎಫ್) ಮೇಲೆ ಹೇಳಿದ ಯಾವುವೇ ವಿಧಾನಗಳು ಕಾರ್ಯಸಾಧ್ಯವಾಗದಿದ್ದರೆ, ಕೊನೆಯದಾಗಿ ತಿಳಿದು ಬಂದ ಆತನ ವ್ಯವಹಾರದ ಸ್ಥಳದಲ್ಲಿ ಅಥವಾ ವಾಸಸ್ಥಳದಲ್ಲಿ ಎದ್ದುಕಾಣುವ ಸ್ಥಳದಲ್ಲಿ ಅಂಟಿಸುವುದರ ಮೂಲಕ ಅಥವಾ ಅಂಥ ವಿಧಾನವೂ ಸಹ ಯಾವುದೇ ಕಾರಣಗಳಿಗಾಗಿ ಕಾರ್ಯಸಾಧ್ಯವಾಗದಿದ್ದರೆ, ಆಗ ಅಂಥ ನಿರ್ಣಯವನ್ನು ಅಥವಾ ಆದೇಶವನ್ನು ಹೊರಡಿಸಿದ ಅಥವಾ ಅಂಥ ಸಮನ್ ಅಥವಾ ನೋಟೀಸನ್ನು ಜಾರಿಗೊಳಿಸಿದ ಅಧಿಕಾರಿಯ ಕಛೇರಿಯ ಅಥವಾ ಪ್ರಾಧಿಕಾರದ, ಸೂಚನಾಪತ್ರದ ಫಲಕದ ಮೇಲೆ ಅದರ ಪ್ರತಿಯನ್ನು ಅಂಟಿಸುವುದರ ಮೂಲಕ

– ಜಾರಿಗೊಳಿಸತಕ್ಕದ್ದು.

(2) ಪ್ರತಿಯೊಂದು ನಿರ್ಣಯವನ್ನು, ಆದೇಶವನ್ನು, ಸಮನ್ಸನ್ನು, ನೋಟೀಸ್‌ನ್ನು ಅಥವಾ ಇತರ ಮಾಹಿತಿಯನ್ನು ಉಪಪ್ರಕರಣ (1)ರಲ್ಲಿ ಉಪಬಂಧಿಸಿದ ವಿಧಾನದಲ್ಲಿ ನೀಡಿದ ಅಥವಾ ಪ್ರಕಟಿಸಿದ ಅಥವಾ ಅದರ ಪ್ರತಿಯನ್ನು ಅಂಟಿಸಿದ ದಿನಾಂಕದಂದೇ ಜಾರಿಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದು.

(3) ಅಂಥ ನಿರ್ಣಯ, ಆದೇಶ, ಸಮನ್ಸ್, ನೋಟೀಸ್ ಅಥವಾ ಇತರ ಮಾಹಿತಿಗಳನ್ನು ನೋಂದಾಯಿತ ಅಂಚೆ ಅಥವಾ ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸಿದ್ದಾಗ, ವಿರುದ್ಧವಾದುದನ್ನು ರುಜುವಾತುಪಡಿಸಿದ ಹೊರತು, ಅಂಥ ಅಂಚೆಯು, ಸಾಗಾಣಿಕೆಯಲ್ಲಿ ಸಾಮಾನ್ಯವಾಗಿ ತೆಗೆದುಕೊಳ್ಳುವ ಅವಧಿಯು, ಕೊನೆಗೊಳ್ಳುವಂದು ವಿಳಾಸದಾರನು ಸ್ವೀಕರಿಸಿದ್ದಾನೆಂದು ಭಾವಿಸತಕ್ಕದ್ದು.

**170. ತೆರಿಗೆ, ಮುಂತಾದವುಗಳನ್ನು ಪೂರ್ಣಾಂಕಗೊಳಿಸುವುದು.–** ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಇತರೆ ಮೊತ್ತದ ಮೊಬಲಗು ಮತ್ತು ಮರುಪಾವತಿಯ ಮೊತ್ತ ಅಥವಾ ಬಾಕಿಯಿರುವ ಯಾವುದೇ ಇತರ ಮೊತ್ತವು ಹತ್ತಿರದ ರೂಪಾಯಿಗೆ ಪೂರ್ಣಾಂಕಗೊಳ್ಳತಕ್ಕದ್ದು, ಈ ಉದ್ದೇಶಕ್ಕಾಗಿ, ಅಂಥ ಮೊತ್ತವು, ಪೈಸೆಗಳನ್ನು ಒಳಗೊಂಡ ರೂಪಾಯಿಯ ಭಾಗವಾಗಿದ್ದಲ್ಲಿ, ಆಗ, ಅಂಥ ಭಾಗವು ಐವತ್ತು ಪೈಸೆ ಅಥವಾ ಅದಕ್ಕಿಂತ ಹೆಚ್ಚಿದ್ದರೆ, ಅದನ್ನು ಒಂದು ರೂಪಾಯಿಗೆ ಹೆಚ್ಚಿಸತಕ್ಕದ್ದು, ಅಂಥ ಭಾಗವು ಐವತ್ತು ಪೈಸೆಗಿಂತ ಕಡಿಮೆಯಿದ್ದರೆ ಅದನ್ನು ಬಿಟ್ಟುಬಿಡತಕ್ಕದ್ದು.

**171. ಲಾಭಕೋರಕತನದ ವಿರುದ್ಧ ಕ್ರಮ.–** (1) ಯಾವುದೇ ಸರಕು ಅಥವಾ ಸೇವೆಗಳ ಪೂರೈಕೆಯ ಮೇಲಿನ ತೆರಿಗೆ ದರ ಯಾವುದೇ ಇಳಿಕೆಯನ್ನು ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಅನುಕೂಲವನ್ನು, ಬೆಲೆಗಳಲ್ಲಿ ಅದಕ್ಕನುಗುಣವಾದ ಇಳಿಕೆ ಮಾಡಿ ಸ್ವೀಕರಿಸುವವನಿಗೆ ವರ್ಗಾಯಿಸತಕ್ಕದ್ದು.

(2) ಕೇಂದ್ರ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ಅಧಿಸೂಚನೆಯ ಮೂಲಕ, ಯಾವುದೇ ನೋಂದಾಯಿತ ವ್ಯಕ್ತಿಯು ಪಡೆದುಕೊಂಡ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅಥವಾ ತೆರಿಗೆ ದರದಲ್ಲಿನ ಇಳಿಕೆಯ ಪ್ರಯುಕ್ತ ಬೆಲೆಯಲ್ಲಾದ ಇಳಿಕೆಗೆ ಅನುಗುಣವಾಗಿ ಆತನು ಪೂರೈಕೆ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಬೆಲೆಯಲ್ಲಿ ವಾಸ್ತವಿಕವಾಗಿ ಇಳಿಕೆಯಾಗಿದೆಯೇ ಎನ್ನುವುದನ್ನು ಪರಿಶೀಲಿಸಲು, ಪ್ರಾಧಿಕಾರವನ್ನು ರಚಿಸಬಹುದು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿತವಾದ ಅಸ್ತಿತ್ವದಲ್ಲಿರುವ ಪ್ರಾಧಿಕಾರಕ್ಕೆ ಅಧಿಕಾರ ನೀಡಬಹುದು.

(3) ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ಪ್ರಾಧಿಕಾರವು ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3ಎ) ಉಪಪ್ರಕರಣ (2)ರಲ್ಲಿ ಉಲ್ಲೇಖಿಸಿದ ಪ್ರಾಧಿಕಾರವು, ಸದರಿ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಿದ ಪರಿಶೀಲನೆಯನ್ನು ನಡೆಸಿದ ನಂತರ, ಉಪಪ್ರಕರಣ (1)ರ ಮೇರೆಗೆ ಯಾರೇ ನೊಂದಾಯಿತ ವ್ಯಕ್ತಿಯ ಅಕ್ರಮ ಲಾಭ ಗಳಿಸಿದ್ದಾನೆಂದು ನಿರ್ಣಯಕ್ಕೆ ಬಂದಲ್ಲಿ, ಅಂಥ ವ್ಯಕ್ತಿಯು ಹಾಗೆ ಲಾಭಮಾಡಿಕೊಂಡ ಮೊಬಲಗಿನ ಶೇಕಡಾ ಹತ್ತರಷ್ಟಕ್ಕೆ ಸಮನಾದ ದಂಡವನ್ನು ಪಾವತಿ ಮಾಡಲು ಹೊಣೆಗಾರನಾಗಿರತಕ್ಕದ್ದು:

ಪರಂತು, ಪ್ರಾಧಿಕಾರವು ಆದೇಶವನ್ನು ಹೊರಡಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಗಳಿಸಿದ ಅಕ್ರಮ ಲಾಭದ ಮೊತ್ತವನ್ನು ಠೇವಣಿ ಮಾಡಿದ್ದರೆ ಯಾವುದೇ ದಂಡವನ್ನು ವಿಧಿಸತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ "ಲಾಭಕೋರತನ" ಎಂಬ ಪದಾವಳಿಯು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಮೇಲೆ ತೆರಿಗೆಯ ದರದಲ್ಲಿನ ಕಡಿತದ ಲಾಭವನ್ನು ಅಥವಾ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಬೆಲೆಯಲ್ಲಿನ ಸಮಪ್ರಮಾಣದ ಕಡಿತದ ರೂಪದಲ್ಲಿ ಸ್ವೀಕರ್ತನಿಗೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಲಾಭವನ್ನು ವರ್ಗಾಯಿಸದ ಕಾರಣದಿಂದಾಗಿ ನಿರ್ಧರಿಸಲಾದ ಮೊಬಲಗು ಎಂದರ್ಥ.

**172. ತೊಂದರೆಗಳ ನಿವಾರಣೆ.–** (1) ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ, ಯಾವುದೇ ತೊಂದರೆಯು ಉದ್ಭವಿಸಿದರೆ, ಸರ್ಕಾರವು, ಮಂಡಳಿಯ ಶಿಫಾರಸ್ಸುಗಳ ಮೇಲೆ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿ ಸದರಿ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅವಶ್ಯಕ ಮತ್ತು ಯುಕ್ತವೆಂದು, ಅದಕ್ಕೆ ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಇದರ ಅಡಿಯಲ್ಲಿ ರಚಿತವಾದ ನಿಯಮಗಳಿಗೆ ಅಥವಾ ವಿನಿಯಮಗಳಿಗೆ ಅಸಂಗತವಲ್ಲದ ಅಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭಗೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಯು ಕೊನೆಗೊಂಡ ನಂತರ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ನಂತರ ಆದಷ್ಟು ಬೇಗನೆ ಸಂಸತ್‌ನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**173. 1994ರ ಅಧಿನಿಯಮ 32ರ ತಿದ್ದುಪಡಿ.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಆರ್ಥಿಕ ಅಧಿನಿಯಮ, 1994ರ ಅಧ್ಯಾಯ–V ಅನ್ನು ಬಿಟ್ಟುಬಿಡತಕ್ಕದ್ದು.

**174. ನಿರಸನ ಮತ್ತು ಉಳಿಸುವಿಕೆ.–** (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಲಾದುದನ್ನುಳಿದು, ಈ ಅಧಿನಿಯಮವು ಪ್ರಾರಂಭಗೊಳ್ಳುವ ದಿನಾಂಕದಂದು ಅಥವಾ ದಿನಾಂಕದಿಂದ, ಕೇಂದ್ರ ಉತ್ಪಾದನಾ ಶುಲ್ಕ ಅಧಿನಿಯಮ, 1944 (1944 ರ 1) (ಸಂವಿಧಾನಕ್ಕೆ ಏಳನೇ ಅನುಸೂಚಿಯ ಕೇಂದ್ರ ಪಟ್ಟಿಯ 84ರ ನಮೂದಿನಲ್ಲಿ ಸೇರಿಸಿದ ಸರಕುಗಳಿಗೆ ಸಂಬಂಧಿಸಲಾದುದನ್ನು ಹೊರತುಪಡಿಸಿ), ವೈದ್ಯಕೀಯ ಮತ್ತು ಪ್ರಸಾಧನ ತಯಾರಿಕೆ (ಉತ್ಪಾದನಾ ಶುಲ್ಕ) ಅಧಿನಿಯಮ, 1955 (1955 ರ 16), ಅಧಿಕ ಉತ್ಪಾದನಾ ಶುಲ್ಕಗಳ (ಮಹತ್ವವಾದ ವಿಶೇಷ ಸರಕುಗಳು) ಅಧಿನಿಯಮ, 1957 (1957 ರ

58), ಅಧಿಕ ಉತ್ಪಾದನಾ ಶುಲ್ಕಗಳ (ಜವಳಿ ಮತ್ತು ಜವಳಿ ವಸ್ತು) ಅಧಿನಿಯಮ, 1978 (1978 ರ 40) ಮತ್ತು ಕೇಂದ್ರ ಉತ್ಪಾದನಾ ಶುಲ್ಕ ಟ್ಯಾರಿಫ್ ಅಧಿನಿಯಮ, 1985 (1986 ರ 5) ಅನ್ನು (ಇವುಗಳನ್ನು ಇನ್ನು ಮುಂದೆ ನಿರಸನಗೊಂಡ ಅಧಿನಿಯಮಗಳು ಎಂದು ಉಲ್ಲೇಖಿಸಲಾಗಿದೆ) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಸದರಿ ಅಧಿನಿಯಮಗಳ ನಿರಸನವು ಮತ್ತು ಆರ್ಥಿಕ ಅಧಿನಿಯಮ, 1994ರ ತಿದ್ದುಪಡಿಯು (ಇನ್ನು ಮುಂದೆ ``ಅಂಥ ತಿದ್ದುಪಡಿ" ಅಥವಾ ಸಂದರ್ಭಾನುಸಾರ "ತಿದ್ದುಪಡಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 173ರ ಉಪಪ್ರಕರಣ (1)ರಲ್ಲಿ ತಿಳಿಸಿದಷ್ಟರ ವ್ಯಾಪ್ತಿಗೆ,–

(ಎ) ಅಂಥ ತಿದ್ದುಪಡಿಯ ಅಥವಾ ನಿರಸನದ ಸಮಯದಲ್ಲಿ ಜಾರಿಯಲ್ಲಿರದ ಅಥವಾ ಅಸ್ತಿತ್ವದಲ್ಲಿರದ ಯಾವುದನ್ನು ಪುನರುಜ್ಜೀವನಗೊಳಿಸತಕ್ಕದ್ದಲ್ಲ; ಅಥವಾ

(ಬಿ) ತಿದ್ದುಪಡಿ ಅಧಿನಿಯಮದ ಅಥವಾ ನಿರಸನಗೊಂಡ ಅಧಿನಿಯಮಗಳ ಹಿಂದಿನ ಕಾರ್ಯಾಚರಣೆಯನ್ನು ಅಥವಾ ಆ ಮೇರೆಗೆ ಕ್ರಮಬದ್ಧವಾಗಿ ಮಾಡಲಾದ ಅಥವಾ ಅನುಭವಿಸಿದ ಯಾವುದನ್ನು ಬಾಧಿಸತಕ್ಕದ್ದಲ್ಲ;

(ಸಿ) ತಿದ್ದುಪಡಿ ಅಧಿನಿಯಮದ ಅಥವಾ ನಿರಸನಗೊಂಡ ಅಧಿನಿಯಮಗಳ ಅಡಿಯಲ್ಲಿ ಅರ್ಜಿತ, ಸಂಚಿತ ಅಥವಾ ಉಂಟಾದ ಯಾವುದೇ ಹಕ್ಕನ್ನು, ವಿಶೇಷಾಧಿಕಾರವನ್ನು, ಬಾಧ್ಯತೆಯನ್ನು ಅಥವಾ ಹೊಣೆಗಾರಿಕೆಯನ್ನು ಅಥವಾ ಹಾಗೆ ನಿರಸನಗೊಂಡ ಅಥವಾ ತಿದ್ದುಪಡಿಯಾದ ಅಧಿನಿಯಮಗಳ ಅಡಿಯಲ್ಲಿನ ಆದೇಶಗಳನ್ನು ಬಾಧಿಸತಕ್ಕದ್ದಲ್ಲ:

ಪರಂತು, ಅಧಿಸೂಚನೆಯ ಮೂಲಕ ಹೂಡಿಕೆಗೆ ಪ್ರತಿಯಾಗಿ ಉತ್ತೇಜನದಂತೆ ಮಂಜೂರು ಮಾಡಿದ ಯಾವುದೇ ತೆರಿಗೆ ವಿನಾಯಿತಿಯು, ಸದರಿ ಅಧಿಸೂಚನೆಯನ್ನು, ಗೊತ್ತುಪಡಿಸಿದ ದಿನದಂದು ಅಥವಾ ನಂತರ ರದ್ದುಗೊಳಿಸಿದರೆ, ವಿಶೇಷಾಧಿಕಾರದಂತೆ ಮುಂದುವರಿಯತಕ್ಕದ್ದಲ್ಲ; ಅಥವಾ

(ಡಿ) ತಿದ್ದುಪಡಿ ಅಧಿನಿಯಮದ ಅಥವಾ ನಿರಸನಗೊಂಡ ಅಧಿನಿಯಮಗಳ ಉಪಬಂಧಗಳಿಗೆ ವಿರುದ್ಧವಾಗಿ ಎಸಗಿದ ಯಾವುದೇ ಅಪರಾಧಕ್ಕೆ ಅಥವಾ ಉಲ್ಲಂಘನೆಗೆ ಸಂಬಂಧಿಸಿದಂತೆ, ಬಾಕಿಯಿರುವ ಅಥವಾ ಬಾಕಿಯಾಗಬಹುದಾದ ಯಾವುದೇ ಸುಂಕ, ತೆರಿಗೆ, ಸರ್‌ಚಾರ್ಜು, ದಂಡ, ಜುಲ್ಮಾನೆ, ಬಡ್ಡಿಗೆ ಅಥವಾ ಯಾವುದೇ ಮುಟ್ಟುಗೋಲಿಗೆ ಅಥವಾ ಉಂಟಾದ ಅಥವಾ ವಿಧಿಸಿದ ದಂಡನೆಗೆ ಬಾಧಕವಾಗತಕ್ಕದ್ದಲ್ಲ; ಅಥವಾ

(ಇ) ಮೇಲೆ ಹೇಳಿದ ಅಂಥ ಯಾವುದೇ ಸುಂಕ, ತೆರಿಗೆ, ಸರ್‌ಚಾರ್ಜು, ದಂಡ, ಜುಲ್ಮಾನೆ, ಬಡ್ಡಿ, ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ಮುಟ್ಟುಗೋಲು ಅಥವಾ ದಂಡನೆಗೆ ಸಂಬಂಧಿಸಿದ ಯಾವುದೇ ತನಿಖೆಗೆ, ವಿಚಾರಣೆಗೆ, ಪರಿಶೀಲನೆಗೆ (ಪರಿಷ್ಕರಣೆ ಮತ್ತು ಲೆಕ್ಕಪರಿಶೋಧನೆ ಒಳಗೊಂಡಂತೆ) ತೆರಿಗೆನಿರ್ಧರಣೆ ವ್ಯವಹರಣೆಗಳಿಗೆ, ನ್ಯಾಯ ನಿರ್ಣಯಕ್ಕೆ ಮತ್ತು ಯಾವುದೇ ಇತರ ಕಾನೂನು ವ್ಯವಹರಣೆಗಳಿಗೆ ಅಥವಾ ಬಾಕಿಗಳ ವಸೂಲಾತಿಗೆ ಅಥವಾ ಪರಿಹಾರಗಳಿಗೆ ಬಾಧಕವಾಗತಕ್ಕದ್ದಲ್ಲ ಮತ್ತು ಅಂಥ ಯಾವುದೇ ತನಿಖೆ, ವಿಚಾರಣೆ, ಪರಿಶೀಲನೆ (ಪರಿಷ್ಕರಣೆ ಮತ್ತು ಲೆಕ್ಕಪರಿಶೋಧನೆ ಒಳಗೊಂಡಂತೆ) ತೆರಿಗೆನಿರ್ಧರಣೆ ವ್ಯವಹರಣೆಗಳು, ನ್ಯಾಯ ನಿರ್ಣಯ ಮತ್ತು ಯಾವುದೇ ಇತರ ಕಾನೂನು ವ್ಯವಹರಣೆಗಳು ಅಥವಾ ಬಾಕಿಗಳ ವಸೂಲಾತಿ ಅಥವಾ ಪರಿಹಾರಗಳನ್ನು, ಈ ಅಧಿನಿಯಮಗಳು ಹಾಗೆ

ತಿದ್ದುಪಡಿಯಾಗಿಲ್ಲದಿದ್ದರೆ ಅಥವಾ ನಿರಸನಗೊಂಡಿಲ್ಲದಿದ್ದರೆ ಹೇಗೆ ಆರಂಭಿಸಬಹುದಿತ್ತೋ, ಮುಂದುವರಿಸಬಹುದಿತ್ತೋ ಅಥವಾ ಜಾರಿಗೊಳಿಸಬಹುದಿತ್ತೋ ಹಾಗೆ ಆರಂಭಿಸಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಅಂಥ ಯಾವುದೇ ತೆರಿಗೆ, ಸರ್‌ಚಾರ್ಜು, ದಂಡ, ಜುಲ್ಮಾನೆ, ಬಡ್ಡಿ, ಮುಟ್ಟುಗೋಲು ಅಥವಾ ದಂಡನೆಯನ್ನು ವಿಧಿಸಬಹುದು ಅಥವಾ ಹೇರಬಹುದು; ಅಥವಾ

(ಎಫ್) ಸದರಿ ತಿದ್ದುಪಡಿ ಅಧಿನಿಯಮದ ಅಥವಾ ನಿರಸನಗೊಂಡ ಅಧಿನಿಯಮಗಳ ಅಡಿಯಲ್ಲಿ ಗೊತ್ತುಪಡಿಸಿದ ದಿನಕ್ಕಿಂತ ಮುಂಚಿನ ದಿನದಂದು ಅಥವಾ ನಂತರ ಆರಂಭಿಸಲಾದ ಅಪೀಲು, ಪುನರಾವಲೋಕನ ಅಥವಾ ಉಲ್ಲೇಖಗಳಿಗೆ ಸಂಬಂಧಿಸಿರುವುದೂ ಒಳಗೊಂಡಂತೆ, ಯಾವುದೇ ವ್ಯವಹರಣೆಗಳನ್ನು ಬಾಧಿಸತಕ್ಕದ್ದಲ್ಲ ಮತ್ತು ಅಂಥ ವ್ಯವಹರಣೆಗಳು ಈ ಅಧಿನಿಯಮವು ಜಾರಿಗೆ ಬಂದಿಲ್ಲದಿದ್ದರೆ ಮತ್ತು ಸದರಿ ಅಧಿನಿಯಮಗಳು ತಿದ್ದುಪಡಿಯಾಗಿಲ್ಲದಿದ್ದರೆ ಅಥವಾ ನಿರಸನಗೊಂಡಿಲ್ಲದಿದ್ದರೆ ಹೇಗೆ ಸದರಿ ತಿದ್ದುಪಡಿಯಾದ ಅಧಿನಿಯಮದ ಅಥವಾ ನಿರಸನಗೊಂಡ ಅಧಿನಿಯಮಗಳ ಅಡಿಯಲ್ಲಿ ಮುಂದುವರಿಯುತ್ತಿದ್ದವೋ ಹಾಗೆ ಮುಂದುವರಿಯತಕ್ಕದ್ದು.

(3) ಉಪಪ್ರಕರಣ (1) ಮತ್ತು (2)ರಲ್ಲಿ ಉಲ್ಲೇಖಿಸಲಾದ ನಿರ್ದಿಷ್ಟ ವಿಷಯಗಳ ನಮೂದನೆಯು, ನಿರಸನದ ಪರಿಣಾಮಕ್ಕೆ ಸಂಬಂಧಿಸಿದಂತೆ, ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ ಪ್ರಕರಣ 6ರ ಸಾಮಾನ್ಯ ಅನ್ವಯಕ್ಕೆ ಪ್ರತಿಕೂಲವಾಗತಕ್ಕದ್ದಲ್ಲ ಅಥವಾ ಬಾಧಕವಾಗತಕ್ಕದ್ದಲ್ಲ.

## ಅನುಸೂಚಿ I

**[ಪ್ರಕರಣ 7ನ್ನು ನೋಡಿ]**

**ಪ್ರತಿಫಲರಹಿತವಾಗಿ ಮಾಡಿದ್ದರೂ ಸಹ ಪೂರೈಕೆ ಎಂದು ಪರಿಗಣಿಸಬೇಕಾದ ಚಟುವಟಿಕೆಗಳು**

1. ಆಸ್ತಿಗಳ ಮೇಲೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟನ್ನು ತೆಗೆದುಕೊಂಡಿದ್ದಲ್ಲಿ, ಅಂಥ ವ್ಯವಹಾರದ ಆಸ್ತಿಗಳ ಶಾಶ್ವತ ವರ್ಗಾವಣೆ ಅಥವಾ ವಿಲೆ ಮಾಡುವುದು.

2. ಪ್ರಕರಣ 25ರಲ್ಲಿ ನಿರ್ದಿಷ್ಟಪಡಿಸಿರುವಂತೆ ಸಂಬಂಧಪಟ್ಟ ವ್ಯಕ್ತಿಗಳ ನಡುವೆ ಅಥವಾ ಬೇರೆ ಬೇರೆ ವ್ಯಕ್ತಿಗಳ ನಡುವೆ ವ್ಯವಹಾರದ ಕ್ರಮದಲ್ಲಿ ಅಥವಾ ಮುಂದುವರಿಕೆಯಾಗಿ ಸರಕುಗಳನ್ನು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನು ಪೂರೈಕೆ ಮಾಡಿರುವುದು:

ಪರಂತು, ಉದ್ಯೋಗದಾತನು ಉದ್ಯೋಗಿಗೆ ಒಂದು ಹಣಕಾಸು ವರ್ಷದಲ್ಲಿ ನೀಡಿದ ಐವತ್ತು ಸಾವಿರ ರೂಪಾಯಿಗಳನ್ನು ಮೀರದ ಮೌಲ್ಯದ ಉಡುಗೊರೆಗಳನ್ನು ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆ ಎಂದು ಪರಿಗಣಿಸತಕ್ಕದ್ದಲ್ಲ.

3. ಸರಕುಗಳನ್ನು,–

(ಎ) ಏಜೆಂಟನು, ಪ್ರಧಾನಕರ್ತನ ಪರವಾಗಿ ಅಂಥ ಸರಕುಗಳನ್ನು ಪೂರೈಕೆ ಮಾಡುವುದರ ಜವಾಬ್ದಾರಿ ವಹಿಸಿಕೊಂಡಿದ್ದಲ್ಲಿ, ಪ್ರಧಾನಕರ್ತನು ಆತನ ಏಜೆಂಟನಿಗೆ; ಅಥವಾ

(ಬಿ) ಏಜೆಂಟನು ಪ್ರಧಾನಕರ್ತನ ಪರವಾಗಿ ಅಂಥ ಸರಕುಗಳನ್ನು ಸ್ವೀಕರಿಸುವ ಜವಾಬ್ದಾರಿ ವಹಿಸಿಕೊಂಡಿದ್ದಲ್ಲಿ, ಒಬ್ಬ ಏಜೆಂಟನಿಂದ ಆತನ ಪ್ರಧಾನಕರ್ತನಿಗೆ

– ಪೂರೈಕೆ ಮಾಡುವುದು.

4. ವ್ಯವಹಾರದ ಕ್ರಮದಲ್ಲಿ ಅಥವಾ ಮುಂದುವರಿಕೆಯಾಗಿ, ಸಂಬಂಧಿತ ವ್ಯಕ್ತಿಯು ಅಥವಾ ಭಾರತದ ಹೊರಗಿನ ಆತನ ಇತರೆ ಯಾವುದೇ ಕಾರ್ಯಸ್ಥಳಗಳಿಂದ ವ್ಯಕ್ತಿಯ ಸೇವೆಗಳನ್ನು ತೆಗೆದುಕೊಳ್ಳುವುದು.

## ಅನುಸೂಚಿ II

**ಪ್ರಕರಣ 7ನ್ನು ನೋಡಿ।**

**ಸರಕುಗಳ ಪೂರೈಕೆ ಅಥವಾ ಸೇವೆಗಳ ಪೂರೈಕೆ ಎಂದು ಪರಿಗಣಿಸಬೇಕಾದ ಚಟುವಟಿಕೆಗಳು ಅಥವಾ ವ್ಯವಹಾರಗಳು**

1. ವರ್ಗಾವಣೆ

(ಎ) ಸರಕುಗಳಲ್ಲಿನ ಹಕ್ಕು ಸ್ವಾಮ್ಯದ ಯಾವುದೇ ವರ್ಗಾವಣೆಯು, ಸರಕುಗಳ ಪೂರೈಕೆಯಾಗುತ್ತದೆ;

(ಬಿ) ಅವುಗಳ ಹಕ್ಕು ಸ್ವಾಮ್ಯದ ವರ್ಗಾವಣೆಯಿಲ್ಲದೇ, ಸರಕುಗಳಲ್ಲಿನ ಹಕ್ಕಿನ ಅಥವಾ ಸರಕುಗಳಲ್ಲಿನ ಅವಿಭಾಜ್ಯ ಪಾಲಿನ ಯಾವುದೇ ವರ್ಗಾವಣೆಯು, ಸೇವೆಗಳ ಪೂರೈಕೆಯಾಗುತ್ತದೆ;

(ಸಿ) ಒಪ್ಪಿಕೊಂಡಿರುವಂತೆ ಪೂರ್ಣ ಪ್ರತಿಫಲದ ಸಂದಾಯವಾದ ಮೇಲೆ, ಭವಿಷ್ಯತ್ ದಿನಾಂಕದಂದು ಸರಕುಗಳಲ್ಲಿನ–ಸ್ವತ್ತು ವರ್ಗಾವಣೆಯಾಗತಕ್ಕದ್ದು ಎಂದು ನಿಗದಿಪಡಿಸಿರುವ ಕರಾರಿನ ಅಡಿಯಲ್ಲಿ, ಸರಕುಗಳಲ್ಲಿನ ಹಕ್ಕು ಸ್ವಾಮ್ಯದ ಯಾವುದೇ ವರ್ಗಾವಣೆಯು, ಸರಕುಗಳ ಪೂರೈಕೆಯಾಗುತ್ತದೆ.

2. ಭೂಮಿ ಮತ್ತು ಕಟ್ಟಡ

(ಎ) ಭೂಮಿಯನ್ನು ಅಧಿಭೋಗಕ್ಕಾಗಿ ನೀಡಲಾಗುವ ಯಾವುದೇ ಭೋಗ್ಯ, ಗೇಣಿ, ಅನುಭೋಗ, ಲೈಸೆನ್ಸ್ – ಇವು ಸೇವೆಗಳ ಪೂರೈಕೆಯಾಗುತ್ತವೆ;

(ಬಿ) ವ್ಯವಹಾರ ಅಥವಾ ವಾಣಿಜ್ಯಕ್ಕಾಗಿ, ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಲಿ, ವಾಣಿಜ್ಯ, ಕೈಗಾರಿಕಾ ಅಥವಾ ವಸತಿ ಸಂಕೀರ್ಣವೂ ಒಳಗೊಂಡಂತೆ ಕಟ್ಟಡಗಳನ್ನು ಯಾವುದೇ ಗೇಣಿ ಅಥವಾ ಬಾಡಿಗೆಗೆ ಕೊಡುವುದು, ಸೇವೆಗಳ ಪೂರೈಕೆಯಾಗುತ್ತದೆ.

3. ಉಪಚಾರ ಅಥವಾ ಸಂಸ್ಕರಣೆ

ಇನ್ನೊಬ್ಬ ವ್ಯಕ್ತಿಯ ಸರಕುಗಳಿಗೆ ಮಾಡಿದ ಯಾವುದೇ ಉಪಚಾರ ಅಥವಾ ಸಂಸ್ಕರಣೆಯು, ಸೇವೆಗಳ ಪೂರೈಕೆಯಾಗುತ್ತದೆ.

4. ವ್ಯವಹಾರ ಆಸ್ತಿಗಳ ವರ್ಗಾವಣೆ

(ಎ) ವ್ಯವಹಾರದ ಆಸ್ತಿಗಳ ಭಾಗವಾಗಿರುವ ಸರಕುಗಳನ್ನು, ವ್ಯವಹಾರವನ್ನು ನಡೆಸುತ್ತಿರುವ ವ್ಯಕ್ತಿಯು ಅಥವಾ ಆತನ ನಿರ್ದೇಶನಗಳ ಮೇರೆಗೆ ವರ್ಗಾವಣೆ ಮಾಡಿದ್ದಲ್ಲಿ ಅಥವಾ ವಿಲೇವಾರಿ ಮಾಡಿದ್ದಲ್ಲಿ, ಎಲ್ಲಿಯವರೆಗೆ ಅಂಥ ಆಸ್ತಿಗಳ ಭಾಗವಾಗಿ ಇರುವುದಿಲ್ಲವೋ ಅಲ್ಲಿಯವರೆಗೆ, ಅಂಥ ವರ್ಗಾವಣೆ ಅಥವಾ ವಿಲೇವಾರಿಯು, ಆ ವ್ಯಕ್ತಿಯು ಮಾಡಿದ ಸರಕುಗಳ ಪೂರೈಕೆಯಾಗುತ್ತದೆ;

(ಬಿ) ವ್ಯವಹಾರ ನಡೆಸುತ್ತಿರುವ ವ್ಯಕ್ತಿಯು ಅಥವಾ ಆತನ ನಿರ್ದೇಶನದ ಮೇರೆಗೆ, ವ್ಯವಹಾರದ ಉದ್ದೇಶಗಳಿಗಾಗಿ, ಇಟ್ಟುಕೊಂಡಿರುವ ಅಥವಾ ಉಪಯೋಗಿಸಿದ ಸರಕುಗಳನ್ನು, ಪ್ರತಿಫಲಕ್ಕಾಗಿರಲಿ ಅಥವಾ ಇಲ್ಲದಿರಲಿ, ವ್ಯವಹಾರದ ಉದ್ದೇಶವನ್ನು ಹೊರತುಪಡಿಸಿದ, ಯಾವುದೇ ಉದ್ದೇಶಕ್ಕಾಗಿ, ಯಾವುದೇ ಸ್ವಂತ ಬಳಕೆಗಾಗಿ ಇದ್ದಲ್ಲಿ ಅಥವಾ ಬಳಕೆ ಮಾಡಿದಾಗ ಅಥವಾ ಯಾರೇ ವ್ಯಕ್ತಿಯ ಉಪಯೋಗಕ್ಕೆ ಲಭ್ಯವಾಗುವಂತೆ ಮಾಡಿದಾಗ, ಅಂಥ ಸರಕುಗಳನ್ನು, ಬಳಕೆಗೆ ಲಭ್ಯವಾಗುವಂತೆ ಮಾಡುವುದು, ಸೇವೆಗಳ ಪೂರೈಕೆಯಾಗುತ್ತದೆ;

(ಸಿ) ಯಾರೇ ವ್ಯಕ್ತಿಯು, ತೆರಿಗೆದಾಯಕ ವ್ಯಕ್ತಿಯಾಗಿರುವುದು ಸ್ಥಗಿತಗೊಂಡಲ್ಲಿ, ಆತನು ನಡೆಸಿದ ಯಾವುದೇ ವ್ಯವಹಾರದ ಆಸ್ತಿಗಳ ಭಾಗವಾಗಿರುವ ಯಾವುದೇ ಸರಕುಗಳನ್ನು, ಆತನು ತೆರಿಗೆದಾಯಕ ವ್ಯಕ್ತಿಯಾಗಿ ಸ್ಥಗಿತಗೊಳ್ಳುವ ನಿಕಟಪೂರ್ವದಲ್ಲಿನ ಆತನ ವ್ಯವಹಾರದ ಕ್ರಮದಲ್ಲಿ ಅಥವಾ ಮುಂದುವರಿಕೆಯಾಗಿ ಆತನು ಪೂರೈಕೆ ಮಾಡಿದವುಗಳೆಂದು ಭಾವಿಸತಕ್ಕದ್ದು, ಇದರ ಹೊರತಾಗಿ,–

(i) ಆ ತೆರಿಗೆದಾಯಕ ವ್ಯಕ್ತಿಯು, ಚಾಲ್ತಿಯಲ್ಲಿರುವ ಸಂಸ್ಥೆಯಾಗಿ ವ್ಯವಹಾರವನ್ನು ಮತ್ತೊಬ್ಬ ವ್ಯಕ್ತಿಗೆ ವರ್ಗಾವಣೆ ಮಾಡಿರುವುದು; ಅಥವಾ

(ii) ತೆರಿಗೆದಾಯಕ ವ್ಯಕ್ತಿ ಎಂದು ಭಾವಿತವಾಗುವ ಸ್ವಂತ ಪ್ರತಿನಿಧಿಯು ವ್ಯವಹಾರವನ್ನು ನಡೆಸುತ್ತಿರುವುದು.

5. ಸೇವೆಗಳ ಪೂರೈಕೆ:

ಕೆಳಕಂಡವುಗಳನ್ನು ಸೇವೆಗಳ ಪೂರೈಕೆ ಎಂದು ಪರಿಗಣಿಸತಕ್ಕದ್ದು, ಎಂದರೆ:–

(ಎ) ಸ್ಥಿರ ಸ್ವತ್ತನ್ನು ಬಾಡಿಗೆಗೆ ನೀಡುವುದು;

(ಬಿ) ಪೂರ್ಣಗೊಂಡ ಬಗ್ಗೆ ಪ್ರಮಾಣಪತ್ರವನ್ನು ಸಕ್ಷಮ ಪ್ರಾಧಿಕಾರವು, ಅಗತ್ಯಪಡಿಸಿದ್ದಲ್ಲಿ ಅದನ್ನು, ನೀಡಿದ ನಂತರ ಅಥವಾ ಅದರ ಪ್ರಥಮ ಅಧಿಭೋಗದ ನಂತರ, ಇವುಗಳಲ್ಲಿ ಯಾವುದು ಮೊದಲೋ ಆಗ, ಸಂಪೂರ್ಣ ಪ್ರತಿಫಲವನ್ನು ಸ್ವೀಕರಿಸಲಾಗಿರುವುದನ್ನು ಹೊರತುಪಡಿಸಿ, ಖರೀದಿದಾರನಿಗೆ ಪೂರ್ಣವಾಗಿ ಅಥವಾ ಭಾಗಶಃವಾಗಿ ಮಾರಾಟ ಮಾಡುವ ಉದ್ದೇಶದಿಂದ ಕಟ್ಟಡ ಸಮುಚ್ಚಯ ಅಥವಾ ಕಟ್ಟಡವೂ ಒಳಗೊಂಡಂತೆ, ಕಟ್ಟಡದ ಸಮುಚ್ಚಯ, ಕಟ್ಟಡ, ಸಿವಿಲ್ ಕಟ್ಟಡ ಅಥವಾ ಅದರ ಭಾಗದ ನಿರ್ಮಾಣ.

ವಿವರಣೆ.– ಈ ಖಂಡದ ಉದ್ದೇಶಗಳಿಗಾಗಿ,–

(1) "ಸಕ್ಷಮ ಪ್ರಾಧಿಕಾರ" ಎಂದರೆ, ಸರ್ಕಾರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಪೂರ್ಣಗೊಂಡ ಬಗ್ಗೆ ಪ್ರಮಾಣಪತ್ರವನ್ನು ನೀಡಲು ಪ್ರಾಧಿಕೃತವಾದ ಯಾವುದೇ ಪ್ರಾಧಿಕಾರ ಮತ್ತು ಅಂಥ ಪ್ರಾಧಿಕಾರದಿಂದ ಅಂಥ ಪ್ರಮಾಣಪತ್ರ ಅಗತ್ಯವಿಲ್ಲದ ಸಂದರ್ಭದಲ್ಲಿ, ಕೆಳಕಂಡ ಯಾರೇ ವ್ಯಕ್ತಿಗಳು, ಅಂದರೆ:–

(i) ವಾಸ್ತುಶಿಲ್ಪಿಗಳ ಅಧಿನಿಯಮ, 1972 (1972ರ 20)ರ ಅಡಿಯಲ್ಲಿ ರಚಿತವಾದ ವಾಸ್ತುಶಿಲ್ಪ ಪರಿಷತ್‌ನಲ್ಲಿ ನೋಂದಣಿಯಾಗಿರುವ ವಾಸ್ತುಶಿಲ್ಪಿ; ಅಥವಾ

(ii) ಇಂಜಿನಿಯರುಗಳ ಸಂಸ್ಥೆಯಲ್ಲಿ ನೋಂದಣಿಯಾಗಿರುವ ಒಬ್ಬ ಚಾರ್ಟರ್ಡ್ ಇಂಜಿನಿಯರ್; ಅಥವಾ

(iii) ಸಂಬಂಧಪಟ್ಟ ನಗರ ಅಥವಾ ಪಟ್ಟಣ ಅಥವಾ ಗ್ರಾಮದ ಸ್ಥಳೀಯ ಸಂಸ್ಥೆಗಳ ಅಥವಾ ಅಭಿವೃದ್ಧಿ ಅಥವಾ ಯೋಜನಾ ಪ್ರಾಧಿಕಾರದ ಲೈಸೆನ್ಸ್ ಪಡೆದ ಮೋಜಣಿದಾರ.

(2) "ನಿರ್ಮಾಣ" ಎಂದರೆ, ಸೇರ್ಪಡೆಗಳು, ಮಾರ್ಪಾಟುಗಳು, ಬದಲಾಯಿಸುವುದು ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಸಿವಿಲ್ ಕಟ್ಟಡಗಳಿಗೆ ಹೊಸ ರೂಪ ಕೊಡುವುದನ್ನು ಒಳಗೊಳ್ಳುತ್ತದೆ;

(ಸಿ) ಯಾವುದೇ ಬೌದ್ಧಿಕ ಆಸ್ತಿ ಹಕ್ಕಿನ ತಾತ್ಕಾಲಿಕ ವರ್ಗಾವಣೆ ಅಥವಾ ಬಳಕೆಗೆ ಅನುಮತಿಸುವುದು ಅಥವಾ ಅನುಭವಿಸುವುದು;

(ಡಿ) ಮಾಹಿತಿ ತಂತ್ರಜ್ಞಾನ ತಂತ್ರಾಂಶದ ಅಭಿವೃದ್ಧಿ, ವಿನ್ಯಾಸ, ಪ್ರೊಗ್ರಾಮಿಂಗ್, ಗ್ರಾಹಕೀಕರಣ, ಅಳವಡಿಕೆ, ಉನ್ನತೀಕರಣ, ವಿಸ್ತರಣೆ, ಅನುಷ್ಠಾನ;

(ಇ) ಕಾರ್ಯವನ್ನು ಮಾಡದಿರುವುದಕ್ಕೆ ಅಥವಾ ಕಾರ್ಯವನ್ನು ಅಥವಾ ಸನ್ನಿವೇಶವನ್ನು ನಿಭಾಯಿಸುವುದನ್ನು ಅಥವಾ ಕಾರ್ಯವನ್ನು ಮಾಡುವ ಹೊಣೆಯನ್ನು ಒಪ್ಪಿಕೊಳ್ಳುವುದು; ಮತ್ತು

(ಎಫ್) ನಗದು, ಮುಂದೂಡಿದ ಸಂದಾಯ ಅಥವಾ ಇನ್ನಿತರ ಮೌಲ್ಯದಾಯಕ ಪ್ರತಿಫಲಕ್ಕಾಗಿ, ಯಾವುದೇ ಉದ್ದೇಶಕ್ಕಾಗಿ ಯಾವುವೇ ಸರಕುಗಳನ್ನು ಉಪಯೋಗಿಸುವ ಹಕ್ಕಿನ ವರ್ಗಾವಣೆ (ಒಂದು ನಿರ್ದಿಷ್ಟಪಡಿಸಿದ ಅವಧಿಗಾಗಿರಲಿ ಅಥವಾ ಇಲ್ಲದಿರಲಿ).

6. ಸಂಯೋಜಿತ ಪೂರೈಕೆ

ಕೆಳಕಂಡ ಸಂಯೋಜಿತ ಪೂರೈಕೆಗಳನ್ನು "ಸೇವೆಗಳ ಪೂರೈಕೆಗಳು" ಎಂದು ಪರಿಗಣಿಸತಕ್ಕದ್ದು, ಎಂದರೆ:–

(ಎ) ಪ್ರಕರಣ 2ರ ಖಂಡ (119)ರಲ್ಲಿ ಪರಿಭಾಷಿಸಿದ ಗುತ್ತಿಗೆ ಕಾಮಗಾರಿ; ಮತ್ತು

(ಬಿ) ಯಾವುದೇ ಸೇವೆಯ ರೂಪದಲ್ಲಿ ಅಥವಾ ಅದರ ಭಾಗವಾಗಿ ಅಥವಾ ಇನ್ನಿತರ ಯಾವುದೇ ವಿಧಾನದಲ್ಲಿ, ಮಾನವನ ಸೇವನೆಗಾಗಿ ಇರುವ ಆಹಾರ ಅಥವಾ ಯಾವುದೇ ಇತರ ವಸ್ತುಗಳಾಗಿರುವ ಅಥವಾ ಯಾವುದೇ

ಪಾನೀಯವಾಗಿರುವ (ಮಾನವ ಸೇವನೆಗಾಗಿ ಇರುವ ಆಲ್ಕೋಹಾಲ್‌ಯುಕ್ತ ಮದ್ಯವನ್ನು ಹೊರತುಪಡಿಸಿ) ಸರಕುಗಳ ಪೂರೈಕೆ, ಅಂಥ ಸೇವೆಗಳ ಪೂರೈಕೆ, ನಗದು, ಮುಂದೂಡಿದ ಸಂದಾಯ ಅಥವಾ ಇನ್ನಿತರ ಮೌಲ್ಯದಾಯಕ ಪ್ರತಿಫಲಕ್ಕಾಗಿದ್ದಲ್ಲಿ.

7. ಸರಕುಗಳ ಪೂರೈಕೆ.

ಕೆಳಕಂಡವುಗಳನ್ನು ಸರಕುಗಳ ಪೂರೈಕೆ ಎಂದು ಪರಿಗಣಿಸತಕ್ಕದ್ದು, ಎಂದರೆ:–

ಯಾವುದೇ ನಿಗಮಿತವಲ್ಲದ ಅಸೋಸಿಯೇಷನ್‌ನಿಂದ ಅಥವಾ ವ್ಯಕ್ತಿಗಳ ನಿಕಾಯದಿಂದ ಅದರ ಸದಸ್ಯರಿಗೆ ನಗದು, ಮುಂದೂಡಿದ ಸಂದಾಯ ಅಥವಾ ಇನ್ನಿತರ ಮೌಲ್ಯವುಳ್ಳ ಪ್ರತಿಫಲಕ್ಕಾಗಿ ಸರಕುಗಳ ಪೂರೈಕೆ ಮಾಡುವುದು.

## ಅನುಸೂಚಿ III

**ಪ್ರಕರಣ 7ನ್ನು ನೋಡಿ]**

### ಸರಕುಗಳ ಪೂರೈಕೆಯೂ ಅಲ್ಲ ಅಥವಾ ಸೇವೆಗಳ ಪೂರೈಕೆಯೂ ಅಲ್ಲ ಎಂದು ಪರಿಗಣಿಸಬೇಕಾದ ಚಟುವಟಿಕೆಗಳು ಅಥವಾ ವ್ಯವಹಾರಗಳು

1. ನೌಕರನು ಉದ್ಯೋಗದಲ್ಲಿರುವಾಗ ಅಥವಾ ಅದಕ್ಕೆ ಸಂಬಂಧಿಸಿದಂತೆ ಆತನು ತನ್ನ ಉದ್ಯೋಗದಾತನಿಗೆ ಒದಗಿಸುವ ಸೇವೆಗಳು.

2. ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಾಪಿತವಾಗಿರುವ ಯಾವುದೇ ನ್ಯಾಯಾಲಯವು ಅಥವಾ ನ್ಯಾಯಾಧಿಕರಣವು ಒದಗಿಸುವ ಸೇವೆಗಳು.

3. (ಎ) ಸಂಸತ್ ಸದಸ್ಯರು, ರಾಜ್ಯ ಶಾಸನ ಸಭೆಗಳ ಸದಸ್ಯರು, ಪಂಚಾಯಿತಿಗಳ ಸದಸ್ಯರು, ಪುರಸಭೆಗಳ ಸದಸ್ಯರು ಮತ್ತು ಇತರ ಸ್ಥಳೀಯ ಪ್ರಾಧಿಕಾರಗಳ ಸದಸ್ಯರು ನೆರವೇರಿಸುವ ಪ್ರಕಾರ್ಯಗಳು;

(ಬಿ) ಸಂವಿಧಾನದ ಉಪಬಂಧಗಳಿಗೆ ಅನುಸಾರ, ಯಾವುದೇ ಹುದ್ದೆಯನ್ನು ಧಾರಣ ಮಾಡಿರುವ ಯಾರೇ ವ್ಯಕ್ತಿಯು ಆ ಸಾಮರ್ಥ್ಯದಲ್ಲಿ ತನ್ನ ನೆರವೇರಿಸುವ ಕರ್ತವ್ಯಗಳು; ಅಥವಾ

(ಸಿ) ಕೇಂದ್ರ ಸರ್ಕಾರವು ಅಥವಾ ಒಂದು ರಾಜ್ಯ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿರುವ ಸಂಸ್ಥೆಯಲ್ಲಿ ಮುಖ್ಯಸ್ಥನಾಗಿರುವ ಅಥವಾ ಸದಸ್ಯನಾಗಿರುವ ಅಥವಾ ಒಬ್ಬ ನಿರ್ದೇಶಕನಾಗಿರುವ ಮತ್ತು ಈ ಖಂಡದ ಪ್ರಾರಂಭಕ್ಕೆ ಮೊದಲು ಉದ್ಯೋಗಿ ಎಂದು ಭಾವಿಸಲಾಗದಿರುವ, ಯಾರೇ ವ್ಯಕ್ತಿಯು ನೆರವೇರಿಸುವ ಕರ್ತವ್ಯಗಳು.

4. ಮೃತನ ದೇಹವನ್ನು ಸಾಗಿಸುವುದೂ ಒಳಗೊಂಡಂತೆ, ಅಂತ್ಯಕ್ರಿಯೆ, ಶವಸಂಸ್ಕಾರ, ಚಿತಾಗಾರ ಅಥವಾ ಶವಾಗಾರದ ಸೇವೆಗಳು.

5. ಭೂಮಿಯ ಮಾರಾಟ ಮತ್ತು ಅನುಸೂಚಿ IIರ ಪ್ಯಾರಾ 5ರ ಖಂಡ (ಬಿ)ಗೆ ಒಳಪಟ್ಟಂತೆ ಕಟ್ಟಡದ ಮಾರಾಟ.

6. ಲಾಟರಿ, ಬೆಟ್ಟಿಂಗ್ ಮತ್ತು ಜೂಜನ್ನು ಹೊರತುಪಡಿಸಿ ಕ್ರಮಾರ್ಹ ಕ್ಲೇಮುಗಳು.

7. ಭಾರತದೊಳಗೆ ಅಂಥ ಸರಕುಗಳು ಪ್ರವೇಶಿಸದೆ ತೆರಿಗೆ ವಿಧಿಸಲಾಗದ ಭೂ ಪ್ರದೇಶದಲ್ಲಿರುವ ಒಂದು ಸ್ಥಳದಿಂದ ತೆರಿಗೆ ವಿಧಿಸಲಾಗದ ಭೂ ಪ್ರದೇಶದಲ್ಲಿರುವ ಬೇರೊಂದು ಸ್ಥಳಕ್ಕೆ ಸರಕುಗಳನ್ನು ಪೂರೈಕೆ ಮಾಡುವುದು.

8. (ಎ) ಗೃಹ ಬಳಕೆಗಾಗಿ ಖಾಲಿ ಮಾಡುವ, ಮುನ್ನ ಯಾವುದೇ ವ್ಯಕ್ತಿಗೆ ಉಗ್ರಾಣದ ಸರಕುಗಳನ್ನು ಪೂರೈಕೆ ಮಾಡುವುದು;

(ಬಿ) ಸರಕು ಸ್ವಾಮ್ಯದ ದಸ್ತಾವೇಜುಗಳ ಹಿಂಬರಹದ ಮೂಲಕ ಸರಕುಗಳನ್ನು ಭಾರತದ ಹೊರಗಡೆ ಇರುವ ಮೂಲ ಬಂದರಿನಿಂದ ರವಾನಿಸಿದ ಮೇಲೆ ಆದರೆ ಗೃಹ ಬಳಕೆಗೆ ಖಾಲಿ ಮಾಡುವ ಮೊದಲು ಸರಕು ಗ್ರಾಹಕನು ಇತರ ಯಾರೇ ವ್ಯಕ್ತಿಗೆ ಸರಕುಗಳನ್ನು ಪೂರೈಕೆ ಮಾಡುವುದು.

**ವಿವರಣೆ 1.–** ಕಂಡಿಕೆ 2ರ ಉದ್ದೇಶಗಳಿಗಾಗಿ, "ನ್ಯಾಯಾಲಯ" ಎನ್ನುವ ಪದವು ಜಿಲ್ಲಾ ನ್ಯಾಯಾಲಯ, ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯವನ್ನು ಒಳಗೊಳ್ಳುವುದು.

**ವಿವರಣೆ 2.–** ಕಂಡಿಕೆ 8ರ ಉದ್ದೇಶಗಳಿಗಾಗಿ "ಉಗ್ರಾಣದ ಸರಕುಗಳು" ಎಂಬ ಅಭಿವ್ಯಕ್ತಿಯು, ಅದಕ್ಕೆ ಸೀಮಾ ಸುಂಕಗಳ ಅಧಿನಿಯಮ, 1962 (1962 ರ 52) ರಲ್ಲಿ ಗೊತ್ತುಪಡಿಸಲಾದಂಥದೇ ಅರ್ಥವನ್ನು ಹೊಂದಿರತಕ್ಕದ್ದು.